4358

C.NO-4358



ಜೀವನ ಸಿದ್ಧಾಂತ



ಶ್ರೀ ಜ.ಚ.ನಿ

9234
33KB5

Q234 4358
33N8.5
J-Cha-Ni.
Jeevansiddhanta.
V-5

(NO - 4358

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Q234
33N8.5

4358

Please return this volume on or before the date last stamped
Overdue volume will be charged 1/- per day.

ಓಂ, ಶಂ.

ಜೀವನ ಸಿದ್ಧಾಂತ

[ಶರಣ ಸಂಪುಟ]


ಪ್ರಸಾದಿ
ಪ್ರಾಣಲಿಂಗಿ
ಮಾಹೇಶ
ಸಂಪುಟ
ಶರಣ
ಭಕ್ತ
ಐಕ್ಯ

ಸೂರ್ಯ ಸಿಂಹಾಸನಾಧೀಶ್ವರ
ಶ್ರೀ ಜ. ಚ. ನಿ.

24226

ಪ್ರಕಾಶಕರು :

ಶ್ರೀಶೈಲ ಜಗದ್ಗುರು ನಿಡುಮಾಮಿಡಿ
ಪುಸ್ತಕ ಭಂಡಾರ
ನಂ. ೪೯, ಹ. ಬ. ಸಮಾಜ ರಸ್ತೆ, ಬಸವನಗುಡಿ, ಬೆಂಗಳೂರು-೪

ಆಶ್ರಯದಾತರು :

ಶ್ರೀಮತಿ ಗೌರಮ್ಮನವರು
ಬೆಂಗಳೂರು

ಮೊದಲ ಮುದ್ರಣ : ೧೯೭೦-ಪ್ರತಿಗಳು ೧೦೦೦

Q234
33K8.5
~~1973~~

ಹಕ್ಕು : ಹೊತ್ತಿಗೆಯವರದು

ಸಾದಾ ಪ್ರತಿ : ರೂ. ೬-೦೦
ಕ್ಯಾಲಿಕೋ ಪ್ರತಿ : ರೂ. ೮-೦೦

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 4358

ಮುದ್ರಕರು :
ಲಿಬರ್ಟಿ ಪ್ರಿಂಟರ್ಸ್
ಅವೆನ್ಯೂ ರೋಡ್, ಬೆಂಗಳೂರು-2



श्रि.ग.रं.

ಆಶ್ರಯದಾತರ ತಾಯಿ

ಶಿವೈಕ್ಯ ಶ್ರೀಮತಿ ಲಕ್ಷ್ಮಮ್ಮ ಕೆಂಚಪ್ಪನವರು

D. 460

ಪರಿಚಯ

"ಜೀವನ ಸಿದ್ಧಾಂತ"ದ ಅಯ್ದನೆಯ ಹಿರಿ ಹೆಜ್ಜೆ. ಇದೊಂದು ನಾಲ್ಕೈದು ಸಾಸಿರ ಪುಟದ ಹಿರಿಯ ಕಜ್ಜ. ಇದಕ್ಕಿದೆ ಹೆಚ್ಚಿನ ವೆಚ್ಚ. ಇನ್ನೊಬ್ಬರ ನೆರವಿಲ್ಲದೆ ಇದು ಆಗುವ ಕೆಲಸವಲ್ಲ. ಹೇಗೆಂದು ಎಣಿಕೆ ಹಾಕುತ್ತಿರುವಾಗ ಸೇವೆ ಸಲ್ಲಿಸಲು ತಾವಾಗಿಯೆ ಮುಂದೆ ಬಂದು ಒಂದು ಸಾವಿರ ಮೊತ್ತವನ್ನು ಸಮರ್ಪಿಸಿದವರು ಬೆಂಗಳೂರಿನ ಶ್ರೀಮತಿ ಗೌರಮ್ಮನವರು.

ಇವರ ತಾಯಿ ಶ್ರೀ ಲಕ್ಷ್ಮಮ್ಮನವರು, ತಂದೆ ಕೆಂಚಪ್ಪನವರು. ತಾಯಿ ಶಿವಾಧೀನರಾಗಿ ಹತ್ತು ವರುಷಗಳಾಗಿವೆ. ತಾಯಿ ತುಂಬಾ ಸಾತ್ವಿಕರು, ಶಿವಪೂಜಾನಿಷ್ಠರು.

ತಂದೆಯೂ ತೀರಿ ಹೋಗಿ ತುಂಬಾ ದಿನಗಳಾಗಿವೆ. ತಂದೆ ತುಂಬಾ ಉದಾರರು. ಬೇಗೂರು ಬಯಲ ಬಸವೇಶ್ವರ ದೇವಸ್ಥಾನದಲ್ಲಿ ಒಂದು ಕಲ್ಯಾಣಿಯನ್ನು ಕಟ್ಟಿಸಿರುವರು. ಮತ್ತು ಬಡಬಗ್ಗರ ವಿವಾಹೋತ್ಸವಗಳನ್ನು ತಮ್ಮ ತ್ಯಾಗ ಹಸ್ತದಿಂದ ನಡೆಸಿದ ಪುಣ್ಯಶಾಲಿಗಳು.

ಶಿವೈಕ್ಯರಾದ ಇವರುಗಳಿಗೆ ಅಯ್ವರು ಮಕ್ಕಳು. ಇಬ್ಬರು ಗಂಡು ಮಕ್ಕಳು ; ಮೂವರು ಹೆಣ್ಣು ಮಕ್ಕಳು. ಶ್ರೀ ಕೆ. ನಂಜಪ್ಪನವರು, ಶ್ರೀ ಕೆ. ಜಕ್ಕಪ್ಪನವರು ಗಂಡಸರು. ಶ್ರೀಮತಿ ಚನ್ನಬಸವಮ್ಮನವರು, ಶ್ರೀಮತಿ ಮಾದಮ್ಮನವರು, ಶ್ರೀಮತಿ ಗೌರಮ್ಮನವರು- ಹೆಂಗಸರು.

ಇವರಲ್ಲಿ ಮೊದಲನೆಯವರಾದ ಶ್ರೀ ಚನ್ನಬಸವಮ್ಮನವರು ಭ್ರಮರಾಂಬಾ ಬಳಗದ ಅಧ್ಯಕ್ಷಿಣೆಯರಾಗಿ ಕೆಲಸ ಮಾಡುತ್ತಿದ್ದಾರೆ. ತತ್ವಪ್ರಿಯರು. ಶಿವಾನುಭವ ಸಾಧನೆಯಲ್ಲಿ ಆಸಕ್ತರು. ಸಂಸ್ಥಾನದಲ್ಲಿ ಭಕ್ತಿ; ಆಸಕ್ತಿಯುಳ್ಳವರಾಗಿದ್ದಾರೆ.

ಮೂರನೆಯವರು ಶ್ರೀಮತಿ ಗೌರಮ್ಮನವರು. ಇವರು ತುಂಬಾ ನಿಷ್ಠಾವಂತರು. ಶಿವಸಾಹಿತ್ಯ ಪ್ರೇಮಿಗಳು. ಮಾತೃಭಕ್ತಿಯುಳ್ಳವರು. ತಮ್ಮ ತಾಯಿಯ ಸವಿ ನೆನಪಿಗಾಗಿ ಈ ಶರಣ ಸಂಪುಟದ ಸೇವೆಯನ್ನು ಸಲ್ಲಿಸಿದ್ದಾರೆ. ಇವರು ಅವಿವಾಹಿತರಾಗಿದ್ದು ಶ್ರದ್ಧಾಳುಗಳಾಗಿದ್ದಾರೆ. ಉದಾರ ಹೃದಯರಾಗಿದ್ದಾರೆ. ತಮ್ಮ ಹಿರಿಯ ಅಕ್ಕಂದಿರಾದ ಶ್ರೀ ಚನ್ನಬಸವಮ್ಮನವರಲ್ಲಿ ಹೆಚ್ಚು ಶ್ರದ್ಧೆಯುಳ್ಳವರಾಗಿದ್ದಾರೆ. ಸಂಸ್ಥಾನದಲ್ಲಿಯೂ ಇವರಿಗೆ ಅಪಾರ ಭಕ್ತಿಯಿದೆ. ಇವರಿಗೆ ಈಗ ಸುಮಾರು ನಾಲ್ವತ್ತು ವರುಷಗಳಾಗಿವೆ. ಇವರೇ ಎಲ್ಲರಿಗೂ ಚಿಕ್ಕವರು.

ಈ ಸಿದ್ಧಾಂತ ಕೃತಿಯ ಸೇವೆಯ ಮುಖದಲ್ಲಿ ಮಾತೃ ಪ್ರೇಮವನ್ನು ವೆಗ್ಗಳಿಸಿದ್ದಾರೆ. ತಾಯಿಯ ಹೆಸರನ್ನು ನಿಡುಗಾಲ ನಿಲ್ಲಿಸಿದ್ದಾರೆ. ಅಂತೆಯೇ ಅವರ ಆತ್ಮಕ್ಕೆ ಚಿರಶಾಂತಿಯನ್ನು, ಇವರ ಬಾಳಿಗೆ ನೆರೆ ನೆಮ್ಮದಿಯನ್ನು ಜಗದ್ಗುರು ಕರಿಬಸವೇಂದ್ರರು ಕರುಣಿಸಲೆಂದು ಹೃದಯಾರೆ ಹರಸೋಣವಾಗಿದೆ.

೧೯-೧-೭೦ — ಕೃತಿಕರ್ತರು

ಬೆಂಗಳೂರು

ಮೊದಲ್ನುಡಿ

ಭಕ್ತನ ಬಾಳು ಬದುಕುಗಳಿಗೂ ಶರಣನ ಬಾಳು ಬದುಕುಗಳಿಗೂ ಅದೆಷ್ಟು ಅಂತರ! ಮತ್ತೊಂದು ಬಗೆಯಲ್ಲಿ ಅದೆಷ್ಟು ಹತ್ತಿರ!! ಇಬ್ಬರಿಗೂ ನೆಲ-ಮುಗಿಲುಗಳ ಅಂತರ! ನೆಲಮುಗಿಲುಗಳಂತೆ ಹತ್ತಿರ! ಬರಿಯ ಗಂಧಾರ್ಪಕ ಭಕ್ತ; ಗಂಧ ರಸ ರೂಪ ಸ್ಪರ್ಶ ಶಬ್ದ! ಈ ಪಂಚ ಪದಾರ್ಥಾರ್ಪಕ ಶರಣ. ಆಧಾರದಿಂದ ವಿಶುದ್ಧಿಗೇರಿದಾತ ಶರಣ. ಮುಗಿಲೆತ್ತರಕ್ಕೆ ಬೆಳೆದಿದೆ ಶರಣ ಜೀವನ. ನಾದೋಪಾಸಕ ಶರಣ. ತಲೆಯುಲಟ್ಟೊಂಡು ತಲೆಯೆತ್ತಿ ನಿಂತಿದ್ದಾನೆ ಶರಣ.

ಮಾನವನ ಬಾಳನ್ನು ಬೆಳಗಿದೆ ಮಾತು. ಮಾನವತೆಯನ್ನು ರೂಪಿಸಿದೆ ಮಾತು. ಮಾತು ಮಾತಾಗಿಯೆ ಈ ಕೆಲಸವನ್ನು ಮಾಡಿದರೆ ಮಾತು ಜ್ಯೋತಿರ್ಲಿಂಗವಾದರೆ ಮತ್ತೇನನ್ನು ಮಾಡದು? ಏನೆಲ್ಲವನ್ನೂ ಮಾಡಬಲ್ಲುದು. ಅಂತಹ ಮಾತೆಂಬ ಜೋತಿರ್ಲಿಂಗೋಪಾಸಕ ಶರಣ.

ಶರಣ ಜೀವನ ಆಕಾಶದಂತೆ ಎತ್ತರ ಮತ್ತು ಬಿತ್ತರ; ನಿತ್ಯ ನಿರ್ಮಲವೂ ಅಹುದು. ಶರಣ ಜೀವನ ಪರಿಪೂರ್ಣ ಜೀವನ, ಆತನ ಪ್ರೇಮ ವಿಶ್ವ ಪ್ರೇಮ. ವಿಶುದ್ಧ ಪ್ರೇಮ. ಆತನ ಚೇತನ ದಿವ್ಯ ಚೇತನ; ಸಂಜೀವನ.

ಭಕ್ತ-ಶರಣರು ಭಿನ್ನಾಭಿನ್ನರು-ನೆಲದಲ್ಲಿ ಮುಗಿಲು, ಮುಗಿಲಲ್ಲಿ ನೆಲ ಇರುವಂತೆ ಇರುವರು. ಭಕ್ತಮಾರ್ಗ ಕ್ರಿಯಾನಿರತ ಶರಣ ಮೀರಿದ ಕ್ರಿಯಾನಿರತ. ಭಕ್ತ ಸಹಜ ದಾನಿ; ಶರಣ ಸಹಜ ಸುಯ್ದಾನಿ. ಆತನದು ಒಳದನಿ

ಶರಣನದು ಪರಿಪೂರ್ಣ ಜೀವನ. ಅಂತೆಯೇ ಅವನೊಬ್ಬ ಪರಿಪೂರ್ಣ ಮಾನವ. ಆತ ಗಂಧ ರಸ ರೂಪ ಸ್ಪರ್ಶ ಶಬ್ದಗಳ ಪೂರ್ಣ ಪ್ರಜ್ಞೆಯುಳ್ಳವನಾಗಿರುತ್ತಾನೆ ಇವನ್ನು ತನ್ನ ಕ್ರಿಯಾಚರಣೆಗಳಿಂದ ಪ್ರಸಾದಗಳನ್ನಾಗಿಸುತ್ತಾನೆ. ಇವೆಲ್ಲವನ್ನು ತ್ಯಾಗ ಮಾಡಬಲ್ಲ; ಕ್ರಿಯಾಕುಶಲತೆಯಿಂದ ಅರ್ಪಣಾನುಭವಗಳಿಂದ ಇವುಗಳೊಡನಿದ್ದು ಯೋಗ ಮಾಡಬಲ್ಲ. ಪಂಚೇಂದ್ರಿಯಂಗಳ

ರಹಸ್ಯವನ್ನು ಅರಿತು ಅವುಗಳನ್ನು ತನ್ನ ಅಧೀನದಲ್ಲಿರಿಸಿಕೊಂಡು ತನ್ನ ಜೀವನದ ಪರಮೋದ್ದೇಶವನ್ನು ಸಾಧಿಸಬಲ್ಲ; ಪರಮಾನಂದವನ್ನು ಪಡೆಯಬಲ್ಲ.

ತನು ಮನ ಕರಣಗಳು ಬೆಳದಂತೆ ಜ್ಞಾನವೂ ಬೆಳೆಯಬೇಕೆಂಬುದನ್ನು ಕಂಡುಕೊಂಡ ಶರಣ. ಭವದಭಿಲಾಷೆಯಿರುವಂತೆ ಶಿವದಭಿಲಾಷೆಯೂ ಅನಿವಾರ್ಯವೆಂಬುದನ್ನು ತಿಳಿದುಕೊಂಡ ಶರಣ. ಕಳೆ ಬಿಂದುಗಳಿಗಿಂತ ಹೆಚ್ಚಿನ ಆನಂದ ನಾದದಲ್ಲಿದೆಯೆಂದು ಅರಿತು ಅನುಭವಿಸುವಾತ ಶರಣ.

ಸತ್ಕ್ರಿಯೆ, ಸಮ್ಯಗ್‌ಜ್ಞಾನ, ಸ್ವಾನುಭವ ಇವುಗಳ ಸಮನ್ವಯ ಜೀವನ ಶರಣನನ್ನು ಪರಿಪೂರ್ಣತೆಗೆ ಮುಟ್ಟಿಸುತ್ತವೆ. ಆದರಿಂದಾಗಿ ಶರಣನು ಆ ಪರಮ ಸತ್ಯದ ದರ್ಶನ ಪಡೆಯುತ್ತಾನೆ, ಆ ಸತ್ಯ ಶಿವ ಸೌಂದರ್ಯದಲ್ಲಿ ಅಪಾರ ಪ್ರೇಮವನ್ನಿಡುತ್ತಾನೆ. ಅಖಂಡವಾಗಿ ಆತ್ಮವನ್ನು ನಿವೇದಿಸುತ್ತಾನೆ. ಅನ್ವೇಷಣ ಮಾರ್ಗದಿಂದಾಚೆ ಹೋಗಿ ಆ ಆನಂದ ಸಿದ್ಧಿಯನ್ನು ಪಡೆಯುತ್ತಾನೆ. ಅ ಪೂರ್ಣ ಪ್ರಜ್ಞೆಯನ್ನು ಸಂಪಾದಿಸುತ್ತಾನೆ.

ಸಂಪೂರ್ಣವಾಗಿ ಸ್ವಾರ್ಥವನ್ನು ಬಿಟ್ಟುವನು ಶರಣ ಸತ್ಕಾಯಕದಲ್ಲಿ ಸ್ವಾನುಭವ ವಚನ ರಚನೆಯಲ್ಲಿ ನಿರತನಾದವನು ಶರಣ. ಗುರು ಲಿಂಗ ಜಂಗಮ ಪ್ರಾಣವಾಗಿರುವಾತನು ಶರಣ. ಸತ್ಕಾಯಕದಿಂದ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದದಿಂದ ಸಂಸಾರವನ್ನು ಸಸಾರವನ್ನಾಗಿ ಮಾಡಿಕೊಂಡವನು ಶರಣ. ಸ್ವಾನುಭವ ಗೋಷ್ಠಿಯಿಂದ ಶಿವಾನಂದವನ್ನು ಪಡೆದವನು ಶರಣ. ಶಿವನಲ್ಲಿ ಅಸೀಮ ಪ್ರೇಮವುಳ್ಳವನು ಶರಣ. ಷಟ್‌ಸ್ಥಲ ಸಂಸ್ಕೃತಿಯ ಅರ್ಥಾತ್ ಮಾನವೀಯ ಸಂಸ್ಕೃತಿಯ ಸತ್ವವನ್ನೆಲ್ಲ ಹೃದ್ಗತ ಮಾಡಿಕೊಂಡವನು ಶರಣ. ಕವಿ ಹೃದಯವನ್ನು ಶೈವೀ ಜೀವನ ಸೌಂದರ್ಯವನ್ನು ತಳೆದವನು ಶರಣ. ಆತ ವಿಶ್ವಕ್ಕೆ ನವಸ್ಫೂರ್ತಿಯನು ನವಜಾಗ್ರತಿಯನ್ನು ತುಂಬುವವನು ಶರಣ. ಆಕಾಶದಂತೆ ಲೋಕಕ್ಕೆ ದಿವ್ಯನಾದ ದಿವ್ಯತೇಜ ದಿವ್ಯರಸಗಳನ್ನು ಅನುಗ್ರಹಿಸುವವನೆ ನಿಜವಾದ ಶರಣ.

ಶರಣ ಸ್ವಾಂತರಂಗದ ಗಗನ ಸಂಚಾರಿ. ತನ್ನ ತಿಳಿಗಣ್ಣಿನ ನೇಸರನನ್ನು ಮನಸ್ಸಿನ ಶಾಂತಿ ಚಂದ್ರನನ್ನು ಆನಂದಾಮೃತಜಲದಿಂದ ತುಂಬಿದ ಹೃದಯ ಮೇಘವನ್ನು ಪ್ರಾಣದಿಂದ ಪ್ರಣವಾತ್ಮಕ ವಾಯುವನ್ನು ಮುಖದಿಂದ ವಚನ

ತೇಜವನ್ನು ಶಿರದಲ್ಲಿ ಅನುಭಾವ ಗಂಗೆಯನ್ನು ತೊಡೆಯಲ್ಲಿ ಕಾಯಕರೂಪ ಕ್ರಿಯಾಗೌರಿಯನ್ನು ಚೇತನದಲ್ಲಿ ಪರಂಜ್ಯೋತಿಯನ್ನು ಹೊಮ್ಮಿಸಿದ ಸಾಕಾರ ಶಿವ. ಶರಣನದು ಅವತರಣವಲ್ಲ; ಉತ್ತರಣ. ಆತನ ಆ ಚಿನ್ನಾದ ಶ್ರಾವಕರನ್ನು, ಚಿತ್ಪ್ರಕಾಶ ದಾರ್ಶನಿಕರನ್ನು ಚಿದ್ರಸ ಪ್ರಸಾದಿಕರನ್ನು ತಣ್ಣನೆ ತಣಿಸುತ್ತದೆ. ಶರಣ ಜೀವನವು ತನ್ನ ವಿಕಾಸದೊಡನೆ ಸಮಷ್ಟಿ ಲೋಕನ ಉದ್ಧಾರವನ್ನೆಸಗುತ್ತದೆ. ತನ್ನ ಮಹಾನುಭಾವದ ಮಂದಾರ ಮರಗಳನು ನೆಟ್ಟು ಬೆಳಸುತ್ತದೆ. ಅಮೃತ ಫಲಗಳನ್ನು ಕೊಟ್ಟು ಆನಂದತುಂದಿಲರನ್ನಾಗಿಸುತ್ತದೆ. ಶರಣ ಜೀವನವೇ ಹೀಗೆ ಒಂದು ಅಪ್ರತಿಮ ಪ್ರತಿಮಾ ಕಾವ್ಯವಾಗಿ ರೂಪುಗೊಳ್ಳುತ್ತದೆ. ಶರಣ ಒಂದು ಜೀವಂತ ಕಾವ್ಯ ಜ್ವಲಂತ ರಸಭಾವ ಧ್ವನಿಗಳು ಅವನಲ್ಲಿ ಜೀವಂತವಾಗಿರುತ್ತವೆ. ಆತನಿಗೊಲಿದ ಆ ಪ್ರಸಾದಲಿಂಗದ ಪರಾಶಕ್ತಿಯ ಪ್ರಭಾವವಿದು.

ಆ ಸಚ್ಚಿದಾನಂದವನ್ನು ಸ್ವಾನುಭವಕ್ಕೆ ತಂದುಕೊಳ್ಳುವುದೆ ಶರಣ ಜೀವನದ ಘನೋದ್ದೇಶ. ತಂದುಕೊಂಡ ಸ್ವಾನುಭವ ವರ್ಷಣವನ್ನು ಮಾನವರ ಹೃದಯ ಭೂಮಿಯ ಮೇಲೆ ಮಾಡುವುದೇ ಶರಣ ಮೇಘದ ಮಣಿಹ. ಆ ಪರಾಶಕ್ತಿಯ ಅಭಿವ್ಯಕ್ತಿ ಶಿವಶರಣ. ಈತನ ಈ ತ್ಯಾಗಾಂಗ ಭೋಗಾಂಗ ಯೋಗಾಂಗಗಳು ವಿಶುದ್ಧವಾದ ವಿಶ್ವಶಕ್ತಿ. ಇವುಗಳಲ್ಲಿ ಮೇಲು-ಕೀಳು, ಒಳಗು-ಹೊರಗು, ಸ್ಥೂಲ-ಸೂಕ್ಷ್ಮ ಎಂಬ ಕವಲಿಲ್ಲ. ಇವುಗಳಲ್ಲೆಲ್ಲ ಪರಮ ಪ್ರಸಾದ ರೂಪ ಚೇತನವೊಂದಿದೆ. ಅದು ಇವುಗಳಲ್ಲೆಲ್ಲ ಶಿವದ ಬದುಕನ್ನು ನಡೆಸುತ್ತದೆ. ಶಿವದ ಬಾಳನ್ನು ಬೆಳಗಿಸುತ್ತದೆ. ವಿಶ್ವಚೇತನದ ಆವಿರ್ಭಾವವನ್ನುಂಟು ಮಾಡುತ್ತದೆ. ವಿಶ್ವೋದ್ಧಾರದ ವೈಖರಿಯನ್ನು ಹೊರ ಹೊಮ್ಮಿಸುತ್ತದೆ ಸಮದರ್ಶನ ದೃಷ್ಟಿಯನ್ನು ಲೋಕ ಕಲ್ಯಾಣ ಕಾರಕ ಕಾರುಣ್ಯವನ್ನು ಕರುಣಿಸುತ್ತದೆ. ಶರಣನನ್ನು ಸೂರ್ಯನಂತೆ ಸಮಷ್ಟಿ ವ್ಯಕ್ತಿಯನ್ನಾಗಿಸುತ್ತದೆ.

ಆತ್ಮಾನುಭವವನ್ನು ಆತ್ಮಾನಂದವನ್ನು ಪಡೆದವನು ಅಚ್ಚ ಶರಣ. ಪಂಚಭೂತಗಳಿಂದ ಪಂಚಕೋಶಗಳಲ್ಲಿ ಉಂಟಾದ ಪ್ರಾಕೃತಿಕ ಶಕ್ತಿ ಸಾಮರ್ಥ್ಯಗಳನ್ನು ಯುಕ್ತಿ ವಿಚಾರಗಳನ್ನು ಭಕ್ತಿಯಿಂದ ಮಾರ್ಪಡಿಸಿ ಆತ್ಮಾನಂದಕ್ಕೆ ಸಾಮರಸ್ಯಕ್ಕೆ ಅವನು ಅಣಿ ಮಾಡಿಕೊಂಡ ಅನುಭಾವಿ. ವಿಶಾಲ ಮನೋಭಾವವನ್ನು

ಬೆಳೆಸಿಕೊಂಡ ವಿಮರ್ಶಾಶಕ್ತಿಸಂಪನ್ನ. ಚಿತ್ತ ಬುದ್ಧಿ ಪ್ರಾಣಮನ ಹಮ್ಮುಗಳಲ್ಲಿರುವ ದೋಷಗಳನ್ನು ದೂರಮಾಡಿ ಶಿವಜ್ಞಾನದ ಶುಭ್ರ ಪ್ರಕಾಶದಲ್ಲಿ ಪರಮ ಪ್ರಸನ್ನತೆಯನ್ನು ನಿರ್ದೇಶ - ನಿಷ್ಪತ್ತಿಗಳನ್ನು ಪಡೆದ ಪ್ರಗತಿಶೀಲ. ಮಹಾನಂದವನ್ನು ಮಹಾ ಪ್ರಕಾಶವನ್ನು ಪಡೆದ ಪೂರ್ಣಜೀವಿ. ಮರ್ತ್ಯಲೋಕದ ಮಣಿಹವನ್ನೆಲ್ಲ ಮಾಡಿ ಮುಗಿಸಿದ ತುಂಬು ಬಾಳು ಶರಣನದು. ವಿಯತ್ತಲಕ್ಕಿಂತಲೂ ವಿಶೇಷವಾದ ವಿಶಾಲ ಮನೋಭಾವವನ್ನು ವಿಕಾಸಗೊಳಿಸಿಕೊಂಡು ಪ್ರಕಾಶ ಪಡಿಸಿದ ಪೂರ್ಣಜೀವಿ ಶರಣ. ಕೊನೆಗೊಳ್ಳುತ್ತದೆ ಆತನ ಪಯಣ.

ಆತನ ಜೀವನಯಾತ್ರೆ ಸಾಗಿ ಬಹುದೂರ ಬಹು ಎತ್ತರ ಬಂದಿದೆ. ನೆಲವನ್ನು ಸುತ್ತಿ ಜಲವನ್ನು ಬಳಸಿ ಬೆಂಕಿ ಗಾಳಿಗಳ ಮಂಡಲಗಳ ಮೇಲೆ ಮುಗಿಲ ಪಯಣ ಇದೀಗ ಸಾಗಿ ಮುಗಿಯಲಿದೆ. ಮುಂದೆ ಮಹಾದೇವನ ಮನೆಯ ಸೇರುವುದೊಂದೆ ಉಳಿವು. ಮುಗಿಲ ಪಯಣದಲ್ಲಿ ಕಂಡ ನಾದ-ಬಿಂದು-ಕಳೆಗಳನ್ನು ಬಣ್ಣಿಸಲು ಭಾಷೆ ಸಾಲದು. ಆದರೂ ಆಸೆ ಬಿಡದು ; ಹೇಗೋ ಅದರ ಬೆಂಬತ್ತಿ ಮುಂದಿನಂತೆ ಮಿಡಿನುಡಿಗಳನ್ನು ನುಡಿಸಿದೆ. ತೊರೆ ಮಳಲಿನಂತೆ ತಾರೆಗಳ ಗುಂಪಿದೆ. ಷೋಡಶ ಕಲೆಗಳ ಶಶಿಯಿದ್ದಾನೆ. ಸಾಸಿರ ಕಿರಣಗಳ ಸೂರ್ಯನಿದ್ದಾನೆ. ಏಳೆಂಬ ಎಣಿಕೆಯೇನು ? ಎಣೆಯಿಲ್ಲದಷ್ಟು ಲೋಕಗಳಿವೆ. ಅವೆಲ್ಲವನ್ನೂ ಒಳಗೊಂಡ ಶರಣನ ನೋಟ ಸಣ್ಣದಲ್ಲ ; ಅದರಲ್ಲಿ ಇರುವುದು ಎಲ್ಲ. ಅದನ್ನು ನೋಡಲು ಈ ಕಣ್ಣು ಸಾಲದು ; ಅದನ್ನು ಬಣ್ಣಿಸಲು ಭಾಷೆ ಸಾಲದು. ಆದರೂ ಅಳಿಲು ಸೇವೆ, ಮಳಲು ಭಕ್ತಿ.

ಆಗಸಾಂಗ ಶರಣ, ಆಗಮ ಜೀವಿ ಶರಣ. ಪ್ರಾಸಾದಿಕ ಸಾಹಿತ್ಯಾನುಷಂಗ ಶರಣ. ಸ್ವಾನುಭಾವ ಸಾಹಿತ್ಯ ಪರಿಣತ ಶರಣ.

ಪ್ರಸಾದ ಬಾಹ್ಯಾಭ್ಯಂತರ ಭೇದದಿಂದ ಇಬ್ಬಗೆ. ಬಾಹ್ಯ ಪ್ರಸಾದ ಪಂಚವಿಧ. ಆಂತರಿಕ ಪ್ರಸಾದ ಅದೊಂದೆ! ಗಂಧ ರಸ ರೂಪ ಸ್ಪರ್ಶ ಶಬ್ದ ಇವೈದು ಹೊಗಿನ ಹಸಾದಗಳು. ಪರಿಣಾಮತೃಪ್ತಿ ಪ್ರಸಾದ ಒಳಗಿನದು. ಹೊರಗಿನ ಅಯ್ದು ಹಸಾದಗಳಲ್ಲಿ ನುಡಿ ಹಸಾದವೆ ಕಡೆಯದು, ಅಂತಹ ನುಡಿ ಹಸಾದಿಗ ಶರಣ. ಒಳಗಿನಲ್ಲಿ [illegible] ಹಸಾದಕ್ಕೆ [illegible]. ಶುದ್ಧಪ್ರಮಾಣ

ಬಾಳಿಗೊಂದು ಬೆಳಕು. ಆಗಮಪ್ರಮಾಣ ಮುನ್ನಡೆಗೆ ಒಂದು ಬದುಕು. ಮಾನವೀಯ ಬಾಳ್ಗಡಲಲ್ಲಿ ಮೂಡಿದ ಮುತ್ತು ಮಾತು. ಮಾನವೀಯ ಜೀವನವನ್ನು ಪೂರ್ಣಗೊಳಿಸುತ್ತಾನೆ ಶರಣ; ಸತ್ಯಪೂರ್ಣವಾಗಿಸುತ್ತಾನೆ ಶರಣ. ಚಿತ್ಪ್ರತಿಭೆಯುಳ್ಳದನ್ನಾಗಿಸುತ್ತಾನೆ ಶರಣ. ಆನಂದ ರಸಭರಿತವಾಗಿಸುತ್ತಾನೆ ಶರಣ. ಶರಣನ ಈ ಪವಾಡ ಸಣ್ಣದಲ್ಲ. ಶಬ್ದ ಶಬ್ದದಲ್ಲಿಯೂ ಶಿವಭಾವವನ್ನು ತುಂಬುತ್ತಾನೆ. ಅಂತಹ ಅನುಭಾವಿ ಆತ. ಅಂತಹ ಶರಣನನ್ನು ರೂಪಿಸುವ ಸಾಧನ ಸಂಪತ್ತಿಯನ್ನು ವಿವರಿಸುತ್ತದೆ ಈ ಸಂಪುಟ. ವಿವರಿಸಿರುವುದು ಯಥಾಮತಿ ಎಂಬುದೆ ದಿಟ.

— —

ಪರಿವಿಡಿ

೧ ಶರಣ ವಿಚಾರ ಕಿರಣ ೧
೨ ಬಯಲ ಬದುಕು (ಶರಣಾಂಗ) ೧೧
೩ ಆಕಾಶತತ್ತ್ವ - ಆಕಾಶಾಂಗ ೨೨
೪ ಶ್ರೋತ್ರೇಂದ್ರಿಯ - ವಾಗಿಂದ್ರಿಯ ೩೨
೫ ಶಬ್ದ - ಶ್ರವಣ ೩೭
೬ ಜ್ಞಾನಹಸ್ತ ಧಾರಣ ಪ್ರಶಸ್ತ ೪೬
೭ ಕಂಠ - ವಿಶುದ್ಧಿ ೫೨
೮ ಪರಾಶಕ್ತಿ - ಆನಂದಭಕ್ತಿ ೫೬
೯ ಶಾಂತ್ಯತೀತ ಕಲೆ - ತುರೀಯಾತೀತಾವಸ್ಥೆ ... ೫೯
೧೦ ಶರಣನದು ಪೂರ್ಣಯೋಗ ೬೫
೧೧ ನೆಲ - ಮುಗಿಲುಗಳ ಸಂಗಮ ಶರಣ ೭೧
೧೨ ಶರಣಸ್ಥಲ ೭೭
೧೩ ತಾಮಸ ನಿರಸನ ಸ್ಥಲ ೧೦೮
೧೪ ನಿರ್ದೇಶಸ್ಥಲ ೧೨೮
೧೫ ಶೀಲಸಂಪಾದನ ಸ್ಥಲ ೧೪೩
೧೬ ತ್ರಿವಿಧ ಶರಣ ಸ್ಥಲ ೧೬೩
೧೭ ಷಡ್ವಿಧ ಶರಣ ಸ್ಥಲ ೧೭೩
೧೮ ವೀರಶಿವಾಗಮ ಷಡ್ವಿಧ ೧೯೭
೧೯ ಶರಣಾಂಗ ಸ್ಥಲ ಸಾರಾಂಶ ೨೦೦
೨೦ ಶಬ್ದಬ್ರಹ್ಮ ಶರಣ ೨೦೩

(ಉತ್ತರ ಭಾಗ)

೨೧ ಪ್ರಸಾದ ಲಿಂಗ ಪರಿಜ್ಞಾನ ೨೧೧
೨೨ ಭಾವಲಿಂಗ - ಪ್ರಸಾದ ಲಿಂಗ ೨೧೩
೨೩ ತ್ರಿವಿಧ ಪ್ರಸಾದ ಲಿಂಗ ೨೧೭
೨೪ ಚತುರ್ವಿಧ ಪ್ರಸಾದ ಲಿಂಗ ೨೨೦
೨೫ ಷಡ್ವಿಧ ಪ್ರಸಾದ ಲಿಂಗ ೨೨೧
೨೬ ದ್ವಾದಶ ಪ್ರಸಾದ ಲಿಂಗ ೨೨೩
೨೭ ದೀಕ್ಷಾಪಾದೋದಕ ಸ್ಥಳಂ ೨೨೫
೨೮ ಶಿಕ್ಷಾಪಾದೋದಕ ಸ್ಥಳಂ ೨೪೨
೨೯ ಜ್ಞಾನಪಾದೋದಕ ಸ್ಥಳಂ ೨೬೪
೩೦ ತ್ರಿವಿಧೋದಕದ ತಿರುಳು ೨೬೭
೩೧ ಕ್ರಿಯಾನಿಷ್ಪತ್ತಿ ಸ್ಥಳಂ ೨೮೧
೩೨ ಭಾವನಿಷ್ಪತ್ತಿ ಸ್ಥಳಂ ೨೯೩
೩೩ ಜ್ಞಾನನಿಷ್ಪತ್ತಿ ಸ್ಥಳಂ ೩೦೧
೩೪ ಪಿಂಡಾಕಾಶ ಸ್ಥಳಂ ೩೦೯
೩೫ ಬಿಂದ್ವಾಕಾಶ ಸ್ಥಳಂ ೩೨೦
೩೬ ಬಿಂದು ಬಿನ್ನಾಣ ೩೨೧
೩೭ ಮಹಾಕಾಶ ಸ್ಥಳಂ ೩೩೨
೩೮ ಕ್ರಿಯಾ ಪ್ರಕಾಶನ ಸ್ಥಳಂ ೩೫೦
೩೯ ಭಾವ ಪ್ರಕಾಶನ ಸ್ಥಳಂ ೩೬೧
೪೦ ಜ್ಞಾನ ಪ್ರಕಾಶನ ಸ್ಥಳಂ ೩೭೯
೪೧ ಪ್ರಸಾದ ಲಿಂಗ ಸಾಹಿತ್ಯ ೩೮೦
೪೨ ಪ್ರಸಾದ ಲಿಂಗದಲ್ಲಿ ಷಡ್ಲಿಂಗ ೩೮೭
೪೩ ಪ್ರಸಾದಲಿಂಗ ವಿಃಶ್ವಾರ್ಪಣ ೪೨೨

ಅನುಬಂಧ

೪೪ ಪೂರ್ಣ ಪ್ರಭೆ ೪೨೮

೪೫ ಆಗಸ ಮೀಮಾಂಸೆ ೪೩೪

೪೬ ಮದುವಳಿಗೆ - ಮದುವಳಿಗ ೪೩೯

೪೭ ಸತಿ ಪತಿ ಯೋಗ ೪೪೮

೪೮ ಪ್ರಾಣಲಿಂಗಿ - ಶರಣ ೪೫೯

೪೯ ಶರಣಾಂಗ - ಪ್ರಸಾದಲಿಂಗ ೪೬೧

೫೦ ಶರಣಸತಿ ಸವಿಮಾತಗಾತಿ ೪೬೫

೫೧ ಬೆಡಗಿನ ಬಿನ್ನಾಣ ೪೭೨

ಅಭಿಪ್ರಾಯಗಳು

೧. ಬೃಹದ್ಗ್ರಂಥ

ಪ್ರಸಿದ್ಧ ಧರ್ಮಸಾಹಿತಿಗಳಾದ ಸೂರ್ಯಸಿಂಹಾಸನಾಧೀಶ್ವರ ಪೂಜ್ಯ ಶ್ರೀ ಜ.ಚ.ನಿ. ಮಹಾಸ್ವಾಮಿಂಗಳವರು ರಚಿಸಿರುವ ನಾಲ್ಕೂವರೆ ಸಾವಿರ ಪುಟಗಳ ಬೃಹದ್ಗ್ರಂಥ "ಜೀವನ ಸಿದ್ಧಾಂತ" ... ...

ಸ್ವಾಮಿಗಳ ನಿರೂಪಣೆ ಸ್ಪಷ್ಟ ಹಾಗು ನಿರರ್ಗಳ. ಸಾಮಾನ್ಯ ವ್ಯಕ್ತಿಯನ್ನೂ ಮುಟ್ಟುವಂತಹದು. ಜೀವನ ಸಿದ್ಧಾಂತ ಪ್ರಸಿದ್ಧ ಧಾರ್ಮಿಕ ಗ್ರಂಥವಾಗಿ ಬೆಳಗುವುದರಲ್ಲಿ ಸಂದೇಹವಿಲ್ಲ.

— ವಿಶ್ರಮ, ಜನವರಿ ೩೦-೭೦

೨ ಧಾರ್ಮಿಕ ಮಹಾಗ್ರಂಥ

"ಜೀವನ ಸಿದ್ಧಾಂತ" ಎಂಬುದು ಮಾನ್ಯ ಲೇಖಕರ ಮೇರುಕೃತಿ ಎಂಬ ಶ್ಲಾಘನೆಗೆ ಪಾತ್ರವಾದುದು. ಆರು ಸಂಪುಟಗಳಿಂದ ಕೂಡಿದೆ ... ...

ಹಿಂದೂಧರ್ಮದ ಪ್ರಮುಖ ಶಾಖೆಗಳಲ್ಲಿ ಒಂದಾಗಿರುವ ವೀರಶೈವ ಸಿದ್ಧಾಂತವನ್ನು ಅರ್ಥಮಾಡಿಕೊಂಡು ಜೀವನವನ್ನು ಉದಾತ್ತಗೊಳಿಸಲು ಇಂತಹ ಗ್ರಂಥಗಳು ಹೆಚ್ಚಾಗಿ ಬಂದಷ್ಟೂ ಒಳಿತು. ಧರ್ಮವಿಮುಖತೆಗೆ ಓಡುವ ಜೀವನ ವಾಹನಕ್ಕೆ ಇಂತಹ ಕೃತಿ ಕಡಿವಾಣವಾದೀತು. ತತ್ವ-ಆಚರಣೆ-ವಿಮರ್ಶೆ- ಸರಸೋಕ್ತಿಗಳಿಂದ ಒಡಮೆರೆದ ಧಾರ್ಮಿಕ ಮಹಾಗ್ರಂಥವಿದು; ಉಪಾದೇಯವಾದುದು.

— ಟಿ. ಕೇಶವಭಟ್ಟ

ಕನ್ನಡಪ್ರಭ ಫೆಬ್ರವರಿ ೨-೭೦

೩ ಬುದ್ಧಿಗೊಂದು ಬುತ್ತಿ

ಮಾನವನನ್ನು ಉತ್ತಮ ವಿಚಾರದಲ್ಲಿ ಲೀನನನ್ನಾಗಿ ಮಾಡುವುದೇ ಸಾಹಿತ್ಯದ ಪರಮ ಗುರಿಯೆಂಬ ಪಾದನ ಧೋರಣೆಯಿಂದ ಶ್ರಮಿಸುತ್ತಿರುವ ಧರ್ಮಗುರು ಶ್ರೀ ಶ್ರೀ ಜ.ಚ.ನಿ. ಮಹಾಸ್ವಾಮಿಗಳ ಸಾಹಿತ್ಯ ಸೇವೆ ಚಿರ ಸ್ಮರಣೀಯ. ನಾನು ರಾಜಕಾರಣಿ. ನನ್ನ ರಾಜಕಾರಣಕ್ಕೂ ಸ್ವಾಮಿಗಳ ಸಾಹಿತ್ಯ ದಾರಿ ದೀಪ ಹಿಡಿದಿದೆ. ಶ್ರೀ ಶ್ರೀಗಳ ವಿಚಾರ ಪೂರಿತ ಗ್ರಂಥಗಳ ಅಧ್ಯಯನವೆಂದರೆ ಅದೊಂದು ಹೊಸ ಅನುಭವ ; ಮನಸ್ಸಿಗೆ ಉಲ್ಲಾಸ; **ಬುದ್ಧಿಗೊಂದು ಬುತ್ತಿ.** ಇವರ ಸಾಹಿತ್ಯ ಸಿದ್ಧಾಂತದಲ್ಲಿ ಮಾನವನ ಮಂಗಳ ಜೀವನಕ್ಕೆ ಮಾರ್ಗದರ್ಶನವಿದೆ. ಇಂದು ನಮಗೆ ಇಂತಹ ಸಾಹಿತ್ಯದ ಅಗತ್ಯ ಅಪಾರವಾಗಿದೆ.

ಧರ್ಮ ಪೀಠದಲ್ಲಿ ಕುಳಿತು, ಕನ್ನಡ ಸರಸ್ವತಿಯ ಸೇವೆಯನ್ನು ಕೈಗೊಂಡಿರುವ ಈ ಮಹಾನುಭಾವರ ಲೇಖಣಿಯಿಂದ ಇನ್ನು ನೂರಾರು ಸಾಹಿತ್ಯ ರತ್ನಗಳು ಸೃಷ್ಟಿಯಾಗಲೆಂದು ನನ್ನ ಬಯಕೆ.

ಚಿಕ್ಕಮಗಳೂರು
26-1-1970

ಸಿ. ಎಂ. ಎ. ಶಾಸ್ತ್ರಿ
ವಿಧಾನ ಸಭಾ ಸದಸ್ಯ

ಓಂ ಶಂ

ಜೀವನ ಸಿದ್ಧಾಂತ

ಶರಣ ವಿಚಾರ ಕಿರಣ

ಷಟ್‌ಸ್ಥಲ ಸಾಧನೆ ವಿಕಾಸವಾದದ ಪ್ರಕಾಶದಲ್ಲಿ ಪ್ರವರ್ಧಿಸುತ್ತದೆ; ವಿಶಾಲ ಮನೋಭಾವದಿಂದ ವಿಕಾಸವಾಗುತ್ತದೆ, ಆಕಾಶಾಂಗನಾದ ಶರಣನು ಶಬ್ದ ಪ್ರಸಾದ ಪರಿಣಾಮದಲ್ಲಿ ಪರವಶನಾಗಿರುತ್ತಾನೆ. ಭಕ್ತ ಚಿತ್ತಶುದ್ಧಿಯಲ್ಲಿ ಮಾಹೇಶ್ವರ ಬುದ್ಧಿಯ ಬೆಳಕಿನಲ್ಲಿ, ಪ್ರಸಾದಿ ನಿರಹಂಕಾರದ ನೆಲೆಯಲ್ಲಿ, ಪ್ರಾಣ ಲಿಂಗಿ ಘನಮನದ ಅನುಭವದಲ್ಲಿ ಬೆಳೆದರೆ, ಶರಣ ಶಿವಜ್ಞಾನಾನಂದದಲ್ಲಿ ಮುಂದುವರಿಯುತ್ತಾನೆ. ಸತೀಭಾವದಲ್ಲಿ ಸಾಮರಸ್ಯದ ಸಾಧನೆಯನ್ನು ಸಾಗಿ ಸುತ್ತಾನೆ. ಪತಿ ಧರ್ಮದಲ್ಲಿ ಪರಮ ಪ್ರೇಮದಿಂದ ಪ್ರವೇಶಿಸುತ್ತಾನೆ. ತನ್ನ ಬಾಳನ್ನು ಭೂಮಿಯಿಂದ ಬಾನಿನವರೆಗೆ ಅಂದರೆ ಆಧಾರದಿಂದ ವಿಶುದ್ಧಿಯವರೆಗೆ ಮೇಲಕೇರಿಸಿ ಅಲ್ಲಿಯೇ ನೆಲಿಸಿ ಬರೀ ಬಾನಾಡಿಯಾಗದೆ ಮುಂದುವರಿಸಿ ಆತ್ಮಾಲೋಕನದಲ್ಲಿ ಆತ್ಮೈಕ್ಯದಲ್ಲಿ ಅವಿರಳವಾಗಿಸಲು ಹೊಂಚುತ್ತಾನೆ. ಬಾನಿನಂತೆ ಮಾನವತೆಯನ್ನು ವಿಶುದ್ಧಗೊಳಿಸಲು ವಿಶ್ವವಿಶಾಲಗೊಳಿಸಲು ಹೆಣಗುತ್ತಾನೆ. ಭಾನುವಿನಂತೆ ಬೆಳಗಿ ಬಾಳುತ್ತಾನೆ. ನಾದ ರಸಗಳನ್ನು ಶಬ್ದ ಮೇಘದಲ್ಲಿ ತುಂಬಿ ವರ್ಷಿಸುತ್ತಾನೆ, ಅಂತಃಕರಣ ಚತುಷ್ಟಯವನ್ನು ಮೀರಿ ವಾಸ್ತವಿಕ ಪರಿಜ್ಞಾನ ವಿಯತ್ತಲದಲ್ಲಿ ವಿಹರಿಸುತ್ತಾನೆ. ನೆಲ-ಮುಗಿಲುಗಳನೊಂದು ಮಾಡಿ ಮುಗಿಸಿ ಭೂತಾತ್ಮರನ್ನು ಒಂದು ಮಾಡುವ ಭಾವ ಪೂರ್ಣ ಭೂಮಿಕೆಯನ್ನು ಹದ ಗೊಳಿಸುತ್ತಾನೆ. ಇದೇ ಭೂತಳ ವಿಶ್ವದಿಂದ ಅಧ್ಯಾತ್ಮ ವಿಶ್ವವನ್ನು ಗಳಿಸಿ

ಆದಿ ದೈವಿಕ ವಿಶಾಲ ವಿಶ್ವೈಕ್ಯತೆಯನ್ನು ಸಂಪಾದಿಸುವ ಸನ್ನಾಹವಲ್ಲಿರುತ್ತಾನೆ. ಪ್ರಕೃತಿಯಲ್ಲೇ ಪರಾಕೃತಿಯನ್ನು, ಪ್ರಪಂಚದಲ್ಲೇ ಪರಮಾರ್ಥವನ್ನು, ಅಣುವಿನಲ್ಲಿ ಮಹತ್ತನ್ನು ಕಾಣುವ ಕಂಡು ಕೈಗೂಡಿಸಿಕೊಳ್ಳುವ ಎತ್ತುಗಡೆಯಲ್ಲಿರುತ್ತಾನೆ. ಈ ಜೀವನ ಅಣುವಲ್ಲ ಮಹತ್ತು ಎಂಬುದನ್ನು ತೋರಲಿದ್ದಾನೆ. ಈ ಜೀವನ ವಿಷಮವಲ್ಲ, ಸಮರಸವೆಂಬುದನ್ನು ಸುಖರಸವೆಂಬುದನ್ನು ವಿಶ್ವಕ್ಕೆ ಬೀರಲಿದ್ದಾನೆ.

ಪ್ರಾಣಲಿಂಗಿ ಪರಮಾನುಭಾವದ ಪ್ರವಾದಿಯಾದರೆ ಶರಣ ಪರಮಾನಂದ ಪ್ರಮೋದಿ. ಪ್ರಾಣಲಿಂಗಿಯದು ವಾಯುಮಂಡಲ ವಿಹಾರವಾದರೆ ಶರಣನದು ವಿಯನ್ಮಂಡಲದ ವಿಹಾರ. ಪ್ರಾಣಲಿಂಗಿಯ ಹಸ್ತ ಸುಮನ, ಶರಣನದು ಸುಜ್ಞಾನ, ಶ್ರೋತ್ರ ಮುಖ, ಶಬ್ದ ಪ್ರಸಾದ.

ಶರಣ ಶಬ್ದಕ್ಕೆ ರಕ್ಷಣೆ, ರಕ್ಷಕ, ಮನೆ, ಮೊರೆ, ನೆಲ್ಲು, ಗಾಯಗೊಳಿಸುವಿಕೆ ಮುಂತಾದ ಅರ್ಥಗಳಿವೆ. ಷಟ್‌ಸ್ಥಲಾಂತರ್ಗತ ಶರಣ ಶಬ್ದಕ್ಕೆ ಶಿವಲಿಂಗಕ್ಕೆ ಶರಣು ಹೋದವನು, ಮೊರೆಹೊಕ್ಕವನು ಎಂದರ್ಥ. "ಶಿವ ಶರಣ" ಎಂಬ ಪದ ಗಮನಾರ್ಹ, ಶರಣಾರ್ಥಿ, ಶರಣಾಗತ ಗಕ್ಷಕ, ಶರಣಾಗು ಈ ಪದಗಳಲ್ಲಿ ಬರುವ ಶರಣ ಪದ ಬೇರೆ ಬೇರೆ ಅರ್ಥಗಳನ್ನು ಕೊಡುತ್ತದೆ. ಪರಿವಿಡಿದು ವಂದನೆ, ಮರೆಹೊಗುವಿಕೆ, ರಕ್ಷಿಸುವಿಕೆ ಎಂಬ ಅರ್ಥಗಳನ್ನು ಸೂಚಿಸುತ್ತವೆ. ಶರಣೆಯೆಂದಾಗಿ ಸತೀತ್ವ ಸೂಚಕವೂ ಆಗಿದೆ. ಲಿಂಗಪತಿಗೆ ಶರಣ ಸತಿಯಾಗಿ ವರ್ತಿಸುತ್ತಾನೆ. ಆಕಾಶಾಂಗನಾದ ಶರಣ ಶಬ್ದಪ್ರಸಾದ ಜೀವಿ. ಪರಾನಂದ ಜೀವಿ. ಲಿಂಗದಲ್ಲಿ ನಿಬ್ಬೆರಗುಳ್ಳ ಸುಜ್ಞಾನಿ. ಲಿಂಗಕ್ಕೆ ಸರ್ವಾತ್ಮ ಭಾವದಿಂದ ಶರಣಾಗುವ ಸದ್ಭಾವಿ. ಅಂಗ ವಾಸನೆಗಳನ್ನೆಲ್ಲ ತೊಗೆದ ನಿಸ್ಸಂಗಿ ಶಬ್ದ ಬ್ರಹ್ಮವನ್ನು ಸಾಕ್ಷಾತ್ಕರಿಸಿಕೊಂಡ ಪ್ರಸಾದಲಿಂಗಿ.

ಶರಣನದು ದರ್ಪಸಂಕ್ಷಯ, ಸಂಪೂರ್ಣ ವಿನಯ, ಸ್ವಪ್ರಕಾಶೋದಯ, ವಿಶ್ವ ಹೃದಯ. ನಿರ್ಮಲ ವಿಚಾರ. ಅಲುಪ್ತ ಶಕ್ತಿ. ಆನಂದ ಭಕ್ತಿ.

ಶರಣ ಸಾಮಾನ್ಯನಲ್ಲ. ಶರಣಸೃಷ್ಟಿ ಸಾಮಾನ್ಯವಲ್ಲ. ಶರಣನ ಇರುವು ಅರಿವು ನಿಲವು ಸಾಮಾನ್ಯವಲ್ಲ. ಸಮ್ಯಗ್ ಜ್ಞಾನಿ ಚನ್ನ ಬಸವಣ್ಣನವರು ಹೀಗೆ ನಿರೂಪಿಸಿದ್ಧಾರೆ.

“ಬಯಲು ಮೂರ್ತಿಯಾಗಿ ನಿಂದವನೊಬ್ಬ ಶರಣ.
ಆತನ ವಿದ್ಯಾಬುದ್ಧಿಯಿಂದ ಹುಟ್ಟಿದಾತ ಬ್ರಹ್ಮ,
ಆತನ ಶಾಂತಿ ಸ್ವೈರಣೆಯಿಂದ ಹುಟ್ಟಿದಾತ ರುದ್ರ;
ಈ ಮೂರು ಪೀಠವಂತಿರಲಿ, ಈ ತತ್ತ್ವತ್ರಯಂಗಳಿಗೆ
ತಾನೆ ಕಾರಣವಾಗಿಪ್ಪ ಶರಣನ ನಿಲವನರಿದು
ಶರಣೆನುತಿರ್ದೆನು ಕೂಡಲ ಚನ್ನ ಸಂಗಮ ದೇವಾ.”

ಈ ನಿರ್ವಚನದ ಪ್ರಥಮ ಪಂಕ್ತಿಯನ್ನು ಪರಿಗಣಿಸಿ ಪರಾಮರ್ಶನ ಮಾಡಿಕೊಳ್ಳಬೇಕು. ಬಯಲೇ ಮೂರ್ತಿಯಾದವನು ಶರಣ. ಅರ್ಥಾತ್ ಆಕಾಶಾಂಗನು ಶರಣ. ಹಸನಾದ ಹಬ್ಬುಗೆಯಾದ ಹೃದಯಾಕಾಶವುಳ್ಳವನು ಶರಣ. ಸಾಲದ್ದಕ್ಕೆ ತತ್ತ್ವತ್ರಯಕ್ಕೆ ಕಾರಣನು ಶರಣ. ಅಂತಹ ಆ ಶರಣನ ನಿಲವನ್ನು ಶರಣನೇ ಅರಿಯಬೇಕಲ್ಲದೆ ಮಾನವರರಿಯರು. ಅರಿತ ಶರಣ ಚನ್ನ ಬಸವಣ್ಣ ಅರಿತು ಬೆರಗಾದ, ಬಾಗಿದ. ಇಲ್ಲಿದೆ ನಿಜವಾದ ಶರಣತನ. ಅರಿದು ಅರುವಿಗೆ—ಅರುವಿನ ನಿಲುವಿಗೆ ಶರಣು ಹೋಗುವುದೆ ಶರಣತನ.

ಶರಣ ಬ್ರಹ್ಮರುದ್ರರ ಉತ್ಪತ್ತಿಗೆ ಮೂಲ ಕಾರಣ. ಶರಣನ ವಿದ್ಯಾಬುದ್ಧಿ ಬ್ರಹ್ಮ ಸಾರಸ್ವತಕ್ಕೆ ಮೂಲ. ಶರಣನ ಶಾಂತಿ ಸ್ವೈರಣೆ ಶ್ರೀರುದ್ರ ಶಕ್ತಿಗೆ ಮೂಲ. ಬಯಲಿನ ಸಕಲ ಸ್ವರೂಪವೇ ಶರಣ. ಆಕಾಶಾಂಗನಾದ ಶರಣನದು ತೆರೆದೆದೆ. ಭೂತಾಕಾಶದಲ್ಲಿ ಇಡೀ ಬ್ರಹ್ಮಾಂಡವೇ ಇರುವಂತೆ ಶರಣನ ಹೃದಯಾಕಾಶದಲ್ಲಿಯೂ ಸೂಕ್ಷ್ಮವಾಗಿ ಬ್ರಹ್ಮಾಂಡವಿರುತ್ತದೆ.

ಆ ನಿಲವನ್ನು ಕನ್ಯೆಯ ಸ್ನೇಹದಂತೆ ಕಂಡನು ಭಕ್ತ ಬಸವಣ್ಣ, ತನ್ನ ಸುಜ್ಞಾನದಂತೆ ಕಂಡನು ಶರಣ ಚನ್ನ-ಬಸವಣ್ಣ, ಸುಜ್ಞಾನ ಪ್ರಸಾದದ ಬೆಡಗು ಶಿವಶರಣ. ಸಮ್ಯಗ್ ಜ್ಞಾನದ ಶಿವಕಳೆ ಶಿವಶರಣ. ಶಿವ ಶಕ್ತಿ ಸಂಪುಟ ಶಿವಶರಣ.

“ಏನೂ ಏನೂ ಇಲ್ಲದ ಬಯಲೊಳಗೊಂದು
ಬಗೆಗೊಳಗಾದ ಬಣ್ಣ ತಲೆದೋರಿತ್ತು.
ಆ ಬಯಲನಾ ಬಣ್ಣ ಸಿಂಗರಿಸಲು

ಬಯಲು ಸ್ವರೂಪಗೊಂಡಿತ್ತು
ಅಂತಪ್ಪ ಸ್ವರೂಪಿನ ಬೆಡಗು ತಾನೆ
ಗುಹೇಶ್ವರ ಲಿಂಗದ ಪ್ರಥಮ ಭಿತ್ತಿ !"

ಆತ್ಮ ಸ್ವರೂಪನಾದ ಐಕ್ಯನನ್ನುಳಿದರೆ ಶೂನ್ಯವೇ ಸ್ವರೂಪಗೊಂಡಂತಿರುವ ಶರಣನೇ ಸೃಷ್ಟಿಗೆ ಪ್ರಥಮ ಭಿತ್ತಿ. ಅಂದರೆ ಆದಿ ಆಧಾರ. ಏನೂ ಏನೂ ಇಲ್ಲದ ಬಯಲೆಂದರೆ ಅಭಾವ ಶೂನ್ಯವಲ್ಲ, ಏನೂ ಇಲ್ಲದ ಶೂನ್ಯವಲ್ಲ, ಎಲ್ಲವನ್ನೂ ಅವ್ಯಕ್ತವಾಗಿ ನಿರಾಕಾರ ಸ್ವರೂಪದಲ್ಲಿ ಒಳಗೊಂಡ ಶೂನ್ಯ. ಯಾವ ಆಕಾರ-ವಿಕಾರಗಳಿಲ್ಲದ ಶೂನ್ಯ. ಪರಿಪೂರ್ಣ ಶೂನ್ಯ. ಸಾಕಾರದೊಳಗಿನ ನಿರಾಕಾರ ಸ್ವರೂಪ. ಅಲ್ಲೊಂದು ಶಾಂತ್ಯತೀತ ಕಳೆ ತೋರುತ್ತದೆ. ಅದುವೆ ಮಹಾನಾದ, ಮಹಾವರ್ಣ. ಅದು ಪರಾಶಕ್ತಿಯ ಕಾರ್ಯ. ಅದರಿಂದ ಶೂನ್ಯ ಸಾಕಾರಗೊಳ್ಳುತ್ತದೆ. ಬಯಲು ಮೂರ್ತಿಸ್ವರೂಪವಾಗುತ್ತದೆ, ಆ ಸ್ವರೂಪವೆ ಶರಣ, ಶರಣ ಸರ್ವ ಪ್ರಪಂಚಕ್ಕೆ ಆಶ್ರಯ. ಆಕಾಶದಂತೆ ಅವಕಾಶ ಪ್ರದ. ಮಹಾನಾದ ಸ್ವರೂಪ; ಮಹಾನುಭಾವಿ.

"ಬಯಲ ರೂಪ ಮಾಡಬಲ್ಲಾತನೇ ಶರಣ
ಆ ರೂಪ ಬಯಲ ಮಾಡಬಲ್ಲಾತನೇ ಲಿಂಗಾನುಭಾವಿ
ಆ ಬಯಲ ರೂಪ ಮಾಡಲರಿಯದಿರ್ದಡೆ ಎಂತು ಶರಣನೆಂಬೆ ?
ಆ ರೂಪ ಬಯಲ ಮಾಡಲರಿಯದಿರ್ದಡೆ ಎಂತು ಲಿಂಗಾನುಭಾವಿ ಯೆಂಬೆ ?
ಈ ಉಭಯವನೊಂದಾಗಿ ಅರಿಯದಿರ್ದಡೆ ನಿಮ್ಮಲ್ಲಿ ತೆರಹುಂಟೇ ಕೂಡಲ ಸಂಗಮದೇವಾ ?"

ಚೆನ್ನಬಸವಣ್ಣ ಪ್ರಭುದೇವರಿಬ್ಬರ ಅಭಿಪ್ರಾಯವನ್ನು ಬಸವಣ್ಣನವರ ಈ ವಚನ ಎತ್ತಿ ಹಿಡಿದಿರುವುದಲ್ಲದೆ ಹೆಚ್ಚು ನಿಚ್ಚಳವಾಗಿ ನಿರ್ಧರವಾಗಿ ಶರಣತ್ವವನ್ನು ಪ್ರತಿಪಾದಿಸಿದೆ. ನಿರಾಕಾರವಾದ ಬಯಲಿಗೆ ಸಾಕಾರ ಸ್ವರೂಪವನ್ನು ಕೊಡದವನು ಶರಣನೆಂದು ಹೇಳಲು ಸಾಧ್ಯವೇ ಎಂದು ಕೇಳಿದೆ. ಅಲ್ಲದೆ ನಿರಾಕಾರ ಸಾಕಾರಗಳೆರಡನ್ನು ಒಂದೆಂದು ಅರಿಯದವನಿಗೆ ಪರವಸ್ತುವಿನಲ್ಲಿ ಒಂದಾಗಲು ತೆರಹಿಲ್ಲೆಂದು ತಿಳಿಸುತ್ತದೆ.

ಶರಣ ಬಯಲನ್ನು ತನ್ನ ಶಕ್ತಿಯಿಂದ ಗಟ್ಟಿಗೊಳಿಸಬಲ್ಲ, ಗಟ್ಟಿಯಾದುದನ್ನು ಮರಳಿ ತೆಳುವಾಗಿಸಬಲ್ಲ ; ಆತ-ನಿರೂಪ-ರೂಪಾಗಿಸಲು, ರೂಪ-ನಿರೂಪವಾಗಿಸಲು ಸಮರ್ಥ. ಬಯಲಿಗೆ ಬಣ್ಣವಿಡುವುದೆ ಶರಣ ಧರ್ಮ. ಬಣ್ಣವನ್ನು ಬಯಲಾಗಿಸುವುದೇ ಲಿಂಗಾನುಭಾವ. ಬಯಲು–ಬಣ್ಣಗಳೆರಡನ್ನು ಒಂದಾಗಿ ಸಂದೇಹವಿಲ್ಲದೆ ತಿಳಿದವನಿಗೆ ಆ ಮಹಾಲಿಂಗದಲ್ಲಿ ತೆರಹುಂಟು.

ಬಯಲು–ಬಣ್ಣ :

ಇಲ್ಲಿದೆ ಕನ್ನಡತನದ ಕೆಚ್ಚು ; ತಿರುಳ್ಗನ್ನಡದ ಮೆಚ್ಚು. ಪರಿವಿಡಿದು ನಿರಾಕಾರ–ಸಾಕಾರ ಎಂಬ ಪದಗಳನ್ನು ಪ್ರತಿನಿಧಿಸುತ್ತವೆ ಬಯಲು–ಬಣ್ಣಗಳು. ಬಯಲು ಬಣ್ಣವಾದರೆ ಶರಣ ; ಬಣ್ಣ ಬಯಲಾದರೆ ಲಿಂಗಾನುಭಾವಿ. ಉಭಯವೊಂದಾದರೆ ಐಕ್ಯ. ಬಯಲು–ಬಣ್ಣಗಳೆರಡನ್ನು ಒಂದಾಗಿ ಅರಿದು ಅಳವಡಿಸಿಕೊಂಡರೆ ಅದು ದಿಟದರಿವು ; ಅದು ಪರಮ ಜ್ಞಾನ, ಪರಮಾನುಭಾವ.

ಬಯಲ ಬಣ್ಣಗೊಂಡವ ಶರಣ. ಶರಣನ ಮಹತ್ವ ಇದರಲ್ಲಿದೆ. ಊರ್ಧ್ವಸೃಷ್ಟಿ ಶರಣ ; ಅಪ್ರಾಕೃತ ಸೃಷ್ಟಿ ಶರಣ. ಜಡದಿಂದಾದವನಲ್ಲ ಶರಣ. ಜಡವನ್ನು ಅಜಡವನ್ನಾಗಿಸಿಕೊಂಡವ ಶರಣ.

"ನೆಲ ನೀರು ಕಿಚ್ಚು ಗಾಳಿ ಬಯಲು ಕೂಡಿ
ಅದೇ ಪಿಂಡ ತಾನೆಂಬ ಮಿಥ್ಯಾ ಚರ್ಮದೇಹಿಗಳನೇನೆಂಬೆನಯ್ಯಾ ?
ನೆಲನಲ್ಲದ, ನೀರಲ್ಲದ, ಕಿಚ್ಚಲ್ಲದ, ಗಾಳಿಯಲ್ಲದ,
ಬಯಲಲ್ಲದ, ಪ್ರಕೃತಿಯಲ್ಲದ, ಪುರುಷನಲ್ಲದ
ಮೇಲಣ ಶುದ್ಧ ಸ್ವಯವೇ ತಾನೆಂದು ತಿಳಿದಾತನಲ್ಲದೆ
ಶರಣನಲ್ಲ ಕಾಣಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ".

ಅಣುವಿನಿಂದಾದವನು ಶರಣನಲ್ಲ. ಪಂಚಭೂತಗಳಿಂದಾದವನು ಶರಣನಲ್ಲ. ಪ್ರಕೃತಿ ಪುರುಷ ಸಂಯೋಗದಿಂದಾದವನು ಶರಣನಲ್ಲ. ಶರಣ ಸ್ವಯಂಭು, ತನ್ನಿಂದ ತಾನೇ ಆದಾತ ಶರಣ ತನುಗುಣಗಳನ್ನು ಮೂವತ್ತಾರು ತತ್ತ್ವಗಳನ್ನು ಮೀರಿ ಆರೂಢನಾಗಿರುವಾತನು ಶರಣ,

"ಅಂಗ ಲಿಂಗದಲ್ಲಿ ತರಹರವಾಗಿ,
ಮನ ಜ್ಞಾನದಲ್ಲಿ ತರಹರವಾಗಿ,
ಭಾವ ನಿರ್ಭಾವದಲ್ಲಿ ತರಹರವಾಗಿ,
ಸಮತೆ ಶಾಂತಿಯಲ್ಲಿ ತರಹರವಾಗಿ,
ಇರಬಲ್ಲಾತನೆ ಅಚ್ಚ ಶರಣ ಗುಹೇಶ್ವರಾ".

ಅಂಗ ಮನ ಭಾವ ಸಮತೆಗಳು ಪರಿವಿಡಿದು ಲಿಂಗ ಜ್ಞಾನ ನಿರ್ಭಾವ ಶಾಂತಿಗಳಲ್ಲಿ ಅವಿರಳವಾಗಿ ಅಂದರೆ ಅವಿನಾಭಾವವಾಗಿ ಇರುವವನೇ ಶರಣ. ಶರಣನಿಗೆ ಶರೀರ ಗುಣಗಳಿರುವುದಿಲ್ಲ. ಶರಣನ ಶರೀರ ಸ್ಪಟಿಕದ ಘಟದಂತೆ ಒಳಹೊರಗೆ ಸ್ವಚ್ಛವಾಗಿರುತ್ತದೆ. ಲಿಂಗಕಾಯನಾಗಿರುತ್ತಾನೆ, ಆತನ ಮನದಲ್ಲಿ ಮಾಯಾ ಕುಟಿಲತೆಯಿರುವುದಿಲ್ಲ. ಸಮ್ಯಜ್ಞಾನ ಉದಯವಾಗಿರುತ್ತದೆ. ಸ್ವಾನುಭವ ಪ್ರಕಾಶದಿಂದ ಬೆಳಗುತ್ತಿರುತ್ತದೆ, ಆತನ ಭಾವದಲ್ಲಿ ಯಾವ ಭ್ರಾಂತಿಯಿರುವುದಿಲ್ಲ, ಆತ ತನ್ನ ನಿಜ ಸ್ವರೂಪವನ್ನಲ್ಲದೆ ಬೇರೊಂದನ್ನು ಭಾವಿಸನು. ಆದ್ದರಿಂದ ಆತನದು ನಿರ್ಭಾವ ; ಆತ ನಿರ್ಭಾವಿ. ಆತ ಸಮತಾಭಾವಿಯಾಗಿದ್ದರೂ ಅಶಾಂತಿಗೆ ಒಳಗಾಗಿರುವುದಿಲ್ಲ, ನಿಜಶಾಂತಿಯಲ್ಲಿ ನಿಂತಿರುತ್ತಾನೆ ; ಅದೇ ಆತನ ನಿಲುಗಡೆ. ಶಾಂತಿಯಿಲ್ಲದ ಸಮತೆಗೆ ಅರ್ಥವಿಲ್ಲ. ಶರಣನ ಸಮತಾಭಾವವೆಂಬ ಸುರತರು ಶಾಂತಿಯೆಂಬ ರಸಫಲವನ್ನು ಬಿಟ್ಟಿರುತ್ತದೆ. ಅಂತಹ ಪ್ರಸನ್ನತೆಯನ್ನು ಪಡೆದವನೇ ಅಚ್ಚಶರಣ. ಪ್ರಸನ್ನತೆಯೆ ಪರಶಿವ. ಅದರಲ್ಲಿ ಪರವಶವಾಗಿ ಪ್ರಕಾಶಿಸುವವನೆ ಪರಮ ಶರಣ.

"ಬಿಂದುವಿನೊಳಗೆ ನಾದ ಹೊಂದಿದ್ದ ಭೇದವನು,
ಹೊಂದಿಯೂ ಹೊಂದದಿದ್ದ ಭೇದವನು,
ಲಿಂಗದೊಳಗೆ ಶರಣ ಸಂದಿರ್ದ ಭೇದವನು,
ಲೋಕದ ಸಂದೇಹಿಗಳೆತ್ತ ಬಲ್ಲರೈ ರಾಮನಾಥಾ ?"
"ಬಯಲ ಬಣ್ಣವ ಮಾಡಿ, ಸ್ವಯವ ನಿಲವ ಮಾಡಿ
ಸುಳಿವಾತನ ಬೆಡಗ ಬಲ್ಲವರಾರೈ ರಾಮನಾಥಾ ?"

ಬಿಂದುವಿನಲ್ಲಿ ನಾದ ಹೊಂದಿರುವಂತೆ ಶಿವಲಿಂಗದಲ್ಲಿ ಶರಣ ಸಂದಿರುತ್ತಾನೆ, ಶಿವನಿಗೂ [illegible] ಇರುವುದಿಲ್ಲ. ಬಿಂದು

ಬಿಟ್ಟು ವಾದವಿರದು ; ಶಿವನ ಬಿಟ್ಟು ಶರಣ ಇರನಂ. ಶಿವತ್ವವನ್ನು ತನ್ನಲ್ಲಿ ಸಂರಕ್ಷಿಸಿಕೊಂಡವನೆ ಶರಣ ; ಸನ್ನಿಹಿತಗೊಳಿಸಿಕೊಂಡವನೇ ನಿಜಶರಣ. ಶಿವನಿಗೂ ಶರಣನಿಗೂ ಅವಿರಳ ಸಂಬಂಧ ; ಅಚ್ಚಳಿಯದ ಅನುಬಂಧ.

> "ಶಿವಶಕ್ತಿ ಸಂಪುಟವೆಂಬುದೆಂತು ಹೇಳಿರಣ್ಣಾ !
> ಶಿವನೇ ಚೈತನ್ಯಾತ್ಮಕನು, ಶಕ್ತಿಯೇ ಚಿತ್ತು
> ಇಂತೀ ಚೈತನ್ಯಾತ್ಮಕನೇ ಚಿತ್‌ಸ್ವರೂಪವೆಂದು
> ಅರಿಯಬಲ್ಲಡೆ ಆತನೇ ಶರಣ ಗುಹೇಶ್ವರಾ !"

ಶಿವನೇ ಚೈತನ್ಯ ; ಶರಣನೇ ಶಕ್ತಿ, ಶಿವ-ಶರಣರು ಅಭಿನ್ನರು, ಪ್ರಕೃತಿ ಪುರುಷರಂತೆ ಭಿನ್ನರಲ್ಲ, ಶಿವ ಚೈತನ್ಯದ ಚಿತ್ಪ್ರಭೆಯೇ ಶರಣ ಶಕ್ತಿ, ಶಿವನ ಆ ಚಿತ್ಕಳಾ ಶಕ್ತಿಯೇ ಶರಣನಾಗಿದೆ. ಚೈತನ್ಯದ ಚಿತ್‌ಸಾಮರ್ಥ್ಯವೇ ಶರಣನೆಂದು ಪ್ರಭುವಾಣಿ ಪ್ರಬೋಧಿಸಿದೆ. ಇದೇ ಅಭಿಪ್ರಾಯವನ್ನು ಕಲ್ಮಠದ ಪ್ರಭುದೇವನು ತನ್ನ "ಲಿಂಗ ಲೀಲಾವಿಲಾಸ ಚಾರಿತ್ರ"ದಲ್ಲಿ ಶರಣಸ್ಥಲದ ಮೊದಲಲ್ಲಿ ಸೂತ್ರ ಸ್ವರೂಪವಾಗಿ ಹೀಗೆ ಹೇಳಿದಾನೆ :

> "ಸರ್ವ ಕಾರಣವಾದ ಅಖಂಡ ಚಿಚ್ಚೈತನ್ಯಲಿಂಗವೇ ಪ್ರಾಣ ಸ್ವರೂಪವಾಗಿರ್ದ ಪ್ರಾಣಲಿಂಗಿಯ ಜ್ಞಾನದೃಷ್ಟಿಗೆ ತೋರುವ ತೋರಿಕೆಯೆಲ್ಲಾ ಲಿಂಗಮಯವಾಗಿ ಕಾಣುತ್ತಿರಲು ಸರ್ವವು ಲಿಂಗ ಮಯವಾಗಿ ಕಾಂಬ ಚಿದ್‌ದೃಕ್ಕನುಳ್ಳ ಶರಣನೇ ಚಿತ್‌ಸ್ವರೂಪು ಆ ಚಿತ್‌ಸ್ವರೂಪವೇ ಲಿಂಗದ ಅಭಿನ್ನ ಚಿಚ್ಛಕ್ತಿ. ಅಂತು ಲಿಂಗದ ಅಭಿನ್ನ ಚಿಚ್ಛಕ್ತಿ ಸ್ವರೂಪವೇ ಶರಣನಾದ ಕಾರಣ ಶರಣನೇ ಸತಿ, ಲಿಂಗವೇ ಪತಿಯೆನಿಸಿತ್ತು. ಆ ಪತಿಯೆನಿಸಿದ ಚಿದ್ಘನಲಿಂಗಕ್ಕೆಯೂ ಆ ಸತಿಯೆನಿಸಿದ ಚಿತ್‌ಸ್ವರೂಪವಾದ ಶರಣಂಗೆಯೂ ಎಂದೆಂದೂ ವಿಯೋಗವಿಲ್ಲ. ಅದು ಹೇಗೆಂದೊಡೆ: ಚಿನ್ನ ಚಿನ್ನದ ಬಣ್ಣದಂತೆ. ರನ್ನ ರನ್ನದ ಕಾಂತಿಯಂತೆ ಇಪ್ಪುದಾಗಿ, ಅಂತಿಪ್ಪ ಚಿದ್ಘನಲಿಂಗದ ಚಿತ್ಪ್ರಭಾ ಶಕ್ತಿಯೂ ಆ ಲಿಂಗವ ಕೂಡಿಕೊಂಡೇ ಶರಣರೂಪಾಯಿತ್ತಾಗಿ, ಆ ಶರಣನಂಗದ ಸರ್ವೇಂದ್ರಿಯ ಸುಖಂಗಳನೆಲ್ಲಾ ಲಿಂಗವೆ ಭೋಗಿಸುತ್ತಿಪ್ಪನು. ಅಂತು ಭೋಗಿಸುತ್ತಿಪ್ಪ ಲಿಂಗದ ಅಭಿನ್ನದರಿವಾಗಿಪ್ಪನಾಗಿ

> ಶರಣ ತಾನೆಲ್ಲಾ ಲಿಂಗವೆಂದು, ಆ ಲಿಂಗಾನಂದಸುಖವೆಲ್ಲಾ ತನ್ನದಾಗಿ ಭೋಗಿಸುತ್ತಿಪ್ಪ ಶರಣ. ಅಂತು ಅಭಿನ್ನಜ್ಞಾನದಿಂದ ಲಿಂಗವು ತಾನಾಗಿ ಎರಡಿಲ್ಲದೆ ಅದ್ವಯ ಜ್ಞಾನಾನಂದದಿಂದಲಿಪ್ಪುದೇ ಆನಂದ ಭಕ್ತಿ. ಅಂತಪ್ಪ ಅದ್ವಯಾನಂದ ಭಕ್ತಿ ಸ್ವರೂಪನೇ ಶರಣನಾದ ಕಾರಣ ಶರಣಸ್ಥಲವೆಂದು ಹೇಳಲಾದುದು".

ಶರಣನ ಸ್ವರೂಪ ಲಕ್ಷಣ ಈ ವಚನದಲ್ಲಿ ಸ್ಫುಟವಾಗಿ ನಿರೂಪಿತವಾಗಿದೆ. ಶರಣಾಂಗ ಪ್ರಣವಾಕ್ಷರ ಸ್ವರೂಪವಾಗಿ ಪ್ರಸಾದಲಿಂಗ ಪ್ರಣವಾರ್ಥ ಸ್ವರೂಪವಾಗಿ ಅದ್ವಯವಾಗಿರುವ ಬೆಡಗು ಶರಣಾಂಗನದು. ಪರಶಕ್ತಿ ಪರಚೈತನ್ಯಗಳ ಸಮ್ಮಿಲನ ಶರಣ. ಜ್ಞಾನ ಶರಣಾಂಗ ; ಜ್ಞೇಯ ಪ್ರಸಾದಲಿಂಗ; ಪರಮ ಸುಖವೇ ಪ್ರಸಾದಲಿಂಗ.

ಶರಣ ಶಕ್ತಿ ಸ್ವರೂಪ. ಹೀಗೆ ಹೇಳುವಲ್ಲಿ ಒಂದು ಸ್ವಾನುಭವ ಸಂಪತ್ತಿಯಿದೆ, ಪರಶಿವ ವಸ್ತುವನ್ನು ಪರಿಸ್ಫುಟವಾಗಿ ವಚನದಲ್ಲಿ ಬೋಧಿಸುವ ಸಾಮರ್ಥ್ಯ ಶರಣರಿಗಿರುತ್ತದೆ. ಆ ಸಾಮರ್ಥ್ಯವೇ ಶಕ್ತಿ. ಅಂತೆಯೇ ಶರಣ ಶಕ್ತಿ ಸ್ವರೂಪ ; ಸತಿಭಾವ ಸಂಪನ್ನ.

ಶರಣನಲ್ಲಿ ಶಿವತ್ವ ಸನ್ನಿಹಿತವಾಗಿರುತ್ತದೆ. ಶಾಬ್ದಪ್ರಮೆ ಸಂಪೂರ್ಣ ಅಳವಟ್ಟಿರುತ್ತದೆ. ಪರಾವಾಣಿಯ ಪರಿಣಾಮ ಪೂರ್ಣವಾಗಿರುತ್ತದೆ, ಪರಾವಾಕ್ ಶಕ್ತಿಯಾಗಿ ಶರಣ ಪರಿಣಾಮಗೊಂಡಿರುತ್ತಾನೆ. ಅಂತೆಯೇ ಆತನಲ್ಲಿ ಶಿವಬೋಧ ಶಕ್ತಿಸಂಪನ್ನನಾಗಿರುತ್ತಾನೆ. ಸತಿಗೆ ಪತಿಯ ಅರ್ಧಾಂಗತ್ವ ಅಳವಟ್ಟಂತೆ ಅಧಿಕಾರ ಅಳವಟ್ಟಂತೆ ಶರಣನಿಗೆ ಶಿವನ ವಿಷಯದಲ್ಲಿ ಪೂರ್ಣಾಂಗತ್ವ ಅಳವಟ್ಟಿರುತ್ತದೆ.

ಶರಣನ ಶಬ್ದಸಂಪತ್ತಿಯಲ್ಲಿ ಸತ್ಯ ಪ್ರಮೆಯಿರುತ್ತದೆ, ಅರ್ಥ ಚೈತನ್ಯವಿರುತ್ತದೆ. ಅನುಭಾವ ಜ್ಯೋತಿರ್ಮಯ ಕಳೆಯಿರುತ್ತದೆ. ಶರಣ ಶಕ್ತಿಯಿಂದ ಶಿವ ಶಕ್ತನಾಗಿರುತ್ತಾನೆ ಅರ್ಥ ಶಕ್ತಿಯಿಂದ ಶಬ್ದವು ವಸ್ತುವನ್ನು ಬೋಧಿಸಲು ಶಕ್ತವಾಗುತ್ತದೆ.

ಶರಣನಲ್ಲಿ ಪರೋಕ್ಷತ್ವವಿರುವುದಿಲ್ಲ, ಅಪರೋಕ್ಷತ್ವ ಅಳವಟ್ಟಿರುತ್ತದೆ ಪರಿಪೂರ್ಣ ಪರಶಿವಜ್ಞಾನವುಂಟಾಗಿರುತ್ತದೆ.

ಶರಣ ಪದ ಶಾಕ್ತೇಯವೂ ಅಹುದು : ಲಾಕ್ಷಣಿಕವೂ ಅಹುದು. ಆಕಾಶ ಪದ ವಾಚ್ಯವೂ ಲಕ್ಷ್ಯವೂ ಆಗಿರುವಂತೆ ಶರಣ ಪದ ಉಭಯಃ ವಿಶಿಷ್ಟವಾಗಿದೆ, ಶಿವಾಶ್ರಯವನ್ನು ಕೋರುವ ಸಾಧಕನನ್ನು ಬೋಧಿಸುವಂತೆ ಶಿವನನ್ನು ಸಾಕ್ಷಾತ್ಕರಿಸಿಕೊಂಡ ಸಿದ್ಧನನ್ನೂ ಬೋಧಿಸುತ್ತದೆ, ಭಕ್ತ ಭಗವಂತರ ತಾದಾತ್ಮ್ಯತೆಯೂ ಅದರಲ್ಲಿದೆ.

ಓಂಕಾರದ ಬಿಡಿಯಾದ ಅ.ಉ.ಮಾ. ಎಂಬ ಬೀಜಾಕ್ಷರಗಳೇ ಶಿವ ಮತ್ತು ಶರಣರು. ಅ-ಶಿವ, ಉಮಾ-ಶರಣ. ಉಮಾ ವಾಚ್ಯ ಶರಣ ಶಕ್ತಿ ಸೂಚಕ ಸತಿತ್ವ ಸೂಚಕ. ಶರಣ ಸ್ಥಲದಲ್ಲಿ ಬಿಡಿಯಾದ ಬೀಜಾಕ್ಷರಗಳಾಗಿದ್ದರೆ ಮುಂದಿನ ಐಕ್ಯ ಸ್ಥಲದಲ್ಲಿ ಇಡಿಯಾದ ಓಂಕಾರ ಸ್ವರೂಪರಾಗಿರುತ್ತಾರೆ. ಸಮರಸವಾಗಿರುತ್ತಾರೆ. ''ಕರಿಯ ಬಣ್ಣದ ಮುಸುಕನುಗಿದು ಬೆರಸಬಲ್ಲ ಶರಣಂಗಲ್ಲದೆ ಪರತತ್ವವೆಂಬುದು ಸಾಧ್ಯವಾಗದು ಗುಹೇಶ್ವರಾ !'' ಅಜ್ಞಾನವೇ ಕರಿಯಬಣ್ಣ. ಅದೇ ಅರಿವಿಗೆ ಮುಸುಗು, ಅದನ್ನು ಗುರು ಬೋಧಿಸಿದ ಪ್ರಣವ ಪ್ರಜ್ಞೆಯಿಂದ ತೆರೆದು ಪ್ರಸಾದಲಿಂಗದಲ್ಲಿ ಬೆರೆದವನೇ ಶರಣ,

''ಕರಗಿಸಿ ನೋಡಿರೇ ಅಣ್ಣಾ ಕರಿಯ ಗಟ್ಟಿಯನು ! ಆ ಕರಿಯ ಗಟ್ಟಿಯೊಳಗೊಂದು ರತ್ನವಿಪ್ಪುದು. ಆ ರತ್ನದ ಪರೀಕ್ಷೆಯ ಬಲ್ಲೇವೆಂಬವರ ಕಣ್ಣುಗೆಡಿಸಿತ್ತು ನೋಡಾ ! ಅದು ಹಿರಿಯರೆಲ್ಲರು ಮರುಳಾಗಿ ಹೋದರು. ಕರಿಯ ಗಟ್ಟಿಯ ಬಿಳಿದು ಮಾಡಿ ಮುಖದ ಮುದ್ರೆಯನೊಡೆಯ ಬಲ್ಲವರಿಗಲ್ಲದೆ ಗುಹೇಶ್ವರನ ನಿಲವನರಿಯಬಾರದು, ನೋಡಿರಣ್ಣಾ !'' ಅಜ್ಞಾನವೇ ಕಪ್ಪು, ಅದುಳ್ಳ ಚಿತ್ತವೇ ಕರಿಯಗಟ್ಟಿ ! ಅದನ್ನು ಜ್ಞಾನ ಜ್ಯೋತಿಯಿಂದ ಕರಗಿಸಿದರೆ ಅದರಲ್ಲಿ ನಿರ್ಮಲ ಜ್ಞಾನ ರತ್ನವಿರುತ್ತದೆ, ಅದನ್ನು ಸಂಪಾದಿಸಿ ಅಹಂಕಾರಕ್ಕೆ ಒಳಗಾಗಬಾರದು, ಶರಣ ಹಾಗಾಗದೆ ವಿನಯಶಾಲಿಯಾಗುವನು, ಆ ಜ್ಞಾನ ಸ್ವರೂಪ ಪ್ರಸಾದ ಲಿಂಗವನ್ನು ಅರಿದು ಅಳವಡಿಸಿಕೊಳ್ಳುವನು,

ಬಯಲ ಬದುಕು

ಶರಣಾಂಗ :

ಇದು ಯೋಗಾಂಗದ ಮೊದಲ ಕವಲು. ಇದಕ್ಕೆ ಆಶ್ರಯ ಮುಗಿಲು. ಇದರ ಮಹಾಭೂತ ಮತ್ತು ತತ್ವ ಬಯಲು. ಬಯಲಿನಿಂದ ಬಣ್ಣವಿಟ್ಟುದೆ ಶರಣಾಂಗ ಇದರ ನಿರೂಪಣದಿಂದ ಯೋಗಾಂಗಕ್ಕೆ ನಿಲುಕಿದಂತಾಗಿದೆ.

ಹಿಂದಿನ ನಾಲ್ಕು ಸಂಪುಟಗಳಿಂದ, ಭಕ್ತ-ಮಾಹೇಶ್ವರರನ್ನೊಳಗೊಂಡ ತ್ಯಾಗಾಂಗ, ಪ್ರಸಾದಿ-ಪ್ರಾಣಲಿಂಗಿಗಳನ್ನೊಳಗೊಂಡ ಭೋಗಾಂಗ ಇವುಗಳ ವಿಶ್ಲೇಷಣ ನಡೆದಿದೆ; ವಿಶುದ್ಧಿ ಹಾಗು ವಿಕಾಸ ನಿರೂಪಣೆ ನಡೆದಿದೆ. ಇದೀಗ ಯೋಗಾಂಗ ನಿರೂಪಣೆ.

ಸ್ಥೂಲಕಾಯ, ಸ್ಥೂಲಕಾಯಾವಚ್ಛಿನ್ನ ಚೈತನ್ಯ ಸೇರಿ ತ್ಯಾಗಾಂಗ. ಸೂಕ್ಷ್ಮಕಾಯ, ಸೂಕ್ಷ್ಮಕಾಯಾವಚ್ಛಿನ್ನ ಚೈತನ್ಯ ಸೇರಿ ಆದುದೇ ಭೋಗಾಂಗ. ಕಾರಣಕಾಯ, ಕಾರಣ ಕಾಯಾವಚ್ಛಿನ್ನ ಚೈತನ್ಯ ಕೂಡಿರುವುದೇ ಯೋಗಾಂಗ. ಅಹಂಕಾರ, ಚಿತ್ತ, ಆತ್ಮ ಈ ಮೂರರ ಸಂಯೋಗದಿಂದ ಯೋಗಾಂಗವಾಗುತ್ತದೆ. ಮತ್ತು ಆಕಾಶ-ಆತ್ಮ ತತ್ತ್ವಗಳೆರಡು ಸಂಮಿಲನವಾಗಿ ಯೋಗಾಂಗವಾಗಿದೆ. ಇವೆರಡರಲ್ಲಿ ಆಕಾಶ ತತ್ತ್ವವನ್ನಾಧರಿಸಿ ಆದುದೇ ಶರಣಾಂಗ. ಆತ್ಮ ತತ್ತ್ವವನ್ನು ಅಧಿಕರಿಸಿ ಆಗುವುದೇ ಐಕ್ಯಾಂಗ. ಇದೀಗ ಪರಿವಿಡಿದ್ದು ಪ್ರಾಪ್ತವಾದ ಶರಣಾಂಗ ವಿಚಾರವನ್ನು ಪ್ರಸ್ತಾಪಿಸಲಾಗುತ್ತದೆ.

ಶರಣಾಂಗ ವ್ಯೋಮಾಂಗದಿಂದಾಗಿದೆ. ಶರಣಾಂಗದಲ್ಲಿ ಈ ಅಯ್ದು ಕರಣಗಳಿರುತ್ತವೆ.

“ಜ್ಞಾನಂ ಸಮಾನವಾಯುಶ್ಚ ಶ್ರೋತ್ರಂ ಶಬ್ದಸ್ತಥೈವ ಚ ।
ವಾಣೀ [illegible] ಪಂಚಕಂ ॥”

ಎಂಬುದಾಗಿ ಚನ್ನಬಸವಣ್ಣನವರು ತಮ್ಮ 'ಕರಣ ಹಸಿಗೆ'ಯಲ್ಲಿ ಹೇಳಿದ್ದಾರೆ. ವಾಕ್, ಶಬ್ದ, ಶ್ರೋತ್ರ, ಸಮಾನವಾಯು, ಜ್ಞಾನ ಇವು ಅಯ್ದು ಶರಣಾಂಗಕ್ಕೆ ಸಂಬಂಧಿಸಿದವುಗಳು. ಇವುಗಳಲ್ಲಿ ವಾಗಿಂದ್ರಿಯವು ಆಕಾಶದೊಳಗಿನ ಪೃಥ್ವಿಯ ಅಂಶದಿಂದಾಗಿದೆ. ಶಬ್ದವು ಆಕಾಶದೊಳಗಿನ ಅಪ್ಪುವಿನ ಅಂಶದಿಂದಾಗಿದೆ. ಶ್ರೋತ್ರವು ಆಕಾಶದೊಳಗಿನ ಅಗ್ನಿತತ್ವಾಂಶದಿಂದಾಗಿದೆ. ಸಮಾನವು ಆಕಾಶದೊಳಗಿನ ವಾಯುತತ್ವಾಂಶದಿಂದಾಗಿದೆ. ಜ್ಞಾನಕರಣವು ಆಕಾಶದೊಳಗಿನ ಆಕಾಶ ತತ್ವದಿಂದಾಗಿದೆ. ಆಕಾಶದಿಂದಾಗುವ ಮಾನವೀಯ ಆಕಾರವಿದು.

"ರಾಗದ್ವೇಷ ಭಯಾ ಲಜ್ಜಾ ಮೋಹಶ್ಚೈವ ಯಥಾ ತಥಾ ।
ನಭಃ ಪಂಚಗುಣಾಃ ಪ್ರೋಕ್ತಾಸ್ತದಂಶಾಃ ಪರಿಕೀರ್ತಿತಾಃ ॥"

—ಚ. ಕರಣಹಸಿಗೆ

ಭಯ ಮೋಹ ದ್ವೇಷ ರಾಗ ಲಜ್ಜೆಗಳು ಆಕಾಶದಿಂದಾಗುವವು. ಭಯ ಮೋಹ ಕ್ರೋಧ ಕಾಮ ಶೋಕಗಳೆಂದು ಅದ್ವೈತಿಗಳು ಹೇಳುತ್ತಾರೆ. ಅಂಜಿದಾಗ ಸ್ಥೌಲ್ಯಭಾವವುಂಟಾಗುವುದರಿಂದ ಭಯಗುಣ ಭೂರೂಪವೆಂದು, ನೀರಿನಂತೆ ದ್ರವರೂಪವಾಗಿರುವುದರಿಂದ ಮೋಹ ಜಲರೂಪವೆಂದು, ಕಿಚ್ಚಿನಂತೆ ಸುಡುವುದರಿಂದ ದ್ವೇಷ (ಕ್ರೋಧ) ಅಗ್ನಿರೂಪವೆಂದು, ಚಂಚಲವಾಗಿರುವುದರಿಂದ ರಾಗ (ಕಾಮ) ವಾಯುರೂಪವೆಂದು, ಆಕಾಶದಂತೆ ಸೂಕ್ಷ್ಮವಾಗಿರುವುದರಿಂದ ಲಜ್ಜೆ (ಶೋಕ) ಆಕಾಶರೂಪವೆಂದು ನಿರ್ದಿಷ್ಟವಾಗಿವೆ. ಅಲ್ಲದೆ ಶರಣಾಂಗಕ್ಕೆ ಸೇರಿದ ಪ್ರಸಾದಲಿಂಗ, ಪರಾಶಕ್ತಿ, ಆನಂದ ಭಕ್ತಿ, ಜ್ಞಾನಹಸ್ತ, ಶ್ರೋತ್ರಮುಖ, ಶಬ್ದಪದಾರ್ಥ, ಸುಶಬ್ದ ಪ್ರಸಾದಗಳ ವಿಚಾರವನ್ನು ವಿವರಿಸಲಾಗುತ್ತದೆ.

ಕ್ರಿಯಾಪ್ರಧಾನವಾದ ಭಕ್ತ-ಮಾಹೇಶ-ಪ್ರಸಾದಿ ಸ್ಥಲಗಳು ಪರಿವಿಡಿದು ತ್ವಂ-ತತ್-ಅಸಿ ಪದವಾಚ್ಯಗಳಾದಂತೆ,ಜ್ಞಾನಪ್ರಧಾನವಾದ ಪ್ರಾಣಲಿಂಗಿ-ಶರಣ-ಐಕ್ಯಸ್ಥಲಗಳು ಕ್ರಮವಾಗಿ ತ್ವಂ-ತತ್-ಅಸಿ ಪದವಾಚ್ಯಗಳಾಗುತ್ತವೆ. ಪ್ರಸ್ತುತ

ಶರಣಾಂಗ ತತ್ ಪದ ವಾಚ್ಯವಾಗಿದೆ. ಅಂತೆಯೆ 'ಶಿವ-ಶರಣ' ಎಂದು ಹೇಳಲಾಗುತ್ತದೆ. ತತ್ವದ ವಾಚ್ಯವಾದ ಶಿವಪದವನ್ನೆ ಪ್ರಥಮವಾಗಿ ಪ್ರಧಾನವಾಗಿ ಬಳಸಲಾಗುತ್ತದೆ. ಪ್ರಾಣಲಿಂಗಿಯಲ್ಲಿ ತ್ವಂಪದ ವಾಚ್ಯವಾದ ಪ್ರಾಣವೇ ಪ್ರಧಾನವಾಗಿದೆಯೆಂಬುದನ್ನು ಪರಿಕಿಸಬೇಕು. ತತ್ಪದ ವಾಚ್ಯ ಶಿವ ಅಥವಾ ಲಿಂಗವೇ ಶರಣನಿಗೆ ಪಂಚಪ್ರಾಣ.

ಶರಣಾಂಗನಿಂದಲೇ ಯೋಗಾಂಗ ಮೊದಲಾಗುತ್ತದೆ; ಯೋಗಕ್ಕೆ ಅವಕಾಶವಾಗುತ್ತದೆ. ಭೋಗಾಂಗ ನಿಷ್ಪತ್ತಿಗೊಂಡು ನಿರವಯತ್ವಕ್ಕೆ ನಿಲುಕುವಂತಾಗುತ್ತದೆ. ಮನ ಜ್ಞಾನದಲ್ಲಿ ಮುಂದುವರಿಯುತ್ತದೆ; ಮುಳುಗಿರುತ್ತದೆ. ವಾಯುತತ್ತ್ವ ವ್ಯೋಮತತ್ತ್ವದಲ್ಲಿ ವಿಲೀನ ಅಥವಾ ಸಂಯೋಗವಾಗುತ್ತದೆ.

ಜ್ಞಾನ ಪ್ರಧಾನನಾದ ಶರಣನಿಗೆ ಶಬ್ದಸುಖ ಅಂದರೆ ಪ್ರಸಾದಲಿಂಗಾನಂದ ಆವಶ್ಯಕ. ಆತ್ಮರಕ್ಷಣೆಗೆ ಆತ್ಮನಾದ ಅಥವಾ ಆತ್ಮಸಂವಿತ್ಸುಖ ಅನಿವಾರ್ಯ. ಆತ್ಮರಕ್ಷಣೆಯೆಂದರೆ ಆತ್ಮವಿಕಾಸವೆಂದರ್ಥ. ಚಿತ್ಕಣನಾದ ಶರಣಾಂಗನು ಚಿದ್ಘನನಾಗಬೇಕಾದರೆ ಸ್ವಾನುಭವ ಅಥವಾ ಶಿವಾನುಭವ-ಸಾಹಿತ್ಯ ಸುಖಿಯಾಗಬೇಕಾಗುತ್ತದೆ. ಅದರಿಂದಾಗಿ ಶರಣನು ಆನಂದ ಭಕ್ತಿಯಿಂದ ಜ್ಞಾನಹಸ್ತದಲ್ಲಿ ಶಬ್ದಪದಾರ್ಥವನ್ನು ಪ್ರಸಾದಲಿಂಗಕ್ಕೆ ಶ್ರೋತ್ರಮುಖಾಂತರ ಸಮರ್ಪಿಸುವ ಸ್ವರೂಪದಲ್ಲಿ ತನ್ನ ಆರಾಧನೆಯನ್ನು ಆಚರಿಸಬೇಕಾಗುತ್ತದೆ. ಅದಕ್ಕೆ ಪ್ರಸನ್ನವಾದ ಪ್ರಸಾದಲಿಂಗವು ತನ್ನ ಪರಾಶಕ್ತಿಯಿಂದ ಸುಶಬ್ದ ಪ್ರಸಾದವನ್ನು ಅನುಗ್ರಹಿಸಿ ಶರಣಾಂಗನ ಭಯ ಮೋಹ ದ್ವೇಷ ರಾಗ ಶೋಕಗಳನ್ನು ನಿವಾರಿಸಿ ನಿರಾಳನನ್ನಾಗಿಸುತ್ತದೆ.

ಆನಂದಗಳಲ್ಲಿ ಶಬ್ದಾನಂದವೂ ಒಂದು; ಬಗುಮಿಗೆಯಾದುದು. ಗಂಧಾನಂದ, ರಸಾನಂದ, ರೂಪಾನಂದ, ಸ್ಪರ್ಶಾನಂದಗಳಿಗಿಂತ ಶಬ್ದಾನಂದ ಶ್ರೇಷ್ಠವಾದುದು. ಶಬ್ದ ಬ್ರಹ್ಮವೆನಿಸಿದೆ. ಆತ್ಮಾನಂದಕ್ಕೆ ಸನ್ನಿಹಿತವಾಗಿದೆ; ಸೋದರನೆನಿಸಿದೆ. ಶರಣಾಂಗನ ಜೀವಾಳವಾದ ಶಬ್ದ ಪ್ರಸಾದ ಸೃಷ್ಟಿಗೆ ಆಕಾಶಾಂಗವೇ ಆಧಾರ. ಶಬ್ದೋತ್ಪತ್ತಿಗೆ ಸಾಧನ ಅಥವಾ ಕರಣಗಳಾದ

ಹೃದಯ, ಕಂಠ, ಶಿರಸ್ಸಾದಿಗಳು ವ್ಯೋಮದಿಂದಲೇ ಉದಯಿಸುವವು. ಶ್ರೋತ್ರ ವಾಕ್ಕುಗಳು ಸಹ ವ್ಯೋಮಜನ್ಯಗಳು. ನಾದಪ್ರಸಾದ ಸರ್ವಾಂಗದಲ್ಲಿ ಪ್ರಸರಿಸಬೇಕಾದರೆ ಆಕಾಶ ತತ್ತ್ವವಿಲ್ಲದಾಗದು. ರಾಗ-ದ್ವೇಷ, ಮೋಹ-ಶೋಕಗಳು ತೊಲಗಬೇಕಾದರೆ ಆತ್ಮಜ್ಞಾನ ಅಗತ್ಯ. ಆ ಆತ್ಮಜ್ಞಾನಾರ್ಜನೆಗೆ ಶಬ್ದ ಸಂಪತ್ತು ಅಗತ್ಯ. ಶಬ್ದ ಸಂಪತ್ತಿಗೆ ವ್ಯೋಮಾಂಗ ಇದ್ದಾಗಬೇಕು. ವ್ಯೋಮಾಂಗಕ್ಕೆ ಚೇತನಕಾರಿಯಾಗಿ ಪ್ರಸಾದಲಿಂಗ ಇದ್ದಾಗಬೇಕು. ವಾಕ್ ಶರಣಾಂಗ; ಅರ್ಥಪ್ರಸಾದಲಿಂಗ.

ವಾಗ್ಜಾಲವೆಲ್ಲ ಶರಣನ ವಿಶುದ್ಧ ವಚನವಲ್ಲ. ಶರಣನ ವಚನ ಅದೊಂದು ವೇದವಾಙ್ಮಯ, ಮಂತ್ರಸ್ವರೂಪ. ಶರಣವಾಣಿಯಲ್ಲಿ ಪ್ರಸಾದಲಿಂಗ ಪಜ್ವಳಿಸುತ್ತ ಇರುತ್ತದೆ. ಶಿವಶರಣನ 'ಮಾತೆಂಬುದು ಜ್ಯೋತಿರ್ಲಿಂಗ.'

ಸ್ಥೂಲ ಶಬ್ದ ವಾಣಿಯನ್ನು ಶ್ರೋತ್ರವನ್ನು ವಿಶುದ್ಧವಿಸಿ ಸಂಸ್ಕರಿಸಿದರೆ ಸೂಕ್ಷ್ಮನಾದ ಮತ್ತು ಅರ್ಥಗಳು ಮನಭಾವಗಳನ್ನು ಜ್ಞಾನವನ್ನು ಶುದ್ಧವಿಸಿ ಸಂಸ್ಕರಿಸುತ್ತವೆ. ಶಬ್ದಸ್ಪಂದನ ಸದ್ರೂಪವನ್ನು, ಅರ್ಥಸ್ಪಂದನ ಚಿದ್ರೂಪವನ್ನು, ಭಾವಸ್ಪಂದನ ಆನಂದವನ್ನು ಅಳವಡಿಸುತ್ತವೆ. ಸಚ್ಛ್ರವಣ ರಾಗ-ದ್ವೇಷ-ಮೋಹ-ಭಯಗಳನ್ನು ನಿವಾರಿಸುತ್ತದೆ. ಅರ್ಥ ಭಾವಗಳು ಶೋಕವನ್ನು ನಿವಾರಿಸಿ ಸತ್ಪರಿಣಾಮ-ಚಿತ್ಪರಿಣಾಮ ಆನಂದಪರಿಣಾಮಗಳನ್ನುಂಟುಮಾಡುತ್ತವೆ ಪರಮ ಪ್ರಮಾಣವಾಗುತ್ತವೆ.

ಸಾಹಿತ್ಯ ಅದರಲ್ಲಿಯೂ ಶಿವಸಾಹಿತ್ಯ ಸಾಮಾನ್ಯವಾದುದಲ್ಲ. ಅದು ಆ ಪರಾಶಕ್ತಿಯಿಂದ ಉದಯಿಸಿ ಪರಾವಾಣಿಯಾಗಿ ಪರಿಣಮಿಸುತ್ತದೆ. ಬಳಿಕ ಪಶ್ಯಂತಿ ಮಧ್ಯಮೆ ವೈಖರಿಯಾಗಿ ಹೊರಹೊಮ್ಮುತ್ತದೆ. ಪ್ರಾಸಾದಿಕ ವಾಣಿಯಲ್ಲಿ ಪರಾಶಕ್ತಿ ನೇರವಾಗಿರುತ್ತದೆ. ಪರಿಪೂರ್ಣಕಳೆ ಪರಿಪೂರ್ಣನಾದಗಳಿರುತ್ತವೆ. ಚಿದ್ಬಿಂದು ಚಿಮ್ಮುತ್ತಿರುತ್ತದೆ.

ಜೀವನದಲ್ಲಿ ಶೋಕ ಮೋಹಗಳಿಗೆ ಮಿಗಿಲಾಗಿ ಅವಕಾಶವಿದೆ. ಅಂತೆಯೇ ರಾಗ-ದ್ವೇಶಗಳಿಗೂ ಭಯಕ್ಕೆ ಅವಕಾಶವಿದೆ. ಇವೆಲ್ಲ ಒಟ್ಟಾರೆ ಆಕಾಶ ಮಹಾಭೂತದಿಂದ ಬಂದುವು, ಬರುವುವು.

ಶೋಕಲಜ್ಜೆಗಳು ಮುಗಿಲತತ್ತ್ವದ ಮೂಲಗುಣಗಳು. ಮುಗಿಲ ಗುಣವಾಗಿರುವುದರಿಂದಲೋ ಏನೊ ಬಾಳಿನಲ್ಲಿ ನಲವಿಗಿಂತ ನೋವು ಮಿಗಿಲಾಗಿರುತ್ತದೆ. ದುಃಖ, ವ್ಯಸನ, ರೋದನ, ಶೋಚನ, ವಿಲಾಪ, ಪ್ರಲಾಪ ಇವೆಲ್ಲವೂ ಶೋಕದ ಪರ್ಯಾಯಗಳು; ಶೋಕದ ಅರ್ಥಗಳು, ಇವುಗಳಿಂದ ದೇಹಿಯು ದೀಪ್ತಿಹೀನನಾಗುತ್ತಾನೆ. ಮೋಡ ಮುಸುಗಿದ ಮುಗಿಲಿನಂತಾಗುತ್ತಾನೆ. ಶೋಕಾರ್ತನಿಗೆ ಸರ್ವಶೂನ್ಯ. ಬಾಳೆಲ್ಲ ಬಯಲು; ಬದುಕೆಲ್ಲ ಬರಿದು. ದಿಕ್ಕಿಲ್ಲದ ದೆಸೆ. ಎಲ್ಲದರಲ್ಲಿಯೂ ಅರುಚಿ. ಒಳ ಹೊರಗೆ ಎಲ್ಲಿಯೂ ಇರುವುದಿಲ್ಲ ಶುಚಿ. ರವಿ ಶಶಿ ತಾರೆಗಳಿಲ್ಲದ ಬಾಂದಳ.

ಬರಿದಾದ ಆ ಬಾಂದಳದ ಭಾನು ಶರಣ; ಸಹಸ್ರಕಿರಣ ಶರಣ. ಶರಣತ್ವದ ಉದಯದಿಂದ ಬಾಳು ಬೆಳಗುತ್ತದೆ. ಹದುಳತೆಯ ಹೊಗರೇರುತ್ತದೆ, ಶರಣ ಶೋಕಕ್ಕೆ ಸಿಲುಕುವನಲ್ಲ. ಶೋಕವೊದಗಿದರೂ ಶೋಕವಿಹ್ವಲನಾಗಲಾರ. ಸಂಕಲ್ಪ ರಹಿತ ಶರಣನಿಗೆ ಸುಖದುಃಖಗಳಿಲ್ಲ.

ಶರಣ ಪರಿಪಕ್ವ ಸಾಧಕ. ಸದಾನಂದದಲ್ಲಿರುವ ಸಿದ್ಧ. ಪರಾವಿದ್ಯೆಯಲ್ಲಿ ಪ್ರವೀಣ, ಪ್ರಸಾದಲಿಂಗ ಶರಣ, ಶರಣಾಂಗವೆಲ್ಲ ಲಿಂಗ. ಲಿಂಗಪ್ರಭೆಯಾಗಿ ಪರಿಣಾಮಗೊಂಡಿರುತ್ತದೆ—ಶರಣಾಂಗ.

ರಾಗ ಅಥವಾ ಕಾಮ ಇವು ಆಕಾಶದೊಳಗಿನ ವಾಯು ಜನ್ಯಗುಣಗಳು. ಆಕಾಶದೊಳಗಿನ ವಾಯು ತತ್ವಕ್ಕೆ ಒಳಗಾದ ಶರಣ ರಾಗಿಯಾಗಿರುತ್ತಾನೆ. ದುಃಖಿಯಾಗಿರುತ್ತಾನೆ. ಅದೇ ಪ್ರಸಾದ ಲಿಂಗದೊಳಗಿನ ಜಂಗಮಲಿಂಗಕ್ಕೆ ಶರಣಾದವನು ವಿರಾಗಿಯಾಗಿ ನಿಷ್ಕಾಮಿಯಾಗಿರುವನು ಶರಣ ಭೌತಿಕ ಧರ್ಮಕ್ಕೆ ಒಳಗಾಗುವವನಲ್ಲ.

ದ್ವೇಷ-ಕ್ರೋಧಗಳು ಆಕಾಶದೊಳಗಿನ ಅಗ್ನಿ ತತ್ವದವುಗಳು. ಆಕಾಶ ಅಗ್ನಿತತ್ವವನ್ನೊಡಗೂಡಿ ದ್ವೇಷ-ಕ್ರೋಧಗಳನ್ನು ಹುಟ್ಟಿಸುತ್ತದೆ. ತನ್ನನ್ನೇ ಮರೆಯುಸುತ್ತದೆ, ಸಿಟ್ಟಿನ ಕಿಚ್ಚಿನಲ್ಲಿ, ದ್ವೇಷದ ದಳ್ಳುರಿಯಲ್ಲಿ ಬೇಯಿಸುತ್ತದೆ. ಶರಣತ್ವದಿಂದ ಮಾನವತ್ವಕ್ಕೆ ಅತಿಯಾದರೆ ಪಶುತ್ವಕ್ಕೆ ತಳ್ಳುತ್ತದೆ. ಶಾಂತಿ ಸಮಾಧಾನಗಳನ್ನು ಸಂಹರಿಸುತ್ತದೆ. ಆದ್ದರಿಂದ ಸತ್ಯಶರಣನು ಪ್ರಸಾದಲಿಂಗ

ದೊಳಗಿನ ಶಿವಲಿಂಗಕ್ಕೆ ಶರಣಾಗಿರುತ್ತಾನೆ. ದ್ವೇಷ ಕ್ರೋಧಗಳೆರಡನ್ನೂ ಜಯಿಸಿರುತ್ತಾನೆ.

ಮೋಹವು ಆಕಾಶ ಜಲತತ್ತ್ವದಲ್ಲಿ ಕೂಡುವುದರಿಂದ ಕಾಣಿಸಿಕೊಳ್ಳುತ್ತದೆ. ಮೋಹ ರಕ್ತಗುಣ. ರಕ್ತ ರಸಜನ್ಯ. ರಸ ಪದಜನ್ಯವೂ ಅಹುದು; ಪದಾರ್ಥ ಜನ್ಯವೂ ಅಹುದು. ಇಲ್ಲಿ ಪದವೆಂದರೆ ಶಬ್ದ. ಶೃಂಗಾರರಸ ಸ್ರಾವಿಯಾದ ಶಬ್ದ ಶ್ರವಣದಿಂದ ಮೋಹವುಂಟಾಗುತ್ತದೆ. ಸ್ವಸ್ವರೂಪದ ಮರೆವು ಉಂಟಾಗುತ್ತದೆ. ಇವನ್ನು ಕಳೆದುಕೊಳ್ಳಲು ಶರಣನು ಪ್ರಸಾದಲಿಂಗದೊಳಗಿನ ಗುರುಲಿಂಗವನ್ನು ಆರಾಧಿಸುತ್ತಾನೆ. ಮೋಹವನ್ನು ಮುರಿದಿಕ್ಕುತ್ತಾನೆ.

ಭಯ ಪಾರ್ಥಿವ ಗುಣ. ಆಕಾಶ ಪಾರ್ಥಿವಾಂಶದಿಂದ ಕೂಡಿಕೊಂಡಾಗ ಭಯ ಹುಟ್ಟುತ್ತದೆ ಅಂಜಿಕೆಯಲ್ಲಿದ್ದಾಗ ಯಾವುದರಲ್ಲಿಯೂ ಮುಂದುವರಿಯಲು ಸಾಧ್ಯವಾಗುವುದಿಲ್ಲ. ಮಾಂದ್ಯತೆ ಮೈಗೂಡಿರುತ್ತದೆ. ಭಯವನ್ನು ಕಳೆದುಕೊಳ್ಳಬೇಕಾದರೆ ಪ್ರಸಾದಲಿಂಗದೊಳಗಿನ ಆಚಾರಲಿಂಗವನ್ನು ಆರಾಧಿಸಬೇಕಾಗುತ್ತದೆ. ಶರಣನು ಆರಾಧಿಸಿ ಭಯರಹಿತನಾಗಿರುತ್ತಾನೆ; ಧೀರನೆನಿಸಿರುತ್ತಾನೆ.

ಭಯ-ಮೋಹ-ದ್ವೇಷ-ರಾಗ-ಶೋಕಗಳು ಮಾನವನನ್ನು ಮಾನವತ್ವದಿಂದ ವಂಚಿಸುತ್ತವೆ. ಇವಿದ್ದರೆ ಶರಣತ್ವ ಸಂಪ್ರಾಪ್ತವಾಗದು. ಪ್ರಸಾದಲಿಂಗೋಪಾಸನೆಯಿಂದ ಇವು ತೊಲಗುತ್ತವೆ. ಪ್ರಾಸಾದಿಕ ಸಾಹಿತ್ಯೋಪಾಸನೆಯಿಂದ ತೊಲಗುತ್ತವೆ. ಮಹಾಜ್ಞಾನ, ಮಹಾನಂದಗಳು ಉಂಟಾಗುತ್ತವೆ. ಮಾನವತೆಯನ್ನು ಕಾಪಾಡಿಕೊಳ್ಳುವ ಶಕ್ತಿಯುಂಟಾಗುತ್ತವೆ.

“ಲಿಂಗ ಮುಂತಾಗಿಯೇ ನಡೆವನಾ ಶರಣ.
ಲಿಂಗ ಮುಂತಾಗಿಯೇ ನುಡಿವನಾ ಶರಣ.
ಲಿಂಗ ಮುಂತಾಗಿಯೇ ತೃಪ್ತನಾ ಶರಣ.
ಲಿಂಗಕಾಯ ಶರಣ; ಶರಣಕಾಯ ಲಿಂಗ.

ಇದು ಕಾರಣ, ಕೂಡಲ ಚನ್ನಸಂಗಯ್ಯಾ,
ನಿಮ್ಮ ಶರಣ ಸರ್ವಾಂಗಲಿಂಗಿ.”

ಎಂದು ಚಿನ್ಮಯ ರೂಪನಾದ ಚನ್ನಬಸವಣ್ಣನು ನಿರೂಪಿಸಿದರೆ,

“ಹರಿವ ನದಿಗೆ ಮೈಯೆಲ್ಲ ಕಾಲು;
ಉರಿವ ಕಿಚ್ಚಿಗೆ ಮೈಯೆಲ್ಲ ಬಾಯಿ;
ಬೀಸುವ ಗಾಳಿಗೆ ಮೈಯೆಲ್ಲ ಕೈ;
ಇದು ಕಾರಣ, ಗುಹೇಶ್ವರಾ ನಿಮ್ಮ ಶರಣಂಗೆ
ಸರ್ವಾಂಗವೆಲ್ಲಾ ಲಿಂಗಮಯವಯ್ಯಾ.”

ಎಂದು ಕಾವ್ಯಮಯ ವಾಣಿಯಲ್ಲಿ ಕಮನೀಯವಾಗಿ ಪ್ರಭುದೇವರು ನಿರೂಪಿಸಿದ್ದಾರೆ.

ಕೊಡದೊಳಗೆ ಆಕಾಶವಿರುವಂತೆ, ಸ್ಪಟಿಕ ಘಟದೊಳಗೆ ಪ್ರಕಾಶವಿರುವಂತೆ ಶರಣನ ಸರ್ವಾಂಗದಲ್ಲಿ, ಶಿವಲಿಂಗವಿರುತ್ತದೆ.

ತ್ರಿಮಲ ಜನ್ಯ ದೋಷ (ಪಾಪ)ಗಳನ್ನು ಪ್ರಸಾದ್ಯಂಗನು ಪರಿಹರಿಸುತ್ತಾನೆ; ಕ್ರಿಯಾ ನಿರ್ವಹಣೆಯಿಂದ ಕಾಯವನ್ನು ಕಳೆಯೇರಿಸುತ್ತಾನೆ. ಎರಡನೆಯದಾಗಿ ವಿಕ್ಷೇಪಜನ್ಯ ಚಾಂಚಲ್ಯವನ್ನು ಪ್ರಾಣಲಿಂಗ್ಯಂಗನು ಪರಿಹರಿಸುತ್ತಾನೆ; ಯೋಗಾರ್ಜನೆಯಿಂದ ಮನವನ್ನು ನಿಶ್ಚಲಗೊಳಿಸುತ್ತಾನೆ. ಮೂರನೆಯದಾಗಿ ಆವರಣ ಜನ್ಯ ಅಜ್ಞಾನವನ್ನು ಶರಣಾಂಗನು ನಿವಾರಿಸುತ್ತಾನೆ; ಜ್ಞಾನಾರ್ಜನೆಯಿಂದ ಸ್ವಸ್ವರೂಪವನ್ನು ಸಾಕಲ್ಯವಾಗಿ ತಿಳಿಯುತ್ತಾನೆ; ಸಾಕ್ಷಾತ್ಕರಿಸಿಕೊಳ್ಳುತ್ತಾನೆ.

ಸತ್ಕ್ರಿಯೆಗಳು ಸ್ಥೂಲಾಂಗಕ್ಕೆ ಸಂಬಂಧಿಸಿದವುಗಳು ಧ್ಯಾನ ಧಾರಣಾದಿ ಯೋಗಗಳು ಸೂಕ್ಷ್ಮಾಂಗಕ್ಕೆ ಸಂಬಂಧಿಸಿದವುಗಳು; ಮತ್ತು ಮಾನಸಿಕಕ್ರಿಯೆಗಳು ಜ್ಞಾನಾನಂದ ಸಮರಸಗಳು ಕಾರಣಾಂಗಕ್ಕೆ ಸಂಬಂಧಿಸಿದವುಗಳು. ಆನಂದರೂಪಾದ ತನ್ನನ್ನು ಆರಾಧಿಸುವುದೇ ಶರಣಾಂಗವೆನಿಸುತ್ತದೆ. ಸ್ವಸ್ವರೂಪ

ವನ್ನು ವಾಸ್ತವವಾಗಿ ಅಂದರೆ ಯಥಾರ್ಥವಾಗಿ ತಿಳಿದು ತಳೆಯುವವನೇ ಶರಣಾಂಗನು. ಜ್ಞಾನಾನಂದ ಸಿದ್ಧನಾದ ಶರಣನಿಗೆ ಮೋಹ ಶೋಕಗಳಿರಲು ಸಾಧ್ಯವಿಲ್ಲ. ಶರಣನ ಮನ ಅಜ್ಞಾನವಶವಾಗಲು ಸಾಧ್ಯವಿಲ್ಲ.

ಶರಣನದು ವ್ಯೋಮಾಂಗ. ಆದರಿಂದ ಶರಣಾಂಗನಲ್ಲಿ ಚಿತ್ರಭಾಕರನುಂಟು; ಚಂದ್ರಸ್ವರೂಪ ಚಿದ್ರಸದ ರುಚಿಯುಂಟು. ಶರಣಾಂಗನ ಚಿದ್ಗರ್ಭದಲ್ಲಿ ಚತುರ್ವೇದಗಳುಂಟು; ಇಪ್ಪತ್ತೆಂಟು ಆಗಮಗಳುಂಟು. ಹದಿನಾಲ್ಕು ಲೋಕಗಳುಂಟು ನೀಲಾಕಾಶವೆ ಆತನ ತಲೆ ಸೂರ್ಯಚಂದ್ರರೇ ಶರಣನ ಕಣ್ಣುಗಳು. ಹತ್ತು ದಿಕ್ಕುಗಳೇ ಆತನ ತೋಳುಗಳು. ಮೋಡಗಳು ಆತನ ಜಡೆಗಳು. ಬೆಳದಿಂಗಳಾತನ ನೊಸಲ ವಿಭೂತಿ. ಷಡ್ರುತುಗಳೇ ಶರಣನಿಗೆ ಷಟ್‌ಸ್ಥಲಗಳು. ನಾದಮಯ ವಾಙ್ಮಯವೇ ಆತನ ಜ್ಞಾನಹಸ್ತ.

ವ್ಯೋಮಾಂಗನಾದ ಶರಣನಿಂದ ವರ್ಣ, ಪದ, ಮಂತ್ರಾಧ್ವಗಳೂ ಭುವನ, ತತ್ತ್ವ, ಕಲಾಧ್ವಗಳೂ ಜನಿಸುವವು. ಶರಣನ ಹೃದಯಾಕಾಶದಲ್ಲಿ ಗಾಯತ್ರಿ ನೆಲಸಿರುವಳು. ನಾದಮಯ ಶಿವಲಿಂಗ, ಬಿಂದುಮಯ ಶರಣಾಂಗ ಸೇರಿ ಭುವನ ತತ್ತ್ವ ಕಲೆಗಳು ಉದ್ಭವಿಸುವವು; ವರ್ಣ ಪದ ಮಂತ್ರಗಳು ಹೊಮ್ಮುವವು. ಇವುಗಳಿಂದ ಪ್ರಣವಾತ್ಮಕ ಪ್ರಸಾದಲಿಂಗ ಪ್ರತಿಷ್ಠಿತವಾಗುವುದು. ಇದು ನಾದಬಿಂದು ಕಳಾತ್ಮಕವಾಗಿರುವುದು.

ಶರಣಾಂಗನಲ್ಲಿರುವ ನಾದಾತ್ಮಕ ಶಿವನಿಂದ ಪರಾವಾಕ್ ಶಕ್ತಿ ಉದಿಸುವುದು. ಆ ಪರಾಶಕ್ತಿಯಿಂದ ವರ್ಣ ಪದ ಮಂತ್ರಗಳು ಉದಿಸುವವು. ಆದಿಶಕ್ತಿಯ ಸಂಯೋಗದಿಂದ ಭುವನ ತತ್ತ್ವಕಲೆಗಳು ಜನಿಸುವವು. ಇದರಿಂದಾಗಿ ಬಯಲ ಬಣ್ಣವ ಮಾಡುವ ಸಮರ್ಥ ಶರಣ.

ಅಂತಃಕರಣಗಳು ಆಕಾಶ ಜನ್ಯಗಳು. ಆಕಾಶದೊಳಗಿನ ಆಕಾಶಾಂಶದಿಂದ ಜ್ಞಾನ; ಆಕಾಶದೊಳಗಿನ ವಾಯ್ವಂಶದಿಂದ ಮನ; ಆಕಾಶದೊಳಗಿನ ತೇಜೋಂಶದಿಂದ ಅಹಂಕಾರ; ಆಕಾಶದೊಳಗಿನ ಜಲಾಂಶದಿಂದ ಬುದ್ಧಿ; ಆಕಾಶದೊಳಗಿನ ಭೂಮ್ಯಂಶದಿಂದ ಚಿತ್ತ ಜನಿಸುತ್ತವೆ.

ಭಯ ಮೋಹ ರಾಗ ದ್ವೇಷ ಶೋಕಗಳು ಆಕಾಶ ಧರ್ಮಗಳಲ್ಲದೆ ಆತ್ಮಧರ್ಮಗಳಲ್ಲ. ಇವು ಶಬ್ದಸಂಸ್ಕಾರ ಜನ್ಯಗಳು. ಅಂತಃಕರಣ ನಿಷ್ಠಗಳು. ಇವಕ್ಕೆ ಅಂತಃಕರಣ ಜ್ಞಾನ. ಜ್ಞಾನವನ್ನು ಅಂತಃಕರಣವನ್ನಾಗಿ ಶಿವಾದ್ವೈತಿಗಳು ಅಂಗೀಕರಿಸಿದ್ದಾರೆ. ಭಯಾದಿಗಳನ್ನು ಅಂಗನು ಅರಿಯುತ್ತಾನೆ. ಅಂಗನು ಅವಿದ್ಯಾವಂತನಾದರೆ ಅಜ್ಞಾನಿಯಾದರೆ ಇವನ್ನು ಅನುಭವಿಸುತ್ತಾನೆ. ಲಿಂಗಕ್ಕೆ ಇವುಗಳ ಸಂಬಂಧವಿಲ್ಲ ಅಂತೆಯೇ ಅದು ಪ್ರಸಾದ ಲಿಂಗವೆನಿಸಿತು. ಅಭಯ ಅಮೋಹಗಳು ಪ್ರಸಾದಲಿಂಗ ಧರ್ಮಗಳು. ಅದಕ್ಕೆ ರಾಗ ದ್ವೇಷಗಳಿಲ್ಲ, ಶೋಕವಿಲ್ಲ.

ಭಯಾದಿಗಳು ವಿಕಾರಗಳು. ವಿಕಾರಗಳು ನಿತ್ಯಪ್ರಸನ್ನ ಸ್ವರೂಪನಾದ ಲಿಂಗಕ್ಕಿರುವುದಿಲ್ಲ. ಅಂತಹ ಪ್ರಸಾದಲಿಂಗೋಪಾಸಕನು ಶರಣಾಂಗನು. ಅಭಯಸ್ವರೂಪ ಮತ್ತು ಅಶೋಕ ಸ್ವರೂಪ ಆ ಪ್ರಸಾದಲಿಂಗ.

ಬ್ರಹ್ಮಾದ್ವೈತದಲ್ಲಿ ಆತ್ಮನೇ ಬ್ರಹ್ಮ. ಆತನೇ ಭಯ ಶೋಕಾದಿಗಳನಂ ಅರಿಯುವಾತ, ಅನುಭವಿಸುವಾತ. ವಿಕಾರ ಮತ್ತು ವಿಷಯಗಳು ಆತನ ಧರ್ಮವಾಗದಿದ್ದರೂ ಆತ ವಿಷಯಿಯೆನಿಸಿದ್ದಾನೆ. ಶಿವಾದ್ವೈತದಲ್ಲಿ ಲಿಂಗಕ್ಕೆ ಅಂಗನು ಆರಾಧನೆಯಲ್ಲಿ ಬೇರಾಗಿರುವುದರಿಂದ ಅಂಗನು ಅಜ್ಞಾನವಶದಿಂದ ಭಯಾದಿಗಳಿಗೆ ಒಳಗಾಗುವನು. ಇವನ್ನು ಕಳೆದುಕೊಳ್ಳುವುದಕ್ಕಾಗಿ ತನಗೆ ಆರಾಧ್ಯವಾದ ಪ್ರಸಾದಲಿಂಗವನ್ನು ಆರಾಧಿಸಿ ಆತನ ಆ ಅಭಯವನ್ನು ಆನಂದವನ್ನು ಅಳವಡಿಸಿಕೊಳ್ಳುವನು. ಅಭಯ ಆನಂದಗಳೇ ಪ್ರಸಾದ ಪ್ರಾಪ್ತಿ.

ದುಃಖ ಆತ್ಮಧರ್ಮವಲ್ಲ. ಆದರೂ ಆತ್ಮನು ದುಃಖಿ, ಈ ದುಃಖ ನಿವಾರಣೆಗಾಗಿ ದುಃಖರಹಿತ ಆ ಪರಮಾತ್ಮನ ಆರಾಧನೆ; ಆ ಪರಮಾತ್ಮನ ಜ್ಞಾನಸಂಪಾದನೆ. ಈ ಪ್ರಸಕ್ತಿ ಶಿವಾದ್ವೈತ ಸಿದ್ಧಾಂತದಲ್ಲಿದೆ. ಬ್ರಹ್ಮಾದ್ವೈತದಲ್ಲಿ ಈ ಪ್ರಸಕ್ತಿಯಿಲ್ಲ.

ಸ್ಮೃತಿ ಸಂಸಾರ ಅನುಭವಾದಿಗಳು ಅಂಗ (ಆತ್ಮ)ನಿಗೆ ವಿಷಯಗಳು. ಅಂತೆಯೇ ಭಯಾದಿಗಳ ಸ್ಮೃತಿ ಸಂಸ್ಕಾರ ಅನುಭವಗಳು ಅಂಗನಿಗಾಗುತ್ತವೆ; ಅಂಟಿಕೊಳ್ಳುತ್ತವೆ. ಅದೇ ಅಂಗನಿಗೆ ಭಕ್ತಿ ತೈಲ ಲೇಪನವಾಗಿದ್ದರೆ ಅಂಟಿಕೊಳ್ಳವು.

ಭಯ, ಮೋಹ, ರಾಗ, ದ್ವೇಷ, ಶೋಕಗಳು ಮನೋಧರ್ಮಗಳು. ಮನಸ್ಸಿಗೆ ಇವುಗಳ ಸೋಂಕು ; ಆತ್ಮನಿಗಲ್ಲ ಎಂದು ಬ್ರಹ್ಮಾದ್ವೈತಿಗಳು ಪರಿಹಾರವನ್ನು ಹೇಳಹೊರಡುವರು. ಬರೀ ಮನ ಜಡ. ಜಡವಾದ ಮನಕ್ಕೆ ಭಯಾದಿಗಳ ಸಂಸ್ಕಾರವೆಂದರೇನು ? ಸೋಂಕೆಂದರೇನು ? ವಾಯುಜನ್ಯ ಮನ ಜಡವಲ್ಲದೆ ಮತ್ತೇನು ? ಅನ್ನಜನ್ಯ ಮನವನ್ನು ಜಡವಲ್ಲೆಂದು ಹೇಳಲು ಸಾಧ್ಯವೇ ? ಮನ-ಜ್ಞಾನಗಳಲ್ಲಿರುವ ಚೈತನ್ಯಕ್ಕೆ ತಾನೆ ಸ್ಮೃತಿ ಸಂಸ್ಕಾರ ಅನುಭವಾದಿಗಳು ? ಮನಸ್ಸಿನ ಆಶ್ರಯದಲ್ಲಿ ಆತ್ಮನಿಗೆ ಭಯಾದಿಗಳು ಉಂಟಾಗುತ್ತವೆಯೆಂದು ಹೇಳುವಲ್ಲಿ ತಪ್ಪಿಲ್ಲ, ಅವಾಸ್ತವವೇನಲ್ಲ.

ಜೀವನಕ್ಕೆ ಹಲವು ಮುಖಗಳು. ಬಗೆ ಬಗೆಯ ಸನ್ನಿವೇಶಗಳ ಪ್ರಭಾವ ಜೀವನದ ಮೇಲಾಗುತ್ತದೆ. ಎಲ್ಲದರ ಹಾಸುಹೊಕ್ಕಾಗಿದೆ ಜೀವನ. ವಿವಿಧವೂ ವಿಸ್ತಾರವೂ ಆಗಿದೆ ; ಅಂತೆಯೇ ಅನೇಕವೂ ಏಕವೂ ಆಗಿದೆ. ಜೀವನವು ಏನೆಲ್ಲವನ್ನೂ ಒಳಗೊಂಡಿದೆ ಆಕಾಶತತ್ವವೂ ಅದರ ಒಂದಂಗವಾಗಿರುವುದರಿಂದ ಜೀವನದಲ್ಲಿ ಎಲ್ಲಕ್ಕೂ ಅವಕಾಶವಿರುವುದೊಂದು ಅಚ್ಚರಿಯೇನಲ್ಲ.

ನಾದ ತೇಜ ರಸ ಈ ಮೂರು ಜೀವನದ ಮುಖ್ಯ ವಸ್ತುಗಳು. ಇವುಗಳಿಂದ ಜೀವನ ಇವೇ ಜೀವನದ ಸಾರ. ಈ ಮೂರನ್ನು ಆಕಾಶತತ್ವ ಒದಗಿಸುತ್ತದೆ. ಶರಣಾಂಗನು ಇವನ್ನು ಪರಿಗ್ರಹಿಸಿ ಪ್ರವೃದ್ಧಿಸುತ್ತಾನೆ. ಚಿನ್ನಾದ ಚಿತ್ಕಳೆ ಚಿದ್ಬಿಂದುಗಳನ್ನಾಗಿ ಏರ್ಪಡಿಸಿಕೊಳ್ಳುತ್ತಾನೆ. ಕ್ರಮವಾಗಿ ಅನುಭವ ಜ್ಞಾನಕ್ರಿಯೆಗಳನ್ನಾಗಿಸಿಕೊಳ್ಳುತ್ತಾನೆ. ಈ ತ್ರಿವೇಣಿ ಸಂಗಮವೇ ಶರಣಾಂಗನ ಸಂಜೀವನ. ಸ್ವಾನುಭವ ಸುಜ್ಞಾನ ಸತ್ಕ್ರಿಯೆಗಳಿಂದ ಶರಣ ಆದರ್ಶ ಜೀವಿಯಾಗುತ್ತಾನೆ. ಶಿವಾನುಭವದ ನಾದವಿಲ್ಲದೆ ಶಿವಜ್ಞಾನದ ತೇಜವಿಲ್ಲದೆ ಶಿವಕ್ರಿಯಾನಂದ ರಸವಿಲ್ಲದೆ ಶರಣ ಜೀವಿಸನು.

ಶರಣ ಬಯಲ ಬಾಳಿಗನಾದರೂ ಶೀಲಸಂಪಾದಕ. ಸತ್‌ಶೀಲ ಸಾಧನೆಯಲ್ಲಿ ಸತ್ಕ್ರಿಯಾಚರಣೆಯಲ್ಲಿ ಶರಣ ಸಂತತವಾಗಿ ಸಂತೋಷದಲ್ಲಿರುತ್ತಾನೆ. ನಾದ ತೇಜ ರಸಗಳ ಸ್ವರೂಪವಾದ ಅನುಭವ ಜ್ಞಾನ ಕ್ರಿಯೆಗಳ ಸಮರಸವನ್ನು ಸ್ವಾಯತಗೊಳಿಸಿಕೊಂಡಿರುತ್ತಾನೆ. ತ್ರಿವಿಧ ಶಕ್ತಿಶಾಲಿಯಾಗಿ ತೊಳಗುತ್ತಾನೆ. ಆಕಾಶದಂತೆ ವಿಕಾಸವಾಗಿ ವಿಶಾಲ ಮನೋಭಾವವನ್ನು ತಾಳುತ್ತಾನೆ, ನಿಸ್ವಾರ್ಥಿ

ಯಾಗಿ ನಿತ್ಯಸಮುಭಾವಿಯಾಗಿ ನಿಜ ಶಾಂತಿಯಲ್ಲಿರುತ್ತಾನೆ. ಸಮರಸ ಜೀವನಕ್ಕೆ ಹೊಂದಿಕೊಳ್ಳುತ್ತಾನೆ.

ನಿಜವಾದ ಶಿವಶರಣನ ಜೀವನಾಕಾರದಲ್ಲಿ ಶಿವಾನುಭವದ ನಾದ ಮೊಳಗುತ್ತಿರುತ್ತದೆ. ಶಿವಜ್ಞಾನದ ತೇಜ ತರಣಿಗಿಂತಲೂ ಮಿಗಿಲಾಗಿ ಬೆಳಗುತ್ತಿರುತ್ತದೆ. ಸತ್ಶೀಲ ಸತ್ಕ್ರಿಯೆಗಳ ರಸವಾಹಿನಿ ಅವ್ಯಾಹತವಾಗಿ ಪ್ರವಹಿಸುತ್ತಿರುತ್ತದೆ. ಅದರಿಂದಾಗಿ ಆತನ ಬಾಳು ಸತ್ಯವಾಗಿ ಶಿವವಾಗಿ ಸುಂದರವಾಗಿ ಶೋಭಿಸುತ್ತಿರುತ್ತದೆ ಶರಣನ ಬಾಳಿನಲ್ಲಿ ಚಲುವೂ ಒಲವೂ ಗೆಲವೂ ಒಗ್ಗೂಡಿರುತ್ತವೆ.

ಜೀವನ ವಿಕಾಸವಾದದ ಕೊನೆಯ ಹಂತ ಶರಣ ಸ್ಥಲ, ಭಕ್ತ ಬೀಜ ಮೊಳೆದು ಬೆಳೆದು ಶರಣ ಸ್ವರೂಪದಲ್ಲಿ ಹಣ್ಣಾಗುತ್ತದೆ : ಹೊಂಪುಳಿಗೊಂಡಿರುತ್ತದೆ.

ಮಾಹೇಶ್ವರಸ್ಥಲವೆಂಬ ಜಲದ ಸಂಪರ್ಕದಿಂದ ಭಕ್ತ ಬೀಜ ಮೊಳೆಯುತ್ತದೆ ಪ್ರಸಾದಿಸ್ಥಲದ ಪ್ರಭೆಯಿಂದ ಪ್ರಾಣಲಿಂಗಿ ಸ್ಥಲದ ಗಾಳಿಯಿಂದ ಬೆಳೆಯುತ್ತದೆ. ಪೊಗರೇರುತ್ತದೆ. ಶರಣ ಸ್ಥಲದಲ್ಲಿ ಹಬ್ಬಿ ಹರವಾಗುತ್ತದೆ. ಹೂವಾಗಿ ಹಣ್ಣಾಗುತ್ತದೆ ಹರುಷಗೂಡುತ್ತದೆ.

ಆನಂದಕ್ಕಾಗಿಯೇ ಜೀವನ, ಆನಂದವೇ ಜೀವನ· ಆನಂದವಿಲ್ಲದ ಜೀವನ ಮೃತ ಜೀವನ, ಆನಂದದ ಆರಾಧನೆಯೇ ಅತ್ಯಂತಿಕ ಆರಾಧನೆ. ಅದೇ ಆ ಪರಮನ ಆರಾಧನೆ. ಅಂತಹ ಆ ಆನಂದ ಅಳವಡಬೇಕಾದರೆ ಈ ಅಪರಾಪ್ರಕೃತಿಯಿಂದ ಪರಾ ಪ್ರಕೃತಿಗೇರಬೇಕು. ಆ ಪರಾ ಪ್ರಕೃತಿಗೆ ಶರಣಾಗಬೇಕು. ಅದು ತನ್ನಲ್ಲಿ ಅರಳಬೇಕು ; ನರುಗಂಪನ್ನು ಹರಡಬೇಕು. ಹಣ್ಣಾಗಿ ತನಿರಸದಿಂದ ತುಂಬಬೇಕು. ಕ್ರಿಯಾಜ್ಞಾನೇಚ್ಛಾದಿ ಶಕ್ತಿಗಳು ಮೈಗೂಡಿದ ಬಳಿಕ ಪರಾಶಕ್ತಿ ಅಥವಾ ಪರಾ ಪ್ರಕೃತಿ ಮೈಗೂಡುತ್ತದೆ. ಆಗ ಶರಣತ್ವ ಸಂಪ್ರಾಪ್ತವಾಗಿ ಸವೆಯದ ಸಂತಸವುಂಟಾಗುತ್ತದೆ,

ಭಕ್ತಿಯಿಂದ ಶಕ್ತಿ ಸಂಸ್ಕಾರವುಂಟಾಗುತ್ತದೆ : ಶಕ್ತಿ ಸಾಕ್ಷಾತ್ಕಾರವುಂಟಾಗುತ್ತದೆ. ಶ್ರದ್ಧಾಭಕ್ತಿಯಿಂದ ಕ್ರಿಯಾಶಕ್ತಿ, ನಿಷ್ಠಾಭಕ್ತಿಯಿಂದ, ಜ್ಞಾನಶಕ್ತಿ, ಅವಧಾನ ಭಕ್ತಿಯಿಂದ ಇಚ್ಛಾಶಕ್ತಿ, ಅನುಭವ ಭಕ್ತಿಯಿಂದ ಆದಿಶಕ್ತಿಗಳು ಅಳ

ವಡುವಂತೆ ಆನಂದ ಭಕ್ತಿಯಿಂದ ಪರಾಶಕ್ತಿ ಅಥವಾ ಪರಾಪ್ರಕೃತಿ ಅಳವಡುತ್ತದೆ. ಅದರಿಂದ ಆತ್ಮಪ್ರಗತಿಯಾಗುತ್ತದೆ : ಆತ್ಮಕಳೋನ್ನತಿಯುಂಟಾಗುತ್ತದೆ.

ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ ಸ್ಥಲಗಳ ಸಂಸ್ಕಾರಗಳಿಂದ ಕ್ರಮವಾಗಿ ಮೂಗು ನಾಲಗೆ ಕಣ್ಣು ತೊಗಲುಗಳು ಶುದ್ಧಿ ವೃದ್ಧಿಗಳನ್ನು ಪಡೆಯುವಂತೆ ಶರಣಸ್ಥಲದಿಂದ ಕಿವಿ ಶುದ್ಧಿಯಾಗುತ್ತದೆ; ವೃದ್ಧಿಯಾಗುತ್ತದೆ. ಅಂತೆಯೇ ಒಳಗೆ ವಿಶುದ್ಧಿ ಚಕ್ರ ಪ್ರಬುದ್ಧವಾಗುತ್ತದೆ, ಶಬ್ದಶುದ್ಧಿ ನಾದ ಸಿದ್ಧಿಗಳುಂಟಾಗುತ್ತವೆ. ಜ್ಞಾನ ಪರಿಪಕ್ವವಾಗಿ ಆನಂದರಸಭರಿತವಾಗುತ್ತದೆ. ಇದೇ ಅಂತರಂಗದ ಅಭಿವೃದ್ಧಿಯ ಕುರುಹು, ಅದರಿಂದ ಅನುಭಾವ ಸಾಹಿತ್ಯ ಸೃಷ್ಟಿಯಾಗುತ್ತದೆ. ಶಿವ ಸಾಹಿತ್ಯ ರೂಪಿತವಾಗುತ್ತದೆ. ಆಗ ಒಲಿಯೆ ಲಟ್ಟುಂಬುವುದರೊಡನೆ ತಲೆಯುಲಟ್ಟುಂಬ ಶೀಲ ಬೆಳೆದು ಬರುತ್ತದೆ. ತಲೆಯ ಲಟ್ಟುಂಬುವುದೇ ಶರಣ ಜೀವನ. ತಲೆಯಲಟ್ಟುಂಡು ಆನಂದಿಸುವುದೇ ಪರಮ ಪಾವನ; ಪೂರ್ಣ ಜೀವನ.

“ಜ್ಞಾನದೀಪ್ತಿಯು ಬೆಳಗುವ ತೈಲವಾವುದೆಂದಡೆ
ಶಿವಶರಣರ ನುಡಿಗಡಣದ ಒಸರು.
ಆ ಒಸರಿಂಗಲ್ಲದೆ ಜ್ಞಾನಪ್ರಕಾಶವಿಲ್ಲ.
ಅದು ತಾನೆಂಬ ನಿಶ್ಚಯವ ತೋರುವುದು;
ಹೀನ ಜಡತೆಯು ಮುಸುಕಿನ ಗ್ರಂಥಿಯನಳಿವುದು.
ಭಾನು ಬಂದಡೆ ಕತ್ತಲೆ ಹರಿವಂತೆ
ಬುಧರೊಳು ನೀನಿರಲು ಕರ್ಮಹರಿವುದು
ಕೂಡಲಚೆನ್ನಸಂಗಮ ದೇವಾ.”

“ಕೋಡುಗಲ್ಲಿನ ಮೇಲೆ ಮಾಡುವ ತಪವು
ಒಂದು ದಿನದ ಗುರುಸೇವೆಗೆ ಸರಿಯಲ್ಲ.
ಅನಂತಕಾಲ ಮಾಡುವ ಗುರುಸೇವೆಯು
ಒಂದು ದಿನದ ಲಿಂಗಪೂಜೆಗೆ ಸರಿಯಲ್ಲ,

ಅನಂತಕಾಲ ಮಾಡುವ ಲಿಂಗಪೂಜೆಯು
ಒಂದು ದಿನ ಬಡಿಸಿದ ಜಂಗಮ ತೃಪ್ತಿಗೆ ಸರಿಯಲ್ಲ.
ಅನಂತಕಾಲ ಬಡಿಸಿದ ಜಂಗಮತೃಪ್ತಿಯು
ಒಂದು ಕ್ಷಣದ ನಿಮ್ಮ ಶರಣರ ಅನುಭಾವಕ್ಕೆ
ಸರಿಯಲ್ಲ ಕಾಣಾ ಕೂಡಲಚನ್ನಸಂಗಮದೇವಾ."

ಎಂದು ಚಿನ್ಮಯ ಶರಣನಾದ ಚನ್ನಬಸವಣ್ಣನು ಶರಣಸ್ಥಲದಲ್ಲಿ ನಿರೂಪಿಸಿದ್ದಾನೆ. ಶಿವಶರಣನ ಜ್ಞಾನದೀಪ್ತಿಗೆ ಆತನ ಸ್ವಾನುಭವ ಸಾಹಿತ್ಯವೇ ತೈಲ. ಅದಿಲ್ಲದೆ ಅರಿವು ಬೆಳಗದು. ಶರಣ ವಾಙ್ಮಯದಿಂದ ಆತ್ಮಜ್ಞಾನವುಂಟಾಗಿ ಜಡತೆಯ ಮುಸುಕು ಜಾರುತ್ತದೆ. ಹೃದಯ ಗ್ರಂಥಿ ಒಡೆಯುತ್ತದೆ. ಕರ್ಮನಿರ್ಮೂಳವಾಗುತ್ತದೆ. ಶರಣನ ಅನುಭಾವಕ್ಕೆ ಸರಿಯಿಲ್ಲ. ಅದು ಅಮೃತಕ್ಕೆ ಅಮೃತ.

ಸಂಸಾರಕ್ಕೆ ಕಾರಣವಾದ ಅಜ್ಞಾನ ಅಸ್ವಾಭಾವಿಕ; ನೈಮಿತ್ತಿಕ. ಜ್ಞಾನ ಸ್ವಾಭಾವಿಕ; ಅಜ್ಞಾನ ಕಲ್ಪಿತ; ಆರೋಪಿತ. ಅಪೂರ್ಣದೃಷ್ಟಿ. ತಪ್ಪು ತಿಳಿವಳಿಕೆ.

ಸಂಸಾರವಾಗಲಿ. ಸಾಂಸಾರಿಕ ದುಃಖವಾಗಲಿ ವಾಸ್ತವಿಕಗಳಲ್ಲ. ಸ್ವಾಭಾವಿಕಗಳಲ್ಲ ಆತ್ಮನು ಸ್ವಾಭಾವಿಕವಾಗಿ ಆನಂದ ಸ್ವರೂಪನಾಗಿರುತ್ತಾನೆ. ಸಾಂಸಾರಿಕ ದುಃಖಕ್ಕೆ ಕಾರಣವಾದ ಅಜ್ಞಾನ ಅಂಧಕಾರದಂತಿರುತ್ತದೆ. ನಿದ್ದೆಯಂತೆ ಜಡವಾಗಿರುತ್ತದೆ. ಅಸ್ವಾಭಾವಿಕವಾದ್ದರಿಂದ ಅದನ್ನು ತೊಲಗಿಸಲು ಸಾಧ್ಯ. ಅದರಿಂದ ಉಂಟಾಗುವ ನೋವನ್ನು ನಿವಾರಿಸಲು ಸಾಧ್ಯ. ಆತ್ಮಜ್ಞಾನದ ಉದಯವಾದರೆ ಅಜ್ಞಾನಾದಿಗಳು ತಮ್ಮಿಂದ ತಾವೇ ತೊಲಗುತ್ತವೆ. ಆಕಾಶವು ಮೋಡಗಳಿಂದ ಮುಸುಕದಂತಿರುವಂತೆ ಆತ್ಮಜ್ಞಾನಿಯಾದ ಶರಣನಿಗೆ ಅಜ್ಞಾನಾದಿಗಳು ಆವರಿಸದಂತಿರುತ್ತವೆ.

ಅಜ್ಞಾನ ಜನ್ಯ ಸಂಸಾರ ದುಃಖಕಾರಣ. ಅದೇ ಜ್ಞಾನ ಜನ್ಯ ಸಂಸಾರ ಸುಖಸಾಧನ. ಶಿವ ಸಂಸಾರದಿಂದ ಸದ್ಗತಿಯಾಗುತ್ತದೆ. ಶೈವೀ ಸಂಸಾರವನ್ನು ಸಂಪಾದಿಸುವುದೇ ಶರಣನ ಧ್ಯೇಯ. ಅದೇ ಬಯಲ ಬದುಕು; ಭಾಳು,

ಶರಣನ ಜ್ಞಾನ ಆತ್ಮಜ್ಞಾನ; ಶರಣನ ಆನಂದ ಆತ್ಮಾನಂದ. ಶರಣನ ಸಂಸಾರ ಶೈವೀ ಸಂಸಾರ. ಇವೆಲ್ಲವೂ ಆತನಿಗೆ ಸ್ವತಃ ಸಿದ್ಧವಾದವು; ಸ್ವಾನುಭವೈಕ ಸಿದ್ಧವಾದವು.

ಚಿದಾಕಾಶವೇ ಶರಣ, ಚಿತ್ರಕಾಶವೇ ಪ್ರಸಾದಲಿಂಗ. ಇಡಾ ಪಿಂಗಳ ಸುಷುಮ್ನೆಗಳೇ ಚಿದಾಕಾಶ ಸ್ವರೂಪ ಶರಣನಲ್ಲಿ ತೊಳಗುವ ಶಶಿ-ರವಿ-ಆತ್ಮರುಗಳು, ಇದರಿಂದಾಗಿ ಈ ಶರಣಸ್ಥಲ ಬಾಳಿಗೆ ಬೆಳುದಿಂಗಳು-ಬೆಳಗುಗಳನ್ನು ಕೊಡುತ್ತದೆ; ಮತ್ತು ಹೊಳಪು-ಸುಳುಹುಗಳನ್ನು ಕೊಡುತ್ತದೆ.

"ಆ ಚಿಚ್ಛಕ್ತಿಯಿಂದ ಪರಾಶಕ್ತಿ ಉದಯವಾಗಿ
ಆ ಪರಾಶಕ್ತಿಯ ಸಂಗದಿಂದ ನೀನು ಪ್ರಸಾದಲಿಂಗವಾದಲ್ಲಿ,
ಆ ಶಾಂತ್ಯತೀತ ಎಂಬ ಕಲೆಯಲ್ಲಿ ನಾನು ಉದಯವಾಗಿ
ಪ್ರಸಾದಲಿಂಗಕ್ಕಾಶ್ರಯವಾಗಿ ಶರಣನಾಗಿಪ್ಪುದ ನೀ ಬಲ್ಲೆಯಲ್ಲದೆ
ಮತ್ತಾರು ಬಲ್ಲರು ಹೇಳಾ ?..."

ಎಂದು ತೋಂಟದ ಸಿದ್ಧಲಿಂಗೇಶ್ವರರು ನಿರೂಪಿಸಿದ್ದಾರೆ, 'ಆತ್ಮರೂಪಮಾದ ಶಿವನು ಆಕಾಶರೂಪಮಾದ ಶರಣ ಮಹಾದೇವಿಯುಂ ಕೂಡಿಹನು. ಆತ್ಮನೇ ವಿವೇಕವೆಂದು ತಿಳಿವುದು. ವಿವೇಕವೇ ಸತ್ಯ ಜ್ಞಾನಾನಂದ ಸ್ವರೂಪು.... ವಿವೇಕವೇ ಮುಕ್ತಿಯು. ಆ ಮುಕ್ತಿಯೇ ಶಿವನು. ಅಂತಪ್ಪ ವಿವೇಕವೇ ಮಹಾಲಿಂಗವು ಅಂತಪ್ಪ ವಿವೇಕವಿರ್ದಲ್ಲಿ ಪಾಪಂಗಳು ಹೊಂದದೇ ಇಹವು. ಅದು ಕಾರಣ, ತಾನು ತಾನಾಗಿರ್ಪ ನಿಜಾನಂದ ಸುಖದೊಳೋಲಾಡುತ್ತಿರ್ಪಂತೆ ಮಾಡಾ ಮಹಾಘನ ದೊಡ್ಡ ದೇಶಿಕಾರ್ಯ ಪ್ರಭುವೇ.''

ನಿಜಶರಣನನ್ನು ಕಾಣುವುದು ಕರಕಷ್ಟ. ಶರಣ ಶಿವನ ಚಿದಾಭರಣ. ಆಭರಣ ಒಳಗಿರುವುದಲ್ಲದೆ ಹೊರಗಿರದು. ಶಿವನನ್ನು ಕಾಣಬಹುದು; ಶರಣನನ್ನು ಕಾಣಲಾಸಲ್ಲ. ಶಾಂತ್ಯತೀತ ಕಲೆಯಲ್ಲಿ ಉದಯವಾದ ಶರಣ ಅತ್ಯಂತ ಸೂಕ್ಷ್ಮ; ತುರೀಯಾತೀತ. ತಾನೆ ತಾನಾದಾತ. ಸರ್ವವನ್ನು ಸಾಧಿಸಿದಾತ;

"ಅಂಗದ ಕಳವಳ, ಮನದ ಸಂಚಲ, ಭಾವದ ಭ್ರಾಂತು,
ಅರಿವಿನ ಮರಹು, ಭಕ್ತಿಯ ಭಿನ್ನಜ್ಞಾನದ ಕಳಂಕು,
ಪ್ರಾಣನ ಪ್ರಕೃತಿ, ಸ್ಥಾನ-ಮಾನವೆಂಬ ಲಕ್ಷಣ,
ಇಹ ಪರಂಗಳ ತೃಷ್ಣೆ, ಭವರೋಗಂಗಳ ಬಂಧ,

ಇಂದ್ರಿಯಂಗಳಿಚ್ಛೆ, ತಾಪತ್ರಯಂಗಳ ಸುಖದುಃಖ,
ಮಲತ್ರಯಂಗಳಾಸೆ. ಪಂಚಮಲಂಗಳ ಸಂಚಲ,
ಅಷ್ಟಮದಂಗಳ ಘಟ್ಟಿ, ಷಡೂರ್ಮಿಗಳ ವಿಕಾರ,
ಇಂತಪ್ಪ ಅಖಿಲದೊಳು ಸಿಲುಕದ ಅಕಳಂಕರಪ್ಪ
ಸಮ್ಯಕ್ ಜ್ಞಾನ ಸಹಜ ಸಮಾಧಾನ ಯೋಗದೊಳಗಿರ್ಪ
ಮಹಾಶರಣರ ತೋರಿಸಿ ಬದುಕಿಸಾ !
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಧರ್ಮ ನಿಮ್ಮ ಧರ್ಮ !”

ಸಹಜ ಸಮಾಧಾನವೇ ಬಯಲ ಬದುಕು. ಅದುವೇ ಮಹಾಯೋಗ. ಅದು ಸಮ್ಯಕ್ ಜ್ಞಾನದಿಂದ ಸಮನಿಸುತ್ತದೆ. ಸಮ್ಯಕ್ ಜ್ಞಾನ ಶುಭ್ರನಾದ ಶರಣನಿಗೆ ಸಂಭವಿಸುತ್ತದೆ. ಶರಣನಿಗೆ ಶುಭ್ರತೆ-ಸಂಪ್ರಾಪ್ತವಾಗಬೇಕಾದರೆ ಮೇಲೆ ಹೇಳಿದ ಅಂಗದ ಕಳವಳವಿಡಿದು ಷಡೂರ್ಮಿ ವಿಕಾರದವರೆಗಿರುವ ಹದಿನೈಯ್ದು ಕಳಂಕಗಳನ್ನು ತೊಳೆದುಕೊಂಡಿರಬೇಕು. ಆಗ ಸಮ್ಯಕ್ ಜ್ಞಾನ ಸಹಜ ಸಮಾಧಾನಯೋಗ ಸ್ವರೂಪವಾದ ಬಯಲ ಬದುಕು ಬೆಸುಗೆಯಾಗುತ್ತದೆ: ಬಯಲ ಬೋನದ ಆರೋಗಣೆ ಅಳವಡುತ್ತದೆ. ಬಯಲ ಗಳಿಕೆ ಬೊಗಸೆ ತುಂಬುತ್ತದೆ; ಒಡಲ ತುಂಬುತ್ತದೆ. ತಲೆಯ ತಾವರೆ ತುಂಬುತ್ತದೆ.

ಬಯಲ ಬದುಕು ಶೂನ್ಯಸಂಪತ್ತು; ಅಂದರೆ ಪೂರ್ಣ ಸಂಪತ್ತು ಅದನ್ನು ಗಳಿಸುವುದೆ ಶೂನ್ಯ ಸಂಪಾದನೆ; ಅಥವಾ ಬಯಲ ಬದುಕಿನ ಗಳಿಕೆ. ಅಂದರೆ ಈ ಚೂರ್ಣ ಬದುಕಿನಿಂದ ಪೂರ್ಣ ಬದುಕಿಗೆ ಹೋಗಿ ಸೇರುವಿಕೆ. ಸೇರಿದ ಶರಣನಲ್ಲಿ ಬೆಳ್ಪುನುಡಿ, ಒಳ್ಪು ನಡೆಗಳು ಶಶಿ-ರವಿಗಳಂತೆ ತೊಳಗಿ ಬೆಳಗುತ್ತವೆ ಸದ್ವೃತ್ತಿಗಳೆಂಬ ತರುಲತೆಗಳು ಬೇರ್ವರಿಯುತ್ತವೆ. ಬೇಸರ-ಬೇವಸಗಳು ಬೇರಿಲ್ಲದಂತಾಗುತ್ತವೆ. ಬೇಸರಂಜಿಕೆ ಹೇಳ ಹೆಸರಿಲ್ಲದಾಗುತ್ತದೆ. ಬಯಲ ಬದುಕಿನ ಬೆಡಗು ಕಣ್ಮನಗಳನ್ನು ಬೆರಗುಗೊಳಿಸುತ್ತದೆ. ಬಯಲ ಬಿಣ್ಣಾಣ ಬಗೆದುಂಬಿ ಬುಗ್ಗೆಯಾಗಿ ಚಿಲುಮೆಯಂತೆ ಚಿಮ್ಮಿ ಹೊಮ್ಮಿ ವೈಖರಿಯಾಗಿ ಹೊರಸೂಸುತ್ತದೆ. ಆ ಪೂರ್ಣ ವಿಜ್ಞಾನದಲ್ಲಿ ಮನಬುದ್ಧಿ ಅಹಂಕಾರಗಳು ಪರಿಣಾಮಗೊಳ್ಳುತ್ತವೆ. ಆಗ ಶರಣನೆನಿಸುತ್ತಾನೆ.

"ನೀರ ನಡುವೆ ಒಂದು ಗಿಡ ಹುಟ್ಟಿತ್ತು.
ಆ ಗಿಡದ ಎಲೆಯ ಮೇಲೆ ಬಂದಿತ್ತೊಂದು ಕೋಡಗ.
ಆ ಕೋಡಗದ ಕೊಂಬಿನಲ್ಲಿ ಮೂಡಿತದ್ಭುತ.
ಆ ಅದ್ಭುತವಳಿದಲ್ಲದೆ ಶರಣನಾಗಬಾರದು-ಗುಹೇಶ್ವರಾ !"

ರಸರೂಪಾದ ಶುಕ್ಲದಲ್ಲಿ ತನುವೆಂಬ ಗಿಡ ಹುಟ್ಟುವುದು. ಇಂದ್ರಿಯಗಳೆಂಬ ರೆಂಬೆಗಳಲ್ಲಿ ವಿಷಯಗಳೆಂಬ ಎಲೆಗಳು ಮೂಡುವವು. ಅವುಗಳ ಮೇಲೆ ಮನವೆಂಬ ಮಂಗ ಬರುವುದು. ಮಂಗನಿಗೆ ಅಹಂಕಾರವೆಂಬ ಕೊಂಬು ಮೂಡುವುದು. ಅಹಂಕಾರವೇ ಅದ್ಭುತ. ಅದನ್ನು ಅಳಿದವನೇ ಶರಣ.

ಆಕಾಶ ತತ್ತ್ವ-ಆಕಾಶಾಂಗ

ಆಕಾಶ ಅಣುಜನ್ಯವಲ್ಲ; ಆತ್ಮಜನ್ಯ. 'ಆತ್ಮನ ಆಕಾಶಃ ಸಂಭೂತಃ ಎಂದಿದೆ ಶ್ರುತಿ. ಜನ್ಯವಾಗಿ ದ್ರವ್ಯವೆನಿಸಿದೆ; ಗುಣ ಕ್ರಿಯೆ ನಾಮಗಳಿಂದ ಕೂಡಿದೆ. 'ಸತ್ವಬಹುಲಮಾಕಾಶಂ' ಎಂದು ಸುಶ್ರುತ ಸಾರಿದೆ ಸತ್ವಗುಣ ಪ್ರಧಾನವಾದುದು ಆಕಾಶ. ಪ್ರಕಾಶಮಯವಾದುದು ಆಕಾಶ.

"ನಾಭ್ಯಾ ಆಸೀದಂತರಿಕ್ಷಂ । ಶೀರ್ಷ್ಣೋ ದ್ಯೌ ಸಮವರ್ತತ" ಎಂದು ಪುರುಷಸೂಕ್ತ ಪ್ರತಿಪಾದಿಸಿದೆ. ಪರಮಾತ್ಮನ ನಾಭಿಯಿಂದ ಅಂತರಿಕ್ಷವೂ ಶೀರ್ಷದಿಂದ ಸ್ವರ್ಗಾಕಾಶಗಳು ಜನಿಸಿದವೆಂದು ಹೇಳಿದೆ "ಶಬ್ದ ಗುಣಕಮಾಕಾಶಂ । ತಚ್ಚೈಕಂ ವಿಭು ನಿತ್ಯಂ ಚ ।"

ಆಕಾಶಕ್ಕೆ ಸತ್ವಗುಣ, ಶಬ್ದ ಗುಣಕ್ರಿಯೆ. ಆಕಾಶ ಒಂದೇ ಆಗಿದ್ದು ಅಭಿನ್ನವಾಗಿದೆ. ವ್ಯಾಪಕವಾಗಿದೆ. ಅವಿನಾಶಿಯಾಗಿದೆ. ಆತ್ಮನಂತೆ ಅದಕ್ಕೂ ಸ್ವಾತಂತ್ರ್ಯವಿದೆ. ಘಟಾಕಾಶ ಮಠಾಕಾಶ ಎಂದು ಮುಂತಾಗಿ ವ್ಯವಹರಿಸುವುದರಿಂದ ಭೇದ ಪ್ರತೀತಿಯಾದರೂ ವಾಸ್ತವವಾಗಿ ಆಕಾಶಕ್ಕೆ ಭೇದವಿಲ್ಲ. ಘಟ ಮಠಗಳು ಆಕಾಶ ತತ್ವಕ್ಕೆ ವೇಷಗಳು. ಒಬ್ಬನೇ ವೇಷಗಳನ್ನು ಬದಲಾಯಿಸಿದಂತೆ ! ಘಟ ಮಠಗಳು ಭಿನ್ನವಾಗಿರುವವಲ್ಲದೆ ಆಕಾಶ ಭಿನ್ನವಾಗಿರುವುದಿಲ್ಲ. ಆದ್ದರಿಂದ ಅದು ಏಕ, ಆದು ವಿಭು. ಅದಕ್ಕೆ ಎಲ್ಲೆಲ್ಲಿಯೂ ಅವಕಾಶವಿದೆ. ಅದರಲ್ಲಿ ಎಲ್ಲಕ್ಕೂ ಅವಕಾಶವಿದೆ. ಅದು ವಾಯು ತೇಜ ಜಲ ನೆಲಗಳನ್ನು ಪ್ರಕಾಶಿಸುತ್ತದೆ. ಅದರಿಂದ ಅಂದರೆ ಅವಕಾಶ-ಪ್ರಕಾಶ ಕ್ರಿಯೆಗಳಿಂದ ಆಕಾಶವೆಂಬ ಹೆಸರುಳ್ಳುದಾಗಿದೆ.

ಭೂತಾಕಾಶ ಸಮಷ್ಟಿ ತತ್ವ. ಯೋಗಾಂಗ ವ್ಯಷ್ಟಿ ಆಕಾಶಾಂಗ. ತ್ರಿವಿಧಾಂಗಗಳಲ್ಲಿ ಆಕಾಶವಿರುವದಾದರೂ ಯೋಗಾಂಗದಲ್ಲಿ ಮುಖ್ಯವಾಗಿರುತ್ತದೆ. 'ಯತ್ರ ಪಂಚ ಭೌತಿಕ ದೇಹ ಸ್ತತ್ರಾವಕಾಶದಾಯಕ ಆಕಾಶಮಿತಿ' ಎಂದು ನಿರೂಪಿಸುವುದುಂಟು. ಅಂಗ ಇರುವಲ್ಲಿ ಆಕಾಶವಿದೆ; ಇರಲು ಅವಕಾವಿದೆ. ಆಕಾಶ ತತ್ವವನ್ನು ಅಂಗದಲ್ಲಿ ಸಂಯಮನ ಮಾಡಿದರೆ ಜಡ ಭಾವ ನೀಗುತ್ತದೆ. ದೇಹದಲ್ಲಿರುವ ನೇರವಾದ ಆಕಾಶಾಂಗಗಳಿವು :

"ಶಬ್ದಃ ಶಬ್ದೇಂದ್ರಿಯಂ ಸರ್ವಛಿದ್ರ ಸಮೂಹೋ ವಿವಕ್ತತಾ ಚ"
—ಸುಶ್ರುತ

ಶಬ್ದ, ಶಬ್ದವನ್ನು ಗ್ರಹಿಸುವ ಶ್ರೋತ್ರೇಂದ್ರಿಯ ಮತ್ತು ಶಬ್ದವನ್ನು ಉಚ್ಚರಿಸುವ ವಾಗಿಂದ್ರಿಯ, ಶರೀರದಲ್ಲಿರುವ ಸರ್ವ ರಂಧ್ರಗಳು, ರಹಸ್ಯ ಸ್ಥಾನಗಳು ಆಕಾಶ ಜನ್ಯ ಕಾರ್ಯಗಳು. ಇವು ವ್ಯಷ್ಟಿ ಆಕಾಶಾಂಗ. ವಿಶುದ್ಧಿ ಚಕ್ರವೂ ಆಕಾಶಾಂಗ. ಇವು ಮಾನವ ಶರೀರದೊಳಗಿನ ಆಕಾಶಾಂಗಗಳು.

"ಕಾಯಾಕಾಶಯೋಃ ಸಂಬಂಧ ಸಂಯಮಾಲ್ಲಘು ತೂಲ ಸಮಾ
ಪತ್ತೇಶ್ಚಾಕಾಶ ಗಮನಂ"

ಎಂದು ಪತಂಜಲಿಯ ಅಭಿಪ್ರಾಯ. ದೇಹದೊಳಗಿನ ಜಡತ್ವವನ್ನು ನೀಗಲು ಇದೊಂದು ಯೋಗ ಸಾಧನ. ಕಾಯಾಕಾಶಗಳ ಸಂಬಂಧ ಸಂಯಮವೂ ಒಂದು ಯೋಗ ಇದರಿಂದ ಕಾಯ ಹಗುರಾಗುತ್ತದೆ–ಅರಳೆಯಂತೆ! ಆಕಾಶ ಗಮನ ಸಿದ್ಧಿಸುತ್ತವೆ ಹಕ್ಕಿಯಂತೆ! ಈ ಸಂಯಮದಿಂದ ಸ್ಥೂಲಭಾವ ತೊಲಗಿ ಸೂಕ್ಷ್ಮಭಾವ ಸಮನಿಸುತ್ತದೆ.

ಆಕಾಶ ತತ್ವ ಆತ್ಮ ದೃಷ್ಟಿಯಿಂದ ಸ್ಥೂಲ. ಪೃಥಿವ್ಯಾದಿಗಳ ದೃಷ್ಟಿಯಿಂದ ಸೂಕ್ಷ್ಮ. ಇದು ಆತ್ಮಜನ್ಯವಾದ್ದರಿಂದ ಇದರಲ್ಲಿ ಆತ್ಮ ಗುಣಧರ್ಮಗಳಿರುತ್ತವೆ, ಶಬ್ದ ಮಾತ್ರ ಇದರದೇ ಆದ ಗುಣಧರ್ಮವಾಗಿದೆ. ಏಕತ್ವ ವಿಭುತ್ತ ನಿತ್ಯತ್ವಗಳು ಆತ್ಮಧರ್ಮಗಳಾಗಿವೆ. ಕಾರಣ ಆಕಾಶಗತ ಭೂತ ಭಾವವನ್ನು ಸಂಯಮನ ಮಾಡಿ ಆತ್ಮ ಭಾವವನ್ನು ಬೆಳಸಿಕೊಳ್ಳಬೇಕು.

"ಅಸ್ಯ ಲೋಕಸ್ಯ ಕಾಗತಿರಿತಿ,
ಆಕಾಶ ಇತಿ ಹೋವಾಚ, ಸರ್ವಾಣಿ ಹ ವಾ ಇಮಾನಿ
ಭೂತಾನಿ ಆಕಾಶಾದೇವ ಸಮುತ್ಪದ್ಯಂತ-
ಆಕಾಶಂ ಪ್ರತ್ಯಸ್ತಂ ಯಂತಿ, ಆಕಾಶೋ ಹ್ಯೇವೇಭ್ಯೋ
ಜ್ಯಾಯಾನ್, ಆಕಾಶಃ ಪರಾಯಣಮ್ ।"

—ಛಾಂದೋಗ್ಯ ೧.೯.೧

ಈ ಜಗತ್ತಿಗೆ ಗತಿ ಯಾವುದು ? ಆಕಾಶ. ಏಕೆಂದರೆ, ಎಲ್ಲ ಪ್ರಾಣಿಗಳೂ ಆಕಾಶದಿಂದಲೇ ಹುಟ್ಟುತ್ತವೆ; ಆಕಾಶದಲ್ಲಿಯೇ ಅಡಗುತ್ತವೆ. ಉಳಿದ ಭೂತಗಳಿಗಿಂತ ಪ್ರಾಣಿಗಳಿಗಿಂತ ಆಕಾಶವೇ ಅತ್ಯಧಿಕವಾಗಿದೆ; ಅತ್ಯುತ್ತಮ ಆಯತನವಾಗಿದೆ.

ಆಕಾಶದಲ್ಲಿ ಈ ಅಸಾಧಾರಣ ಗುಣಧರ್ಮವಿರುವುದರಿಂದ ಆಕಾಶ ಭೂತವೂ ಅಹುದು, ಬ್ರಹ್ಮವೂ ಅಹುದು, ಭೂತಾಕಾಶ-ಬ್ರಹ್ಮಾಕಾಶಗಳೆಂದು ವಿಂಗಡಿಸುವುದುಂಟು. ಇದು ವಾಸ್ತವವಲ್ಲ. ವಿಂಗಡಿಸಲು ಬಾರದ ದ್ವೈತಪ ವಸ್ತುಗಳವು. ಏಕೆಂದರೆ, "ಆಕಾಶಸ್ತಲ್ಲಿಂಗಾತ್" ಎಂದು ಬ್ರಹ್ಮಸೂತ್ರ ಬಿತ್ತರಿಸಿದೆ. ಆಕಾಶವೂ ಬ್ರಹ್ಮವೆ! ಏಕೆಂದರೆ, ಆಕಾಶದಲ್ಲಿ ಆ ಪರಬ್ರಹ್ಮದ ಕುರುಹುಗಳಿವೆ. ಏಕತ್ವ ವಿಭುತ್ವ ನಿತ್ಯತ್ವಗಳು ಬ್ರಹ್ಮವಸ್ತುವಿನ ಕುರುಹುಗಳು. ಇದಲ್ಲದೆ ನಾಮರೂಪಗಳನ್ನು ವಿಂಗಡಿಸುತ್ತದೆ. "ಆಕಾಶೋ ವೈ ನಾಮ ನಾಮರೂಪಯೋರ್ನಿರ್ವಹಿತಾ ತೇ ಯದಂತರಾ ತದ್ಬ್ರಹ್ಮ !" ಎಂದು ಅದೇ ಛಾಂದೋಗ್ಯಶ್ರುತಿ ಪ್ರತಿಪಾದಿಸಿದೆ. ನಾಮರೂಪಗಳನ್ನು ನಿರ್ವಹಿಸುವುದು ಆಕಾಶ. ನಾಮ ರೂಪಗಳು ನೆಲಸಿರುವುದು ಬ್ರಹ್ಮ.

ಗಾಳಿ ಮೊದಲಾದವುಗಳು ಲೋಕಾಧಿಲೋಕಗಳು ಅದರಲ್ಲಿ ಇರುವುದರಿಂದ ಅದು ಹಿರಿದಾಗಿದೆ. ಅದು ಪರಮ ವ್ಯೋಮವೆನಿಸಿದೆ ಪ್ರಣವ ಸ್ವರೂಪವೆನಿಸಿದೆ. "ಓಂ ಖಂ ಬ್ರಹ್ಮ, ಖಂ ಪುರಾಣಮ್" ಅಲ್ಲದೆ ಅನಂತವೂ ಚಿರಂತನವೂ ಆಗಿದೆ. ಅದು ಎಲ್ಲಕ್ಕೂ ಎಲ್ಲರಿಗೂ ಆಶ್ರಯವಾಗಿದೆ. "ಋಚೋ ಅಕ್ಷರೇ ಪರಮೇ ವ್ಯೋಮನ್ ಯಸ್ಮಿನ್ ದೇವಾ ಅಧಿ ವಿಶ್ವೇ ನಿಷೇದುಃ ॥" ಎಂದು ಋಗ್ವೇದ ನಿರೂಪಿಸಿದೆ. ಅವಿನಾಶಿಯಾದ ಆ ಪರಮ ವ್ಯೋಮದಲ್ಲಿ ಎಲ್ಲ ಋಕ್ಕುಗಳು ಎಲ್ಲ ದೇವತೆಗಳು ನೆಲಸಿವೆ. ಇದಲ್ಲದೆ, "ಸೈಷಾ ಭಾರ್ಗವೀ ವಾರುಣೀ ವಿದ್ಯಾ ಪರಮೇವ್ಯೋಮನ್ ಪ್ರತಿಷ್ಠಿತಾ ॥" ಎಂದು ತೈತ್ತಿರೀಯ ಶ್ರುತಿಯೂ ಹೇಳಿದೆ ಭಾರ್ಗವೀ ಮತ್ತು ವಾರುಣೀ ವಿದ್ಯೆಗಳು ಅದರಲ್ಲಿ ಪ್ರತಿಷ್ಠಿತವಾಗಿವೆ. ಇದರಿಂದಾಗಿ ಅದು ಎಲ್ಲಕ್ಕೂ ಹೆಚ್ಚಿನದು. "ಜ್ಯಾಯಾನ್ ಪೃಥಿವ್ಯಾ ಜಾಯಾನ್ ಅಂತರಿಕ್ಷಾದ್, ಜ್ಯಾಯಾನ್ ದಿವೋ ಜ್ಯಾಯಾನ್ ಏಭ್ಯೋ ಲೋಕೇಭ್ಯಃ ।" ಅದು ನೆಲ

ಜಲಗಳಿಗಿಂತ ದೊಡ್ಡದು; ಅಂತರಿಕ್ಷ-ದ್ಯುಲೋಕಗಳಿಗಿಂತ ದೊಡ್ಡದು ಮತ್ತು ಈ ಎಲ್ಲ ಲೋಕಗಳಿಗಿಂತ ದೊಡ್ಡದು.

ಅವಕಾಶ ಸ್ವರೂಪ ಆಕಾಶ ಅಂಗದಲ್ಲಿ ಇಲ್ಲದಿದ್ದರೆ ಉಸಿರಾಡಲು ಸಾಧ್ಯವಿಲ್ಲ ಅಂತೆಯೇ ಸಮಷ್ಟಿ ಸೃಷ್ಟಿಯಲ್ಲಿಯೂ ಗಾಳಿ ಬೀಸುತ್ತಿರಲಿಲ್ಲ. ನಾದದಂತೆ ಪ್ರಾಣ ಪ್ರತಿಷ್ಠಿತವಾಗಿದೆ ಆಕಾಶದಲ್ಲಿ.

ಭೂತಾಕಾಶ ಜನ್ಯ ಶಬ್ದ ಲೌಕಿಕ; ಬ್ರಹ್ಮಾಕಾಶ ಜನ್ಯ ನಾದ ಅಲೌಕಿಕ. ಆ ಅಲೌಕಿಕ ಶಬ್ದಬ್ರಹ್ಮೋಪಾಸಕ ಶಿವಶರಣ. ಆ ಅಲೌಕಿಕ ಶಬ್ದಬ್ರಹ್ಮವೇ ಪ್ರಸಾದ ಲಿಂಗ. ಅದರ ಉಪಾಸನೆಯಿಂದ ಪರಾಶಕ್ತಿ, ಪರಮಾನಂದ ಭಕ್ತಿ ಸಮನಿಸುತ್ತವೆ.

ಆಕಾಶ ಬ್ರಹ್ಮವಲ್ಲ, ಆಕಾಶ ಶಬ್ಧವು ಬ್ರಹ್ಮವಾಚಿ; ಎಂದು ಭಾಷ್ಯಕಾರರು ಬಿತ್ತರಿಸಿರುವರು. ಆದರೆ ಶರಣನು ತನ್ನ ಸ್ವಸಾಮರ್ಥ್ಯದಿಂದ ಆಕಾಶವನ್ನೇ ಆ ಪರಬ್ರಹ್ಮವನ್ನಾಗಿಸುತ್ತಾನೆ. ಆತನ ಅಷ್ಟತನುಗಳಲ್ಲಿ ಒಂದಾಗಿದೆ ಭೂತಾಕಾಶ, ಇದನ್ನೇ ಮುಂದುವರಿಸಿ ತನುತ್ವದಿಂದ ತತ್ತ್ವಭಾವಕ್ಕ ತರುತ್ತಾನೆ ಶಿವಶರಣ. ಶರಣನ ವೈಶಿಷ್ಟ್ಯ ಈ ಒಂದು ಮಣಿಹದಲ್ಲಿದೆ; ಈ ಒಂದು ಮಹಾಕ್ರಿಯೆಯಲ್ಲಿದೆ.

ಜಗದುತ್ಪತ್ತಿಗೆ ಮೂಲಕಾರಣನು ಸದಾಶಿವನು. ಚಿನ್ನಾದ ಚಿದ್ಬಿಂದು ಚಿತ್ಕಳೆ ಮತ್ತು ಮೂಲಚಿತ್ ಈ ನಾಲ್ಕು ಸೇರಿ ಗಟ್ಟಿಗೊಳ್ಳುತ್ತವೆ, ಅಖಂಡ ಗೋಳಕಾಕಾರವಾಗುತ್ತವೆ. ಆ ಅಖಂಡಗೋಳಕಾಕಾರದಿಂದ ತೇಜೋಮೂರ್ತಿಯಾದ ಮಹಾಲಿಂಗವಾಗುತ್ತದೆ. ಆ ಮಹಾಲಿಂಗದಿಂದ ಅಯ್ದು ಮುಖಗಳುಳ್ಳ ಸದಾಶಿವನು ಉದಯಿಸುವನು. ಆ ಸದಾಶಿವನ ಈಶಾನ ಮುಖದಲ್ಲಿ ಆಕಾಶ ಉದಯಿಸುವುದು; ಸರ್ವಕ್ಕೂ ಅವಕಾಶವನ್ನುಂಟುಮಾಡುವುದು, "ಕಂ ಬ್ರಹ್ಮ, ಖಂ ಬ್ರಹ್ಮ" ಎಂದು ಛಾಂದೋಗ್ಯ ಶ್ರುತಿ ಸಾರಿದೆ.

ಸರ್ವವೆಂದರೆ : ಹದಿನಾಲ್ಕು ಲೋಕಗಳು, ಸಪ್ತ ಸಮುದ್ರಗಳು, ಸಪ್ತ ದ್ವೀಪಗಳು, ಸಪ್ತ ಕುಲಪರ್ವತಗಳು, ನವಗ್ರಹಗಳು, ಹನ್ನೆರಡು ರಾಶಿಗಳು, ಇಪ್ಪತ್ತೇಳು ನಕ್ಷತ್ರಗಳು, ಮತ್ತು ಅರವತ್ತಾರು ಕೋಟಿ ಉಳಿದ ನಕ್ಷತ್ರಗಳು, ಚಂದ್ರ ಸೂರ್ಯರು ಇವೆಲ್ಲವೂ ಆಕಾಶದಲ್ಲಿ ಅಡಕವಾಗಿವೆ. ಈ ಸಮಷ್ಟಿ ಆಕಾಶ

ತತ್ತ್ವವೆ ವ್ಯಷ್ಟಿಯಾದ ಶರಣನಲ್ಲಿ ವಿಶುದ್ಧಿ, ಶ್ರೋತ್ರ, ವಾಗ್ರೂಪ ಆಕಾಶಾಂಗವಾಗಿದೆ.

ಶಿವ ಸಾದಾಖ್ಯವೇ ಪ್ರಸಾದಲಿಂಗ. ಅದು ಪ್ರಕಾಶ ಸ್ವರೂಪ, ಅ ಪ್ರಸಾದಲಿಂಗ ಪ್ರಕಾಶವೇ ಈಶಾನ್ಯ ಮುಖ. ಈಶಾನ್ಯ ಮುಖದಿಂದ ಯಕಾರ ಪ್ರಣವದ ಉದಯ. ಯಕಾರ ಪ್ರಣವದಿಂದ ಶಾಂತ್ಯತೀತಕಲೆ ತಲೆದೋರುವುದು. ಶಾಂತ್ಯತೀತಕಲೆಯಿಂದ ಪರಾಶಕ್ತಿ, ಪರಾಶಕ್ತಿಯಿಂದ ಜ್ಞಾನಕರಣ, ಜ್ಞಾನ ಕರಣದಿಂದ ಶಬ್ದ ವಿಷಯ, ಶಬ್ದ ವಿಷಯದಿಂದ ಆಕಾಶತತ್ತ್ವವುಂಟಾಗುವವು. ಅಂತೆಯೇ ಚಿನ್ನಾದದಿಂದಾದ ಚಿದಾಕಾಶದಿಂದ ಶರಣಾಂಗವುಂಟಾಗುವುದು.

ಅಂತಹ ಆಕಾಶದ ಹಿರಿಮೆ ತೈತ್ತಿರೀಯೋಪನಿಷತ್ತಿನ ಆರನೆಯ ಅನುವಾಕದಲ್ಲಿ ಅತ್ಯಂತ ಮನೋಹರವಾಗಿ ಪ್ರತಿಪಾದಿತವಾಗಿದೆ. ಅದು ಹೀಗಿದೆ :

“ಸ ಯ ಏಷೋಽಂತರ್ಹೃದಯ ಆಕಾಶಃ । ತಸ್ಮಿನ್ನಯಂ ಪುರುಷೋ ಮನೋಮಯಃ । ಅಮೃತೋ ಹಿರಣ್ಮಯಃ ॥”

ಹೃದಯದೊಳಗೆ ಆಕಾಶವಿದೆ. ಅದರಲ್ಲಿ ಮನೋಮಯ ಪರಮೇಶ್ವರ ಇದ್ದಾನೆ. ಆತನು ಅಪರಂಜಿಯಂತೆ ಅಚ್ಚತನವುಳ್ಳವನಾಗಿದ್ದಾನೆ. ಬೆಳ್ಳನೆ ಬೆಳಗುತ್ತಿದ್ದಾನೆ. ಅಮೃತನಾಗಿದ್ದಾನೆ.

ಪರಮಾಮೃತ ಸ್ವರೂಪನಾದ ಪರಮಾತ್ಮನನ್ನು ಪ್ರಪಂಚದ ತುಂಬಾ ಹುಡುಕಬೇಕಿಲ್ಲ. ಅವನು ತನ್ನ ಹೃದಯಾಕಾಶದಲ್ಲಿಯೇ ಇದ್ದಾನೆ. ಮನೋಮಯ ಪುರುಷನಾಗಿದ್ದಾನೆ. ಅಂತರ್ಯಾಮಿಯಾಗಿದ್ದಾನೆ. ಆತನು ಅವಿನಾಶಿಯಾಗಿ ಅಮೃತಪ್ರದನಾಗಿ ಅಚ್ಚಬೆಳಗಿನಿಂದ ಬೆಳಗುತ್ತಿದ್ದಾನೆ, ಅದರಿಂದ ಆತನನ್ನು ಹಿರಣ್ಮಯ ಪುರುಷನೆಂದು ಹೇಳಿದರು ಆತ್ಮದ್ರಷ್ಟಾರರು. ಆತನನ್ನು ಶರಣಾಂಗನು ಸತಿಯಾಗಿ ಆರಾಧಿಸಬೇಕು. ಆ ಹೃದಯೇಶ್ವರನನ್ನು ಒಲಿಸಿಕೊಳ್ಳಬೇಕು. ಆತನ ಆನಂದಾಮೃತವನ್ನು ಪಾನಮಾಡಬೇಕು. ಆತನ ಅಚ್ಚಳಿಯದ ಬೆಳಗಿನಲ್ಲಿ ಬಾಳಬೇಕು, ಬಾಳಿದರೆ ಅದೇ ಆತ್ಮರಾಜ್ಯ; ಅದೇ ಸ್ವರಾಜ್ಯ:

“ಆಪ್ನೋತಿ ಸ್ವರಾಜ್ಯಮ್ । ಆಪ್ನೋತಿ ಮನಸಸ್ಪತಿಮ್ । ವಾಕ್ಪತಿಶ್ಚಕ್ಷುಷ್ಪತಿಃ । ಶ್ರೋತ್ರಪತಿರ್ವಿಜ್ಞಾನ ಪತಿಃ । ಏತತ್ತತೋ ಭವತಿ ॥”

ಆಕಾಶಾಂಗನಾದ ಶರಣನು ಆಕಾಶ ಪುರುಷನ ಸಾಕ್ಷಾತ್ಕಾರದಿಂದ ಗಳಿಸಿದ ಸ್ವಾರಾಜ್ಯದಲ್ಲಿ ಅಂದರೆ ಆತ್ಮರಾಜ್ಯದಲ್ಲಿ ತಾನೇ ಸಮ್ರಾಟ್‌ನಾಗುತ್ತಾನೆ. ಪ್ರಕೃತಿಗೆ ಅಧಿಷ್ಠಾನನಾಗುತ್ತಾನೆ. ಕರಣೇಂದ್ರಿಯಗಳಿಗೆಲ್ಲ ಅಧಿಪತಿಯಾಗುತ್ತಾನೆ. ಮನ ಮಾತುಗಳಿಗೆ ಕಣ್ಣು ಕಿವಿಗಳಿಗೆ ಬುದ್ಧಿಭಾವಗಳಿಗೆ ಅಧಿಪತಿಯಾಗುತ್ತಾನೆ. ಅಂದರೆ ಮನದಲ್ಲಿ ಮಹಾಲಿಂಗವನ್ನು ವಾಕ್ಕಿನಲ್ಲಿ ಗುರುಲಿಂಗವನ್ನು (ವಾಕ್ಪತಿಯನ್ನು) ಕಣ್ಣಿನಲ್ಲಿ ಶಿವಲಿಂಗವನ್ನು ಕಿವಿಯಲ್ಲಿ ಪ್ರಸಾದಲಿಂಗವನ್ನು ಬುದ್ಧಿಯಲ್ಲಿ ಪ್ರಾಣಲಿಂಗವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಶರಣನ ಸರ್ವಾಂಗವು ಸುರಾಜ್ಯವಾಗುತ್ತದೆ. ಅಷ್ಟೇ ಅಲ್ಲ ಪರಬ್ರಹ್ಮ ಸ್ವರೂಪವಾಗುತ್ತದೆ. "ಆಕಾಶ ಶರೀರಂ ಬ್ರಹ್ಮ । ಸತ್ಯಾತ್ಮ ಪ್ರಾಣಾರಾಮಂ ಮನ ಆನಂದಮ್ । ಶಾಂತಿ ಸಮೃದ್ಧಮಮೃತಮ್ । ಇತಿ ಪ್ರಾಚೀನ ಯೋಗ್ಯೋಪಾಸ್ಸ್ವ ।" ಶರಣನ ಆಕಾಶಾಂಗವು ಬ್ರಹ್ಮಸ್ವರೂಪವಾಗಿರುತ್ತದೆ. ಶರಣನು ಸತ್ತಾತ್ಮನಾಗಿರುತ್ತಾನೆ; ಶರಣ ಪ್ರಾಣಗಳು ಆರಾಮವಾಗಿರುತ್ತವೆ. ಮನ ಆನಂದದಲ್ಲಿರುತ್ತದೆ; ಶರಣನಲ್ಲಿ ಶಾಂತಿ ಸಮೃದ್ಧವಾಗಿರುತ್ತದೆ. ಶರಣನು ಅವಿನಾಶಿಯಾಗುತ್ತಾನೆ ಪುರಾತನರಿಗೆ ಯೋಗ್ಯವಾದ ಉಪಾಸನೆಯಲ್ಲಿರುತ್ತಾನೆ. ಇದು ಶರಣ ಸ್ಥಲದ ಸಾರ ಸರ್ವಸ್ವವಾಗಿದೆ.

ಶ್ರೋತ್ರೇಂದ್ರಿಯ-ವಾಗಿಂದ್ರಿಯ

ಒಂದು ಜ್ಞಾನೇಂದ್ರಿಯ; ಇನ್ನೊಂದು ಕರ್ಮೇಂದ್ರಿಯ ಒಂದು ಕಿವಿ; ಇನ್ನೊಂದು ಬಾಯ್. ಕಿವಿ ಕೇಳುವುದು; ಬಾಯ್ ಹೇಳುವುದು. ಕೇಳುವುದು ಜ್ಞಾನ: ಹೇಳುವುದು ಕ್ರಿಯೆ. ಕೇಳ ತಕ್ಕುದನ್ನು ಕೇಳುವುದು ಶ್ರವಣ; ಹೇಳತಕ್ಕುದನ್ನು ಹೇಳುವುದು ಪ್ರವಚನ. ಇವೆರಡೂ ಮನನ-ನಿಧಿಧ್ಯಾಸಗಳಿಗೆ ಸಾಧನ; ಅಭಿನ್ನ ಸಾಧನ.

ಶ್ರವಣ-ವಚನಗಳು ಉಪಾಸನಗಳು. ಶರಣ ಉಪಾಸಕ. ವಾಗಿಂದ್ರಿಯ-ಶ್ರೋತ್ರೇಂದ್ರಿಯಾಪಚ್ಛಿನ್ನ ಚೈತನ್ಯವಾದ ಪ್ರಸಾದಲಿಂಗವೆ ಉಪಾಸ್ಯ. ಪ್ರಸಾದಲಿಂಗ ವಾಕ್ಪತಿಯೂ ಅಹುದು; ವಾಚಸ್ಪತಿಯೂ ಅಹುದು,

ಸತ್ವಗುಣ ಭೂಯಿಷ್ಠರು ಶ್ರವಣದಲ್ಲಿ ಪ್ರವಚನದಲ್ಲಿ ಮನ ಭಾವಗಳುಳ್ಳವರಾಗುತ್ತಾರೆ. ಅದೇ ರಜೋಗುಣಿಗಳು ತಮೋಗುಣಿಗಳು ಶ್ರವಣಕ್ಕೆ ಶಿವ ವಚನಕ್ಕೆ ಮನಸ್ಸನ್ನು ಮಾಡರು. ಶ್ರವಣಾದಿಗಳಿಂದ ಸಾತ್ವಿಕರಾದವರಲ್ಲಿ ಶಿವಜ್ಞಾನ ಅಭಿವೃದ್ಧಿಯಾಗುತ್ತದೆ. ಶಿವಯೋಗ ಸನ್ನಿಹಿತವಾಗಿರುತ್ತದೆ.

ಶಬ್ದಗ್ರಾಹಕ ಸಾಧನವೇ ಶ್ರೋತ್ರೇಂದ್ರಿಯ ಶಬ್ದಗುಣವುಳ್ಳ ಆಕಾಶಜನ್ಯ ಶ್ರೋತ್ರ ಆದುದರಿಂದ ಅದು ಶಬ್ದಗ್ರಾಹಕ ಶಕ್ತಿಸಂಪನ್ನವಾಗಿದೆ. ಶರಣನಿಗೆ ಮುಖವಾಗಿದೆ. ಸುಶಬ್ದ ಪ್ರಸಾದವನ್ನು ಪರಿಗ್ರಹಿಸುತ್ತದೆ. "ಕರ್ಣಶಷ್ಕುಲ್ಯವಚ್ಛಿನ್ನನಭಃ ಶ್ರೋತ್ರಂ" ಶ್ರೋತ್ರಗೋಳಕದಲ್ಲಿರುವ ಆಕಾಶವೇ ಕಿವಿಯೆಂದು ತಾರ್ಕಿಕರು ಅಭಿಪ್ರಾಯ ಪಡುತ್ತಾರೆ.

"ಶ್ರೋತ್ರೇಂದ್ರಿಯಕ್ಕೆ ಆಕಾಶವೆಂಬ ಮಹಾಭೂತ. ದಶದಿಕ್ಕುಗಳೇ ಅಧಿದೇವತೆ, ಅಲ್ಲಿ ಶಬ್ದ ವಿಷಯ, ಅಕ್ಷರಾತ್ಮಕ–ಅನಕ್ಷರಾತ್ಮಕ ಈ ಅಯ್ದು ಶಬ್ದ ಭೇದ.

ಆಕಾಶ ತತ್ತ್ವವು ಶ್ರವಣೇಂದ್ರಿಯದೊಳಗೆ ವಾಸವಾಗಿದ್ದ ಕಾಲದಲ್ಲಿ ಸುಶಬ್ದ ಕುಶಬ್ದಂಗಳ ಲಾಲಿಸುವುದಕ್ಕೆ ಸುಸ್ಥಿರವಾಗಿ ಬರುವುದು. ಆತ್ಮನು ತಾನೇ ದಶದಿಕ್ಕೆಂಬ ಅಧಿದೇವತಾ ನಾಮದಿಂದ ಸದಾ ವಾಸವಾಗಿರುವನು.

ಶ್ರೋತ್ರ ಬೇರೆ, ಇಂದ್ರಿಯ ಬೇರೆ. ಕಿವಿಯೋ ಶಬ್ದವನ್ನು ಗ್ರಹಿಸದು. ಕಿವಿಯೊಳಗಿರುವ ಶ್ರೋತ್ರೇಂದ್ರಿಯ ಗ್ರಹಿಸುತ್ತದೆ ಆಕಾಶ ಒಂದಾದರೂ ಉಪಾಧಿಯಿಂದ ಕರ್ಣೇಂದ್ರಿಯಂವೆನಿಸಿದೆ. ಶಬ್ದ ಗ್ರಹಣಕ್ಕೆ ಶಬ್ದ ಜ್ಞಾನಕ್ಕೆ ಸಾಧನವಾಗಿದೆ- 'ಶ್ರೋತ್ರೇಂದ್ರಿಯಂ ಕರ್ಣವಿವರಸಂಜ್ಞಕಂ ನಭಃ । ಕರ್ಣ ಶಷ್ಕುಲಿ ಭೇದಾತ್ ಶ್ರೋತ್ರಂ ಪುರುಷ ಭೇದೇನ ಭಿನ್ನಂ ಅನೇಕತ್ವಂ ಭವತಿ ।"-ಮುಕ್ತಾವಲಿ.

ನಿತ್ಯ ನಿರವಯುವಾದ ಆಕಾಶ ಕರ್ಣರಂಧ್ರದಲ್ಲಿ ಶಬ್ದೇಂದ್ರಿಯವಾಗಿರುತ್ತದೆ. ಕರ್ಣಾಕಾಶವೇ ಶ್ರೋತ್ರೇಂದ್ರಿಯ ಅದೇ ಶಬ್ದಗ್ರಾಹಕ ಆಕಾಶ ದ್ರವ್ಯ. 'ಶೃಣೋತ್ಯನೇನೇತಿ ಶ್ರೋತ್ರಂ' "ಶ್ರೋತ್ರಾಕಾಶಯೋಃ ಸಂಬಂಧ ಸಂಯಮಾತ್ ದಿವ್ಯಂ ಶ್ರೋತ್ರಂ" ಶ್ರೋತ್ರಾಕಾಶಗಳಿಗೆ ಆಧಾರಾಧೇಯ ಭಾವವಿದೆ. ಇವೆರಡರ ಸಂಬಂಧದಲ್ಲಿ ಸಂಯಮನ ಮಾಡಿದರೆ ಶ್ರೋತ್ರೇಂದ್ರಿಯ ದಿವ್ಯವಾಗುತ್ತದೆ; ಶ್ರೋತ್ರೇಂದ್ರಿಯ ಗ್ರಹಿಸಿದ ಶಬ್ದ ದಿವ್ಯವಾಗುತ್ತದೆ ಎಂದು ಪತಂಜಲಿಯು ಹೇಳುತ್ತಾನೆ.

ವಾಗಿಂದ್ರಿಯಕ್ಕೆ ಆಕಾಶ ಮಹಾಭೂತ, ನಾಗವಾಯು, ಸರಸ್ವತಿ ಅಧಿದೇವತೆ. ಅಲ್ಲಿ ಸುವಾಕ್ಯ-ದುರ್ವಾಕ್ಯ ವಿಷಯ.

ವಾಗಿಂದ್ರಿಯಕ್ಕೆ ನಾಗಾವಾಯುವೇ ಮೂಲಚೈತನ್ಯವಾಗಿಪ್ಪುದು. ಈ ವಾಯು ವಾಸವಾಗಿದ್ದ ಕಾಲದಲ್ಲಿ ಮಾತು ಕತೆ ಪ್ರಸಂಗವನಾಡುವುದಕ್ಕೆ ಸುಸ್ಥಿರವಾಗಿ ಬರುತಿಹುದು. ಅದು ನಷ್ಟವಾಗಿ ಹೋಗಲು ನಾಲಗೆ ಎಂಬುದು ತೊದಲು ಬದ್ದು ಮಾತುಕತೆ ಪ್ರಸಂಗವನಾಡುವುದಕ್ಕೆ ಸುಸ್ಥಿರವಾಗಿ ಬರಲರಿಯದು. ಅಲ್ಲಿ ಆತ್ಮನು ತಾನೆ ಸರಸ್ವತಿ ಎಂಬ ಅಧಿದೇವತಾ ನಾಮದಿಂದ ಸದಾ ವಾಸವಾಗಿರುತಿಹನು. -ವಚನ ಶಾಸ್ತ್ರಸಾರ, ಭಾಗ-೨.

ವಾಗಿಂದ್ರಿಯಕ್ಕೆ ಸರಸ್ವತಿ ಅಧಿದೇವತೆಯೆಂಬ ಮಾತು ಗಮನಾರ್ಹವಾಗಿದೆ. ವಾಕ್ಕೇ ವಾಗ್ದೇವಿಯಾಗಿದೆ. ವಾಗ್ದೇವಿ ಬೇರಲ್ಲ; ವಾಕ್ ಬೇರಲ್ಲ ವಾಗ್ದೇವಿ ಬ್ರಹ್ಮಲೋಕದಲ್ಲಿಲ್ಲ. ಬ್ರಹ್ಮಲೋಕ ತನ್ನಲ್ಲಿದೆ. ಪ್ರತಿಭಾವಂತನಾದ ತಾನೇ ಬ್ರಹ್ಮ. ಸತ್ಯವೇ ತನ್ನ ಲೋಕ. ಮತ್ತು ಸತ್ವಯುಕ್ತವಾದ ತನ್ನ ವಾಣಿಯೇ ವಾಗ್ದೇವಿ. ರತ್ನದೀಪ್ತಿಯುತಿರುವ ವಾಕ್ಕೇ ಉಷಾದೇವಿ.

ಉಷಾದೇವಿ ಬೇರಿಲ್ಲ. ತನ್ನ ಅರ್ಥವತ್ತಾದ ಅರಿವುಳ್ಳ ವಾಣಿಯೇ ಉಷಾದೇವಿ. ಅವಳ ಹೊಂಬೆಳಗು ಹೊಮ್ಮಿ ಬಾಳನ್ನು ಬೆಳಗುತ್ತದೆ. ಜೀವ ಪಕ್ಕಿಗಳನ್ನು ಹಾಡಿಸುತ್ತದೆ.

ಶರಣವಾಣಿ ಉದಯದ ಉಷಾವಾಣಿ ! ಅದರಿಂದ ತಿಳಿಬಾಳಿನ ನಲುಬಾಳಿನ ಉದಯವಾಗುತ್ತದೆ. ಸತ್ಕ್ರಿಯಾ ಜೀವನ ಮೊದಲಾಗುತ್ತದೆ. ಚಿತ್ಸೂರ್ಯನು ಉದಯಿಸಲು ಕಾರಣವಾಗುತ್ತದೆ. ಅನುಭವನದ ಅಚ್ಚಳಿಯದ ಹಿರಿಬೆಳಗು ಹರಡಲು ಅನುವಾಗುತ್ತದೆ.

"ಯದಾ ತು ವಾಗ್ಭವತ್ಯೇಷಾ ಸೂರ್ಯಾಮುಂ ಲೋಕಮಾಶ್ರಿತಾ ।
ತಥಾ ಸೂಕ್ತಮುಷಾ ಭೂತ್ವಾ ಸೂರ್ಯಾ ಚ ಭಜತೇಽಖಿಲಂ ॥"

ವಾಗ್ದೇವಿ ಸೂರ್ಯಾದೇವಿಯೆಂದು ಈ ಲೋಕಾಶ್ರಿತಳೆಂದು ಸ್ತುತಳಾದಾಗ ಸ್ವರ್ಗೀಯ ದೇವಿಯೆನಿಸುತ್ತಾಳೆ; ಉಷಾದೇವಿಯೆಂದು ಬಣ್ಣಿಸಿದಾಗ ಸರ್ವರಿಗೆ ಸರ್ವಕ್ಕೆ ಸೂಕ್ತಳಾಗುತ್ತಾಳೆ. ಮರ್ತ್ಯದ ಮಾನವತೆಯ ದೇವಿಯೆನಿಸುತ್ತಾಳೆ. ಮಾನವನನ್ನು ಶರಣತ್ವಕ್ಕೇರಿಸುತ್ತಾಳೆ. ವಾಗ್ದೇವಿಯಲ್ಲಿ ಅಂದರೆ ವಾಗಿಂದ್ರಿಯದಲ್ಲಿ ಅಂತಹ ಕಳೆಯಿದೆ; ಅಂತಹ ನಾದವಿದೆ; ಆ ಬಗೆಯ ರಸವಂತಿಕೆಯಿಂದೆ.

ವಾಕ್ ಕ್ರಿಯಾವಾಚಿಯಾದಾಗ ಗೌರಿಯೆನಿಸುತ್ತಾಳೆ; ತೊಡೆಯನೇರುತ್ತಾಳೆ; ಜ್ಞಾನವಾಚಿಯಾದಾಗ ಗಂಗೆಯೆನಿಸುತ್ತಾಳೆ; ತಲೆಯನೇರುತ್ತಾಳೆ. ಉಭಯ ವಾಚಿಯಾದಾಗ ಶಾರದೆಯೆನಿಸುತ್ತಾಳೆ ; ನಾಲಗೆಯಲ್ಲಿರುತ್ತಾಳೆ. ಅರ್ಥ ಪೂರ್ಣವಾದಾಗ ಅದೇ ವಾಕ್ ಲಕ್ಷ್ಮಿಯೆನಿಸುತ್ತಾಳೆ; ಹೃದಯದಲ್ಲಿರುತ್ತಾಳೆ ಅರ್ಥವತ್ತಾದ ಮಾತನ್ನು ಮರೆಯುವವರಾರು ? ಅದೇ ವಾಕ್ಕು ಶಿವಸ್ತುತಿ ಪರವಾಗಿ ಗೀತ ಪರವಾದಾಗ ಗಾಯತ್ರಿಯೆನೆಸುತ್ತಾಳೆ. ಅದೇ ಶಿವವಾದಿನಿಯಾದಾಗ ಸಾವಿತ್ರಿಯೆನಿಸುತ್ತಾಳೆ. ಶಿವಶರಣನ ಶೈವೀವಾಣಿಯಲ್ಲಿ ಹೀಗೆ ಎಲ್ಲ ಶಕ್ತಿಯರಿರುತ್ತಾರೆ, ಇದರಿಂದಾಗಿ "ಶಿವಶರಣ" ಎಂಬ ಪದ–ಎಂಬ ನಾಮ ಸಾರ್ಥಕವಾಗುತ್ತದೆ. ಶರಣನಿಗಿರುವ ಈ 'ಶಿವ' ವಿಶೇಷಣಕ್ಕೆ ತುಂಬಾ ಔಚಿತ್ಯವಿರುತ್ತದೆ. ವಿಶುದ್ಧವಾದ ವಾಗಿಂದ್ರಿಯದ ವೈಶಿಷ್ಟ್ಯವಿದು:

ವಾಗ್ದರ್ಶನ ಅಗಾಧವಾದುದು; ಆದರ್ಶವಾದುದು. ವಾಕ್ಕಿನಿಂದ ಮಾ[illegible]ತೆ ಮೊದಲಾಗುತ್ತದೆ; ಮಹಾನುಭಾವತೆ ಮೈಗೂಡುತ್ತದೆ.

ವಾಕ್ಕಿಗೂ ಶ್ರೋತ್ರಕ್ಕೂ ಪರಸ್ಪರ ಸಂಬಂಧವಿದೆ. ಹೇಳಿದ್ದನ್ನು ಕೇಳುವ, ಕೇಳಿದ್ದನ್ನು ಹೇಳುವ ಸಂಬಂಧ ಇವೆರಡರದು ಶ್ರುತಪಡಿಸಿ ವಾಕ್ ಶ್ರುತದೇವಿಯೆನಿಸುತ್ತದೆ. ಕೇಳಿ ತಿಳಿದುದೇ ಶ್ರುತಿ. ಶ್ರೋತ್ರದ ವೈಶಿಷ್ಟ್ಯ 'ಶ್ರುತಿ' ಎಂಬ ಪದದಲ್ಲಿ ಪ್ರಕಾಶಿಸುತ್ತದೆ. ಶ್ರೋತ್ರ ಮುಖಕ್ಕೆ ಬಂದುದೇ ಶ್ರುತಿಯೆಂಬುದನ್ನು ಮರೆಯಲಾಗದು, ಆತ್ಮ ಶ್ರೋತವ್ಯವಾಗಬೇಕು; ಆತ್ಮನು ಶ್ರೋತ್ರಿಯನಾಗಬೇಕು. ಶ್ರೇಯಸ್ಸಿಗೆ ಶಿವಸನ್ನಿಹಿತತ್ವಕ್ಕೆ ಇದು ಶ್ರೇಷ್ಠಸಾಧನ; ಶ್ಲಾಘ್ಯಸಾಧನ. ಅಂತೆಯೇ ಅಗ್ರಸಾಧನ

ಶ್ರುತವಾದುದು ಶ್ರುತಿಯಾಗಿ ವಾಙ್ಮುಖದಲ್ಲಿ ಬರಬೇಕು. ವಾಙ್ಮುಖದಲ್ಲಿ ಬಂದ ವಾಙ್ಮಯ ಮರಳಿ ಶ್ರೋತ್ರಮುಖದಲ್ಲಿ ಒಳಕ್ಕೆ ಹೋಗಬೇಕು. ಇವೆರಡು ಆ ಪ್ರಸಾದಲಿಂಗದಲ್ಲಿ ಲಯವಾಗಬೇಕು; ಅಂದರೆ ಸೇರಬೇಕು.

ಶರಣನಿಗೆ ಶಿವನೇ ಶ್ರೋತವ್ಯ, ಶಿವನೇ ವಕ್ತವ್ಯ; ಶಿವನೇ ದ್ರಷ್ಟವ್ಯ. ಆದ್ದರಿಂದ ಶರಣನ ಶ್ರೋತ್ರೇಂದ್ರಿಯ ಮತ್ತು ವಾಗಿಂದ್ರಿಯಗಳು ಸಾರ್ಥಕಗಳು. ಶರಣನಿಗೆ ಶಿವನೇ ಜ್ಞಾತವ್ಯನಾದುದರಿಂದ ಆತನ ಜ್ಞಾನ ಮನಗಳೂ ಸಾರ್ಥಕಗಳು.

ಮಾನವ ಜೀವನದಲ್ಲಿ ವಾಗಿಂದ್ರಿಯವೇ ಪ್ರಧಾನ. ಏಕೆಂದರೆ ವಾಗುದಯವೆ ಜೀವನ. ವಾಗಿಂದ್ರಿಯ ಲಯವೆ ಮರಣ. ಉಳಿದೆಲ್ಲ ಇಂದ್ರಿಯಗಳು ವಾಕ್ಕನ್ನು ಅನುಸರಿಸುತ್ತವೆ. ವಾಕ್ಕು ಶ್ರೋತ್ರವನ್ನು ಅನುಸರಿಸುತ್ತದೆ; ಮನದಲ್ಲಿ ಲೀನವಾಗುತ್ತದೆ 'ವಾಙ್ಮನಸಿ ದರ್ಶನಾಚ್ಛಬ್ದಾಚ್ಚ' ಎಂದು ಬ್ರಹ್ಮಸೂತ್ರ ಹೇಳುತ್ತದೆ. ಇದೇ ಅಭಿಪ್ರಾಯವನ್ನು ಛಾಂದೋಗ್ಯ ಶ್ರುತಿಯೂ ಹೇಳಿದೆ "ಅಸ್ಯ ಸೋಮ್ಯ ಪುರುಷಸ್ಯ ಪ್ರಯತೋ ವಾಙ್ಮನಸಿ ಸಂಪದ್ಯತೇ, ಮನಃ ಪ್ರಾಣೇ, ಪ್ರಾಣಸ್ತೇಜಸಿ, ತೇಜಃ ಪರಸ್ಯಾಂ ದೇವತಾಯಾಮ್ ।"

ಆ ಪರದೇವತೆಯೇ ಪರಾಶಕ್ತಿಯುಕ್ತ ಪ್ರಸಾದಲಿಂಗ, ವಾಣಿಯ ಲಯ ಎರಡು ಬಗೆಯಾಗಿದೆ. ವಾಗಿಂದ್ರಿಯಲಯ, ವಾಗ್ವೃತ್ತಿಯ ಲಯ-ಎಂಬುದಾಗಿ ! ವಾಗಿಂದ್ರಿಯಲಯ ವಿದೇಹ ಮುಕ್ತನಿಗೆ ! ವಾಗ್ವೃತ್ತಿಯಲಯ

ಜೀವನ್ಮುಕ್ತನಿಗೆ ! ಆತ್ಮವಾದಿಗಳಿಗೆ ಆತ್ಮಜ್ಞಾನಿಗಳಿಗೆ ವಾಗಿಂದ್ರಿಯ ಅದೊಂದು ಉತ್ತಮ ಕರಣ. ಅದರಿಂದ ಶಿವಸ್ತುತಿ ಸಾಗುತ್ತದೆ. ಅದರಿಂದ ಶಿವಮಂತ್ರ ಜಪ ಜರುಗುತ್ತದೆ. "ಚಕ್ಷುಃ ಶ್ರೋತ್ರಂ ಮನೋ ವಾಕ್ ಚ ಪ್ರಾಣಶ್ಚೇತ್ಯಾತ್ಮವಾದಿನಃ" ಎಂದಿದೆ ಪುರಾತನ ವಾಣಿ. ಅಂತೆಯೇ ಶಿವವಿಚಾರವನ್ನು ಶ್ರುತಿಮಂತ್ರಗಳನ್ನು ಕೇಳಲು ಶ್ರೋತ್ರೇಂದ್ರಿಯ ಸಾಧನವಾಗಿದೆ. ಆಸುರೀ ಶಕ್ತಿಯನ್ನು ಗೆಲ್ಲಲು ಇವೆರಡೂ ಮುಖ್ಯ ಕರಣಗಳಾಗಿವೆ.

ಶಬ್ದ-ಶ್ರವಣ

ವಾಗಿಂದ್ರಿಯ ಕಾರ್ಯ ವೈಖರೀ ರೂಪ ಶಬ್ದ. ಶ್ರೋತ್ರೇಂದ್ರಿಯ ಕಾರ್ಯ ವಿಚಾರಾನುಭವ ಶ್ರವಣ. ನುಡಿ ನಾಲ್ಕು ಬಗೆ: ಪರಾ, ಪಶ್ಯಂತಿ, ಮಧ್ಯಮೆ, ವೈಖರಿ–ಎಂಬಿವು. ಅನುಭಾವ ಭಕ್ತಿಯನ್ನು ಮಂತ್ರಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಇವು ಸತ್ಯ ಸಾಧನವಾಗಿವೆ. ಶಿವಶರಣನದು ಸನಾತನ ವಾಣಿ, ಸಮನ್ವಯ ವಾಣಿ; ಸ್ವಾನುಭವದಿಂದ ಸುಂದರವಾದ ವಾಣಿ; ಮಧುರವಾದ ವಾಣಿ. ಲಿಂಗ ಮೆಚ್ಚಿ ಅಹುದೆಂದು ಒಪ್ಪುವ ನಲ್ನುಡಿ; ತಿರುಳ್ನುಡಿ; ಸಿರಿನುಡಿ.

ಚಿತ್ತಕ್ಕೆ ನಿಲುಕಿದುದು ಪರಾವಾಣಿ. ಅದೇ ಮನದ ನೆನಹಿಂಗೆ ಬಂದರೆ ಪಶ್ಯಂತಿವಾಣಿ. ಅದೇ ನಾಲಗೆಗೆ ನಿಲುಕಲು ಮಧ್ಯಮಾವಾಣಿ. ಅದೇ ವಚನವಾಗಿ ಹೊರಹೊಮ್ಮಲು ವೈಖರೀವಾಣಿ. ಇದನ್ನು ಇನ್ನೊಂದು ಬಗೆಯಾಗಿ ಚಿತ್ತರಿಸುವರು: ಆಧಾರದಿಂದ ಅನಾಹತದವರೆಗಿರುವ ಚಿನ್ನಾದವೇ ಪರಾವಾಣಿ; ವಿಶುದ್ಧದಿಂದ ಆಜ್ಞೆಯವರೆಗೆ ಅಂದರೆ ಕಣ್ಣಿನ ನಡುವಿನ ಭ್ರೂಮಧ್ಯದ ವರೆಗೆ ಇರುವುದು ಪಶ್ಯಂತಿವಾಣಿ; ಕಂಠದಲ್ಲಿ ಇರುವುದು ಮಧ್ಯಮಾವಾಣಿ; ಜಿಹ್ವೆಯಲ್ಲಿದ್ದು ಉಚ್ಚರಿಸಲು ವೈಖರೀ ವಾಣಿ. ಮತ್ತು ಲಿಂಗವನ್ನು ನೆನೆಯುವುದೆ ಪರೆ, ಲಿಂಗವನ್ನು ಕಣ್ಣಾರೆ ಕಾಣುವುದೆ ಪಶ್ಯಂತಿ, ಲಿಂಗವನ್ನು ಜಪಿಸಿ ಸ್ತುತಿಸುವುದೆ ಮಧ್ಯಮೆ, ಲಿಂಗವನ್ನು ಹಸ್ತದಲ್ಲಿರಿಸಿ ಮುಟ್ಟಿ ಅರ್ಚಿಸುವುದೆ ವೈಖರಿ, ಉಚ್ಚರಿಸಿದ ವಚನವನ್ನು ಕಿವಿಯಾರೆ ಕೇಳುವುದೇ ಶ್ರವಣ; ಮನವಾರೆ ನೆನೆವುದೆ ಮನನ. ಆ ಮನನದ ಭಾವನಾದವನ್ನು ಧಾರಣ ಮಾಡುವುದೇ ನಿಧಿಧ್ಯಾಸ.

ಶರಣನಾಗಿ ನುಡಿದುದು ವಚನ. ಸಾಧಕನಾಗಿ ಕೇಳಿದುದು ಶ್ರವಣ ಕೇಳಿದುದನ್ನು ಅರಿತುದು ವೇದ. ಅರಿತುದನ್ನು ಆಚರಿಸಿದುದು ಅನುಭವ.

ಆಡಿದುದೆಲ್ಲ ವಚನವಲ್ಲ. ಕೇಳಿದುದೆಲ್ಲ ಶ್ರವಣವಲ್ಲ. ತಿಳಿದುದೆಲ್ಲ ವೇದವಲ್ಲ. ಆಚರಿಸಿದುದೆಲ್ಲ ಅನುಭವವಲ್ಲ. ನೆನೆದುದೆಲ್ಲ ಧ್ಯಾನವಲ್ಲ.

ಶರಣನ ಶಬ್ದದಲ್ಲಿ ಸತ್ವವಿರುತ್ತದೆ, ಸ್ವಾರ್ಥದ ಸ್ವರ ಆತನ ಶಬ್ದದಲ್ಲಿರದು. ವಿಶ್ವ ಸಂಗೀತದಲ್ಲಿ ಶರಣನದು ಇಂಚರ. ವಿಶ್ವನಾದದಲ್ಲಿ ಶರಣನದು ವಿಶಿಷ್ಟ ಚಿನ್ನಾದ. ಶರಣನ ಸ್ವರಕ್ಕೆ, ಶರಣನ ಶಬ್ದಕ್ಕೆ ಬೆಲೆಯಿಲ್ಲ:

ವಿಶ್ವ ಪ್ರಕೃತಿಯಲ್ಲಿ ಶರಣನದು ವಿಶಿಷ್ಟ ಪ್ರಗತಿ. ಪ್ರಕೃತಿ ನಿಯತಿಗೆ ಶರಣ ಶರಣಾಗುವವನಲ್ಲ. ಪ್ರಕೃತಿಯ ಚಲನವಲನಕ್ಕೆ ಪ್ರಾಕೃತಿಕ ಸ್ವರಕ್ಕೆ ಸೋಲುವವನಲ್ಲ. ಆತನ ಶೈವೀ ಪ್ರಜ್ಞೆ ಆತನನ್ನು ಶೈವೀನಾದದತ್ತ ಕರೆದೊಯ್ಯುತ್ತದೆ; ಶೈವೀ ಕೃಪೆಗಾಗಿ ಸಲ್ಲುವಂತೆ ಮಾಡುತ್ತದೆ; ಶೈವೀ ಸುಖದಲ್ಲಿ ಇರಿಸುತ್ತದೆ. ಪರಾವಾಣಿ ಉಪಾಸಕನಾದ ಶರಣ ಶಿಶುವಿನ ಮೇಲೆ ಆ ಪರಾಶಕ್ತಿ ಮಾತೆಯ ಪ್ರೇಮ ತಪ್ಪದಂತಿರುತ್ತದೆ; ಪರಾ ಪ್ರಕೃತಿಯನ್ನು ಅನುಗ್ರಹಿಸಿರುತ್ತದೆ.

ಶರಣ ಭಾವಜೀವಿ ; ಭಾವಪೂರ್ಣ ಶಿವಕವಿ. ಆತನು ಭಾವಸಾಹಿತಿಯೂ ಅಹುದು; ಭಾವಾತೀತ ಸಾಹಿತಿಯೂ ಅಹುದು. ಆತ ಸೀಮಿತನಾದರೂ ನಿಸ್ಸೀಮ; ಭಾವಿಕನಾದರೂ ನಿರ್ಭಾವಿ ಆತನದು ಪ್ರಾಸಾದಿಕ ವಾಣಿ, ಪರಾವಾಣಿ ಆತನ ವೈಖರಿಯಲ್ಲಿ ದಿವ್ಯಶಕ್ತಿಯಿರುತ್ತದೆ; ನವ್ಯನಾದವಿರುತ್ತದೆ. ಅದು ಪರಾಶಕ್ತಿಯುಕ್ತವಾಗಿರುತ್ತದೆ. ಅದು ಅವನ ಅಂತರಂಗದ ಆಳದಿಂದ ಅನುಭವದಿಂದ ಅರಳಿರುತ್ತದೆ. ಹೊಸ ಕಂಪನು ಸೂಸುತ್ತದೆ. ಬಾಳಿಗೆ ಹೊಸ ಬೆಳಗನು ಬೀರುತ್ತದೆ ಹೊಸ ಹೊಲಬನು ತೋರುತ್ತದೆ. ಹೊಲಬಿಗರನ್ನಾಗಿಸುತ್ತದೆ. ಶೈವೀ ಅಥವಾ ದೈವೀ ಭಾವವನ್ನು ತುಂಬುತ್ತದೆ "...ಶಬ್ದವೂ ಅಶಬ್ದವೂ ಶಬ್ದದಲ್ಲಿಯೇ ಕಾಣಬಹುದು, ಕಾಣಿರೇ. ಇದ್ದವರು ಇದ್ದ ಸ್ಥಲವನೇ ನುಡಿವರು. ಅದಕದು ಸಹಜ. ಲಿಂಗದ ನಡೆ, ಲಿಂಗದ ನುಡಿ, ಲಿಂಗದ ನೋಟ ಕೂಡಲ ಚನ್ನಸಂಗಯ್ಯ ನಿಮ್ಮ ಶರಣಂಗೆ !" ಲಿಂಗ ಬಿಟ್ಟು ನಡೆಯಿಲ್ಲ, ನುಡಿಯಿಲ್ಲ; ನೋಟವಿಲ್ಲ. ಶರಣನಿಗೆ ಅದೇ ಸಹಜ; ಅದೇ ನೈಜ ಅವರದು ಸದ್ವಾಣಿ, ಸತ್ತ್ವವಾಣಿ. 'ಇದ್ದವರು ಇದ್ದ ಸ್ಥಲವನೇ ನುಡಿವರು ' ಇದರಲ್ಲಿ ಎಂತಹ ದಿವ್ಯ ಭಾವವಿದೆ ! ಅಂಗ-ಲಿಂಗಗಳೆರಡರ ತ್ರಿಕಾಲಾಬಾಧಿತ ಸತ್ತೆ ನಿರೂಪಿತವಾಗಿದೆ ಲಿಂಗಸ್ಥಲವು ಅಂಗ

ಸ್ಥಲಕ್ಕೆ ಬಂದುಂದು ಲಿಂಗಸ್ಥಲವನ್ನೇ ನುಡಿಯಲು ! ಸತ್ಯವನ್ನೇ ನುಡಿಯಲು ! ಆದ್ದರಿಂದ ಶರಣವಾಣಿ ಸನಾತನ ! ಸದಾ ನೂತನ ! ಆತನ ಆ ವಾಣಿ ಶಬ್ದಮಯಿಯಾಗಿ ಭಾವಮಯಿಯಾಗಿ ಇರುತ್ತದೆ. ಆದ್ದರಿಂದ ಅದು ಉಭಯಾತ್ಮಕವಾಗಿರುತ್ತದೆ. ಶರಣನ ಶಬ್ದಶಕ್ತಿ ಬರೀ ಸ್ಥೂಲವಲ್ಲ; ಸೂಕ್ಷ್ಮವಾಗಿಯೂ ಇರುತ್ತದೆ. ಸ್ಥೂಲ ಶಬ್ದದಲ್ಲಿರುವ ಸೂಕ್ಷ್ಮಶಕ್ತಿ ಅಂದರೆ ಮೂಲ ಲಕ್ಷ್ಯಾರ್ಥ ಸಾಮಾನ್ಯರಿಗೆ ದೃಗ್ಗೋಚರವಾಗದು; ಅದು ಪರಿಣಾಮಗಮ್ಯ. ಸ್ಥೂಲ ಶಕ್ತಿಯ ಪರಿಣಾಮ ಪ್ರತ್ಯಕ್ಷಗಮ್ಯ.

ಶಬ್ದ ಒಂದು ದ್ರವ್ಯ. ಶಬ್ದರೂಪ ಸ್ಥೂಲ; ಶಬ್ದ ರುಚಿ ಸೂಕ್ಷ್ಮ ಶಬ್ದ ತೃಪ್ತಿ ಸೂಕ್ಷ್ಮಾತೀತ. ಶಬ್ದದ ವಾಚ್ಯಾರ್ಥ ಶ್ರೋತ್ರೇಂದ್ರಿಯ ಮನಸ್ಸುಗಳಿಗೆ ವಿಷಯ. ಶಬ್ದದ ಲಕ್ಷ್ಯಾರ್ಥ ಭಾವಗಮ್ಯ. ಶಬ್ದದ ಪರಾಶಕ್ತಿ ಪರಾನುಭೂತಿ ಆತ್ಮಗಮ್ಯವಾಗಿ ಭಾವಾತೀತವಾಗುತ್ತದೆ.

"ಶರಣಂಗಾಕಾಶವೆ ಅಂಗ; ಆ ಅಂಗಕ್ಕೆ ಸುಜ್ಞಾನವೇ ಹಸ್ತ.
ಆ ಹಸ್ತಕ್ಕೆ ಶಿವಸಾದಾಖ್ಯ; ಆ ಸಾದಾಖ್ಯಕ್ಕೆ ಪರಾಶಕ್ತಿ.
ಆ ಶಕ್ತಿಗೆ ಪ್ರಸಾದಲಿಂಗ; ಆ ಲಿಂಗಕ್ಕೆ ಶಾಂತ್ಯತೀತ ಕಳೆ.
ಅ ಕಳೆಗೆ ಶ್ರೋತ್ರೇಂದ್ರಿಯವೇ ಮುಖ; ಆ ಮುಖಕ್ಕೆ
ಸುಶಬ್ದ ದ್ರವ್ಯಂಗಳನು ರೂಪು ರುಚಿ ತೃಪ್ತಿಯನರಿದು
ಆನಂದ ಭಕ್ತಿಯಿಂದರ್ಪಿಸಿ, ಆ ಸುಶಬ್ದ ಪ್ರಸಾದವ ಭೋಗಿಸಿ
ಸುಖಿಸುತ್ತಿಹನು ಕೂಡಲ ಚೆನ್ನಸಂಗಾ ನಿಮ್ಮ ಶರಣ."

ಶರಣ ನುಡಿದದ್ದು ಶಬ್ದದ್ರವ್ಯವಲ್ಲ; ಪದಾರ್ಥವಲ್ಲ. ಶಬ್ದ ಸೂಚಕ ಅವಕಿಲ್ಲ. ಆತನ ಶಬ್ದ ಅದು ಸುಶಬ್ದ; ಅದು ಪ್ರಸಾದ. ಏಕೆಂದರೆ ಶರಣನಿಗೆ ತನುವಿಲ್ಲ, ಮನವಿಲ್ಲ. ವಾಗಾದಿ ಇಂದ್ರಿಯ ಭಾವವೂ ಇಲ್ಲ. ಆತ ದೇಹೇಂದ್ರಿಯ ಮನ ಪ್ರಾಣಜ್ಞಾನಗಳ ಸೂತಕದಿಂದ ದೂರಾಗಿರುತ್ತಾನೆ. ಮಾತಿನ ಮಥನಕ್ಕೆ ಸಿಲುಕನು. ಅನುಪಮ ಸ್ವರ ಸಂಪತ್ತಿನಿಂದ ಸಂಪನ್ನನಾಗಿರುತ್ತಾನೆ. ಗೆಲುವಿನ ಗುರಿಯಿಂದ ನುಡಿಯನು. ಮರವೆಯ ಮಾತುಗಳನ್ನಾಡನು ಅಸಹಜವನ್ನು ಆಡನು. ಲಿಂಗ ಸಾಕ್ಷಿಯಾಗಿ ಲಿಂಗದಲ್ಲಿ ನುಡಿ ನಿಷ್ಪತ್ತಿಗೊಂಡು ನುಡಿಯುವನು. ಸ್ವಾನುಭವದಿಂದ ನುಡಿವ ಆತನ ನುಡಿಗಳೆಲ್ಲ ಪರತತ್ತ್ವವಾಗಿರುತ್ತವೆ. ಶರಣನ ಮಾತಿನಲ್ಲಿ ಶಬುದದಲ್ಲಿ ಮಾಯೆ

ಗಿಂಬಿಲ್ಲ. ನುಡಿಯು ಹಂಗಿಗನಲ್ಲ. ನುಡಿಯಲ್ಲಿ ಕಂದುಕಲೆ ಯಿರುವುದಿಲ್ಲ. ಶರಣ ಶಬ್ದ ಸಂದಣಿಗೆ ಸಿಲುಕ ಆತ ಮಾತನಾಡಿ ಮೌನಿ. ನುಡಿದು ನಿಶ್ಶಬ್ದ. ಆತನ ಶಬುದ ಮಾದು ಮೊಳಕೆಯಿಲ್ಲದದಾಗಿರುತ್ತದೆ. ಅದು ಭವಕ್ಕೆ ಬೀಜವಾಗಿರದು.

"ಮಾತೆಂಬುದು ಜ್ಯೋತಿರ್ಲಿಂಗ;
ಸ್ವಯವೆಂಬುದು ಪರತತ್ತ್ವ.
ತಾಲೋಷ್ಠ ಸಂಪುಟವೆಂಬುದು ನಾದಬಿಂದು ಕಳಾತೀತ.
ಗುಹೇಶ್ವರನ ಶರಣರು ನುಡಿದು ಸೂತಕಿಗಳಲ್ಲ."

ಶರಣನ ಮಾತು ಮಂತ್ರವಾಗಿರುತ್ತದೆ; ಜ್ಯೋತಿರ್ಲಿಂಗವಾಗಿರುತ್ತದೆ. ಅದರಿಂದಾಗಿ ಅವನಿಗೆ ನುಡಿಯ ಸೂತಕವಿಲ್ಲ.

ನುಡಿ ನಡೆ ನೋಟ ಇವು ಜಾಗ್ರದವಸ್ಥೆಯ ಕುರುಹುಗಳು; ಇವಿರುವಲ್ಲಿ ಅವಸ್ಥೆಗಳಿರುತ್ತವೆ. ಅವಸ್ಥಾತೀತತತ್ವ ಬರಬೇಕಾದರೆ ನುಡಿ ನಡೆ ನೋಟಗಳು ನಿಲ್ಲಬೇಕು; ನಿಷ್ಪತ್ತಿಗೊಳ್ಳಬೇಕು. ನುಡಿ-ನಡೆಗಳು ಅಪರಗಳು. ಪ
ದಿಂದೀಚಿನವು. ಜಾಗ್ರತ್ತಿನಲ್ಲಿ ವೈಖರೀ, ಸ್ವಪ್ನದಲ್ಲಿ ಮಧ್ಯಮೆ, ಸುಷು
ಯಲ್ಲಿ ಪಶ್ಯಂತೀ ಇರುತ್ತವೆ. ತುರ್ಯದಲ್ಲಿ ಪರಾವಾಣಿಯಿರುತ್ತದೆ. ತುಯ
ನಾದ ಶರಣನದು ಪರಾವಾಣಿ. ಆತನ ವೈಖರೀಯೂ ಪರಾವಾಣಿ
ಸ್ವರೂಪವನ್ನು ತಳೆದಿರುತ್ತದೆ.

ಕಣ್ಣು, ಕಂಠ, ಹೃದಯ ಇವು ಕ್ರಮವಾಗಿ ಜಾಗ್ರತ್, ಸ್ವಪ್ನ, ಸುಷು
ಸ್ಥಾನಗಳಾಗಿವೆ. ಶರಣನು ಇವನ್ನು ಮೀರಿ ಮುಂದುವರಿದಿರುತ್ತಾನೆ ಅಂತೆಯೇ ಆತನಲ್ಲಿ ಅನುಪಮ ಸ್ವರವಾದ ಪರಾವಾಣಿ ಅಳವಟ್ಟಿರುತ್ತದೆ. ಶರಣ ಶ್ರವಣ-ಮನನ-ಮುಗ್ಧ ಭಾವ ರೂಪ ನಿಧಿಧ್ಯಾಸಗಳನ್ನು ದಾಟಿ ಆಚೆ ಸಾಗಿರುತ್ತಾನೆ. ಏಕೆಂದರೆ ಶ್ರವಣ ಜಾಗ್ರದವಸ್ಥೆಯನ್ನು ಮನನ ಸ್ವಪ್ನಾವಸ್ಥೆಯನ್ನು, ನಿಧಿಧ್ಯಾಸ ನಿದ್ರಾವಸ್ಥೆಯನ್ನು ಹೋಲುತ್ತವೆ. ಇದರಿಂದಾಗಿ ಇವುಗಳಿಂದಾಚೆಯಿರುವ ಸಹಜಾವಸ್ಥೆಯಲ್ಲಿ ಶಿವಶರಣನಿರುತ್ತಾನೆ. ವೃತ್ತಿಗೆ ಮೂಲವಾದ ಅಂಗ ಪ್ರಾಣಗಳು ಶರಣನಲ್ಲಿ ನಿಷ್ಪತ್ತಿಗೊಂಡಿರುತ್ತವೆ. ಉರಿ

ಯುಂಡ ಕಪ್ಪುರದಂತಿರುತ್ತವೆ. ಬೆಂದ ನುಲಿಯಂತೆ ತೋರಿದರೂ ಕುರುಹಿಲ್ಲ. ಕುರುಹಿದ್ದಂತೆ ಕಂಡರೂ ಕ್ರಿಯೆಯಿಲ್ಲ. ಅಂತೆಯೇ ಶರಣನಲ್ಲಿ ನುಡಿ ನಡೆ ನೋಟಗಳಿದ್ದರೂ ಇವುಗಳಿಂದಾಗುವ ಫಲಗಳಿಲ್ಲ. ಫಲಗಳಿದ್ದರೂ ಫಲಗಳನ್ನು ಅನುಭವಿಸುವ ಸಾಧನ ಸಾಮುಗ್ರಿಗಳಾದ ಅಂಗ ಮನ ಪ್ರಾಣಗಳಿರುವುದಿಲ್ಲ. ಫಲಾಶೆ ಮುನ್ನವೆ ಇರುವುದಿಲ್ಲ. ಒಟ್ಟಿನಲ್ಲಿ ಶಿವಶರಣನ ಶಬ್ದಸಂದೋಹ ಮಾದ ಹಣ್ಣು; ನಿಷ್ಪತ್ತಿಗೊಂಡ ಶಬ್ದಬ್ರಹ್ಮ; ಅಥವಾ ಜ್ಯೋತಿರ್ಲಿಂಗ.

ಮಾತಿಗೆ ನಿಲುಕದ ಪರತತ್ತ್ವವನ್ನು ಮಾತಿಗೆ ನಿಲುಕಿಸುತ್ತಾನೆ ಶಿವಶರಣ. ಮನಕ್ಕೆ ಬರಿಸುತ್ತಾನೆ ಶಿವಶರಣ.

‘ಹೃದಯ ಸ್ಥಾನದಲ್ಲಿ ಬೆಳೆದ ಚಿನ್ನಾದವೇ ಪ್ರಣವವು. ಈ ಪ್ರಣವವೇ ಮೂಲ ಮಾಗಿ ಪಂಚಾಕ್ಷರಂಗಳೆಂಬ ಪಂಚ ಶಾಖೆಗಳಿಂದಲೂ ಪರ್ಣಫಲಂಗಳಿಂದಲೂ ಕೂಡಿದೆ ವೇದವೆಂಬ ಮಹಾವಟವೃಕ್ಷವು....’ ‘ಜಿಹ್ವಾ ವಿಷಯದಲಾಕಾಶವು ಶಬ್ದ ಕಾರಣ ಮಾಗಿಹುದು.’ ಎಂದು ಶರಣವಾಣಿ ಸಾರಿದೆ. ಶಬ್ದ ತನ್ಮಾತ್ರದಿಂದ ಆಕಾಶ, ಆಕಾಶದಿಂದ ಶ್ರೋತ್ರ ಜನಿಸುವವು. ಆ ಶ್ರೋತ್ರವು ಶ್ರವಣಕ್ಕೆ ಸಾಧನ. ಶಬ್ದಗ್ರಹಣಕ್ಕೆ ಸಾಧನ.

> ಶ್ರವಣ : ಇದು ಶ್ರೋತ್ರೇಂದ್ರಿಯ ಕಾರ್ಯ. ವಿಶುದ್ಧದಲ್ಲಿ ಅನಾಹತ ಶಬ್ದ ಶ್ರವಣ ಅಂತಃಕರಣ ಕಾರ್ಯ. ಪರಾವಾಣಿಯ ಶ್ರವಣ ಜ್ಞಾನಾಂತಃಕರಣಕ್ಕೆ ಉಂಟಾಗುತ್ತದೆ. ಶ್ರವಣ ಸ್ಥೂಲ ಸೂಕ್ಷ್ಮ ಕಾರಣವೆಂದು ಮೂರು ಬಗೆ. ಶ್ರೋತ್ರೇಂದ್ರಿಯ ಶ್ರವಣ ಸ್ಥೂಲ, ವಿಶುದ್ಧ ಚಕ್ರದೊಳಗಿನ ಶ್ರವಣ ಸೂಕ್ಷ್ಮ, ಜ್ಞಾನದಿಂದಾಗುವುದು ಕಾರಣ. ಕ್ರಮವಾಗಿ ಶಬ್ದ ಅರ್ಥ ಭಾವಗಳ ಶ್ರವಣ ಸಂಭವಿಸುತ್ತದೆ.

ಶರಣ ಶಬ್ದವನ್ನು ಕಲಿತು ಉಲಿಯುವವನಲ್ಲ. ಮಾತಿನ ಮಂಟಪವನ್ನು ಮಾತ್ರ ಕಟ್ಟುವವನಲ್ಲ. ಬರೀ ಶಬ್ದಶಾಸ್ತ್ರದ ಜಾಲಕ್ಕೆ ಸಿಲುಕಿಕೊಂಡಿರುವವನಲ್ಲ. ತರ್ಕದಲ್ಲಿ ತೊಳಲುವವನಲ್ಲ. ಕೇವಲ ಜ್ಞಾನದಿಂದ ತೃಪ್ತನಲ್ಲ. ಶ್ರವಣ ಮನನಗಳೊಡನೆ ಕ್ರಿಯಾಚರಣೆಯಲ್ಲಿ ಶೀಲ ಸಂಪಾದನೆಯಲ್ಲಿ ನಿರತನಾಗಿ ಸ್ವಾನುಭವದ ಶ್ರೀಮಂತಿಕೆಯಲ್ಲಿದ್ದು ಮನ ಘನವಾದಾತನು; ಕಾಯ ಶಿವಕಾಯವಾದಾತನು. ಜ್ಞಾನಸಕೀಯವಾದಾತನು.

ತನ್ನ ಶಬ್ದವನ್ನು ತಾನೇ ಶ್ರವಣ ಮಾಡಿ ಮನನ ಮಾಡುವಾತವನು; ಕ್ರಿಯಾಚರಣೆಗೆ ತರುವಾತವನು. ಶರಣನ ಶ್ರವಣ ಕ್ರಿಯಾಕರಣವಾಗಿ ಪರಿಣಮಿಸುತ್ತದೆ ಪರಶಿವನಿಷ್ಠವಾಗಿ ಪರಿಣಮಿಸುತ್ತದೆ. "ಶಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ" ಶ್ರುತಿಯಲ್ಲಿ ಪ್ರತಿಪಾದ್ಯ ಪರವಸ್ತುವನ್ನು ಕೇಳಿ ತಿಳಿದು ತನ್ನೊಳಗೆ ಅಳವಡಿಸಿಕೊಳ್ಳುವಾತನು. ಇಲ್ಲಿ ಬಳಸಿದ 'ಕೇಳಿ' ಎಂಬ ಪದ ಉಭಯ ವಾಚಿಯಾದುದು. ಬಾಯಿ ಕಿವಿಗಳೆರಡರಿಂದ ಕೇಳಿಯೆಂದರ್ಥ. ತ್ರಿಕರಣಗಳಿಂದ ಕೇಳಿ ಪರತತ್ತ್ವಾನಂದವನ್ನು ಪಡೆಯುವ ಶಕ್ತಿಯುಳ್ಳವನೇ ಶರಣ.

"ಏತಚ್ಛ್ರುತ್ವಾ ಸಂಪರಿಗೃಹ್ಯ ಮರ್ತ್ಯಃ
ಪ್ರವೃಹ್ಯ ಧರ್ಮ್ಯಮಣುಮೇತಮಾಪ್ಯ ।
ಸ ಮೋದತೇ ಮೋದನೀಯಂ ಹಿ ಲಬ್ಧ್ವಾ
ವಿವೃತಂ ಸದ್ಮ ನಚಿಕೇತಸಂ ಮನ್ಯೇ ॥"

—ಕಠೋಪನಿಷತ್

ಧರ್ಮೋಪದೇಶವನ್ನು ಮುಮ್ಮೊದಲು ಅನುಭವವುಳ್ಳವರಿಂದ ಅತ್ಯಂತ ಶ್ರದ್ಧೆಯಿಂದ ಕೇಳಬೇಕು. ಕೇಳಿದ್ದನ್ನು ಮನದಲ್ಲಿ ಮನನ ಮಾಡಬೇಕು. ಮನನ ಮಾಡಿದ್ದನ್ನು ಬುದ್ಧಿ ಭಾವಗಳಲ್ಲಿ ಸ್ಥಿರಗೊಳಿಸಿಕೊಳ್ಳಬೇಕು; ಕ್ರಿಯಾಚರಣೆಯಲ್ಲಿ ತಂದುಕೊಳ್ಳಬೇಕು. ಈ ಬಗೆಯ ತ್ರಿಕರಣ ಸಾಧನೆಯಿಂದ ಅತ್ಯಂತ ಸೂಕ್ಷ್ಮವಾದ ಆ ಶಿವತ್ವ ಪ್ರಾಪ್ತಿಯುಂಟಾಗುತ್ತದೆ; ಶಿವಾನುಭವ ಸಂಪತ್ತು ಸಮನಿಸುತ್ತದೆ. ಆನಂದಸ್ವರೂಪನಾದ ಆ ಪರಮಾತ್ಮನನ್ನು ಪಡೆದು ಅಚ್ಚಳಿಯದೆ ಆನಂದಿಸುವ ಸೌಭಾಗ್ಯವುಂಟಾಗುತ್ತದೆ. ಆ ಪರಮಾನಂದದಲ್ಲಿಯೇ ಮಗ್ನವಾಗಿರುವ ಪುಣ್ಯಪ್ರಾಪ್ತಿಯಾಗುತ್ತದೆ.

ಈ ಕಠಶ್ರುತಿಯ ಮಂತ್ರವು ಶರಣನ ಶ್ರವಣ ಸಾಧನೆಯ ವೈಶಿಷ್ಟ್ಯಪೂರ್ಣ ಸ್ವಭಾವವನ್ನು ವಿವರಿಸಿದೆ.

ಆ ಪರಶಿವತತ್ತ್ವವು ಬರೀ ಕಿವಿಯಿಂದ ಕೇಳಿದರೆ, ಬರೀ ಬಾಯಿಂದ ಹೇಳಿದರೆ ಕೇಳಿದರೆ ಲಭಿಸುವುದಲ್ಲ. ಅದರ ಪ್ರಾಪ್ತಿಗೆ ತ್ರಿಕರಣ ಶ್ರವಣ ಅತ್ಯಗತ್ಯ.

ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ
ಶೃಣ್ವಂತೋಽಪಿ ಬಹವೋ ಯಂ ನ ವಿದ್ಯುಃ ।
ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾಽಽ
ಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ ॥"

—ಕಠೋಪನಿಷತ್

ಶಿವ ಸಾಕ್ಷಾತ್ಕಾರ ಸಾಮಾನ್ಯವಾದ ಮಾತಲ್ಲ. ಆದರೂ ಅದನ್ನು ಸಾಕ್ಷಾತ್ಕರಿಸಲು ಮಾನವನಿಗೆ ಮಾತ್ರ ಸಾಧ್ಯವಿದೆ. ಶಿವಚೈತನ್ಯ ಮಾನವರಲ್ಲಿ ಮಿಗಿಲಾಗಿರುತ್ತದೆ. ಅದರ ಸಾಕ್ಷಾತ್ಕಾರದಿಂದ ಆತ್ಮಕಲ್ಯಾಣವುಂಟಾಗುತ್ತದೆ. ಸಾಕ್ಷಾತ್ಕಾರ ಸಾಧನಗಳಲ್ಲಿ ಶ್ರವಣ ಒಂದು. ಒಂದಾದರೂ ಇದೇ ಪೂರ್ಣವಲ್ಲ. ಶ್ರವಣವೇ ಪೂರ್ಣವಾಗಬೇಕಾದರೆ ತ್ರಿಕರಣ ಶ್ರವಣ ಬೇಕು. ತ್ರಿಕರಣ ಶುದ್ಧಿ ಬೇಕು; ತ್ರಿಕರಣ ಶ್ರದ್ಧೆ ಬೇಕು. ಕ್ರಿಯಾಕುಶಲತೆ ಬೇಕು. ಬರೀ ಕಿವಿಯಿಂದ ಕೇಳಿದರೆ, ಬರೀ ಬಾಯಿಂದ ಹೇಳಿದರೆ ಅದರ ಸಾಕ್ಷಾತ್ಕಾರವಾಗದು; ಜೀವನ ಸಫಲವಾಗದು. ಆತ್ಮದರ್ಶನ, ಆತ್ಮಾನುಭವ, ಆತ್ಮಾನಂದಗಳು ಲಭಿಸಬೇಕಾದರೆ ಶ್ರವಣ–ಮನನ-ಆಚರಣಾನುಭವಗಳು ಬೇಕೇ ಬೇಕು. ಇದರಿಂದ ಶ್ರವಣ ಸಿದ್ಧಿಯುಂಟಾಗುತ್ತದೆ. ದೂರಶ್ರವಣ, ಅಶರೀರವಾಣಿ ಶ್ರವಣಗಳು ಸಂಭವಿಸುತ್ತವೆ.

ಸಂಸ್ಕಾರರಹಿತ ಶ್ರವಣದಿಂದ ಶಿವಜ್ಞಾನವುಂಟಾಗದು; ಶಿವತ್ವ ಪ್ರಾಪ್ತಿಯುಂಟಾಗದು. ಶರಣನ ಶ್ರವಣ ಸಂಸ್ಕಾರದಿಂದ ಕೂಡಿರುತ್ತದೆ; ತ್ರಿಕರಣಗಳಿಂದ ಕೂಡಿರುತ್ತದೆ. ಆದ್ದರಿಂದ ಶರಣನು ತಾನು ಕೇಳಿದ ಹೇಳಿದ ಶಬ್ದಗಳ ಶಕ್ತಿವೃತ್ತಿಯನ್ನು ಲಕ್ಷಣ ವೃತ್ತಿಯನ್ನು ಸಫಲಗೊಳಿಸುತ್ತಾನೆ. ತಾನು ಅನುಷ್ಠಿಸುವ ಮಂತ್ರದ ವಾಚ್ಯಾರ್ಥ ಲಕ್ಷ್ಯಾರ್ಥಗಳೆರಡನ್ನು ಸಾರ್ಥಕಗೊಳಿಸುತ್ತಾನೆ; ಅನ್ವರ್ಥಕವಾಗಿಸುತ್ತಾನೆ.

ಶರಣ ನಾದಾನುಸಂಧಾನಿ; ಶಿವಸುಯ್ದಾನಿ. ಪ್ರಾಸಾದಿಕ ನಾದಾನುಸಂಧಾನಿ. ಚಿನ್ನಾದ ಸಂವಿಧಾನಿ. ಇದರಿಂದಾಗಿ ಆತನ ಶ್ರೋತ್ರ ಶ್ರವಣಗಳು ಸಾರ್ಥಕ. ಶಿವನಾದವನ್ನಿರಿಸಿಕೊಂಡ ಆತನ ವಿಶುದ್ಧಿಚಕ್ರ ಸಾರ್ಥಕ. ಅದು ಪ್ರಾಸಾದಿಕತೆಯಿಂದ ಸಂಭೃತ. ಅದರಿಂದಾಗಿ ಶರಣನ ಕಂಠ ಶ್ರೀ ಸುಶ್ರಾವ್ಯ.

ಆತನ ವೈಖರೀ ವಚನ ಸುಶ್ರಾವ್ಯ; ಸುಸೇವ್ಯ. ಶಿವಶರಣನ ವಚನದಲ್ಲಿ ಸಂಭೂತಿಯಿರುತ್ತದೆ; ಸ್ವಾನುಭೂತಿಯಿರುತ್ತದೆ. ಅದರಿಂದಾಗಿ ಶರಣವಚನ ಸ್ರಾವ್ಯ; ಭಾವ್ಯ.

ಶರಣ ಶ್ರೋತಾ, ಶ್ರಾವಯತಾ. ಅನುಭಾವಿಯು ಅನುಭವವನ್ನು ತಾನು ಕೇಳುತ್ತಾನೆ. ತನ್ನ ಅನುಭವವನ್ನು ಉಳಿದವರಿಗೆ ಕೇಳಿಸುತ್ತಾನೆ. ಈಶನ ಸ್ವರೂಪ ಪ್ರಸಾದಲಿಂಗಾರಾಧನೆಯುಂಟಾಗುತ್ತದೆ. ಸ್ತೋತ್ರಪ್ರಿಯವಾಗಿರುತ್ತದೆ ಪ್ರಸಾದಲಿಂಗ. ಪ್ರಣವಾರ್ಥವೂ ಸ್ತುತಿಪರವಾಗಿದೆ.

> “ಕರ್ಣದಲ್ಲಿ ಲಯಮಂ ಹೊಂದಿ, ಜಿಹ್ವೆಯಲ್ಲಿ ಸೃಷ್ಟಿಯಪ್ಪ ನಾದವೇ ಸೂಕ್ಷ್ಮ ಮನೋರೂಪಮಾಗಿಹುದು. ಜಿಹ್ವೆಯಲ್ಲಿ ಲಯವನ್ನು ಹೊಂದಿ ಗುಹ್ಯದಲ್ಲಿ ಸೃಷ್ಟಿಯಪ್ಪ ಬಿಂದುವೇ ಸ್ಥೂಲ ಶರೀರ ರೂಪಮಾಗಿಹುದು. ಬಿಂದುವಿನ ಲಯಕ್ಕೂ, ನಾದದ ಸೃಷ್ಟಿಗೂ ಜಿಹ್ವೆಯೇ ಕಾರಣ ಕಳಾರೂಪಮಾಗಿಹುದು. ನಾದದಲ್ಲಿ ಕೂಡಿ ಭಾವಲಿಂಗದಲ್ಲಿ ಪ್ರಕಾಶಮಾಗಿ ಬ್ರಹ್ಮಯೋನಿಯಲ್ಲಿ ಬಿಟ್ಟ ದಿವ್ಯ ತೇಜಸ್ಸೇ ಶರೀರಮಾಗಿ ತೋರುತ್ತಿರ್ಪ್ಪದೇ ಪರಮನು. ಬಿಂದುವಿನಲ್ಲಿ ಕೂಡಿ ಲಿಂಗಮುಖದಲ್ಲಿ ಪ್ರಕಾಶಮಾಗಿ ಕರ್ಮಯೋನಿಯಲ್ಲಿ ಬಿಟ್ಟ ತೇಜಸ್ಸೇ ಶರೀರಮಾಗಿ ತೋರುವನೇ ಜೀವಾತ್ಮನು. ಇಂತಪ್ಪ ಬಿಂದುವನ್ನು ಕರ್ಮಕಾರಣಮಾದ ಸ್ವಸ್ತ್ರೀ ಗರ್ಭದಲ್ಲಿ ಬಿಟ್ಟು, ಆ ಸತ್ಸಂತಾನದಿಂದ ಸ್ವರ್ಗಾದಿಭೋಗಂಗಳಂ ಪಡೆವಂದದಿ, ಜ್ಞಾನ ಕಾರಣಮಪ್ಪ ಪುರುಷನು ಗರ್ಭದಲ್ಲಿ ವಿವೇಕವೆಂಬ ಪುತ್ರನಂ ಪಡೆದು, ಅವನಿಂದ ಮೋಕ್ಷಸಾಧನೆಯ ಮಾಡಿಕೊಂಬನೇ ಪರಮನು, ಇಂತಪ್ಪ ಸೂಕ್ಷ್ಮ ಶರೀರಿಯಾದ ನಾದ ಮಧ್ಯದಲ್ಲಿರ್ಪ ನಿನಗೂ, ಸ್ಥೂಲ ಶರೀರಿಯಾದ ಬಿಂದು ಮಧ್ಯದಲ್ಲಿರ್ಪ ನನಗೂ ಜಿಹ್ವಾರೂಪಮಪ್ಪ ಮಹಾಗುರುವಿನ ಕರುಣದಿಂ ಸಂಬಂಧಮಾಗಿ ಪಾಣಿಗ್ರಹಣಮು ಮಾಡಿಕೊಟ್ಟ ಬಳಿಕ ನೀನೇ ಪತಿ, ನಾನೇ ಸತಿಯಾಗಿ, ನಿನ್ನ ಪರಮಾನಂದ ರತಿ ಸುಖದಲ್ಲಿ ನಾನು ಲೀನನಾದಲ್ಲಿ ನನ್ನ ಸಂಬಂಧಮಪ್ಪ ಸ್ಥೂಲದೇಹದಲ್ಲಿ, ನಿನ್ನ ಸಂಬಂಧಮಪ್ಪ ಸೂಕ್ಷ್ಮದಲ್ಲಿ ಲೀನಮಪ್ಪುದೇ

ಕೈವಲ್ಯ ಕಾಣಾ ಮಹಾಘನ ದೊಡ್ಡ ದೇಶಿಕಾರ್ಯ ಗುರು ಪ್ರಭುವೇ"—ವಚನ ಶಾಸ್ತ್ರಸಾರ, ಭಾಗ-೨.

ನಾದಲೀಲೆಗೆ ಶಬ್ದ ಪರಿಣಾಮಕ್ಕೆ ಶರಣ ಜೀವನಕ್ಕೆ ಈ ವಚನ ಸಾಕ್ಷಿಯಾಗಿದೆ. ಸುಂದರೋಪಮಾನದಿಂದ ಭಾವ ಪೂರ್ಣವಾಗಿ ಬಿತ್ತರಿಸಿದೆ. ಶಬ್ದ ಪೃಷ್ಟಿಗೆ ಶಬ್ದ ಸಂಸಾರಕ್ಕೆ ಶಬ್ದ ಸುಖಕ್ಕೆ ಇದಕ್ಕಿಂತ ಬೇರೆ ಪ್ರಮಾಣ ಬೇಕಿಲ್ಲ ನಾದಮಯ ಶಿವನಿಂದ ಏನಾಗದು ? ಯಾವುದು ಹೊರಗು ?

ಜ್ಞಾನಹಸ್ತ-ಧಾರಣ ಪ್ರಶಸ್ತ

ಶಿವಾದ್ವೈತ ಸಿದ್ಧಾಂತದಲ್ಲಿ ಜ್ಞಾನ ಒಂದು ಅಂತಃಕರಣ. ಈ ಮತದಲ್ಲಿ ಅಂತಃಕರಣ ಆರು. ಚಿತ್ತ, ಬುದ್ಧಿ, ಅಹಂಕಾರ, ಮನ, ಜ್ಞಾನ, ಭಾವ ಇವು ಆರು ಅಂತಃಕರಣಗಳು. ಇವನ್ನೇ ಹಸ್ತಗಳೆಂದು ಶಿವಾದ್ವೈತಿಗಳು ಹೇಳುತ್ತಾರೆ. ಇವುಗಳಲ್ಲಿ ಜ್ಞಾನಹಸ್ತ ಅಯ್ದನೆಯದು. ಶರಣ ಸ್ಥಲಕ್ಕೆ ಸಂಬಂಧಿಸಿದುದು. ಸುಶಬ್ದ ಪ್ರಸಾದವನ್ನು ಈ ಜ್ಞಾನಹಸ್ತದಿಂದ ಆನಂದ ಭಕ್ತಿಯಿಂದ ಪರಾಶಕ್ತಿಯುಕ್ತ ಪ್ರಸಾದಲಿಂಗಕ್ಕೆ ಶರಣನು ಸಮರ್ಪಿಸುತ್ತಾನೆ. ಶ್ರೋತ್ರಮುಖದಿಂದ ಪ್ರಸಾದಲಿಂಗವು ಆ ಪ್ರಸಾದವನ್ನು ಸ್ವೀಕರಿಸುತ್ತದೆ.

ಜ್ಞಾನವೆಂದರೆ ಸ್ವಸ್ವರೂಪ ನಿಶ್ಚಯ. ಭಯ ಮೋಹಾದಿಗಳ ನಿವೃತ್ತಿ. ಗುಣತ್ರಯಾತ್ಮಕವಾದ ಅವಸ್ಥಾತ್ರಯ ಪರಿಶುದ್ಧಿ. ಅರಿಕೆಯಿಂದ ನಿರ್ವಿಕಲ್ಪ ಚೈತನ್ಯದ ದರ್ಶನವಾಗುತ್ತದೆ. ಅಜ್ಞಾನ ಸಂಶಯ ವಿಕಲ್ಪಗಳಿಂದ ಆತ್ಮದರ್ಶನವಾಗದು. ಅಜ್ಞಾನ ಅದೊಂದು ಗಾಢಾಂಧಕಾರ. ಸಂಶಯ ಅದೊಂದು ಅರೆ ಇರುಳಲಿ. ವಿಕಲ್ಪ ಅದೊಂದು ವಸ್ತುವಿಲ್ಲದ ಶಬ್ದಜ್ಞಾನ; ಅರ್ಥವಿಲ್ಲದ ಜ್ಞಾನ; ಅಥವಾ ಅಯಥಾರ್ಥ ಜ್ಞಾನ ಗಗನ ಕುಸುಮ ಜ್ಞಾನ. ವಿಕಲ್ಪ ವಿಪರ್ಯಯಾದಿಗಳಿಂದ ರಾಗ ದ್ವೇಷ ಶೋಕ ಭಯ ಮೋಹ ವೃತ್ತಿಗಳು ಹುಟ್ಟುತ್ತವೆ. ಇವು ತೊಲಗಬೇಕಾದರೆ ಆತ್ಮಜ್ಞಾನ ಅತ್ಯಾವಶ್ಯಕ. 'ಜ್ಞಾನಂ ಜಾನಾತಿ ತು ನಿತ್ಯಂ' ಎಂದಿದೆ ಶಿವಾನುಭವ ಸೂತ್ರ.

"ಚಿತ್ತೇ ಚಲತಿ ಸಂಸಾರೋ ನಿಶ್ಚಲೇ ಮೋಕ್ಷ ಏವ ಚ ।
ತಸ್ಮಾಚೈತ್ತಂ ಸ್ಥಿರಂ ಕುರ್ಯಾತ್ಪ್ರಜ್ಞಯಾ ಪರಯಾ ಬುಧಃ ॥"

—ದೇವೀಕಾಲೋತ್ತರಾಗಮ

ಬಂಧ ಮೋಕ್ಷಗಳಿಗೆ ಮನಸ್ಸೇ ಕಾರಣ. ಚಿತ್ತ ಚಾಂಚಲ್ಯವೆ ಬಂಧಕ್ಕೆ ಕಾರಣ. ಪರಾ ಪ್ರಜ್ಞೆಯಿಂದ ಚಿತ್ತವನ್ನು ನಿಶ್ಚಲಗೊಳಿಸಬೇಕು. ನಿಶ್ಚಲತೆಯೇ ಮುಕ್ತಿ.

ಚಿತ್ತ ಚಾಂಚಲ್ಯಕ್ಕೆ ಚಿತ್ತವೃತ್ತಿಗಳೇ ಕಾರಣ. ವೃತ್ತಿಗಳು ಎರಡು ಬಗೆ. ಧ್ಯೇಯಕ್ಕೆ ಅನುಕೂಲವೃತ್ತಿ, ಪ್ರತಿಕೂಲ ವೃತ್ತಿ ಎಂದಿರುತ್ತವೆ. ಪ್ರತಿಕೂಲ ವೃತ್ತಿಗಳೆಂದರೆ ಕ್ಷಿಪ್ತ ಮೂಢ ವಿಪರ್ಯಯ ವಿಕಲ್ಪಾದಿಗಳು; ಮತ್ತು ಅವಿದ್ಯಾ ಅಸ್ಮಿತಾ ರಾಗ ದ್ವೇಷ ಅಭಿನಿವೇಶಗಳು. ಇವು ರಜೋಗುಣ ತಮೋಗುಣಗಳಿಂದ ಅಂತಃಕರಣಗಳಲ್ಲಿ ಉಂಟಾಗುತ್ತವೆ. ಸತ್ವಗುಣದಿಂದ ಅನುಕೂಲ ವೃತ್ತಿಗಳು ಉಂಟಾಗುತ್ತವೆ. ಅವನ್ನೇ ನಿವೃತ್ತಿಯೆಂದು ಹೇಳುವುದುಂಟು ಪ್ರತಿಕೂಲ ವೃತ್ತಿಯಿಂದ ಬಹಿರ್ಮುಖ. ಅನುಕೂಲವೃತ್ತಿಯಿಂದ ಅಂತರ್ಮುಖವುಂಟಾಗುತ್ತವೆ.

ಪ್ರತಿಕೂಲ ವೃತ್ತಿಯಿಂದ ಅಂತಃಕರಣಗಳು ವಿಕಾರ ಪರಿಣಾಮಕ್ಕೆ ಒಳಗಾಗುತ್ತವೆ. ಸ್ವರೂಪ ವಿಸ್ಮೃತಿಗೆ ಒಳಗಾಗುತ್ತವೆ. ಅಂದರೆ ಅವಿದ್ಯಾದಿಗಳು ಆವಿರ್ಭವಿಸುತ್ತವೆ, ಆವರಿಸುತ್ತವೆ. ಆವರಿಸಿ ಆ ಪರಶಿವವಸ್ತುವನ್ನು ಮರೆ ಮಾಡುತ್ತವೆ. ಇದರಿಂದಾಗಿ ಅದು ಇಲ್ಲ, ಅದು ತೋರುತ್ತಿಲ್ಲ; ಅದನು ಅರಿಯಲಿಲ್ಲ ಎಂದು ಹೇಳುವಂತಾಗುತ್ತದೆ. ಅನುಕೂಲವಾದ ವಸ್ತು ಪ್ರಕಾಶಕ ವೃತ್ತಿಯಿಲ್ಲದಂತಾಗುತ್ತದೆ. ಜ್ಞಾನಕ್ರಿಯೆ ಅನುಭವಗಳು ವಸ್ತು ಪ್ರಕಾಶಕವಾದ ಅನುಕೂಲ ವೃತ್ತಿಗಳು.

ಬಹಿರ್ಮುಖಕ್ಕೆ ಕಾರಣಗಳಾದ ತಮೋಗುಣ ರಜೋಗುಣಗಳು ತೊಲಗಬೇಕಾದರೆ ಜ್ಞಾನಕ್ರಿಯಾನುಭವಗಳು ತನಗಳವಡಬೇಕು ಇವುಗಳಿಂದ ತಮಸ್ಸು ತೊಲಗಿ ತತ್ತ್ವಸ್ವರೂಪ ತೊಳಗುತ್ತದೆ. ಒಳಗೆ ವಸ್ತು ಪ್ರಕಾಶವಾಗಲು ಅಂತಃಕರಣಗಳು ಹೊರಗೆ ಸೂಸುವುದಿಲ್ಲ; ಹಲವಕ್ಕೆ ಹರಿದಾಡುವುದಿಲ್ಲ. ಅವಿಚಾರ ಅನಾಚಾರಗಳಿಗೆ ಒಳಗಾಗುವುದಿಲ್ಲ. ಭಯ ಮೋಹ ರಾಗ ದ್ವೇಷ ಶೋಕ ಲಜ್ಜೆಗಳಿಗೆ ಒಳಗಾಗುವುದಿಲ್ಲ. ಆತ್ಮೈಕಾಗ್ರತೆಯುಂಟಾಗುತ್ತದೆ. ಅದುವೇ ಶರಣನ ಧ್ಯೇಯ.

ಆತ್ಮೈಕಾಗ್ರತೆಯೇ ಲಿಂಗದ ಏಕಾಗ್ರತೆ. ಅದನ್ನು ಶರಣನು ತನ್ನ ಜ್ಞಾನಹಸ್ತದಲ್ಲಿ ಇರಿಸಿಕೊಂಡಿರುತ್ತಾನೆ. ಅದರಿಂದ ಪರಶಿವನ ಪ್ರಸಾದ

ಲಭಿಸುತ್ತದೆ. ಅದುವೇ ಪ್ರಸಾದಲಿಂಗವೆನಿಸುತ್ತದೆ. ಅದರಿಂದ ಶರಣನಿಗೆ ಅಪರೋಕ್ಷ ಜ್ಞಾನ ಲಭಿಸುತ್ತದೆ. ಅನನ್ಯ ಶ್ರದ್ಧೆಯುಂಟಾಗಿ ಪ್ರಸನ್ನ ಹೃದಯನಾಗುತ್ತಾನೆ. ಶರಣನ ಶ್ರೋತ್ರಾಂತಃಕರಣಗಳಿಗೆ ನಾದ ನಾದಾಶ್ರಯವಾದ ಪರಶಿವವಸ್ತುಗಳು ಪ್ರತ್ಯಕ್ಷವಾಗುತ್ತವೆ. 'ತದಾ ದ್ರಷ್ಟುಃ ಸ್ವರೂಪೇಽವಸ್ಥಾನಂ' ಎಂದಿರುವ ಯೋಗಸೂತ್ರದ ಅಭಿಪ್ರಾಯದಂತೆ ಶರಣನು ಸ್ವಸ್ವರೂಪದಲ್ಲಿ ನಿತ್ಯ ನಿರತನಾಗಿರುತ್ತಾನೆ. ಅಂದರೆ ನಿತ್ಯದಲ್ಲಿ ಲಿಂಗಜ್ಞಾನ, ಲಿಂಗಕ್ರಿಯೆ, ಲಿಂಗಾನುಭವಗಳಲ್ಲಿರುತ್ತಾನೆ; ಲಿಂಗಾನಂದದಲ್ಲಿ ಲೀನವಾಗಿರುತ್ತಾನೆ.

ಶರಣ ತನ್ನ ಜ್ಞಾನಹಸ್ತದ ಬಲದಿಂದ ಪ್ರಸಾದ ಪರಿಪೂರ್ಣ. ಆತನ ಅಂತಃಕರಣಗಳು ಅವಿಚಲ. ಆತನಿಗೆ ಯಾವ ಕ್ಲೇಶವಿರುವುದಿಲ್ಲ ಯಾರೊಡನೆ ದ್ವೇಷವಿರುವುದಿಲ್ಲ. ಮರಣ ಭಯವುಂಟಾಗುವುದಿಲ್ಲ. ಅವಿದ್ಯೆ ಅಸ್ಮಿತೆಗಳು ಆತನನ್ನು ಆವರಿಸುವುದಿಲ್ಲ; ಅಳುಕಿಸುವುದಿಲ್ಲ. ಸಂಶಯ ವಿಕಲ್ಪಾದಿಗಳು ಇರುವುದಿಲ್ಲ. ಆತನು ಸ್ವಪ್ರಕಾಶದಲ್ಲಿ ಸ್ವಸ್ಥನಾಗಿರುತ್ತಾನೆ. ಪ್ರಸಾದಲಿಂಗಾರಾಧನೆಯಲ್ಲಿ ಪ್ರಸನ್ನನಾಗಿರುತ್ತಾನೆ. ತನ್ನ ಜ್ಞಾನ ಹಸ್ತದಲ್ಲಿ ಪ್ರಸಾದಲಿಂಗವನ್ನು ಧಾರಣಮಾಡಿರುತ್ತಾನೆ.

ಶರಣನ ಅಂತಃಕರಣಗಳೆಲ್ಲ ಧಾರಣವಾಗಿರುತ್ತವೆ. ಪ್ರವೃತ್ತಿ ಮುಖದಲ್ಲಿ ಹರಿಯುದಂತಿರುತ್ತವೆ. ಆತನ ಅಂತಃಕರಣಗಳು ಧಾರಣಕ್ಕೆ ಯೋಗ್ಯವಾದ ಹಸ್ತಗಳು. ಸತ್ಯಸಾಧನಗಳು; ಪರಿಪಕ್ವ ಪದಾರ್ಥಗಳು, ಅವನ್ನು ಪ್ರಸಾದವನ್ನಾಗಿಸಿ ಧಾರಣಮಾಡುವುದೇ ಶರಣನ ದೃಕ್ಕ್ರಿಯೆ. ಪ್ರಸಾದಲಿಂಗಕ್ಕೆ ಅವನ್ನು ಅರ್ಪಿಸುವುದೇ ಆತನ ಜ್ಞಾನಾಚಾರ; ಧಾರಣಧರ್ಮ.

ಮನ ಪ್ರಾಣಗಳು ಲಿಂಗಧ್ಯಾನದಲ್ಲಿ ನಿರತವಾದ ಮೇಲೆ, ಲಿಂಗಧ್ಯಾನವು ಅಳವಟ್ಟ ಮೇಲೆ ಅವನ್ನು ಜ್ಞಾನದೊಡನೆ ಲಿಂಗದಲ್ಲಿ ಧಾರಣಮಾಡಬೇಕು. ಅಂದರೆ ನೆನಹು ನಿಂತು ಲಿಂಗಾನಂದದಲ್ಲಿ ತಲ್ಲೀನಗೊಳ್ಳಬೇಕು. ವಿಶುದ್ಧದಲ್ಲಿ ಮನ ಧಾರಣವಾದರೆ ನಾದಸಿದ್ಧಿಸುತ್ತದೆ. ಶ್ರೋತ್ರೇಂದ್ರಿಯದಿಂದಾದ ಶ್ರವಣ ನಿಧಿಧ್ಯಾಸಕ್ಕೇರುತ್ತದೆ. ಚಿನ್ನಾದಾನುಸಂಧಾನ ಸಫಲಿಸುತ್ತದೆ. ಮತ್ತು ಜ್ಞಾನ ಧಾರಣವಾಗದೆ ಪ್ರಸಾದಲಿಂಗ ಸಮನಿಸದು. ಮನಧಾರಣವಾದಂತೆ ವಿಶುದ್ಧಿಯಲ್ಲಿ ಜ್ಞಾನವೂ ಧಾರಣವಾಗಬೇಕು. ಆಗ ಅದು ಪ್ರಸಾದಲಿಂಗ

ಧಾರಣಕ್ಕೆ ಪ್ರಶಸ್ತವಾಗುತ್ತದೆ; ಪರಾಶಕ್ತಿ ಪ್ರತಿಷ್ಠಿತವಾಗುತ್ತದೆ. ಸರ್ವಸ್ವರಗಳ ಶುದ್ಧಿಯುಂಟಾಗುತ್ತದೆ; ಸಿದ್ಧಿಯುಂಟಾಗುತ್ತದೆ.

ಆಧಾರದಲ್ಲಿ ಚಿತ್ತ: ಸ್ವಾಧಿಷ್ಠಾನದಲ್ಲಿ ಬುದ್ಧಿ, ಮಣಿಪೂರಕದಲ್ಲಿ ಅಹಂಕಾರ, ಅನಾಹತದಲ್ಲಿ ಮನ–ಧಾರಣವಾದಂತೆ ವಿಶುದ್ಧಿಯಲ್ಲಿ ಜ್ಞಾನ ಧಾರಣವಾಗಬೇಕು ಅಕಾರಾದಿ ಸರ್ವಸ್ವರ ಶುದ್ಧಿಯುಂಟಾಗಿ ಜೀವಭಾವ ತೊಲಗುತ್ತದೆ. ಅಂಗನು ಲಿಂಗದಲ್ಲಿ ಲೀನನಾಗಿರುತ್ತಾನೆ. ಲಿಂಗತ್ವ ಸಿದ್ಧಿಗೆ ಸನ್ನಿಹಿತನಾಗಿರುತ್ತಾನೆ; ಪ್ರಸಾದಲಿಂಗಧಾರಣಕ್ಕೆ ಪ್ರಶಸ್ತನಾಗುತ್ತಾನೆ.

ಹದಿನಾರು ಸ್ವರಾಕ್ಷರ ಸ್ವರೂಪವಾಗಿದೆ ಪ್ರಸಾದಲಿಂಗ. ಅಂ–ಉಂ–ಓಂ ಸ್ವರಾಕ್ಷರ ಸ್ವರೂಪವಾಗಿದೆ ಪ್ರಣವ ಪ್ರಣವ ಸ್ವರೂಪವಾಗಿದೆ ಪ್ರಸಾದಲಿಂಗ. ಅದರ ಧಾರಣದಿಂದ ಮಹಾಜ್ಞಾನ ಸಿದ್ಧಿಸುತ್ತದೆ.

“ಸತ್ಯವೇ ಪರಮನು, ಜ್ಞಾನವೇ ಜೀವನು, ಆನಂದವೇ ಶರೀರವು. ಅದೆಂತೆಂದೊಡೆ, ಶರೀರಾದಿ ಸಕಲ ಪ್ರಪಂಚಕ್ಕೂ ಜ್ಞಾನವೇ ಮೂಲವಾಗಿರ್ಪುದು. ಆನಂದಮುಖದೊಳ್ ಬಿಂದು ಜನಿಸಿ, ಆ ಬಿಂದುವೇ ಪೃಥ್ವಿರೂಪದಲ್ಲಿ ಘನೀಭವಿಸಿ ಪಿಂಡಾಕಾರಮಾಗಿ ಶರೀರಮಪ್ಪಂತೆ, ಜ್ಞಾನಮುಖದಲ್ಲಿ ವಾಯುವು ಜನಿಸಿ, ತೇಜೋರೂಪದಲ್ಲಿ ಘನೀಭವಿಸಿ ಜೀವನಾಗಿರ್ಪುದು. ನಿಜದಲ್ಲಾತ್ಮನು ಜನಿಸಿ, ಆಕಾಶರೂಪದಲ್ಲಿ ಖನೀಭವಿಸಿ ಪರಮನಾಗಿರ್ಪನು. ಆನಂದ ಬಿಂದು ಮುಖದಿಂದ ಅಹಂಕಾರವು ಜನಿಸಿ, ಜ್ಞಾನ ವಾಯುಗಳ ಸಂಗದಿಂ ಮನವು ಪುಟ್ಟಿತು. ನಿಜಾತ್ಮಗಳ ಸಂಗದಿಂ ಭಾವವು ಪುಟ್ಟಿತು. ತತ್ಸಾಧ್ಯಕ್ಕೆ ಅವೇ ಸಾಧನಗಳಾಗಿರ್ಪುದರಿಂ ಇವೇ ಕರಣಂಗಳಾಗಿ ಅವೇ ಕಾರಣಂಗಳಾಗಿರ್ಪವು. ಪೃಥಿವೀ ಬೀಜಗಳ ಸಂಗದಿಂದ ಬೀಜಮಧ್ಯದಲ್ಲಿ ವೃಕ್ಷವು ಜನಿಸಿತ್ತು. ವೃಕ್ಷವು ಬಲಿದಲ್ಲಿ ಬೀಜವು ನಷ್ಟಮಾಗಿ ತದಗ್ರದಲ್ಲಿರ್ಪ ಫಲಮಧ್ಯದಲ್ಲಿ ಅನೇಕ ಮುಖಮಾಗಿ ತೋರುತ್ತಿರ್ಪಂತೆ, ಜ್ಞಾನ ವಾಯುಗಳ ಸಂಗದಿಂ ಜ್ಞಾನ ಮಧ್ಯದಲ್ಲಿ ಮನಸ್ಸು ಹುಟ್ಟಿ, ಅದು ಬಲಿದಲ್ಲಿ ಆ ಮೂಲ ಜ್ಞಾನವಳಿದು, ತತ್ಫಲರೂಪಮಾದ ಇಂದ್ರಿಯ ಮಧ್ಯದಲ್ಲಿ ತೋರುತ್ತಿರ್ಪುದು. ಜಲವು ಆ ಬೀಜವಂ ಭೇದಿಸಿ, ತನ್ಮಧ್ಯದಲ್ಲಿ ವೃಕ್ಷವಂ ನಿರ್ಮಿಸುವಂತೆ ಮನಸ್ಸೇ ಜಾಗ್ರತ್ ಸ್ವರೂಪದಲ್ಲಿ ಜ್ಞಾನಭಿನ್ನವಂ ಮಾಡಿ, ತನ್ಮಧ್ಯದಲ್ಲಾನಂದವಂ ನಿರ್ಮಿಸು

ತ್ತಿರ್ಪುದು. ಆನಂದವು ನಿರಾಕಾರವೂ, ಬಿಂದುವು ಸಾಕಾರವೂ ಆದುದರಿಂದ ಆನಂದವಂ ಬಿಂದುವು ಬಂಧಿಸಿರ್ಪಂತೆ, ವಾಯುವು ಜ್ಞಾನವಂ ಬಂಧಿಸಿರ್ಪುದು. ಆನಂದವು ಜ್ಞಾನದೊಳ್ ಬೆರೆದಲ್ಲಿ ಶರೀರವು ಜೀವನೊಳೈಕ್ಯವಾಯಿತು. ಆ ಜ್ಞಾನವು ನಿಜದೊಳ್ ಬೆರೆದಲ್ಲಿ ಜೀವನು ಪರಮನೊಳೈಕ್ಯನಾಯಿತ್ತು, ನಿಜಾನಂದ ಶಿವಶಕ್ತಿಗಳೇಕಮಾದಲ್ಲಿ ಜ್ಞಾನವದರೊಳಗೆ ಬೆರೆದು ಭೇದವಡಗಿ ಅವೆರಡರ ಸಂಯೋಗ ವಿಯೋಗಕ್ಕೆ ತಾನೇ ಕಾರಣವಾಗಿ, ನಿಜಾನಂದವೇ ತೋರುತ್ತ ತಾನೊಪ್ಪುತ್ತಿರ್ಪುದೇ ಲಿಂಗೈಕ್ಯ ಕಾಣಾ ಮಹಾಘನ ದೊಡ್ಡದೇಶಿಕಾರ್ಯ ಗುರು ಪ್ರಭುವೇ."

> "ಪರಾಶಕ್ತಿಯ ಮಥನದಿಂದ ಸಮಾನವಾಯುವ ನಿಲಿಸಿ, ವಿಶುದ್ಧಿ ಚಕ್ರದ ಶ್ವೇತವರ್ಣದ ಷೋಡಶದಳದ ಷೋಡಶಾಕ್ಷರದ ಅಧಿದೈವ ಸದಾಶಿವನ ಅತೀತಾವಸ್ಥೆಯನ್ನು ಯಕಾರವೆಂಬ ಬೀಜಾಕ್ಷರದಿಂದ ತಿಳಿಯಬೇಕು. ತಿಳಿದು ಷಡ್ವಿಧ ವಿಚಾರವಿಡಿದು ಆನಂದ ಭಕ್ತಿಯಿಂದ ಐದನೆಯ ತತ್ತ್ವದಾದಿಯ ಊರ್ಧ್ವದಿಕ್ಕಿನ ಈಶಾನ್ಯವನರಿದು ಆಕಾಶದ ಭ್ರಮೆಯನು ಪರಿಣಾಮದಿಂದ ತಿಳಿದು ಕರ್ಮನಾಸ್ತಿಯಾಗಬೇಕು. ಹೀಗೆ ಶರಣಸ್ಥಲವನಂಗಂಗೊಳ್ಳುವುದು ಸುಜ್ಞಾನದ ನೆಲೆಯು."
>
> —ಶಿವಾನುಭವದ ಶಬ್ದಕೋಶ.

"ವೇದ ವೇದಾರ್ಥ ಸಾರಾಯದಿಂದ ಆರು ಶಾಸ್ತ್ರ ಹದಿನೆಂಟು ಪುರಾಣಂಗಳಾದವು. ಆ ಪುರಾಣಂಗಳನರಿವುದರಿಂದ ಜ್ಯೋತಿಜ್ಞಾನವಾಯಿತ್ತು. ಆ ಜ್ಯೋತಿಜ್ಞಾನದಿಂದ ಮತಿಜ್ಞಾನ, ಶ್ರುತಜ್ಞಾನ, ಮನಪರಿಪೂರ್ಣಜ್ಞಾನ, ಅವಧಿಜ್ಞಾನ, ಕೇವಲ ಜ್ಞಾನ–ಇಂತೀ ಪಂಚಜ್ಞಾನವೆ ಪಂಚಸ್ಥಲವಾಯಿತ್ತು, ಮತಿಜ್ಞಾನವುಳ್ಳಾತನೆ ಭಕ್ತ, ಶ್ರುತಜ್ಞಾನವುಳ್ಳಾತನೆ ಮಾಹೇಶ್ವರ, ಮನಪರಿಪೂರ್ಣ ಜ್ಞಾನವುಳ್ಳಾತನೇ ಪ್ರಸಾದಿ, ಅವಧಿ ಜ್ಞಾನವುಳ್ಳಾತನೆ ಪ್ರಾಣಲಿಂಗಿ, ಕೇವಲ ಜ್ಞಾನವುಳ್ಳಾತನೆ ಶರಣ ; ಶರಣ ಸ್ಥಲವೆಂಬುದು ಭವಂ ನಾಸ್ತಿ. ಪಂಚಜ್ಞಾನಕ್ಕೆ ಮೂಲವಾದ ಜ್ಯೋತಿಜ್ಞಾನವೇ ಪಂಚಸ್ಥಲದಲ್ಲಿ ಏಕಾಕಾರದ ಐಕ್ಯನು. ಇಂತೆಂದುದಾಗಿ ಕೂಡಲ ಚನ್ನಸಂಗಯ್ಯನಲ್ಲಿ ಪಂಚಸ್ಥಲದ ನೆಲೆಯ ಬಲ್ಲ ಐಕ್ಯ ಬಸವಣ್ಣಂಗೆ ನಮೋ ನಮೋ ಎಂಬೆ."

"ಅವಿರಳಾತ್ಮಕನಾಗಿ ನಿಃಕಲ ಬ್ರಹ್ಮದೊಳೊಡವೆರಸಿ,
ಪರಮಜ್ಞಾನವಿಂಬುಗೊಂಡು ಪರಮಾಶ್ರಯ ಪರಿಪೂರ್ಣವಾಗಿ,
ನಿಜ ಸುಖಧಾಶ್ರಯವಾದ ಸುಜ್ಞಾನಭರಿತರ ತೋರಿ ಬದುಕಿಸಾ,
ಸೌರಾಷ್ಟ್ರ ಸೋಮೇಶ್ವರಾ ! ನಿಮ್ಮ ಧರ್ಮ ನಿಮ್ಮ ಧರ್ಮ !"

"ವ್ಯೋಮಾಂಗಂ ಜ್ಞಾನಹಸ್ತಂ ಸ್ಯಾತ್ಪ್ರಸಾದಾರ್ಜನ ತತ್ಪರಂ ।
ಶರಣಸ್ಥಲಮಿತ್ಯಾಹುಃ ಶಿವಯೋಗಪರಾಯಣಾಃ॥"

––ಶಿವಾನುಭವ ಸೂತ್ರ

ಕಂಠ-ವಿಶುದ್ಧಿ

ಕಂಠ ಶಬ್ದಕ್ಕೆ ಕೊರಳು ದನಿ ಎಂಬ ಎರಡು ಅರ್ಥಗಳಿವೆ. ಇಲ್ಲಿ ಇವೆರಡು ಅರ್ಥಗಳು ಬೇಕಾಗಿದ್ದರೂ ಮುಖ್ಯವಾಗಿ ಕೊರಳು ಅರ್ಥಬೇಕಾಗಿದೆ. ಕೊರಳಿನ ಪರಿಣಾಮವೆ ಅಥವಾ ಕ್ರಿಯೆಯೆ ಧ್ವನಿ, ಕೊರಳಿನಲ್ಲಿ ಹುಟ್ಟುತ್ತದೆ ಧ್ವನಿ.

ಕುತ್ತಿಗೆಯ ನಾಳ ಪೊಳ್ಳಾಗಿರುತ್ತದೆ, ಶ್ವಾಸೋಚ್ಛ್ವಾಸಗಳು ಹೋಗಿ ಬರಲು ಅವಕಾಶವಿರುತ್ತದೆ. ಶ್ವಾಸಕೋಶಕ್ಕೆ ಗಾಳಿಯನ್ನು ಪೂರೈಸುತ್ತದೆ ಕುತ್ತಿಗೆಯ ಕೊಳವೆ,

ಕುತ್ತಿಗೆಯ ಕೊಳವೆಯ ಕೆಳಗೆ ಇರುವ ನಾಳ ಎರಡು ಕವಲಾಗಿರುತ್ತದೆ. ಕವಲಿನ ನಡುವಿನ ಭಾಗಕ್ಕೆ ಗ್ರಂಥಿಗೆ ವಿಶುದ್ಧಿಚಕ್ರವೆಂದು ಹೆಸರು. ಇದರ ಎಡಕ್ಕೆ ಇಡಾ, ಬಲಕ್ಕೆ ಪಿಂಗಳಾ, ನಡುವೆ ಸುಷುಮ್ನೆ ನಾಡಿಗಳು ಇರುತ್ತವೆ. ಕಿರುನಾಲಗೆಯವರೆವಿಗೂ ವಿಶುದ್ಧಿ ಚಕ್ರದ ವ್ಯಾಪ್ತಿಯಿರುತ್ತದೆ. ಪ್ರಾಣವಾಯುವನ್ನು ಪರಿಶುದ್ಧಿಗೊಳಿಸುವುದರಿಂದ ಇದಕ್ಕೆ ವಿಶುದ್ಧಿಯೆಂದು ಸಾರ್ಥಕವಾದ ಹೆಸರು ಬಂದಿದೆ, ಅಂತೆಯೇ ಸ್ವರವನ್ನೂ ಶುದ್ಧಿಗೊಳಿಸುತ್ತದೆ, ಜೀವಶುದ್ಧಿಗೂ ಸಾಧನವಾಗಿದೆ.

ಅವಯವಗಳಲ್ಲಿ ಶಿರಸ್ಸು ಪ್ರಧಾನ. ಕಂಠ ಶಿರಸ್ಸಿನೊಡನೆ ಸೇರುತ್ತದೆ, 'ಶಿರೋಗ್ರೀವಂ' ಎಂದು ಕೂಡಿ ಹೇಳುವುದುಂಟು, ಕೊರಳು ತಾಲು ನಾಲಗೆಗಳಿಗೆ ಮೂಲವಾಗಿರುತ್ತದೆ. ಕಂಠದಲ್ಲಿರುವ ವಿಶುದ್ಧಿಯನ್ನು ವೈದ್ಯಶಾಸ್ತ್ರಜ್ಞರು 'ಅವಟು' ಎಂದು ಹೇಳುತ್ತಾರೆ. ಕುತ್ತಿಗೆ ತಲೆಗಳೆರಡೂ ಕೂಡಿರುವ ಗ್ರಂಥಿ ಅಥವಾ ಸಂಧಿ, ಇದುವೇ ವಿಶುದ್ಧಿ.

ಕಂಠ ಆಕಾಶಸ್ಥಾನ ; ಆಕಾಶ ಮಾಡಲ. ಅಲ್ಲಿ ಮಧ್ಯಮಾವಾಣಿ ಉದಯಿಸುತ್ತದೆ. ಕಂಠ ಶುದ್ಧವಾಗಿದ್ದರೆ ಸ್ವರ ಇಂಪಾಗಿರುತ್ತದೆ. ಇಂಚರಕ್ಕೆ ಕಿವಿ ಮನಗಳು ಏಕಾಗ್ರತೆಯನ್ನು ತಳೆಯುತ್ತವೆ. ಸ್ಥೂಲ ಸ್ವರದಿಂದ ಸೂಕ್ಷ್ಮ ಸ್ವರಜ್ಞಾನವುಂಟಾಗುತ್ತದೆ. ಸ್ಥೂಲ ಸೂಕ್ಷ್ಮ ಸ್ವರಗಳಿಂದ ಶ್ಲೇಷ್ಮಾದಿ ದೋಷಗಳು ನಿವೃತ್ತಿಯಾಗುತ್ತವೆ.

ಗ್ರೀವಗ್ರಂಥಿಯೇ ವಿಶುದ್ಧಿ ಚಕ್ರ. ವಿಶುದ್ಧಿ ಚಕ್ರವೇ ಗ್ರೀವ ಗ್ರಂಥಿ. ಇವೆರಡರಲ್ಲಿ ಕವಲಿಲ್ಲ. ಕಫ ವಾತ ಪಿತ್ಥಗಳನ್ನು ಶುದ್ಧಿಗೊಳಿಸುವುದರಿಂದ ವಿಶುದ್ಧಿಯೆಂಬ ಹೆಸರು.

ಶರಣನು ಮುಖ್ಯವಾಗಿ ಕಿವಿ ಕೊರಳು ಬಾಯಿಗಳನ್ನು ಸಂಸ್ಕರಿಸಿಕೊಳ್ಳುತ್ತಾನೆ. ಶಬ್ದ ಶ್ರೋತ್ರದಲ್ಲಿ ಜನಿಸಿ ಕಂಠದಲ್ಲಿ ನಿಂತು ಬಾಯಿಂದ ಹೊರಬರುತ್ತದೆ. ಶಬ್ದವನ್ನು ಪ್ರಸಾದವನ್ನಾಗಿಸುವ ಕೆಲಸ ಶರಣನದು. ಈ ನಿಟ್ಟಿನಲ್ಲಿ ಕಂಠವನ್ನು ಸಂಸ್ಕರಿಸಿಕೊಳ್ಳುವ ಕಾರ್ಯ ಶರಣನಿಗೆ ಅವಶ್ಯ.

> “ಕಂಠ ಸ್ಥಾನದಲ್ಲಿ ವಿಶುದ್ಧಿ ಚಕ್ರ, ಆಕಾಶವೆಂಬ ಮಹಾ ಭೂತ, ಆ ಮಹಾ ಭೂತ ಕೃಷ್ಣ ವರ್ಣ, ವರ್ತುಳಾಕಾರ, ಷೋಡಶ ದಳ ಪದ್ಮ, ಆ ಪದ್ಮ ಶ್ವೇತ ವರ್ಣ, ಆ ದಳಗಳಲ್ಲಿ ಅಕಾರಾದಿ ಹದಿನಾರು ಸ್ವರಾಕ್ಷರಗಳು, ಆ ಪದ್ಮ ಕರ್ಣಿಕಾಮಧ್ಯದಲ್ಲಿ ಯ-ಕಾರವೆಂಬ ಬೀಜಾಕ್ಷರ, ಆ ‘ಯ’ಕಾರ ಸ್ಫಟಿಕ ವರ್ಣ, ಅದು ಮೇಘ ಧ್ವನಿ, ಅಲ್ಲಿ ಪರಿಪೂರ್ಣ ರೂಪ ಪ್ರಸಾದ ಲಿಂಗ, ಅದಕ್ಕೆ ಸ್ಫಟಿಕ ವರ್ಣವುಳ್ಳ ಈಶಾನ ಮುಖ, ಶಾಂತ್ಯತೀತ ಕಲಾ ಪರಿಯಾಯ ನಾಮವನುಳ್ಳ ಪರಾಶಕ್ತಿ, ಆ ಶಕ್ತಿ ಕಪೋತವರ್ಣ, ಅಲ್ಲಿ ಶಿವಸಾದಾಖ್ಯ, ಪರವೆಂಬ ಸಂಜ್ಞೆ, ಊರ್ಧ್ವ ದಿಕ್ಕು, ಅಲ್ಲಿ ಗಾಯತ್ರೀ ವೇದವನುಚ್ಚರಿಸುತ್ತ ಸುಜ್ಞಾನಹಸ್ತದಿಂ ಸುಶಬ್ದ ದ್ರವ್ಯವನು ಶ್ರೋತ್ರವೆಂಬ ಮುಖಕ್ಕೆ ಆನಂದ ಭಕ್ತಿಯಿಂದರ್ಪಿಸುವಳಾ ಪರಾಶಕ್ತಿ ! ಸದಾಶಿವ ಪೂಜಾರಿ, ಶಕ್ತಿ ಶಾಖಿನಿ,

> ಮಹಾದೇವನಧಿದೇವತೆ, ಇಂತಿವೆಲ್ಲಕ್ಕು ಮಾತೃಸ್ಥಾನವಾಗಿಹುದು; 'ಯ'ಕಾರವೆಂಬ ಬೀಜಾಕ್ಷರ. ಅದು ಪ್ರಣವದ ದರ್ಪಣಾಕೃತಿಯಲ್ಲಿಹುದು. ಓಂ ಓಂ ಓಂ-ಯಂ ಯಂ ಯಂ ಎಂಬ ಬ್ರಹ್ಮನಾದ ಮಂತ್ರಮೂರ್ತಿ ಪ್ರಣವಕ್ಕೆ ನಮಸ್ಕಾರವು. ಇದು ಶರಣ ಸ್ಥಲ."

ಪ್ರಾಕೃತ ಪ್ರವೃತ್ತಿ ಮಾರ್ಗದ ಕುಲಾದಿ ಮದಾಂಧಕಾರದಲ್ಲಿ ಬೀಳದೆ ದುರ್ವಾಸನೆಗೆ ದುಮ್ಮಿಕ್ಕದೆ ಶ್ರೀ ಗುರುವಿನ ಸಾಕಾರ ಲೀಲೆಯಿಂದ ಅನುಗ್ರಹ ಪಡೆದು ನಿವೃತ್ತಿ ಮಾರ್ಗಾಚಾರದಲ್ಲಿದ್ದು ಕ್ರಿಯಾಭಕ್ತಿಯೆ ಮೊದಲಾಗಿ ನಿರವಯ ಭಕ್ತಿಯೇ ಕೊನೆಯಾದ ಷೋಡಶ ಭಕ್ತಿಯಿಂದ ಸದ್ವಾಸನಾಯುಕ್ತಮಾಗಿರ್ಪುದು. ಅಧೋಮುಖ-ಊರ್ಧ್ವಮುಖ, ಸೂರ್ಯಸಖ-ಚಿತ್ಸೂರ್ಯಸಖಗಳಿಂದರಳಿ ಶೈವ ವೀರಶೈವ ದೈವಂಗಳಿಗರ್ಪಿತಮಾಗಿರ್ಪುದೀಗ ವಿಶುದ್ಧಿ ಚಕ್ರವೆಂಬ ಶಬ್ದಕ್ಕರ್ಥ."

ಈ ವಿಶುದ್ಧಿ ಚಕ್ರದ ಸಕೀಲಗಳನ್ನು ಸಾದ್ಯಂತವಾಗಿ ಸೂಕ್ಷ್ಮವಾಗಿ ಶರಣನು ಅರಿದಾಚರಿಸಬೇಕು. ಕಂಠಸ್ಥ ವಿಶುದ್ಧಿ ಚಕ್ರದಲ್ಲಿ 'ಯ'ಕಾರಾಕಾರದ ಪ್ರಸಾದ ಲಿಂಗವಿದೆ. ಅದು ಆಕಾಶಕ್ಕೆ ಆಕಾಶವಾಗಿದೆ. ನಾದಾತ್ಮಕವಾಗಿದೆ. ಪ್ರಕಾಶಾತ್ಮಕವೂ ಆಗಿದೆ. ಇದರಿಂದ ವಿಶುದ್ಧಿ ಚಕ್ರವು ಸಂಸ್ಕಾರವನ್ನು ಪ್ರಕಾಶವನ್ನು ಪಡೆಯುತ್ತದೆ ; ನಾದಶಕ್ತಿಯನ್ನೂ ಪಡೆಯುತ್ತದೆ. ಅಧೋಮುಖಿಯಾದ ಈ ಗ್ರಂಥಿಯು ಗುರುದೇವನ ವೇಧಾಸಂಸ್ಕಾರದಿಂದ ಊರ್ಧ್ವಮುಖಿಯನ್ನಾಗಿಸುತ್ತಾನೆ. ಇದು ಮೃದಂಗದಾಕಾರವಾಗಿರುತ್ತದೆ.

'ಯ'ಕಾರ ಮಂತ್ರ; ಆಕಾಶತತ್ತ್ವ, ಮಜ್ಜಾಮಯ, ತ್ರಿಗುಣ ಸ್ವರೂಪ, ವಿಶುದ್ಧಿ ಚಕ್ರ, ಇವು ಶರೀರಕ್ಕೆ ಸಂಬಂಧಿಸಿರುತ್ತವೆ.

ಸುಜ್ಞಾನಹಸ್ತ, ಆನಂದಭಕ್ತಿಗಳು ಬಾಹ್ಯಾಚಾರಕ್ಕೆ ಸಂಬಂಧಪಡುತ್ತವೆ.

ಕ್ಷೇತ್ರಜ್ಞ, ಪರಾಶಕ್ತಿ, ಸ್ಫಟಿಕ ವರ್ಣ-ಇವು ಆಂತರಂಗಿಕ ಆಚರಣೆಗೆ ಸಂಬಂಧಪಡುತ್ತವೆ.

ಸದಾಶಿವತತ್ತ್ವ, ಶಿವಸಾದಾಖ್ಯ, ಈಶಾನ್ಯಮಂತ್ರಮೂರ್ತಿ, ಪರಿಪೂರ್ಣ ಸ್ವರೂಪ-ಇವು ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಿಸುತ್ತವೆ.

ಸದಾಶಿವ ತತ್ತ್ವ, ಸದಾಶಿವಮಂತ್ರಮೂರ್ತಿ, ವಿಜ್ಞಾನಬ್ರಹ್ಮ, ಆಕಾಶ ಭೂತಾಂಗನಪ್ಪ ಶರಣ, ಪ್ರಸಾದಲಿಂಗ–ಇವು ಲಿಂಗವಿಕಾಸಾವಸ್ಥೆಯನ್ನು ತೋರಿಸುತ್ತವೆ.

ಇವುಗಳಿಗೆ ಯಕಾರ ಮಂತ್ರವು ಸಂಬಂಧಿಸಿರುವುದರಿಂದ ಅದರ ಧ್ಯಾನದ ಮೂಲಕ ಈ ಗುಣಗಳೆಲ್ಲ ವಿಕಾಸವನ್ನು ಹೊಂದುತ್ತವೆ.

"ಉಪದೇಶತತ್ತ್ವವೇ ಪ್ರಸಾದವು. ಆ ಪ್ರಸಾದಕ್ಕೆ ಷೋಡಶ ಪದಾರ್ಥವೇ ವಿಶುದ್ಧಿ. ಪ್ರಮಾಣ ಪ್ರಮೇಯಾದಿ ಷೋಡಶ ಭೇದಂಗಳೇ ದಳಂಗಳು. ಆಕಾರಾದಿ ಷೋಡಶ ಸ್ವರಂಗಳೇ ಬೀಜ. ತತ್ಪ್ರಸಾದ ಸೇವಕನೇ ಶರಣನು. ಆನಂದವೇ ಚೈತನ್ಯವು. ಜ್ಞಾನವೇ ಹಸ್ತವು. ಆಕಾರವೇ ಮೂಲ. ಶಬ್ದ ಮುಖದಿಂ ತತ್ತ್ವಮಂ ಗ್ರಹಿಸುತ್ತಿರ್ಪುದರಿಂ ಶ್ರೋತ್ರವನನುಸರಿಸಿರ್ಪುದು. ತಚ್ಛಬ್ದಂಗಳಿಗೆ ಕಂಠವೇ ಸ್ಥಾನವು. ಆ ಪರತತ್ತ್ವದಿಂ ಪರಿಶುದ್ಧವಾಗಿರ್ಪುದೇ ವಿಶುದ್ಧಿಯು."

ಆಕಾಶಮೂಲವಾದ ವಿಶುದ್ಧಿ ಚಕ್ರವು ಆಕಾಶದಂತೆ ವಿಶುದ್ಧವಾಗಿರುವುದು. ಪ್ರಕಾಶಮಯವಾಗಿರುವುದು. ಶಬ್ದೋತ್ಪತ್ತಿಗೆ ಆಶ್ರಯವಾಗಿರುವುದು; ಅವಕಾಶವನ್ನೀಯುವುದು. ಶಬ್ದ ಸಂದೋಹಕ್ಕೆಲ್ಲ ಮೂಲವಾದ ಓಂಕಾರ ಹುಟ್ಟಿದುದು ಕಂಠದಲ್ಲಿ !

"ಓಂಕಾರಶ್ಚಾಥ ಶಬ್ದಶ್ಚ ದ್ವಾವೇತೌ ಬ್ರಹ್ಮಣಃ ಪುರಾ ।
ಕಂಠಂ ಭಿತ್ವಾ ವಿನಿರ್ಯಾತೌ ತಸ್ಮಾನ್ಮಾಂಗಲಿಕಾವುಭೌ ॥"

ಈ ಉಕ್ತಿಯು ಇದನ್ನೇ ಉದ್ಘೋಷಿಸಿದೆ. ವಾಚ್ಯ ಓಂಕಾರ ಜನನಿ ವಿಶುದ್ಧಿ.

ಪರಾಶಕ್ತಿ-ಆನಂದ ಭಕ್ತಿ

ಹಲವಾರು ಶಕ್ತಿಗಳ ಸಮನ್ವಯ-ಸಹಕಾರಗಳೇ ಈ ಜೀವನ. ಕ್ರಿಯಾಶಕ್ತಿ ಜ್ಞಾನಶಕ್ತಿ ಇಚ್ಛಾಶಕ್ತಿಗಳಿಲ್ಲದಿದ್ದರೆ ಈ ಜೀವನವೇ ಇಲ್ಲ. ಇವುಗಳಂತೆ ಪರಾಶಕ್ತಿಯೂ ಒಂದು ಇದೊಂದು ವಾಙ್ಮಯ ಶಕ್ತಿ. ಮಾತಿನ ಮೂಲ ಶಕ್ತಿ. ಶಾಬ್ದಿಕ ಸುರತರುವಿನ ಮೂಲ ಬೀಜ.

ವಾಕ್ ಶಕ್ತಿಯೊಂದಿಲ್ಲದಿದ್ದರೆ ನರನು ವಾನರನಾಗಿ ಬಾಳಬೇಕಾಗಿತ್ತು. ವಾಕ್ ಪ್ರೇರಕವಾಗಿದೆ ಆ ಪರಾಶಕ್ತಿ ; ವಾಙ್ಮೂಲವೂ ಆಗಿದೆ. ಅಲ್ಲದೆ ಇಚ್ಛೆ ಜ್ಞಾನ ಕ್ರಿಯೆಗಳಿಗೆ ಪ್ರೇರಕ ಶಕ್ತಿಯಾಗಿದೆ ; ಪ್ರಭವಶಕ್ತಿಯಾಗಿದೆ. ಪರಾವಾಣಿಯಾಗಿ ಪರಿಶೋಭಿಸಿದೆ.

ಹೆಸರಿನಲ್ಲಿಯೇ ಅದರ ಅಗ್ಗಳಿಕೆ ಅಭಿವ್ಯಕ್ತವಾಗುತ್ತದೆ. ಶಾಂತ್ಯತೀತ ಕಲೆಯಿಂದ ಸಂಭವಿಸಿದ ಪರಾಶಕ್ತಿಯ ಪರಾಕಾಷ್ಠತೆಗೆ ಮೇರೆಯಿಲ್ಲ. ಪರಾಶಕ್ತಿಯಿಂದಲೇ ಜ್ಞಾನವುದಯಿಸುತ್ತದೆ ; ಮತ್ತು ಇಚ್ಛೆ ಕ್ರಿಯೆಗಳು ಉದಯಿಸುತ್ತವೆ. ಜ್ಞಾನದಿಂದ ಶಬ್ದೋತ್ಪತ್ತಿಯಾಗುತ್ತದೆ. ಶಬ್ದಜ್ಯೋತಿ ಮಾನವೀಯ ಜೀವನವನ್ನು ಬೆಳಗುತ್ತದೆ ; ಜರಗಿಸುತ್ತದೆ. ಪರಾಮರ್ಶಶಕ್ತಿ ಅದರಿಂದ ಉಂಟಾಗುತ್ತದೆ. ಪರಾಶಕ್ತಿಯಿಂದ ಪರಂಜ್ಯೋತಿಯ ದರ್ಶನವಾಗುತ್ತದೆ. ಪ್ರಸಾದ ಲಿಂಗದಲ್ಲಿ ಪರವಶವಾಗುವ ಭಕ್ತಿ ಭಾವಗಳುಂಟಾಗುತ್ತವೆ. ಪರಮಾನಂದ ಪ್ರಾಪ್ತಿಯಾಗುತ್ತದೆ. ಪರಮಾಣುವಿನ ಮತ್ತು ಪರಮ ಮಹತ್ತಿನ ಸಾಕ್ಷಾತ್ಕಾರವಾಗುತ್ತದೆ ; ಸಂವೇದನವಾಗುತ್ತದೆ.

ಕ್ರಿಯಾ-ಜ್ಞಾನ ಶಕ್ತಿಯರು ತ್ಯಾಗದಾಯಿನಿಯರು ; ಇಚ್ಛಾ-ಆದಿಶಕ್ತಿಯರು, ಭೋಗದಾಯಿನಿಯರು ; ಪರಾಶಕ್ತಿ-ಚಿಚ್ಛಕ್ತಿಯರು ಯೋಗದಾಯಿನಿಯರು. ಪರಾಶಕ್ತಿಯಿಂದ ಶರಣನಿಗೆ ಶಿವನ ಯೋಗ ಸಮನಿಸುತ್ತದೆ.

ತಂತಿಯು ಆಶ್ರಯದಲ್ಲಿ ವಿದ್ಯುತ್ ಹೊಮ್ಮುವಂತೆ ಅಂಗದ ಆಶ್ರಯದಲ್ಲಿ ಶಕ್ತಿ ಹೊಮ್ಮುತ್ತದೆ. ಶರಣಾಂಗದಲ್ಲಿ ಪರಾಶಕ್ತಿ ಪ್ರಕಟವಾಗುತ್ತದೆ. ಪ್ರತಿ ಪದಾರ್ಥಕ್ಕೂ ಒಂದೊಂದು ಬಗೆಯ ಶಕ್ತಿಯಿರುವಂತೆ ಶರಣಾಂಗ ಪದಾರ್ಥಕ್ಕೂ ಶಕ್ತಿಯಿದೆ. ಶಕ್ತಿ ಜೀವನಾಸ್ತಿತ್ವದ ಕುರುಹು. ಚಲನವಲನಗಳಿಗೆ ಮೂಲ ಆಧಾರ. ಒಳಿತಾದ ದೇಹಾರಕ್ಕೆ ಬೇಹಾರಕ್ಕೆ ಬಳಸಿಕೊಂಡರೆ ಒಳಿತಾದ ಫಲವುಂಟು ; ಹಿತವುಂಟು, ಪರಾಶಕ್ತಿಯ ಪ್ರಭಾವವನ್ನು ಬೆಳಸಿಕೊಂಡವನು ಶರಣನು.

ಪರಶಿವನ ಆನಂದ ಸ್ವರೂಪದಲ್ಲಿ ಚಿಚ್ಛಕ್ತಿ-ಪರಾಶಕ್ತಿಗಳು ಮೈದೋರುತ್ತವೆ. ಯೋಗಾಂಗದಲ್ಲಿರುವ ಭಾವ ಲಿಂಗದಲ್ಲಿರುತ್ತವೆ. ವಿಮರ್ಶಾ ಶಕ್ತಿಯ ಒಳಮೈ ಚಿಚ್ಛಕ್ತಿ ; ಹೊರಮೈ ಪರಾಶಕ್ತಿ. ಕ್ರಿಯಾ ಜ್ಞಾನ ಇಚ್ಛಾ ಆದಿಶಕ್ತಿಗಳಿಗಿಂತ ಸೂಕ್ಷ್ಮವಾದುದು ಪರಾಶಕ್ತಿ.

> "ನಿಜ ಪರಾಕ್ರಮಾರಾಧ್ಯಗಣಂಗಳ ಚಿದಾಕಾಶ ಸಂಬಂಧವಾದ ಕರಣಂಗಳ ಸದಾಚಾರವಿಡಿದು ಗುರು ಲಿಂಗ ಜಂಗಮದಿಂದ ವೇಧಾ ಮಂತ್ರ ಕ್ರಿಯಾ ದೀಕ್ಷಾತ್ರಯ ಷಟ್‌ಸ್ಥಲ ಸರ್ವಾಚಾರ ಸಂಪತ್ತಿನಾಚರಣೆಯು ಸತಿ ಪತಿಗಳಿರ್ವರು ಪಡೆದು, ಅವನನುಭವಿಸುವ ಸಮಯದಲ್ಲಿ ಶಿವಾಜ್ಞೆಯಿಂದ ಸುಖ ದುಃಖ ನಿಂದೆ ಸಿರಿ ದಾರಿದ್ರ್ಯ ಆದಿ ವ್ಯಾಧಿಗಳು ಹರುಷ ಚಿಂತೆಗಳು ಶತ್ರು ಮಿತ್ರ ಉಪವಾಸ ತೃಪ್ತಿಗಳು ಮೊದಲಾಗಿ ಬಂದು ಸೋಂಕಿದಲ್ಲಿ ಕ್ಷೀರ ಕ್ಷೀರ ಬೆರೆದಂತೆ ಭಿನ್ನವಿಲ್ಲದೆ ಅಭಿನ್ನಳಾಗಿರ್ಪಳು ಎಂಬುದೀಗ ಪರಾಶಕ್ತಿ ಎಂಬ ಶಬ್ದಕ್ಕರ್ಥ."
>
> "ನಿಃಕಲ ಪರಶಿವಗಂಗವಾದ ಪಂಚಶಕ್ತಿಯರಿಂದಲೇ ಹುಟ್ಟಿ, ಪಂಚಶಕ್ತಿಯರಿಂದಲೇ ಬೆಳೆದು, ಪಂಚಶಕ್ತಿಯರ ಆಧೀನವಿಡಿದೇ ಚೇಷ್ಟಿಸಿ, ಪಂಚಶಕ್ತಿಯರ ತದ್ರೂಪು ತದಾಕಾರವಾಗಿಯೇ ಒಪ್ಪುತ್ತಿಹವು.
>
> ಮನಸಾದಿ ಕರಣಂಗಳೈದು ಪರಾಶಕ್ತಿಯ ಸ್ವರೂಪು. ನಿಃಕಲ ಪರಶಿವಗಂಗವಾದ ಪರಾಶಕ್ತಿಯಿಂದಲೇ ಹುಟ್ಟಿ, ಪರಾಶಕ್ತಿಯಿಂದಲೇ ಬೆಳೆದು, ಪರಾಶಕ್ತಿಯ ಆಧೀನವಿಡಿದು ವರ್ತಿಸಿ, ಪರಾಶಕ್ತಿಯಲ್ಲಿಯೇ

ಅಡಗಿ ಪರಾಶಕ್ತಿ ತದ್ರೂಪು ತದಾಕಾರವಾಗಿ ಒಪ್ಪುತ್ತಿಹುದು "–
ವಚನ ಶಾಸ್ತ್ರ ಸಾರ, ಭಾ–೨.

"ಶಬ್ದವೆಂಬ ಪರಬ್ರಹ್ಮದ ಚಿತ್‌ಶಕ್ತಿಯ ಸಹಸ್ರಾಂಶದಲ್ಲಿ ಪರಾಶಕ್ತಿ ಹುಟ್ಟಿದಳು. ಆ ಪರಾಶಕ್ತಿಯ ಸಹಸ್ರಾಂಶದಲ್ಲಿ ಆದಿಶಕ್ತಿ ಹುಟ್ಟಿದಳು. ಆದಿಶಕ್ತಿಯ ಸಹಸ್ರಾಂಶದಲ್ಲಿ ಇಚ್ಛಾಶಕ್ತಿ ಹುಟ್ಟಿದಳು. ಇಚ್ಛಾಶಕ್ತಿಯ ಸಹಸ್ರಾಂಶದಲ್ಲಿ ಜ್ಞಾನಶಕ್ತಿ ಹುಟ್ಟಿದಳು. ಆ ಜ್ಞಾನಶಕ್ತಿಯ ಸಹಸ್ರಾಂಶದಲ್ಲಿ ಕ್ರಿಯಾಶಕ್ತಿ ಹುಟ್ಟಿದಳು ನೋಡಾ ಅಪ್ರಮಾಣ ಕೂಡಲ ಸಂಗಮ ದೇವಾ."

"ಪರಾಶಕ್ತಿಯ ಮಥನದಿಂದ 'ಶಕ್ತಿಶ್ಚ ದ್ವಿವಿಧಾ ಪ್ರೋಕ್ತಾ' ಎಂದು ಪರಾಶಕ್ತಿ ಎರಡು ತೆರನಾಗಿರುತಿಹಳು. ಅದು ಹೇಗೆಂದಡೆ: ಲೋಕದ ಆತ್ಮರುಗಳಿಗೆ ಇಂದ್ರಿಯ ವಿಷಯ ಪ್ರಪಂಚವನೇ ಪರವಶ ಮಾಡಿಕೊಡುತಿಹಳು. ಇತ್ತ ಗುರುಕಾರುಣ್ಯವ ಪಡೆದು ಲಿಂಗಾಂಗ ಸಂಬಂಧಿಗಳಾಗಿ, ಆಚರಿಸುವಂತಹ ಶಿವಶರಣರುಗಳಿಗೆ, ಶರಣನೇ ಸತಿಯಾಗಿ, ಲಿಂಗವೇ ಪತಿಯಾಗಿ, ಇಂದ್ರಿಯಂಗಳೇ ಲಿಂಗೇಂದ್ರಿಯಂಗಳಾಗಿ, ವಿಷಯಗಳೆಲ್ಲ ಲಿಂಗ ಪ್ರಸಾದವಾಗಿ ಅಳವಡಿಸಿಕೊಂಡು, ಆಚರಿಸುವಂತಹ ಆಚರಣೆಯೇ ಪರವಶ ಮಾಡಿಕೊಡುತಿಹಳು. ಮತ್ತಂತುಮಲ್ಲಡೆ, ಮನಸಾದಿ ಕರಣಂಗಳೈದು ಪರಾಶಕ್ತಿಯ ಸ್ವರೂಪಿನಿಂದ ಇದ್ದಿತಾದ ಕಾರಣ, ಆ ಪರಾಶಕ್ತಿಯ ಸ್ವರೂಪವಾದ ಮನಸಾದಿ ಕರಣಂಗಳೊಳಗೆ ಮನದಲ್ಲಿ ಶಿವ ಧ್ಯಾನ, ಬುದ್ಧಿಯಲ್ಲಿ ನಿರ್ವಂಚನೆ, ಚಿತ್ತದಲ್ಲಿ ಶಿವ ದಾಸೋಹ, ಅಹಂಕಾರದಲ್ಲಿ ನಿರಹಂಕಾರ, ಅಜ್ಞಾನವಳಿದು ಸುಜ್ಞಾನವಾಗಿ ಮನಸಾದಿ ಕರಣಂಗಳೈದು ನಿವೃತ್ತಿಯಾದುದೇ ಪರಾಶಕ್ತಿ."
—ವಚನ ಶಾಸ್ತ್ರಸಾರ ಭಾ-2 ; ಪುಟ-259.

ಪರಾಶಕ್ತಿ ಧರ್ಮ; ಪ್ರಸಾದಲಿಂಗ ಧರ್ಮಿ. ಅಂತೆಯೇ ಆನಂದ ಭಕ್ತಿ ಧರ್ಮ; ಶರಣಾಂಗ ಧರ್ಮಿ. ಆ ಪರಾಶಕ್ತಿಯ ಪರಿಣಾಮವೇ ಆನಂದ ಭಕ್ತಿ. ಲಿಂಗನಿಷ್ಠವಾಗಿ ಶಕ್ತಿಯೆನಿಸಿದರೆ ಅಂಗನಿಷ್ಠವಾಗಿ ಭಕ್ತಿಯೆನಿಸುತ್ತದೆ.

"ಅಂಗದ ಮಧ್ಯದಲ್ಲಿ ಗುರುವ ನಿಲ್ಲಿಸಿ, ಆತ್ಮನಲ್ಲಿ ಲಿಂಗವ ನಿಲ್ಲಿಸಿ, ಪ್ರಾಣದಲ್ಲಿ ಜಂಗಮವ ನಿಲ್ಲಿಸಿ ಇಂದ್ರಿಯಂಗಳಿಗೆ ಚಿದ್ವಿಭೂತಿಯ ಧರಿಸಿ, ವಿಷಯಂಗಳಿಗೆ ಚಿದ್ರುದ್ರಾಕ್ಷಿಯ ಧಾರಣವ ಮಾಡಿ

> ಕರಣಂಗಳನೆಲ್ಲವ ಮಂತ್ರಮಯವೆನಿಸಿ ಚಿತ್ಪಾದೋದಕ ಪ್ರಸಾದವೆಂದೆನಿಸಿದಂತಹ ಪೂರ್ಣ ಅರುಹೆಂಬುದೀಗ ಆನಂದ ಭಕ್ತಿ ಎಂಬ ಶಬ್ದಕ್ಕರ್ಥ."
>
> "......ಅರಿವಿನಿಂದ ಅನುಭವ, ಅನುಭವದಿಂದ ಅರಿವು; ಅರಿವು ಅನುಭವ ಸಮರಸವಾದುದೆ ಆನಂದ. ಆನಂದಕ್ಕೆ ಅರಿವೆ ಸಾಧನ..."

ಎಂದು ಸಮ್ಯಗ್ ಜ್ಞಾನಿ ಚನ್ನಬಸಣ್ಣನವರು ಹೇಳಿದ್ದಾರೆ. ಅರಿವು ಅನುಭವಗಳೆರಡು ಒಂದಾಗಿ ಆನಂದವುಂಟಾಗುತ್ತದೆಯೆಂದರೆ ಶರಣನ ಆನಂದ ಭಕ್ತಿಯ ವೈಶಿಷ್ಟ್ಯ ವ್ಯಕ್ತವಾಗುತ್ತದೆ. ಅರಿವಿಲ್ಲದ ಆನಂದವುಂಟು. ಅದು ಪ್ರಯೋಜನವಿಲ್ಲ. ಅರಿವಿನಿಂದ ಅಳವಡುವ ಆನಂದವೇ ಆನಂದ. ಶರಣನ ಆನಂದವು ಅರಿವು-ಅನುಭವಗಳೆರಡೂ ಒಂದಾಗಿ ಉಂಟಾದ ಆನಂದ. ಅದುವೇ ಪರಮಾನಂದ. ಅದನ್ನೆ ಸದಾನಂದವೆಂದು ಚಿದಾನಂದವೆಂದು ಹೇಳುವುದುಂಟು. ಶಿವಶರಣ ಸಂಪಾದಿಸುವುದು ಸದಾನಂದ, ಚಿದಾನಂದ; ಅದುವೇ ಪರಮಾನಂದ; ನಿತ್ಯ ಪರಿಪೂರ್ಣಾನಂದ; ಅದುವೇ ಅಖಂಡಾನಂದ.

ಅಂಗದ ಮೇಲೆ ಗುರುವ ನಿಲ್ಲಿಸಿ ಬರುವ ಆನಂದ ಸದಾನಂದ. ಆತ್ಮನಲ್ಲಿ ಲಿಂಗವ ನಿಲ್ಲಿಸಿ ಬರುವ ಆನಂದ ಪರಮಾನಂದ. ಪ್ರಾಣದಲ್ಲಿ ಜಂಗಮವ ನಿಲ್ಲಿಸಿ ಬರುವ ಆನಂದ ಚಿದಾನಂದ. ಕರಣೇಂದ್ರಿಯಗಳಲ್ಲಿ ಚಿದ್ವಿಭೂತಿ ಚಿದ್ರುದ್ರಾಕ್ಷಿಗಳ ಧರಿಸಿ ಚಿನ್ಮಂತ್ರವನು ಚಿತ್ರಿಸಿ ಚಿತ್ಪಾದೋದಕ ಚಿತ್ಪ್ರಸಾದಗಳನ್ನು ಆರೋಗಿಸಿ ಆಗುವ ಆನಂದ ಸಚ್ಚಿದಾತ್ಮಕ ನಿತ್ಯ ಪರಿಪೂರ್ಣಾಖಂಡ ಆನಂದ.

ಶಾಂತ್ಯತೀತ ಕಲೆ-ತುರೀಯಾತೀತಾವಸ್ಥೆ

ಈಶಾನ್ಯ ಮುಖದಿಂದ 'ಯ'ಕಾರ ಮಂತ್ರ, ಯಕಾರ ಮಂತ್ರದಿಂದ ಶಾಂತ್ಯತೀತ ಕಲೆ ಹುಟ್ಟುತ್ತವೆ. ಪರಾಶಕ್ತಿಗೆ ಮೂಲವಾಗಿದೆ ಶಾಂತ್ಯತೀತ ಕಲೆ. ಪ್ರಸಾದ ಲಿಂಗದ ಕಳೆಯಾಗಿದೆ ಶಾಂತ್ಯತೀತ ಕಲೆ. ಭಾವಲಿಂಗದ ಒಂದು ಕಿರಣ ಪ್ರಸಾದಲಿಂಗ. ಪಂಚಾಕ್ಷರ ಮಂತ್ರದ ಒಂದು ಕಲೆ ಶಾಂತ್ಯತೀತ ಕಲೆ.

ಸುಖದ ಬಯಕೆಯಿದ್ದರೆ ಶಾಂತಿಯ ಬೆನ್ನು ಹತ್ತಬೇಕು. ಶಾಂತಿಯನ್ನು ಸಾಧಿಸಬೇಕು. ಶಾಂತಿ-ಅಶಾಂತಿಗಳ ಎಲ್ಲೆಯನ್ನು ಮೀರಿದರೆ ಸಾಧನೆಯ ಶ್ರಮ ತಪ್ಪುತ್ತದೆ; ಹಂಗು ಹಳಚುತ್ತದೆ. ಶಾಂತಿಯನ್ನು ಮೀರಿ ಬಾಳುವುದೂ ಒಂದು ಕಲೆ. ಅದೇ ನಿಜದ ನೆಲೆ. ಶಾಂತಿಗೆ ಕಾಲಾವಚ್ಛಿನ್ನತೆಯಿದೆ ಶಾಂತ್ಯತೀತಕ್ಕಿಲ್ಲ. ಇದು ತೋರದಾಗಿ ಅಡಗದು; ಬಾರದಾಗಿ ಬಿಡದು. ಬಿಡದಾಗಿ ಹಿಡಿಯದು. ಇದೊಂದು ಸಹಜಸಿದ್ಧವಾದ ಕಲೆ. ಪರಿಪೂರ್ಣವಾದ ಕಲೆ. ಪರಿಪಕ್ವವಾದ ಕಲೆ. ಪರಾಶಕ್ತಿಯನ್ನು ಹುಟ್ಟಿಸುವ ಕಲೆ.

> "ಪರಿಪಕ್ವರಾದ ಶರಣಗಣಂಗಳು ಸರ್ವಾಂಗದಲ್ಲಿ ದೀಕ್ಷಾ ಪಾದೋದಕ ಶಿಕ್ಷಾ ಪಾದೋದಕ ಮಂತ್ರ ಸಂಬಂಧವಾದ ಚಿದ್ಭಸಿತದಿಂದ ಲಿಂಗ ಮಂತ್ರ ಸ್ಮರಣೆ ಮುಂದುಗೊಂಡು, ಸ್ನಾನ ಧೂಳನ ಧಾರಣವ ಮಾಡಿ, ನಾಲ್ವತ್ತೆಂಟು ಸ್ಥಾನಂಗಳಲ್ಲಿ ಧಾರಣದಿಂ ಚಿದ್ರುದ್ರಾಕ್ಷಿಗಳ ಧರಿಸಿ ಲಿಂಗಾರ್ಚನಾ ಮೂರ್ತಿಯಾಗಿರುವುದು ಎಂಬುದೀಗ ಶಾಂತ್ಯತೀತ ಕಲೆ."

LIBRARY
Jangamawadi Math, Varanasi
Acc. No. 43558

ಚಿದ್ವಿಭೂತಿ ಚಿದ್ರುದ್ರಾಕ್ಷಿಗಳನ್ನು ಧರಿಸುವ ಕಲೆ ಕಡಿಮೆಯದಲ್ಲ. ಕಲಾಶಕ್ತಿಯಿಂದ ಲಿಂಗದ ನಿಲುಕಡೆ ನಿಜ ಸ್ವರೂಪು ನಿರ್ದೇಶಿತವಾಗುತ್ತದೆ. ಶಾಂತ್ಯತೀತ ಕಲೆಯನ್ನು ಅಳವಡಿಸಿಕೊಂಡವನು ಚಿದ್ವಿಭೂತಿ ಪುರುಷನಾಗುವನು. ಚಿದಕ್ಷಿಯುಳ್ಳವನಾಗುವನು. ಚಿನ್ನಾದ ಶ್ರವಣದಲ್ಲಿ ತಲ್ಲೀನನಾಗುವನು. ಮನಸಾದಿ ಕರಣಗಳಳಿದು ನಿವೃತ್ತಿಯಾಗುವವು. ಪರಾಶಕ್ತಿ ಸಮನಿಸುವುದು. ಶಿವಸಾದಾಖ್ಯ ಸ್ವರೂಪವಾದ ಪ್ರಸಾದಲಿಂಗದಲ್ಲಿ ಪರವಶನಾಗುವನು. ಭೂತಾಕಾಶದ ಹಂಗನ್ನು ಹರಿಯುವನು. "ಆಕಾಶವಳಿದು ಚಿದಾಕಾಶ ಸ್ವರೂಪಿನಿಂದ ಶರಣಂಗೆ ಒಡಲಾಗಲು ಆ ಶರಣನು ಪ್ರಸಾದಲಿಂಗದಂಗವಾಗಿ ಪ್ರಸಾದಲಿಂಗದಲ್ಲಿಯೇ ಅಡಗಿದನೆಂದರ್ಥ.'' ಎಂದು ಪ್ರಭುದೇವರು ನಿರೂಪಿಸಿದ್ದಾರೆ. 'ಶಾಂತ್ಯತೀತ ಕಲೆ' ಈ ಪದಕ್ಕೆ 'ಶಾಂತಾತೀತ ಕಲೆ' ಎಂದು ಹೇಳುವುದುಂಟು. ಈ ಪಾಠಾಂತರದಲ್ಲಿ ಶಾಂತ ಪದ ಅಕಾರಾಂತವಾಗಿರುತ್ತದೆ. ಶಾಂತವೆಂದರೆ ಅಡಗು ಅವ್ಯಕ್ತವಾಗು ನಷ್ಟವಾಗು ಎಂದರ್ಥಗಳು. ಆಕಾಶ ಶರಣನಲ್ಲಿ, ಶರಣಪ್ರಸಾದ ಲಿಂಗದಲ್ಲಿ ಅವ್ಯಕ್ತವಾಗುವುದರಿಂದ ಶಾಂತಾತೀತ ಕಲಾನ್ವಿತನಾಗುತ್ತಾನೆ ಶರಣ. ಆಭರಣ ಸುವರ್ಣದಲ್ಲಿ ಅಡಗ್ಗುವಂತೆ ಶರಣ ಧರ್ಮ ಪ್ರಸಾದಲಿಂಗ ಧರ್ಮಿಯಲ್ಲಿ ಅಡಗುವ ಕಲೆ ಶಾಂತಾತೀತ ಕಲೆ. ಶರಣ ಶಾಂತಾತೀತನೆಂದರೆ ಸಾವಿಲ್ಲದಾತನೆಂದರ್ಥ;

ತುರೀಯ ಎಂದರೆ ನಾಲ್ಕನೆಯ, ಅತ್ಯುನ್ನತ ಎಂದು, ಅತೀತ ಎಂದರೆ ಮೀರಿದುದೆಂದು ಅರ್ಥಗಳಾಗುತ್ತವೆ. ತುರೀಯಾತೀತವೆಂದರೆ ನಾಲ್ಕನೆಯ ಅವಸ್ಥೆಯನ್ನು ಅಥವಾ ಸ್ಥಿತಿಯನ್ನು ದಾಟಿದ್ದು ಎಂದು ಅಭಿಪ್ರಾಯ. ಸೃಷ್ಟಿ ಸ್ಥಿತಿ ಲಯ ತಿರೋಧಾನಗಳನ್ನು ದಾಟಿದ ಒಂದು ಸ್ವರೂಪ ಶರಣನು ತುರ್ಯಾತೀತನು, ಶಿವ ಸ್ವರೂಪನು. ತುರ್ಯಾತೀತ ಪದ ಶಿವನನ್ನು ಬೋಧಿಸುತ್ತದೆ; ಶೂನ್ಯವನ್ನು ಬೋಧಿಸುತ್ತದೆ.

ತುರೀಯವೆಂದರೆ ಶಿವಾದ್ವೈತದಲ್ಲಿ ಲಿಂಗಸ್ವರೂಪ; ಅಥವಾ ಲಿಂಗ ಸುಖ; ಅದನ್ನು ಮೀರಿರುವುದೇ ತುರೀಯಾತೀತಾವಸ್ಥೆ. ಅದೇ ಶೂನ್ಯಾವಸ್ಥೆ. ಪ್ರಕಾಶ ಸ್ವರೂಪನಾದ ಪರಶಿವ ಸ್ವರೂಪ.

ಜಾಗ್ರತ್, ಸ್ವಪ್ನ, ಸುಷುಪ್ತಿ, ತುರೀಯ, ತುರೀಯಾತೀತ ಎಂಬಿವು ಅಯ್ದು ಅವಸ್ಥೆಗಳು. ಇವು ಪ್ರಗತಿ ಸೂಚಕಗಳು. ಉಭಯಾಂಗ ಕ್ರಿಯಾ

ದ್ಯೋತಕಗಳು; ಸಂಸ್ಕಾರ ಸೂಚಕಗಳು. ಇವು ಪ್ರವೃತ್ತಿಪರವಾದರೆ ಪ್ರಗತಿಯಾಗದು; ಪ್ರತಿಯಾಗಿ ಅಧೋಗತಿಯುಂಟಾಗುತ್ತದೆ. ನಿವೃತ್ತಿಪರವಾದರೆ ಅಭ್ಯುದಯ ನಿಶ್ಶ್ರೇಯಸಗಳನ್ನುಂಟುಮಾಡುತ್ತವೆ.

ತ್ಯಾಗಾಂಗ ತನ್ನ ಸ್ಥೂಲ ಕ್ರಿಯೆಯಲ್ಲಿ ನಿರತವಾಗಿರುವುದು ಜಾಗ್ರತ್, ಭೋಗಾಂಗ ತನ್ನ ಸೂಕ್ಷ್ಮಕ್ರಿಯಾನಿರತವಾಗಿರುವಿಕೆಯೇ ಸ್ವಪ್ನ. ಯೋಗಾಂಗ ತನ್ನ ಕಾರಣ ಕ್ರಿಯಾ ನಿರತವಾಗಿರುವಿಕೆಯೇ ಸುಷುಪ್ತಿ. ಕ್ರಿಯಾನಿಷ್ಪತ್ತಿಗೊಳ್ಳುವುದೆ ತುರೀಯ. ನಿಷ್ಪತ್ತಿಗೊಂಡು ನಿಜ ಸ್ವರೂಪದಲ್ಲಿ ಲೀನವಾಗಿ ಭಿನ್ನ ಸತ್ತೆಯಿಲ್ಲದಿರುವಿಕೆಯೇ ತುರೀಯಾತೀತ ಸ್ಥಿತಿ.

> "ಆತ್ಮನು ಇಪ್ಪತ್ತೈದು ತತ್ತ್ವ ಸಮಷ್ಟಿಯಾಗಿ ನಿಂದು ಸ್ಥೂಲ ತನುವಿನ ಮರವೆಯೊಡನೆ ಕೂಡಿಕೊಂಡು ಎಚ್ಚರವುಳ್ಳಾತನಾಗಿ ಬಹಿರಂಗದ ದೃಶ್ಯವಾದ ಸಕಲೇಂದ್ರಿಯಂಗಳ ವ್ಯಾಪಾರದೊಡನೆ ಕೂಡಿ ಚರಿಸುವುದೆಂಬುದೀಗ ಜಾಗ್ರಾವಸ್ಥೆ ಎನಿಸುವುದು. ಹದಿನೇಳು ತತ್ತ್ವ ಸಮಷ್ಟಿಯಾಗಿ ನಿಂದು ಸ್ಥೂಲ ತನುವಿನ ಮರವೆ, ಸೂಕ್ಷ್ಮ ತನುವಿನೊಡನೆ ಕೂಡಿಕೊಂಡು ದೃಶ್ಯಾದೃಶ್ಯವಾದ ಕಲ್ಪಿತ ರೂಪಿನ ಕಾಣಿಕೆಯಾಗಿಪ್ಪ ಸುಖ ದುಃಖ ಮೋಹ ರೂಪವಾದ ಸ್ವಪ್ನಂಗಳ ಕಾಣುವುದೇ ಸ್ವಪ್ನಾವಸ್ಥೆ ಎನಿಸುವುದು. ಪ್ರಾಣ, ವಾಯು, ಪ್ರಕೃತಿ ಎಂಬ ಮೂರು ತತ್ತ್ವ ಸಮಷ್ಟಿಯಾಗಿ ನಿಂದು, ಸ್ಥೂಲ ತನುವಿನ ಮರವೆ, ಸೂಕ್ಷ್ಮ ತನುವಿನ ಅರಿವೆ ಏನೂ ಇಲ್ಲದೆ, ಒಂದು ಚರಣಾಯುಧನು ಪರಿದು ಪೋವುತ್ತಿಪ್ಪ ಮರಿಗಳೆಲ್ಲವನು ತನ್ನ ಪಕ್ಕದ (ರೆಕ್ಕೆಯ) ಮರೆಯಲ್ಲಿ ಅಡಗಿಸಿಕೊಂಡು ತಾನೊಂದೆಡೆಯಲ್ಲಿ ನಿದ್ದೆಗೆಯ್ವ ಹಾಗೆ ಬಾಹ್ಯಾಭ್ಯಂತರದ ಸಂಬಂಧವಾದ ಸಕಲ ತತ್ತ್ವಂಗಳನು ತನ್ನಲ್ಲಿಯೇ ಅಡಗಿಸಿಕೊಂಡು ತಾನಾ ಮಾಯಾನಂದ ಭೋಗದಲ್ಲಿ ಪರವಶವನೈದಿರುವಂತಹದ್ದೇ ಸುಷುಪ್ತಾವಸ್ಥೆ ಎನಿಸುವುದು."

"ಜಾಗ್ರದೊಳಗೆ ನಾಲ್ಕರಲ್ಲೊಂದು ಪಾಲು ಸುಷುಪ್ತಿಯು, ಸುಷುಪ್ತಿಯಲ್ಲಿ ನಾಲ್ಕರಲ್ಲೊಂದು ಪಾಲು ಸ್ವಪ್ನವು; ಅದೆಂತೆಂ

> ದೊಡೆ, ಚಂದ್ರ ಸೂರ್ಯರಿಲ್ಲದ ದಿನಂಗಳೇ ಸುಷುಪ್ತಿಕಾಲ ಪ್ರಮಾಣವೂ ಆ ಕತ್ತಲೆಯೊಳಗಿರ್ಪ ನಕ್ಷತ್ರ ಪ್ರಕಾಶವೇ ಸ್ವಪ್ನ ಪ್ರಮಾಣವೂ ಆಗಿ, ನಾಲ್ಕರಲ್ಲೊಂದು ಪಾಲನ್ನು ಕತ್ತಲೆಯು ಜಯಿಸುತ್ತಿರ್ಪುದು. ಜಾಗ್ರತ್ ಸ್ವರೂಪರಾದ ಚಂದ್ರ ಸೂರ್ಯರು ನಕ್ಷತ್ರ ಮಾರ್ಗವನ್ನು ಅನುಸರಿಸಿ ತಿರುಗುತ್ತಿರ್ಪಂತೆ, ಜೀವನು ಜಾಗ್ರದಲ್ಲಿ ಸ್ವಪ್ನ ಮಾರ್ಗವನ್ನನುಸರಿಸಿ ತಿರುಗುತ್ತಿರ್ಪುದರಿಂ ಜಾಗ್ರದೊಳಗಣ ಸ್ವಪ್ನವೇ ನಿರಾಕಾರವು ; ಸುಷುಪ್ತಿಯೊಳಗಣ ಸ್ವಪ್ನವೇ ಸಾಕಾರವು. ನಿರಾಕಾರ ಸ್ವಪ್ನದಲ್ಲಿ ಮನಸ್ಸು ಸಾಕಾರವಾಗಿ ತಿರುಗುತ್ತಿರ್ಪುದು. ಸಾಕಾರ ಸ್ವಪ್ನದಲ್ಲಿ ಶರೀರಾಕಾರವಾಗಿ ತಿರುಗುತ್ತಿರ್ಪುದು. ಸ್ವಪ್ನವಿಲ್ಲದ ಜಾಗ್ರ ಸುಷುಪ್ತಿಗಳೇ ಕಾಲಾತೀತವಾಗಿ, ಪರಮಾನಂದ ರೂಪವಾಗಿ ಒಂದಕ್ಕೊಂದು ಹೊಂದದೇ ಇಹವು. ಅವೇ ಶಿವ ಶಕ್ತಿ ಸ್ವರೂಪಗಳು. ತದ್ವಿಯೋಗದಲ್ಲಿ ಬೀಜವೊಡೆದು ಮೂಡಿ ಪ್ರಕಾಶಿಸುವ ವೃಕ್ಷದಂತಿರ್ಪುದೇ ತೂರ್ಯಾವಸ್ಥೆಯು. ಅಂತಪ್ಪ ಜಾಗ್ರಸ್ವಪ್ನ ಸುಷುಪ್ತಿಗಳನಳಿದ ತೂರ್ಯವೇ ನಿಜವು. ನಿಜವೇ ತಾನು. ತನ್ನಂ ತಾನರಿವುದೇ ಮೋಕ್ಷವು ಕಾಣಾ ಘನ ದೊಡ್ಡ ದೇಶಿಕಾರ್ಯ ಗುರು ಪ್ರಭುವೇ.”

–ವಚನ ಶಾಸ್ತ್ರ ಸಾರ, ಭಾಗ–೨.

ತುರ್ಯವೆಂದರೆ ನಿಜವೆಂದು ನಿಜವೇ ತಾನೆಂದು ತನ್ನನರಿವುದೇ ಮೋಕ್ಷವೆಂದು ಶರಣ ವಾಣಿ ಸಾರಿದೆ. ತನ್ನ ಅರಿವನ್ನು ಮೀರಿ ಮುಂದುವರಿದವನೆ ಶರಣ, ಶರಣನ ಸ್ವಪ್ರಜ್ಞೆ ನಿಷ್ಪತ್ತಿಗೊಂಡಿರುತ್ತದೆ. ಇದರಿಂದಾಗಿ ಶರಣ ತುರೀಯಾವಸ್ಥೆಗೆ ಅತೀತನಾಗಿರುತ್ತಾನೆ. ಕಲಾತೀತ ಅವಸ್ಥಾತೀತ ಶರಣ. ಆತನ ಭಾವ ವೈಶಾಲ್ಯ ಅಷ್ಟಿಷ್ಟಲ್ಲ. ಆತನು ಅರಿವು ಮರವೆಗಳಿಗೆ ಸಿಲುಕುವವನಲ್ಲ. ಅವನ ಗುರಿ ಚಿಕ್ಕದಲ್ಲ ; ಅದು ತಪ್ಪುವುದಿಲ್ಲ.

"ಅರಿವಲ್ಲಿ ಶರಣ, ಮರೆವಲ್ಲಿ ಮಾನವನೆಂದು ನುಡಿವ
ಅಜ್ಞಾನಿಗಳ ಮಾತ ಕೇಳಲಾಗದು. ಅದೇನು ಕಾರಣವೆಂದಡೆ :
ಜಗದಗಲ ಗುರಿಯ ಹೂಡಿ, ಮುಗಿಲಗಲ ಬಾಣವನೆಸೆವಡೆ
ತಪ್ಪಿ ಕಡೆಗೆ ಬೀಳುವ ಸ್ಥಾನವುಂಟೆ ?
ಒಳ ಹೊರಗೆ ಸರ್ವಾಂಗಲಿಂಗವಾದ ಶರಣನಲ್ಲಿ
ಅರುಹು ಮರಹುಗಳು ತೋರಲೆಡೆಯುಂಟೆ ?
ಇದು ಕಾರಣ, ನಮ್ಮ ಅಖಂಡೇಶ್ವರನ ಶರಣನಲ್ಲಿ ತೋರುವ
ತೋರಿಕೆಯೆಲ್ಲ ಲಿಂಗವು ತಾನೇ ಕಾಣಿರೋ !"

ಶರಣನದು ಪೂರ್ಣ ಯೋಗ

ಶಾಂತ್ಯತೀತ ಕಲೆಯುಳ್ಳ ಶರಣ ಪೂರ್ಣ ಯೋಗಿ. ತುರೀಯಾತೀತನಾದ ಶರಣನಿಗೆ ಶಿವನಿಗೆ ಭಿನ್ನವಾದ ಅಥವಾ ಶಿವತ್ವಕ್ಕೆ ಭಿನ್ನವಾದ ಬೇರೆ ಯಾವ ವೃತ್ತಿ ಸಾಮೀಪ್ಯ-ವೃತ್ತಿ ಸಾರೂಪ್ಯಗಳಿರುವುದಿಲ್ಲ. ಶಿವಸ್ವರೂಪ ಸಾಕ್ಷಾತ್ಕಾರವೇ ಶರಣನ ಪರಮ ಧ್ಯೇಯ ; ಚರಮಧ್ಯೇಯ. ತಾನೇ ಶಿವ, ಶಿವನೇ ತಾನು ಎಂಬ ಮಹದರಿವು ಶರಣನದು. ಸದಾ ಶಿವಾಕಾರ ವೃತ್ತಿಯೇ ಶರಣ ಜೀವನ ಜೀವಾಳ. ಅದಕ್ಕಾಗಿಯೇ ಸರ್ವಸ್ವವನ್ನೂ ಸೂರೆಗೊಂಡಿರುತ್ತಾನೆ. ತ್ಯಾಗ ಭೋಗಗಳನ್ನು ಯೋಗದಲ್ಲಿ ಸಮನ್ವಯಗೊಳಿಸಿರುತ್ತಾನೆ. ಯೋಗಾಂಗವನ್ನು ಚಿದಾಕಾಶವನ್ನಾಗಿಸುತ್ತಾನೆ. ಯೋಗಾಂಗ ಸನ್ನಿಹಿತ ಶರಣ. ಶಿವಸ್ವರೂಪಧಾರಣ ಆತನ ಸಾಯುಜ್ಯ. ಶಿವ ಯೋಗವೇ ಆತನ ಸತ್ಸಾಧನ ; ಅದೇ ಆತನ ಸಿದ್ಧಿ.

ಆತನ ಆ ಶಿವಯೋಗವೇ ಪೂರ್ಣ ಯೋಗ. ಅದರಲ್ಲಿ ಎಲ್ಲ ಯೋಗಗಳು ಎಲ್ಲ ಭಕ್ತಿಗಳು, ಎಲ್ಲ ಶಕ್ತಿಗಳು, ಎಲ್ಲ ಕಲೆಗಳು ಸಮನ್ವಯವಾಗಿರುತ್ತವೆ. ಮಂತ್ರ, ಲಯ, ಹಠ, ರಾಜಯೋಗಗಳು ಶಿವ ಯೋಗದಲ್ಲಿವೆ ಶ್ರದ್ಧೆ ನಿಷ್ಠೆ ಅವಧಾನ ಅನುಭವ ಆನಂದಗಳು ಶಿವಯೋಗವನ್ನು ರೂಪಿಸಿವೆ. ಕ್ರಿಯೆ, ಜ್ಞಾನ, ಇಚ್ಛೆ, ಆದಿ, ಪರಾಶಕ್ತಿಗಳ ಸಹಕಾರ ಶಿವಯೋಗಕ್ಕಿದೆ. ನಿವೃತ್ತಿ ಪ್ರತಿಷ್ಠೆ, ವಿದ್ಯೆ, ಶಾಂತಿ, ಶಾಂತ್ಯತೀತ ಕಲೆಗಳು ಶಿವ ಯೋಗದಲ್ಲಿವೆ. ಶರಣನ ಚಿತ್ತ ಬುದ್ಧಿ ಅಹಂಕಾರ ಮನ ಜ್ಞಾನಗಳು ತಂತಮ್ಮ ವೃತ್ತಿ ಪ್ರವೃತ್ತಿಗಳನ್ನು ಬಿಟ್ಟು ನಿವೃತ್ತಿಯಿಂದ ಮೆಲ್ಲ ಮೆಲ್ಲನೆ ಹಂತ ಹಂತವಾಗಿ ಮೇಲಕ್ಕೆ ಹತ್ತಿ ಶಾಂತಿ ವೃತ್ತಿಯನ್ನೂ ದಾಟಿ ಶಾಂತ್ಯತೀತವಾಗಿ ಶಿವನ ಯೋಗವಾಗಿ ಶಿವಾಕಾರ

ವಾಗಿ ಕೇಂದ್ರೀಕರಿಸಿರುತ್ತವೆ. ಶಿವಭಕ್ತಿ ಶಿವಧ್ಯಾನ ಶಿವಜ್ಞಾನ ಶಿವವ್ರತ ಶಿವಪೂಜೆ ಇವೇ ಶರಣನ ಚಿತ್ತಾದಿಗಳ ವೃತ್ತಿಗಳಾಗಿರುತ್ತವೆ. ಕರ್ಮೇಂದ್ರಿಯ ಜ್ಞಾನೇಂದ್ರಿಯಗಳು ಶಿವನ ಯೋಗದಲ್ಲಿ ಪೂರ್ಣತೆಯನ್ನು ಪಡೆದಿರುತ್ತವೆ. ಅಂದರೆ ಪೂರ್ಣ ತೃಪ್ತಿಯನ್ನು ತಾಳಿರುತ್ತವೆ. ಅಂದರೆ ಶರಣನ ಘ್ರಾಣ ಸುಗಂಧರೂಪ ಶಿವಪ್ರಸಾದದಿಂದ, ರಸನೆ ಸುರಸರೂಪ ಶಿವ ಪ್ರಸಾದದಿಂದ, ನೇತ್ರ ಸುರೂಪ ಶಿವಪ್ರಸಾದದಿಂದ, ತ್ವಕ್ಕು ಸುಸ್ಪರ್ಶರೂಪ ಶಿವ ಪ್ರಸಾದದಿಂದ ಶ್ರೋತ್ರ ಸುಶಬ್ದರೂಪ ಶಿವಪ್ರಸಾದದಿಂದ ಪೂರ್ಣ ತೃಪ್ತಿಗೊಳಗಾಗಿರುತ್ತವೆ. ಅಂತೆಯೇ ಪೂರ್ಣಪ್ರಜ್ಞೆಯಿಂದ ಅಂತಃಕರಣಗಳು ಪೂರ್ಣವಾದ ಶಿವಾನಂದದಲ್ಲಿ ಮುಳುಗಿ ತಮ್ಮನ್ನು ತಾವು ಮರೆತಿರುತ್ತವೆ. ತಲ್ಲೀನತೆಯನ್ನು ತಳೆದ ಅವಕ್ಕೆ ತಮ್ಮತನವೇ ಇರುವುದಿಲ್ಲ. ಇಲ್ಲದ ಬಳಿಕ ಬೇರೆ ವೃತ್ತಿಗಳಿಗಿಂಬೆಂಬುದು ಇನ್ನೆಲ್ಲಿ ?

ಶರಣನ ಪೂರ್ಣಯೋಗಕ್ಕೆ ಅನುಭವ ಆನಂದಗಳೆ ಮುಖ್ಯ. ಕ್ರಿಯೆ-ಜ್ಞಾನಗಳು ಒಂದಾಗಿ ಕರಿಗೊಂಡುದು ಅನುಭವ. ಅರಿವು-ಅನುಭವಗಳು ಒಂದಾಗಿ ನೆಲೆಗೊಂಡುದು ಆನಂದ. ಶರಣನದು ಕೇವಲ ವೃತ್ತಿ ನಿರೋಧರೂಪ ಯೋಗವಲ್ಲ; ವೃತ್ತಿಗತ ಅಹಂಕಾರ ನಿರೋಧವೇ ಯೋಗ. ಇದರಿಂದಾಗಿ ಈತನ ಶಿವಯೋಗಕ್ಕೆ ಭಕ್ತಿಯೇ ಮುಖ್ಯ. ಶ್ರದ್ಧೆ ನಿಷ್ಠೆ ಅವಧಾನ ಅನುಭವಗಳ ಮೇಲೆ ಅರಳಿದ ಆನಂದ ಭಕ್ತಿಯಿಂದ ಶರಣನು ತನ್ನ ಎಲ್ಲ ವೃತ್ತ್ಯಹಂಕಾರಗಳನ್ನು ದಮನಿಸುತ್ತಾನೆ. ತಾನು-ತನ್ನದು-ತನಗೆ ಎಂಬ ಭಾವನೆಯನ್ನು ಬಿಟ್ಟು ಎಲ್ಲವೂ ಶಿವನದು, ಶಿವನಿಗಾಗಿ ಎಂದು ಭಾವಿಸುತ್ತಾನೆ. ಭಾವಿಸಿದಂತೆ ನಿವೇದನ ಮಾಡುತ್ತಾನೆ. ಈತನ ಭಕ್ತಿ ಭಾವದಲ್ಲಿ ಅಭ್ಯಾಸ ವೈರಾಗ್ಯಗಳೆರಡೂ ಅಂತರ್ಗತವಾಗಿರುತ್ತವೆ. ಪ್ರೇಮವುಳ್ಳವನು ತ್ಯಾಗಿಯಾಗಬಲ್ಲ, ವಿರಾಗಿಯಾಗಬಲ್ಲ. ತನ್ನ ಪ್ರೇಮಕ್ಕೆ ಆಧಾರವಾದ ವಸ್ತುವಿಗಾಗಿ ಏನನ್ನಾದರೂ ತ್ಯಾಗ ಮಾಡಬಲ್ಲ; ಅದರ ಸಾಧ್ಯತೆಗಾಗಿ ಯಾವ ಸಾಧನೆಯನ್ನಾದರೂ ಮಾಡಬಲ್ಲ.

ಶಿವಭಾವದಲ್ಲಿ ಚಿತ್ತ ವಿಕ್ಷೇಪವಾಗದು. ಶಿವಾರ್ಚನ ಶಿವಾರ್ಪಣ ಶಿವಾನುಭವಗಳಲ್ಲಿ ಶರಣ ತಲ್ಲೀನನಾಗಿರುತ್ತಾನೆ. ಏಕಾಗ್ರತೆ ನಿರೋಧಗಳಿಗೆ

ಇವುಗಳಿಗಿಂತ ಉತ್ತಮ ಉಪಾಯ, ಉನ್ನತ ಸಾಧನೆ ಬೇರಿಲ್ಲ. ಇವನ್ನೆಲ್ಲ ಒಳಗೊಂಡ ಶಿವಯೋಗ ಪೂರ್ಣಯೋಗವಾಗದೇನು ?

ಇನ್ನೊಂದು ಬಗೆಯಿಂದ ವಿಚಾರಿಸಿದರೂ ಶಿವಯೋಗ ಸಹಜವಾಗಿ ಪೂರ್ಣಯೋಗವೆನಿಸುತ್ತದೆ ಸದ್ಭಕ್ತ, ಚಿನ್ಮಾಹೇಶ್ವರ, ಆನಂದಪ್ರಸಾದಿ, ನಿತ್ಯ ಪ್ರಾಣಲಿಂಗಿ, ಪರಿಪೂರ್ಣ ಶರಣ; ಅಖಂಡ ಐಕ್ಯ ಈ ದೃಷ್ಟಿಯಲ್ಲಿ ಶರಣ ಪರಿಪೂರ್ಣ. ಶರಣಮಾರ್ಗವಾದ ಶಿವಯೋಗ ಪೂರ್ಣಯೋಗ.

ಶಿವ ಅಂದರೂ ಪರಮಾತ್ಮ, ಪೂರ್ಣವೆಂದರೂ ಪರಮಾತ್ಮ. ಅಪೂರ್ಣಾಂಗನು ಪೂರ್ಣಸ್ವರೂಪಲಿಂಗವಾಗುವುದೆ ಪೂರ್ಣಯೋಗ; ಅದೇ ಸಮರಸ ರೂಪ ಶಿವಯೋಗ.

ಚಿನ್ನದ ಚಿದ್ಬಿಂದು ಚಿತ್ಕಳೆಗಳ ಉಪಾಸಕ ಶರಣ. ಚಿತ್ಕಳೆಯ ಸಾಕ್ಷಾತ್ಕಾರದಿಂದ ಜಾಗ್ರತ್ತನ್ನು ಚಿದ್ಬಿಂದುವಿನ ಸಾಕ್ಷಾತ್ಕಾರದಿಂದ ಸ್ವಪ್ನಾವಸ್ಥೆಯನ್ನು ಚಿನ್ನಾದ ಸಾಕ್ಷಾತ್ಕಾರದಿಂದ ನಿದ್ರಾವಸ್ಥೆಯನ್ನು ಶರಣ ಜಯಿಸುತ್ತಾನೆ. ಮೂಲ ಚಿತ್ತಿನಿಂದ ತುರೀಯಾವಸ್ಥೆಯನ್ನು ಜಯಿಸಿ ತುರೀಯಾತೀತನೆನಿಸುತ್ತಾನೆ. ಪರಮಪ್ರಸಾದಸ್ವರೂಪನಾಗುತ್ತಾನೆ. ಶುದ್ಧ ಚಿನ್ಮಾತ್ರನೆನಿಸುತ್ತಾನೆ. ಪರಮ ಪ್ರಸನ್ನತ್ವವೆ ಪೂರ್ಣಯೋಗ.

ಆಕಾಶ ಸ್ವರೂಪನಾದ ಶರಣನಿಗೆ ಯಾವ ಕೊರತೆಯಿಲ್ಲ; ಯಾವ ಕವಲಿಲ್ಲ. ಅದು ಪೂರ್ಣ, ಇದು ಪೂರ್ಣ ಎಂದು ಭಾವಿಸುತ್ತಾನೆ, ಕೊನೆಗೆ ಅದು-ಇದು ಎಂಬ ಭೇದವನ್ನೂ ತೊರೆದಿರುತ್ತಾನೆ. ಶರಣ ಮಿಥ್ಯಾವಾದಿಯಲ್ಲ. ಜಗದೀಶನಂತೆ ಜಗತ್ತನ್ನೂ ಕಾಣುತ್ತಾನೆ. ದೇವನಂತೆ ದೇಹವನ್ನೂ ಕಾಣುತ್ತಾನೆ. ಹೇಯ-ಆಧೇಯಗಳ ಹೋರಾಟವನ್ನು ಮೀರಿರುತ್ತಾನೆ. ಎಲ್ಲವನ್ನು ತುಂಬು ನೋಟದಿಂದ ನೋಡುತ್ತಾನೆ. ಶರಣನಿಗೆ ಅಜ್ಞಾನಾಂಧಕಾರದ ಆವರಣ ಇರುವುದಿಲ್ಲ. ಲಿಂಗವು (ಶಿವನು) ಅಂಗನ (ಶರಣನ) ಪ್ರಭುವೆಂಬ ನಿಶ್ಚಯ ಭಾವವುಂಟಾಗಿರುತ್ತದೆ; ಪರಮಾನುಭಾವವುಂಟಾಗಿರುತ್ತದೆ. ಅಂತಾದಾಗ ಶರಣ ತನ್ನ ಆತ್ಮಾನಂದದಲ್ಲಿ ಅವಿರಳನಾಗುತ್ತಾನೆ; ಕೇವಲನಾಗುತ್ತಾನೆ. ಶಿವಶರಣ ತನ್ನ ಸಾಧನೆಯಲ್ಲಿ ಭೋಗ-ಮೋಕ್ಷಗಳೆರಡನ್ನೂ ಪಡೆಯುತ್ತಾನೆ. ತ್ಯಾಗ ಭೋಗ ಯೋಗಗಳ ಸಮನ್ವಯಾಚಾರ್ಯನೆನಿಸುತ್ತಾನೆ. ಉಭಯ

ದೃಷ್ಟಿಯಿಂದಲೂ ತುಂಬು ಬಾಳು ಬಾಳುತ್ತಾನೆ. ಲೌಕಿಕ-ಪರಮಾರ್ಥಗಳೆರಡನ್ನು ಕೂಡಿಸಿ ನಡೆಸುತ್ತಾನೆ. ತಾನಳಿಯದೆ ತನ್ನೊಳಗೆ ಕೂಡುತ್ತಾನೆ. ತೆರಪಿಲ್ಲದೆ ತುಂಬಿ ಉಳಿಯುತ್ತಾನೆ.

ಚಿತ್ತ ಬುದ್ಧಿ ಅಹಂಕಾರಗಳ ವೃತ್ತಿಗಳನ್ನು ನಿರೋಧಿಸುವಾತನು ಪ್ರಸಾದಿ. ಮನ ಪ್ರಾಣಗಳನ್ನು ನಿರೋಧಿಸುವಾತನು ಪ್ರಾಣಲಿಂಗಿ. ಜ್ಞಾನಾನುಭಾವಗಳನ್ನು ಸಂಬಂಧಿಸುವಾತನು ಶರಣ. ಸಂಬಂಧಿಸುವಿಕೆಯು ಶಿವಯೋಗ. ಆ ಶಿವಯೋಗವೇ ಪೂರ್ಣಯೋಗ.

ವಿಯೋಗದಲ್ಲಿ ಅಪೂರ್ಣತೆಯಿದೆ. ಸಂಯೋಗದಲ್ಲಿ ಪೂರ್ಣತೆಯಿದೆ. ಸಂಯೋಗದಲ್ಲಿ ಸಮಷ್ಟಿ ಚೇತನದ ಆವಿರ್ಭಾವವಾಗುತ್ತದೆ. ಆಗ ವ್ಯಕ್ತಿ ಚೇತನ ವಿಶ್ವಚೇತನವಾಗಿ ವಿಯತ್ತಿನಂತೆ ವಿಶಾಲವಾಗುತ್ತದೆ. ಶರಣ ಚೇತನ ಹಾಗಾಗುತ್ತದೆ. ಸಮಷ್ಟಿ ಚೇತನದ ಸನ್ನಿಹಿತತ್ವವನ್ನು ಸಂಪಾದಿಸುತ್ತದೆ. ಸಂಪಾದಿಸಿ ಅಪೂರ್ಣತ್ವದಿಂದ ಪೂರ್ಣತ್ವಕ್ಕೇರುತ್ತದೆ. ಅಣುತ್ವದಿಂದ ಮಹತ್ತ್ವಕ್ಕೆ ಬರುತ್ತದೆ.

ಶಿವಯೋಗ ಅದೊಂದು ಸರ್ವಸಮನ್ವಯ ಯೋಗ. ಅದರಲ್ಲಿ ಏನೆಲ್ಲದಕ್ಕೂ ಅವಕಾಶವಿದೆ. ಆದರೆ ಅದೆಲ್ಲ ಅಮಲವಾಗಿರಬೇಕು. ಅಂದರೆ ಅಶಿವವಾಗಿರಬಾರದು. ಅಶಿವಕರ್ಮ ಅಶಿವಜ್ಞಾನ, ಅಶಿವಾನುಭವಗಳು ಅದರ ಬಳಿ ಸುಳಿಯಲಾಗದು. ಅಶಿವಭಕ್ತಿ ರಕ್ತಿಗಳಿಗೂ ಅದರಲ್ಲಿ ಇಂಬಿಲ್ಲ. ಅಸತ್ತಿನಿಂದ ಸತ್ತಿಗೆ ತಮಸ್ಸಿನಿಂದ ತೇಜಸ್ಸಿಗೆ, ಮೃತ್ಯುವಿನಿಂದ ಅಮೃತತೆಗೆ ಕರೆದೊಯ್ಯುವುದೇ ಶಿವಯೋಗದ ಧ್ಯೇಯ. ಅಪೂರ್ಣತೆಯಿಂದ ಪೂರ್ಣತೆಗೆ ನಿಲುಕಿಸುವುದೇ ಅದರ ಹೃದಯ.

ಅದಕ್ಕೆ ಅವರಿವರೆಂಬ ಭೇದವಿಲ್ಲ. ಯಾರಾದರೂ ಯಾವ ವರ್ಣದವರಾದರೂ ಅದನ್ನು ಆಚರಿಸಬಹುದು. ಯಾವ ವಯಸ್ಸಿನವರಾದರೂ ಸ್ತ್ರೀಯರಾದರೂ ಅದನ್ನು ಸಾಧಿಸಬಹುದು. ಅದಕ್ಕೆ ಹಲವು ಹೊಲಬುಗಳಿವೆ. ಕ್ರಿಯೆ, ಜ್ಞಾನ, ಧ್ಯಾನ, ಜಪ, ತಪ, ಅರ್ಚನ, ಅರ್ಪಣ, ಯೋಗ, ಭಕ್ತಿ ಇವುಗಳಲ್ಲಿ ಯಾವುದಾದರೂ ಆಗಬಹುದು. ಇವೆಲ್ಲವೂ ಅದರಲ್ಲಿವೆ. ನಿಷ್ಕಲ

ಬುದ್ಧಿ, ನಿಶ್ಚಲ ಶ್ರದ್ಧೆಗಳಿದ್ದರೆ ಸಾಕು. ಕ್ರಿಯಾಶಕ್ತಿ ಹೃದಯಭಕ್ತಿಗಳಿದ್ದರಾಯಿತು.

ಹಲವಾಗಿಸಿ ಅಪೂರ್ಣತೆಗೆ ತರುವವಳು ಶಕ್ತಿ. ಹಲವನ್ನು ಒಂದಾಗಿಸಿ ಪೂರ್ಣತೆಗೆ ಬರಿಸುವವಳು ಭಕ್ತಿ. ಶಿವಯೋಗಿಗೆ ಭಕ್ತಿಯೇ ಬೆನ್ನಾಸರ; ತೆರಹಿಲ್ಲದ ತುಂಬುನಿಲುವಿಗೆ ನಡೆದು ನಿಲುಕಲು ಕೈಗೋಲು. ಭಕ್ತಿಯಿಲ್ಲದ ಯೋಗ ಯೋಗವಲ್ಲ; ಪೂರ್ಣವಲ್ಲ.

ಇಷ್ಟಾದರೂ ಶಕ್ತಿಯ ಕೃಪೆ ಬೇಕೇ ಬೇಕು. ಅದಿಲ್ಲದೆ ಯೋಗ ಪೂರ್ಣವಾಗದು; ಶಿವವಾಗದು. ಪ್ರಸ್ತುತ ಪರಾಶಕ್ತಿ ಪ್ರಸಾದಲಿಂಗದಾಶ್ರಯದಲ್ಲಿ ವ್ಯಕ್ತವಾಗಿ ಶರಣನ ಸರ್ವಾಂಗವನ್ನು ವ್ಯಾಪಿಸಿ ಉಜ್ವಲಗೊಳಿಸುತ್ತಾಳೆ; ಉತ್ಸಾಹ ತುಂಬುತ್ತಾಳೆ. ಹೃದಯ ಕಂಠ ಮುಖಗಳ ಮುಖಾಂತರ ಹೊರಹೊಮ್ಮಿ ಜಗತ್ತಿನ ಜನತೆಯನ್ನು ತಣಿಸುತ್ತಾಳೆ. ಶಬ್ದಜ್ಯೋತಿಯಾಗಿ ವಿಶ್ವದಲ್ಲಿ ಬೆಳಗುತ್ತಾಳೆ. ಪರಶಿವನ ಲೀಲೆಯನ್ನು ಪ್ರಪಂಚದಲ್ಲಿ ಪ್ರಕಟಿಸುತ್ತಾಳೆ. ತನ್ನ ಕಂದರಾದ ಜೀವರ ಕೊರತೆಗಳನ್ನೆಲ್ಲಾ ತುಂಬಿ ತರುತ್ತಾಳೆ. ಕ್ಲೇಶಗಳನ್ನೆಲ್ಲ ನಾಶಮಾಡುತ್ತಾಳೆ. ಕರುಣಾಮಯಿಯಾಗಿ ಮಾತೃಹೃದಯಿಯಾಗಿ ಶರಣು ಹೊಕ್ಕವರನ್ನು ಕಾಪಾಡುತ್ತಾಳೆ. ಪೂರ್ಣ ಪ್ರಸನ್ನತೆಯನ್ನು ಅನುಗ್ರಹಿಸುತ್ತಾಳೆ. ಶರಣನ ಯೋಗವನ್ನೂ ಯೋಗಾಂಗವನ್ನೂ ಪೂರ್ಣಗೊಳಿಸುತ್ತಾಳೆ. ಶರಣನ ಶಿವಯೋಗಕ್ಕೆ ಪೂರ್ಣಶಕ್ತಿಯಾಗಿ ನಿಲ್ಲುತ್ತಾಳೆ. ಇದೇ ಪೂರ್ಣ ಯೋಗದ ಲಕ್ಷಣ. ಪರಾಶಕ್ತಿಯ ಕರುಣಾಕಟಾಕ್ಷವಿಲ್ಲದೆ ಯೋಗ ಪೂರ್ಣವಾಗದು. ಶರಣ ಅದನ್ನು ಪಡೆದಿರುತ್ತಾನೆ. ಅದರಿಂದಾಗಿ ಆತನು ಪರಾ ವಿದ್ಯೆಯನ್ನು ಮೈಗೂಡಿಸಿಕೊಂಡಿರುತ್ತಾನೆ. ಪರಶಿವನ ಸಾಕ್ಷಾತ್ಕಾರಕ್ಕೆ ಸಾಮರ್ಥ್ಯವನ್ನು ಗಳಿಸಿಕೊಂಡಿರುತ್ತಾನೆ. ಪರಾಪ್ರಕೃತಿ ಭಾವವುಳ್ಳವನಾಗಿರುತ್ತಾನೆ. ಇಲ್ಲವಾದರೆ ಶರಣನಿಗೆ ಗಂಧ ರಸ ರೂಪ ಸ್ಪರ್ಶ ಶಬ್ದಗಳನ್ನು ಪ್ರಸಾದವಾಗಿಸನು. ಪೃಥ್ವಿ ಅಪ್ ತೇಜ ವಾಯು ಆಕಾಶತತ್ತ್ವಗಳನ್ನು ತಾತ್ತ್ವಿಕವನ್ನಾಗಿಸನು. ಸರ್ವೇಂದ್ರಿಯ ಕರಣಗಳನ್ನು ಪರಿಶುದ್ಧಗೊಳಿಸನು; ಮುಖ-ಹಸ್ತಗಳನ್ನಾಗಿಸನು. ಕ್ರಿಯಾಜ್ಞಾನೇಚ್ಛಾದಿ ಶಕ್ತಿಗಳ ನೆರವನ್ನು ಪಡೆಯನು. ಆಚಾರ, ಗುರು, ಶಿವ, ಜಂಗಮ, ಪ್ರಸಾದ ಲಿಂಗಗಳ ಅನುಗ್ರಹಕ್ಕೆ ಒಳಗಾಗನು. ಷಟ್‌ಸ್ಥಲಗಳಿಂದ ಕಳೆಗೊಳ್ಳನು. ಇವೆಲ್ಲವೂ

ಇವನಲ್ಲಿರುವುದರಿಂದ ಇವನದು ಪೂರ್ಣಯೋಗ. '...ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವಿನ ಶರಣರು ಅದ್ವೈತ ಆನಂದದಿಂದ ಸಂಪೂರ್ಣ ಕಾಣಿರೋ !' "ಅಂಗದ ಮೇಲೆ ಲಿಂಗಪರತು, ಲಿಂಗದ ಮೇಲೆ ಅಂಗವರತು, ಭಾವತುಂಬಿ ಪರಿಣಾಮವರತು, ನಾಮವಿಲ್ಲದ ದೇವರಿಗೆ ನೇಮವೆಲ್ಲಿಯದೋ ಗುಹೇಶ್ವರಾ ?" ಪೂರ್ಣಯೋಗದ ಪರಮ ಪರಿಣಾಮವಿದು. ಅಂಗದಲ್ಲಿ ಲಿಂಗದ, ಲಿಂಗದಲ್ಲಿ ಅಂಗದ ಕೊರತೆಯಿರಬಾರದು. ಬಗೆ ಬರಿದಾಗಿರಬಾರದು. ದೇವಭಕ್ತನೆಂಬ ಭೇದವಾಗಲಿ ನಾಮನೇಮಗಳ ಸಂಕುಚಿತ ದೃಷ್ಟಿಯಾಗಲಿ ಇರಬಾರದು. ಸ್ವಾರ್ಥದ ಸೊಗಡಿರಬಾರದು. ಬ್ರಹ್ಮಾಂಡವನ್ನೆಲ್ಲ ತನ್ನ ಪಿಂಡಾಂಡದಂತೆ ಭಾವಿಸಿ ಬ್ರಹ್ಮಾಂಡ ಸೇವೆಯಲ್ಲಿ ಸನ್ನದ್ಧನಾಗಿರಬೇಕು. ಅದುವೇ ತನ್ನ ದಿವ್ಯ ಧರ್ಮವೆಂದು ದೇವರೆಂದು ಭಾವಿಸಿರಬೇಕು.

ನೆಲ-ಮುಗಿಲುಗಳ ಸಂಗಮ ಶರಣ

ನೆಲ-ಮುಗಿಲ ಇವೆರಡು ಸಾಂಕೇತಿಕ ಶಬ್ದಗಳು. ಇವಕ್ಕೆ ಹಲವಾರು ಅರ್ಥಗಳುಂಟು; ಭಾವಗಳುಂಟು. ಅವರವರ ಅನುಭಾವ ಎಷ್ಟಿದ್ದರೆ ಅಷ್ಟು ಅರ್ಥ–ಭಾವಗಳುಂಟು. ಅವೆಲ್ಲವನ್ನು ಶರಣ ತನ್ನಲ್ಲಿ ಸಂಗಮಿಸಿಕೊಂಡಿರುತ್ತಾನೆ.

ಮೊದಲು ವಾಚ್ಯಾರ್ಥಗಳಾದ ಮಹಾಭೂತಗಳ ಮೀಮಾಂಸೆಯನ್ನೇ ಮಾಡೋಣ: ಇವೆರಡರ ನಿರ್ದೇಶದಿಂದ ನಡುವಿನ ಜಲ-ಅನಲ-ಅನಿಲಗಳೂ ನಿರ್ದೇಶಿತವಾಗುತ್ತವೆ. ಪಂಚಭೂತಾತ್ಮಕವಾದುದು ಈ ಪ್ರಕೃತಿ. ಅಂತೆಯೇ ವ್ಯಷ್ಟಿ ಪ್ರಕೃತಿಯಾದ ಕಾಯವೂ ಪಂಚಭೂತಾತ್ಮಕವಾದುದು. ಪಂಚೀಕರಣ ಪಥದಲ್ಲಿ ಇವುಗಳ ಸಂಗಮ ನಿಸರ್ಗ; ಸಾಮಾನ್ಯ. ಸಮಷ್ಟೀಕರಣ ಷಟ್‌ಸ್ಥಲ ಪಥದಲ್ಲಿ ಇವುಗಳ ಸಮರಸ ಸಂಸ್ಕರಣ ಸಂಸರ್ಗ ಅಸಾಮಾನ್ಯ.

ನೆಲ ಅನ್ನಮಯವಾಗಿ, ಮುಗಿಲು ಆನಂದಮಯವಾಗಿ ಶರೀರದಲ್ಲಿ ಸಂಗಮವಾಗಿರುತ್ತವೆ. ನೆಲ ಗಂಧ-ಘ್ರಾಣಗಳಾಗಿ, ಮುಗಿಲು ಶಬ್ದ-ಶ್ರೋತ್ರಗಳಾಗಿ ಸಂಗಮವಾಗಿರುತ್ತವೆ. ನೆಲ ಆಧಾರವಾಗಿ, ಮುಗಿಲು ವಿಶುದ್ಧಿಯಾಗಿ ಸಂಗಮವಾಗಿರುತ್ತವೆ. ನೆಲ ಚಿತ್ತಾಗಿ, ಮುಗಿಲು ಜ್ಞಾನವಾಗಿ ಸಂಗಮವಾಗಿರುತ್ತವೆ. ಶರಣನು ತನ್ನ ಸಂಸ್ಕಾರಬಲದಿಂದ ನೆಲವೆಂಬ ಕ್ರಿಯೆಯನ್ನು ಮುಗಿಲೆಂಬ ಜ್ಞಾನವನ್ನು ಸಂಗಮಗೊಳಿಸಿ ಸ್ವಾನುಭಾವಿಯಾಗುತ್ತಾನೆ.

“ಜಗದಗಲ ಮಂಟಪಕ್ಕೆ
ಮುಗಿಲಗಲ ಮೇಲುಕಟ್ಟಿನಲ್ಲಿ ಚಿತ್ರ ವಿಚಿತ್ರವ ನೋಡುತ್ತ
ಧ್ಯಾನ ವಿಶ್ರಾಂತಿಯಲ್ಲಿ ದಿಟಪುಟವೆಂಬ ಸೊಂಪು

ದರ್ಶನವ ನೋಡುತ್ತ ನೋಡುತ್ತ
ಗಗನ ಗಂಭೀರದಲ್ಲಿ ಉದಯವಾಯಿತ್ತ ಕಂಡೆ,
ಗುಹೇಶ್ವರನೆಂಬ ಲಿಂಗ ತಾನೆಯಾಗಿ !"

ಈ ಜಗತ್ತೆಲ್ಲವನ್ನು ಶರಣನ ಚಿತ್ತ ತನ್ನೊಳಗಿರಿಸಿಕೊಂಡು ಶರಣಾಂಗವಾಗಿರುತ್ತದೆ. ಶರಣಾಂಗವೆ ಮಂಟಪ ಅಂದರೆ ಶರಣನ ಶರೀರವೆ ಚಪ್ಪರ. ಅದರ ಮೇಲು ಕಟ್ಟು ಚಿದಂಬರ. ಅಥವಾ ಶರಣನ ಚಿತ್ತವೇ ಚಪ್ಪರ; ಶರಣನ ಚಿನ್ಮಯ ಸ್ವರೂಪವೇ ಅಂಬರ. ಆದೇ ಮೇಲುಕಟ್ಟು. ಶರಣನ ಸದಾಚಾರ ಶರೀರವೆಂಬ ಜಗದಗಲವನ್ನು ಬಳಸಿಕೊಂಡು ಹರವಾಗಿರುತ್ತದೆ. ಸುವಿಚಾರ ಅಂತಃಕರಣಗಳನ್ನೆಲ್ಲ ವ್ಯಾಪಿಸಿಕೊಂಡು ಮುಗಿಲಗಲವಾಗಿರುತ್ತದೆ. ಹೀಗೆ ಸಂಗಮವಾದ ಶರಣಾಂಗ ಮಂಟಪದೊಳಗೆ ಪ್ರಸನ್ನವಾದ ಪ್ರಸಾದಲಿಂಗವು ಆಚಾರ-ಗುರು-ಶಿವ-ಜಂಗಮ-ಮಹಾಲಿಂಗಗಳೆಂಬ ಚಿತ್ರ ವಿಚಿತ್ರಗಳೊಡಗೂಡಿಕೊಂಡಿರುತ್ತದೆ. ಶರಣ ಅದರ ದರ್ಶನದಲ್ಲಿ ಧ್ಯಾನದಲ್ಲಿ ಧಾರಣದಲ್ಲಿ ವಿಶ್ರಾಂತಿಯನ್ನು ಪಡೆದಿರುತ್ತಾನೆ. ವಿಶಿಷ್ಟವಾದ ಶಿವಜ್ಞಾನ ಶಿವಕ್ರಿಯೆಗಳನ್ನು ತನ್ನಲ್ಲಿ ಸಂಪುಟಗೊಳಿಸಿಕೊಂಡಿರುತ್ತಾನೆ. ನೆಲ (ಕ್ರಿಯೆ), ಮುಗಿಲು (ಜ್ಞಾನ)ಗಳನ್ನು ಒಂದಾಗಿಸಿ ಆ ಮಹಾಕಾಶ ಸ್ವರೂಪವಾದ ಮಹಾಪ್ರಸಾದ ಲಿಂಗವೆ ತಾನಾಗಿ ಪ್ರಕಾಶಮಾನನಾಗುತ್ತಾನೆ.

ಪ್ರಸಾದಲಿಂಗ ಪರಿಪೂರ್ಣಲಿಂಗ. ಪರಿಪೂರ್ಣತ್ವವೇ ಅದರ ಸಲ್ಲಕ್ಷಣ. ಅದು ಶರಣಾಂಗದಲ್ಲಿ ತುಂಬಿತೊಳಗಲು ಭಿನ್ನಭಾವ ಬಿಟ್ಟೋಡುತ್ತದೆ. ಬಿರುಕು ಎರಕವಾಗುತ್ತದೆ. ಇದೇ ಅಭಿಪ್ರಾಯವನ್ನು ಪ್ರಭುದೇವರು ಹೀಗೆ ಹೇಳಿದ್ದಾರೆ :

"ತುಂಬಿಬಂದರೆ ಪರಿಮಳ ಓಡಿತ್ತ ಕಂಡೆ,
ಏನು ಸೋಜಿಗ ಹೇಳಾ ?
ಮನ ಬಂದರೆ ಬುದ್ಧಿ ಓಡಿತ್ತ ಕಂಡೆ-ಗುಹೇಶ್ವರಾ !"
"ರಂಗ ಒಂದೇ, ಕಂಬ ಒಂದೇ;
ದೇವರೊಂದೇ, ದೇಗುಲ ಒಂದೇ,
ಗುಹೇಶ್ವರಾ, ನಿಮ್ಮ ಮನ್ನಣೆಯ ಶರಣರೇ ದೇವರೆಂಬೆ."

ಇಲ್ಲಿ ಪ್ರಸಾದಲಿಂಗವೆ ತುಂಬಿ. ಈ ತುಂಬಿ ಶಬ್ದವು ಪ್ರಸಾದಲಿಂಗದ ಪರಿಪೂರ್ಣ ಲಕ್ಷಣವನ್ನು ಸೂಚಿಸುತ್ತದೆ. ಶ್ಲೇಷಾಲಂಕಾರವನ್ನು ಈ ಉಕ್ತಿಗೆ ತಂದಿದೆ. ಪ್ರಸಾದಲಿಂಗವು ಶರಣನಲ್ಲಿ ಪೂರ್ಣಗೊಳ್ಳಲು ಭಿನ್ನಭಾವವಾಸನೆ ಬಿಟ್ಟೋಡುತ್ತದೆ. ಪ್ರಸನ್ನತೆಯು ಮನವನ್ನಾವರಿಸಲು ದ್ವೈತಬುದ್ಧಿ ನಿಲ್ಲದು; ನಿಷ್ಠೆ ನೆಲೆಗೊಳ್ಳುವುದು ಅಂಗವೆಲ್ಲ ಲಿಂಗವಾಗಲು ಅಂದರೆ ಸಂಗಸಮರಸವಾಗಲು ದೇಹದೇಗುಲವಿರದು. ನೆಲಮುಗಿಲೊಂದಾದ ಬಳಿಕ ಮಾನವತ್ವವಿರದು. ಶಿವಶರಣತ್ವವಿರುತ್ತದೆ. ಶರಣನೇ ಶಿವನಾಗಿರುತ್ತಾನೆ.

ಲಿಂಗದಲ್ಲಿ ಲೀನವಾದ ಚಿತ್ತವುಳ್ಳ ಶರಣ 'ಏಕ ಏವ ನ ದ್ವಿತೀಯಃ' ಎಂಬ ಸಿದ್ಧಾಂತಕ್ಕೆ ಬರುತ್ತಾನೆ. ಮೊದಲು ಅಂತರಂಗ ಒಂದಾಗಬೇಕು. ಆ ಮಂಟಪಕ್ಕೆ ಏಕೋಭಾವವೇ ಕಂಬವಾಗಬೇಕು. ಅದರೊಳಗಿರುವಲಿಂಗ ಉಳಿದೆಲ್ಲ ಲಿಂಗಗಳನ್ನು ಒಳಗೊಂಡು ಅದೂ ಒಂದೇ ಆಗಿ ಅದಿರುವ ಚಿದಾಕಾಶವೆಂಬ ಮೇಲಿನ ದೇವಾಲಯವೂ ಲಿಂಗವೇ ಆಗುತ್ತದೆ. ಆಗ ಶರಣ ಶಿವನಾಗುತ್ತಾನೆ; ಅಂದರೆ ಅಂಗತ್ವವಳಿದು ಲಿಂಗತ್ವವೊಂದೇ ಉಳಿಯುತ್ತದೆ ಕನ್ನಡಿಯೊಳಗೆ ಪ್ರತಿಬಿಂಬ ಸೇರಿದಂತಾಗುತ್ತದೆ. ಬಿಸಿಲೊಳಗೆ ನೆಳಲು ಉದಯಿಸಿದಂತೆ ಉದಯಿಸಿದ ಶರಣ ಬಿಸಿಲಿನಂತಿರುವ ಅರಿವು ಪ್ರಸಾದಲಿಂಗದಲ್ಲಿ ಕರಿಗೊಳ್ಳಲು ನೆಳಲಿರದು. ಬಾನಿಗೆ ನೆರಳುಂಟೆ ? ಅಂತೆಯೇ ಆಕಾಶಕ್ಕೆ ಆಕಾಶವಾದ ಪ್ರಕಾಶ ಲಿಂಗವಾದ ಶರಣನಿಗೆ ನೆರಳಿಲ್ಲ, ಬೇರೆಂಬುದಿಲ್ಲ. "ಮನವೇ ಲಿಂಗವಾದ ಬಳಿಕ ನೆನಹುದಿನ್ನಾರನಯ್ಯಾ ? ಭಾವವೇ ಐಕ್ಯವಾದ ಬಳಿಕ ಬಯಸುವದಿನ್ನಾರನಯ್ಯಾ ? ಭ್ರಮೆಯಳಿದು ನಿಜವು ಸಾಧ್ಯವಾದ ಬಳಿಕ ಅರಿವುದಿನ್ನಾರನಯ್ಯಾ ಗುಹೇಶ್ವರಾ ?"

"ಒಂದೇ ಹೂವು, ಒಂದೇ ಅಗ್ಗವಣಿ, ಒಂದೇ ಓಗರ,
ಒಂದೇ ಪ್ರಸಾದ, ಒಂದೇ ಮನ, ಒಂದೇ ಲಿಂಗ,
ನಂದಾ ದೀವಿಗೆ ಕುಂದದ ಬೆಳಗು ಸ್ವತಂತ್ರ ಪೂಜೆಯೊಂದೇ !
ಅನಾಹುತವೆರಡಾಗಿ ಬಹುಮುಖವಾಗಿ ಕೆಟ್ಟುಹೋದವರು
ಗುಹೇಶ್ವರಾ !"

ಸರ್ವಾಂಗವನ್ನು ಮಹಾಲಿಂಗದಲ್ಲಿ ಅವಿರಳ ಸಂಬಂಧವಾಗಿಸಿದ ಶರಣನ ಅಖಂಡಾರ್ಚನೆಯಿದು: ಪ್ರಸಾದಲಿಂಗದ ಪೂರ್ಣ ವಾಸನೆಯುಳ್ಳ ಹೃದಯವೊಂದೇ ಹೂವು. ಸಮರಸ ಸ್ವರೂಪ ಪರಮಾನಂದವೊಂದೇ ಅಗ್ಗವಣಿ. ನಿತ್ಯತೃಪ್ತಲಿಂಗಕ್ಕೆ ಸರ್ವ ಪದಾರ್ಥಗಳನ್ನು ಒಳಗೊಂಡ ಶರಣನೊಬ್ಬನೇ ಒಂದೋಗರ. ಉಳಿದೆಲ್ಲ ತೃಪ್ತಿಗಳನ್ನೊಳಗೊಂಡ ಆ ಪರಮ ಪರಿಣಾಮವೊಂದೇ ಪ್ರಸಾದ, ನಾನಾ ಬಗೆಯ ನೆನಹಿಲ್ಲದೆ ಘನಲಿಂಗವೊಂದನ್ನೇ ನೆನೆವ ಮನವೊಂದೇ! ಉಳಿದೆಲ್ಲ ಲಿಂಗಗಳನ್ನೊಳಗೊಂಡ ಆ ಮಹಾಲಿಂಗವೂ ಒಂದೇ! ಅದರ ಆ ಸಾಮರಸ್ಯ ಮಹಾಜ್ಞಾನವೇ ನಂದಾದೀವಿಗೆಯ ಕುಂದದ ಬೆಳಗು. ಇವೆಲ್ಲ ಸ್ವಯ ಸಾಹಿತ್ಯದಿಂದ ಶರಣನು ಸ್ವತಂತ್ರನಾಗಿ ಪೂಜಿಸುವ ಪೂಜೆಯೂ ಒಂದೇ ಆಗಿರುತ್ತದೆ. ಶರಣರಲ್ಲದವರು ಅದನರಿಯದೆ ಅನೇಕ ಪದಾರ್ಥಗಳನ್ನು ನೆರವಿ ಅನೇಕ ಭಾವಗಳಿಂದ ಆರಾಧಿಸಿ ಕೆಡುವರು.

"ನಾನು ಭಕ್ತನಾದಡೆ, ನೀನು ದೇವನಾದಡೆ ನೋಡುವೆ
ಇಬ್ಬರ ಸಮರಸವನೊಂದು ಮಾಡಿ,
ಭೂಮಿಯಾಕಾಶವನೊಂದು ಮಾಡಿ,
ಚಂದ್ರ ಸೂರ್ಯರಿಬ್ಬರ ತಾಳವ ಮಾಡಿ ಆಡುವೆ!
ಜಡೆಯ ಮೇಲಣ ಗಂಗೆ ನೀನು ಕೇಳಾ,
ತೊಡೆಯ ಮೇಲಣ ಗೌರಿ ನೀನು ಕೇಳಾ,
ಗುಹೇಶ್ವರನೆಂಬ ಲಿಂಗವು ಎನ್ನ ಕೈಯಲ್ಲಿ ಸತ್ತಡೆ
ರಂಡೆಗೂಳನುಂಬುದು ನಿಮಗೆ ಲೇಸೆ?"

ಅಂಗ–ಲಿಂಗವೆಂಬ ಭಕ್ತ-ದೇವರು ಒಂದೆ ಆಗುವ ಪರಿಯಿದು: ಭೂಮಿಯೆಂದರೆ ದೇಹ, ಆಕಾಶವೆಂದರೆ ಆತ್ಮ ಇವೆರಡನ್ನೂ ಒಂದಾಗಿಸಿದವನು ಅಚ್ಚ ಶರಣನು. ಚಂದ್ರನೆಂದರೆ ಇಡಾನಾಡಿ, ಸೂರ್ಯನೆಂದರೆ ಪಿಂಗಳಾನಾಡಿ ಇವೆರೆಡರಲ್ಲಿ ಆಗುವ ಹಂ-ಸಃ ಎಂಬ ಭಿನ್ನ ಧ್ವನಿಯ ಭೇದಿಸಿ ಇವೆರಡನ್ನು ಕೂಡಿಸಿ 'ಶಿವೋಂ' ಎಂಬ ಏಕೈಕನಾದದಲ್ಲಿರುವವನೇ ಸತ್ಯ ಶರಣನು. ಶರಣನ ಸಹಸ್ರಾರದಲ್ಲಿರುವ ಪರಾಶಕ್ತಿಯೇ ಜಡೆಯೊಳಗಿರುವ ಗಂಗೆ; ಆಧಾರ ಭೂಮಿಕೆಯಲ್ಲಿರುವ ಕ್ರಿಯಾಶಕ್ತಿಯೇ ಅಥವಾ ಆದಿಶಕ್ತಿಯೆ ಗೌರಿ. ಆಚಾರಾದಿ ಲಿಂಗ

ಗಳನೊಳಗೊಂಡ ಮಹಾಲಿಂಗವು ಕರಸ್ಥಲದ ಲಿಂಗದಲ್ಲಿ ಕರಿಗೊಂಡ ಬಳಿಕ ಆಚಾರಲಿಂಗ–ಪ್ರಸಾದ ಲಿಂಗಗಳಿಲ್ಲದ ಗೌರಿ–ಗಂಗೆಯರು ರಂಡೆಯರಾಗುವರು. ಅವರಿಗೆ ಸುಗಂಧ ಪ್ರಸಾದವಿಲ್ಲ, ಸಂತೃಪ್ತಿ ಪ್ರಸಾದವಿಲ್ಲ. ಅಂದರೆ ಎಲ್ಲವೂ ವಿಕರಸವಾಗಿರುತ್ತವೆ.

“ಭೂಮಿಯಾಕಾಶ ಒಂದು ಜೀವನದುರ. ಅಲ್ಲಿ ಘನವನು ಘನವೆನ್ನದವಂಗೆ, ಕಿರಿದನು ಕಿರಿದೆನ್ನದವಂಗೆ, ಆ ಘನವು ಮನಕ್ಕೆ ಗಮನಿಸಿದಡೆ ಇದು ಸರಿಯುಂಟೆ ಗುಹೇಶ್ವರಾ ?” ಶರಣನ ಕಾಯವೇ ನೆಲ, ಆತ್ಮವೇ ಮುಗಿಲು. ಇವೆರಡೂ ಸೇರಿ ಜೀವನ. ಶರಣನ ಪಿಂಡದಲ್ಲಿ ಬ್ರಹ್ಮಾಂಡವಿದೆ. ಇದರಿಂದಾಗಿ ಆತನ ತನು ಕಿರಿದಲ್ಲಿ, ಆತ್ಮ ಹಿರಿದಲ್ಲ. ಹಿರಿದಾದುದರಲ್ಲಿ ಕಿರಿದಿದೆ; ಕಿರಿದಾದುದರಲ್ಲಿ ಹಿರಿದಿದೆ ಆ ಘನವೇ ತಾನೆಂದು ಅರಿದಿರುತ್ತಾನೆ ಶರಣ. ಹಿರಿಕಿರಿದೆರಡನ್ನೂ ಸಮಗಂಡಿರುತ್ತಾನೆ. ನೆಲಮುಗಿಲುಗಳೆರಡನ್ನೂ ಸಮನ್ವಯವಾಗಿಸಿಕೊಂಡಿರುತ್ತಾನೆ. “ಆದಿಯನಾದಿಯೊಂದಾದಂದು, ಚಂದ್ರ ಸೂರ್ಯರೊಂದಾದಂದು, ಧರೆಯಾಕಾಶವೊಂದಾದಂದು ಗುಹೇಶ್ವರಲಿಂಗ ನಿರಾಳನು.” ಲಿಂಗ-ಶರಣರು, ಶಿವ-ಶಕ್ತಿಯರು, ದೇಹಾತ್ಮರು ಒಂದಾದಾಗ ಶರಣ ನಿರಾಳನೆನಿಸುವನು.

೧. ಶರಣ ಸ್ಥಲಂ

ಭಕ್ತ-ಮಾಹೇಶ್ವರ ಸ್ಥಲಗಳೆರಡರಿಂದ ತ್ಯಾಗಾಂಗ ಶುದ್ಧಿ, ಪ್ರಸಾದಿ-ಪ್ರಾಣಲಿಂಗಿ ಸ್ಥಲಗಳೆರಡರಿಂದ ಭೋಗಾಂಗ ಶುದ್ಧಿ, ಇದೀಗ ಶರಣಸ್ಥಲದಿಂದ ಯೋಗಾಂಗ ಶುದ್ಧಿಗೆ ಮೊದಲಾಗುವುದೆಂಬುದನ್ನು ನಿರೂಪಿಸಲಾಗುತ್ತದೆ.

ಯೋಗಾಂಗಕ್ಕೆ ಶರಣಸ್ಥಲ ಒಮ್ಮುಖ, ಎರಡನೆಯ ಮುಖ ಐಕ್ಯಸ್ಥಲ; ಅದು ಮುಂದಿನ ಸಂಪುಟದಲ್ಲಿ ಪ್ರತಿಪಾದಿತವಾಗಿರುತ್ತದೆ. ಶರಣಸ್ಥಲದಿಂದ ಯೋಗಾಂಗ ಸಂಸ್ಕರಣ ಮೊದಲಾಗುತ್ತದೆ. ಆಕಾಶ-ಆತ್ಮ ತತ್ವಗಳೆರಡರಿಂದಾಗಿದೆ ಯೋಗಾಂಗ. ಆ ಯೋಗಾಂಗದೊಳಗಿನದೊಂದು ಶರಣಾಂಗ. ಇದು ಆಕಾಶತತ್ವದಿಂದಾಗಿದೆ. ಶಬ್ದಜ್ಞಾನ ಜ್ಯೋತಿಯಿಂದ ಇದು ಸಂಸ್ಕರಿಸಲ್ಪಡುತ್ತದೆ.

ಭಕ್ತ ಜಂಗಮ ಪ್ರೇಮಿ, ಶಿಷ್ಯ ಗುರುಪ್ರೇಮಿ, ಶರಣ ಲಿಂಗಪ್ರೇಮಿ. ಆನಂದಭಕ್ತಿಯಿಂದ ಶಬ್ದ ಪದಾರ್ಥವನ್ನು ಸಲ್ಲಿಸಿ ಪ್ರಸಾದಲಿಂಗವನ್ನಾರಾಧಿಸಿ ಆಕಾಶತತ್ತ್ವದ ಪೂರ್ವಾಶ್ರಯ ನಿರಸನವನ್ನು ಸಾಧಿಸುವುದೇ ಶರಣನ ಸತ್ಯ ಸಾಧನ.

ಆಕಾಶತತ್ತ್ವ ಪೂರ್ವಾಶ್ರಯ ನಿರಸನವೆಂದರೆ ಶಬ್ದದ್ರವ್ಯದ ಸಂಸ್ಕರಣ. ಬರಿಯ ಬಾಯಿಂದ ಬಂದ ಶಬ್ದ ಪ್ರಾಕೃತ, ಆಕಾಶ ಜನ್ಯ. ಅದೇ ಆತ್ಮಾನುಭವವುಳ್ಳುದಾಗಿ ಚಿದಾಕಾಶದಿಂದ ಬಂದರೆ ಆ ಶಬ್ದ ದ್ರವ್ಯವೇ ಸುಶಬ್ದ ಪ್ರಸಾದವಾಗುತ್ತದೆ. ಪರಮಾತ್ಮ ಪ್ರಕಾಶಕವಾಗುತ್ತದೆ. ಆ ಪ್ರಸಾದಕ್ಕೆ ಶರಣಾಗಬೇಕು ಅಂಗನು. ಆ ಪ್ರಸಾದರೂಪ ಲಿಂಗದಲ್ಲಿಯೇ ಅತ್ಯಂತ ಪ್ರೇಮವುಳ್ಳವನಾಗಬೇಕು.

ಶರಣ, ತಾಮಸನಿರಸನ, ನಿರ್ದೇಶ, ಶೀಲಸಂಪಾದನ ಎಂದು ಶರಣಸ್ಥಲ ನಾಲ್ಕು ಬಗೆಯಾಗಿದೆ. ಇವನ್ನು ಪರಿವಿಡಿದು ಪರಾಮರ್ಶಿಸೋಣವಾಗುತ್ತದೆ. ಇದೀಗ ಮೊದಲಿನದಾದ ಶರಣಸ್ಥಲ ಸ್ವರೂಪವನ್ನು ಶಿವಯೋಗಿ ಶಿವಾಚಾರ್ಯನು ನಿರೂಪಿಸುತ್ತಾನೆ :

"ಅಂಗಲಿಂಗೀ ಜ್ಞಾನರೂಪಸ್ಸತೀ ಜ್ಞೇಯಶ್ಶಿವಃ ಪತಿಃ ।
ಯತ್ಸೌಖ್ಯಂ ತತ್ಸಮಾವೇಶೇ ತದ್ವಾನ್
ಶರಣವಾಮವಾನ್ ॥ ೧ ॥

ಹಿಂದೆ ಹೇಳಿದ ಅಂಗಲಿಂಗಿಯು ಜ್ಞಾನರೂಪನಾಗಿ ಸತಿಯೆನಿಸುತ್ತಾನೆ. ಜ್ಞೇಯರೂಪನಾದ ಶಿವನು ಪತಿಯೆನಿಸುತ್ತಾನೆ. ಇವರಿಬ್ಬರ ಸಮರಸದಲ್ಲಿ ಒಂದು ಬಗೆಯ ಸೌಖ್ಯ ಸಂಪ್ರಾಪ್ತವಾಗುತ್ತದೆ. ಆ ಸೌಖ್ಯವಂತನೆ ಶರಣನೆಂದು ಹೇಳಿಸಿಕೊಳ್ಳುವನು.

ಅಂಗ ಮತ್ತು ಲಿಂಗಗಳ ಸಂಯೋಗದಿಂದ ಸ್ವಾಯತ್ತದಿಂದ ಅಂಗಲಿಂಗಿಯೆನಿಸುತ್ತಾನೆ. ಅಂಗ-ಲಿಂಗಗಳ ಸನ್ನಿಹಿತತ್ವದಿಂದ ಅಂದರೆ ಸಾಮರಸ್ಯದಿಂದ ಆ ಅಂಗಲಿಂಗಿಯೇ ಶರಣನೆನಿಸುತ್ತಾನೆ. ಆತನು ಸ್ವಾಯತ್ತಸಂಬಂಧಿ. ಈತನು ಸನ್ನಿಹಿತಸಂಬಂಧಿ. ಜತೆಗೆ ಶರಣನದು ದಂಪತಿ ಸಂಬಂಧ. ಲಿಂಗಾಂಗರು ಗಂಡ ಹೆಂಡಿರು, ನಲ್ಲ ನಲ್ಲೆಯರು, ಶಿವಶಿವೆಯರು. ಜ್ಞೇಯ-ಜ್ಞಾನಸ್ವರೂಪರು.

ಶರಣ ಶಿವಸಂಸಾರಿ, ಶಿವಚೇತೋಹಾರಿ. ಶಿವನಲ್ಲಿ ಶರಣ, ಶರಣನಲ್ಲಿ ಶಿವ ಹಾಸುಹೊಕ್ಕಾಗಿರುತ್ತಾರೆ. ಜ್ಞಾನದಲ್ಲಿ ಜ್ಞೇಯ, ಜ್ಞೇಯದಲ್ಲಿ ಜ್ಞಾನ ಸಮ್ಮಿಳಿತವಾದಂತೆ ಇರುತ್ತಾರೆ. ಜ್ಞೇಯಾತ್ಮ ಶಿವನಲ್ಲಿ ಜ್ಞಾನಾತ್ಮ ಶರಣ ಶಕ್ತಿಯಾಗಿ ಸೇರಿ ಸುರಕ್ತಿ ಸುಖವನ್ನು ಸವಿಯುತ್ತಾಳೆ. ಜ್ಞೇಯ ಸುಖಕ್ಕೆ ಸರಿಯಿಲ್ಲ. ಅಂತೆಯೇ ಜ್ಞಾನಸತಿರತಿಗೆ ಸರಿಯಿಲ್ಲ. ಅಂಗಸತಿತ್ವ ಲಿಂಗಪತಿತ್ವ ಅಪರೂಪ. ಅಂಗಸತೀತ್ವ ಬೇಸರಾಗದ ಮೀಸಲು. ಅಂಗಸತಿಯ ಹೃದಯ ಹಾಲಹೊನಲು; ಕಣ್ಣರಳಿಸುವ ಕರುಳು. ಅವಳದು ಸರ್ವಸ್ವ ಅರ್ಪಣ, ಕೈಸೋಂಕದ ಅರ್ಪಣ; ಅಂಗಸುಖ ಸವೆಯದ ಸುಯಿಧಾನ. ಭವಕ್ಕೆ ಬರಿಸದ ಅವಧಾನ. ಆ ಶಿವ

ಸೌಂದರ್ಯ ಒಳಗಣ್ಣಿನಿಂದ ಚಿಮ್ಮಿ ಹೋಗದ ಚಲುವಿಕೆ. ನಿಜದ ನಿದರ್ಶನಕ್ಕೆ ನಿಲುವ ನಿಲವಿಕೆ.

ಅಂಗ ಲಿಂಗರದು ಕಣ್ಣೊಳಗೆ ಕಣ್ಣು; ಕಿವಿಯೊಳಗೆ ಕಿವಿ; ಘ್ರಾಣದೊಳಗ ಘ್ರಾಣ; ಪ್ರಾಣದೊಳಗೆ ಪ್ರಾಣ. ತನುವಿನೊಳಗೆ ತನು; ಮನದೊಳಗೆ ಮನ. ಜಿಹ್ವೆಯೊಳಗೆ ಜಿಹ್ವೆ: ಸ್ಪರ್ಶದೊಳಗೆ ಸ್ಪರ್ಶ. ಆತ್ಮನೊಳಗೆ ಆತ್ಮ. ಎಲ್ಲೆಲ್ಲಿಯೂ ಬಿರುಕಿಲ್ಲದ ಬೆಸುಗೆ, ಅವರಿಬ್ಬರಿಗೆಲ್ಲ ಅದೆಂದಿಗೂ ಹಸುಗೆ. ಅವರದು ಆ ಬಗೆಯದು ಸಮಾವೇಶ; ಆ ಬಗೆಯದು ಸಮರಸ. ಅವರಿಬ್ಬರಲ್ಲಿ ಅದಾವ ಬಗೆಯ ತೆರಹಿಲ್ಲ; ಮರಹಿಲ್ಲ.

"ತೆರಹಿಲ್ಲದ ನಡೆ, ತೆರಹಿಲ್ಲದ ನುಡಿ,
ತೆರಹಿಲ್ಲದ ಸಂಭಾಷಣೆಯು ಸುಖವು;
ತರಹಿಲ್ಲದ ನಂಬಿದ ಸ್ವಾನುಭಾವ ಸುಖವು;
ತೆರಹಿಲ್ಲದ ಮಹಿಮೆ, ತೆರಹಿಲ್ಲದ ವಿಚಾರ,
ಕೂಡಲ ಸಂಗಮದೇವಾ, ನಿಮ್ಮ ಶರಣಂಗೆ !"

ಅಂಗನಾದ ಶರಣ ಜ್ಞಾನಿಯಾಗದೆ ಜ್ಞೇಯನಾದ ಲಿಂಗದೇವನು ಕೂಡನು. ಅಂದರೆ ಜ್ಞಾನವಾಗದೆ ಜ್ಞೇಯ ವಸ್ತುವಿನ ಸಾಕ್ಷಾತ್ಕಾರವಾಗದು; ಸ್ವರೂಪ ಸನ್ನಿಹಿತವಾಗದು.

"ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ !
ಅಂಗವಿದ್ಯೆಯನೊಲ್ಲ;
ಕಣ್ಣೊಳಗಣ ಕಸವ ಕಳೆದಲ್ಲದೆ ನೋಡಲೀಯ;
ಕೈಯ ತೊಳೆದಲ್ಲದೆ ಮುಟ್ಟಲೀಯ;
ಕಾಲ ತೊಳೆದಲ್ಲದೆ ಹೊದ್ದಲೀಯ !
ಇಂತೀ ಸರ್ವಾಂಗ-ತಲೆದೊಳೆದ ಕಾರಣ
ಕೂಡಲ ಸಂಗಮದೇವನೆನ್ನ ಕೂಡಿಕೊಂಡನವ್ವಾ !"

ಈ ವಚನ ಶರಣಾಂಗನ ಸರ್ವಾಂಗ ಜ್ಞಾನಸ್ವರೂಪವನ್ನು ಸುಂದರವಾಗಿ ರೂಪಿಸಿದೆ. ಇಲ್ಲಿ ಘನ ಮನವೇ ಮನೆ. ಪರಮ ಜ್ಞಾನವೇ ತಿಳಿನೀರು. ಈ

ತಿಳಿನೀರಿನಿಂದ ಕಣ್ಣು ಕೈ ಕಾಲು ಕಾಯಗಳನ್ನೆಲ್ಲ ತೊಳೆದಿರಬೇಕು. ದೇಹೇಂದ್ರಿಯ ದೃಷ್ಟಿ ಆತನಿಗೆ ಬೇಕಿಲ್ಲ. ಭೌತಿಕ ಭಾಗ್ಯದ ಬಯಕೆ ಇದ್ದರೆ ಆತನೊಪ್ಪ. ಕೇವಲ ಲೌಕಿಕಾಚಾರ ಆತನ ಮನಕ್ಕೆ ಬಾರದು. ಸರ್ವಾಂಗದಲ್ಲಿ ಶಿವಶೀಲ ಸಂಪಾದಿತವಾಗಿರಬೇಕು. ಹೊರಗಿನ ಹಲವಾರು ತಿಳುವಳಿಕೆಗಳಿಂದ ತಲೆ ಕೊಳೆಯಾಗಿರಬಾರದು. ಎಲ್ಲಕ್ಕೂ ಆಧಾರವಾದ ಆ ಪರಶಿವಜ್ಞಾನವೊಂದೇ ಇದ್ದಾಗಬೇಕು. ಇದ್ದ ಶರಣನಲ್ಲಿಗೆ ಆತನೇ ಹೊದ್ದುವನು. ತೆರಹಿಲ್ಲದೆ ಕೂಡಿಕೊಂಡಿರುವನು. ತನ್ನ ಅಚ್ಚಳಿಯದ ಆನಂದವನ್ನು ಕೊಡುವನು. ಅದನ್ನು ಅಳವಡಿಸಿಕೊಂಡವನೇ ಅಚ್ಚ ಶರಣನು.

“ಉದಕದಲ್ಲಿ ತೊಳೆದು ಕಂಡಿಹೆನೆಂದಡೆ ಮಲಿನದವನಲ್ಲ.
ಪುಷ್ಪದಲ್ಲಿ ಹೊದಿಸಿ ಕಂಡಿಹೆನೆಂದಡೆ ಹೊತ್ತಿನ ವೇಳೆಗೆ
ಬಂದು ಗೊತ್ತು ಮುಟ್ಟುವನಲ್ಲ.
ನಾನಾ ಉಪಚಾರದಿಂದ ಭಾವಿಸಿ ಕಂಡಿಹೆನೆಂದಡೆ ಭ್ರಮೆಯುವನಲ್ಲ;
ಇದನರಿದು ಮರವಗೆ ತೆರಹಿಲ್ಲದಿಪ್ಪರೆ—
ನಿಃಕಳಂಕ ಮಲ್ಲಿಕಾರ್ಜುನನು ಒಡಗೂಡಿಪ್ಪನು.”

ಶಿವಶರಣ ಮೋಳಿಗೆ ಮಾರಯ್ಯನವರ ವಿಚಾರ ವಿವರಣೆಯಿದು. ಆಚಾರ ಬರೀ ಬಹಿರಂಗದಲ್ಲಿ ನಡೆದು ಶುಷ್ಕವಾಗಬಾರದು. ಅರಿವಿನಾಚಾರ ಅಳವಡಬೇಕು. ಅರಿವಿನಿಂದ ಅಂಗವನ್ನೆಲ್ಲ ತೊಳೆದು ಹಸನಾಗಿರಿಸಿರಬೇಕು. ಅಂಗನು ಜ್ಞಾನರೂಪನಾಗಿರಬೇಕೆಂಬ ರೇಣುಕವಾಣಿಯನ್ನು ಈ ವಚನ ಸ್ಫುಟವಾಗಿ ಎತ್ತಿ ಹಿಡಿದಿದೆ. ಬರೀ ನೀರು ಹೂವುಗಳಿಗೆ ಶಿವನೊಲುಮೆಯಾಗದು. ಬರೀ ಬಾಹ್ಯೋಪಚಾರಕ್ಕೆ ಆತನ ಸಾಕ್ಷಾತ್ಕಾರವಾಗದು. ಮಜ್ಜನ ಮಾಡಿ ಲಿಂಗಯ್ಯನನ್ನು ಹಸಗೊಳಿಸುವೆನೆಂಬುದು, ಹೂವನೇರಿಸಿ ಅಲಂಕರಿಸುವೆನೆಂಬುದು ಉಪಚರಿಸಿ ಒಲಿಸುವೆನೆಂಬುದು ಬರಿಯ ಭ್ರಾಂತಿ. ಆತ ಎಂದಿಗೂ ಪ್ರಕಾಶಸ್ವರೂಪ, ಶುಭ್ರರೂಪ, ಆತನದು ಸತ್ಯ ಸೌಂದರ್ಯ. ನಿತ್ಯತೃಪ್ತನಾದ ಆತನು ನಮ್ಮ ಕಿಂಚಿದುಪಚಾರಕ್ಕೆ ಭ್ರಮಿಸಿ ಬಾಯ್ಬಿಡುವವನಲ್ಲ. ಆತ ನಮ್ಮಲ್ಲಿ ನೋಡುವುದೊಂದನ್ನೆ ! ಅದು ಮರೆವೆಗೆ ಇಂಬಿಲ್ಲದ ಅರಿವು. ಅದುಳ್ಳ ಶರಣನಿಗೆ ಅದುವೇ ಆದ ಶರಣನಿಗೆ ಒಲಿವನು; ಒಡಗೂಡುವನು.

ಇನ್ನು 'ತತ್ಸಮಾವೇಶ'ದ ಮಾತು. ತತ್ಸಮಾವೇಶವೆಂದರೆ ಜ್ಞಾನ-ಜ್ಞೇಯಗಳ ಸಾಮರಸ್ಯ. ಸತಿಪತಿಗಳ ಸಮರಸದಂತೆ ಇದು ಸೊಗಸಾದುದು. ಶರಣತ್ವವನ್ನು ಸಮರ್ಥಿಸುವಂತಹದು. ಇವೆರಡರ ಬೆಸುಗೆಯ ಬೆಡಗನ್ನು ಮೋಳಿಗೆ ಮಾರಯ್ಯನವರ ಈ ವಚನದಲ್ಲಿ ಮನಗಾಣಬೇಕು.

"ಉರಿಯೊಳಗಣ ಶೈತ್ಯದಂತೆ, ಶೈತ್ಯದೊಳಗಣ ಉರಿಯಂತೆ
ಅರಿದು ಅರುಹಿಸಿಕೊಂಬುದೇನು ಹೇಳಾ ?
ಅದು ಚಂದ್ರನೊಳಗಣ ಕಲೆ,
ತನ್ನಂಗದ ಕಳೆಯಿಂದ ಉಭಯ ದೃಷ್ಟವ ಕಾಣಿಸಿಕೊಂಬಂತೆ
ಆ ಇಷ್ಟದ ದೃಷ್ಟ ಅರಿವುದು ಅರುಹಿಸಿಕೊಂಬುದು
ಒಡಗೂಡಿದಲ್ಲಿ ಶರಣಸ್ಥಲ.
ಆಸಂಬಂಧ ಸಮಯ ನಿಂದಲ್ಲಿ ಐಕ್ಯಾನುಭಾವ
ನಿಃಕಳಂಕ ಮಲ್ಲಿಕಾರ್ಜುನ."

'ತತ್ಸಮಾವೇಶ' ಪದಕ್ಕೆ ಭಾಷ್ಯವಿದು. ಜ್ಞಾನಾಂಗ-ಜ್ಞೇಯಲಿಂಗಗಳು ನೀರುರಿಗಳಂತೆ ಶೀತೋಷ್ಣಗಳಂತೆ ಭಿನ್ನಾಭಿನ್ನಸ್ವರೂಪಗಳಾಗಿವೆ. 'ಒಂದೆಂಬೆನೆ ಎರಡಾಗಿದೆ; ಎರಡೆಂಬೆನೆ ಒಂದಾಗಿದೆ.' ಎಂಬ ಪ್ರಭುವಾಣಿಯನ್ನು ಸಮರ್ಥಿಸುವ ಸೊಬಗಿನಲ್ಲಿವೆ. ಚಂದ್ರ-ಚಂದ್ರನಕಲೆಗಳಂತಿವೆ. ಕಲೆ-ಕಳೆಗಳಂತಿವೆ. ಚಂದ್ರನ ಕಳೆಯಿಂದಲೇ ಚಂದ್ರಕಲೆ ತೋರುವದಾದರೂ ಅದು ಚಂದ್ರನಿಗೆ ಭಿನ್ನವಲ್ಲ, ಭಿನ್ನವಾಗಿ ತೋರಿದರೂ ಅಭಿನ್ನವಾಗಿದೆ, ಅಭಿನ್ನವಾಗಿದ್ದರೂ ಭಿನ್ನವಾಗಿ ತೋರುತ್ತಿದೆ. ತೋರಿಕೆಗೆ ಕಾರಣ ಆತನ ತಂಗದಿರ. ಅದೇ ಕಳೆ. ಭಿನ್ನಾಭಿನ್ನತೆಗಳೆರಡೂ ತೇಜ-ತಿಂಗಳಗಳೆರಡಲ್ಲಿ ತೋರುತ್ತಿರುವಂತೆ ಜ್ಞಾನಾಂಗ ಜ್ಞೇಯಲಿಂಗಗಳಲ್ಲಿ ತೋರುತ್ತವೆ. ಅರಿವಿಕೆ-ಅರುಹಿಸಿಕೊಂಬುವಿಕೆ ಅರಿವಿಕೆ ಜ್ಞಾನಾಂಗ; ಅರುಹಿಸಿಕೊಂಬುವಿಕೆ ಜ್ಞೇಯಲಿಂಗ. ಇವೆರಡು ಒಡಗೂಡಿರುವಿಕೆಯೆ ಶರಣಸ್ಥಲ.

ಶರಣನಿಗೆ ಜ್ಞಾನ ಒಂದು ಕಣ್ಣು. ಅದಿಲ್ಲದೆ ಜ್ಞೇಯಲಿಂಗದ ಸತ್ಯಶಿವ ಸೌಂದರ್ಯ ಸೌಖ್ಯ ಸಿಕ್ಕದು. ಕುರುಡನಿಗೆ ಚಲುವಿನ ಮೆಲುಕು ನಿಲುಕದು. ಕಣ್ಣು ಚಲುವನ್ನು ತನ್ನೊಳಗೆ ಚಿತ್ರಿಸಿಕೊಳ್ಳುವಂತೆ ಜ್ಞಾನನೇತ್ರ ಜ್ಞೇಯ

ಸೌಂದರ್ಯವನ್ನು ತನ್ನೊಳಗೆ ಅಳವಡಿಸಿಕೊಂಡು ತಲ್ಲೀನವಾಗುತ್ತದೆ. ಜ್ಞಾನವೆಂಬ ನಿರವಯ ಸತಿ ಜ್ಞೇಯವೆಂಬ ನಿರವಯ ಪತಿಯಲ್ಲಿ ಪ್ರಲೀನವಾಗುತ್ತದೆ.

"ಕಣ್ಣಲ್ಲಿ ನೋಡಿ ಕಂಡಿಹೆನೆಂದರೆ ರೂಪಿಗೆ ಒಡಲಿಲ್ಲ;
ಕೈಯಲ್ಲಿ ಮುಟ್ಟಿ ಕಂಡಿಹೆನೆಂದರೆ ನೆಟ್ಟಗೆ ಗೂಟವಲ್ಲ;
ಮನದಲ್ಲಿ ನೆನೆದು ಕಂಡಿಹೆನೆಂದರೆ ಅನುವಿಂಗಗೋಚರ.
ಈ ಅನುಪಮಲಿಂಗವಾರಿಗೂ ಸಾಧ್ಯವಲ್ಲ.
ಘನ ಮಹಿಮ ನೀನೇ ಬಲ್ಲೆ ನಿಃಕಳಂಕ ಮಲ್ಲಿಕಾರ್ಜುನಾ."

ಆದರೂ ಶರಣನು ಅದನ್ನು ಕಾಣುತ್ತಾನೆ. ಅದರ ಸವಿಯ ಉಣ್ಣುತ್ತಾನೆ ಆದರೆ ಆ ಪರಿ ಬೇರೆ.

"ಕಣ್ಣ ಮುಚ್ಚಿ ದೃಷ್ಟಿಯಲ್ಲಿ ನೋಡಬಲ್ಲರೆ ಆತನ ಬಲ್ಲೆನೆಂಬೆ.
ಬಾಯ ಮುಚ್ಚಿ ನಾಲಗೆಯಲ್ಲಿ ಉಣಬಲ್ಲರೆ
ಆತನ ಸಂಗೊಳಿಸಿದವನೆಂಬೆ. ತನುವ ಮರೆದು
ಆ ತನುವ ಕಂಡಡೆ ಆತನರಿದನೆಂಬೆನಯ್ಯಾ.
ಬೆಳಗಿನೊಳಗಣ ಬೆಳಗು ಕಳೆಯೊಳಗಣ ಕಾಂತಿ
ನಿಃಕಳಂಕ ಮಲ್ಲಿಕಾರ್ಜುನಾತಾನು."

ಅದು ಅವಿರಳ ನೋಟ; ಅದು ಅರಿವಿನಚ್ಚಿಯ ನಲ್ನೋಟ. ಅದು ರೂಪುರುಚಿಗಳ ಮೀರಿದ ಊಟ; ಅದು ಸಮರತಿಯ ಕೂಟ. ಅದು ಕರಣೇಂದ್ರಿಯವುಳ್ಳ ಕಾಯವಲ್ಲ; ಅದು ಪರಕಾಯ. ಅದು ಹೃದಯದ ಹವಣಕ್ಕೆ ಹೊಂದುವುದಲ್ಲ. ಅದನ್ನು ಕಾಣುವ ಕಣ್ಣು ಅದೊಂದು ಮಹಾಜ್ಞಾನ; ಅದೊಂದು ಬೆಳಗು. ಅದು ಕಂಡ ಜ್ಞೇಯ ವಸ್ತು ಪರಂಜ್ಯೋತಿ; ಅದು ಬೆಳಗಿನೊಳಗಿನ ಬೆಳಗು; ಕಳೆಯೊಳಗಿನ ಕಾಂತಿ. ಅದು ಅಳವಟ್ಟವನ ಈ ಕಾಯ ಕಾಯವಲ್ಲ. ಈ ಕರಣಗಳು ಕರಣಗಳಲ್ಲ.

"ಕುಲಿಶ ಅಂಗುಲದೊಳಗಡಗಿದಡೆ ಕುಟ್ಟದೆ ಬೆಟ್ಟವ ?
ಶಿಲೆಯೊಳಗಡಗಿದ್ದ ಪಾವಕ ಉದಯಿಸಿ ಸುಡದೆ ಮಹಾರಣ್ಯವ ?
ಚಿತ್ತುವಿನಲ್ಲಿ ಉದಯಿಸಿದ ಜ್ಞಾನ ತನುವಿನ

ಪೊತ್ತದೊಳಿಪ್ಪ ಕಷ್ಟೇಂದ್ರಿಯವ ನಷ್ಟವ ಮಾಡದಿಪ್ಪುದೆ ?
ಸರ್ಪ ದಷ್ಟವಾದರೇನು,
ವಿಷ ಚಲನೆಯಾದಲ್ಲದೆ ತನುವಿನ ಮರವೆ ಇಲ್ಲ
ಹೀಗೆ ನಟಿಸಿಯಲ್ಲದೆ ಅಘಟಿತವಾಗಬಾರದು.
ಇಂತಪ್ಪ ಪ್ರಕಾಶಿತಂಗೆ ನಮೋ ನಮೋ ಎಂಬೆ
ನಿಃಕಳಂಕ ಮಲ್ಲಿಕಾರ್ಜುನಾ."

ಶರಣನ ತನು ಮನ ಚಿಕ್ಕವಾದರೂ ಇವುಗಳಲ್ಲಿ ಉದಿಸಿದ ಜ್ಞಾನ ಚಿಕ್ಕದಲ್ಲ. ಅದು ಕಾಯೇಂದ್ರಿಯಗಳ ಜಡತ್ವವನ್ನು ಕಳೆಯದೆ ಬಿಡುವುದಿಲ್ಲ. ಆದರೆ ಕೇವಲ ಜ್ಞಾನವು ಜಡತೆಯನ್ನು ಕಳೆಯದು. ಆ ಜ್ಞಾನ ಕ್ರಿಯೆಯಲ್ಲಿ ಆಚಾರದಲ್ಲಿ ಬರಬೇಕು. ಏಕೆಂದರೆ ಹಾವಿನ ನಂಜು ಮೈಯಲ್ಲಿ ಚಲನವಾಗದೆ ಮೈಮರೆಯುವಂತಿಲ್ಲ. ಅಂದರೆ ಮೂರ್ಛೆ ಬರುವಂತಿಲ್ಲ. ಅಂತೆಯೇ ಶರಣನಿಗೆ ಶರೀರ ಭಾನ ಮರೆಯಾಗಬೇಕಾದರೆ ಜ್ಞಾನಾಚಾರವಿದ್ದಾಗಬೇಕು. ಆಗ ಹೇಯದಿಂದ ಜ್ಞೇಯದತ್ತ ಸಾಗಿ ಸೇರಿ ಶರಣತ್ವವನ್ನು ಸಂಗಳಿಸಿಕೊಳ್ಳುತ್ತದೆ. ಭವದ ಬಳಲಿಕೆಯನ್ನು ಬಿಟ್ಟು ಶಿವಸೌಖ್ಯವನ್ನು ಸಂಪಾದಿಸಿಕೊಳ್ಳುತ್ತದೆ. ಜ್ಞಾನಾಚಾರದಿಂದ ಇವೆಲ್ಲ ಸಿದ್ಧಿಯಾದ ಬಳಿಕ ಶರಣ ಶರೀರೇಂದ್ರಿಯ ವ್ಯಾಪಾರದಲ್ಲಿದ್ದರೂ ಅವುಗಳ ಸೋಂಕು ಶರಣನಿಗಿರುವುದಿಲ್ಲ.

"ಗಾಳಿಯಲೆದ್ದ ದೂಳು ಹುಲ್ಲು ಎಲೆ ಮೊದಲಾದ ಬಹು
ವ್ಯಾಪಾರ ಗಾಳಿಯ ಮುಟ್ಟಿದುದಿಲ್ಲ.
ಶರಣನ ಸರ್ವೇಂದ್ರಿಯಂಗಳು,
ಗಾಳಿಯ ದೂಳಿನ ಪರಿಯಂತೆ,
ಪಳುಕದ ಭಾಂಡದ ಬಹುವರ್ಣದಂತೆ,
ಮುಟ್ಟಿಯೂ ಮುಟ್ಟದಂತಿಪ್ಪ ಮಹಾಶರಣಂಗೆ
ನಮೋ ನಮೋ ಎಂಬೆ ನಿಃಕಳಂಕ ಮಲ್ಲಿಕಾರ್ಜುನಾ."

ಚಲುವಾದ ಹೋಲಿಕೆ. ಗಾಳಿ-ದೂಳಿಗಳಂತೆ ಶರಣ-ಶರೀರೇಂದ್ರಿಯಂಗಳು. ಗಾಳಿಯಂತೆ ಶರಣ. ದೂಳಿಯಂತೆ ಶರೀರೇಂದ್ರಿಯ' ಇವು ಪರಸ್ಪರ ಮುಟ್ಟಿಯೂ ಮುಟ್ಟದಂತಿರುತ್ತವೆ.

"ಚಿಪ್ಪಿನ ಮಂದಿರದಲ್ಲಿ ಮುತ್ತು ಬೆಳೆದ ಭೇದದಂತೆ,
ವೃತ್ತಿಕೆಯ ಸಾರದಲ್ಲಿ ಹೊಮ್ಮಿದ ಪೊಂಗಲ ಪರಿಯಂತೆ
ಕಾಯದಲ್ಲಿ ಬೆಳಗಿ ತೋರುವ ಮಹದರಿವಿನ ಕೊನೆಯಲ್ಲಿ
ಪ್ರಜ್ವಲಿತ ಪ್ರಭಾಕಾರ ನೀನೆ ನಿಃಕಳಂಕ ಮಲ್ಲಿಕಾರ್ಜುನಾ."

ಶರಣನ ಶರೀರ ನಿಸ್ಸಾರವಲ್ಲ, ನಿಷ್ಪ್ರಯೋಜನವಲ್ಲ; ಕೆಡಿಸುವದಲ್ಲ, ಕೈಬಿಡುವುದಲ್ಲ. ಕಪ್ಪೆಯಚಿಪ್ಪಿನಲ್ಲಿ ಕಳೆಯುಳ್ಳ ಕಟ್ಟಾಣಿ ಮುತ್ತುಗಳು, ಮಣ್ಣನಲ್ಲಿ ರಾಜಾನ್ನ ಮತ್ತು ರಸಾನ್ನಗಳು ಹೊರಹೊಮ್ಮುವಂತೆ, ಶರಣನ ಪರಿಶುದ್ಧ ಶರೀರದಲ್ಲಿ ಮಹದರಿವು ಮೂಡಿ ಮುಂಬೆಳಗುತ್ತದೆ. ಅದರ ತುದಿಯಂಚಿನಲ್ಲಿ ಪ್ರಸಾದಲಿಂಗ ಪ್ರಜ್ವಳಿಸುತ್ತದೆ. ಅದೇ ಬೆಳಗಿನೊಳಗಿನ ಬೆಳಗು. ಅದೇ ಜ್ಞಾನದೊಳಗಿನ ಜ್ಞೇಯ. ಅವೆರಡುಳ್ಳವನಿಗೆ ಶರಣ ಎಂಬ ನಾಮಧೇಯ.

ಇನ್ನು ಜ್ಞಾನ-ಜ್ಞೇಯಗಳ ವಿಚಾರ. ಜ್ಞಾನವೇ ಶರಣಾಂಗ, ಜ್ಞೇಯವೇ ಶಿವಲಿಂಗ. ಸದಾ ಶಿವಜ್ಞಾನದಲ್ಲಿದ್ದು ಶರಣನು ಜ್ಞಾನರೂಪನಾಗಿರುತ್ತಾನೆ. ಎಲ್ಲ ಬಂಧನಗಳ ಬಿಡುಗಡೆಯನ್ನು ಪಡೆದಿರುತ್ತಾನೆ.

"ಜ್ಞಾತ್ವಾ ದೇವಂ ಸರ್ವ ಪಾಶಾಪಹಾನಿಃ ।
ಕ್ಷೀಣೈಃ ಕ್ಲೇಶೈರ್ಜನ್ಮ ಮೃತ್ಯುಪ್ರಹಾಣಿಃ ॥
ತಸ್ಯಾಭಿಧ್ಯಾನ್ಯಾತ್ ತೃತೀಯಂ ದೇಹಭೇದೇ ।
ವಿಶ್ವೈಶ್ವರ್ಯಂ ಕೇವಲ ಆಸ್ತ ಕಾಮಃ ॥"
—ಶ್ವೇತಾಶ್ವತರೋಪನಿಷತ್

ಶರಣನು ಶಿವನನ್ನು ಅರಿತು ಸರ್ವಪಾಶಗಳನ್ನು ಸಂಹರಿಸುತ್ತಾನೆ. ಪಂಚಕ್ಲೇಶಗಳನ್ನು ಪರಿಹರಿಸುತ್ತಾನೆ. ಜನನ ಮರಣಗಳನ್ನು ಜಯಿಸಿರುತ್ತಾನೆ. ನಿರಂತರ ಶಿವಧ್ಯಾನದಿಂದಾಗಿ ದೇಹಾಭಿಮಾನವನ್ನು ದೂರಮಾಡಿರುತ್ತಾನೆ. ಮೂರನೆಯುವಾದ ಯೋಗಾಂಗನಿಷ್ಟನಾಗಿ ಶಿವಯೋಗಕ್ಕೆ ಸನ್ನದ್ಧನಾಗಿರುತ್ತಾನೆ. ಇದರಿಂದಾಗಿ ಸತೀ ಭಾವ ಸಂಪನ್ನನಾಗಿರುತ್ತಾನೆ. ಶಿವನಿಗಾಗಿ ವಿಶ್ವದ ಐಶ್ವರ್ಯವನ್ನೆಲ್ಲ ಸಮರ್ಪಿಸಿರುತ್ತಾನೆ. ತಾನೇ ತಾನಾಗಿರುತ್ತಾನೆ. ಪೂರ್ಣ ಕಾಮ

ನಾಗಿರುತ್ತಾನೆ. ಜ್ಞಾನರೂಪನಾದ ಶರಣನ ಸ್ವರೂಪದರ್ಶನವಿದು ಇನು ಜ್ಞೇಯ ವಸ್ತು ಸ್ವರೂಪವನ್ನು ನಿರೂಪಿಸುವ ಮಂತ್ರವಿದು ;

"ಏತತ್ ಜ್ಞೇಯಂ ನಿತ್ಯಮೇವಾತ್ಮಸಂಸ್ಥಂ ।
ನಾತಃ ಪರಂ ವೇದಿತವ್ಯಂ ಹಿ ಕಿಂಚಿತ್ ॥
ಭೋಕ್ತಾ ಭೋಗ್ಯಂ ಪ್ರೇರಿತಾರಂ ಚ ಮತ್ವಾ ।
ಸರ್ವಂ ಪ್ರೋಕ್ತಂ ತ್ರಿವಿಧಂ ಬ್ರಹ್ಮಮೇತತ್ ॥"

—ಶ್ವೇತಾಶ್ವತರೋಪನಿಷತ್

ಜ್ಞೇಯವಸ್ತು ಬೇರಿಲ್ಲ. ತನ್ನಲ್ಲಿಯೇ ಇರುತ್ತದೆ, ಇದೆ. ನಿತ್ಯವಾಗಿದೆ. ಅದುವೆ ಜ್ಞೇಯವಸ್ತುವಾಗಿದೆ. ಅದಕ್ಕಿಂತ ಬೇರೆ ಜ್ಞೇಯವಸ್ತುವಿಲ್ಲ, ಅಂದರೆ ತಿಳಿಯಬೇಕಾದ ವಸ್ತುವಿಲ್ಲ. ಸರ್ವವೂ ಅದೇ ಆಗಿದೆ. ಭೋಕ್ತಾ ಭೋಗ್ಯ ಪ್ರೇರಯಿತಾ ಈ ತ್ರಿವಿದವೂ ಅದೇ ಆಗಿದೆ. ಅದೇ ಪರಬ್ರಹ್ಮ. ಅದೇ ಪ್ರಸಾದಲಿಂಗ. ಅದುವೇ ಜ್ಞಾನರೂಪ ಶರಣ ಸತಿಗೆ ಪರಮಪತಿ. ಆ ಪತಿಯ ಪ್ರಜ್ಞೆಯಲ್ಲಿದ್ದು ಪತಿಯ ಪರಮಸುಖವನ್ನು ಪಡೆದು ಶರಣನೆನಿಸುತ್ತಾನೆ.

''ಶಿವಶಕ್ತಿ ಸಂಪುಟವೆಂಬುದೆಂತು ಹೇಳಿರಣ್ಣಾ ! ಶಿವನೇ ಚೈತನ್ಯಾತ್ಮನು ಶಕ್ತಿಯೇ ಚಿತ್ತು ಇಂತು ಚೈತನ್ಯಾತ್ಮನೇ ಚಿತ್ಸ್ವರೂಪನೆಂದರಿಯಬಲ್ಲರೆ ಆತನೆ ಶರಣ ಗುಹೇಶ್ವರಾ.''

''ಸತೀವ ರಮಣೇ ಶಿವೇ ರಕ್ತಿಂ ವಿಭಾವಯನ್
ತದನ್ಯವಿಮುಖಃ ಸೋಽಯಂ ಜ್ಞಾತಃ
ಶರಣನಾಮವಾನ್" ॥ ೨ ॥

ಪತ್ನಿ ಪತಿಯಲ್ಲಿ ರಕ್ತಳಾಗಿರುವಂತೆ ಶಿವನಲ್ಲಿ ಅನುರಾಗವನ್ನಿಟ್ಟು ಶಿವನಲ್ಲದವರಲ್ಲಿ ವಿಮುಖನಾದವನು ಶರಣನೆನಿಸುವನು.

ಪತಿವ್ರತೆಗೆ ತನ್ನ ಪತಿಯೇ ಹೇಗೆ ಪ್ರಾಣವೋ ಹಾಗೆ ಶರಣ ಸತಿಗೆ ಶಿವನೊಬ್ಬನೇ ಪರಮ ಪತಿ. ಅನ್ಯ ದೇವತೆಗಳ ಮೇಲೆ ಕಣ್ಣಿಡನು. ಅನನ್ಯ ಭಕ್ತಿಯುಕ್ತನಾಗಿರುವನು.

"ಯಥಾ ಯಯಾ ಸ್ತ್ರೀಯಾ ಸಂಪರಿಷ್ವಕ್ತೋ ನ ಬಾಹ್ಯಂ
ಕಿಂಚನ ವೇದನಾಂತರಂ ।
ಏವಮೇವಾಯಂ ಪುರುಷಃ ಪ್ರಾಜ್ಞೇನಾತ್ಮನಾ ಸಂಪರಿಷ್ವ
ಕ್ತೋ ನ ಬಾಹ್ಯಂ
ಕಿಂಚನ ವೇದನಾಂತರಂ ॥" —ಬೃಹದಾರಣ್ಯಕೋಪನಿಷತ್.

ಸ್ತ್ರೀತ್ವವಾಗಲಿ ಸತೀ ಭಾವವಾಗಲಿ ಸಾಮಾನ್ಯವಾದುದಲ್ಲ. ಅಂತೆಯೇ ಪುರುಷತ್ವವಾಗಲಿ ಪತಿ ಭಾವವಾಗಲಿ ಸಾಮಾನ್ಯವಲ್ಲ. ಇವೆರಡೂ ಅಸಾಧಾರಣವಾದವುಗಳು, ಅಸಾಮಾನ್ಯ ಶಕ್ತಿಯುಳ್ಳವುಗಳು. ಏಕಾಗ್ರತೆ ಏಕತೆಯನ್ನು ತರತಕ್ಕವುಗಳು. ಪವಿತ್ರ ಪ್ರೇಮವನ್ನು ಪರಮ ಸುಖವನ್ನು ಉಂಟು ಮಾಡತಕ್ಕವುಗಳು. ಭಾವೈಕ್ಯತೆಯನ್ನು ಬೆಳಸತಕ್ಕವುಗಳು. ಅನನ್ಯ ಉಪಾಸನೆಗೆ ನಿತ್ಯಾಭಿಯುಕ್ತತೆಗೆ ಉಪಯುಕ್ತವಾದವುಗಳು.

"ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ
ಸತಿಪತಿಗಳೊಂದಾಗದವರ ಭಕ್ತಿ ಅಮೃತದೊಳಗೆ
ವಿಷ ಬೆರೆದಂತೆ ಕಾಣಾ ರಾಮನಾಥ."

ಈ ದಿಸೆಯಲ್ಲಿ ಈ ದೇವರ ದಾಸಮಯ್ಯ ಶಿವಶರಣವಾಣಿ ಗಮನಾರ್ಹವಾಗಿದೆ.

ಹಲವಾರು ದಿನಗಳು ಮಾತ್ರ ಒಂದಾಗಿರುವ ಸತಿಪತಿತ್ವಕ್ಕಿಂತ ಎಂದೆಂದಿಗೂ ಒಂದಾಗಿರುವ ಶಿವ-ಶರಣರಿಬ್ಬರ ಪತಿ-ಸತಿತ್ವಗಳು ಪರಮ ಆದರ್ಶವಾದವುಗಳು, ಪರಮಾಮೃತದಾಯಕಗಳು.

ಶರಣಸತಿಗೆ ಶಿವನಲ್ಲಿ ರಕ್ತಿ, ಶಿವನಲ್ಲಿ ಒಲವಿನ ಪ್ರಪತ್ತಿ. ಶಿವನದೇ ಚಿಂತೆ, ಶಿವನದೇ ವ್ಯಥೆ. ಶರಣನು ಶಿವನಿಗಾಗಿ ತನ್ನನ್ನೇ ಸೂರೆಗೊಂಡಿರುತ್ತಾನೆ ಶರಣನ ಒಲುಮೆಯ ಒತ್ತಡ ಹೀಗಿರುತ್ತದೆ ;

"ಲಿಂಗಕ್ಕೆಂದೆ ನೆನೆವೆ, ಲಿಂಗಕ್ಕೆಂದೆ ಮಾಡುವೆ,
ಲಿಂಗಕ್ಕೆಂದೆ ಕೂಡುವೆನು ನಾನಯ್ಯ.
ಸಕಲ ಪದಾರ್ಥಂಗಳ ಲಿಂಗಕ್ಕೆಂದೇ ಭಾವಿಸುವೆ.
[illegible]

ಲಿಂಗಕ್ಕೆಂದೇ ಕಾಮಿಸುವೆನು ನಿಃಕಾಮಿಯಾಗಿ !
ಎನ್ನ ದೇಹೇಂದ್ರಿಯ ಮನ ಪ್ರಾಣಾದಿಗಳು ಲಿಂಗದ ಸತಿಯರಾಗಿ,
ಲಿಂಗಕ್ಕೆಂದೇ ಬಯಸಿ ಲಿಂಗ ಪ್ರಾಣಿಗಳಾದ ಕಾರಣ
ಲಿಂಗಕ್ಕೆಂದೇ ಕೈಕೊಂಬೆನು, ಅನರ್ಪಿತವನರಿಯೆ
ಕೂಡಲಸಂಗಮದೇವಾ."

"ಗುಹೇಶ್ವರನ ಕೂಡಿದ ಕೂಟ ಇಂದು ಸುಖ, ಮುಂದೆ ಲೇಸು"

"ಮುಚ್ಚಿ ಗ್ರಹಗೊಂಡೆ ನಿಮಗಾನು.
ನಲ್ಲನೇ, ಒಚ್ಚತವಾದವಳನು ಉಳಿವರೇ ?
ವಿಕಳಗೊಂಡೆ, ಶಿವ ಶಿವಾ,
ಪ್ರಾಣಪದವಲ್ಲದೆ ಮತ್ತೊಂದನರಿಯೆ ಮನವಚನ ಕಾಯದಲ್ಲಿ!
ಉಚಿತವೆ ನಿನಗೆ ? ಪುರುಷ ಲಕ್ಷಣವೆ ?
ಅತಃ ಪರ ಗಂಡರ ನಾನು ಬಲ್ಲಡೆ
ಕರ್ತೃ ನಿಮ್ಮಾಣೆ ಶಂಭುಜಕ್ಕೇಶ್ವರಾ :"

"ಇನಿಯಂಗೆ ತವಕವಿಲ್ಲ, ಎನಗೆ ಸೈರಣೆಯಿಲ್ಲ.
ಮನದಿಚ್ಛೆಯನರಿವ ಸಖಿಯರಿಲ್ಲ, ಇನ್ನೇವೆನವ್ವಾ !
ಮನುಮಂಥನ ವೈರಿಯ ಅನುಭಾವದಲ್ಲಿ ಎನ್ನ ಮನವು
ಸಿಲುಕಿ **ಬಿಡದು.**
ಇನ್ನೇನ ಮಾಡುವೆ. ಎಲೆ ಕರುಣವಿಲ್ಲದ ತಾಯೆ,
ದಿನ ವೃಥಾ ಹೋಗದೆ ಯೌವನ ಬೀಸರವೋಗದ ಮುನ್ನ
ಪಿನಾಕಿಯ ತಂದು ನೆರಹೆನ್ನವ್ವಾ ಶಂಭು ಜಕ್ಕೇಶ್ವರನ !"

"ಹೊರಗಿದ್ದಾನೆಂದು ನಾನು ಮರೆದು ಮಾತನಾಡಿದಡೆ
ಅರಿಯಲೀಯದೆ ಬಂದೆನ್ನ ಅಂತರಂಗದೊಳಗಿಪ್ಪ
ತೆರಹಿಲ್ಲದಭವನು ನುಡಿಗೆಡೆಗೊಡನು.
ಆತನ ಬಯಲಿಂಗೆ ಬೇಟಗೊಂಡೆನೆಲಗವ್ವಾ,

ನಾನೇನ ಮಾಡುವೆನೆಲೆ ತಾಯೆ !
ಮರೆದಡೆಚ್ಚರಿಸುವ ಕುರುಹಿಲ್ಲದಭವನು
ತನ್ನನರಿದಡೊಳ್ಳಿದನವ್ವಾ ನಮ್ಮ ಶಂಭುಜಕ್ಕೇಶ್ವರನು.

—ಸತ್ಯಕ್ಕ ಶರಣೆ.

ಶಿವರಕ್ತಿಯನ್ನು ಬಿತ್ತರಿಸುವ ಈ ನಾಲ್ಕು ವಚನಗಳಲ್ಲಿ ಮೊದಲಿನದು ಭಕ್ತಿಬಲ್ಲಿದ ಬಸವಣ್ಣನದು. ಬಳಿಕ ಪ್ರಭುದೇವರ ಚಿಕ್ಕ ಪಂಕ್ತಿ. ಕೊನೆಯವು ಮೂರು ಸತ್ಯಕ್ಕನವು. ಇವುಗಳಲ್ಲಿ ತ್ಯಾಗವಿದೆ; ಭೋಗವಿದೆ; ಯೋಗವಿದೆ. ಅರಿವು ಅನುಭವಗಳಿವೆ. ಅಂತರಂಗ ಬಹಿರಂಗಗಳ ಆಚರಣೆಯಿದೆ. ಮಾಡುವ ಕೂಡುವ ಕ್ರಿಯಾಯೋಗವಿದೆ. ಧ್ಯಾನಿಸುವ ಭಾವಿಸುವ ಆಂತರಂಗಿಕ ಯೋಗವಿದೆ; ಪಡಿ ಪದಾರ್ಥಗಳನರ್ಪಿಸುವ ಪೂರ್ಣ ತ್ಯಾಗವಿದೆ. ಅಂಗಗುಣಗಳನರಿಯದ ಲಿಂಗಗುಣಗಳನರಿವ ಜ್ಞಾನಯೋಗವಿದೆ. ಲಿಂಗಕಾಮ ಲಿಂಗಪ್ರೇಮ ಲಿಂಗ ಪ್ರಾಣಗಳಿಂದ ಸತೀಭಾವದ ಶರಣತ್ವವಿದೆ. ಏನೆಲ್ಲವೂ ಲಿಂಗಕ್ಕೆಂಬ ಆತ್ಮಾರ್ಪಣರೂಪ ಪೂರ್ಣಯೋಗವಿದೆ. ಆ ಪೂರ್ಣಯೋಗದ ಪರಮ ಪರಿಣಾಮವನ್ನು ಪ್ರಭುದೇವನು ತನ್ನ ಅಮೃತವಾಣಿಯಲ್ಲಿ ಅಭಿವ್ಯಕ್ತಗೊಳಿಸಿದ್ದಾನೆ. ಶರಣೆ ಸತ್ಯಕ್ಕನ ಪ್ರಥಮ ವಚನದಲ್ಲಿ ರಕ್ತಿವಿಭಾವ, ಅನ್ಯವಿಮುಖತೆ, ಶಿವವಲ್ಲಭನ ವಿಕಾಳವಸ್ಥೆ, ತ್ರಿಕರಣಗಳ ಏಕಾಗ್ರತೆ, ನಲ್ಲನಾದ ಶಿವನೊಡನೆ ಸರಸಸಲ್ಲಾಪ, ತನಗಿರುವ ಏಕೋಭಾವದ ವಿಷಯದಲ್ಲಿ ನಂಬಿಕೆಯನ್ನು ಹುಟ್ಟಿಸುವ ಪ್ರತಿಜ್ಞೆ—ಇವೆಲ್ಲ ಒಂದೇ ಒಂದು ವಚನದಲ್ಲಿ ಮನೋಹರವಾಗಿ ಮೈದಾಳಿವೆ. ಎರಡನೆಯ ವಚನದಲ್ಲಿ ವಿಕಳಾವಸ್ಥೆಯಲ್ಲಿದ್ದ ಸತ್ಯಕ್ಕನ ಜೀವನದ ಸತ್ಯಾನುಭವ ವ್ಯಕ್ತವಾಗಿದೆ. ಶಿವ ಅವಳ ಇನಿಯು. ತವಕವಿಲ್ಲದ ಆತನ ಧೋರಣೆಗೆ ಅವಳಲ್ಲಿ ಸೈರಣೆಯಿಲ್ಲ. ಆತನು ಹಾಗೆ, ಇವಳು ಹೀಗೆ; ಮನದಿಚ್ಛೆಯೋ ಅತ್ಯಂತ ತೀವ್ರವಾಗಿದೆ. ತಿಳುಹಲು ಯಾರ ನೆರವಿಲ್ಲ. ಜತೆಯ ಗೆಳತಿಯರಿಲ್ಲ. ಅಂದರೆ ಆತನ ಗಾಢ ಅನುರಾಗದಲ್ಲಿ ಕ್ರಿಯೆ ಜ್ಞಾನಾದಿ ಶಕ್ತಿನಿಯರು ಸನಿಹದಲ್ಲಿಲ್ಲ. ಆತನ ಅನುಭವದಲ್ಲಿ ಅವಳ ಮನ ಮಗ್ನವಾಗಿದೆ; ಮುಳುಗಿ ತನ್ನ ತಾ ಮರೆತಿದೆ. ಮತ್ತೇನನ್ನು ಮಾಡಲು ದಿಕ್ಕುತೋಚದೆ ತನ್ನ

ತಾಯಿಯ (ಚಿಚ್ಛಕ್ತಿಯ) ಮೇಲೆ ರೇಗಿದ್ದಾಳೆ. ಭಕ್ತಿಯೌವನದ ಭರ, ಭಾವ ಬಂಧುರ; ಅಂತರಂಗದ ಆತುರ. ಹೀಗೆ ಆಡ ಹಚ್ಚಿದೆ. ತಾಯಿಯ ಸಲಿಗೆ ಬೇರೆ. ಓ ತಾಯೆ, ನಿನಗೆ ನಿನ್ನ ಕಂದಳ ಮೇಲೆ ಕಿಂಚಿತ್ತಾದರೂ ಕರುಣೆಯಿಲ್ಲ. ನನ್ನ ಈ ಭಕ್ತಿ ಯೌವನದ ಅವಸ್ಥೆಯನ್ನು ಆಸ್ಥೆಯನ್ನು ಕಣ್ಣಾರೆ ಕಂಡು, ಕರುಳಿನಿಂದ ತಿಳಿದು ಸಹ ಸುಮ್ಮನಿರುವೆ. ಶಿವಮಹಾದೇವನ ಕರೆತಂದು ಮಿಳನ ಮಾಡಿಸದಿರುವೆ. ತಾಳಲಾರೆ; ತಳುವೇಕೆ ತಾಯೆ ? ಬೇಗ ಬರ ಮಾಡು; ಬಗೆಗೊಂಡು ಬೆರೆವಂತೆ ಮಾಡು. ಮಾಡು ತಾಯೆ, ಮಾಡೆನ್ನ ಹಡದವ್ವೆ ! ನೀನಲ್ಲದಿನ್ನಾರು ಎನಗೆ ನೆರವು ? ನೀನೆನ್ನ ಪರಮಾಪ್ತಳು ನಿನ್ನಿಂದ ನಾನಾಗಿರುವೆ. ನಿನ್ನವಳಾಗಿರುವೆ. ನಿನ್ನ ಸೇವೆಯಲ್ಲಿರುವೆ. ಈಗ ನೀನೆನಗೆ ನೆರವಾಗು—ಎಂದು ಆತ್ಮೀಯತೆಯಿಂದ ಅಂಗಲಾಚಿದ್ದಾಳೆ. ಅಂಗಲಾಚುತ್ತ ಎಚ್ಚತ್ತು ಒಳಗೇಡು ನಾಲ್ಕನೆಯ ನುಡಿಯಲ್ಲಿ ಹೀಗೆ ಹೇಳುತ್ತಾಳೆ; ಇಲ್ಲಿಯವರೆಗೆ ಮಾತಾಡಿದುದು ಮರವೆಯ ಮಾತು. ಅಂತರಂಗದಲ್ಲಿಯೇ ಆತನಿರುವುದನ್ನು ಅರಿಯದೆ ಆಡಿಯಾಯಿತು. ಅರಿತ ಬಳಿಕ ಆಡಲಿಂಬಿಲ್ಲ. ಆತನಿಂಬುಗುಡನು. ಬಯಲಗೂಡಿ ಬಯಲಾದ ಬಳಿಕ ಭಾವ ಭಾಷೆಗಳಿಗೆ ಎಡೆಯೆಲ್ಲಿ ? ಆಚಾರ ವಿಚಾರಗಳಿಗೆ ಎಡೆಯಿಲ್ಲ. ಆದರೂ ನಾನು ಮರೆದೆ. ಆತ ಎಚ್ಚರಿಸಬಾರದೇನು ? ಓ ! ಎಚ್ಚರಿಸಲು ಆತನಿಗೆ ಕುರುಹಿಲ್ಲ; ಸಂಸಾರ ಬೇಕಿಲ್ಲ. ಆತನ ಅರಿವ ಹೊಣೆ ನನ್ನದು. ಅರಿತರೆ ಆತ ಒಳ್ಳಿದ; ಒಳಕೊಳ್ಳುವ. ಆತನಿಗೆ ಸರ್ವಾತ್ಮಭಾವದಿಂದ ಶರಣು ಶರಣಾರ್ಥಿ !

ಶಿವಶರಣೆ ಸತ್ಯಕ್ಕನ ಮಾತುಗಳು ಸತ್ಯಕ್ಕೆ ಸತ್ಯ; ನಿತ್ಯಕ್ಕೆ ನಿತ್ಯ. ಅವಳು ಸತ್ಯಕ್ಕೂ ತದನ್ಯವಿಮುಖಳಾಗಿದ್ದಾಳೆ. ಶಿವಶಕ್ತಿಯೇ ಅವಳ ಶಕ್ತಿಯಾಗಿದೆ. ಆತನೇ ಅವಳಿಗೆ ಇನಿಯ; ನಚ್ಚಿನ ನಲ್ಲ. ಅವನಲ್ಲಿಯೇ ಅವಳು ಒಚ್ಚತಗೊಂಡಿದ್ದಾಳೆ; ಅಂದರೆ ಆತನನ್ನು ಸಂತೋಷದಿಂದ ಸ್ವೀಕರಿಸಿದ್ದಾಳೆ; ಅವನಲ್ಲಿ ಏಕೀಕರಿಸಿದ್ದಾಳೆ; ಎರಕಗೊಂಡಿದ್ದಾಳೆ. ಎಡೆದೆರವಿಲ್ಲದಂತಿದ್ದಾಳೆ. ಒಮ್ಮನದಿಂದ ಒಳ್ಳಿದನೆಂದು ಒಪ್ಪಿ ಅಪ್ಪಿ ಅಚ್ಚ ಶರಣೆಯೆನಿಸಿದ್ದಾಳೆ. ಸತ್ಯಸತಿಯೆನಿಸಿದ್ದಾಳೆ. ಇದರಿಂದ ತಿಳಿಯುವುದಿದು : ಸದಾ ಶಿವಲೋಲನಾಗಿ ಶಿವಶಕ್ತಿಯಾಗಿ ಇರುವವನೆ ಶರಣ.

ಶಿವರಕ್ತಿ ಭವರಕ್ತಿಯಂತಹದಲ್ಲ. ಶಿವರಕ್ತಿ ಸುಖ ದುಃಖಗಳನು ಮೀರಿದ್ದು. ಸರ್ವೇಂದ್ರಿಯ ಚಾಪಲ್ಯವಿಲ್ಲದ್ದು. ಸ್ವಾನುಭವ ಪೂರ್ಣವಾದದ್ದು. ಬೆಳಗಿಗೆ ಬೆಳಗಾದದ್ದು. ಶಿವರಕ್ತಿಯಲ್ಲಿ ಒಳಗಣ್ಣು ತೆರೆಯುತ್ತದೆ, ಮಲ್ಲಿಗೆಯಂತೆ ಮಂದಾರದಂತೆ ಅರಳುತ್ತದೆ. ಉತ್ತಮವಾದ ವಾಸನೆಯನ್ನು ಬೀರುತ್ತದೆ. ಮಧುರ ಮಕರಂದದಿಂದ ತುಂಬಿರುತ್ತದೆ. ಅದರಿಂದ ಅಂತರಂಗ ಬಹಿರಂಗವೆರಡೂ ಚೆನ್ನಾದ ಸಂಸ್ಕಾರವುಳ್ಳವುಗಳಾಗುತ್ತವೆ, ಚೇತನವುಳ್ಳವುಗಳಾಗುತ್ತವೆ; ದಿವ್ಯ ದೀಪ್ತಿಯುಳ್ಳವಾಗುತ್ತವೆ. ಅದಕ್ಕಾಗಿಯೋ ಏನೋ ಶಿವಶರಣರಿಗೆ ಶಿವನಲ್ಲಿ ತ್ರಿಕರಣ ಪೂರ್ಣವಾದ ರಕ್ತಿ, ಭಾವಪೂರ್ಣವಾದ ಭಕ್ತಿ; ಅಖಂಡ ಆಸಕ್ತಿ.

"ಒಳಗೆ ಶೋಧಿಸಿ. ಹೊರಗಳವಡಿಸಿ,
ಭಾವದಿಂದ ಗುಡಿತೋರಣವ ಕಟ್ಟುವೆನವ್ವ.
ಎನ್ನ ಲಿಂಗವೇ ಬಾರಯ್ಯ; ಎನ್ನ ದೇವ ಬಾರಯ್ಯ.
ಎನ್ನಂತರಂಗದ ಪರಂಜ್ಯೋತಿರ್ಲಿಂಗವನಿದಿರುಗೊಂಬೆನು ಬಾರಯ್ಯ.
ಮಹಾಲಿಂಗ ಕಲ್ಲೇಶ್ವರಾ, ನಿಮ್ಮ ಧರ್ಮವು ಬಾರಯ್ಯಾ."

ಎಂತಹ ಕರುಳ ಕರೆ! ಎಷ್ಟೊಂದು ತುಂಬಿ ಬಂದಿದೆ ತವಕದ ತೊರೆ! ನೇಹದ ನೆರೆ!! ಸಜ್ಜಾದ ಸಜ್ಜನಿಕೆ! ಒಳ ಹೊರಗೆ ಹಸನಾಗಿಸಿ ಒಲವಿಂದ ಗುಡಿತೋರಣವ ರಚಿಸಿ ಕರೆವ ಆ ಶರಣ ಸತಿಯ ವಾಣಿಯಲ್ಲಿ ಅದೆಂತಹ ಆಕರ್ಷಣೆಯಿದೆ! ಕಟ್ಟಿದ ಗುಡಿ ಬೇರಲ್ಲ; ಸಿಂಗರಿಸಿದ ತೋರಣ ಬೇರಲ್ಲ.

"ದೇಹ ದೇವಾಲಯವು ಮೇಲೆ ರತ್ನದ ಕಳಶ.
ಆಳು ಪರಿವಾರಕ್ಕೆ ಇಂಬುಗೊಡದೆ,
ಅರಮನೆಯೊಳಗೊಂದು ಎಸಳಮಂಟಪವಿಕ್ಕಿ
ಶಶಿಮುಖಿಯ ಸಂಗದೊಳಗಯ್ಯನಿರಲು,
ಸಂಗ ಕಂಗಳ ತೆರೆದು, ಸಂಗ ಮತ್ತೊಂದಾಗೆ
ಲಿಂಗ ನಿನ್ನಯ ರೂಪು ಯೋಗಿನಾಥಾ"

ಶರಣನ ಶರೀರವೆ ಶಿವಾಲಯಂ; ಶಬ್ದಾದಿ ವಿಷಯಂಗಳೇ ಐದಳಿರು. ಅವನ್ನು ಪ್ರಸಾದವಾಗಿಸುವಿಕೆಯೇ ತೋರಣವಾಗುವಿಕೆ. ಜ್ಞಾನರತ್ನವುಳ್ಳ ತಲೆಯೇ ರನ್ನಗಲಶ. ಕಾಮಾದಿಗಳು ಕಾಲಾಳುಗಳಾಗಿದ್ದಾರೆ. ಆದರೂ ಅಲ್ಲಿರಲು ಇಂಬಿಲ್ಲ. ಶರಣಾಂಗ ಅದೊಂದು ಅರಮನೆ. ಶರಣಸತಿಯ ಹೃದಯ ಅದೊಂದು ಹೂ ಮಂಟಪ. ಶರಣ ಸತಿ ಶಶಿಮುಖಿ. ಶಿವನೊಡನೆ ಸಂಗ. ಅಂದರಿಂದಾಗಿ ಅವಳವು ತೆರೆದ ಕಂಗಳು. ಅವಳ ಸಂಗ ಅದು ಬೇರೆ; ಅವಳ ಆ ರೂಹು ಬೇರೆ. ಅವಳದು ಲಿಂಗಸಂಗ; ಲಿಂಗರೂಪು; ಲಿಂಗಕಳೆ; ಲಿಂಗನಾದ. ಅವಳು ಆ ರೂಪನ್ನು ಕಾಣಬಲ್ಲಳು; ಅವನಲ್ಲಿ ಕೂಡಬಲ್ಲಳು,

"ಕೇಳವ್ವ, ಕೇಳವ್ವ ಕೆಳದಿ,-ಹೇಳುವೆ ನಿನಗೆ ; ಅಹಾ,
ಕಂಗಳಲ್ಲಿ ಕಾಂಬೆ, ಮತ್ತೆ ಕಾಣೆ.
ಮನದಲ್ಲಿ ಹಿಡಿವೆ, ಹಿಡಿದು ಮತ್ತೆ ಕಾಣೆನವ್ವಾ !
ಮಿಂಚಿನ ರವೆಯಂತೆ ತೋರುವ-ಅಡಗುವ
ನಮ್ಮ ನಲ್ಲನು ಕಪಿಲಸಿದ್ಧ ಮಲ್ಲಿಕಾರ್ಜುನದೇವನು.
ಮನವೆಂಬ ಮಂಟಪದ ನೆಳಲಲ್ಲಿ,
ನೆನಹೆಂಬ ಜ್ಞಾನ ಜ್ಯೋತಿಯ ಬೆಳಗಿ,
ಆ ಘನ ಪುರುಷ ಪವಡಿಸಿ ಇದ್ದಾನೆ.
ಎಲೆ ಅವ್ವಾ! ಅದನೊಂದೆರಡೆನ್ನದೆ
ಮೂರು ಬಾಗಿಲ ಮುಚ್ಚಿ ನಾಲ್ಕು ಮುಟ್ಟದೆ—
ಆಯ್ದು ತಟ್ಟದೆ ಇರುಕಂಡ್ಯಾ ಎಲೆ ಅವ್ವಾ !
ಐದೇಳೆಂಟೆಂಬ ವಿಹಂಗ ಸಂಕುಳದ ಉಲುಹು
ಪ್ರಬಲವಾದಡೆ, ಕಪಿಲಸಿದ್ಧಮಲ್ಲಯ್ಯ ನಿದ್ದೆಗೆಟ್ಟಲ್ಲಿಹನು."

ನೋಡಿಯೂ ನೋಡದ, ಕೂಡಿಯೂ ಕೂಡದ ಬೆಡಗು ಬಿನ್ನಾಣ ಶರಣನದು. ತೋರಿ ಅಡಗುವ ಮೋಡಿ ಶಿವನದು. ನಾದವಾಗಿ ಬಿಂದುವಾಗಿ ಕಲೆ(ಳೆ)ಯಾಗಿ ತೋರುತ್ತಾನೆ-ಶಿವನು. ಹೀಗೆ ತೋರಲು ಆಕಾಶವು-ಆಕಾಶಾಂಗನಾದ ಶರಣನು ಅವನಿಗೆ ವಿಷಯಗಳಾಗಿರುತ್ತವೆ.

ಶರಣ ರಚಿಸಿದ ಮನೋಮಂಟಪದಲ್ಲಿ ನೆಳಲು ಬಿಸಿಲುಗಳುಂಟು. ಶಾಂತಿಯೇ ನೆರಳು. ಸಂವಿತ್ತಿಯೆ ಬೆಳಗು. ಇವುಳ್ಳ ಹೃದಯಮಂಟಪದಲ್ಲಿ ಅವಳ ಘನಪುರುಷ ಪವಡಿಸಿದ್ದಾನೆ. ಆತನ ಆ ಶಿವಯೋಗ ನಿದ್ರೆ ಕೆಡಬಾರದೆಂಬ ಉತ್ಕಟೇಚ್ಛೆ ಶರಣ ಸತಿಯದು. ಅದಕ್ಕಾಗಿ ತನ್ನ ತಾಯಿಗೆ ತುಂಬಾ ಎಚ್ಚರಿಕೆಯಿಂದಿರಲು ಹೇಳುವ ಹೃದಯವಂತಿಕೆಯನ್ನು ಕಾಣಬೇಕು.

ತ್ರಿವಿಧ ತನುಭಾವವನ್ನು ತೊಲಗಿಸುವುದೆ ಮೂರು ಬಾಗಿಲ ಮುಚ್ಚುವಿಕೆ. ಅಂತಃಕರಣ ಚತುಷ್ಟಯ ವೃತ್ತಿಗೊಳಗಾಗದಿರುವುದೆ ನಾಲ್ಕು ಮುಟ್ಟದಿರುವಿಕೆ. ಪಂಚಕ್ಲೇಶಗಳಿಗೆ ಸಿಲುಕದಿರುವುದೆ ಅಯ್ದು ತಟ್ಟದಿರುವಿಕೆ. ಪಂಚೇಂದ್ರಿಯ, ಸಪ್ತವ್ಯಸನ, ಅಷ್ಟಮದಗಳೆಂಬುದೇ ಉಲಿವ ಹಕ್ಕಿಗಳು. ಇವು ಕೂಗಾಡಿದರೆ ಪರಶಿವನೆಂಬ ಘನಪುರುಷನ ಯೋಗವುಂಟಾಗದು. ಹೃದಯದ ಹೆಬ್ಬಯಕೆ ಸಯವಾಗಬೇಕಾದರೆ ಈ ಹಕ್ಕಿಗಳೆಲ್ಲ ಹಾರಿಹೋಗಬೇಕು. ಮನೆ ನಿಶ್ಶಬ್ದವಾಗಿರಬೇಕು. ಶಾಂತಿ ವಾತಾವರಣ ಸಮನಿಸಿರಬೇಕು.

“ಎನ್ನ ಗಂಡ ಬರಬೇಕೆಂದು ಎನ್ನಂತರಂಗವೆಂಬ
ಮನೆಯ ತೆರಹು ಮಾಡಿ, ಅಷ್ಟದಳ ಕಮಲವೆಂಬ
ಓವರಿಯೊಳಗೆ ನಿಜನಿವಾಸವೆಂಬ ಹಾಸಿಗೆಯ ಹಾಸಿ
ಧ್ಯಾನ ಮೌನವೆಂಬ ಮೇಲುಕಟ್ಟು ಕಟ್ಟಿ,
ಜ್ಞಾನವೆಂಬ ದೀಪವ ಬೆಳಗಿ,
ನಿಷ್ಕ್ರಿಯೆಗಳೆಂಬ ಉಪಕರಣಂಗಳ ಹರಹಿಕೊಂಡು
ಪಶ್ಚಿಮದ್ವಾರವೆಂಬ ಬಾಗಿಲ ತೆಗೆದು,
ಕಂಗಳೇ ಪ್ರಾಣವಾಗಿ ಹಾರುತಿರ್ದೆನಯ್ಯ !
ನಾನು ಬಾರನೆಂದು ಉಮ್ಮಳಿಸಿಹೆನೆಂದು
ತಾನೇ ಬಂದು ಎನ್ನ ಹೃದಯ ಸಿಂಹಾಸನದ ಮೇಲೆ
ಮೂರ್ತಿಗೊಂಡಡೆ ಎನ್ನ ಮನದ ಬಯಕೆ ಸಯವಾಯಿತ್ತು
ಚಿಂತೆ ನಿಶ್ಚಿಂತವಾಯಿತ್ತು. ಕೂಡಲ ಸಂಗಮದೇವ,
ಕೃಪಾಮೂರ್ತಿಯಾದ ಕಾರಣ ನಾನು ಬದುಕಿದೆನು.”

ನಾದ ಬ್ರಹ್ಮೋಪಾಸಕನಾದ ಶರಣನ ಬಾಳಿದು; ಬದುಕಿದು. ಆತನ ಆ ಮನೋರಥಕ್ಕೆ ಹೊಲಬಿದು. ಆತನ ಕೌಟುಂಬಿಕ ಜೀವನವಿದು. ಆತನ ನಿತ್ಯದ ನಡೆ ನುಡಿಗಳಿವು; ಆಸೆ-ಅಭಿಲಾಷೆಗಳಿವು. ಶರಣಸತಿಯ ಪತಿಸೇವೆಯಿದು; ಅವಳ ಇರುಳಿನ ಇಮ್ಮಾದ ಮನದ ಹಾರೈಕೆಯಿದು. ಪ್ರಗತಿ ಜೀವನದ ಪರಿಶುಭ್ರ ಜೀವನದ ಪರಿಣಾಮವಿದು. ಅನ್ಯನವಾದ ರತಿಭಾವವಿದು. ಅಂತರಂಗದೊಳಗೆ ಅಂಗವಿಲ್ಲದ ಅವಯವವಿಲ್ಲದ ಆತ್ಮನ ಕಂಡ ಪರಿಯಿದು. ಆತ್ಮಸ್ಪರ್ಶಕ್ಕೆ ಆತ್ಮದರ್ಶನಕ್ಕೆ ಹವ್ವನೆ ಹಾರೈಸುವ ಹವಣಿಕೆಯಿದು. ಶರಣನ ಸರ್ವಾಂಗವು ಲಿಂಗೋಪಕರಣವಾದ ಪ್ರಸಂಗವಿದು. ಅನ್ಯವಿಮುಖತೆಗೆ ಅಭಿಮುಖವಿದು.

ಅವಸ್ಥೆಗಳಲ್ಲಿ ಅಳಲುತ್ತಿದ್ದಾನೆ ಮಾನವ. ಹುಟ್ಟು ಸಾವುಗಳಿಗಿಂತ ಹೆಚ್ಚಿನ ತೊಂದರೆ ತೊಡಕುಗಳು ಸ್ಥಿತಿಜೀವನದಲ್ಲಿ! ಅವಾಸ್ತವ ಜೀವನವನ್ನು ನಡೆಯಿಸುತ್ತಾನೆ ಮಾನವ. ಇದರಿಂದಾಗಿ ಇಲ್ಲದ ಚಿಂತೆ ವ್ಯಥೆಗಳಿಗೆ ಈಡಾಗಿ ಆಜನ್ಮವೂ ಅಳಲುತ್ತಾನೆ ; ಬಳಲುತ್ತಾನೆ. ಹಗಲಿರುಳೆನ್ನದೆ ಹಗೆಗಳ ಹಗರಣದಲ್ಲಿ ಬೀಳುತ್ತಾನೆ; ಬೀಳಾಗುತ್ತಾನೆ. ಇದು ತಪ್ಪಬೇಕಾದರೆ ಶಿವರಕ್ತಿ ಶಿವಭಕ್ತಿ ಬೆಳೆದು ಬರಬೇಕು.

“ನಲ್ಲನ ಕಾಣದೆ ತಲ್ಲನಗೊಳುತಿಪ್ಪುದು ನೋಡಾ ಎನ್ನ ಮನವು.
ಜಾಗ್ರಾವಸ್ಥೆಯಲ್ಲಿ ನಲ್ಲನ ಚಿಂತೆಯಿಂದೆ ಸುಳಿವುತಿದ್ದೆನವ್ವಾ !
ಸ್ವಪ್ನಾವಸ್ಥೆಯಲ್ಲಿ ನಲ್ಲನ ಚಿಂತೆಯಿಂದೆ ಕಳವಳಿಸುತಿದ್ದೆನವ್ವಾ !
ಸುಷುಪ್ತಾವಸ್ಥೆಯಲ್ಲಿ ನಲ್ಲನ ಚಿಂತೆಯಿಂದೆ ಮೈಮರೆದಿದ್ದೆನವ್ವಾ !
ಸರ್ವಾವಸ್ಥೆಯಲ್ಲಿ ಅಖಂಡೇಶ್ವರನೆಂಬ ಬಲ್ಲನ
ಕೂಡಬೇಕೆಂಬ ಭ್ರಾಂತಿಯಿಂದೆ ಬಡವಾಗುತಿದ್ದೆನವ್ವಾ !”

ಎಲ್ಲ ಅವಸ್ಥೆಗಳಲ್ಲಿಯೂ ಆ ಶಿವಚಿಂತೆ ಆ ಶಿವಭ್ರಾಂತಿ ಶರಣನಿಗಿರಬೇಕು. ಆ ಚಿಂತೆಯಲ್ಲಿ ಮೈಮರೆದಿರಬೇಕು; ಬಡವಾಗಿರಬೇಕು; ಶಿವನ ವಿಷಯದಲ್ಲಿ ವಿಕಳಾವಸ್ಥೆಯನ್ನು ಅಖಂಡೇಶ್ವರನ ಆರಾಧಕರಾದ ಷಣ್ಮುಖ ಸ್ವಾಮಿಗಳು ವಿರಕ್ತಶರಣರಾಗಿ ಮುಂದಿನ ತಮ್ಮ ವಚನಗಳಲ್ಲಿ ಆಕರ್ಷಕ ಶೈಲಿಯಲ್ಲಿ ಅಭಿವ್ಯಕ್ತಗೊಳಿಸಿದ್ದಾರೆ.

“ಚಿತ್ತದ ವಲ್ಲಭನ ಕಾಣದೆ ಚಿಂತೆಗೊಂಡಿತ್ತು ನೋಡಾ ಎನ್ನ ಮನವು. ಹೊತ್ತಿನ ಗೊತ್ತಿಗೆ ಬಾರದಿದ್ದಡೆ ಹೊತ್ತುಹೋಗದು ಕೇಳಿರೆ! ಕರ್ತೃ ಅಖಂಡೇಶ್ವರನು ಬಾರದಿದ್ದಡೆ ಕತ್ತಲೆಯ ಕಳೆಯಲಾರೆನವ್ವಾ !

ಬುದ್ಧಿಗೂಡದೆ ನಿದ್ದೆಬಾರದೆನಗೆ ಸುದ್ದಿ ಹೇಳಿರೆ ಆತಗೆ ! ಸದ್ದಿಲ್ಲದೆ ಎದ್ದು ಹೋದನು ನೋಡಿರೆ, ಮುದ್ದಿಸಿ ಮುನಿಸು ತಿಳುಪಿ ಇದ್ದಲ್ಲಿಗೆ ಕರೆದು ತನ್ನಿರೆ ಅಖಂಡೇಶ್ವರನೆಂಬ ಶಿವನ.

ಆತನ ಆಳಾಪದಿಂದೆ ಹಗಲಾದುದನರಿಯೆನವ್ವಾ ! ಆತನ ಆಳಾಪದಿಂದೆ ಇರುಳಾದುದನರಿಯೆನವ್ವಾ ! ಅಖಂಡೇಶ್ವರನೆಂಬ ಪ್ರಾಣವಲ್ಲಭನ ಕೂಡಬೇಕೆಂಬ ಭ್ರಾಂತಿಯಿಂದೆ ಹೋದುದ ಬಂದುದನರಿಯೆನವ್ವಾ ! ನಾನೇನಂದೆ ತಾನೇತಕೆ ಮುನಿದನೇ ಮಾನಿನಿ ? ಹೋಗಿ ಕರೆದು ತಾರೆ ಅಖಂಡೇಶ್ವರನೆಂಬ ಇನಿಯನ.

ಜೀವದೊಡೆಯನನಗಲಿ ಜೀವಿಸಲಾರೆನವ್ವ, ನಿಮಿಷಂ ನಿಮಿಷಾರ್ಧವಾದಡೂ ಬಾಳಲಾರೆನವ್ವ, ಹೇಳಲಿನ್ನೇನು ಸಾವು ಬಂದಿತವ್ವ ಕಂಡರೆ ಹೇಳಿರವ್ವ, ನಮ್ಮ ತಂಗಿಯ ಭಾವನ ಕರೆದು ತೋರಿರವ್ವ ಅಖಂಡೇಶ್ವರನೆಂಬ ನಲ್ಲನ. ಪ್ರಾಣನಾಯಕನ ಕಾಣದೆ ಕ್ಷೋಣಿಯೊಳಗೆ ಬದುಕಲಾರೆನವ್ವ, ಏಣಾಂಕಧರನು ಏಕೆ ಬಾರನೇ ? ಜಾಣೆ ಪ್ರವೀಣೆ ಕರೆದು ತೋರೆ ಅಖಂಡೇಶ್ವರನೆಂಬ ನಲ್ಲನ.

ಬಾರನೇತಕವ್ವ ನಮ್ಮನೆಯಾತ, ತೋರನೇಕವ್ವ ತನ್ನ ದಿವ್ಯ ರೂಪವ; ಬೀರನೇತಕವ್ವ ಅತಿ ಸ್ನೇಹವ. ಇನ್ನೆಂತು ಸೈರಿಸುವೆನವ್ವ; ಹೇಗೆ ತಾಳುವೆನವ್ವ. ತನು ತಾಪಗೊಳ್ಳುತಿದೆ; ಮನ ತಲ್ಲಣವಾಗುತಿದೆ. ಅಖಂಡೇಶ್ವರನೆಂಬ ನಲ್ಲನ ತೋರಿಸಿ ಎನ್ನ ಪ್ರಾಣವನುಳುಹಿಕೊಳ್ಳಿರವ್ವ. ಘುಲು ಘುಲೆಂದಡೆ ನಲ್ಲ ಬರುತಾನೆಂದು ಎಲ್ಲ ಹಾದಿಯ ಮುಟ್ಟಿ ನೋಡುತಿದ್ದೆನವ್ವ; ನಲ್ಲನ ಸೊಲ್ಲು ಲಾಲಿಸಿ ಕೇಳುತಿದ್ದೆನವ್ವ. ಅಖಂಡೇಶ್ವರನೆಂಬ ನಲ್ಲನ ಕಂಡಡೆ ಮಹಾ ಸಂತೋಷವು ; ಕಾಣದಿದ್ದಡೆ ಕಡು ದುಃಖ ಕೇಳಿರವ್ವ ಎನಗೆ !

ನೋಡು ನೋಡಯ್ಯ ಗಂಡನೆ, ಎನ್ನ ಕಂಗಳುಪ್ಪರಿಗೆಯ ಮೇಲೆ ಕುಳ್ಳಿದ್ದು ಸಕಲ ವಿಚಿತ್ರವ. ಆಡು ಆಡಯ್ಯ ಗಂಡನೆ ಎನ್ನ ಮನದ ಕೊನೆಯಲ್ಲಿ ಮಹಾಜ್ಞಾನದುಯ್ಯಾಲೆಯ ಕಟ್ಟಿ ಮನ ಬಂದ ಪರಿಯಲ್ಲಿ. ಕೂಡು ಕೂಡಯ್ಯ ಗಂಡನೆ ಎನ್ನ ಸತ್ಕಲೆಗಳಿಂದೆ ಸವಿತೋರಿಸಿ ಅಖಂಡೇಶ್ವರಾ.

ಹಗಲು ಹನ್ನೆರಡು ತಾಸು ತನ್ನ ಹಂಬಲದಲ್ಲಿ ವೇಳೆ ಕಳೆವುತಿದ್ದೆನವ್ವ. ಇರುಳು ಹನ್ನೆರಡು ತಾಸು ತನ್ನನೇ ಎದ್ದೆದ್ದು ನೋಡುತಿದ್ದೆನವ್ವ. ಅಖಿಳೇಶ್ವರನೆಂಬ ನಲ್ಲನ ಹಂಬಲದಿಂದೆ ಸರ್ವಸಂಗವ ತೊರೆದೆನು ನೋಡಿರವ್ವ.

ಶಿವಭಕ್ತಿಭಾವ ಈ ವಚನಗಳಲ್ಲಿ ಹೆಪ್ಪುಗಟ್ಟಿದೆ. ಒಪ್ಪಾಗಿ ಒಡಮೂಡಿವೆ. 'ಸರ್ವಸಂಗವ ತೊರೆದೆನು' ಎಂಬ ಮಾತಿನಲ್ಲಿ ಅನ್ಯವಿಮುಖತ್ವ ಚೆನ್ನಾಗಿ ಚಿತ್ರಿತವಾಗಿದೆ.

"ಪರಿಜ್ಞಾತೇ ಶಿವೇ ಸಾಕ್ಷಾತ್ ಕೋಽಪ್ಯನ್ಯಮಭಿಕಾಂಕ್ಷತಿ ।
ನಿಧಾನೇ ಮಹತಿ ಪ್ರಾಪ್ತೇ ಕಃ ಕಾಚಂ ಯಾಚತೇಽನ್ಯತಃ ॥೩॥
ಶಿವಾನಂದಂ ಸಮಾಸಾದ್ಯ ಕೋಽಪ್ಯನ್ಯಮುಪತಿಷ್ಠತಿ ।
ಗಂಗಾಮೃತಂ ಪರಿತ್ಯಜ್ಯ ಕಃ ಕಾಂಕ್ಷೇನ್ಮೃಗತೃಷ್ಣಿಕಾಂ ॥೪॥

ಶಿವನು ಸರ್ವೋತ್ತಮನು. ಅವನನ್ನೇ ಸಾಕ್ಷಾತ್ಕರಿಸಿಕೊಂಡವನು ಅನ್ಯದೇವತೆಯನ್ನು ಅಪೇಕ್ಷಿಸನು. ಮಹಾನಿಧಿಯನ್ನು ಪಡೆದವನು ಬೇರೊಬ್ಬರಲ್ಲಿ ಹೋಗಿ ಕಾಚನ್ನು ಕೇಳನು.

ಆನಂದಗಳಲ್ಲಿ ಶಿವಾನಂದವೇ ಶ್ರೇಷ್ಠ. ಅದನ್ನು ಅಂಗವಿಸಿಕೊಂಡವನು ಅನ್ಯಸುಖಕ್ಕೆ ಆಶಿಸನು. ಗಂಗಾಮೃತವನ್ನು ಬಿಟ್ಟು ಬಿಸಲ್ಗುದುರೆಯ ಬೆನ್ನು ಹತ್ತುವವನಾರು ?

ಚಂದಿರನ ಮುಡಿದ ಶಿವ ಚನ್ನಿಗ. ಕೆಂಜೆಡೆಯ ತಳೆದ ಶಿವ, ಗಿರಿಜೆ–ಗಂಗೆಯರ ಕೈವಿಡಿದ ಶಿವ ಕಂಗಳಿಗೆ ಮಂಗಳಕರ; ಮಹೇಶ್ವರ. ಮೃತ್ಯುಂಜಯನಾದ ಶಿವ ಮನಕ್ಕೆ ಮನೋಹರ. ಸರ್ವಭೂತಶಂಕರ, ಆತ ಮಹಾದೇವ, ಉಮಾಧವ, ಪರಶಿವ. ಆತ ಕುಬೇರಸಖ. ಆತನಿಗೆ ಪಂಚಮುಖ. ಪತಿ ಎಂದು ಹೇಳಿಸಿಕೊಳ್ಳುವವನು ಅವನೊಬ್ಬ. ಅವನು ಪರಮೇಶ, ವ್ಯೋಮಕೇಶ. ಅವನು ಶ್ರೀಕಂಠ; ಭಕ್ತರ ಕಾಯುವ ಭಂಟ. ಅವನು ನಟರಾಜ ರಾಜ; ಅಮಿತತೇಜ. ಆತನಿರುವುದು ಕೈಲಾಸ; ಆತನೊಲಿಸಿದರೆ ಒದಗುವುದು ಪರಮವಿಲಾಸ. ಆತನೇ ಶರಣರ ಬಂಧು; ಸುಖಸಿಂಧು. ಆತ ನಿಧಿಗೆ ನಿಧಿ; ಅಮೃತಕ್ಕೆ ಅಮೃತ.

ಶಿವತ್ವವು ಜೀವನಕ್ಕೆ ಒಂದು ಪರಮಸಂಪತ್ತು. ಅಶಿವ ಜೀವನ ಜೀವನವಲ್ಲ. ಬಾಳಿನಲ್ಲಿ ಶಿವತ್ವ ಸಂಪಾದನೆಯೆ ಹಿರಿದಾದ ಸಂಪಾದನೆ. ಅದಕ್ಕಿಂತ ಬೇರೆ ಸಂತೋಷವಿಲ್ಲ. ಗಂಗಾಮೃತವಿಲ್ಲ.

ಶಿವ ಮತ್ತು ಶರಣ ಸಂಬಂಧ ಭಿನ್ನವೇ ಅಭಿನ್ನವೇ ? ಎರಡೂ ಅಹುದು. 'ಪರಿಜ್ಞಾತೇ ಶಿವೇ ಸಾಕ್ಷಾತ್' ಎಂಬುದು ಗಮನೀಯವಾಗಿದೆ. ಪೂರ್ಣ ಶಿವತ್ವದ ಜ್ಞಾನವುಂಟಾಗುವಿಕೆ ಅದೊಂದು ಗರಿಷ್ಠ ನಿಧಿ; ಗಂಗಾಮೃತ.

ಶಿವಜ್ಞಾನವಿಲ್ಲದಿರುವಿಕೆ, ಶಿವಜ್ಞಾನ ಅರೆಕೊರೆಯಾಗಿರುವಿಕೆ, ಶಿವಜ್ಞಾನ ಸಂಪೂರ್ಣವಾಗಿರುವಿಕೆ; ಹೀಗೆ ಮೂರು ಬಗೆಯಾಗಿದೆ, ಇವುಗಳಲ್ಲಿ ಪರಿಪೂರ್ಣ ಶಿವಜ್ಞಾನವನ್ನು ಪಡೆಯುವುದೆ ಶರಣಧರ್ಮ. ಅದೇ ಆತನಿಗೆ ದೈವೀಸಂಪತ್ತು; ದಿವ್ಯ ಸಂಪತ್ತು. ಅದರಿಂದುಂಟಾಗುವ ಆನಂದವೇ ಶಿವಾನಂದ; ಅದೇ ಶಿರದ ಅಮೃತ. ಅದನ್ನು ಶಿರದಲ್ಲಿ ಧರಿಸಿದ ಶರಣನೆ ಗಂಗಾಧರ; ಪರಮೇಶ್ವರ, ಶರಣ ಪರಿಪೂರ್ಣವಾಗಿ ಪರಿಪಕ್ವವಾದ ಶಿವಜ್ಞಾನಿ; ಶಿವಾಚಾರಿ.

ಸಾಕ್ಷಾತ್ ಶಿವಜ್ಞಾನವು ಶರಣನಿಗೆ ಒಳ ಹೊರಗೂ ಇರಬೇಕು ವಿಚಾರದಲ್ಲಿರುವಾಗ ಅದು ಒಳಗಿನದು. ಆಚಾರದಲ್ಲಿರುವಾಗ ಹೊರಗಿನದು. ಎರಡೂ ಇರುವುದೇ ಶರಣನ ಪೂರ್ಣ ಜೀವನ. ಶಿವಶರಣ ಜೀವನ. ಪರಮಶಾಂತಿಯುಳ್ಳ ಪ್ರಾಮಾಣಿಕ ಜೀವನ. ಅದು ಸಚ್ಚಿದಾನಂದ ನಿತ್ಯ ಪರಿಪೂರ್ಣವಾದ ಶಿವತ್ವದ ನೆಲೆ ; ಅಲ್ಲಿರುತ್ತದೆ ಆ ಶಿವಕಳೆ.

ಶರಣನಿಗೆ ಶೈವೀಭಾವ ಸಹಜವಾದುದು ; ಸ್ವತಂತ್ರವಾದುದು ಅದಕ್ಕಾಗಿ ಆತನು ತನ್ನನ್ನು ಸರ್ವಾತ್ಮಭಾವದಿಂದ ಸಮರ್ಪಣ ಮಾಡಿಕೊಂಡಿರುತ್ತಾನೆ. ಶಿವತ್ವ ಸರ್ವಕ್ಕೂ ಶ್ರೇಷ್ಠವೆಂದು ಭಾವಿಸಿರುತ್ತಾನೆ ; ಶಿವತ್ವದ ಸುಖವನ್ನು ಅನುಭವಿಸಿರುತ್ತಾನೆ. ನೆರೆಹೊರೆಯವರನ್ನು ಅನುಭವಿಸಹಚ್ಚುತ್ತಾನೆ. ಆತನ ಆ ಶಿವಾನುಭವದ ಪ್ರಭಾವ ಪ್ರಸರಿಸಿ ಪರಿಣಾಮವನ್ನುಂಟುಮಾಡುತ್ತದೆ ; ಪ್ರಭೆಯನ್ನು ಬೀರುತ್ತದೆ. ಶರಣನು ತನ್ನ ಶೈವೀ ವರ್ಚಸ್ಸಿನಿಂದ ಉಳಿದವರನ್ನು ಹೊಲಬಿಗೆ ತರಬಲ್ಲ. ಹಲವಾರು ಜನರಿಗೆ ತನ್ನ ಶಿವಾಮೃತವನ್ನು ಹಂಚಬಲ್ಲ.

ಶಿವಾನಂದ ಅದೊಂದು ಬತ್ತದ ಪ್ರವಾಹ. ಅದೊಂದು ರಸಪೂರ್ಣವಾಹಿನಿ. ಅದೊಂದು ಪವಿತ್ರ ಪ್ರೇಮಗಂಗೆ. ಅದು ಸ್ವಾರ್ಥ ಪ್ರೇರಿತವಲ್ಲ.

ಮೃಗಮರೀಚಿಕೆಯಂತೆ ತೋರುವುದಲ್ಲ ; ಅಡಗುವುದಲ್ಲ. ನಿರಾಶಾದಾಯಕವಲ್ಲ. ಅಲ್ಪವೂ ಅಲ್ಲ. ಸತ್‌ಚಿತ್‌ಗಳಿಂದ ಕೂಡಿದ ಆನಂದ. ಆದ್ದರಿಂದ ಅದು ನಿತ್ಯ; ಅದು ಪರಿಪೂರ್ಣ. ಅದು ಅಖಂಡವೂ ಅಹುದು. ಅಂತಹ ಶಿವಾನಂದವನ್ನು ಅಳವಡಿಸಿಕೊಂಡವನೆ ಶಿವಶರಣ. ಶಿವನನ್ನು ಸರ್ವಾತ್ಮಭಾವದಿಂದ ಶರಣು ಹೊಕ್ಕವನೆ ಶಿವಶರಣ.

ಶಿವಶಕ್ತಿ ಅದೊಂದು ಮಂಗಳಾಸಕ್ತಿ. ಶರಣ ಆ ಮಂಗಳವನ್ನು ತನ್ನೊಳಗೆ ತುಂಬಿಕೊಳ್ಳುವ ಶಕ್ತಿ. ಆ ಮಂಗಳವನ್ನು ತುಂಬುವ ಚೇತನ ಶಿವ. ಅದು ಮಂಗಳಾತ್ಮಕ ಚೈತನ್ಯರೂಪ ಐಶ್ವರ್ಯ. ಸರಿಮಿಗಿಲಿಲ್ಲದ ಐಶ್ವರ್ಯ. ಅದುವೇ ಬಾಳಿನ ಭಾಗ್ಯ. ಅದರಿಂದ ಸೌಖ್ಯ. ಅದು ಅನಿರ್ವಚನೀಯ ಸೌಖ್ಯ ; ಅಸದೃಶ್ಯ ಸೌಖ್ಯ. ಅದು ತ್ಯಾಗಾಂಗದಲ್ಲಿ ಸತ್ತಾಗಿ, ಭೋಗಾಂಗದಲ್ಲಿ ಚಿತ್ತಾಗಿ, ಯೋಗಾಂಗದಲ್ಲಿ ಆನಂದವಾಗಿ ನಿತ್ಯವಾಗುತ್ತದೆ. ಸರ್ವಾಂಗದಲ್ಲಿ ಪರಿಪೂರ್ಣವಾಗಿರುತ್ತದೆ. ಅದು ಮನಕ್ಕೆ ಘನವಾಗಿ, ಪ್ರಾಣಕ್ಕೆ ಪ್ರಣವವಾಗಿ, ಭಾವಕ್ಕೆ ಬೆಳಕಾಗಿ, ಚೇತನಕ್ಕೆ ಚೇತನವಾಗಿ ಇರುತ್ತದೆ. ಆ ಶಿವಾನಂದವೊಂದಿದ್ದರೆ ಶರಣನ ಬಾಳೆಲ್ಲ ಸವಿಯಾಗಿರುತ್ತದೆ.

"ನಿಚ್ಚ ನಿಚ್ಚ ಶರಣಂಗೆ ಹಬ್ಬ ಹೇಮಗಿರಿ ತಾನೆ ಕಾಣಿರೊ !
ನಿಚ್ಚ ನಿಚ್ಚ ಶರಣಂಗೆ ಶುದ್ಧ ಶಿವರಾತ್ರಿ ತಾನೆ ಕಾಣಿರೊ !
ನಿಚ್ಚ ನಿಚ್ಚ ಶರಣಂಗೆ ಯಾತ್ರೆ ಉತ್ಸವ ತಾನೆ ಕಾಣಿರೊ !
ನಿಚ್ಚ ನಿಚ್ಚ ಶರಣಂಗೆ ಪರಮಾನಂದದೋಕುಳಿ ತಾನೆ ಕಾಣಿರೊ !
ನಿಚ್ಚ ನಿಚ್ಚ ಶರಣಂಗೆ ಅಖಂಡೇಶ್ವರನ ಒಸಗೆ ವೈಭವಂಗಳು ತಾನೆ ಕಾಣಿರೊ !

ಶಿವ ಸಾಕ್ಷಾತ್ಕಾರದಿಂದ ಹೃದಯ ಕಮಲ ಅರಳುತ್ತವೆ. ಬಾಳು ಬದುಕು ಶ್ರೀಮಂತವಾಗುತ್ತದೆ. ಅಂತರಂಗದಲ್ಲಿ ಪರಿಣಾಮಾಮೃತ ಉಕ್ಕುತ್ತವೆ. ವೈಖರಿಯಲ್ಲಿ ಅನುಭವ ಕ್ಷೀರ ಸುರಿಯುತ್ತದೆ. ಸ್ವಾನುಭವ ಸಂಪತ್ತಿನ ಸಂಪಾದನೆ ಹೆಚ್ಚುತ್ತದೆ. ಮೇರೆಯಿಲ್ಲದ ಹರುಷ ಹಗಲಿರುಳು ಹೆರೆಹಿಂಗದಂತಿರುತ್ತವೆ.

ಎಲ್ಲ ಯೋಗಗಳಲ್ಲಿ ಶಿವಯೋಗವೇ ಪೂರ್ಣಯೋಗ. ಉಳಿದೆಲ್ಲ ಯೋಗಗಳು ಶಿವಯೋಗದಲ್ಲಿರುತ್ತವೆ. ಶಿವನ ಪರಿಜ್ಞಾನವೆಂದರೆ ಶಿವಯೋಗ. ಇದರಿಂದ ನಿತ್ಯಾನಂದ ಪ್ರಾಪ್ತಿ. ನಿತ್ಯಾನಂದವೇ ಶಿವಾನಂದ.

ಅಂಗ-ಲಿಂಗಗಳೆರಡರ ಸಂಯೋಗ ಅಥವಾ ಸಮರಸವೇ ಶಿವಯೋಗ ಅಥವಾ ಶಿವನ ಸಾಕ್ಷಾತ್ಪರಿಜ್ಞಾನ. ಅಂಗನೇ ಶರಣ, ಲಿಂಗವೇ ಶಿವ. ಶಿವನ ಸಮರಸಕ್ಕೆ ಸನ್ನದ್ಧನಾದವನೆ ಶರಣ. ಭಕ್ತಿಯೋಗವೇ ಶಿವ-ಶರಣರಿಬ್ಬರ ಸಮರಸ ಸೂತ್ರ ಅದರಲ್ಲಿಯೂ ಆನಂದಭಕ್ತಿ ಅತ್ಯಂತ ಸನ್ನಿಹಿತ ಸಮರಸ ಸೂತ್ರ ಪೂರ್ಣತೆಯೆ ಇದರ ಸಿದ್ಧಿ. ಶಿವಸಾಕ್ಷಾತ್ಕಾರ; ಶಿವಾನಂಭಾವದಾವಿಷ್ಕಾರ ಇವೆರಡು ಜೀವನಾವಶ್ಯಕಗಳು ಹದುಳ ಬಾಳಿನ ಸಿರಿ-ಗುರಿಗಳು.

ಶಿವಯೋಗ ಒಂದು ಮತಪ್ರಕ್ರಿಯೆಯೆಂದು ಹಲವರು ತಿಳಿದಿದ್ದಾರೆ. ವಾಸ್ತವವಾಗಿ ಅದು ಹಾಗಿಲ್ಲ, ಅದು ಎಲ್ಲರ ಸ್ವತ್ತು. ಮಂಗಳ ಪ್ರಾಪ್ತಿ ಆನಂದ ಪ್ರಾಪ್ತಿ ಯಾರಿಗೆ ಬೇಕಿಲ್ಲ ? ಎಲ್ಲರಿಗೂ ಅದು ಅವಶ್ಯಕ. ಸುಖ ಬೇಡೆನ್ನುವವರಾರು ? ಆದರೆ ಶಿವಸುಖವನ್ನು ಬಯಸುವವರು ಅದೆಷ್ಟು ಜನ ? ಶರಣನಾಗಿಯೇ ಶಿವಾನಂದವನ್ನು ಸಾಧಿಸಬೇಕು. ಶರಣರಲ್ಲದವರಿಗೆ ಅದು ಸಾಧ್ಯವಲ್ಲ.

"ಸಂಸಾರ ತಿಮಿರಚ್ಛೇದೇ ವಿನಾ ಶಂಕರಭಾಸ್ಕರಂ ।
ಪ್ರಭವಂತಿ ಕಥಂ ದೇವಾಃ ಖದ್ಯೋತಾ ಇವ ದೇಹಿನಾಂ ॥೫॥
ಸಂಸಾರಾರ್ತಃ ಶಿವಂ ಯಾಯಾತ್ ಬ್ರಹ್ಮಾದ್ಯೈಃ ಕಿಂ ಫಲಂ ಸಂರ್ರೈಃ ।
ಚಕೋರ ಸ್ತೃಷಿತಂ ಪಶ್ಯೇಚ್ಚಂದ್ರಂ ಕಿಂ ತಾರಕಾ ಅಪಿ ॥೬॥"

ಕಾಳರಾತ್ರಿಯನ್ನು ಕಳೆಯುವವನು ಸೂರ್ಯನೊಬ್ಬನೆ ; ಮಿಂಚು ಹುಳಗಳು ಕಳೆಯವು ಅಂತೆಯೆ ಸಂಸಾರತಿಮಿರವನ್ನು ಶಿವನಲ್ಲದೆ ಬೇರೆ ದೇವತೆಗಳು ತೊಲಗಿಸರು.

ಕಾರಣ ಸಂಸಾರದಲ್ಲಿ ನೊಂದವನು ಶಿವನನ್ನು ಶರಣಾಗಬೇಕು. ಬ್ರಹ್ಮಾದಿಗಳ ಬೆನ್ನುಬಿದ್ದರೆ ಫಲವಿಲ್ಲ. ನೀರಡಿಸಿದ ಚಕೋರ ಹಕ್ಕಿ ಚಂದ್ರನನ್ನು ನಿರೀಕ್ಷಿಸಬೇಕಲ್ಲದೆ ಚುಕ್ಕೆಗಳನ್ನು ನಿರೀಕ್ಷಿಸಬಾರದು : ನಿರೀಕ್ಷಿಸಿದರೆ ನೀರಡಿಕೆ ತೀರದು

ಹುಟ್ಟು ಸಾವೆಂಬುದೊಂದು ಸಂಸಾರ. ಇವು ಬಾಳನ್ನು ಬಳಸಿ ನಿಂತಿವೆ ಕತ್ತಲಿನಂತೆ ಮುತ್ತಿ ನಿಂತಿವೆ. ಇವನ್ನು ಕಳೆಯಲು ಈ ಸೂರ್ಯನಿಗೆ ಸಾಧ್ಯವಿಲ್ಲ ಶಂಕರನೆಂಬ ಚಿತ್ಸೂರ್ಯನೇ ಆಗಬೇಕು. ಹುಟ್ಟು ಸಾವಿನ ಗುಟ್ಟು ತಿಳಿಯ

ಹಲುಬು ಹುಯ್ಯಲು ಹೆಚ್ಚಿವೆ. ತನಗೆ ಹುಟ್ಟು ಸಾವುಗಳಿಲ್ಲೆಂದು ತಿಳಿಯುವ ಹೊರತು ಮರುಳು ಮರುಕುಗಳು ತೊಲಗವು. ಮರಣ ಮಹಾನವಮಿ ಆಗ ಬೇಕಾದರೆ ಆ ಮಹಾದೇವನ ಮಹಾಜ್ಞಾನ ಬೇಕು. ಮರಣವಿಲ್ಲದ ಆ ಮಹಾದೇವನು ತಾನೇ ಎಂದು ತಿಳಿಯಬೇಕು. ಮರಣ ಭಯವನ್ನು ನೀಗಿದರೆ ತಾನೇ ಮಹಾದೇವ ; ತಾನೇ ಶಂಕರ.

"ಸಕಲ ಸಂಸಾರವ ಹರೆ ಹಿಂಗಿದಲ್ಲಿ
ನಿಜ ವಸ್ತುವಿನ ಕುರುಹು ಕಾಣಬಂದಿತ್ತು ;—
ತ್ರಿವಿಧಮಲವ ನೇತಿಗಳೆದು ! ಮತ್ತಾ ಅರಿವ ಮರೆದು
ಮಲತ್ರಯವನೊಡಗೂಡಿದಲ್ಲಿ ಬಂಧನವೆಂಬುದಕ್ಕೆ ಸೂಚನೆ
ನಿಃಕಳಂಕ ಮಲ್ಲಿಕಾರ್ಜುನನ ಲಿಂಗವನರಿವ ಬೆಡಗಿನಂಗ"

ತನ್ನ ಮರೆದುದೆ ಸಂಸಾರ ; ತನ್ನ ಅರಿದುದೆ ಶಿವಸುಖಸಾರ. ಪ್ರಾಪಂಚಿಕ ಸಂಸಾರ ಹಲವು ಬಗೆಯಾಗಿದೆ ; ಹಲವು ಬಣ್ಣವುಳ್ಳದಾಗಿದೆ. ಇದಕ್ಕೆ ಮೂಲ ಮರೆವು. ಇದೇ ಸಂಸಾರದ ತಿಮಿರ. ಇದನ್ನು ಕಳೆದರೆ ಶಿವನನ್ನು ಅರಿತರೆ ಶರಣ. ಆತನಿಗೆ ನಿಜವಸ್ತುವಿನ ಸಾಕ್ಷಾತ್ಕಾರ. ಆ ನಿಜವಸ್ತು ತ್ರಿಪುರಹರ, ತ್ರಿಮಲಹರ. ಆನಂದಾಮೃತಧರ. ಆತನೊಲುಮೆಯಿಂದ ತ್ರಿವಿಧ ಮಲಗಳು ತ್ರಿವಿಧ ತನುಗಳು ತೊಲಗುತ್ತವೆ. ಬಂಧನ ಬಿಟ್ಟೋಡುತ್ತದೆ. ಹುಲು ಬಯಕೆ ಎಂಬ ನೀರಡಿಕೆ ನಿರಸನವಾಗುತ್ತದೆ. ಚಂದ್ರಧರನಾದ ಶಿವನ ಆಶ್ರಯ ಅಂತಹದು ಆತನು ದಿವ್ಯ ತೇಜೋಮೂರ್ತಿ. ದಿವ್ಯಾನಂದ ರಸಸ್ವರೂಪ. ಆವನ ಸಾಕ್ಷಾತ್ಕಾರದಿಂದ ಸಂಸಾರದಲ್ಲಿ ತೊಳಲಿ ಬಳಲುವುದು ತಪ್ಪುತ್ತದೆ. ಸತ್ಯದ ಅರಿವು ಅಳವಡುತ್ತದೆ. ಶಿವಾನಂದ ಸೂರ್ಯ ಮೂಡಿ, ಶಿವಜ್ಞಾನ ಕಣ್ಣು ತೆರೆದ ಬಳಿಕ ತಿಮಿರವೆಲ್ಲಿ ? ತೊಳಲೆಲ್ಲಿ ? ಬತ್ತದ ಶಿವಭಕ್ತಿ ಸುಧೆ ಹೃದಯ ಕುಂಡದಿಂದ ಚಿಮ್ಮಿದ ಬಳಿಕ ನೀರಡಿಕೆಯೆಂದರೇನು ? ನೋವು ಸಾವುಗಳೆಂದರೇನು ? "ಸೂರ್ಯನ ಬೆಳಗಿಂಗೆ ಕೊಳ್ಳಿಯ ಬೆಳಗ ಹಿಡಿಯಲುಂಟೆ ಮರುಳೆ ? ತನ್ನ ಮುಖವ ತಾ ಬಲ್ಲವಂಗೆ ಕನ್ನಡಿಯ ಹಿಡಿದು ನೋಡಲುಂಟೇ ಹೇಳಾ ? ತನ್ನ ಸುಳುಹಿನ ಸೂಕ್ಷ್ಮವ ತಾನರಿದ ಸ್ವಯಂ ಜ್ಞಾನಿಗೆ ಇನ್ನಾವ ಆಗಮ ಬೋಧೆಯೇಕೆ ಹೇಳಾ...... ?

ಎಲೆ ಶಿವನೆ, ನೀ ಸಾಕ್ಷಿಯಾಗಿ ಅಂಗಲಿಂಗಸಂಬಂಧಿಗಳಿಗೆ
ಪರಮ ವೀರಶೈವಾಗಮವೇ ಪ್ರಮಾಣು,
ಪುರಾತನರ ಮಹಾ ವಾಕ್ಯವೇ ಪ್ರಮಾಣು.
ಉಳಿದುವೆಲ್ಲಾ ಹುಸಿ ಕಾಣಾ ಮಹಾಲಿಂಗ ಗುರು ಶಿವ
ಸಿದ್ಧೇಶ್ವರ ಪ್ರಭುವೇ."

ಆಧ್ಯಾತ್ಮಿಕ ಪ್ರಪಂಚದಲ್ಲಿ ಸಂಸಾರ ತಿಮಿರ, ಶಂಕರ ಭಾಸ್ಕರ. ಈ ಸಾದೃಶ್ಯದ ಸೌಂದರ್ಯವನ್ನು, ಇದರಲ್ಲಿರುವ ಅನುಭವ ಮಾಧುರ್ಯವನ್ನು ಶೈಲಿಯ ಸೊಬಗನ್ನು ಮನಗಾಣಬೇಕು. ಜತೆಗೆ ಎರಡರ ಸಂಬಂಧವನ್ನೂ ಮೆಲುಕುಹಾಕಬೇಕು. ಸಂಸಾರ—ಶಂಕರ, ತಿಮಿರ—ಬಾಸ್ಕರ ಇವುಗಳಲ್ಲಿ ಒಂದಿದ್ದು ಒಂದಿಲ್ಲದಿದ್ದರೆ ಒದಗುವ ನಿಷ್ಪ್ರಯೋಜನತೆಯನ್ನು ಕಲ್ಪಿಸಿಕೊಳ್ಳಬೇಕು. ಸಂಸಾರವಿದ್ದರೆ ಶಂಕರನಿಗೆ ತಿಮಿರವಿದ್ದರೆ ಭಾಸ್ಕರನಿಗೆ ಬೆಲೆ. ಹಸಿವಿದ್ದರೆ ಊಟಕ್ಕೆ ಬೆಲೆ; ನೋವಿದ್ದರೆ ನವಿಲಿಗೆ ಬೆಲೆ. ಇರುಳಿರುವುದರಿಂದ ಹಗಲನ್ನು ಹಾರಯಿಸುತ್ತೇವೆ. ಚಂದ್ರನಿಂದ ಚುಕ್ಕಿಗಳಿಂದ ಕಾಳಿರುಳು ಕಳೆಯದು. ಭಾಸ್ಕರನೇ ಬಾನೊಳಗೆ ಮೂಡಿ ಬರಬೇಕು, ಬಂದು ಬೆಳಗಬೇಕು. ಸಂಸಾರ ಪ್ರಪಂಚ. ಶಂಕರ ಪರಮಾರ್ಥ. ಇವೆರಡು ಇರುಳು-ಹಗಲುಗಳಂತಿವೆ. ಶಂಕರನು ಸಂಸಾರವನ್ನು ಛೇದಿಸಬಹುದು. ಆದರೆ ಸಂಸಾರ ಸಂಪೂರ್ಣ ನಾಶವಾಗುವುದಿಲ್ಲ. ಹಗಲಿನಲ್ಲಿ ಇರುಳು ಕಾಣದಿರಬಹುದು ; ಇರುಳೇ ಇಲ್ಲದಂತಾಗದು. ಶಂಕರನ ಕೃಪೆಯಾದಾಗ ಅಂದರೆ ಶಿವಪ್ರಕಾಶವುಂಟಾದಾಗ ಸಂಸಾರ ಇದ್ದೂ ಇಲ್ಲದಂತಿರುತ್ತದೆ. ಇದರಿಂದಾಗಿ ಸಂಸಾರವೂ ಸತ್ಯ ಅನಾದಿ ಎಂದು ಹೇಳಿದಂತಾಗುತ್ತದೆ.

ಸಂಸಾರವೆಂದರೆ ಇಹಲೋಕ, ಇಹಲೋಕದ ವಿಚಾರ, ಕುಟುಂಬ, ಹುಟ್ಟು ಸಾವುಗಳ ಚಕ್ರ, ಆದ್ಯಂತ- ಮುಂತಾದ ಅರ್ಥಗಳಿವೆ. ಇವನ್ನು ಮರೆ ಮಾಡುವ ಶಕ್ತಿಯೇ ಅಥವಾ ಚೇತನವೇ ಶಂಕರ. ಏಕೆಂದರೆ, ಇವುಗಳಿಂದ ದುಃಖ, ಶಂ-ಕರನಿಂದ ಸುಖ. ಮತ್ತು ಸಂಸಾರವೆಂಬುದೊಂದು ಮರೆವು; ಅರಿವು — ಅರ್ಥಕ್ಕೆ ತಿಮಿರ-ಭಾಸ್ಕರ ಶಬ್ದಗಳು [illegible]

ಸಂಸಾರದಿಂದ ನೊಂದವನು ಶಂಕರನನ್ನೇ ಹೊಂದಬೇಕು. ಹಸಿವಿನಿಂ
ಉಮ್ಮಳಗೊಂಡವನು ಊಟವನ್ನೇ ಮಾಡಬೇಕು. ಹಸಿವನ್ನು ಹಿಂಗಿಸುವ ಶ
ಊಟಕ್ಕಿದೆ; ರಸಕ್ಕಿದೆ. ಉಳಿದ ರೂಪ ಸ್ಪರ್ಶ ಶಬ್ದ ಗಂಧಗಳಿಗಿಲ್ಲೆಂದು ಹೇಳ
ವುದು ಸಹಜ. ಸಂಸಾರಾರ್ತನಿಗೂ ಶಂಕರನಿಗೂ ಪದ್ಮ-ಪ್ರಭಾಕರರ ಚಕೋರ
ಚಂದ್ರಗಳ ಸಂಬಂಧ; ಭ್ರಮರ-ಪರಿಮಳಗಳ ಸಂಬಂಧ, ಚಕೋರದ ಬಾಯಾ
ಯನ್ನು ಭಾಸ್ಕರನು ತೀರಿಸನು. ಪದ್ಮದ ವಿಕಾಸವನ್ನು ಚಂದ್ರನು ನೆರವೇರಿಸನು
ಎಂದು ಹೇಳಿದರೆ ಅವಾಸ್ತವವೆಂದು ಆದಾರೂ ಹೇಳರು ರವಿ ಶಶಿಗಳ ಮು
ತಾರೆಗಳ ಬೆಳಗೇನು, ಮಾತೇನು ? ಹಾಗು ರವಿಯು ಮುಂದೆ ಶಶಿಯೇನು ?
ಬ್ರಹ್ಮನಾದ ಶಂಕರನ ಮುಂದೆ ಬ್ರಹ್ಮಾದಿದೇವತೆಗಳ ಬಲುಮೆಯೇನು
ನಲುಮೆಯೇನು ?

“ಶಿವ ಏವ ಸಮಸ್ತಾನಾಂ ಶರಣ್ಯಃ ಶರಣಾರ್ಥಿನಾಂ ।
ಸಂಸಾರರೋಗದಷ್ಟಾನಾಂ ಸರ್ವಜ್ಞಃ ಸರ್ವದೋಷಹಾ ॥೭

ಸಂಸಾರ ಒಂದು ರೋಗ. ಇದನ್ನು ಕಳೆವ ವೈದ್ಯ ಶಿವ. ಶರಣಾ
ರಿಗೆ ಶರಣ್ಯ ಶಿವ. ಸರ್ವಜ್ಞ ಶಿವ. ಸರ್ವದೋಷ ನಿವಾರಕ ಶಿವ.
ನುಳಿದು ಹಿಂಗದು ಈ ಭವ.

ಬೇನೆ ಎರಡುಂಟು. ಒಂದು ದೇಹಕ್ಕೆ ಬರುವುದು ಇನ್ನೊಂದು
ನಿಗೆ ಬರುವುದು. ದೇಹಕ್ಕೆ ಅಂಟಿಬರುವ ರೋಗ ಅನೇಕ. ಆತ್ಮನಿಗೆ
ಬರುವ ರೋಗ. ಏಕ. ಅದೇ ಭವರೋಗ. ದೇಹರೋಗಗಳನ್ನು
ವೈದ್ಯರು ಅನೇಕರು. ಭವರೋಗವನ್ನು ಕಳೆವ ವೈದ್ಯ ಆ ಶಿವನೊಬ್ಬ.
ಸರ್ವಜ್ಞ ; ಸರ್ವದೋಷಗಳನ್ನು ದೂರುಮಾಡುವಾತ.

“ಗಂಗೆಯೊಡನಾಡಿದ ಗುಟ್ಟಬೆಟ್ಟಂಗಳು ಕೆಟ್ಟಕೇಡ ನೋಡಯ್ಯ.
ಅಗ್ನಿಯೊಡನಾಡಿದ ಕಾಷ್ಠಂಗಳು ಕೆಟ್ಟಕೇಡ ನೋಡಯ್ಯ.
ಜ್ಯೋತಿಯೊಡನಾಡಿದ ಕತ್ತಲೆ ಕೆಟ್ಟಕೇಡ ನೋಡಯ್ಯ.
ಜ್ಞಾನಿಯೊಡನಾಡಿದ ಅಜ್ಞಾನ ಕೆಟ್ಟಕೇಡ ನೋಡಯ್ಯ.
[illegible] ಪರಶಿವಮೂರ್ತಿ ಹರನೆ,
ನಿಮ್ಮನೊಡನಾಡಿ ಎನ್ನ ಭವಾದಿಭವಂಗಳು
ಕೆಟ್ಟ ಕೇಡ ನೋಡಾ ಚನ್ನಮಲ್ಲಿಕಾರ್ಜುನಾ !”

"...ಬಲ್ಲಹರ ಬಲ್ಲಹೆ-ಭವವಿಲ್ಲದಿಹ ನೀನೆ
ನಿಃಕಳಂಕ ಮಲ್ಲಕಾರ್ಜುನಾ"

"...ಜ್ಞಾನಿ ತಾನಾದ ಬಳಿಕ ಮಾನವರ ಮರೆಯ ಹೊಗದೆ
ತಾನು ತಾನಾಗಬಲ್ಲರೆ ಆತಂಗೆ ಭವದ ಭ್ರಮೆ ಇಲ್ಲವೆಂದೆ
ನಿಃಕಳಂಕ ಮಲ್ಲಿಕಾರ್ಜುನಾ"

ಶರಣು ಬಂದವನು ಶರಣ. ಅಂತಹ ಶರಣನನ್ನು ಸಂರಕ್ಷಿಸುವ ಶಿವ ಶರಣ್ಯ, ಸರ್ವಜ್ಞ; ಸರ್ವದೋಷ ಪರಿಹಾರಕ. ಆದ್ದರಿಂದ ಶರಣನಿಗೆ ಶಿವ ಪದವೇ ಪದ; ಶಿವನ ಆಶ್ರಯವೇ ಆಶ್ರಯ. ಶರಣನು ಶಿವನಲ್ಲಿ ಶರಣು ಹೋಗಿ ಶುದ್ಧನಾಗುತ್ತಾನೆ; ಪ್ರಬುದ್ಧನಾಗುತ್ತಾನೆ. ಪರುಷ ಸೋಂಕಿದ ಪಾಷಾಣದಂತಾಗುತ್ತಾನೆ. ಆತನ ತನು, ಮನಗಳ ಅವಗುಣಗಳು ಹಿಂಗುತ್ತವೆ. ಮಲಯತ್ರಗಳು ಮರೆಯಾಗುತ್ತವೆ. ಪಾಪಗಳು ಪರಿಹಾರವಾಗುತ್ತವೆ. ಸಂಸಾರ ರೋಗ ವಾಸಿಯಾಗುತ್ತದೆ.

ಆಶಾಪಾಶಕ್ಕೆ ಸಿಕ್ಕರೆ, ಮಾಯಾಮೋಹಕ್ಕೆ ಒಳಗಾದರೆ ದೋಷ ದುರ್ಗುಣಗಳು ಮುತ್ತಿಕೊಳ್ಳುತ್ತವೆ. ಅಜ್ಞಾನ ಅನಾಚಾರಗಳು ಆವರಿಸಿಕೊಳ್ಳುತ್ತವೆ. ಭವರೋಗ ಬೆನ್ನು ಬೀಳುತ್ತದೆ. ಅಸಹಾಯಕನಾಗುತ್ತಾನೆ; ಅಸಮರ್ಥನೆನಿಸುತ್ತಾನೆ. ಅಗ ಆತನಿಗೆ ಶಿವನೊಬ್ಬನೇ ಶರಣ್ಯ. ಆತ ಸರ್ವಜ್ಞನಾದ ಕಾರಣ ಸರ್ವಸಮರ್ಥನಾದ ಕಾರಣ ಶಿವನು ಶರಣಾಗತರನ್ನು ಸಂರಕ್ಷಿಸಬಲ್ಲ.

ರಕ್ಷಿಸಲು ಅರ್ಥವೇ ಮೂಲವಲ್ಲ; ಅದೂ ಒಂದು ಸಹಾಯಕ ಮಾತ್ರ. ಅದರಲ್ಲಿಯೂ ಶೀಲವೇ ಸಂಪತ್ತಾಗಿರುವ ಶರಣಸಂರಕ್ಷಣೆಗೆ ಲಕ್ಷ್ಮೀಪತಿಯ ಅವಶ್ಯಕತೆಯಿರುವುದಿಲ್ಲ. ಸರ್ವಜ್ಞನಾದ ಸರ್ವಮಂಗಳೆಯರಸನಾದ ಶಿವನೇ ಬೇಕು. ಆ ಶಿವನನ್ನು ಶರಣುಹೊಕ್ಕವನೇ ಶರಣ. ಎಲ್ಲ ತತ್ತ್ವಗಳನ್ನು ತನ್ನೊಳಗೆ ಅಳವಡಿಸಿಕೊಂಡ ಶರಣನಿಗೆ ಶಿವತತ್ತ್ವದ ಹೊರತು ಬೇರೊಂದರ ಅವಶ್ಯಕತೆಯಿರುವುದಿಲ್ಲ. ಮೂವತ್ತಾರು ತತ್ತ್ವಗಳಲ್ಲಿ ಮೂವತ್ತಯ್ದು ತತ್ತ್ವಗಳನ್ನು ವಶಪಡಿಸಿಕೊಂಡವನೇ ಶರಣ. ಭೌತಿಕ ಧನಕ್ಕಿಂತ ಆತ್ಮಿಕ ಜ್ಞಾನಧನ ಶರಣನಿಗೆ ಮುಖ್ಯ.

ಮೂವತ್ತಾರು ತತ್ತ್ವಗಳನ್ನು ಮೂರು ಗುಂಪು ಮಾಡುವುದುಂಟು. ಆತ್ಮ ತತ್ತ್ವ, ವಿದ್ಯಾತತ್ತ್ವ, ಶಿವತತ್ತ್ವ–ಎಂದು! ಆತ್ಮ ತತ್ತ್ವಗಳು ಪಂಚ ಭೂತಗಳು, ಪಂಚಜ್ಞಾನೇಂದ್ರಿಯಗಳು, ಪಂಚ ತನ್ಮಾತ್ರಗಳು, ಪಂಚ ಕರ್ಮೇಂದ್ರಿಯಗಳು, ಅಂತಃಕರಣಗಳು ಮತ್ತು ಆತ್ಮ ಈ ಇಪ್ಪತ್ತಯ್ದು. ಪಂಚಸಾದಾಖ್ಯಗಳು, ಪಂಚಕಲೆಗಳು ಈ ಹತ್ತು ವಿದ್ಯಾತತ್ತ್ವಗಳು ಇವೆಲ್ಲವನ್ನೂ ಶರಣನು ಅಳವಡಿಸಿಕೊಂಡಿರುತ್ತಾನೆ. ಉಳಿದುದೊಂದೇ ಶಿವತತ್ತ್ವವು ಅದಕ್ಕಾಗಿ ಅದರಲ್ಲಿ ಶರಣಾರ್ಥಿಯಾಗಿರುತ್ತಾನೆ.

ಆತ್ಮತತ್ತ್ವವೇ ತ್ವಂ ಪದ ವಾಚ್ಯ. ಶಿವತತ್ತ್ವವೆ ತತ್ಪದ ವಾಚ್ಯ. ವಿದ್ಯಾ ತತ್ತ್ವವೇ ಅಸಿ ಪದ ವಾಚ್ಯ. ಉ-ಕಾರಾತ್ಮಕವೆ ತ್ವಂಪದವಾಚ್ಯ ಆತ್ಮತತ್ತ್ವ. ಅಕಾರಾತ್ಮಕವೆ ತತ್ಪದವಾಚ್ಯ ಶಿವತತ್ತ್ವ. ಮಕರಾತ್ಮಕವೆ ಅಸಿಪದವಾಚ್ಯ ವಿದ್ಯಾತತ್ತ್ವ. ವಿದ್ಯಾ ತತ್ತ್ವವನ್ನು ಅಳವಡಿಸಿಕೊಂಡ ಆತ ತತ್ತ್ವವೇ ಶರಣ.

ಹತ್ತು ತತ್ತ್ವವುಳ್ಳ ವಿದ್ಯಾ ತತ್ತ್ವವೇ ತುರೀಯ. ಆ ತುರೀಯ ವಿದ್ಯಾ ತತ್ತ್ವವನ್ನು ಮೀರಿ ಮುಂದುವರಿದ ಶರಣನೇ ತುರೀಯಾತೀತ.

ಆತ್ಮತತ್ತ್ವ, ವಿದ್ಯಾತತ್ತ್ವಗಳಿಗೆಲ್ಲ ಆಶ್ರಯವಾದುದು ಶಿವತತ್ತ್ವ ಆದರಿಂದಾಗಿ ಶಿವತತ್ತ್ವ ಸರ್ವಜ್ಞ, ಸರ್ವದೋಷನಿವಾರಕ ಸಮರ್ಥ.

ಆತ್ಮತತ್ತ್ವವೆ ಅಂಗ, ಶಿವತತ್ತ್ವವೆ ಲಿಂಗ; ವಿದ್ಯಾತತ್ತ್ವವೆ ಸಂಗ ಸಮರಸ. ಇವನ್ನೇ ಕ್ರಮವಾಗಿ ದ್ವೈತ ಅದ್ವೈತ ಯೋಗವೆಂದು ಹೇಳುವುದುಂಟು; ಅಥವಾ ಶರಣ–ಶಿವ–ಯೋಗವೆಂದು ಹೇಳುವುದುಂಟು; ಅಂಗ–ಲಿಂಗ ಸಮರಸವೆಂದು ಹೇಳುವುದುಂಟು

ಶಿವತತ್ತ್ವವೆ ಪರಂಜ್ಯೋತಿ. ಆತ್ಮ ತತ್ತ್ವವೆ ಆ ಜ್ಯೋತಿಯ ಕಿರಣ. ವಿದ್ಯಾತತ್ತ್ವವೇ ಆ ಜ್ಯೋತಿಯ ಪ್ರಕಾಶ. ಪ್ರಕಾಶವುಳ್ಳ ಕಿರಣ ತನ್ನ ಮೂಲ ಜ್ಯೋತಿಯಲ್ಲಿ ಸಮರಸವಾಗುವುದೆ ಸಹಜ. ಅಂದರೆ ಶರಣಾತ್ಮನು ಶಿವನಲ್ಲಿ ಶರಣಾಗುವುದೆ ಸಹಜ ಶುದ್ಧ ವಿದ್ಯಾತತ್ತ್ವವನ್ನಳವಡಿಸಿಕೊಂಡ ಶರಣನು ಸರ್ವಜ್ಞನಾದ ಶಿವನಲ್ಲಿ ಶರಣಾರ್ಥಿ ಸಲ್ಲಿಸುವುದೆ ನೈಜ; ಸರ್ವಜ್ಞನಾಗ ಬಯಸುವುದು ಕ್ರಮ ಪ್ರಾಪ್ತ. ಆರು ಮೂರಾಗಿ, ಮೂರು ಎರಡಾಗಿ, ಎರಡು ಒಂದಾಗುವ ಒಮ್ಮನದ ಹವಣಿಕೆಯಿದು.

ಶಿವನಿಗಿರುವುದು ಸರ್ವಜ್ಞಶಕ್ತಿಯೊಂದಲ್ಲ. ಸರ್ವಜ್ಞಪದ ಪ್ರಯೋಗ ಶಿವನಿಗಿರುವ ಷಟ್ ಸಂಪತ್ತಿ ಸೂಚಕ. ಶಿವನಿಗೆ ಸರ್ವಜ್ಞ ಶಕ್ತಿಯ ಜತೆಗೆ ಸ್ವತಂತ್ರಶಕ್ತಿ, ಅಲುಪ್ತಶಕ್ತಿ, ಅನಂತಶಕ್ತಿ, ಅನಾದಿಬೋಧಶಕ್ತಿ, ನಿತ್ಯ ತೃಪ್ತಿ ಶಕ್ತಿಗಳಿವೆ. ಇವು ಶಿವನ ಷಟ್ ಸಂಪತ್ತಿಗಳು. ಇವನ್ನು ಪಡೆಯುವುದಕ್ಕಾಗಿ ಶರಣನು ಶಿವನಲ್ಲಿಯೇ ಶರಣಾಗಬೇಕು. ಶರಣಾಗಿ ತನ್ನ ಶರಣತ್ವವನ್ನು ಸಾರ್ಥಕಗೊಳಿಸಬೇಕು. ಸಂಸಾರ ರೋಗವನ್ನು ಸರ್ವದೋಷಗಳನ್ನು ನೀಗಬೇಕು ; ನೀಗುತ್ತಾನೆ. ಸಸಾರಯೋಗಸಂಪನ್ನನಾಗುತ್ತಾನೆ.

"ಶಿವಜ್ಞಾನ ಸಮುತ್ಪನ್ನೇ ಪರಾನಂದಃ ಪ್ರಕಾಶತೇ ।
ತದಾಸಕ್ತಮನಾ ಯೋಗೀ ನಾನ್ಯತ್ರ ರಮತೇ ಸುಧೀಃ ॥ ೮ ॥
ತಸ್ಮಾತ್ಸರ್ವ ಪ್ರಯತ್ನೇನ ಶಂಕರಂ ಶರಣಂ ಗತಃ ।
ತದನಂತ ಸುಖಂ ಪ್ರಾಪ್ಯ ಮೋದತೇ ನಾನ್ಯಚಿಂತಯಾ" ॥ ೯ ॥

ಸರ್ವಜ್ಞನೂ ಸ್ವತಂತ್ರನೂ ಅಲುಪ್ತಾನಂತ ಶಕ್ತಿ ಸಂಪನ್ನನೂ ಅನಾದಿ ಬೋಧ-ನಿತ್ಯತೃಪ್ತನೂ ಆದ ಶಿವನ ಜ್ಞಾನವು ಶರಣನಿಗೆ ಉಂಟಾಗಲು ಅದರಿಂದ ಪರಮಾನಂದ ಪ್ರಕಾಶವಾಗುತ್ತದೆ. ಆ ಪರಮಾನಂದ ರೂಪ ಶಿವನಲ್ಲಿಯೇ ಶರಣನ ಮನ ಆಸಕ್ತವಾಗುತ್ತದೆ ; ಅಚಂಚಲವಾಗುತ್ತದೆ. ಅದೇ ಯೋಗ ; ಅವನೇ ಯೋಗಿಯೆನಿಸುತ್ತಾನೆ. ಬುದ್ಧಿವಂತನೆನಿಸುತ್ತಾನೆ. ಆತನ ಮನ ಬೇರೆ ಎಲ್ಲಿಯೂ ರಮಿಸದು ; ಭ್ರಮಿಸದು.

ಅದರಿಂದಾಗಿ ಶರಣನು ತನ್ನ ತ್ರಿಕರಣಗಳಿಂದ ಸರ್ವಪ್ರಯತ್ನಗಳಿಂದ ಶಂಕರನೊಬ್ಬನಲ್ಲಿಯೆ ಶರಣಾಗತನಾಗುತ್ತಾನೆ. ಆ ಶಂಕರನ ಅನಂತ ಸುಖವನ್ನು ಪಡೆಯುತ್ತಾನೆ. ಬೇರೊಂದನ್ನು ಬಗೆಯದಂತಿರುತ್ತಾನೆ. ಶಿವಾನಂದ ಸಂಪ್ರಾಪ್ತಿಯೇ ಶರಣನ ಸರ್ವಸ್ವವಾಗಿರುತ್ತದೆ.

ಶರಣನು ಉಳಿದೆಲ್ಲ ತತ್ತ್ವಗಳನ್ನು ತಿಳಿಗೊಳಿಸಿ ತನ್ನಲ್ಲಿ ತಲ್ಲೀನಗೊಳಿಸಿಕೊಂಡಿರುತ್ತಾನೆ. ಶರಣನಲ್ಲಿ ಉಳಿದಿರುವುದು ಎರಡೇ ಎರಡು ತತ್ತ್ವಗಳು. ಒಂದು ಅಂಗತತ್ತ್ವ, ಇನ್ನೊಂದು ಲಿಂಗತತ್ತ್ವ. ಇದರಿಂದಾಗಿ ಶರಣನಿಗೆ ಬೇರೊಂದರ ಭ್ರಮೆಯಾಗಲಿ, ಪ್ರಮೆಯಾಗಲಿ ಇರುವುದಿಲ್ಲ. ಶಿವ, ಅಂದರೆ ಲಿಂಗಪ್ರಮೆ, ಲಿಂಗಪ್ರೇಮ ಮಾತ್ರ ಇರುತ್ತದೆ. ಪರಮಾನಂದ ಮಾತ್ರ ಪ್ರಕಾ

ಶಿಸುತ್ತದೆ. ಅಂಗಸ್ಥಲ ಕುಳಗಳೆಲ್ಲ ಶರಣಾಂಗನಲ್ಲಿ ಸಮಾವೇಶಗೊಂಡಿರುತ್ತವೆ. ಲಿಂಗಸ್ಥಳಗಳೆಲ್ಲ ಪ್ರಸಾದಲಿಂಗದಲ್ಲಿ ಸಮನ್ವಯಗೊಂಡಿರುತ್ತವೆ. ಶರಣಾಂಗ-ಪ್ರಸಾದಲಿಂಗ ಮಾತ್ರ ಉಳಿದಿರುತ್ತವೆ.

"...ನಿವೃತ್ತಿ ಶಕ್ತಿಯನ್ನೈದಿ ವಾಗಾದಿ ಕರ್ಮೇಂದ್ರಿಯಂಗಳೈದು, ಕರ್ಮಸಾದಾಖ್ಯವನೊಡಗೂಡಿದಲ್ಲಿ ಪೃಥ್ವಿತತ್ತ್ವ ಬಯಲಾಯಿತ್ತು. ಪ್ರತಿಷ್ಠಾ ಶಕ್ತಿಯನ್ನೈದಿ ಶಬ್ದಾದಿ ವಿಷಯಂಗಳೈದು, ಕರ್ತೃಸಾದಾಖ್ಯವನೊಡಗೂಡಿದಲ್ಲಿ ಅಪ್ಪು ತತ್ತ್ವ ಬಯಲಾಯಿತ್ತು. ವಿದ್ಯಾಶಕ್ತಿಯನ್ನೈದಿ ಶ್ರೋತ್ರಾದಿ ಜ್ಞಾನೇಂದ್ರಿಯಂಗಳೈದು, ಮೂರ್ತಿಸಾದಾಖ್ಯವನೊಡಗೂಡಿದಲ್ಲಿ ತೇಜತತ್ತ್ವ ಬಯಲಾಯಿತ್ತು. ಶಾಂತಿಶಕ್ತಿಯನ್ನೈದಿ ಪ್ರಾಣಾದಿ ವಾಯುಗಳೈದು, ಅಮೂರ್ತಿಸಾದಾಖ್ಯವನೊಡಗೂಡಿದಲ್ಲಿ ವಾಯುತತ್ತ್ವ ಬಯಲಾಯಿತ್ತು. ಶಾಂತ್ಯತೀತ ಶಕ್ತಿಯನ್ನೈದಿ ಮನ ಬುದ್ಧಿ ಚಿತ್ತಹಂಕಾರ ಜೀವಂಗಳೈದು, ಶಿವಸಾದಾಖ್ಯವನೊಡಗೂಡಿದಲ್ಲಿ ಆಕಾಶತತ್ತ್ವ ಬಯಲಾಯಿತ್ತು: ಇಂತೀ ಪಂಚವಿಂಶತಿ ತತ್ತ್ವಂಗಳು ಲಿಂಗೈಕ್ಯವಾಗಲೊಡನೆ, ಆ ಲಿಂಗತತ್ತ್ವ ಹನ್ನೊಂದು ತಾವು ಒಂದೊಂದನೊಡಗೂಡಿ ಏಕಾರ್ಥವಾದಲ್ಲಿ ಕುಳಸ್ಥಳವಡಗಿತು. ಇಂತೀ ಕುಳಸ್ಥಳವಡಗಲೊಡನೆ, ಮಹಾಘನ ಪರಾತ್ಪರವಪ್ಪ ದಿವ್ಯಲಿಂಗವು ವಾರಿಕಲ್ಲು ಕರಗಿ ನೀರಾದಂತೆ ತನ್ನ ಪರಮಾನಂದದಿಂದವೇ ಸರ್ವಶೂನ್ಯವಾಯಿತ್ತು." ಈ ಪ್ರಭುವಾಣಿಯ ಪ್ರಮಾಣದಂತೆ ಶರಣಾಂಗನು ಸರ್ವವನ್ನು ತನ್ನಲ್ಲಿ ಸಂಹರಿಸಿಕೊಂಡಿರುತ್ತಾನೆ; ಸಮರಸವಾಗಿರುತ್ತಾನೆ. ಅದರಿಂದ ಅನ್ಯಕ್ಕೆ ಮನಮಾಡದೆ ಶಿವನಲ್ಲಿಯೇ ಆಸಕ್ತನಾಗಿರುತ್ತಾನೆ. ಪೂರ್ಣಯೋಗಿಯಾಗಿ ಪರಶಿವಪ್ರಜ್ಞೆಯನ್ನು ಪರಾನಂದವನ್ನು ಪಡೆಯುತ್ತಾನೆ. ಶರಣನ ಸರ್ವಪ್ರಯತ್ನವೂ ಅದೇ ಆಗಿರುತ್ತದೆ. ಶಿವಶರಣಾಗತಿಯೇ ಶರಣನ ಸಾರ ಸರ್ವಸ್ವವಾಗಿರುತ್ತದೆ. ಅಚ್ಚಳಿಯದ ಆನಂದದಲ್ಲಿ ಶರಣನ ಮನ ತಾನಾಗಿರುತ್ತದೆ.

ಶರಣನು ಅನ್ಯಚಿಂತೆ ತನ್ನ ಕೌಟುಂಬಿಕ ಚಿಂತೆ ಎಲ್ಲವನ್ನೂ ತ್ಯಜಿಸಿರುತ್ತಾನೆ. ಅನ್ಯಸುಖಕ್ಕೂ ಆಶೆಮಾಡನು ಶಿವಜ್ಞಾನದಲ್ಲಿ ಶಿವಶ್ರದ್ಧೆಯಲ್ಲಿ ಶಿವಾನಂದದಲ್ಲಿ ಏಕಾಗ್ರಚಿತ್ತನಾಗಿ ಯೋಗಿಯಾಗಿ ಸುಧಿಯಾಗಿ ಶೋಭಿಸುತ್ತಾನೆ. ಶಿವಸನ್ನಿಹಿತನಾಗಿರುತ್ತಾನೆ.

“ಯದೇವ ವಿದ್ಯಯಾ ಕರೋತಿ ಶ್ರದ್ಧಯೋಪನಿಷದಾ
ತದೇವ ವೀರ್ಯವತ್ತರಂ ಭವತಿ ।”

—ಛಾಂದೋಗ್ಯ

ವಿದ್ಯೆಯಿಂದ ಶ್ರದ್ಧೆಯಿಂದ ಯೋಗದಿಂದ ಮಾಡಿದುದು ಸತ್ವಯುಕ್ತವಾಗುತ್ತದೆ. ಶ್ರೇಷ್ಠ ಫಲಪ್ರದವಾಗುತ್ತದೆ. ಎಂಬೀ ಅಭಿಪ್ರಾಯದ ಶ್ರುತಿವಾಣಿ ರೇಣುಕ ಭಗವತ್ಪಾದರ ಅಭಿಪ್ರಾಯವನ್ನು ಎತ್ತಿ ಹಿಡಿಯುತ್ತದೆ. ‘ಶಿವಜ್ಞಾನ’ ಎಂಬುದು ವಿದ್ಯೆಯನ್ನು, ‘ಚಿದಾಸಕ್ತಮನಾ’ ಎಂಬುದು ಶ್ರದ್ಧೆಯನ್ನು, ‘ಯೋಗೀ’ ಎಂಬುದು ಯೋಗವನ್ನು, ‘ಪರಾನಂದ’ ಎಂಬುದು ವೀರ್ಯವತ್ತತೆಯನ್ನು ಪ್ರತಿನಿಧಿಸುತ್ತವೆ.

ಶಿವಜ್ಞಾನಿ, ಶಿವಾನಂದ ಸುಜ್ಞಾನಿ, ಮನಮೌನಿಯಾದ ಶರಣ ಆಡಿದ್ದು ಜಪ, ಆಚರಿಸಿದ್ದು ಅರ್ಚನ, ಆಲೋಚಿಸಿದ್ದು ಧ್ಯಾನವಾಗಿ ಪರಾನಂದ ಫಲಪ್ರದವಾಗುತ್ತದೆ. ‘ಬ್ರಹ್ಮದರ್ಶಿ ಕೃತಮಲ್ಪಮಪಿ ಪುಣ್ಯಂ ಮಹತ್ತಮಮನಂತಂ ಚ ಭವತಿ’ ಎಂಬುದಾಗಿ ಬ್ರಹ್ಮಸೂತ್ರದ ಮಧ್ವಭಾಷ್ಯವು ಅಲ್ಪ ಕ್ರಿಯೆಗೆ ಬಹು ಫಲವನ್ನು ಒಪ್ಪಿಕೊಂಡಿದೆ. ಅಂತೆಯೇ ಶರಣನು ತನ್ನ ಜ್ಞಾನಾಚಾರ ಮಂತ್ರದಿಂದ ಪರಾನಂದ ರೂಪ ಮಹತ್ತರವಾದ ಅನಂತವಾದ ಫಲವನ್ನು ಪಡೆಯುತ್ತಾನೆ. ಸ್ಥಿರಮನ ಸ್ಥಿರಬುದ್ಧಿಯುಳ್ಳವನಾಗುತ್ತಾನೆ. ಶಿವಯೋಗಿಯೆನಿಸುತ್ತಾನೆ.

“ಕಿಚ್ಚಿನೊಳಗೆ ಹುರಿದ ಹುರುಳಿಯಂತಾದೆನಯ್ಯಾ.
ಬೆಂದ ನುಲಿಯ ಸಂದಿಕ್ಕಿ ಮುತ್ತೊಂದ ಮಾಡಬಾರದಯ್ಯಾ.
ಗುಹೇಶ್ವರಾ ನಿಮ್ಮ ನಿಲವಿನ ಪರಿ ಇಂತುಟಯ್ಯಾ.”

ಶರಣನ ಸರ್ವಾಂಗ ಜ್ಞಾನಾಗ್ನಿಯಲ್ಲಿ ಹುರಿದು ಹುರುಳಿಯಂತಾಗಿರುತ್ತದೆ. ಬೆಂದ ನುರಿಯು ಸಾದಿನಂತಿರುತ್ತದೆ. ಶಿವಾಚಾರ ಶಿವವಿಚಾರಕ್ಕೆ ಹೊರತಾಗಿ ಮತ್ತೊಂದನ್ನು ಮಾಡದಂತಿರುತ್ತದೆ. ಶರಣನ ನಿಲುವು ಸುಟ್ಟ ಬಟ್ಟೆಯಂತಹುದು. ಶರಣನ ಪರಮಜ್ಞಾನದ ತೇಜಸ್ಸು ಅಂತಹದು. ಅದು ಶರಣನನ್ನು ನಿರವಯಿಯನ್ನಾಗಿರಿಸುತ್ತದೆ. ನಿರವಶೇಷ ಜ್ಞಾನವುಂಟಾಗದೆ ಶರಣತ್ವ ಸಂಭವಿಸದು.

"ನೆಲ ನೀರು ಕಿಚ್ಚು ಗಾಳಿ ಬಯಲು ಕೂಡಿ
ಆದ ಪಿಂಡ ತಾನೆಂಬ ಮಿಥ್ಯಾಚರ್ಮದೇಹಿಗಳನೇನೆಂಬೆ ?
ನೆಲನಲ್ಲದ, ನೀರಲ್ಲದ, ಕಿಚ್ಚಲ್ಲದ, ಗಾಳಿಯಲ್ಲದ
ಬಯಲಲ್ಲದ, ಪ್ರಕೃತಿಯಲ್ಲದ, ಪುರುಷನಲ್ಲದ
ಮೇಲಣ ಶುದ್ಧ ಸ್ವಯವೆ ತಾನೆಂದು ತಿಳಿದಾತನಲ್ಲದೆ
ಶರಣನಲ್ಲ ಕಾಣಾ ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ"

"ಪೃಥ್ವಿ ಆಕಾಶದ ಮಧ್ಯದಲ್ಲಿ ತೋರುವ ತೋರಿಕೆಗಳು, ಸ್ವರ್ಗ ಮರ್ತ್ಯ ಪಾತಾಳಗಳೆಂಬ ತ್ರಿಲೋಕದ ಮಧ್ಯದಲ್ಲಿ ಪುಣ್ಯ ಪಾಪ ಮೊದಲಾದ ಸರ್ವ ಕರ್ಮಂಗಳು, ಕೃತ ತ್ರೇತಾ ದ್ವಾಪರ ಕಲಿಯುಗಗಳಲ್ಲಿಯ ಆಗು ಚಾಗೆಗಳು, ಇದಲ್ಲದೆ ಪಂಚತತ್ತ್ವ ಮಿಶ್ರವಾದ ದೇಹದ ಪ್ರಕೃತಿ ಮನ ಮೊದಲಾದ ಅರವತ್ತಾರು ಕೋಟಿ ಕರಣಂಗಳು — ಇಂತಿವೆಲ್ಲವು ಪರಶಿವಲಿಂಗದಿಂದುದಯವಾದವಾಗಿ, ತೋರಿ-ತೋರಿಯಡಗುವವಲ್ಲದೆ ನಿತ್ಯವಲ್ಲವೆಂದು ಭಾವಿಸಿ, ಪರಶಿವ ತತ್ತ್ವವೊಂದೇ ನಿತ್ಯವೆಂದು ತಿಳಿವುದೇ ಅದೇ ಪರಮಜ್ಞಾನ. ಆ ಪರಮ ಜ್ಞಾನವೆಂಬುದು ತಾನೆಂದು ತಿಳಿದಾತನೇ ಶಿವಜ್ಞಾನಿ ಶರಣನೆಂದೆನಯ್ಯಾ ನಮ್ಮ ಶರಣ ಕಾಡಿನೊಳಗಾದ ಶಂಕರ ಪ್ರಿಯ ಚನ್ನಕದಂಬ ಲಿಂಗ ನಿರ್ಮಾಯ ಪ್ರಭುವೇ."

"ಶಿವಯೋಗಿ ನಿಭ್ರಾಂತನೆ ? ಶರಣ ಕರ್ಮಕಾಯನಲ್ಲ,
ಕಾಲಕಲ್ಪಿತನಲ್ಲ; ಶರಣನು ಸಂಕಲ್ಪ ವಿಕಲ್ಪ ವಿರಹಿತನು,

ಅವರವರ ಬೆರಸಿಪ್ಪ, ತನ್ನ ಪರಿ ಬೇರೆ.
ಶರಣ ನಿರಂತರ ಪರಮಸುಖಿ, ಕೂಡಲ ಚೆನ್ನ ಸಂಗನ
ಶರಣ ಪ್ರಪಂಚಿನೊಳಗಿಪ್ಪ ತನ್ನ ಪರಿ ಬೇರೆ."

ಈ ಮೂರು ವಚನಗಳಿಂದ ಶರಣ ಪರಶಿವಜ್ಞಾನಿ, ಪರಮ ಸುಖಿ, ಪರಶಿವಯೋಗಿ–ಎಂಬುದು ಮನವರಿಕೆಯಾಗುತ್ತದೆ. ಶರಣ ಸ್ವರೂಪ ಸ್ಫುಟವಾಗುತ್ತದೆ.

ಶಿವಜ್ಞಾನ, ಶಿವಾದ್ವೈತ ಜ್ಞಾನ, ಶಿವಾತ್ಮವಿದ್ಯೆ ಇವೆಲ್ಲವೂ ಒಂದೆ ಅರ್ಥದವು. ಇವೆಲ್ಲವೂ ಅಂಗ-ಲಿಂಗ ಸಾಮರಸ್ಯವನ್ನು ಬೋಧಿಸುತ್ತವೆ. ಇದುವೇ ಶರಣ ಹೃದಯ, ಧ್ಯೇಯ.

ಶಿವಾತ್ಮವಿದ್ಯೆ ಅದು ಸಂಕುಚಿತ ಸ್ವಭಾವದ ವಿದ್ಯೆಯಲ್ಲ; ಅದು ಪರಮ ವಿದ್ಯೆ; ವಿಶಾಲ ಭಾವದ ವಿದ್ಯೆ. ಅದಿಲ್ಲದ ವಿದ್ಯೆ ಅದೆಷ್ಟಿದ್ದರೂ ಅಪೂರ್ಣ; ಅದೇ ಅಜ್ಞಾನ. ಅದೇ ತಾಮಸ ಗುಣ. ಅದರಿಂದ ಆತ್ಮನು ಪರಮಾತ್ಮ ತತ್ತ್ವದಿಂದ ವಿಭಕ್ತನಾಗುತ್ತಾನೆ. ಅಂದರೆ ದೂರಾಗುತ್ತಾನೆ. ಸಂಕುಚಿತ ಸ್ವಭಾವದವನಾಗುತ್ತಾನೆ. ಇದರಿಂದಾಗಿ ಇದನ್ನು ನಿರಸನ ಮಾಡಬೇಕು ಸತ್ಯ ಶರಣ. ನಿರಸನ ಮಾಡದೆ ವಿಯತ್ತಲದ ವಿಶಾಲವಾದ ವರ್ತುಲಕ್ಕೆ ಬಾರನು; ಬೆಳಗನು.

ಸೋಽಹಂ ಚಿದಹಂ ಭಾವಗಳನ್ನು ಮೀರುವುದೇ ಆ ಸ್ಥಿತಿ. ಆ ಮಹಾಜ್ಞಾನದಲ್ಲಿ ಇವೆರಡೂ ಇರವು. ಇರುವುದಿಲ್ಲ. ಅದನ್ನು ಪಡೆದ ಶರಣ ನಿಭ್ರಾಂತನಲ್ಲ. ಕರ್ಮಕಾಯನಲ್ಲ, ಕಾಲ ಕಲ್ಪಿತನಲ್ಲ. ಮಿಗಿಲಾಗಿ ತಾಮಸಕ್ಕೆ ಕಾರಣವಾದ ಸಂಕಲ್ಪ ವಿಕಲ್ಪಗಳ ಸುಳುವಿಗೆ ಸಿಲುಕುವವನಲ್ಲ, ಶರಣ ಪ್ರಪಂಚದಲ್ಲಿದ್ದು ಪರಮಸುಖವನ್ನು ಸಂಪಾದಿಸಬಲ್ಲ ವಿಶಿಷ್ಟ ಸಮರ್ಥ; ವಿಮರ್ಶಾಶಕ್ತಿಯುಕ್ತ. ಅವನು ಎಲ್ಲರಂತಿದ್ದರೂ ಅವನ ಪರಿ ಬೇರೆ. ಅದು ಅಚ್ಚಳಿಯದ ಹಿರಿಬೆಳಗಿನ ವಳಯ. ಅದಕ್ಕೆ ತಾಮಸ ಮುಸುಕಲಾರದೆಂಬುದೇ ಶರಣನ ಸತ್ಯ ಸಂಕಲ್ಪ; ನಿತ್ಯ ಸಾಧನ.

೨. ತಾಮಸ ನಿರಸನ ಸ್ಥಲಂ

ಅಜ್ಞಾನ, ನಿಧಾನ, ಜಡಸ್ವಭಾವ, ಕತ್ತಲೆ, ಕಾಲ ಮೀರುವಿಕೆ-ಇವು ತಾಮಸ ಶಬ್ದಾರ್ಥಗಳು. ಇವನ್ನೆಲ್ಲ ಹೋಗಲಾಡಿಸುವುದು ಪರಶಿವಜ್ಞಾನಿಯಾದ ಶರಣನಿಗೆ ಕ್ರಮಪ್ರಾಪ್ತವೂ ಸಹಜವೂ ಆದುದು. ಶಿವಜ್ಯೋತಿಯ ಬಳಿಯೀರುವ ಶರಣನಿಗೆ ತಾಮಸ ಸೋಂಕಿರಬಾರದು. ತಮೋವಿಕಾರಗಳನ್ನೆಲ್ಲ ತೊಡೆದಿರಬೇಕು. ನಾನು ಶಿವಜ್ಞಾನಿ ನಾನು ಶಿವನನ್ನು ಅರಿತಿರುವೆನು ; ತೋರವೆನು-ಎಂದು ಹೇಳುವುದೂ ತಾಮಸವೆ ! ಅಹಂಭಾವ, ಭಿನ್ನಭಾವ, ಸಂಕುಚಿತ ಭಾವಗಳೂ ತಾಮಸಗುಣಗಳು. ಮೇಲೆ ಹೇಳಿದ ಅಜ್ಞಾನಾದಿನಗಳು ದುಃಖ ದುರ್ಗುಣಾದಿಗಳು ಲೋಭ ಮೋಹಾದಿಗಳು ರಾಗದ್ವೇಷಗಳು ಸಂಕಲ್ಪ ವಿಕಲ್ಪಗಳು-ಭವಭಯಗಳು ಮೊದಲಾದವು ತಾಮಸವೃತ್ತಿಗಳು. ಕರಣೇಂದ್ರಿಯಗಳು ಹೊರಗೆ ಹರಿದು ಹೋಗುವುದು ವಿಷಯಗಳಲ್ಲಿ ವಿಮೋಹಗೊಳ್ಳುವುದು ತಮೋಗುಣದ ಪ್ರಭಾವ. ಇವುಗಳಿಂದ ಅಶಿವತ್ವವುಂಟಾಗುವುದಲ್ಲದೆ ಶಿವತ್ವಪ್ರಾಪ್ತಿಯಾಗದು; ಶಿವಜ್ಞಾನ ಸಮನಿಸದು. ಕಾರಣ ತಾಮಸನಿರಸನ ಅಗತ್ಯ. ತಾಮಸ ನಿರಾಸಕನು ತನ್ನ ಕರಣೇಂದ್ರಿಯಗಳನ್ನು ಅಂತರ್ಮುಖವಾಗಿಸಬೇಕು; ಸಾತ್ವಿಕನಾಗಿರಬೇಕು. ರಾಜಸ ತಾಮಸಗುಣಗಳಿಗೆ ಒಳಗಾಗಬಾರದು. ರಾಜಸ ತಾಮಸ ಆಹಾರ ವಿಚಾರಗಳಿಗೆ ಈಡಾಗಬಾರದು. ಅಪರವಿದ್ಯೆಯಿಂದ ಪರಾವಿದ್ಯೆಗೆ ಮನಸ್ಸು ಮಾಡಬೇಕು. ಕರಣೇಂದ್ರಿಯ ವೃತ್ತಿಗಳಿಗೆ ಶೈವೀಮುದ್ರೆಯನ್ನೊತ್ತಬೇಕು. ಪ್ರಸನ್ನತೆಯ ಅಂಚೆ ಚೀಟಿಯನ್ನು ಅಂಟಿಸಬೇಕು. ಆಗ ಆ ಪರಾನಂದ ಧಾಮಕ್ಕೆ ಹೋಗಲು ಹೊಲಬಿರುತ್ತದೆ; ಶಿವಾದ್ವೈತಜ್ಞಾನದ ಹಿರಿಬೆಳಗಿರುತ್ತದೆ. ಯಾವ ಮೂಲೆಯಲ್ಲಿಯೂ ತಾಮಸಕ್ಕೆ ತಾವಿರುವುದಿಲ್ಲ.

ಶಿವನ ಸಮ್ಯಗ್ ದರ್ಶನಕ್ಕೆ ತಾಮಸ ನಿರಸನ ಅತ್ಯಗತ್ಯ. ಅದಾಗಬೇಕಾದರೆ ಸರ್ವಾತ್ಮ ಭಾವದಿಂದ ಶಿವತ್ವಕ್ಕೆ ಶರಣುಹೋಗದೆ ವಿಧಿಯಿಲ್ಲ. ಶೈವೀ ಪ್ರೇಕ್ಷೆಯಲ್ಲಿ ತ್ರಿಕರಣಗಳು ತಲ್ಲೀನವಾಗದೆ ಬೇರೆ ವಿಧಿಯಿಲ್ಲ ಸ್ವಾಭಾವಿಕವಾಗಿ ನಿಸರ್ಗದತ್ತ ವಿಷಯಗಳತ್ತ ಹೊಳಪಿಲ್ಲದೆ ಹರಿದು ಹೋಗುತ್ತವೆ ತ್ರಿಕರಣಗಳು ರಾಜಸಕ್ಕೆ ತಾಮಸಕ್ಕೆ ಒಳಗಾಗುತ್ತವೆ. ಹರಿದಾಟಕ್ಕೆ ರಾಜಸ ತಾಮಸ ವೃತ್ತಿಗಳೇ ಕಾರಣ.

"ಪರಾಂಚಿ ಖಾನಿ ವ್ಯತೃಣತ್ ಸ್ವಯಂಭೂಃ
ತಸ್ಮಾತ್ ಪರಾಙ್ ಪಶ್ಯತಿ ನಾಂತರಾತ್ಮನ್ !
ಕಶ್ಚಿದ್ಧಿರಃ ಪ್ರತ್ಯಗಾತ್ಮಾನ ಮೈಕ್ಷ
ದಾವೃತ್ತ ಚಕ್ಷುರಮೃತತ್ವಮಿಚ್ಛನ್ ॥"

—ಕಠೋಪನಿಷತ್

ಪ್ರವೃತ್ತಿಗೆ ಎಳಸುವುದು ತಾಮಸವೃತ್ತಿ. ನಿವೃತ್ತಿಗೆ ಹೊಂದಿಕೊಳ್ಳುವುದು ತೇಜೋವೃತ್ತಿ. ಕಣ್ಣು ಮುಚ್ಚಿದವನು ಕತ್ತಲಲ್ಲಿರುತ್ತಾನೆ, ಕಣ್ಣು ತೆರೆದವನು ಕಳಾ ಲೋಕದಲ್ಲಿರುತ್ತಾನೆ. ಕತ್ತಲಲ್ಲಿರುವವನು ಮೃತ್ಯುಲೋಕಕ್ಕೆ ತೆರಳುತ್ತಾನೆ. ಕಳಾಲೋಕದಲ್ಲಿರುವವನು ಅಮೃತಮಯನಾಗುತ್ತಾನೆ. ಕಾರಣ ಶರಣನಾಗಬೇಕೆನ್ನುವವನು ತಮೋ ಲೋಕವನ್ನು ತ್ಯಜಿಸಿ ತೇಜೋಲೋಕದತ್ತ ಸಾಗಬೇಕು. ಅಂತರಾತ್ಮನನ್ನು ಅರಿಯಬೇಕು ; ಅಮೃತವನುಂಡು ಅಮರನಾಗಬೇಕು. ಅಶಕ್ತನೆನಿಸದೆ ಸಶಕ್ತನೆನಿಸಬೇಕು. ಅಂತಾದಾಗ ಶರಣನು ಸ್ವಯಂ ಧೀರನಾಗುತ್ತಾನೆ. ಎಷ್ಟೇ ವಿಘ್ನಗಳು ಬರಲಿ ಹಿಡಿದುದನ್ನು ಬಿಡದ ಧ್ಯೇಯವನ್ನು ಸಾಧಿಸುತ್ತಾನೆ, ಸೃಷ್ಟಿ ಮಾತ್ರಕ್ಕೆ ತನ್ನ ದೃಷ್ಟಿಯನ್ನು ಹರಿಸದ ಸೃಷ್ಟಿಯಲ್ಲಿಯೂ ಸೃಷ್ಟೀಶನಾದ ಪರಶಿವನನ್ನು ನಿರೀಕ್ಷಿಸುತ್ತಾನೆ. ಪ್ರಪಂ ವನ್ನು ಪ್ರಸಾದವನ್ನಾಗಿಸುತ್ತಾನೆ. ತಾನು ಪ್ರಸನ್ನಮನಸ್ಕನಾಗಿರುತ್ತಾನೆ. ಆತ ಬಳಿ ತಾಮಸ ಸುಳಿದರೂ ಅದರ ಸೆಳೆತಕ್ಕೆ ಸಿಕ್ಕನು ; ಇಳಿತಕ್ಕೆ ಕೊಚ್ಚಿಹೋಗನು. ವೀರವಾದ ಶರಣ ಪ್ರವಾಹಕ್ಕೆ ಎದುರಾಗಿ ಈಜಬಲ್ಲ [illegible] ಅವನು ಅಂತಹ ಅನುಭವವುಳ್ಳ ಮಲ್ಲ. ಶಿವ ಸಂ

ತ್ತುಳ್ಳ ಸಾರಥಿ, ತನ್ನ ಈ ರಥವನ್ನು ಶೈವೀಪಥದಲ್ಲಿ ಸುಕ್ಷೇಮವಾಗಿ ಸುಗಮವಾಗಿ ನಡೆಯಿಸಬಲ್ಲ. ಪರಾನಂದಧಾಮವನ್ನು ಸೇರಬಲ್ಲ. ಶರಣನ ಶಿವಜ್ಞಾನದ ಶುಭ್ರ ತೇಜಸ್ಸು ಅಂತಹದು.

"ಯಸ್ತು ವಿಜ್ಞಾನವಾನ್ ಭವತಿ ಯುಕ್ತೇನ ಮನಸಾಸಹ ।
ತಸ್ಯೇಂದ್ರಿಯಾಣಿ ವಶ್ಯಾನಿ ಸದಶ್ವಾ ಇವ ಸಾರಥೇಃ ॥"

ಎಂದು ಅದೇ ಕಠೋಪನಿಷತ್ತು ಸಾರಿದೆ. ಆದರೆ ಶರಣನು ವಿಜ್ಞಾನವಂತನಾಗಬೇಕು. ವಿಜ್ಞಾನ ತಾನೇ ಬರುವ ಬೆಳಗಲ್ಲ. ಅದು ಶ್ರೀ ಗುರುದೇವನೆಂಬ ಚಿದ್ಭಾನುವಿನ ಕಿರಣ, ಕಳೆ. ಅದರಿಂದಾಗಿ ಶರಣನಿಗಾದರೂ ಶ್ರೀಗುರುದೇವನ ಕರುಣೆ ಬೇಕು. ಆ ಕರುಣೆಯು ಕಿರಣವಿಡಿದು ಶರಣ ಬಾಳಬೇಕು; ಬೆಳಗ ಕಾಣಬೇಕು. ತಾಮಸ ವೃತ್ತಿಗಳನ್ನು ತಳ್ಳಬೇಕು. ತತ್ವನಿರ್ದೇಶದತ್ತ ಸಾಗಬೇಕು. ತಾನು ಆ ಪರಶಿವನನ್ನು ಅರಿತಿಹೆನೆಂಬ ಚಿದಹಂಭಾವದ ಸೂಕ್ಷ್ಮ ತಾಮಸ ಭಾವವನ್ನು ತ್ಯಜಿಸಿ ಆ ಸಮ್ಯಗ್ ಜ್ಞಾನವನ್ನು ಕರುಣಿಸಿದ ಶ್ರೀಗುರುದೇವನ ಚರಣಕ್ಕೆ ಶರಣಾಗಿ ಸದಾ ಶರಣಾರ್ಥಿಯಾಗಿ ಶರಣಧರ್ಮವನ್ನು ನಿಲ್ಲಿಸಬೇಕು; ನಿರ್ಮಲ ತೇಜೋವಂತನಾಗಬೇಕು.

"ಶಿವಾಸಕ್ತ ಪರಾನಂದ ಮೋದಿನಾ ಗುರುಣಾ ಯತಃ ।
ನಿರಸ್ಯಂತೇ ತಮೋಭಾವಾಃ ಸ ತಾಮಸನಿರಾಸಕಃ" ॥೧॥

ಶಿವಾಧೀನವಾದ ಆ ಪರಾನಂದವನ್ನು ಶಿವಾಸಕ್ತನಾದ ಶ್ರೀ ಗುರುದೇವನೊಬ್ಬನೇ ಸಂಪಾದಿಸಿರುತ್ತಾನೆ. ಅದರಿಂದಾಗಿ ಆತನು ತಾಮಸ ನಿರಾಕರಣ ಸಮರ್ಥನಾಗಿರುತ್ತಾನೆ. ತನಗೆ ಶರಣು ಹೊಕ್ಕ ಶರಣನ ತಮೋಭಾವಗಳನ್ನು ತನ್ನ ಉಪದೇಶದಿಂದ ಉಚ್ಚಾಟನ ಮಾಡಿಸುತ್ತಾನೆ. ತನ್ನ ಶರಣ ಶಿಷ್ಯನನ್ನು ತಮೋಲೋಕದಿಂದ ತೇಜೋಲೋಕಕ್ಕೆ ಕರವಿಡಿದು ಕರೆದೊಯ್ಯುತ್ತಾನೆ. ಸಾಕ್ಷಾತ್ತಾಗಿ ಶಿವದರ್ಶನ ಮಾಡಿಸುತ್ತಾನೆ. ತಿಳಿಗಣ್ಣನ್ನು ತೆರೆಯಿಸುತ್ತಾನೆ. ಶಿವನ ಸತ್ಯಸೌಂದರ್ಯವನ್ನು ನೋಡಿಸುತ್ತಾನೆ. ನಲಿದಾಡಿಸುತ್ತಾನೆ.

ತಮೋಭಾವಗಳನ್ನು ತೊಲಗಿಸುವವನು ಶ್ರೀಗುರುದೇವನೊಬ್ಬ ಗುರು ದೇನಯವುನು ದೀಕ್ಷೆ ದಯಪಾಲಿಸಿ ಅರುಹು-ಕುರುಹುಗಳನ್ನು ಕರುಣಿಸಿ ಶರಣಾಗತನಾದ ಶಿಷ್ಯನ ಮರಹು ಮಂದತೆಗಳನ್ನು ತೊಡೆಯುತ್ತಾನೆ. ತಮೋಭಾವದ ಮೂಲಗಳು ಮಲಗಳು. ತ್ರಿಮಲಗಳನ್ನು ತತ್ತ್ವದರ್ಶಿಯಾದ ಗುರುದೇವನು ತೊಳೆದು ತೊಳಗುವಂತೆ ಮಾಡುತ್ತಾನೆ. ಶಿವಾದ್ವೈತ ಜ್ಞಾನವನ್ನು ಬೋಧಿಸುತ್ತಾನೆ. ಮಂತ್ರೋಪದೇಶದಿಂದ ದೃಕ್ಕ್ರಿಯಾ ಸ್ವರೂಪ ಲಿಂಗವನ್ನು ಮಂತ್ರದ ನಿಶ್ಚಯಾರ್ಥವನ್ನು ಸ್ವಸ್ವರೂಪ ನಿರ್ಣಯವನು ಅರ್ಚನಾರ್ಪಣಾದಿ ಸಾಧನವನ್ನು ಕರುಣಿಸುತ್ತಾನೆ. ಇವೆಲ್ಲವೂ ಶಿವನಲ್ಲಿ ಶರಣಾಗುವ ಸತ್ಸಾಧನಗಳು. ಮಹಾಮಂತ್ರವಾದ ಪರಮ ಪಂಚಾಕ್ಷರಿಯು ಗುರುದೇವನಿಂದ ಶಿಷ್ಯನ ಶ್ರೋತ್ರಕ್ಕೆ ಬಂದೊಡನೆ ಶಿಷ್ಯನು ಶರಣನೆನಿಸುತ್ತಾನೆ. ಸತ್‌ಶ್ರವಣ ಸಂಭವಿಸುತ್ತದೆ. ಅದನ್ನೇ ಶಿಷ್ಯನು ಮುಖದಿಂದ ಜಪಿಸುತ್ತಾನೆ.

ಶಿವಾಸಕ್ತನಾಗಿರಬೇಕು ಶ್ರೀಗುರು. ಶಿವಭಕ್ತಿಯುಳ್ಳವನಾಗಿರಬೇಕು ಶಿಷ್ಯ, ಗುರುದೇವ ಜ್ಞಾನಭಾನು. ಕರುಣೆ ಆತನ ಕಿರಣ. ಲಿಂಗಗಳು ಪ್ರಕಾಶಸ್ವರೂಪ. ತ್ರಿವಿಧ ತನುಗಳಲ್ಲಿರುವ ತಮಸ್ಸನ್ನು ಕಳೆಯಬಲ್ಲ ಪ್ರದೀಪಗಳು.

ತಮಸ್ಸಿನಿಂದ ಅಶಿವತೆ ಹುಟ್ಟುತ್ತದೆ. ಅಂಧತೆಯ ತರುತ್ತದೆ. ಅಶಿವತೆ ಅಂಧತೆಗಳಿರುವಲ್ಲಿ ಆತ್ಮ ಘಾತಕತ್ವವಿರುತ್ತದೆ. ಆತ್ಮಘಾತಕರು ಅಘೋರ ನರಕಕ್ಕೆ ಹೋಗುತ್ತಾರೆ.

> "ಅಸುರ್ಯಾನಾಮ ತೇ ಲೋಕಾಃ
> ಅಂಧೇನ ತಮಸಾಽವೃತಾಃ ।
> ತಾಂಸ್ತೇ ಪ್ರೇತ್ಯಾಭಿಗಚ್ಛಂತಿ
> ಯೇ ಕೇ ಚಾತ್ಮಹನೋಜನಾಃ" ॥೩॥
>
> —ಈಶಾವಾಸ್ಯೋಪನಿಷತ್

ಅವಿದ್ಯಾಸ್ಮಿತ ರಾಗದ್ವೇಷಾದಿ ಅಂಧ ತಮಸ್ಸಿನಿಂದ ತುಂಬಿವೆ ನರಕ ಲೋಕಗಳು. ಆತ್ಮಜ್ಞಾನವಿಲ್ಲದ ಆತ್ಮಘಾತಕರು ಆ ನರಕಗಳಿಗೆ ಹೋಗುತ್ತಾರೆ. ಬೆಲೆಯುಳ್ಳ ಬಾಳನ್ನು ಹಾಳು ಮಾಡಿಕೊಳ್ಳುತ್ತಾರೆ.

ಮಾನವ ಜನ್ಮ ಮಹತ್ತರವಾದುದು. ಅದನ್ನು ತಿಳಿಯದೆ ಅಜ್ಞಾ ವಶರಾಗಿ ಗುರೂಪದೇಶವನ್ನು ಪಡೆಯದಿದ್ದರೆ ಮಾನವ ಮೂರು ತನುಗಳಿ ಮೂರುಲೋಕಗಳಲ್ಲಿ ತಮಸ್ಸು ತುಂಬಿಕೊಳ್ಳುತ್ತವೆ ದುಃಖಪೂರಿತವಾಗು ತ್ತವೆ. ಮಂಗಳತೆಯಿಂದ ವಂಚಿತರಾಗುತ್ತಾರೆ. ದೈವೀಗುಣಗಳಿಂದ ದೂರಾಗು ತ್ತಾರೆ ಕರ್ಮಬಂಧನಕ್ಕೆ ಬೀಳುತ್ತಾರೆ. ಅಜ್ಞಾನವಶರಾಗುತ್ತಾರೆ. ಸಂಕುಚಿ ಭಾವದ ಸಂಕೋಲೆಗೆ ಸಿಕ್ಕಿರುತ್ತಾರೆ. ಆತ್ಮೋದ್ಧಾರವನ್ನು ಅಲಕ್ಷಿಸುತ್ತಾರೆ. ಅಜ್ಞಾ ನಾದಿ ಶಿವಪಥದಲ್ಲಿ ಹೆಜ್ಜೆಯನ್ನಿಕ್ಕರು. ಗುರುಕರುಣೆಯಿಲ್ಲದವರು ಅಂಧರು ಅವರು ಆತ್ಮಲಿಂಗವನ್ನು ಅರಿಯರು, ಅರ್ಚಿಸರು. ಅರ್ಪಣಾನುಭವಗಳನ್ನು ಪಡೆಯರು. ಅಂಥವರ ಜೀವನ ವ್ಯರ್ಥ. ಅವರು ಆತ್ಮವಂಚಿತರು. ಆದ ಗುರುದೇವನ ಅನುಗ್ರಹಕ್ಕೆ ಪಾತ್ರರಾದವರು ತಮಸ್ಸನ್ನು ತೊಡೆದು ಮಂಗ ಮಯ ಜೀವಿಗಳಾಗಿರುತ್ತಾರೆ.

“ಮಂಗಳದ ಸದ್ಭಕ್ತಿಲಿಂಗ ನೀನಾಗಿರಲು,
ಕಂಗಳೆರಡೊಂದಕ್ಕೆ ಉಭಯಾರ್ಥವೈ
ನಿನ್ನಯ ದೀಕ್ಷೆ ಸಾನುಭವದಲಾಗೆ
ಲಿಂಗ ನಿನ್ನಯ ಮನವು ಯೋಗಿನಾಥಾ !”

ಶರಣನೊಬ್ಬ ಶಿವದೀಕ್ಷೆಯಾದವನ ಶಿವತ್ವವನ್ನು ತಾಮಸನಿರ ಸಾಮರ್ಥ್ಯವನ್ನು ಈ ವಚನದಲ್ಲಿ ಭಾವಪೂರ್ಣವಾಗಿ ಬೆಡಗಿನ ನುಡಿಯಲ್ಲಿ ಬ ಸಿದ್ದಾನೆ. ಈ ವಚನಕ್ಕೆ ಪುರಾತನರು ಹೀಗೆ ಅರ್ಥ ಬರೆದ್ದಾರೆ :

“ಮಂಗಳವೆಂದರೆ ಮದುವೆ. ಅಂತು ತನ್ನ ನಿಜವಪ್ಪ ಲಿಂಗವು ಶ ಸಂಗಕ್ಕೆ ಶ್ರೀಗುರುವಿನಿಂದ ಸಂಯೋಗವುಪ್ಪ ಶುಭಕಾಲವೀಗ ಮ ವಿನಿಸಿತ್ತು. ಮದುವೆಯಾಗಿ ಲಿಂಗಾಂಗವೆರಡೂ ಕೂಡಿದ ಕೂಟಕ್ಕೆ ಭಕ್ತಿ ಸಿತ್ತು ಎಂಬುದೀಗ ‘ಮಂಗಳದ ಸದ್ಭಕ್ತಿಲಿಂಗ ನೀನಾಗಿರಲು’ ಎಂಬ ಶಬ್ದಕ್ಕ ಅಂತು ಶರಣನು ತಾನೇ ಲಿಂಗವಾಗಿಪ್ಪ ತನ್ನ ಇಷ್ಟ ಪ್ರಾಣವೆಂಬ ಉಭಯ ವಿಟ್ಟು ಮನಭಾವವೆಂಬೆರಡು ಕಣ್ಣಿಂದ ಹಿಂಗದೆ ನೋಡುತ್ತಿ ಹನೆಂಬು ‘ಕಂಗಳೆರೆಡೂ ಅದಕ್ಕೆ ಉಭಯಾರ್ಥವೈ’ ಎಂಬ ಶಬ್ದಕ್ಕರ್ಥ. ಅಂತು ದೆಲ್ಲಲಿಂಗವೆಯಾಗಿ ಲಿಂಗವನೆ ನೋಡುತ್ತಿಪ್ಪ ಲಿಂಗಭಾವ ಘಟಿಸಿದ ಪರಿ

ದೊಡೆ, ಆ ಶರಣಂಗೆ ಮಹಾಘನಲಿಂಗವು ಸ್ವಾನುಭಾವದಿಂದ ಸರ್ವಾಂಗವೆಲ್ಲ ಲಿಂಗಮಯಾದ ಕಾರಣ ಶರಣನ ಮನಭಾವಂಗಳೆಲ್ಲ ಲಿಂಗದೃಕ್ಕಾಗಿರ್ದವೆಂಬುದೀಗ ಲಿಂಗ ನಿನ್ನಯ ದೀಕ್ಷೆ ಸ್ವಾನುಭವದಲಾಗೆ 'ಲಿಂಗನಿನ್ನಯ ಮನವು ಯೊಗಿನಾಥಾ' ಎಂಬ ಶಬ್ದಕ್ಕರ್ಥ. ”

ಶ್ರೀಗುರು ಕರುಣಿಸಿದ ದೀಕ್ಷೆಯಿಂದ ಶರಣನ ಮನಭಾವಗಳು ಮಬ್ಬಿಗೆ ಬೀಳದೆ ಅರಿವಿನಿಂದ ಅನುಭಾವದಿಂದ ಅರಳಿ ಅಚ್ಚ ಬೆಳಗಿನಲ್ಲಿದ್ದು ಲಿಂಗನೇತ್ರಗಳಾಗಿರುತ್ತವೆಯೆಂದು ಇದಕ್ಕೆ ಅಂಗ ಲಿಂಗಗಳೆರಡರ ಮದುವೆಯೇ ಅಂದರೆ ದೀಕ್ಷೆಯೇ ಕಾರಣವೆಂದು ಶರಣವಾಣಿಯ ಸದಾಶಯ.

ಶರಣನಾದರೂ ಶ್ರೀಗುರುದೇವನ ಸ್ಮರಣೆಯನ್ನು ಬಿಡಬಾರದು. ಬಿಟ್ಟರೆ ಜ್ಯೋತಿರ್ಮಯ ಲಿಂಗವಿರದು. ಇಲ್ಲದ ಮೇಲೆ ತಮಸ್ಸು ಆವರಿಸದೆ ಬಿಡದು.

“ಒಡನೆ ಹುಟ್ಟಿದುದಲ್ಲ ; ಒಡನೆ ಬೆಳೆದುದಲ್ಲ.
ಎಡೆಯಲಾದೊಂದುಡಿಗೆಯನುಟ್ಟು ಸಡಲಿದರೆ
ಲಜ್ಜೆ ನಾಚಿಕೆಯಾಯಿತ್ತೆಂಬ ನುಡಿ ದಿಟವಾಯಿತ್ತು ಲೌಕಿಕದಲ್ಲಿ ;
ಹಡೆದ ಗುರುಕರುಣದೊಡನೆ ಹುಟ್ಟಿದ ನೇಮ ಬಿಡದಿರೆಲವೋ
ಬಿಟ್ಟರೆ ಕರಕಷ್ಟ. ಕೂಡಲಸಂಗಮದೇವ
ನಡೆಸಿ ಕೆಡಹುವ ನಾಯಕ ನರಕದಲ್ಲಿ.”

ಅಚ್ಚಲಿಂಗವಂತನಿಗೆ, ತಾಯಿಗರ್ಭದ ಎಂಟನೆಯ ತಿಂಗಳಲ್ಲಿಯೇ ಗುರುವಿನ ಉಪದೇಶ (ಲಘುದೀಕ್ಷೆ) ವನ್ನು ಪಡೆದವನಿಗೆ ತಾಮಸವು ಒಡಹುಟ್ಟಿದುದಲ್ಲ, ಒಡನೆ ಬೆಳೆದುದಲ್ಲ. ಆತ್ಮನು ಅನಾದಿ ಮಲಬದ್ಧನಲ್ಲ. ನಡುವೆ ನೇಮ ತಪ್ಪಿ ಬಂದುದನ್ನೆ ಬಲವಾಗಿ ಕೈಹಿಡಿದಿರುವುದು ಸರಿಯಲ್ಲ. ಜ್ಯೋತಿರ್ಮಯವಾದ ಲಿಂಗನೇಮ ಹುಟ್ಟಿನೊಡನೆ ಬಂದಿದೆ; ಬೆಳದಿದೆ. ಇಂತಹದನ್ನು ಬಿಟ್ಟರೆ ಕರಕಷ್ಟ ತಪ್ಪದು. ಕತ್ತಲೆಯಳಿಯದು. ನರಕಕ್ಕೆ ನಡೆಯಬೇಕಾಗುವುದು. ಇದನರಿತು ಶರಣನು ಶಿವಜ್ಞಾನಿಯಾದ ಶಿವಾನಂದವುಳ್ಳ ತನ್ನ ಗುರುದೇವನನ್ನು ಮರೆಯಬಾರದು ; ಮರವೆಯ ಮಬ್ಬಿಗೆ ಬೀಳಬಾರದು. ಮರೆದು ಮಾನವನಾಗದೆ ಅರಿದು ಶರಣನಾಗಬೇಕು.

"ಯಸ್ಯ ಜ್ಞಾನಂ ತಮೋಮಿಶ್ರಂ ನ ತಸ್ಯ ಗತಿರಿಷ್ಯತೇ ।
ಸತ್ವಂ ಹಿ ಜ್ಞಾನ ಯೋಗಸ್ಯ ನೈರ್ಮಲ್ಯಂ ವಿದುರುತ್ತಮಾಃ" ॥೨॥

ತಾಮಸ ಜ್ಞಾನಿಗೆ ತಾತ್ತ್ವಿಕವಾಗಿ ಸದ್ಗತಿಯಾಗದು. ಸಾತ್ವಿಕ ಜ್ಞಾನವೇ ಜ್ಞಾನ. ಸತ್ವಗುಣವೇ ಜ್ಞಾನಯೋಗಕ್ಕೆ ನಿರ್ಮಲವಾದ ಸಾಧನವೆಂದು ಉತ್ತಮರು ತಿಳಿಯುವರು.

ಸಾತ್ವಿಕಜ್ಞಾನ, ರಾಜಸಜ್ಞಾನ, ತಾಮಸಜ್ಞಾನವೆಂದು ಜ್ಞಾನ ಮೂಬಗೆ. ರಾಜಸ-ತಾಮಸ ಜ್ಞಾನಗಳಿಗೆ ಸದ್ಗತಿಯಿಲ್ಲ. ಸಾತ್ವಿಕ ಜ್ಞಾನ ಯೋಗದಿಂದ ಪರಾಗತಿ; ರಾಜಸ ಜ್ಞಾನದಿಂದ ಅಪರಾಗತಿ. ತಾಮಸ ಜ್ಞಾನದಿಂದ ಯಾವ ಗತಿಯೂ ಇಲ್ಲ. ದುರ್ಗತಿಯೇ ಗತಿ. ತಿರೆಯಲ್ಲಿ ತಮೋ ಮಿಶ್ರವಾದ ಜ್ಞಾನವುಳ್ಳವರಿದ್ದಾರೆ. ಅವರು ಶರಣರಾಗುವುದಿರಲಿ ಮಾನವರಾಗಲೂ ಸಹ ಸಾಧ್ಯವಿಲ್ಲ. ಮಾನವರಾಗಿಯೂ ಪಶುಗಳಂತಿರುತ್ತಾರೆ. ಅವರು ಯಾವಾಗಲೂ ಅವಿದ್ಯೆ ಅಸ್ಮಿತ ರಾಗ ದ್ವೇಷ ಅಭಿನಿವೇಶಗಳಿಂದ ವರ್ತಿಸುತ್ತಾರೆ. ಅವರ ದಿನಮಾನವೆಲ್ಲವೂ ದುರ್ವೃತ್ತಿಯಲ್ಲಿಯೇ ಕಳೆಯುತ್ತದೆ. ಅವರ ಜನ್ಮ ವ್ಯರ್ಥವಾಗುತ್ತದೆ.

"ಮಲಮಜ್ಞಾನಮಿತ್ಯುಕ್ತಂ ಸಂಸಾರಾಂಕುರ ಕಾರಣಂ ।
ತತ್ತಮಸ್ತೇನ ತಮಸಾಯುಕ್ತೋ ಯಸ್ತಾಮಸಃ ಸ್ಮೃತಃ" ॥

—ಶಿವಧರ್ಮೋತ್ತರ

ಭವಬೀಜ ಮೊಳೆಯಲು ಕಾರಣವಾದ ಅಜ್ಞಾನ ಅದೊಂದು ಮಾಯಾ ಮಲ. ಅದುವೇ ತಮಸ್ಸು. ಅದರಿಂದ ಕೂಡಿದವನು ತಾಮಸನು. ತಮೋ ಮಿಶ್ರ ಜ್ಞಾನವುಳ್ಳವನು. ಅರ್ಥಾತ್ ಅಜ್ಞಾನಿ. ಅವನಿಗೆ ನೋವಿಲ್ಲದ ನಿಮಿಷವಿರುವುದಿಲ್ಲ. ದುಮ್ಮಾನವಿಲ್ಲದ ದಿನವಿರುವುದಿಲ್ಲ. ಅವನ ಬಾಳು ಅದೊಂದು ಹೊರಲಾರದ ಹೊರೆ; ನರಕ ಸಾಗರಕ್ಕೆ ಸೆಳೆದೊಯ್ಯುವ ತೊರೆ. ಅವನಿಗಿರುವುದಿಲ್ಲ ಒಳ್ಳೆಯ ನೆರೆ ಹೊರೆ. ಈ ಬಳಗವೆ ಹೆಚ್ಚು. ಸಾತ್ವಿಕ ಜ್ಞಾನಯೋಗವುಳ್ಳ ಶರಣ ತೀರ ಅಪರೂಪ.

"ಬಟ್ಟ ಬಯಲೆಲ್ಲ ಗಟ್ಟಿಗೊಂಡರೆ,
ಸ್ವರ್ಗ ಮರ್ತ್ಯ ಪಾತಾಳಕ್ಕೆ ಠಾವಿನ್ನೆಲ್ಲಿಯದೋ ?
ಮೇಘದ ಜಲವೆಲ್ಲ ನಿರ್ಮಳ ಮುತ್ತಾದರೆ,
ಸಪ್ತ ಸಾಗರಕೆ ಉದಕವಿನ್ನೆಲ್ಲಿಯದೋ ?
ಕಷ್ಟಜೀವಿ ಮಾನವರೆಲ್ಲ ನೆಟ್ಟನೇ ಶಿವಜ್ಞಾನಿಗಳಾದರೆ,
ಭವದ ಬೆಳೆ ಇನ್ನೆಲ್ಲಿಯದಯ್ಯ ?
ಇದು ಕಾರಣ, ಕೂಡಲಚೆನ್ನಸಂಗಯ್ಯನಲ್ಲಿ
ಲಕ್ಷಕ್ಕೊಬ್ಬ ಭಕ್ತ, ಕೋಟಿಗೊಬ್ಬ ಶರಣ."

ನಿರ್ಮಲ ಜ್ಞಾನಿ ನಿಜ ಶರಣ. ಶಿವ ಸುಖಿ ಸತ್ಯ ಶರಣ. ನಿರ್ಮಲ ಜ್ಞಾನಿಯಾಗಬೇಕಾದರೆ ಮೂರು ಮೈಗಳಲ್ಲಿರುವ ಮುಮ್ಮಲವಳಿದಿರಬೇಕು. ಮುಮ್ಮಲವಳಿಯಬೇಕಾದರೆ,

"ಅಂಗಲಿಂಗದಲ್ಲಿ ತರಹರವಾಗಿ,
ಮನ ಜ್ಞಾನದಲ್ಲಿ ತರಹರವಾಗಿ,
ಭಾವ ನಿರ್ಭಾವದಲ್ಲಿ ತರಹರವಾಗಿ,
ಸಮತೆ ಶಾಂತಿಯಲ್ಲಿ ತರಹರವಾಗಿ,
ಇರಬಲ್ಲಾತನೇ ಅಚ್ಚ ಶರಣ ಗುಹೇಶ್ವರಾ."

ನಿರ್ಮಲ ನಿಜಜ್ಞಾನ ದೊರಕೊಳ್ಳುವುದು ಸುಲಭವಲ್ಲ; ಸರ್ವರಿಗೆ ಸಾಧ್ಯವಿಲ್ಲ. ಸತ್ವಯುತವಾದ ನಿರ್ಮಲ ಜ್ಞಾನಯೋಗವನ್ನು ಸಂಪಾದಿಸಬೇಕಾದರೆ ಮೊದಲು ಅಂಗ ಲಿಂಗದಲ್ಲಿ ನಿಶ್ಚಲವಾಗಿ ಲಿಂಗಸ್ವರೂಪವೇ ಆಗಿರಬೇಕು. ಹಾಗಾದಾಗ ಆತನ ಮನ ಜ್ಞಾನ ಸಂಪನ್ನವಾಗಿ ಶಿವಜ್ಞಾನದಲ್ಲಿ ಅವಿರಳವಾಗುತ್ತದೆ. ಮನ ಜ್ಞಾನಸಂಪನ್ನವಾದ ಬಳಿಕ ಭಾವ ನಿರ್ಭಾವವಾಗುತ್ತದೆ. ಅಂದರೆ ತನ್ನ ಸ್ವರೂಪವಾಗುತ್ತದೆ. ಸ್ವಸ್ವರೂಪ ಸಾಕ್ಷಾತ್ಕಾರವಾದವನಿಗೆ ಸಮುದರ್ಶಿತ್ವವುಂಟಾಗುತ್ತದೆ; ಶಾಂತಿಯುಂಟಾಗುತ್ತದೆ. ಕೊನೆಗೆ ಶಾಂತಿ ಸಂಕಲ್ಪವೂ ಇಲ್ಲದಂತಾಗುತ್ತದೆ. ಅದೇ ಶಾಂತ್ಯತೀತಾವಸ್ಥೆ. ಅದುಳ್ಳವನೇ ಅಚ್ಚ ಶರಣ. ಅವನದೇ ಸತ್ವಯುತವಾದ ನಿರ್ಮಲಜ್ಞಾನಯೋಗ. ಅದುಳ್ಳವನಿಗೆ

ತಾಮಸಾವರಣವಿರದು ತಾಮಸಕ್ಕೆ ಮೂಲವಾದ ತನುಮನಭಾವಾದಿಗಳೇ

ಇಲ್ಲದ ಮೇಲೆ ತಮೋಭಾವಗಳಿರಲು ಸಾಧ್ಯವಿಲ್ಲ. ಅಚ್ಚಶರಣನಿಗೆ ಶರೀರವಿಲ್ಲ; ಶರೀರವಿಲ್ಲವಾಗಿ ಆದರ ನೆರಳು ಮೊದಲಿಲ್ಲ.

> "ಉಷ್ಣತೆಯು ಒರತೆಯಂತೆ, ಉರಿಯು ನೆಳಲಂತೆ,
> ಮಂಜಿನ ಮಳೆಯಂತೆ, ಬಿಸಿಲ ಕುದುರೆಯಂತೆ.
> ಬೆಟ್ಟದ ಶಬ್ದದಂತೆ, ಸಂಳಿವ ಸಿದ್ಧ ಸೋಮನಾಥಲಿಂಗ
> ನಿಮ್ಮ ಶರಣ.

ಬಿಸಿಯಿಂದಾದ ಬೆವರು ಒರತೆಯೆನಿಸದು. ಉರಿಯ ನೆರಳು ತಂಪೀಯದು; ಅದು ನೆರಳಲ್ಲ. ಮಂಜುಹನಿ ಮಳೆಯಲ್ಲ. ಬಿಸಿಲ ಕುದುರೆ ಕುದುರೆಯಲ್ಲ. ಅದನ್ನು ಹತ್ತಿ ಹೋಗಲಾಗುವುದಿಲ್ಲ. ಬೆಟ್ಟದ ಶಬ್ದ ಶಬ್ದವಲ್ಲ. ಅದು ಬೆಟ್ಟದ್ದೂ ಅಲ್ಲ. ಅದರಂತೆ ಶರಣನ ಶರೀರ ಶರೀರವಲ್ಲ. ಅದು ಲಿಂಗತನು. ಆತನಿಗೆ ದೇಹಾಚರಣೆಯಿದ್ದರೂ ಅದು ಆತನಿಗೆ ಸಂಬಂಧಿಸುವುದಿಲ್ಲ. ನಿರ್ದೇಹಿಯಾದ ಕಾರಣ ನಿಮ್ಮಳನಾಗಿರುತ್ತಾನೆ.

> "ಉಚ್ಛಿಷ್ಟದ ಉದಕದೊಳಗೆ ಚಂದ್ರಮನ ನೆಳಲಿದ್ದರೇನು ?
> ಆ ಚಂದ್ರಮನಾ ಉಚ್ಛಿಷ್ಟದೊಳಗಣ ಉದಕದಲ್ಲಿದ್ದಾತನೆ ? ಅಲ್ಲಲ್ಲ;
> ಸಂಸಾರದ ವ್ಯಾಪಕದೊಳಗೆ ಶರಣನ ಕಾಯವಿದ್ದರೇನೊ ? ಆ
> ಶರಣ ಆ ಸಂಸಾರದೊಳಗಿದ್ದಾತನೆ ? ಅಲ್ಲಲ್ಲ. ಕೆಸರೊಳಗಣ
> ತಾವರೆಯಂತೆ, ಮರದೊಳಗಣ ಬಯಲಿನಂತೆ ಇದ್ದೂ ಇರನು.
> ಇದು ಕಾರಣ, ಕೂಡಲ ಚನ್ನಸಂಗಯ್ಯ, ನಿಮ್ಮ ಶರಣನುಂಡು
> ಉಪವಾಸಿ, ಬಳಸಿ ಬ್ರಹ್ಮಚಾರಿ."

ನಿರ್ಮಲ ಜ್ಞಾನಯೋಗವುಳ್ಳವನಿಗೆ ತಮೋಮಲ ತೊಡರದು. ತನುಮಲ ಮನೋಮಲ ಭಾವಮಲಗಳೂ ತೊಡರವು. ಒಟ್ಟಿನಲ್ಲಿ ಮಂತ್ರಾರ್ಥವಿಷ್ಟು; ಅಜ್ಞಾನಿಗೆ ಗತಿಯಿಲ್ಲ; ಜ್ಞಾನಿಗೆ ದುರ್ಗತಿಯಿಲ್ಲ. ಜ್ಞಾನಗಳಲ್ಲಿ ಶಿವಜ್ಞಾನವೇ ಸತ್ವಯುತವಾದುದು, ನಿರ್ಮಲವಾದುದು. ಶಿವಜ್ಞಾನಿಯೇ ತಾಮಸನಿರಸನ ಮಾಡಬಲ್ಲ; ತಾತ್ವಿಕವಾಗಿ ಶರಣನೆನಿಸಬಲ್ಲ.

“ಶಮೋ ದಮೋ ವಿವೇಕಶ್ಚ ವೈರಾಗ್ಯಂ ಪೂರ್ಣಭಾವನಾ ।
ಕ್ಷಾಂತಿಃ ಕಾರುಣ್ಯ ಸಂಪತ್ತಿಃ ಶ್ರದ್ಧಾ ಸತ್ಯ ಸಮುದ್ಭವಾ ॥೩॥
ಶಿವಭಕ್ತಿಃ ಪರೋಧರ್ಮಃ ಶಿವಜ್ಞಾನಸ್ಯ ಬಾಂಧವಾಃ ।
ಏತೈರ್ಯುಕ್ತೋ ಮಹಾಯೋಗೀ ಸಾತ್ವಿಕಃ ಪರಿಕೀರ್ತಿತಃ ॥೪॥”

ಶಮೆ, ದಮೆ, ವಿವೇಕ, ವೈರಾಗ್ಯ, ಪೂರ್ಣಧ್ಯಾನ, ಸಹನೆ, ಜೀವದಯೆ, ಸತ್ಯದಲ್ಲಿ ಶ್ರದ್ಧೆ, ಶಿವಭಕ್ತಿ, ಶಿವಧರ್ಮ–ಇವು ಹತ್ತು ಶಿವಜ್ಞಾನದ ಬಾಂಧುಗಳು. ಇವುಳ್ಳ ಮಹಾಯೋಗಿ ಸಾತ್ವಿಕನೆಂದು ಹೇಳಿಸಿಕೊಳ್ಳುವನು.

ಅಂತರಿಂದ್ರಿಯಸಂಯಮನ, ಬಹಿರಿಂದ್ರಿಯಸಂಯಮನ, ವಸ್ತು ಮೀಮಾಂಸೆ, ವಿಷಯವಿರತಿ, ಕೊರತೆಯಿಲ್ಲದ ನೆನಹು, ತಾಳ್ಮೆ, ಕರುಣೆ, ಶ್ರದ್ಧೆ, ಶಿವಭಕ್ತಿ, ಶಿವಧರ್ಮಗಳಿದ್ದರೆ ಶಿವಜ್ಞಾನಕ್ಕೆ ಭೂಷಣ. ಇವೆಲ್ಲವುಗಳ ಸಮನ್ವಯವೆ ಶಿವಜ್ಞಾನವೆನಿಸುತ್ತದೆ. ಇವುಳ್ಳವನೇ ಸಾತ್ವಿಕನೆನಿಸುತ್ತಾನೆ.

ಸತ್ವ ಪ್ರಕಾಶಮಯವಾದುದು. ನಿರ್ಮಲವಾದುದು. ಶಿವ ಸುಖಕ್ಕೆ ಸಾಧನವಾದುದು. ಅಂತೆಯೇ ಶಿವಜ್ಞಾನಕ್ಕೂ ಸಾಧನವಾದುದು. ಸತ್ವ ಸಿದ್ಧಿಯಿಂದ ಸುಖ ಶಾಂತಿಗಳು; ಸಮ್ಯಗ್‌ಜ್ಞಾನ ಸಮ್ಯಕ್ಕ್ರಿಯೆಗಳು. ಸತ್ವವು ತಮೋರಜೋಗುಣಗಳನ್ನು ಅಣಗಿಸುತ್ತವೆ. ಅವುಗಳಿಂದುಂಟಾಗುವ ದುರ್ಗುಣಗಳನ್ನೂ ದೂರಮಾಡುತ್ತವೆ. ಶಮದಮಾದಿಗಳಿಂದ ಸರ್ವಾಂಗದಲ್ಲಿ ಶುಭ್ರತೆಯುಂಟಾಗುತ್ತದೆ, ಶಿವತ್ವವುಂಟಾಗುತ್ತದೆ ; ಶಿವಜ್ಞಾನ ಸಮೃದ್ಧಿಯಾಗುತ್ತದೆ. ಇದೇ ಅಭಿಪ್ರಾಯವನ್ನು ಭಗವದ್ಗೀತೆಯೂ ಹೇಳಿದೆ.

“ಸರ್ವದ್ವಾರೇಷು ದೇಹೇಽಸ್ಮಿನ್ ಪ್ರಕಾಶ ಉಪಜಾಯತೇ ।
ಜ್ಞಾನಂ ಯದಾ ತದಾ ವಿದ್ಯಾದ್ವಿವೃದ್ಧಂ ಸತ್ತ್ವಮಿತ್ಯುತ ॥”

ಸತ್ವಗುಣದ ಬೆಳವಣಿಗೆಗೆ ಸಾತ್ವಿಕತೆಗೆ ಇದು ಕುರುಹು. ದೇಹೇಂದ್ರಿಯ ಕರಣಗಳಲ್ಲಿ ಶಿವಪ್ರಕಾಶವುಂಟಾಗಿ ಶಿವಜ್ಞಾನ ಸಂವೃದ್ಧಿಗೊಂಡಿರುತ್ತದೆ

ಶಮದಮಾದಿ ದಶಗುಣಗಳಿಂದ ಕೂಡಿದ ಶರಣನು ಸಾತ್ವಿಕನೆನಿಸಿ ಶಿವನ ಮಹಾಯೋಗವನ್ನು ಪಡೆಯುತ್ತಾನೆ; ಮಹಾಯೋಗಿಯೆಂದೆನಿಸುತ್ತಾನೆ. ಶಿವಜ್ಞಾನವನ್ನು ಶಿವಾನಂದವನ್ನು ಪಡೆಯುವುದಕ್ಕೆ ಶಿವಯೋಗ

ಮತ್ತೊಂದಿಲ್ಲ. 'ಸತ್ತ್ವಾತ್ಸಂಜಾಯತೇ ಜ್ಞಾನಂ' 'ಸಾತ್ವಿಕಂ ನಿರ್ಮಲಂ ಫಲಂ' 'ಊರ್ಧ್ವಂ ಗಚ್ಛಂತಿ ಸತ್ತ್ವಸ್ಥಾಃ' ಈ ದಿಸೆಯಲ್ಲಿ ಈ ಮಾತುಗಳು ಗಮನಾರ್ಹವಾಗಿದೆ. ಜತೆಗೆ ಶರಣ ಸತ್ತ್ವದಲ್ಲಿ ಕೇವಲ ಸತ್ತ್ವಗುಣವೊಂದೇ ಇರುವುದಿಲ್ಲ. ಜತೆಗೆ ದಶಗುಣಗಳಿವೆ. ಈ ದಶಗುಣಗಳು ದಿವ್ಯವಾಗಿವೆ. ಒಂದಕ್ಕಿಂತ ಒಂದು ಮಿಗಿಲಾಗಿವೆ. ಪೂರ್ಣಭಾವನೆ, ಕಾರುಣ್ಯಸಂಪತ್ತಿ, ಸತ್ಯಶ್ರದ್ಧೆ, ಶಿವಭಕ್ತಿ, ಪರಧರ್ಮ ಇವು ಅಯ್ದು ವಿಶೇಷ ಗಮನೀಯವಾದವು. ಇವುಗಳಿಂದ ವ್ಯಕ್ತಿ ವಿಶ್ವಗಳೆರಡರಲ್ಲಿ ಶಿವಭಾವವುಂಟಾಗುತ್ತದೆ. ಶಿವಾನಂದ ರೂಪ ಪರಮಾಮೃತ ಲಭಿಸುತ್ತದೆ.

ಸತ್ತ್ವವೇ ಶ್ರೇಷ್ಠವಾದುದು ; ಅದರೊಡನೆ ಪೂರ್ಣಭಾವ, ಶಿವಭಕ್ತಿ, ಪರಮಧರ್ಮ ಕಾರುಣ್ಯಾದಿಗಳು ಕೂಡಿದರೆ ಕೇಳುವುದೇನು ? ಅದಕ್ಕಿಂತ ಪರಿಪೂರ್ಣತೆ ಬೇರಿಲ್ಲ, ಪರಮ ಪರಿಣಾಮ ಬೇರಿಲ್ಲ. ಆ ಪರಮಸತ್ತ್ವ ಅಗಾಧವಾದುದು ; ಅಸದೃಶವಾದುದು. ಅದರ ಮುಂದೆ ಮತ್ತಾವುದರ ಆಟ ಸಾಗದು.

"ಕಾಮಕ್ರೋದ ಮಹಾಮೋಹ ಮದ ಮಾತ್ಸರ್ಯವಾರಣಾಃ ।
ಶಿವಜ್ಞಾನಮೃಗೇಂದ್ರಸ್ಯ ಕಥಂ ತಿಷ್ಠಂತಿ ಸನ್ನಿಧೌ ॥೫॥"

ಶಿವಜ್ಞಾನ ಅದೊಂದು ಸಿಂಹ. ಅದು ಸರ್ವ ಮೃಗಗಳಿಗೆ ರಾಜ. ಅದಕ್ಕಿದೆ ಪರಶಿವ ತೇಜ ; ಪರಮಸತ್ತ್ವ. ಅದರ ಮುಂದೆ ಅರಿಷಡ್ವರ್ಗಳೆಂಬ ಆನೆಗಳು ನಿಲ್ಲವು. ಅಂದರೆ ಶಿವಜ್ಞಾನ ಸತ್ತ್ವವುಳ್ಳ ಶರಣನಿಗೆ ಕಾಮಾದಿ ವಿಕಾರಗಳಿರುವುದಿಲ್ಲ. ಶರಣನು ಮನಸ್ಸೆಂಬ ಮದಗಜವನ್ನು ಮರ್ದಿಸಿರುತ್ತಾನೆ; ಪಳಗಿಸಿರುತ್ತಾನೆ. ಶಿವಜ್ಞಾನವೆಂಬ ಅರಸನನ್ನು ಅದರ ಮೇಲೆ ಏರಿಸಿ ಕೂರಿಸಿರುತ್ತಾನೆ. ಕಾಮಾದಿಗಳಿಗೆ ಕಾರಣವಾದ ಆಶ್ರಯವಾದ ಮನಸ್ಸನ್ನು ಶರಣನು ಶಿವಜ್ಞಾನಾಚರಣೆಯಲ್ಲಿ ತೊಡಗಿಸಿರುತ್ತಾನೆ. ಅರಿಷಡ್ವರ್ಗಳಿಗೆ ಆಶ್ರಯವೀಯದೆ ಅನುಭಾವದಾನಂದದಲ್ಲಿರಿಸಿರುತ್ತಾನೆ.

ಶಿವಯೋಗ ಅಥವಾ ಶರಣಯೋಗ ಅದೊಂದು ಮಹಾಯೋಗ. ಅದುಳ್ಳ ಶರಣನೇ ಮಹಾಯೋಗಿ. ಈತನ ಮಹಾಯೋಗಕ್ಕೆ ಕಾಮಾದಿಗಳು ವಿಘ್ನಗಳು. ಇವನ್ನು ತನ್ನ ಶೈವೀಜ್ಞಾನದಿಂದ ಸಂಯಮನ ಮಾಡಬೇಕು. ಇದಕ್ಕಾಗಿ ಶಿವಜ್ಞಾನವೆಂಬ ಸಿಂಹವನ್ನು ಸಲಿಗೆಯಿಂದ ಸಾಕಬೇಕು. ಶಿವ

ಜ್ಞಾನ ಸಮನಿಸಬೇಕಾದರೆ ಶಮೆ ದಮೆ ವಿವೇಕ ವೈರಾಗ್ಯಾದಿಗಳಿರಬೇಕು. ಇವುಗಳಿಂದ ಸಾಮಾನ್ಯವಲ್ಲದ ಶಿವಪ್ರಜ್ಞೆಯುಂಟಾಗುತ್ತದೆ. ಶಿವಶೌರ್ಯವುಂಟಾಗುತ್ತದೆ.

ಜ್ಞಾನ ಸಾಮಾನ್ಯ ಅಸಾಮಾನ್ಯವೆಂದು ಇತ್ತೆರ. ಸಾಮಾನ್ಯ ಜ್ಞಾನ ಲೌಕಿಕ ; ಅಸಾಮಾನ್ಯಜ್ಞಾನ ಅಲೌಕಿಕ, ಶಾಂಭವ. ಲೌಕಿಕ ಜ್ಞಾನ ಅನೇಕ ; ಅಲೌಕಿಕ ಜ್ಞಾನ ಏಕ. ಅಲೌಕಿಕ ಜ್ಞಾನಕ್ಕೆ ಶಮದಮಾದಿ ದಶಗುಣಗಳ ಅವಶ್ಯಕತೆಯಿದೆ. ಶರೀರಾದಿ ಜ್ಞಾನ ಬಾಹ್ಯದ್ರವ್ಯಗಳ ಜ್ಞಾನ ಲೌಕಿಕಜ್ಞಾನ ; ಇದು ಅಪೂರ್ಣಜ್ಞಾನ. ಆತ್ಮಜ್ಞಾನ ಅಲೌಕಿಕ ಜ್ಞಾನ ; ಇದು ಪೂರ್ಣ ಜ್ಞಾನ, ವಿವೇಕ ವೈರಾಗ್ಯಗಳಿಲ್ಲದೆ ಆತ್ಮಜ್ಞಾನ ಅಳವಡದು. ವಿವೇಕವೆಂದರೆ ವಿಶ್ಲೇಷಣ. ವಿಂಗಡಿಸಿ ವಿವೇಚಿಸಿ ಅರಿವ ಅರಿಕೆ ; ಗುರುತಿಸುವ ಗುರಿ. ಬಹಿರಂಗ ಅಂತರಂಗ ಶುದ್ಧಿಯಿಲ್ಲದೆ ವಿವೇಕವುಂಟಾಗದು ; ವಿಷಯವಿರತಿಭಾವವುಂಟಾಗದು. ಇವು ಬಾರದೆ ಪೂರ್ಣಭಾವ ಪ್ರಾಪ್ತವಾಗದು.

ಶಮೆ ದಮೆ ವಿವೇಕ ವೈರಾಗ್ಯ ಪೂರ್ಣಭಾವ ಈ ಅಯ್ದು ಸಾಧನೆಯ ಒಂದು ಘಟ್ಟ. ಮಂಗಳಮಯ ಜೀವನವನ್ನು ಬಯಸುವವನು ಇವನ್ನು ಆರ್ಜಿಸಲೇಬೇಕು. ಶಮೆ ಬಹಿರಿಂದ್ರಿಯ ಶುದ್ಧಿ–ಶಾಂತಿ. ದಮೆ ಅಂತರಿಂದ್ರಿಯ ಶುದ್ಧಿ,-ಸಂಯಮ, ವಿವೇಕವು ಶಿವ-ಅಶಿವಗಳ ವಿವೇಚನ ಶಕ್ತಿ, ವೈರಾಗ್ಯ ಅಶಿವದಲ್ಲಿ ವಿರಾಗ. ಇವು ನಾಲ್ಕು ನೆಲಸಿದರೆ ಪೂರ್ಣಭಾವ ಪ್ರಾಪ್ತವಾಗುತ್ತದೆ. ಪೂರ್ಣಭಾವದ ನೆರವಿನಿಂದ ಸಹನೆ ಕರುಣೆ ಶ್ರದ್ಧೆ ಶಿವಭಕ್ತಿ ಪರಧರ್ಮಗಳು ಮೈಗೂಡುತ್ತವೆ. ಅದು ಪೂರ್ಣ, ಇದು ಪೂರ್ಣ–ಎಂಬ ಭಾವವುಂಟಾದರೆ ಯಾವುದರ ಮೇಲೆಯೂ ಅಸಹನೆಯುಂಟಾಗದು ; ಅಕರುಣೆಯುಂಟಾಗದು. ಋಜುಮಾರ್ಗದಲ್ಲಿ ಶ್ರದ್ಧೆ ತಾನಾಗಿಯೇ ಉಂಟಾಗುತ್ತದೆ. ಶ್ರದ್ಧೆಯ ಬೆಂಬಳಿವಿಡಿದು ಶಿವಭಕ್ತಿ, ಶಿವಭಕ್ತಿಯ ಬೆಂಬಳಿವಿಡಿದು ಪರಧರ್ಮಗಳು ಪ್ರಾಪ್ತವಾಗಿ ಅಸಾಮಾನ್ಯ ಶಿವಜ್ಞಾನ ಸಮನಿಸುತ್ತದೆ ; ಶಿವಯೋಗಕ್ಕೆ ವಿಘ್ನಗಳಾದ ಕಾಮಾದಿಗಳು ಅಡಗುತ್ತವೆ. ಶಿವಜ್ಞಾನದಿಂದ ಸಂಶಯ ವಿಪರ್ಯಯ ವಿಕಲ್ಪಾದಿಗಳು ತೊಲಗುತ್ತವೆ. ಶಿವಜ್ಞಾನವು ಪೂರ್ಣ ಜ್ಞಾನ ; ಅಖಂಡಜ್ಞಾನ ಆದರಿಂದ ಎಲ್ಲವನ್ನೂ ತಿಳಿಯಬಹುದು. ಅದಿರುವಲ್ಲಿ ಸಂಶಯಾದಿಗಳಿಗಿಂಬಿರುವುದಿಲ್ಲ. ಭವದ ಭ್ರಮೆಯಿರುವುದಿಲ್ಲ. ಅಶಿವ

ವೃತ್ತಿಗಳಿರುವುದಿಲ್ಲ. ಶಿವವೇ ಆಧಾರ ಶಿವವೇ ಆಶ್ರಯ ಎಂಬ ಏಕೈಕ ಪ್ರಜ್ಞೆ ಅಳವಡುತ್ತದೆ. ಪೂರ್ಣಭಾವ ಕಷ್ಟಸಹಿಷ್ಣುತೆ ನಷ್ಟಸಹನೆ ಸರ್ವಜೀವನ ಸರ್ವಜೀವ ದಯಾಪಾರಿತ್ವಗಳು ಸಂಭವಿಸುತ್ತವೆ.

ಧ್ಯೇಯವಸ್ತು ಶಿವ. ಆ ಶಿವ ಜ್ಞಾನವಿಲ್ಲದೆ ಸತ್ಯಶ್ರದ್ಧೆಯುಂಟಾಗದು ; ಶಿವಭಕ್ತಿಯುಂಟಾಗದು. ಶಿವ ಭಕ್ತಿಯುಂಟಾಗದೆ ಶಿವಸಾಮರಸ್ಯ ಸಮನಿಸದು.

"ಕೊರತೆಯಿಲ್ಲದ ಶಂಭುಲಿಂಗದೊಡನೆ ಮನವೆರಕವಾಗಿ ನಿಂದು ಕರಿಗೊಂಡಿರಲು ಮಹಾಯೋಗವಾದೊಡೆ ನೆರೆಮುಕ್ತಿಯಹುದು." ಎಂದು ನಿಜಗುಣರು ನಿರೂಪಿಸಿದ್ದಾರೆ.

ಶಿವ ಪೂರ್ಣವಸ್ತು. ಅಂತೆಯೇ ಶಿವಜ್ಞಾನವೂ ಪೂರ್ಣಜ್ಞಾನ. ಆ ಪೂರ್ಣವಸ್ತುವಿನಲ್ಲಿ ಮನ ಎರಕವಾಗದೆ ಅರಿವು ಕರಿಗೊಳ್ಳದೆ ಆ ಮಹಾಯೋಗ ವೈಗೊಡದು.

ಶಿವವಸ್ತು ಪೂರ್ಣವಾದಂತೆ ಪ್ರಶಾಂತವೂ ಅಹುದು ; ಪಾವನವೂ ಅಹುದು. ಇವೆರಡನ್ನು ಬಯಸುವ ಶರಣನು ಅರಿಷಡ್ವರ್ಗಗಳನ್ನು ನಿಗ್ರಹಿಸಬೇಕು. ನಿಗ್ರಹಿಸಿದರೆ ಶಾಂತತೆ ಶುದ್ಧತೆಗಳು ಸಮನಿಸುತ್ತವೆ. ಪೂರ್ಣತೆ ಪ್ರಾಪ್ತವಾಗುತ್ತದೆ.

ಇದು ಪಟ, ಅದು ಘಟ ಎಂಬ ಜ್ಞಾನ ಸಾಮಾನ್ಯ ಜ್ಞಾನ. ಘಟ ಪಟಗಳೆರಡೂ ಶಿವಸ್ವರೂಪವೆಂಬ ಜ್ಞಾನ ಅಸಾಮಾನ್ಯ ಜ್ಞಾನ. ಇದಕ್ಕೆ ಇದು-ಅದು ಎಂಬ ಭೇದವಿಲ್ಲ. ಭೇದವಿಲ್ಲವಾಗಿ ನಾಮರೂಪಗಳಿಲ್ಲ ಆ ಶಿವಜ್ಞಾನವನ್ನೇ ಶಾಂತಜ್ಞಾನವೆಂದು ಹೇಳಬಹುದು ಅದು ಪರಧರ್ಮಸ್ವರೂಪವೂ ಅಹುದು ; ಪರಶಿವಧರ್ಮಿಯಲ್ಲಿ ಲೀನವಾದ ಪರಧರ್ಮ ಪೃಥಕ್ಕಾಗಿ ತೋರದು. ಅನುದಿತವಾಗಿ ಶಾಂತವಾಗಿರುತ್ತದೆ. ಶಾಂತಚಿತ್ತದಲ್ಲಿ ಕಾಮಾದಿಗಳು ಕಾಣಿಸವು. ಕಾಯೇಂದ್ರಿಯಗಳು ಚಲಿಸವು.

ಕಾಮಾದಿಗಳು ಅವ್ಯಕ್ತಗಳು. ಚಿತ್ತಧರ್ಮಗಳು. ಅವು ಕಾರ್ಯಗಳಿಂದ ಅಭಿವ್ಯಕ್ತಗಳು ; ಕಾರ್ಯಾನುಮೇಯಗಳು. ಕರ್ಮಕಾರಣಗಳು. ಇವಿರುವಲ್ಲಿ ತಿಳಿವಿನ ಬೆಳಗಿರುವುದಿಲ್ಲ. ಶಿವಭಾವವಿರುವುದಿಲ್ಲ. ಇದರಿಂದ ಇವುಗಳ ಪರಿವರ್ತನವಾಗಬೇಕು.

ವಾರಣಪದ ಧ್ವನಿಪೂರ್ಣವಾಗಿದೆ. ವಾರಣ ಶಬ್ದಕ್ಕೆ ಆನೆ, ತಡೆ,ಮರೆ, ನಿವಾರಣೆ, ಮೋಡ, ಕವಚ ಮುಂತಾದ ಅರ್ಥಗಳಿವೆ ಕಾಮಾದಿ ವಾರಣಗಳನು ಪಳಗಿಸಿದವನು ಶರಣನು; ಪರಿವರ್ತಿಸಿದವನು ಶರಣನು. ದಾನ ಮತ್ತು ಜಂಗಮಕಾಮನಾಗಿ ಭಕ್ತನೆನಿಸುತ್ತಾನೆ. ದುರ್ಗುಣ–ದುರ್ಗುಣಿಗಳಲ್ಲಿ ಕ್ರೋಧವುಳ್ಳಾತನಾಗಿ ಮಾಹೇಶ್ವರನೆನಿಸುತ್ತಾನೆ. ಪ್ರಸಾದಲೋಭಿಯಾಗಿ ಪ್ರಸಾದಿಯೆನಿಸುತ್ತಾನೆ. ಪ್ರಾಣಲಿಂಗಮೋಹಿಯಾಗಿ ಪ್ರಾಣಲಿಂಗಿಯೆನಿಸುತ್ತಾನೆ. ಶಿವಸರ್ವೋತ್ತಮಿಕೆಯಲ್ಲಿ ಮದವುಳ್ಳವನಾಗಿ ಶರಣನೆನಿಸುತ್ತಾನೆ. ಅನ್ಯೈಕ್ಯತೆಯ ವಿಷಯದಲ್ಲಿ ಮತ್ಸರವುಳ್ಳವನಾಗಿ ಐಕ್ಯನೆನಿಸುತ್ತಾನೆ; ಮತ್ತು ನುತಿವೆತ್ತು ಕೈಸಾರುವ ಮನೋರಥ–ಮಹಾಲಿಂಗವ್ರತಗಳುಳ್ಳವನಾಗಿರುತ್ತಾನೆ.

ಚಿತ್ತಧರ್ಮಗಳು ಚಿತ್ತಸಂಸ್ಕಾರಗಳು ಚಿತ್ತಶಕ್ತಿ ಭಕ್ತಿಗಳು ಚಿತ್ತಪರಿಣಾಗಳು ಸಾಧನಭೇದದಿಂದ ಅಥವಾ ಗುಣಧರ್ಮಗಳ ಭೇದದಿಂದ ಭಿನ್ನಭಿನ್ನವಾಗಿರುತ್ತವೆ. ಅವೆಲ್ಲವನ್ನು ಶರಣನು ಶಿವೈಕವಸ್ತುವಿನಲ್ಲಿ ಕೇಂದ್ರೀಕರಿಸುತ್ತಾನೆ; ಸತ್ವಶಾಲಿಯಾಗುತ್ತಾನೆ; ಶಿವಸಂವಿತ್ತುಳ್ಳವನಾಗುತ್ತಾನೆ. ಪೂರ್ವಧರ್ಮಗಳನ್ನೆಲ್ಲ ಪರಧರ್ಮದಲ್ಲಿ ಅಂತರ್ಭಾವಗೊಳಿಸುತ್ತಾನೆ. ಪೂರ್ವಶಕ್ತಿಗಳನ್ನೆಲ್ಲ ಪರಾಶಕ್ತಿಯಲ್ಲಿ ಸಮನ್ವಯವಾಗಿಸುತ್ತಾನೆ. ಪೂರ್ವಜ್ಞಾನಗಳನ್ನೆಲ್ಲ ಪರಮಶಿವ ಜ್ಞಾನದಲ್ಲಿ ಪ್ರವೇಶಿಸುತ್ತಾನೆ.

ಶಮದಮಾದಿ ಸಂಯಮಶಕ್ತಿ ಅಗಾಧವಾದುದು, ಅಂತರಿಂದ್ರಿಯ ನಿರೋಧವನ್ನು ಆ ಆ ಚಕ್ರಗಳಲ್ಲಿ ಮಾಡುವುದರಿಂದ ಅಪೂರ್ವ ಶಕ್ತಿ ಅಳವಡುತ್ತದೆ ಅತ್ಯಂತ ಸೂಕ್ಷ್ಮಜ್ಞಾನ ಅಳವಡುತ್ತದೆ. ಆಧಾರ ಸಂಯಮನದಿಂದ ಕ್ರಿಯಾಶಕ್ತಿ, ಸ್ವಾಧಿಷ್ಠಾನಸಂಯಮದಿಂದ ಜ್ಞಾನಶಕ್ತಿ, ಮಣಿಪೂರಕ ಸಂಯಮದಿಂದ ಇಚ್ಛಾಶಕ್ತಿ. ಅನಾಹತ ಸಂಯಮದಿಂದ ಆದಿಶಕ್ತಿ, ವಿಶುದ್ಧಿ ಸಂಯಮದಿಂದ ಪರಾಶಕ್ತಿ, ಆಜ್ಞಾಸಂಯಮದಿಂದ ಚಿಚ್ಛಕ್ತಿ ಸಂಭವಿಸುತ್ತವೆ. ಅಷ್ಟಾಂಗ ಯೋಗಾಚಾರ್ಯರ ಮತದಂತೆ, 'ನಾಭಿಚಕ್ರೇ ಕಾಯವ್ಯೂಹಜ್ಞಾನಂ' 'ಕಂಠಕೂಪೇ ಕ್ಷುತ್ಪಿಪಾಸಾನಿವೃತ್ತಿಃ' 'ಕೂರ್ಮನಾಡ್ಯಾಂ ಸ್ಥೈರ್ಯಂ' 'ಮೂರ್ಧಜ್ಯೋತಿಷಿ ಸಿದ್ಧದರ್ಶನಂ' 'ಪ್ರತಿಭಾದ್ವಾ ಸರ್ವಂ' 'ಹೃದಯೇ ಚಿತ್ತಸಂವಿತ್' 'ಸತ್ವಪುರುಷಯೋರತ್ಯಂತಾಸಂಕೀರ್ಣಯೋಃ ಪ್ರತ್ಯಯಾವಿಶೇಷೋ ಭೋಗಪರಾರ್ಥತ್ವಾತ್ ಸ್ವಾರ್ಥಸಂಯಮಾತ್ ಪುರುಷಜ್ಞಾನಂ' 'ತತಃಪ್ರಾತಿಭ ಶ್ರಾವಣ ವೇದನಾ

ದರ್ಶಾಸ್ವಾದವಾರ್ತಾ ಜಾಯಂತೇ' ಈ ಏಳೆಂಟು ಸೂತ್ರಗಳಲ್ಲಿ ನಾಭಿಯಿಂದ ಶಿರದವರೆಗೂ ಅಲ್ಲಲ್ಲಿ ಚಿತ್ತವನ್ನು ಸಂಯಮನ ಮಾಡುವುದರಿಂದ ಆಗುವ ಫಲಗಳ ಜ್ಞಾನಗಳ ವಿವರಣೆಯಿದೆ.

ಅಂತರಂಗದಲ್ಲಿ ಅತಃಕರಣಗಳನ್ನು ಉತ್ತರೋತ್ತರದಲ್ಲಿ ಸಂಯಮನ ಮಾಡುವುದರಿಂದ ಸಾತ್ವಿಕತೆ ಹೆಚ್ಚುತ್ತ ಹೋಗುತ್ತದೆ. ಅಂತೆಯೇ ಜ್ಞಾನವೂ ಬೆಳೆಯುತ್ತದೆ. ಬೆಳದಂತೆ ಒಂದು ಅಪೂರ್ವವಾದ ಅತ್ಯಂತ ಶುಭ್ರವಾದ ಅಂತಃಪ್ರತಿಭೆ ಅಭಿವೃದ್ಧಿಯಾಗುತ್ತದೆ. ಪ್ರಾತಿಭಚಕ್ಷು ಅರಳುತ್ತದೆ. ಅದುವೇ ಶಿವಜ್ಞಾನ. ಅದರಿಂದ ತಮೋಗುಣ ತಮದಕಾರ್ಯ ತಮದಫಲಗಳು ತೊಲಗುತ್ತವೆ.

ಶಾಂತವಾದ ಸ್ವಯಂ ಪ್ರಜ್ಞೆಯೇ ಶಿವಜ್ಞಾನ. ಅದರಿಂದ ಶಿವಜೀವರ ಪರಿಜ್ಞಾನವಾಗುತ್ತದೆ. ಈ ದಿಸೆಯಲ್ಲಿ 'ಸತ್ವಪುರುಷಯೋರತ್ಯಂತಾ ಸಂಕೀರ್ಣಯೋಃ ಪ್ರತ್ಯಯಾವಿಶೇಷೋ ಭೋಗಪರಾರ್ಥತ್ವಾತ್ ಸ್ವಾರ್ಥಸಂಯಮಾತ್ ಪುರುಷಜ್ಞಾನಂ' ಎಂಬ ಯೋಗಸೂತ್ರ ಗಮನಾರ್ಹವಾಗಿದೆ. ಶರಣ ಜೀವನ ಸಂದೇಶವಾಗಿದೆ.

ಶರಣನು ತುರೀಯಾವಸ್ಥೆಯಲ್ಲಿ ಭೋಗವನ್ನು ತುರೀಯಾತೀತಾವಸ್ಥೆಯಲ್ಲಿ ಯೋಗವನ್ನು ಅಂದರೆ ಮೋಕ್ಷವನ್ನು ಪಡೆಯುತ್ತಾನೆ,

ಕಿಂಚಿತ್ ರಜೋಮಿಶ್ರವಾದ ಸಾತ್ವಿಕತೆಯೇ ತುರೀಯಾವಸ್ಥೆ. ತಮೋರಜೋಗುಣಗಳೆರಡರ ಮಿಶ್ರಣವಿಲ್ಲದೆ ಕೇವಲ ಸಾತ್ವಿಕತೆಯೇ ತುರೀಯಾತೀತಾವಸ್ಥೆ, ತುರೀಯಾವಸ್ಥೆಯಲ್ಲಿ ಶಿವ-ಶರಣರು ಭಿನ್ನರಾಗಿರುತ್ತಾರೆ. ತುರೀಯಾತೀತಾವಸ್ಥೆಯಲ್ಲಿ ಅಭಿನ್ನರಾಗಿರುತ್ತಾರೆ. ಇಲ್ಲಿ ಪ್ರತ್ಯಯಾವಶೇಷವೆ ಕಾರಣ ; ಅಲ್ಲಿ ಸ್ವಾರ್ಥ ಸಂಯಮವೆ ಕಾರಣ. ಇದರಿಂದ ಆ ಪರಶಿವನೆಂಬ ಪರಮಪುರುಷ ಜ್ಞಾನವುಂಟಾಗುತ್ತದೆ. ಈ ಜ್ಞಾನದಿಂದ ಪ್ರಾತಿಭ, ಶ್ರಾವಣ, ವೇದನ, ಆದರ್ಶ, ಆಸ್ವಾದ, ವಾರ್ತಾ ಎಂಬ ಆರು ಬಗೆಯ ಸಿದ್ಧಿಗಳು ಸಮನಿಸುತ್ತವೆ. ಪ್ರಾತಿಭ ಅಂದರೆ ಅಸಾಧಾರಣವಾದ ಪ್ರಜ್ಞೆ, ಶ್ರಾವಣವೆಂದರೆ ದಿವ್ಯಶಬ್ದ ಶ್ರವಣ. ವೇದನವೆಂದರೆ ದಿವ್ಯಸ್ಪರ್ಶಾನುಭವ. ಆದರ್ಶವೆಂದರೆ ದಿವ್ಯರೂಪದರ್ಶನ, ಆಸ್ವಾದವೆಂದರೆ ದಿವ್ಯರಸಾನುಭವ, ವಾರ್ತಾ ಎಂದರೆ ದಿವ್ಯ ವಾಸನಾನುಭವ ಇವು ಆ ಪರಶಿವಜ್ಞಾನದಿಂದ ಸಂಭವಿಸುತ್ತವೆ. ಸ್ವಾರ್ಥರಹಿತನಾದ ಶರಣನಲ್ಲಿ ಇವೆಲ್ಲವೂ ಇರುತ್ತವೆ.

ಹಿಂದಿನ ಸೂತ್ರದಲ್ಲಿ ಹೇಳಿದ ಪುರುಷಜ್ಞಾನ ಆರು ಬಗೆಯೆಂದು ಈ ವಿವರಣೆಯಿಂದ ಸ್ಫುಟವಾಗುತ್ತದೆ. ಮಹಾಲಿಂಗವೇ ಪ್ರಾತಿಭಪುರುಷ. ಅವನ ಸಿದ್ಧಿ ಮನಸ್ಸಿಗುಂಟಾಗತ್ತದೆ. ಅಂದರೆ ಮನಸ್ಸಿಗೆ ಮಹಾಪ್ರತಿಭೆಯುಂಟಾಗುತ್ತದೆ. ಶ್ರಾವಣ ರೂಪ ಪ್ರಸಾದಲಿಂಗ ಜ್ಞಾನ ಶ್ರೋತ್ರಕ್ಕೆ, ವೇದನ (ಸ್ಪರ್ಶ) ರೂಪ ಜಂಗಮಲಿಂಗಜ್ಞಾನ ಸ್ಪರ್ಶೇಂದ್ರಿಯಕ್ಕೆ, ರೂಪಾಧಿಷ್ಠಾನ ಶಿವಲಿಂಗ ಜ್ಞಾನ ನೇತ್ರಕ್ಕೆ, ರಸಾಧಿಷ್ಠಾನ ಗುರುಲಿಂಗ ಜ್ಞಾನ ಜಿಹ್ವೆಗೆ, ವಾಸನಾಧಿಷ್ಠಾನ ಆಚಾರಲಿಂಗಜ್ಞಾನ ಘ್ರಾಣಾಂಗಕ್ಕೆ ಆಗುತ್ತವೆಯೆಂದು ಅಭಿಪ್ರಾಯ. ಇವೆಲ್ಲದರ ಸಮರಸರೂಪವೇ ಶಿವಜ್ಞಾನ; ಅದೇ ಕೇವಲ ಸಾತ್ವಿಕ ಸ್ವರೂಪ. ಆ ಸ್ವರೂಪವುಳ್ಳ ಶರಣನಿಗೆ ಶಾಂತವೃತ್ತಿ ಇರುವುದಲ್ಲದೆ ರಾಜಸ ತಾಮಸಗಳಿಂದ ಉಂಟಾಗುವ ಘೋರ-ಮೂಢ ವೃತ್ತಿಗಳಿರುವುದಿಲ್ಲ. ಕಾಮ ಕ್ರೋಧಾದಿಗಳು ರಾಜಸಗುಣ ಜನ್ಯ ಘೋರವೃತ್ತಿಗಳು.

"ಯತ್ರ ಕುತ್ರಾಪಿ ವಾ ದ್ವೇಷ್ಟಿ ಪ್ರಪಂಚೇ ಶಿವರೂಪಿಣಿ
ಶಿವದ್ವೇಷೀ ಸ ವಿಜ್ಞೇಯೋ ರಜಸಾಽಽವಿಷ್ಟ ಮಾನಸಃ" ॥೬॥

ವಾಸ್ತವವಾಗಿ ಶಿವಸ್ವರೂಪವಾಗಿದೆ ಈ ಪ್ರಪಂಚ. ಹೀಗಿದ್ದರೂ ರಜೋಗುಣಜನ್ಯವಾದ ರಾಗದ್ವೇಷಕ್ಕೆ ಒಳಗಾಗಿ ಪ್ರಪಂಚದ ಯಾವ ಅಂಶದಲ್ಲಿಯೇ ಆಗಲಿ ದ್ವೇಷವನ್ನು ಮಾಡಿದರೆ ಅವನು ಶಿವದ್ವೇಷಿಯಾಗುತ್ತಾನೆ.

ಶರಣನಿಗೆ ಯಾರಲ್ಲಿಯೂ ದ್ವೇಷಾಸೂಯೆಗಳಿರಬಾರದು. ಇದ್ದರೆ ಆತನ ಶಿವಜ್ಞಾನಕ್ಕೆ ಭಂಗ; ಶಿವಧರ್ಮಕ್ಕೆ ಭಂಗ. ಸಾಲದ್ದಕ್ಕೆ ರಜೋಗುಣಿಯೆನಿಸುತ್ತಾನೆ. ಘೋರವೃತ್ತಿಗೊಳಗಾಗುತ್ತಾನೆ.

ರಾಗಾತ್ಮಕವಾಗಿದೆ ರಜೋಗುಣ. ಆದರಿಂದಾಗಿ ತೃಷ್ಣೆ ಅತಿಯಾಗುತ್ತದೆ. ತೃಷ್ಣೆ ತೀರದಿದ್ದರೆ ಕ್ರೋಧದ್ವೇಷಗಳಿಗೆ ಅವಕಾಶವನ್ನು ಕಲ್ಪಿಸುತ್ತದೆ. ಘೋರ ಕರ್ಮಕ್ಕೆ ಇಳಿಸುತ್ತದೆ. ಚಂಚಲತೆಯನ್ನುಂಟುಮಾಡುತ್ತದೆ. ಲೋಭ ಪ್ರವೃತ್ತಿ ಅಶಾಂತಿ ದುರಿಚ್ಛೆಗಳು ಬೆಳೆಯುತ್ತವೆ. ಮೋಹ ಮದ ಮತ್ಸರಗಳು ಮಿತಿಮೀರುತ್ತವೆ.

ಲೌಕಿಕ ಕಾಮಾದಿಗಳು ರಾಜಸಗಳು. ಅಲೌಕಿಕ ಕಾಮಾದಿಗಳು ಸಾತ್ವಿಕಗಳು. ಇವು ಶಾಂತವೃತ್ತಿ ಮೂಲಗಳು.

"ಯೋ ದ್ವೇಷ್ಟಿ ಸಕಲಾನ್ ಲೋಕಾನ್ ಯೋವಾಽಹಂಕುರತೇ ಸದಾ ।
ಯೋಽಸತ್ಯಭಾವನಾಯುಕ್ತಃ ಸ ತಾಮಸ ಇತಿ ಸ್ಮೃತಃ ॥೭॥
ತಮೋ ಮೂಲಾಹಿ ಸಂಜಾತಾ ರಾಗದ್ವೇಷಾದಿ ಪಾದಪಾಃ ।
ಶಿವಜ್ಞಾನ ಕುಠಾರೇಣ ಛೇಂದ್ಯಂತೇ ಹಿ ನಿರಂತರಂ" ॥೮॥

ಸರ್ವರನ್ನು ದ್ವೇಷಿಸುವವನು, ಯಾವಾಗಲೂ ಹಮ್ಮಿನಲ್ಲಿ ಇರುವವನು, ಅಸತ್ಯಭಾವದಿಂದ ಕೂಡಿದವನು ತಾಮಸಿಯು.

ರಾಗ ದ್ವೇಷಗಳೆಂಬ ವೃಕ್ಷಗಳು ತಮಸ್ಸಿನಿಂದ ಹುಟ್ಟುತ್ತವೆ; ಮತ್ತು ತಮಸ್ಸೆ ಅವಕ್ಕೆ ಬೇರುಗಳಾಗಿವೆ. ಅವನ್ನು ಕಡಿದು ಕೆಡುಹಬೇಕಾದರೆ ಶಿವಜ್ಞಾನವೆಂಬ ಕೊಡಲಿಬೇಕು ಶಿವಜ್ಞಾನದ ಮುಂದೆ ಎಂದಿಗೂ ರಾಗದ್ವೇಷಗಳು ಬೇರೂರಿ ನಿಲ್ಲವು.

ತಮೋಗುಣಿಯು ಮೂಢವೃತ್ತಿಯಲ್ಲಿರುತ್ತಾನೆ. ಅಂದರೆ ಅಜ್ಞಾನಿಯಾಗಿರುತ್ತಾನೆ. ಮೋಹದಲ್ಲಿ ಮುಳುಗಿರುತ್ತಾನೆ. ಹಗೆತನ ಹೆಚ್ಚಿರುತ್ತದೆ. ಹಮ್ಮು ಹೊಲಬನ್ನು ಮೀರಿರುತ್ತದೆ. ಅಸತ್ಯ, ಅಸಾವಧಾನ, ಆಲಸ್ಯ ನಿದ್ರಾದಿಗಳು ಮನೆ ಮಾಡಿರುತ್ತವೆ. ತಾಮಸಿಯ ಬಾಳಿನಲ್ಲಿ ತೇಜಸ್ಸಿರುವುದಿಲ್ಲ. ಸತ್ವವೃತ್ತಿಯಿರುವುದಿಲ್ಲ. ಪ್ರಮಾದಗಳಿಗೆ ಪರಿಮಿತಿಯಿರುವುದಿಲ್ಲ. ಇವೆಲ್ಲ ತೊಲಗಬೇಕಾದರೆ ಶಿವಜ್ಞಾನವಿದ್ದಾಗಬೇಕು. ತಮೋವೃತ್ತಿಯಿಂದ ಮನೋಭೂಮಿಯಲ್ಲಿ ಬೆಳೆದುನಿಂತ ರಾಗದ್ವೇಷಗಳನ್ನು ತೊಡೆದು ಹಾಕುವ ಸಾಮರ್ಥ್ಯ ಶಿವಜ್ಞಾನಕ್ಕಿರುತ್ತದೆ. ಶಿವಜ್ಞಾನಿಯಾದ ಶರಣನಿಗಿರುತ್ತದೆ. "ರಾಗದ್ವೇಷರಹಿತನಾಗಿ, ಮೋಹಕ್ಕೆ ಕಾರಣವೇ ಶೋಕ, ಶೋಕಕ್ಕೆ ಕಾರಣವೇ ಮೋಹವೆಂದರಿದು, ಸುಖ ದುಃಖ-ಶೋಕ ಮೋಹಂಗಳ ಸಮಾನಗಂಡುದು; ಇದಕ್ಕೆ ಶ್ರುತಿಃ "ತತ್ರ ಕೋ ಮೋಹಃ ಕಃ ಶೋಕಃ ಏಕತ್ವ ಮನುಪಶ್ಯತಃ" ಎಂದುದಾಗಿ, ಸೌರಾಷ್ಟ್ರ ಸೋಮೇಶ್ವರನ ಶರಣರು ಷಡೂರ್ಮಿರಹಿತರು. "ಗುರುವೆನಲು ಕೊರೆವುದು ಜನನ ಮರಣದ ಬೇರು ನೋಡಾ. ಗುರುವೆನಲು ಸುಡುವುದು ಭವಾರಣ್ಯ ನೋಡಾ. ಗುರುವೆನಲು ಕಡಿವುದು ಭವ ಕುಜಲತೆಗಳು ನೋಡಾ. ಇಂತಪ್ಪ ಸದ್ಗುರುವಿಂಗೆ ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ."

"ಶಿವಜ್ಞಾನೇ ಸಮುತ್ಪನ್ನೇ ಸಹಸ್ರಾದಿತ್ಯಸನ್ನಿಭೇ ।
ಕುತಸ್ತಮೋವಿಕಾರಾಸ್ಸ್ಯುರ್ಮಹತಾಂ ಶಿವಹೋಗಿನಾಂ" ॥೯॥

ಸಾಸಿರ ನೇಸರ ಬೆಳಗುಳ್ಳದು ಶಿವಜ್ಞಾನ. ಅದಿರುವಲ್ಲಿ ತಮೋಗುಣದ ವಿಕಾರಗಳಿರುವುದಿಲ್ಲ. ಅಂತಹ ಶಿವಜ್ಞಾನಿಗಳಾದ ಮಹಾ ಶಿವಯೋಗಿಗಳಿಗೆ ತಮೋವಿಕಾರದ ಮಾತೆಂಬುದಿಲ್ಲ.

ಶಿವ ಸಂವಿತ್ಪ್ರಭೆಗೆ ಸರಿಯಿಲ್ಲ. ಅದು ತೇಜಸ್ಸುಗಳಿಗೆಲ್ಲ ತೇಜಸ್ಸು. ಅದುಳ್ಳ ಮಹಾಶಿವಯೋಗಿ ಮಹಾ ತೇಜಸ್ವಿ.

> "ಅಯ್ಯಾ, ಲೋಕಾರ್ಥ ಪರಮಾರ್ಥದ ಸಂದು ಸಂಶಯದವನಲ್ಲ ನೋಡಾ, ನಿರವಯ ಶೂನ್ಯಮೂರ್ತಿಯಾದ ಶರಣನು.
> ಅದೆಂತೆಂದೊಡೆ :
>
> ಮಳೆ ಹೊಯ್ದಡೆ ಆಕಾಶ ನೆನೆವುದೆ ?
> ಬಿರುಗಾಳಿ ಬೀಸಿದಡೆ ಆಕಾಶ ಅಲಗುವುದೆ ?
> ಕಿತ್ತಲಗಿನಿಂದ ಹೊಯ್ದರೆ ಆಕಾಶ ಹರಿವುದೆ ?
> ನಿಜವಸ್ತುವ ಕುಶಾಸ್ತ್ರ ಖಂಡಿಸಬಲ್ಲುದೆ ?
> ಭೂಮಿಗೂ ಆಕಾಶಕ್ಕೂ ಏಕತ್ವವುಂಟೆ ?
> ಕಿಚ್ಚಿಗೂ ನೀರಿಗೂ ಏಕತ್ವ ಉಂಟೆ ?
> ಗಾಳಿಗೂ ದೂಳಿಗೂ ಏಕತ್ವ ಉಂಟೆ ?
> ನೀರಿಗೂ ನೆಳಲಿಗೂ ಏಕತ್ವ ಉಂಟೆ ?
> ಕನ್ನಡಿಗೂ ಪ್ರತಿಬಿಂಬಕ್ಕೂ ಏಕತ್ವವುಂಟೆ ?
> ತಮಕ್ಕೂ ಬೆಳದಿಂಗಳಕ್ಕೂ ಏಕತ್ವ ಉಂಟೆ ?
> ಅಂಗ ಮನ ಪ್ರಾಣ ಇಂದ್ರಿಯ ವಿಷಯ ಕರಣಂಗಳೆಲ್ಲ
> ಪರತತ್ತ್ವ ಚಿದ್ಘನ ನಿಜಪ್ರಸಾದದಲ್ಲಿ ಐಕ್ಯವಾದ
> ಗುಹೇಶ್ವರ ಪ್ರಭುವೆಂಬ ಶರಣಂಗೆ
> ಇಹಪರಂಗಳ ಪ್ರಪಂಚಿನ ಹೊದ್ದಿಕೆ ಹೊದ್ದದು ನೋಡಾ."

ಶಿವಜ್ಞಾನವುಳ್ಳ ಶಿವಯೋಗಿಗೆ ತಮೋವಿಕಾರವಿಲ್ಲ. ಶಿವಜ್ಞಾನ ಭವ ವಿಕಾರವನ್ನು ಕಳೆಯಬಲ್ಲ ತೇಜಸ್ಸುಳ್ಳದು.

“ಅರುಣೋದಯಕ್ಕೆ ಕತ್ತಲೆ ಹರಿದು ಬೆಳಗು
ಪರಿಷ್ಕರಿಸಿದಂತೆ ಸಮಗ್ ಜ್ಞಾನೋದಯವಾಗಿ
ಅಜ್ಞಾನ ಬೀಜ ಮಲಸಂಸಾರ ತೊಲಗಿ
ಪರಮಾತ್ಮ ತಾನೆಂದರಿದು, ಆ ಅರಿದರಿವು
ಕರಿಗೊಂಡು ಪರಶಿವನೊಡನೆ ಸಮಭಾವಿಯಾದಾತನೆ
ಮುಕ್ತನಯ್ಯ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ.”

ಶಿವಜ್ಞಾನಿಯಾದ ಶರಣನಿಗೆ ಅಜ್ಞಾನವೆಂಬ ಬೀಜವಿಲ್ಲ. ಮಲದಿಂದ ಕೂಡಿದ ಸಂಸಾರವಿಲ್ಲ. ಶಿವಕಳೆಯೇ ಶರಣನಾಗಿರುತ್ತಾನೆ. ಆದ್ದರಿಂದ ಆತ ಶಿವ-ಶರಣ; ಅಂಥವನಿಂದ ಭವ ಹರಣ. ಅವನೇ ಚಿದಾಭರಣ. ಅವನಿಗಿಲ್ಲ ತಾಮಸಾವರಣ.

ತಮೋ ವಿಕಾರ ತಾಮಸ. ತಾಮಸವೆಂದರೆ ಅವಿದ್ಯೆ. ಅವಿದ್ಯೆ ಅಂತರಾತ್ಮ ಪರಮಾತ್ಮರನ್ನು ಆಚ್ಛಾದಿಸುತ್ತದೆ. ಸೂರ್ಯನ ಕಿರಣಗಳಿಂದಾದ ಮೋಡಗಳು ಸೂರ್ಯನನ್ನೇ ಆಚ್ಛಾದಿಸುವಂತೆ ಪರಮಾತ್ಮನಿಂದಾದ ತಮಸ್ಸು ಆತನನ್ನೇ ಆಚ್ಛಾದಿಸುತ್ತದೆ. ಆಗ ಅವನು ಆತ್ಮನೆಂದೆನಿಸುತ್ತಾನೆ. ತ್ರಿಮಲಗಳಿಂದ ಕೂಡಿರುತ್ತಾನೆ. ತ್ರಿಮಲಗಳೂ ತಾಮಸವೆನಿಸುತ್ತವೆ. ಇವನ್ನು ನಿರಸನ ಮಾಡದೆ ಆತ್ಮನಿಗೆ ಪರಮಾತ್ಮತ್ವ ನಿರ್ದೇಶವಾಗುವುದಿಲ್ಲ.

ಆಣವ ತಮಸ್ಸಿನಿಂದ ಆಚ್ಛಾದಿತನಾಗಿ ತಾನು ಅಣುವೆಂದು, ಮಾಯಾಮಲದಿಂದ ಆಚ್ಛಾದಿತನಾಗಿ ತಾನು ಭಿನ್ನನೆಂದು ಕಾರ್ಮಿಕ ಮಲಾಚ್ಛಾದಿತನಾಗಿ ತಾನು ಕರ್ಮಿ ಎಂದು-ಭಾವಿಸುತ್ತಾನೆ. ಇದರಿಂದಾಗಿ ಜೀವನೆನಿಸುತ್ತಾನೆ. ಸ್ವಸ್ವರೂಪಜ್ಞಾನವಿಲ್ಲದೆ ನಿರ್ದೇಶ ಕ್ಷಿಪ್ತನಾಗಿ ಮೂಢನಾಗಿ ಇರುತ್ತಾನೆ. ಈ ತ್ರಿವಿಧ ತಾಮಸಗಳನ್ನು ತೊಳೆದು ತೊಲಗಿಸಿದರೆ ವಿಲ್ಲದೆ ಇರುತ್ತಾನೆ.

ಆಗ ಚಿತ್ಪ್ರಕಾಶವುಂಟಾಗುತ್ತದೆ. ಆ ಪ್ರಕಾಶದಲ್ಲಿ ಸ್ವಸ್ವರೂಪ ಪರಮತ್ತ್ವ ನಿರ್ದೇಶಿತವಾಗುತ್ತದೆ.

> "ಇನನ ಕರದಲ್ಲಿ ತಮವಿದ್ದು ಬದುಕಬಲ್ಲುದೆ ?
> ವಾಯುವಿನ ಹಸ್ತದಲ್ಲಿ ಸೊಡರಿದ್ದು ಬೆಳಗಬಲ್ಲುದೆ ?
> ಉರಿಯ ಮುಖದಲ್ಲಿ ಕರ್ಪೂರವಿದ್ದು ಉಳಿಯಬಲ್ಲುದೆ ?
> ಸೌರಾಷ್ಟ್ರ ಸೋಮೇಶ್ವರನ ಶರಣರ ಮುಂದೆ ಕರಣ ಮಥನ, ಇಂದ್ರಿಯದಿಚ್ಛೆ,
> ತನುಗುಣ, ಮನಗುಣ, ಪ್ರಾಣಗುಣಾದಿಗಳಿರಬಲ್ಲವೆ ?"

೩. ನಿರ್ದೇಶ ಸ್ಥಲಂ

ತಮೋಗುಣ ನಿರಾಕರಣದಿಂದಾಗುವ ಫಲವೇ ನಿರ್ದೇಶ. ತೋರಿಸುವಿಕೆ, ಗುರುತಿಸುವಿಕೆ, ಅಪ್ಪಣೆ, ಉಪದೇಶ, ಆಜ್ಞೆ-ಇವು ನಿರ್ದೇಶದರ್ಥಗಳು. ತಾಮಸ ನಿರಸನವಾದ ಬಳಿಕ ಶಿವವೆಂದರೇನು ? ಜ್ಞಾನವೆಂದರೇನು ? ಶಿವಜ್ಞಾನದಿಂದ ಏನಾಗುವುದು? ಎಂಬವನ್ನು ಅರಿವಿಗೆ ತಂದು ತೋರಿಸುವುದು-ತೋರಿದುದನ್ನು ಗುರುತಿಸುವುದು- ಗುರುತಿಸುವಂತೆ ಗುರುದೇವನು ಉಪದೇಶಿಸುವುದು ಅಥವಾ ಅಪ್ಪಣೆಯನೀಯುವುದು 'ನಿರ್ದೇಶ'ವೆನಿಸುತ್ತದೆ. 'ನಿರ್-ದೇಶಂ ನಿರ್ದೇಶಂ' ದೇಶಾತೀತವಾದುದೆಂದೂ ಅರ್ಥವಾಗುತ್ತದೆ.

ವಸ್ತು ನಿರ್ದೇಶ್ಯ, ಅನಿರ್ದೇಶ್ಯ ಎಂದು ಎರಡು ತೆರ. ವ್ಯಕ್ತಿಯಲ್ಲಿ ಇಷ್ಟಲಿಂಗ ನಿರ್ದೇಶ್ಯ; ಪ್ರಾಣಲಿಂಗ ಭಾವಲಿಂಗಗಳು ಅನಿರ್ದೇಶ್ಯಗಳು. ವಿಶ್ವದಲ್ಲಿ ವಿಶ್ವಸ್ವರೂಪನಾದ ಶಿವನು ನಿರ್ದೇಶ್ಯ; 'ಸರ್ವ ಜಗನ್ಮಯಂ ಶಿವಂ' ಇದು ನಿರ್ದೇಶ್ಯವಸ್ತು. ವಿಶ್ವಾತೀತವಾದ ಸರ್ವಶೂನ್ಯ ನಿರಾಲಂಬವಸ್ತು ಅನಿರ್ದೇಶ್ಯ ವಸ್ತು. ಇದಿಷ್ಟು ಸಾಧ್ಯ ನಿರ್ದೇಶದ ಮಾತಾಯಿತು. ಇದಕ್ಕೆ ಮೊದಲು ಸಾಧನ ನಿರ್ದೇಶ ಅಗತ್ಯ. ಇಲ್ಲಿ ಸಾಧನವೆಂದರೆ ಜ್ಞಾನ. ಜ್ಞಾನವೂ ಶ್ರೀಗುರುದೇವನಿಂದ ಶರಣನಿಗೆ ನಿರ್ದೇಶಿತವಾಗಬೇಕು. ಇದಕ್ಕೆ ಮೋಕ್ಷ ಗುರುವಾಗಬೇಕು.

"ನಿರಾಕೃತ್ಯ ತಮೋಭಾಗಂ ಸಂಸಾರಸ್ಯ ಪ್ರವರ್ತಕಂ ।
ನಿರ್ದಿಶ್ಯತೇ ತು ಯದ್‌ಜ್ಞಾನಂ ಸ ನಿರ್ದೇಶ ಇತಿ ಸ್ಮೃತಃ" ॥೧॥

ಸಂಸಾರ ಪ್ರವೃತ್ತಿಗೆ ಮೂಲಕಾರಣ ತಮೋಗುಣ. ಇದರ ನಿರಾಕರಣವಾದ ಬಳಿಕ ಮೋಕ್ಷಗುರುವಿನಿಂದ ಜ್ಞಾನವು ನಿರ್ದೇಶಿತವಾಗುತ್ತದೆ. ಇದರಿಂದಾಗಿ ಇದು ನಿರ್ದೇಶಸ್ಥಲವೆನಿಸುತ್ತದೆ.

ಸಾತ್ವಿಕನಾದ ಶರಣನಿಗೆ ಶ್ರೀಗುರುವು ಸಾಕಾರಶಿವನ ಮತ್ತು ನಿರಾಕಾರ ಶಿವನ ಜ್ಞಾನವನ್ನು ನಿರ್ದೇಶಿಸುತ್ತಾನೆ, ಸಮಷ್ಟಿಯಲ್ಲಿ ಪ್ರಪಂಚವೆಲ್ಲ ಪರಶಿವಸ್ವರೂಪವಾಗಿದೆ. ಪರಶಿವನನ್ನು ಬಿಟ್ಟು ಪ್ರಪಂಚವಿಲ್ಲ. ಪರಶಿವನು ಪ್ರಪಂಚಾಕಾರವಾಗಿದ್ದಾನೆ. 'ಸರ್ವಂ ಶಿವಮಯಂ ಜಗತ್' ಶಿವಮಯ ಜಗತ್ತು ಜಗನ್ಮಯ ಶಿವನು. ಇದರಿಂದಾಗಿ ಶಿವನಂತೆ ಈ ಸೃಷ್ಟಿಯೂ ಸತ್ಯವಾಗಿದೆ ; ಸಂಪೂರ್ಣವಾಗಿದೆ. ಅವಿಕೃತ ಪರಿಣಾಮವಾಗಿದೆ. ನೀರಿನಂತೆ ಶಿವ; ತೆರೆಯಂತೆ ತಿರೆ. ಶಿವಾದ್ವೈತ ಸಿದ್ಧಾಂತದಲ್ಲಿ ಈ ನಿರ್ದೇಶವೇ ಮುಖ್ಯ.

ಬ್ರಹ್ಮಾದ್ವೈತದಲ್ಲಿ ವಿವರ್ತನಿರ್ದೇಶವಿದೆ. ಇವರ ಈ ವಿವರ್ತವಾದದ ಲಕ್ಷಣವೆಂದರೆ ಅಥವಾ ನಿದರ್ಶನವೆಂದರೆ 'ಹಗ್ಗದಲ್ಲಿ ಹಾವು ಕಂಡಂತೆ' ಭ್ರಾಂತಿವಾದವಾಗಿದೆ ; ಕಲ್ಪನಾವಾದವಾಗಿದೆ. ಕಲ್ಪನೆಯೇ ವ್ಯವಹಾರಯೋಗ್ಯವೆಂದು ವಿಕಾರ ಕಾರಣವೆಂದು ಇವರ ಯೋಚನೆ. ಕಲ್ಪನೆಯೊಂದೇ ವಿಕಾರಕಾರಣವೆಂದಲ್ಲ ; ಕಾರ್ಯವೂ ವಿಕಾರ ವ್ಯವಹಾರಗಳಿಗೆ ಕಾರಣವಾಗಬಲ್ಲುದು ; ಆಗುತ್ತದೆ. ನಿದರ್ಶನಕ್ಕಾಗಿ ಸುವರ್ಣದಿಂದಾದ ಆಭರಣ, ಮಣ್ಣಿನಿಂದಾದ ಹಲವಾರು ಮೂರ್ತಿಗಳು ಪಾತ್ರೆಗಳು ಬೇರೆ ಬೇರೆ ವಿಕಾರ ವ್ಯವಹಾರಗಳಿಗೆ ಕಾರಣವಾಗುವುದು ಜೀವನದಲ್ಲಿ ದೃಷ್ಟವಾಗಿದೆ.

ಒಂದುಕಡೆ 'ಪ್ರಪಂಚ ಸ್ವರೂಪಂ ಬ್ರಹ್ಮ' ಎಂದೊಪ್ಪಿ ಮತ್ತೊಂದು ಕಡೆ ಬ್ರಹ್ಮದಲ್ಲಿ ಯಥಾರ್ಥವಾಗಿ ಪ್ರಪಂಚವಿಲ್ಲೆಂಬುದು ಬ್ರಹ್ಮಾದ್ವೈತವಾದ. ಪರಶಿವನಿಂದಾದ ಪ್ರಪಂಚ ಪರಶಿವನಲ್ಲಿ ಯಥಾರ್ಥವಾಗಿರುವುದೆಂಬುದು ಶಿವಾದ್ವೈತ ವಿದ್ಯಾವಿಶಾರದನಾದ ಶ್ರೀಗುರುದೇವನ ನಿರ್ದೇಶ. ಏಕಾನೇಕ ಸ್ವರೂಪವೇ ಶಿವಸ್ವರೂಪ. ಶಿವನು ಸಕಲ-ಸಕಲ ನಿಷ್ಕಲ-ನಿಷ್ಕಲ ಸ್ವರೂಪ. ಶಿವನು ಜಗವಾಗಬಲ್ಲ; ಜಗವಾಗದಿರಬಲ್ಲ. ಏಕಾನೇಕಸ್ವರೂಪವನ್ನೊಳಗೊಂಡ ಶೂನ್ಯವಸ್ತು ಶಿವ. ನಿಶ್ಶೂನ್ಯನೂ ಸರ್ವಶೂನ್ಯನಿರಾಲಂಬನೂ ಆಗಿರಬಲ್ಲ ಅದ್ವೈತದಲ್ಲಿ 'ಏಕಮೇವ ಅದ್ವೈತಂ ಬ್ರಹ್ಮ' ಎಂದು ಹೇಳಿ ಪರಿವಿಡಿದು ಸಜಾತಿ, ಸ್ವಗತ, ವಿಜಾತಿ ಎಂಬ ಭೇದತ್ರಯಗಳಿಲ್ಲೆನ್ನುತ್ತಾರೆ. ಅದೇ ಶಿವಾದ್ವೈತದಲ್ಲಿ ಸಜಾತಿ ಮತ್ತು ಸ್ವಗತ ಭೇದಗಳು ಸಾಕಾರ ವಸ್ತುವಿಗುಂಟು. ವಿಜಾತಿ ಭೇದವಿಲ್ಲ. ಇದರಿಂದಾಗಿ

ತಟಸ್ಥ ಲಕ್ಷಣವಿಲ್ಲ. ಸರ್ವವೂ ಆತನೇ ಆಗಿರುವಾಗ ವಿಜಾತಿ ಭೇದವೆಲ್ಲಿಯದು ? ತಟಸ್ಥ ಲಕ್ಷಣವೆಲ್ಲಿಯದು ?

ಪರಶಿವನಲ್ಲಿ ಪರಮಶಕ್ತಿಯಿದೆ. ಆ ಶಕ್ತಿಯಿಂದ ಶಿವನು ಸಕಲ-ಸಕಲ-ನಿಷ್ಕಲ-ನಿಷ್ಕಲ ಸ್ವರೂಪನಾಗುವನು. ಆ ಪರಾಶಕ್ತಿ ಆ ಪರಶಿವೆ ಸರ್ವಲೋಕಗಳಿಗೆ ಪ್ರಕೃತಿಯಾಗಿದ್ದಾಳೆ. ಪರಶಿವ ಧರ್ಮಚಾರಿಣಿಯಾಗಿದ್ದಾಳೆ; ಶಿವನ ನಾನಾ ನಾಮರೂಪಗಳಿಗೆ ಕಾರಣಳಾಗಿ ಮಾಯೆಯೆನಿಸಿದ್ದಾಳೆ. ಆದರೆ ಅದ್ವೈತದ ಮಾಯೆಯಲ್ಲ. ಶಿವಾದ್ವೈತದ ಮಾಯೆ ಮಿಥ್ಯವಲ್ಲ. "ಮಾಯಾಂತು ಪ್ರಕೃತಿಂ ವಿಂದ್ಯಾನ್ಮಾಯಿನಂತು ಮಹೇಶ್ವರಃ" 'ಚಿಚ್ಛಕ್ತಿವಲ್ಲಭಃ ಶಿವಃ' 'ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ-ಸ್ವಾಭಾವಿಕೀ ಜ್ಞಾನ ಬಲ ಕ್ರಿಯಾಚ' "ವಾಸುದೇವಃ ಪರಾಪ್ರಕೃತಿಃ-ಯಾ ಉಮಾ ಸಾಸ್ವಯಂ ವಿಷ್ಣುಃ" ಎಂದು ಶಿವಾದ್ವೈತ ಶಕ್ತಿಯನ್ನು ನಿರೂಪಿಸುವ ಶ್ರುತ್ಯಾಗಮ ಪ್ರಮಾಣಗಳುಂಟು; ಶಿವನು ಶಕ್ತಿಸಮೇತನಾಗಿರುವುದರಿಂದ ಸರ್ವಸಮರ್ಥನೆನಿಸಿದ್ದಾನೆ. ನಾದಾತ್ಮಕನಾಗಿದ್ದಾನೆ. ನಾದದಿಂದ ಬಿಂದು, ಬಿಂದುವಿನಿಂದ ಕಲೆಗಳು ಹುಟ್ಟುತ್ತವೆ. ಕುಂಡಲಿನೀ ಶಕ್ತಿಯೇ ಬಿಂದುವೆನಿಸಿದೆ. ಕುಂಡಲಿನೀಶಕ್ತಿ ಪರಾಶಕ್ತಿಯಂತೆ ಅವಿನಾಭಾವದಿಂದಿರುವುದಿಲ್ಲ ; ತಾದಾತ್ಮಕವಲ್ಲ. ಪರಿಗ್ರಹಶಕ್ತಿಯೆನಿಸಿದೆ.

ಆ ಪರಾಶಕ್ತಿಯು ಸಮಷ್ಟಿ ಸ್ವರೂಪಳು. ಕುಂಡಲಿನೀ ಶಕ್ತಿಗಿಂತ ಉತ್ಕೃಷ್ಟಳು. ಸಮಸ್ತ ಜಗತ್ತಿಗೆ ಮಾತೃಸ್ವರೂಪಳು. ಸಮಸ್ತ ಭಕ್ತರಿಗೆ ಮಂಗಳ ಸ್ವರೂಪಳು. ವಿಶ್ವಭಾಸಕಳು. ಪುಷ್ಪಪರಿಮಳದಂತೆ ಚಿತ್ ಶಕ್ತಿಯಾಗಿರಬಲ್ಲಳು. 'ಸಾಕ್ಷಾಚ್ಚಿಚ್ಛಕ್ತಿ ರೂಪಾ ತು ಪುಷ್ಪಗಂಧವದುಜ್ಜ್ವಲಾ' ಸ್ವಾಭಾವಿಕಳು. ಸರ್ವಶಕ್ತಿನಿಯರ ಸ್ವರೂಪಳು. 'ಜ್ಞಾನಕ್ರಿಯೇಚ್ಛಾದಿ ಸಹಸ್ರರೂಪಾ-ತನ್ಮೇ ಮನಃ ಶಿವಸಂಕಲ್ಪಮಸ್ತು ।' ಎಂದು ಶ್ರುತಿ ಸಾರಿದೆ. ಶಿವನಂತೆ ಶಕ್ತಿಯೂ ಸಚ್ಚಿದಾನಂದ ನಿತ್ಯ ಪರಿಪೂರ್ಣ ಅಖಂಡ ಸ್ವರೂಪಳು. ಅಂಗಲಿಂಗಾಕ್ಯವನ್ನು ಬೋಧಿಸುವ ಶುದ್ಧ ವಿದ್ಯಾಸ್ವರೂಪಳು. ಒಟ್ಟಿನಲ್ಲಿ ಬೆಂಕಿಯಲ್ಲಿ ಬಿಸಿಯಿರುವಂತೆ. ಶಿವನಲ್ಲಿ ಶಿವೆಯಾಗಿ ಅನನ್ಯೆಯಾಗಿ ಶೈವೀಶಕ್ತಿಯಾಗಿ ನಿರ್ಮಲೆಯಾಗಿ ಅವಿನಾಭಾವಿನಿಯಾಗಿ ಅಭಿನ್ನಳಾಗಿರುವಂತೆ ಬಹಿಷ್ಕರಿಸಿ ಭಿನ್ನರಾದ ಪಾರ್ವತಿ ಲಕ್ಷ್ಮೀ ಸರಸ್ವತಿ ಸಾವಿತ್ರೀ ಗಾಯಿತ್ರಿ ಶಚಿ ಮುಂತಾದ ಸರ್ವಶಕ್ತಿನಿಯರ ಸ್ವರೂಪಳೂ ಆಗಿದ್ದಾಳೆ. ಹೀಗೆ ಭಿನ್ನಾಭಿನ್ನ ಸ್ವರೂಪ ಶಕ್ತಿಸಂಪನ್ನ ಶಿವನು

ಮಹೇಶ್ವರನಾಗಿ ಸರ್ವ ಭರಿತನಾಗಿದ್ದಾನೆ; ಅಚ್ಚಳಿಯದ ಆನಂದಾಮೃತಪ್ರದನಾಗಿದ್ದಾನೆ.

"ತ್ರೈಲೋಕ್ಯ ಸಂಪದಾಲೇಖ್ಯ ಸಮುಲ್ಲೇಖನ ಭಿತ್ತಯೇ ।
ಸಚ್ಚಿದಾನಂದ ರೂಪಾಯ ಶಿವಾಯ ಬ್ರಹ್ಮಣೇ ನಮಃ ॥
ಯದ್ಭಾಸಾ ಭಾಸತೇ ವಿಶ್ವಂ ಯತ್ಸುಖೇನಾನುಮೋದತೇ ।
ನಮಸ್ತಸ್ಮೈ ಗುಣಾತೀತ ವಿಭವಾಯ ಪರಾತ್ಮನೇ ॥"

ಮುಖ್ಯವಾಗಿ ರೇಣುಕ ಜಗದ್ಗುರುವಿನ ಈ ಎರಡು ಅಮೃತೋಕ್ತಿಗಳಿಂದ ಶಕ್ತಿ ವಿಶಿಷ್ಟ ಶಿವಜ್ಞಾನವನ್ನು ನಿರ್ದೇಶಿಸಬಹುದಾಗಿದೆ.

ಇವೆಲ್ಲ ಕಾರಣಗಳಿಂದ ಪರಶಿವನು ಅನಿರ್ದೇಶ್ಯನಾಗಿರುವಂತೆ ನಿರ್ದೇಶ್ಯನೂ ಆಗಿದ್ದಾನೆ, ಅಸ್ತಿ ಭಾತಿ ಪ್ರಿಯಸ್ವರೂಪನೆನಿಸಿದ್ದಾನೆ. ಜಗತ್ಕಾರಣನಾಗಿದ್ದಾನೆ; ಜಗದಾಕಾರನಾಗಿದ್ದಾನೆ. ಭಾವಗಮ್ಯನೂ ಭಾವಾತೀತನೂ ಆಗಿದ್ದಾನೆ. ಭಾವಾ ಭಾವ ವಿಲಕ್ಷಣನೂ ಆಗಿದ್ದಾನೆ. ಆದಕಾರಣ ಶಿವಾದ್ವೈತ ವಿದ್ಯಾನಿಧಿಯಾದ ಶ್ರೀಗುರುದೇವನ ಉಪದೇಶದಿಂದ ನಿರ್ದೇಶನಾಗುತ್ತಾನೆ; ಸ್ವಾನುಭವಗಮ್ಯನಾಗುತ್ತಾನೆ. ಶ್ರುತಿಗಮ್ಯ ಶ್ರುತಿಗೋಚರ ಎಂದು ಹೇಳುವಾಗ ಸಚ್ಚಿದಾನಂದ ಸ್ವರೂಪನಾದ ಶ್ರೀಗುರುವಿನ ಸ್ವಾನುಭವಗಮ್ಯನೆಂದು ನಿರ್ದೇಶ್ಯನೆಂದು ಹೇಳುವಲ್ಲಿ ತಪ್ಪೇನಿದೆ? ಆ ಶ್ರುತಿಗಳ ಮಹಾವಾಕ್ಯಗಳಿಗೆ ಮತ್ತು ಮಹಾಮಂತ್ರಕ್ಕೆ ಆಧಾರನಾಗಿದ್ದಾನೆ-ಶಿವಾದ್ವೈತ ವಿದ್ಯಾಸಮನ್ವಿತನಾದ ಶ್ರೀಗುರುದೇವನು. ಅಂಥವನ ಸ್ವಾನುಭವಕ್ಕೂ ಅಗೋಚರ ಅನಿರ್ದೇಶ್ಯ ಎಂದು ಹೇಳುವುದಾದರೆ ಆ ಪರವಸ್ತು ಅದೊಂದು ಮೃಗಮರೀಚಿಕೆಯೆಂದು ಹೇಳಬೇಕಾದೀತು? ಮುಗಿಲ ಮಲ್ಲಿಗೆಯೆಂದು ಕೈಬಿಡಬೇಕಾದೀತು? ಶಿವಾದ್ವೈತದಲ್ಲಿ ಈ ಪರಿಸ್ಥಿತಿಯಿಲ್ಲ. ಸಕಲ–ನಿಷ್ಕಲವಾಗಿ ನಿರ್ದೇಶ್ಯವಾಗಿದೆ.

"ಗುರುರೇವ ಪರಂ ತತ್ತ್ವಂ ಪ್ರಕಾಶಯತಿ ದೇಹಿನಾಂ ।
ಕೋ ವಾ ಸೂರ್ಯಂ ವಿನಾ ಲೋಕೇ ತಮಸೋ ವಿನಿವರ್ತತೇ" ॥೨॥

ದ್ರವ್ಯಗಳು ದೃಷ್ಟಿಗೋಚರವಾಗಬೇಕಾದರೆ ಕತ್ತಲೆ ಕಳೆಯಬೇಕು. ಲೋಕದ ಕತ್ತಲೆ ಕಳೆಯಬೇಕಾದರೆ ರವಿಯೇ ಆಗಬೇಕು. ಅಂತೆಯೆ

ಪಿಂಡಾಂಡವೂ ಒಂದು ಲೋಕ. ಅದರಲ್ಲಿ ಅಜ್ಞಾನಾಂಧಕಾರ ತುಂಬಿದೆ, ಅದನ್ನು ಅಣಗಿಸಿ ಪರತತ್ತ್ವವನ್ನು ಪ್ರಕಾಶಗೊಳಿಸಬೇಕಾದರೆ ಗುರುಭಾನುವಿನ ಕರುಣ ಕಿರಣವಿಲ್ಲದೆ ಸಾಧ್ಯವಿಲ್ಲ. ದೇಹಿಗಳಿಗೆ ಆ ಪರತತ್ತ್ವವನು ತೋರುವವನು ಗುರುದೇವನೊಬ್ಬ. ಆತನು ತನ್ನ ಪ್ರಾತಿಭಚಕ್ಷುವಿನಿಂದ ಘನಮನದಿಂದ ಸ್ವಾನುಭಾವದಿಂದ ದೇಹಿಯಾದ ಶಿಷ್ಯನ ಶಿರದರಮನೆಯಲ್ಲಿರುವ ಆ ನಿಷ್ಕಳ ಚಿತ್ಕಳೆಯನ್ನು ಭ್ರೂಮಧ್ಯಕ್ಕೆ ತಂದು ಸ್ಫಟಿಕ ಪ್ರಕಾಶದಂತೆ ಅಚ್ಚಬೆಳಗುಳ್ಳದನ್ನಾಗಿಸಿ ಅಲ್ಲಿಯೇ ಇರಿಸುತ್ತಾನೆ; ಭಾವಲಿಂಗವನ್ನಾಗಿಸುತ್ತಾನೆ. ಆ ಪರಮಪ್ರಕಾಶದ ಕಿರಣವನ್ನು ಶಿಷ್ಯನ ಹೃದಯಕ್ಕೆ ತಂದು ಚಿನ್ನ ಬಣ್ಣಗಳಂತೆ ಚೊಕ್ಕಟವಾಗಿಸಿ ಚಲುವಾಗಿಸಿ ಹೃದಯದಲ್ಲಿಯೇ ಇರಿಸುತ್ತಾನೆ. ಸಕಲ-ನಿಷ್ಕಲಸ್ವರೂಪ ಪ್ರಾಣಲಿಂಗವನ್ನಾಗಿಸುತ್ತಾನೆ. ಆ ಕಿರಣವನ್ನೆ ಗುರು ತನ್ನ ದಿವ್ಯ ನೇತ್ರದಿಂದ ಶಿಷ್ಯನ ನೇತ್ರಕ್ಕೆ ತಂದು ಬಹಿಷ್ಕರಿಸಿ ಅದನ್ನು ಪೀಠಿಕೆಯಲ್ಲಿರಿಸಿ ಶಿಷ್ಯನ ಕರಸ್ಥಲಕ್ಕೆ ಕರುಣಿಸುತ್ತಾನೆ. ಸಕಲ ಸ್ವರೂಪ ಇಷ್ಟಲಿಂಗವನ್ನಾಗಿಸುತ್ತಾನೆ; ದೃಷ್ಟಿಗೋಚರವನ್ನಾಗಿಸುತ್ತಾನೆ. ಅಂದರೆ ಕ್ರಿಯೋಪದೇಶದಿಂದ ಕ್ರಿಯಾಲಿಂಗವನ್ನು ಮಂತ್ರೋಪದೇಶದಿಂದ ಪ್ರಾಣಲಿಂಗವನ್ನು ವೇಧೋಪದೇಶದಿಂದ ಭಾವಲಿಂಗವನ್ನು ಕರ ಉರ ಶಿರಗಳಲ್ಲಿ ಇರಿಸಿ ನಿರ್ದೇಶಿಸುತ್ತಾನೆ. ಒಂದು ಕ್ರಿಯಾ ನಿರ್ದೇಶ; ಇನ್ನೊಂದು ಮಂತ್ರ ನಿರ್ದೇಶ; ಮತ್ತೊಂದು ಜ್ಞಾನ ನಿರ್ದೇಶ. ಕ್ರಮವಾಗಿ ಅರ್ಚನ-ಅರ್ಪಣ-ಅನುಭವಗಳಿಗೆ ತೋರತಕ್ಕವುಗಳು. ರೂಪು ರುಚಿ ತೃಪ್ತಿ ಸ್ವರೂಪದಿಂದ ಇರತಕ್ಕವುಗಳು. ರೂಪದಲ್ಲಿ ಕಣ್ಣು, ರುಚಿಯಲ್ಲಿ ಮನ ಪ್ರಾಣಗಳು, ತೃಪ್ತಿಯಲ್ಲಿ ಭಾವಾತ್ಮಗಳು ತಲ್ಲೀನವಾಗುತ್ತವೆ; ಎರಕಗೊಳ್ಳುತ್ತವೆ. ಆತ್ಮರೂಪು ಇಷ್ಟಲಿಂಗ, ಆತ್ಮರುಚಿ ಪ್ರಾಣಲಿಂಗ; ಆತ್ಮತೃಪ್ತಿ ಭಾವಲಿಂಗ.

ಬಾನೊಳಗಿರುವ ಭಾನುವಿಗೂ ಗುರುಭಾನುವಿಗೂ ವ್ಯತ್ಯಾಸಗಳಿವೆ. ಆತನು ತನ್ನ ಪ್ರಭೆಯೊಂದರಿಂದ ಬಾಹ್ಯ ತಮಸ್ಸನ್ನು ಕಳೆಯುತ್ತಾನೆ; ಕೆಲವು ಕಾಲ ಕಳೆಯುತ್ತಾನೆ. ಗುರುಭಾನು ತನ್ನ ಕಳೆ ತನ್ನ ನಾದ ಎರಡರಿಂದ ಅಂತರಂಗದ ತಮಸ್ಸನ್ನು ಕಳೆಯುತ್ತಾನೆ. ಕತ್ತಲಲ್ಲಿ ನಾದ ಮಾಡಿದರೆ ಕೂಗಾಡಿದರೆ ಕತ್ತಲೆ ಕಳೆಯದು. ಅದೇ ಮಲಗಿದವನು ಕೂಗಿದರೆ ಏಳುತ್ತಾನೆ. ಎದ್ದರೂ ಕತ್ತಲಲ್ಲಿಯೇ ಇರುತ್ತಾನೆ. ಆದರೆ ಗುರುವಿನ ಚಿತ್ಕಳೆಯಿಂದ ಅಜ್ಞಾನಾಂಧಕಾರ

ಹೋಗುವಂತೆ, ಚಿನ್ನಾದದಿಂದಲೂ ಹೋಗುತ್ತದೆ. ಆದ್ದರಿಂದ ಈತನ ಮಂತ್ರ ದೀಕ್ಷೆಗೆ ಮಹತ್ವವಿದೆ. ಅಂತೆಯೇ ಚಿತ್ಕ್ರಿಯೆಯಿಂದಲೂ ಅಜ್ಞಾನಾಂಧಕಾರವನ್ನು ಕಳೆಯಬಲ್ಲ ಸಮರ್ಥ ಗುರುಭಾನು. ಸೂರ್ಯನಿಗೆ ಪ್ರಭೆಯೊಂದೇ ಶಕ್ತಿ. ಗುರು ಸೂರ್ಯನಿಗೆ ಚಿನ್ನಾದ ಚಿದ್ಬಿಂದು ಚಿತ್ಕಳೆ ಚಿತ್ಕ್ರಿಯೆಗಳೆಂಬ ನಾಲ್ಕು ಶಕ್ತಿ.

ಬಾಹ್ಯರೂಪು ಬಾಹ್ಯರುಚಿಗಳಿಗೆ ಎಳಸಬಾರದು. ಬಾಹ್ಯರೂಪು ರಾಜಸ ತಾಮಸಾತ್ಮಕಗಳು. ಚಂಚಲತೆಯನ್ನು ಮಂದತೆಯನ್ನು ತರುತ್ತವೆ. ಕರಣೇಂದ್ರಿಯಗಳು ಬಹಿರ್ಮುಖವಾಗಿ ಹರಿಯುತ್ತವೆ. ವೈಷಯಿಕ ವ್ಯಾಸಂಗಕ್ಕೆ ಇಳಿಯುತ್ತವೆ. ಸಾಂಸಾರಿಕ ತಾಪತ್ರಯಕ್ಕೆ ಈಡಾಗುತ್ತವೆ. ಅತೃಪ್ತಿ ಅಶಾಂತಿಗಳನ್ನು ಪಡೆಯುತ್ತವೆ. ಭವರೋಗ ಉಲ್ಬಣಿಸುತ್ತದೆ.

ಬಾಹ್ಯ ರೂಪಗಳನ್ನು ಸಕಲವಾದ ಕರಸ್ಥಲದ ಕ್ರಿಯಾಲಿಂಗಕ್ಕೆ ಅರ್ಚನ ಮುಖದಲ್ಲಿ ಸಲ್ಲಿಸಿ ಪ್ರಸನ್ನವಾಗಿಸಿ ಶಿವಸ್ವರೂಪವಾಗಿಸಿ ನಿರೀಕ್ಷಿಸಬೇಕು. ಅಂತೆಯೆ ಬಾಹ್ಯ ರುಚಿಗಳನ್ನು ಮಂತ್ರದಿಂದ ಸಂಸ್ಕರಿಸಿ ಪ್ರಸಾದವಾಗಿಸಿ ಅರ್ಪಣ ಮುಖದಲ್ಲಿ ಆರೋಗಿಸಬೇಕು. ರೂಪು ರುಚಿಗಳಿಂದೊದಗುವ ತೃಪ್ತಿಯನ್ನು ಭಾವಲಿಂಗಕ್ಕರ್ಪಿಸಿ ಸುತೃಪ್ತಿ ಪ್ರಸಾದವನ್ನು ಅನುಭವಿಸಬೇಕು. ಈ ಚಿಕಿತ್ಸೆಯನ್ನು ಶಿವಜ್ಞಾನ ಸಿದ್ಧನಾದ ಶ್ರೀಗುರುದೇವನು ಕರುಣಿಸುತ್ತಾನೆ :

"ಅಂತರೇಣ ಗುರುಂ ಸಿದ್ಧಂ ಕಥಂ ಸಂಸಾರ ನಿಷ್ಕೃತಿಃ ।
ನಿದಾನಜ್ಞಂ ವಿನಾ ವೈದ್ಯಂ ಕಿಂ ವಾ ರೋಗೋ ನಿವರ್ತತೇ ॥೩॥"

ರೋಗಿಯ ರೋಗ ನಿವಾರಣೆಯಾಗಬೇಕಾದರೆ ವೈದ್ಯನ ಚಿಕಿತ್ಸೆ ಅಗತ್ಯ. ಆದರೆ ವೈದ್ಯ ನಿದಾನಜ್ಞನಾಗಿರಬೇಕು ಇಲ್ಲವಾದರೆ ತುಂಬಾ ಪ್ರಾಣಾಪಾಯ ನಿಶ್ಚಿತ ಅಂತೆಯೇ ಸನ್ನಿಹಿತವಾದ ಸಂಸಾರ ರೋಗ ನಿವಾರಣೆಯಾಗಬೇಕಾದರೆ ಶಿವಜ್ಞಾನದಲ್ಲಿ ಶಿವಾದ್ವೈತ ವಿದ್ಯೆಯಲ್ಲಿ ಸಿದ್ಧನಾದ ಶ್ರೀ ಗುರುದೇವನೆಂಬ ಪರಮಾರ್ಥ ವೈದ್ಯ ಅಗತ್ಯ. ತನ್ನ ಸ್ವಾನುಭವ ಸಿದ್ಧಿಯಿಂದ ಅಂತಃಕರಣ ಕಾರುಣ್ಯ ಗುಟಿಕೆಯಿಂದ ಭವರೋಗವನ್ನು ನಿವಾರಣ ಮಾಡುತ್ತಾನೆ.

ಗುರುದೇವ ಶುದ್ಧ, ಸಿದ್ಧ, ಸುಪ್ರಸಿದ್ಧ. ಆತನ ಈ ತ್ರಿವಿಧ ಪ್ರಸಾದದಿಂದ ಶಿಷ್ಯನ ತ್ರಿವಿಧ ತನುಗಳು ರೋಗ ಮುಕ್ತವಾಗುತ್ತವೆ. ಲಿಂಗಯೋಗ

ಯುಕ್ತವಾಗುತ್ತವೆ. "ಇಷ್ಟಲಿಂಗಕ್ಕೆ ತನುವೆ ಭಾಜನ, ಪ್ರಾಣಲಿಂಗಕ್ಕೆ ಮನವೆ ಭಾಜನ; ಭಾವಲಿಂಗಕ್ಕೆ ಜೀವವೆ ಭಾಜನ. ಎಂದರಿಯದ ಮರುಳು ಮಾನವರಿಗೆ ಭವಬಂಧನ ಪ್ರಾಪ್ತಿಯಯ್ಯ ಅಖಂಡೇಶ್ವರಾ."

"ಗುರುವಚನದಿಂದಲ್ಲದೆ ಭವಪಾಶ ಹರಿಯದು.
ಗುರುವಚನದಿಂದಲ್ಲದೆ ಜಾತಿಭೇದ ಮಾಣದು.
ಗುರುವಚನದಿಂದಲ್ಲದೆ ಸೂತಕ ಪಾತಕಂಗಳು ಕೆಡದಿಹವು.
ಗುರುವಚನದಿಂದಲ್ಲದೆ ಅಂಗ ಮನ ಪ್ರಾಣಂಗಳು ಶುದ್ಧವಾಗಲರಿಯವು
ಗುರುವಚನದಿಂದಲ್ಲದೆ ಲಿಂಗಕ್ಕೆ ಕಳೆ ವೇಧಿಸದು.
ಗುರುವಚನದಿಂದಲ್ಲದೆ ಸದ್ಭಕ್ತಿ ನೆಲೆಗೊಳ್ಳದು.
ಗುರುವಚನದಿಂದಲ್ಲದೆ ನಿಜಮುಕ್ತಿ ಕಾಣಬಾರದು.
ಇದು ಕಾರಣ ಗುರುಮುಟ್ಟಿ ಗುರುವಾದ ಪರಮ ಶರಣರ ಚರಣಕ್ಕೆ
ಶರಣು ಶರಣೆಂಬೆನಯ್ಯ ಅಖಂಡೇಶ್ವರಾ."

ಸಂಸಾರ ರೋಗಕ್ಕೆ ಗುರುಮಂತ್ರವೇ ಹಿರಿಯ ಮದ್ದು. ಗುರುದೇವನಿಂದ ಬಂದ ಮಂತ್ರೌಷಧಿ ಸರ್ವಾಂಗಗಳಲ್ಲಿರುವ ಭವರೋಗವನ್ನು ಪರಿಹರಿಸುತ್ತದೆ. ಜಾತಿ ಸೂತಕ ಪಾತಕಗಳನ್ನು ಮಾಣಿಸುತ್ತದೆ. ಅಂಗ ಮನ ಪ್ರಾಣಗಳನ್ನು ಆರೋಗ್ಯವಾಗಿರಿಸುತ್ತದೆ. ಲಿಂಗಗಳಿಗೆ ಕಲೆ ಕಳೆಗಳನ್ನು ತರುತ್ತದೆ. ಸದ್ಭಕ್ತಿ ನಿಜಮುಕ್ತಿ ನೆಲೆಗೊಳ್ಳುತ್ತವೆ.

"ಅಜ್ಞಾನ ಮಲಿನಂ ಚಿತ್ತದರ್ಪಣಂ ಯೋ ವಿಶೋಧಯೇತ್ ।
ಪ್ರಜ್ಞಾ ವಿಭೂತಿಯೋಗೇನ ತಮಾಹುರ್ಗುರು ಸತ್ತಮಂ ॥೪॥

ಮನವೆಂಬುದೊಂದು ಮುಕುರ. ಅದು ಸ್ವಾಭಾವಿಕವಾಗಿ ಸ್ವಚ್ಛವಾಗಿರುತ್ತದೆ. ಅದು ಮರವೆ ಮುಸುಕಿ ಮಲಿನವಾಗುತ್ತದೆ. ಅದನ್ನು ತನ್ನ ಪ್ರಜ್ಞಾವಿಭೂತಿಯಿಂದ ಬೆಳಗಿ ಬೆಳ್ಳನೇ ಬೆಳಗಿಸುವವನೇ ಗುರು ಸಾರ್ವಭೌಮನೆಂದು ಶಿವಾಚಾರ್ಯರು ಹೇಳುವರು.

ಮಾಯಾ ಮಲ ಮಾನವರ ಮನಸ್ಸನ್ನು ಮುತ್ತುತ್ತದೆ. ಮುಂಗಾಣದಂತೆ ಮಾಡುತ್ತದೆ. ತನೊಳಗಿದ ಚಿನ್ಮಯ ವಸ್ತುವನ್ನು ಅರಿಯದಂತೆ ಅವಲೋಕಿಸದಂತೆ ಮಾಡುತ್ತದೆ.

"ಕಣ್ಣೊಳಗೆ ಕಣ್ಣಿದ್ದು ಕಾಣಲೇಕರಿಯರಯ್ಯಾ ?
ಕಿವಿಯೊಳಗೆ ಕಿವಿಯಿದ್ದು ಕೇಳಲೇಕರಿಯರಯ್ಯಾ ?
ಘ್ರಾಣದೊಳಗೆ ಘ್ರಾಣವಿದ್ದು ವಾಸಿಸಲೇಕರಿಯರಯ್ಯಾ ?
ಜಿಹ್ವೆಯೊಳಗೆ ಜಿಹ್ವೆಯಿದ್ದು ರುಚಿಸಲೇಕರಿಯರಯ್ಯಾ ?
ತ್ವಕ್ಕಿನೊಳಗೆ ತ್ವಕ್ಕಿದ್ದು ಸ್ಪರ್ಶಿಸಲೇಕರಿಯರಯ್ಯಾ ?
ಮನದೊಳಗೆ ಮನವಿದ್ದು ನೆನೆಯಲೇಕರಿಯರಯ್ಯಾ ?
ಪ್ರಾಣದೊಳಗೆ ಪ್ರಾಣವಿದ್ದು ಪರಿಕಿಸಲೇಕರಿಯರಯ್ಯಾ ?
ಕಾಯದೊಳಗೆ ಕಾಯವಿದ್ದು ಬಿಡದು ಬೇರಾಗದು."
ಕೂಡಲ ಚನ್ನಸಂಗಯ್ಯನಿಕ್ಕಿದ ಅಣಕದ ಭೇದವ ಭೇದಿಸಬಾರದು."

ಹುಟ್ಟು ಸಾವು ಹಸಿವು ನೀರಡಿಕೆ ಶೋಕ ಮೋಹಗಳೆಂಬ ಷಡೂರ್ಮಿಗಳು ಅಪ್ಪಳಿಸಿ ಅಜ್ಞಾನದಲ್ಲಿ ಮುಗ್ಗಿಸಿರುತ್ತವೆ. ಇವುಗಳ ಚಿಂತೆಯಲ್ಲಿ ಮನ ಮುಳುಗಿರುತ್ತದೆ. ಕಾಯೇಂದ್ರಿಯಗಳು ಮನ ಪ್ರಾಣಗಳು ತಮ್ಮೊಳಗಿರುವುದನ್ನೇ ತಾವು ಅರಿಯದಂತಾಗುತ್ತವೆ. ಮನ ಪರವೆಯಲ್ಲಿ ಮರೆದೊರಗಿರುವಾಗ ಉಳಿದ ನೇತ್ರಾದಿಗಳು ಅಂತರ್ಮುಖಿಗಳಾಗವು. ನಿಜವನ್ನು ಕಾಣಲರಿಯವು. ಇದರಿಂದಾಗಿ ಮುಖ್ಯ ಮನಸ್ಸು ತಿಳಿಯಾಗಬೇಕು. ಚಿತ್ತ ಪ್ರಸನ್ನವಾಗಬೇಕು. ಪ್ರಸನ್ನಗೊಳಿಸುವ ಪ್ರಜ್ಞೆ ಪರಮಗುರುದೇವನಿಗಿರುತ್ತದೆ. ಆತನು ತ್ರಿಕರಣಗಳನ್ನು ತ್ರಿತನುಗಳನ್ನು ಶೋಧಿಸಬಲ್ಲ ಸರ್ವಸಮರ್ಥ. "ಎನ್ನ ತನುವ ಶೋಧಿಸಿ ತನುಲಿಂಗವಮಾಡಿ ತೋರಿದನಯ್ಯ ಸದ್ಗುರು. ಎನ್ನ ಮನವ ಶೋಧಿಸಿ ಮನಲಿಂಗವ ಮಾಡಿ ತೋರಿದನಯ್ಯ ಸದ್ಗುರು. ಎನ್ನ ಭಾವವ ಶೋಧಿಸಿ ಭಾವಲಿಂಗವ ಮಾಡಿ ತೋರಿದ ಸದ್ಗುರುವಿಂಗೆ ನಮೋ ನಮೋ ಎಂಬೆನಯ್ಯಾ ಅಖಂಡೇಶ್ವರಾ." "ಪರುಷ ಮುಟ್ಟಿದ ಲೋಹದಂತೆ ಮಾಡಿತ್ತೆನ್ನ ಶ್ರೀಗುರುವಿನುಪದೇಶ. ಉರಿಯುಂಡ ತೃಣದಂತೆ ಮಾಡಿತ್ತೆನ್ನ ಶ್ರೀಗುರುವಿನುಪದೇಶ. ಕರ್ಪೂರದ ಜ್ಯೋತಿಯಂತೆ ಮಾಡಿತ್ತೆನ್ನ ಶ್ರೀಗುರುವಿನುಪದೇಶ. ಕೀಡಿ ಕುಂಡಲಿಯಾದಂತೆ ಮಾಡಿತ್ತೆನ್ನ ಶ್ರೀಗುರುವಿನುಪದೇಶ. ವಾರಿಕಲ್ಲ ಪುತ್ಥಳಿ ಅಪ್ಪುವನೊಡಗೂಡುವಂತೆ ಮಾಡಿತ್ತೆನ್ನ ಶ್ರೀಗುರುವಿನ ಉಪದೇಶ ಅಖಂಡೇಶ್ವರಾ."

"ಅಪರೋಕ್ಷಿತ ತತ್ತ್ವಸ್ಯ ಜೀವನ್ಮುಕ್ತ ಸ್ವಭಾವಿನಃ ।
ಗುರೋಃ ಕಟಾಕ್ಷೇ ಸಂಸಿದ್ಧೇಕೋ ವಾ ಲೋಕೇಷು ದುರ್ಲಭಃ" ॥೫॥

ಶಿವತತ್ತ್ವವನ್ನು ಸಾಕ್ಷಾತ್ಕಾರ ಮಾಡಿಕೊಂಡು ಸ್ವಾಭಾವಿಕವಾಗಿ ಜೀವನ್ಮುಕ್ತನಾದ ಶ್ರೀಗುರುದೇವನ ಕೃಪಾಕಟಾಕ್ಷವೊಂದಿದ್ದರೆ ಮೂಲೋಕಗಳಲ್ಲಿ ಯಾವುದೂ ದುರ್ಲಭವಾಗದು.

"ವಿಕಲ್ಪರಹಿತಂ ಜ್ಞಾನಂ ನಿಷೇಧ ರಹಿತಾ ಕ್ರಿಯಾ ।
ಆಲೋಕರಂಜಕಂ ರೂಪಂ ಜೀವನ್ಮುಕ್ತಸ್ಯ ಲಕ್ಷಣಂ" ॥

ಎಂಬ ವಾಸಿಷ್ಠೋಕ್ತಿಯಂತೆ ಜೀವನ್ಮುಕ್ತನಾಗಿರಬೇಕು. ಜೀವನ್ಮುಕ್ತತ್ವವೇ ಸ್ವಭಾವವಾಗಿರಬೇಕು. ಬರೀ ಶ್ರುತಿಜ್ಞಾನವಿರದೆ ಸ್ವಯಂಪ್ರಜ್ಞೆ ಸ್ವಾನುಭವಗಳಿರಬೇಕು. ತಾನೇ ತನ್ನ ನಿಜದ ನೆಲೆಯನ್ನು ಕಂಡಿರಬೇಕು. ಅಂತಹ ಗುರುಕಟಾಕ್ಷದಲ್ಲಿ ದಿವ್ಯಶಕ್ತಿಯಿರುತ್ತದೆ. ಸರ್ವವನ್ನೂ ಒದಗಿಸುವ ಸಾಮರ್ಥ್ಯವಿರುತ್ತದೆ. ಆತನಿಂದ ಆಗದ್ದು ಯಾವುದೂ ಇರುವುದಿಲ್ಲ.

> "ಶ್ರೀಗುರುಸ್ವಾಮಿ ಮಾಡಿದೊಡಾಯಿತ್ತು ಜಗದುತ್ಪತ್ತ್ಯ ಸಚರಾಚರಂಗಳೆಲ್ಲ. ಶ್ರೀಗುರುಸ್ವಾಮಿ ಮಾಡಿದೊಡಾಯಿತ್ತು ತತ್ತ್ವತತ್ತ್ವ ಸಕಲ ಸ್ಥಲಂಗಳೆಲ್ಲ. ಶ್ರೀಗುರುಸ್ವಾಮಿ ಮಾಡಿದೊಡಾಯಿತ್ತು ನಿಗಮಾಗಮ ಸಕಲ ಶಾಸ್ತ್ರಜಾಲಂಗಳೆಲ್ಲ. ಶ್ರೀಗುರುಸ್ವಾಮಿ ಮಾಡಿದೊಡಾಯಿತ್ತು ಅಖಂಡೇಶ್ವರಾ, ನಾನು-ನೀನೆಂಬ ಉಭಯವೆಲ್ಲ."

"ಕೈವಲ್ಯ ಕಲ್ಪತರವೋ ಗುರವಃ ಕರುಣಾಲಯಾಃ ।
ದುರ್ಲಭಾ ಹಿ ಜಗತ್ಯಸ್ಮಿನ್ ಶಿವಾದ್ವೈತ ಪರಾಯಣಾಃ" ॥೬॥

ಈ ಜಗತ್ತಿನಲ್ಲಿ ಇನ್ನೇನಾದರೂ ಸಿಗಬಹುದು, ಕೈವಲ್ಯಕಲ್ಪತರುವಾದ ಕೃಪಾನಿಧಿಯಾದ ಶಿವಾದ್ವೈತ ಪರಾಯಣನಾದ ಗುರುದೇವನು ಸಿಕ್ಕುವುದು ದುರ್ಲಭ.

ಗುರು ಅವನೊಬ್ಬ ಕಲ್ಪತರು; ಬರೀ ಕಲ್ಪತರುವಲ್ಲ, ಕೈವಲ್ಯ ಕಲ್ಪತರು. ಕಲ್ಪತರು ದೇವಲೋಕದ ಒಂದು ಮರ; ಬಯಸಿದ್ದನ್ನು ಕೊಡುವ ಕುಜ. ಆ

ದ್ರುಮವನ್ನು ಕಂಡವರಿಲ್ಲ. ಕಾಣುವ ಕಲ್ಪತರುವೆಂದರೆ ಸಾಕಾರನಾದ ಶ್ರೀಗುರು. ಇವನು ಶಿವಾದ್ವೈತ ಪರಾಯಣನಾಗಿ ಕರುಣಾಲಯನಾಗಿದ್ದರೆ ಇವನಿಗಿಂತ ಮಿಗಿಲಾಗಿ ಕಲ್ಪವೃಕ್ಷ ಬೇರಿಲ್ಲ. ಇದು ಸಾಕ್ಷಾತ್ ಕೈವಲ್ಯವನ್ನೆ ಕೊಡುತ್ತದೆ. ಇದು ಓಡಾಡುವ ಸುರತರು. ಇದನ್ನು ಗುರುತಿಸುವವರು ವಿರಳ. ಈ ಸುರತರುವೂ ವಿರಳ.

> "ಲೋಕದಲ್ಲಿಯ ನೂರಾರು ಗುರುಗಳ ನೋಡಿ ನಾನು ಬೇಸರಗೊಂಡೆನಯ್ಯ. ವಿತ್ತಾಪಹಾರಿ ಗುರುಗಳು ನೂರಾರು. ಶಾಸ್ತ್ರಾರ್ಥ ಪೇಳುವ ಗುರುಗಳು ನೂರಾರು. ಸತ್ಕರ್ಮೋಪದೇಶವನರುಹಿ ಸ್ವರ್ಗ ಮರ್ತ್ಯದಲ್ಲಿ ಸುಖವನೀವ ಗುರುಗಳು ನೂರಾರು. ವಿಚಾರಮುಖದಿಂದ ಷಟ್ಸಾಧನೆಯನರುಹಿಪ ಗುರುಗಳು ನೂರಾರು. ವಿಷಯಾದಿಗಳೆಲ್ಲ ಮಿಥ್ಯವೆಂದರುಹಿ ಆತ್ಮಾನುರಾಗತ್ವವನೀವ ಗುರುಗಳು ನೂರಾರು. ಶಿವ-ಜೀವರ ಏಕತ್ವವನರುಹಿ ನಿರ್ಮಲ ಜ್ಞಾನವನೀವ ಗುರುಗಳು ಪ್ರಮಥರು. ಸಂಶಯಾಳಿಗಳನ್ನೆಲ್ಲ ಜ್ಞಾನಾಗ್ನಿಯಿಂದೆ ದಹಿಸಿ ಅರುಹಿನ ಬಂಧನದಲ್ಲಿರಿಸಿದ ಗುರು ಚನ್ನಬಸವಣ್ಣನಲ್ಲದೆ ಮತ್ತೋರ್ವನ ಕಾಣೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ."

ಈ ಸಿದ್ಧರಾಮೇಶ್ವರ ವಚನದಿಂದ ಗುರುಗಳಲ್ಲಿರುವ ತರತಮ ತಿಳಿವಿಗೆ ಬರುತ್ತದೆ. ಕೇವಲತ್ವಕ್ಕೆ ಕೈವಿಡಿದು ಕರೆದೊಯ್ಯುವ ಕರುಣಾಳು ಕಳಾಗುರು ದೊರೆಯುವುದೊಂದು ಪುಣ್ಯವಿಶೇಷ; ಭಾಗ್ಯ ವಿಶೇಷ.

ಶಿವಾದ್ವೈತ ಪರಾಯಣನಾದ ಗುರುವಿಗೆ ಮಾತ್ರ ಕೈವಲ್ಯ ಕಲ್ಪತರುವಾಗುವ ಸೌಭಾಗ್ಯ ಸಂಪ್ರಾಪ್ತವಾಗುತ್ತದೆ. ಶಿವಾದ್ವೈತವೇ ತನ್ನ ಜೀವನ ಜೀವಾಳವಾಗಿರಬೇಕು ; ಹೃದಯ ಸರ್ವಸ್ವವಾಗಿರಬೇಕು. ಶಿವಾದ್ವೈತಕ್ಕೂ ಕೇವಲ ಭಾವಕ್ಕೂ ಸಾಹಚರ್ಯವಿದೆ. ಶಿವ-ಶಕ್ತಿ, ಶಿವ-ಜೀವ, ಶ್ರೀಗುರು-ಶಿಷ್ಯ ಇವುಗಳಲ್ಲಿ ಭಿನ್ನಭಾವವಿರಬಾರದು. [illegible] ಸಂದೇಹಕ್ಕೆ ಇಂಬಿರಬಾರದು. ಕರಣವೃತ್ತಿಗಳೆಲ್ಲ ಅಡಗಿರಬೇಕು. ನಿಜದ ನಿಷ್ಪತ್ತಿಯಲ್ಲಿರಬೇಕು ಯಾವಾ

ಗಲೂ ಬಿಡದೆ ಶಿವಾದ್ವೈತ ದೃಕ್ಕ್ರಿಯಾನುಭವಗಳಲ್ಲಿರಬೇಕು. ಅಂದರೆ ಕ್ರಿಯೆಗಳಲ್ಲಿ ಜ್ಞಾನದಲ್ಲಿ ಅನುಭವದಲ್ಲಿ ಶಿವಾದ್ವೈತವು ಸಮರಸವಾಗಿರಬೇಕು. ಅದೇ ಚಿಂತನ, ಅದೇ ಮಂಥನಗಳಲ್ಲಿರಬೇಕು.

ಶಿವಶಕ್ತಿ, ಕಾರಣ ಕಾರ್ಯಗಳು ಅವಿರಳ ವಸ್ತುಗಳೆಂಬ ಅನುಭವವುಳ್ಳವನೆ ಶಿವಾದ್ವೈತ ಪರಾಯಣ ಗುರು. ಅಭಿನ್ನನಿಮಿತ್ತೋಪಾದಾನ ಕಾರಣತ್ವವನ್ನು ಚನ್ನಾಗಿ ಸ್ವಾನುಭವಕ್ಕೆ ತಂದುಕೊಂಡವನು ಶಿವಾತ್ಮವಿದ್ಯಾಗುರು. ಏನೆಲ್ಲವೂ ಶಿವಸ್ವರೂಪ. ಶಿವನಿಗನ್ಯವೆಂಬುದೇ ವಿಶ್ವದಲ್ಲಿಲ್ಲ. ಸುವರ್ಣ ಅಭರಣವಾದಂತೆ ಶಿವನಿಂದ ಜೀವಜಗತ್ತುಗಳಾಗಿವೆ. ಶಿವನಲ್ಲಿ ವಿಶೇಷವೇನೆಂದರೆ ಸುವರ್ಣ ಜಡ, ತಾನೇ ಆಭರಣವಾಗದು; ಶಿವ ಪೂರ್ಣಚೇತನ, ತಾನೇ ಎಲ್ಲವೂ ಆಗಬಲ್ಲ; ಆಗದಿರಬಲ್ಲ. ಆತನಿಗೆ ಬೇರೆ ಕರ್ತೃವಿಲ್ಲ. ಆತನೇ ಸರ್ವಕರ್ತೃ; ಆತನೇ ಸರ್ವದಾತೃ, ಆತನೇ ಸರ್ವಭೋಕ್ತೃ. ಆತ ಸರ್ವಜ್ಞ, ಸರ್ವಸ್ವತಂತ್ರ, ಆತನದು ಅಲುಪ್ತವೂ ಅನಂತವೂ ಅವಿರಳವೂ ಆದ ಶಕ್ತಿ. ಆತ ಅನಾದಿಬೋಧಸ್ವರೂಪ ನಿತ್ಯತೃಪ್ತ. ಆತ ಸಚ್ಚಿದಾನಂದ ನಿತ್ಯ ಪೂರ್ಣಾಖಂಡಸ್ವರೂಪ ಎಂದು ಮುಂತಾಗಿ ಶಿವಾನುಭವ ಸಂಪನ್ನತೆಯೆ ಶಿವಾದ್ವೈತ ಪರಾಯಣತೆ. ಇದುಳ್ಳವನೇ ಶಿವಾತ್ಮವಿದ್ಯಾಗುರು. ಈತನಿಗೆ ಸಕಲ ಜೀವಕಾರುಣ್ಯವಿರುತ್ತದೆ. ಕೈವಲ್ಯಕ್ಕೆ ಕಲ್ಪತರುವಾಗಿರುತ್ತಾನೆ. ಶಿವಜ್ಞಾನ ನಿರ್ದೇಶಿಕನಾಗಿರುತ್ತಾನೆ. ಅನೇಕವನ್ನು ಏಕವನ್ನಾಗಿ ನೋಡುವ ದಿವ್ಯಶಕ್ತಿ ಇವನಿಗಿರುತ್ತದೆ. ಕಲ್ಪತರುವಿನಂತೆ ಈತನೊಬ್ಬ. ಆದರೆ ಅದೇ ಕಲ್ಪತರುವಿನಂತೆ ಸರ್ವಸಂಪತ್ಪ್ರದ. ಆದ್ದರಿಂದ ಈತ ಶ್ರೀಗುರು ; ಪ್ರತ್ಯಕ್ಷ ಮಹಾದೇವ.

ಶಿವಜ್ಞಾನಕ್ಕೆ ಹೊರತಾದುದು ಅಜ್ಞಾನ ; ಅದು ಅಶಿವ. ಅದೇ ತಮೋರೂಪ. ಅದನ್ನೇ ಅವಿದ್ಯೆಯೆಂದು ಹೇಳುವುದು. ಅವಿದ್ಯೆ ಅನಾದಿಯಾದರೂ ಅನಿತ್ಯ ; ಅನಂತ್ಯವಾದರೂ ಅಸತ್ಯ. ಅದು ಅಸತ್ ಮತ್ತು ಅಚಿತ್. ಅದರಿಂದ ದುಃಖ. ಅದು ಅಪೂರ್ಣ, ಖಂಡ. ಅದಕ್ಕೆ ವಶವಾದರೆ ವಿಕಾರಾದಿಗಳಿಗೆ ಅವಕಾಶ. ಅನೈಕ್ಯ ಜ್ಞಾನಕ್ಕೆ ಅವಕಾಶ. ಆಮಯಕ್ಕೆ ಅವಕಾಶ. ಅಕೃತ್ಯಕ್ಕೆ ಅನನುಭವಕ್ಕೆ ಅವಕಾಶ ಪ್ರವೃತ್ತಿಗೆ ಅವಕಾಶ. ಅದಕ್ಕೆ ಒಳಗಾದವರನ್ನು ಕಂಡು ಅವರನ್ನು ಕರುಣಿಸಿ ಅವರಿಗೆ ಶಿವಾದ್ವೈತ ತತ್ತ್ವವನ್ನು

ಬೋಧಿಸುವಾತನೇ ಶಿವಾದ್ವೈತ ಪರಾಯಣವಾದ ಶ್ರೀಗುರು ದೇವನೆನಿಸುತ್ತಾನೆ ; ಕೈವಲ್ಯ ಕಲ್ಪತರುವೆನಿಸುತ್ತಾನೆ.

ಸ್ಥೂಲಾಂಗವಿಲ್ಲದೆ ಕಲ್ಪತರುವಾಗದು. ಆದರೆ ಆ ಸ್ಥೂಲಾಂಗದಿಂದ ಅದಕ್ಕೆ ಬಾಧಕವಿಲ್ಲ. ಪ್ರತಿಯಾಗಿ ಸಾಧಕವೇ ಆಗಿರುತ್ತದೆ. ಅಂತೆಯೇ ಶ್ರೀಗುರುದೇವನಿಗೆ ಆತ್ಮಾಂಗವಾದ ಯೋಗಾಂಗವಿರುವಂತೆ ಸ್ಥೂಲವಾದ ತ್ಯಾಗಾಂಗವೂ ಇರುತ್ತದೆ. ಇದ್ದರೇನು, ಇದರಲ್ಲಿಯೂ ಸೂಕ್ಷ್ಮವಾದ ಆತ್ಮಾಂಗವಿದ್ದೇ ಇರುತ್ತದೆ. ಇದರಿಂದಾಗಿ ಇದು ಕೇವಲ ಜಡವಲ್ಲ. ಜಡಾಜಡ ಸ್ವರೂಪ. ದೇಹ ತನಗೆ ಭಿನ್ನವೆಂದಾಗಲಿ ಅಶಿವವೆಂದಾಗಲಿ ಈತನು ಭಾವಿಸುವುದಿಲ್ಲ. ಪ್ರಸಾದಕಾಯವಾಗಿ ಪರಮಸ್ವರೂಪವೇ ಆಗಿರುತ್ತದೆ. ಬಂಗಾರ ತನ್ನಿಂದಾದ ಒಡವೆ ತಾನಲ್ಲ ಎಂದು ಹೇಳದು, ಒಡವೆಯೂ ಸಹ ಬಂಗಾರವೇ ಆಗಿರುತ್ತದೆ. ಅಂತೆಯೇ ಒಡವೆಯಂತಿರುವ ಕಾಯ ಕರಣಗಳೂ ಸಹ ಶಿವಸ್ವರೂಪವೇ ಆಗಿರುತ್ತವೆ. ಇವನ್ನು ಕೆಡಿಸಿ ಅಥವಾ ಕೈಬಿಟ್ಟು ತಾನು ಕೇವಲನಾಗಲು ಶಿವಾತ್ಮವಿದ್ಯಾ ಗುರು ಬಯಸುವುದಿಲ್ಲ. ಇವೆಲ್ಲವನ್ನೂ ಸಮನ್ವಯಗೊಳಿಸಿಕೊಂಡು ಅಥವಾ ಶಿವಸಾಮರಸ್ಯವನ್ನಾಗಿಸಿಕೊಂಡು ಕೇವಲ ಭಾವವುಳ್ಳವನಾಗಿರುತ್ತಾನೆ. ಇದರಿಂದಾಗಿ ಇವನು ಕಲ್ಪತರುವಾಗಲು ಸಮರ್ಥನಾಗುತ್ತಾನೆ. ಈತನ ಕೈವಲ್ಯ ಕಲ್ಪತರುತ್ವವು ಸೂಕ್ತವಾಗಿರುತ್ತದೆ. ಶಿವಾದ್ವೈತ ಪರಾಯಣತ್ವವೂ ಸೂಕ್ತವಾಗುತ್ತದೆ. ಅನೇಕತ್ವ, ಜಡತ್ವ ಸ್ಥೂಲತ್ವಾದಿಗಳು ಶಿವಾದ್ವೈತಕ್ಕೆ ಹೊರಗಾದವುಗಳಲ್ಲ.

ಗುರು ಕರುಣಾಲಯನಾಗಿರುವುದು ಗಮನಾರ್ಹ. ಸರ್ವಜೀವ ದಯಾ ಪಾರಿಯಾಗಿ ಸರ್ವಸಮತಾಭಾವಿಯಾಗಿ ಸರ್ವಾನುಗ್ರಹಸಮರ್ಥನಾಗಿ ಇರುವ ಉದಾತ್ತ ಜೀವಿ ಮಹಾದೇವ. ಸರ್ವಜೀವಾತ್ಮೈಕಭಾವವಿದ್ದಲ್ಲಿ ಕಾರುಣ್ಯಹೃದಯವಿರುತ್ತದೆ. ದುಃಖಿತರನ್ನು ನೋಡಿದಾಗ ತನಗೇ ದುಃಖವಾದಂತೆ ಭಾವಿಸುತ್ತಾನೆ ಶಿವಾದ್ವೈತ ಪರಾಯಣನಾದ ಶ್ರೀಗುರು. ದ್ರಷ್ಟೃ ದರ್ಶನ ದೃಶ್ಯಗಳ ಸಮತ್ವವುಂಟಾಗುತ್ತದೆ. ಆತ್ಮೀಯತೆ ಅಳವಡುತ್ತದೆ. ಆ ಚಣದಲ್ಲಿಯೇ ಕಾರುಣ್ಯರಸ ಪ್ರವಹಿಸುತ್ತದೆ. ಹಿಂದೆಯೇ ದುಃಖಿತರ ಉದ್ಧಾರ ಕಾರ್ಯವನ್ನು ಕೈಗೊಳ್ಳುತ್ತಾನೆ. ದುಃಖದೂರ ಮಾಡುತ್ತಾನೆ. ಆತ್ಮಸುಖಕ್ಕೆ ಬೇಕಾದ ಸೌಕರ್ಯವನ್ನು ಕರುಣಿಸುತ್ತಾನೆ.

ತನ್ನ ಪರಮಪ್ರಜ್ಞೆಯನ್ನು ವಾಗ್ಲಹರಿಯಲ್ಲಿ ಚೇತೋಹಾರಿಯಾಗಿ ಹರಿಯಿಸಿ ದುಃಖಿತನ ಹೃದಯವನ್ನು ತುಂಬುತ್ತಾನೆ; ತೃಪ್ತಿಯನ್ನು ತರುತ್ತಾನೆ. ತಮಸನ್ನು ತೊಡೆದು ಹಾಕುತ್ತಾನೆ. ಎಂದೂ ಅನುಭವಿಸದ ಆನಂದವನ್ನು ಅನುಭವಿಸುವಂತೆ ಮಾಡುತ್ತಾನೆ. ಏನೆಲ್ಲವನ್ನೂ ಮರೆತು ತನ್ನ ತಾ ಅರಿತು ಬೆರೆತು ಇರುವಂತೆ ಮಾಡುತ್ತಾನೆ. ಅಂತಿರುವುದೇ ಕೈವಲ್ಯಭಾವ. ಅದನ್ನು ಕರುಣಿಸುವ ಕಲ್ಪತರು ಗುರುದೇವ.

ಶಿವಾದ್ವೈತ ಪರಾಯಣತೆ ಎಂದರೆ ಪೂರ್ಣವೃತ್ತಿ. ಕಾರ್ಯ ಕಾರಣಗಳಲ್ಲಿ ಏಕತ್ವಪ್ರಪತ್ತಿ. ಅಂತೆಯೇ ಸ್ವ-ಪರಗಳಲ್ಲಿ ಶಿವೈಕತ್ವ ಸಂವಿತ್ತಿ. ಎಲ್ಲವನ್ನೂ ಶಿವವಾಗಿ ಭಾವಿಸುವ ವೃತ್ತಿ ಅಪೂರ್ಣವಲ್ಲ; ಅಶಿವವಲ್ಲ. ಆ ಪೂರ್ಣಪ್ರಜ್ಞೆ-ಪೂರ್ಣಾನುಭವವುಳ್ಳ ಗುರುದೇವನ ಹೃದಯ ಪರಿಪಕ್ವವಾಗಿರುತ್ತದೆ. ಪೂರ್ಣತೃಪ್ತಿಯುಳ್ಳದಾಗಿರುತ್ತದೆ. ಅಂತಹ ಪೂರ್ಣಜೀವಿಯೇ ಕೈವಲ್ಯ ಕಲ್ಪತರುವಾದ ಶ್ರೀಗುರುದೇವ. ಅವನು ಮೂಲೋಕಪೂಜ್ಯ; ಜೀವನ್ಮುಕ್ತ. ಅಂಥವನು ಸಾಮಾನ್ಯವಾಗಿ ಸರ್ವತ್ರ ಸಿಕ್ಕುವುದಿಲ್ಲ.

"ಕ್ಷೀರಾಬ್ಧಿರಿವ ಸಿಂಧೂನಾಂ ಸುಮೇರುರಿವ ಭೂಭೃತಾಂ ।
ಗ್ರಹಾಣಾಮಿವ ತಿಗ್ಮಾಂಶುರ್ಮಣೀನಾಮಿವ ಕೌಸ್ತುಭಃ ॥೭॥
ದೃಮಾಣಾಮಿವ ಭದ್ರಶ್ರೀರ್ದೇವಾನಾಮಿವ ಶಂಕರಃ ।
ಗುರುಶ್ಶಿವಃ ಪರಃಶ್ಲಾಘ್ಯೋ ಗುರೂಣಾಂ ಪ್ರಾಕೃತಾತ್ಮನಾಂ ॥೮॥"

ಕಡಲಗಳಲ್ಲಿ ಹಾಲ್ಗಡಲು, ಬೆಟ್ಟಗಳಲ್ಲಿ ಬೆಳ್ಳಿಯ ಬೆಟ್ಟ, ನಕ್ಷತ್ರಗಳಲ್ಲಿ ನೇಸರ, ರತ್ನಗಳಲ್ಲಿ ಕೌಸ್ತುಭ, ಮರಗಳಲ್ಲಿ ಶ್ರೀಗಂಧದಮರ, ಸುರರಲ್ಲಿ ಶಂಕರ ಶ್ರೇಷ್ಠವಾಗಿರುವಂತೆ ಪ್ರಾಕೃತಗುರುಗಳಲ್ಲಿ ಶಿವಾದ್ವೈತ ತತ್ಪರನಾದ ಗುರುದೇವನು ಶ್ರೇಷ್ಠನೂ ಶ್ಲಾಘ್ಯನೂ ಆಗಿದ್ದಾನೆ. ಪರಶಿವಸ್ವರೂಪನಾಗಿದ್ದಾನೆ.

ವೀರಶೈವ ಗುರುದೇವ ಹಾಲ್ಗಡಲಿನಂತೆ ಅಮೃತಮಯ, ಮೇರುವಿನಂತೆ ಅಮಲ, ಸೂರ್ಯ ಕೌಸ್ತುಭಗಳಂತೆ ಪ್ರಕಾಶಮಯ,—ಅಮೌಲ್ಯ; ಶ್ರೀಗಂಧದಂತೆ ಶುಭ ಸಂಸ್ಕಾರದ ಸದ್ವಾಸನೆಯುಳ್ಳವ, ಶಂಕರನಂತೆ ಸಚ್ಚಿದಾನಂದ-ಸ್ವರೂಪ.

ಬರಿ ವೇಷದಿಂದ ಬಹುಮಾತಿನಿಂದ ಈ ಬಗೆಯ ಗುರುತ್ವ ಬಾರದು; ನಿರ್ದೇಶಕತ್ವ ಬಾರದು. ಅಂತರಂಗದಲ್ಲಿ ಅವಿರಳ ಜ್ಞಾನಾನುಭವ ಬಹಿರಂಗ

ದಲ್ಲಿ ಕ್ರಿಯಾನುಭವಗಳು ಆಳವಟ್ಟಿರಬೇಕು. ಲಿಂಗಾರ್ಚನ ಲಿಂಗಾರ್ಪಣ ಲಿಂಗಾನುಭವಗಳಲ್ಲಿ ನಿರತನಾಗಿರಬೇಕು. ತನು ಮನ ವಿಕಾರಗಳು ತೊಲಗಿರಬೇಕು.

"ತನು ಬೆತ್ತಲೆ ಇದ್ದರೇನು, ಮನ ಶುಚಿಯಾಗದನ್ನಕ್ಕರ ?
ಮಂಡೆ ಬೋಳಾದಡೇನು, ಭಾವ ಬಯಲಾಗದನ್ನಕ್ಕರ ?
ಭಸ್ಮವ ಹೂಸಿದಡೇನು, ಕರಣಾದಿಗುಣಂಗಳನೊತ್ತಿ ಸುಡದನ್ನಕ್ಕರ ?
ಇಂತೀ ಆಶೆಯ ವೇಷದ ಭಾಷೆಗೆ ಗುಹೇಶ್ವರಾ,
ನೀ ಸಾಕ್ಷಿಯಾಗಿ ಛೀ ಎಂದು ಕಳೆವೆನು."

"ಘಟಸಂಸ್ಕಾರದಲ್ಲಿ ಪಟಲ ಹರಿವುದೆ,
ಜೀವ ಸಂಸ್ಕಾರವಿಲ್ಲದನ್ನಕ್ಕ ?
ವೇಶಧಾರಿ, ತನ್ನಲ್ಲಿ ಗ್ರಾಸವಹುದಲ್ಲದೆ;
ಜ್ಞಾನ ಸಂಸ್ಕಾರವಿಲ್ಲದನ್ನಕ್ಕ ಭವವೆಂತು ಹರಿವುದು ?
ಅಂಗಭವಿಯ ಲಿಂಗಭವಿಯ ಕಳೆದುಳಿದಲ್ಲದೆ
ಕೂಡಲ ಚನ್ನಸಂಗಯ್ಯನ ಹೊದ್ದಬಾರದು."

ಅಂಗ-ಲಿಂಗಗಳೆರಡಕ್ಕೂ ಶ್ರೀಗುರುದೇವನ ಸಂಸ್ಕಾರ ಬೇಕು. ಇವೆರೆಡನ್ನೂ ನಿರ್ಮಲಗೊಳಿಸಿ ನಿರ್ದೇಶಿಸಬಲ್ಲ ವೀರಶೈವ ಗುರುದೇವ. ದೇಹವನ್ನು ಮಾಂಸ ಪಿಂಡವಳಿದು ಮಂತ್ರಪಿಂಡವಾಗಿಸಬಲ್ಲ. ಪ್ರಾಸಾದಿಕತೆಯನ್ನು ತರಬಲ್ಲ ಪ್ರಸಾದ ಕಾಯದಲ್ಲಿ ಅಂಗ-ಲಿಂಗಗಳೆರಡನ್ನೂ ಕ್ರಿಯಾಜ್ಞಾನಗಳೆರಡರಿಂದ ನಿರ್ದೇಶಿಸಬಲ್ಲ. ಆ ನಿರ್ದೇಶಕ್ಕೆ ಬೇಕಾದ ಶೀಲಗಳನ್ನು ಸಂಪಾದಿಸಲು ಪ್ರೇರೇಪಿಸಬಲ್ಲ.

ಜೀವಸಂಸ್ಕಾರ ತೀರ ಅಗತ್ಯ. ಕೇವಲ ದೇಹಸಂಸ್ಕಾರದಿಂದ ಪೂರ್ಣ ಪ್ರಯೋಜನವಾಗದು. ಪರಮಾತ್ಮ ಸಂಬಂಧ ಸಾಧಿಸದು. ಪರಮಾತ್ಮಸಂಬಂಧವೆಂದರೆ ವಿಶಾಲವರ್ತುಲದ ಸಂಬಂಧ. ಕೇವಲ ವೈಯಕ್ತಿಕ ಸಂಕುಚಿತ ಸ್ವಭಾವ ರೂಪ ಪ್ರಾಕೃತಿಕವರ್ತುಲದಿಂದ ಮುನ್ನಡೆದು ವಿಶಾಲ ಬಯಲ ವರ್ತುಲಕ್ಕೆ ಬರಬೇಕಾದರೆ ಆತ್ಮಸಂಸ್ಕಾರ ಅಗತ್ಯ; ಜ್ಞಾನ ಸಂಸ್ಕಾರ ಅಗತ್ಯ; ಶೀಲಸಂಪಾದನ ಅಗತ್ಯ,

ಮನದ ಸಂಕಲ್ಪ ವಿಕಲ್ಪಗಳ ಸುಳಿಗಳನ್ನು ದಾಟದೆ, ಅಹಾಂಕರದ ಸಂಕುಚಿತ ಸ್ವಭಾವವನ್ನು ಮೀರದೆ ವಿಶಾಲವೂ ವಿಶುದ್ಧವೂ ಆದ ಶೀಲಮಾಧುರ್ಯದ ಸವೆಯದ ಸವಿ ಲಭ್ಯವಾಗುವುದು.

ಆತ್ಮದ ಮಹತ್ತತೆಯನ್ನು ಅರಿದು ಅಳವಡಿಸಿಕೊಳ್ಳುವುದೇ ಅಷ್ಟಶೀಲ. ಆತ್ಮ ಅಣುಮಾತ್ರವಲ್ಲ, ಪರಮವೂ ಅಹುದೆಂಬುದನ್ನು ಅರಿವ ಶೀಲ ಅದಾರಿಗೆ ಬೇಡ ? ಆಕಾಶಾಂಗದ ಶರಣನಿಗಂತೂ ಸಾವಿರಪಾಲಿಗೂ ಬೇಕು. ಅದಕ್ಕಾಗಿ ಆ ಶೀಲ ಸಂಪಾದನ ಸ್ಥಲಕ್ಕೆ ಆತ ಸಾಗಂತ್ತಾನೆ.

೪. ಶೀಲ ಸಂಪಾದನ ಸ್ಥಲಂ

ನಿರ್ದೇಶಕ್ಕೆ ನೆರವು ಶೀಲ. ಶೀಲವಿಲ್ಲದೆ ನಿರ್ದೇಶ ನೆಲೆ ನಿಲ್ಲದು. ಭಾವ ಲಿಂಗದ ನಿರ್ದೇಶವಾಗದು. ಪ್ರಸಾದಲಿಂಗದ ಪರಿಣಾಮವುಂಟಾಗದು. ಅವಿರಳ ವಾದ ಆ ಪರಾವಾಣಿಯು ಪರಿಪಕ್ವವಾಗದು. ಶಿವಭಾವ ಸಮನಿಸದು.

ಸ್ವಭಾವ, ಸದ್ವೃತ್ತಿ, ಸದ್ಗುಣ, ಒಳ್ಳೆಯ ನಡತೆ, ಆಚಾರ ಅರ್ಥ ಎಂಬುದು ಹೆಚ್ಚು ಬಳಕೆಯಲ್ಲಿದೆ. ಬಾಹ್ಯಶೌಚ ಅಂತಶ್ಶೌಚ ಎಂದು ಶೀಲಾಚಾರ ಎರಡು ಬಗೆಯುಂಟು. ಬಾಹ್ಯಶೀಲ ತನುವಿಗೆ ಸಂಬಂಧಿಸಿದುದು; ಅಂತಶ್ಶೀಲ ಮನಕ್ಕೆ ಸಂಬಂಧಿಸಿದುದು. ಬಾಹ್ಯಶೀಲಕ್ಕೆ ಜಲ ಪ್ರಧಾನ. ಅಂತಃ ಶೀಲಕ್ಕೆ ನಿರ್ಮಲ ಸ್ವಭಾವ ಮುಖ್ಯ; ವಿಶಾಲ ಸ್ವಭಾವ ಮುಖ್ಯ.

> "ನದಿಯ ಜಲ ಕೂಪ ಜಲ ತಟಾಕ ಜಲವೆಂದು ನುಡಿವರು
> ಹಿರಿದು ಕಿರಿದಾವುದೆಂದು ಅರಿಯರು. ಬೇರೆ ಮತ್ತೊಂದು ಭಾಷೆಯ
> ವ್ರತ ನೇಮಂಗಳ ಹಿಡಿವ ಶೀಲ ಸಂಬಂಧಿಗಳು ಜಾತ್ಯಂಧಕರು ನಿಮ್ಮ
> ನೆತ್ತಬಲ್ಲರು ಗುಹೇಶ್ವರಾ ?"

ಇದಕ್ಕೆ ಪುರಾತನರು ಹೀಗೆ ಅರ್ಥ ಬರೆದಿದ್ದಾರೆ : ಲಿಂಗಸಂಬಂಧ ಸಕೀಲ ವನರಿದು ನಿಜತತ್ತ್ವ ವೇದಿಗಳಹ ಬುದ್ಧಿಯನರಿಯದೆ ಸೂತಕ ಶೀಲವನೆ ಪ್ರಾಣವ ಮಾಡಿಕೊಂಡು ಇಪ್ಪವರೆಲ್ಲರು ಅಜ್ಞಾನಿಗಳೆಂಬುದೀಗ ಈ ವಚನದ ತಾತ್ಪರ್ಯಾರ್ಥ.

ಜಲಶೌಚದಲ್ಲಿಯೇ ಶೀಲ ಪರ್ಯವಸಾನವಾಗಬಾರದು. ತ್ರಿವಿಧ ಮಲ ಗಳನ್ನು ತೊಳೆದುಕೊಳ್ಳುವ ಒಳ್ಳೆಯ ನಡತೆ ಒಗ್ಗುವ ಸತ್‌ಶೀಲ; ಸಂಪಾದ ನೀಯ ಶೀಲ. ಸ್ವಭಾವ ಶೀಲ ಸರ್ವೋತ್ತಮ.

"ಆಸೆ ಎಂಬ ಕೂಸನೆತ್ತಿ ರೋಷ ಎಂಬ ತಾಯು ಬಂದು
ಮುಂದೆ ನಿಂದಿಪ್ಪಳು ನೋಡಾ. ಇಂತಿವೆರಡಿಲ್ಲದೆ,
ಕೂಸನೆತ್ತಬಲ್ಲಡೆ ಅವ ಅಚ್ಚಶೀಲವಂತನೆಂಬೆ ಕಾಣಾ ಗುಹೇಶ್ವರಾ."

ಆಸೆ ಆಮಿಶಗಳನ್ನು ಕಳೆವುದೆ ಅಚ್ಚಶೀಲ. ರೋಷ ದೋಷಕ್ಕೆ ಶರಣನು ತುತ್ತಾಗಬಾರದು. ಹೃದಯ ತೊಟ್ಟಿಲಲ್ಲಿರುವ ಚಿನ್ನದಂತೆ ಹೊಳೆವ ಕೂಸನ್ನು ಎತ್ತಿ ಪರಾಭಕ್ತಿಯಿಂದ ಮುದ್ದಿಸುವುದೇ ಸತ್ಯಶೀಲ. ಅಂಗ–ಲಿಂಗಗಳ ಕುಳಸ್ಥಳಗಳನ್ನು ಅರಿದು ಅಳವಡಿಸಿಕೊಳ್ಳುವ ಶೀಲವಂತಿಕೆ ಷಟ್‌ಸ್ಥಲ ಸಾಧಕನಾದ ಶರಣನಿಗೆ ಸಹಜ ಶೀಲ. ಉಭಯಕುಳಸ್ಥಲದರಿವು ನಿಷ್ಪತ್ತಿಗೊಳ್ಳಬೇಕು. ಸದ್ವೃತ್ತಿಯೇ ಶೀಲ.

"ಶೀಲವೆಂದೇನೋ ಪ್ರಪಂಚು ನಾಸ್ತಿಯಾಗದನ್ನಕ್ಕ ?
ಸೀಮೆಯೆಂದೇನೋ ಪಂಚೇಂದ್ರಿಯ ವಿರಹಿತವಾಗದನ್ನಕ್ಕ ?
ಶೀಲಕ್ಕೆ ಭವಂ ನಾಸ್ತಿ; ಸೀಮೆಗೆ ಭವಂ ನಾಸ್ತಿ. ಇದು ಕಾರಣ
ಕೂಡಲಚನ್ನಸಂಗಯ್ಯ ನಿಮ್ಮ ಶೀಲವಂತರಪೂರ್ವ."
"ಜಿಜ್ಞಾಸಾ ಶಿವತತ್ತ್ವಸ್ಯ ಶೀಲಮಿತ್ಯುಚ್ಯತೇ ಬುಧೈಃ ।
ನಿರ್ದೇಶ್ಯ ಯೋಗಾದಾರ್ಯಾಣಾಂ ತದ್ವಾನ್ ಶೀಲೀತಿ ಕಥ್ಯತೇ ॥೧॥"

ಹಿಂದಿನ ಸ್ಥಲದಲ್ಲಿ ಶಿವಾಚಾರ್ಯರು ನಿರೂಪಿಸಿದ ನಿರ್ದೇಶ್ಯ ಯೋಗದಿಂದ ಶಿವತತ್ತ್ವವನ್ನು ಅರಿದು ಅಳವಡಿಸಿಕೊಳ್ಳುವ ಅಪೇಕ್ಷೆಯುಂಟಾಗುವುದೇ ಶೀಲ, ಆ ಬಗೆಯ ಶೀಲವುಳ್ಳವನೆ ಶೀಲವಂತ.

ಈ ರೇಣುಕ ಜಗದ್ಗುರುವಿನ ಆದೇಶದಂತ ಶೀಲದ ಮಟ್ಟ ನೀಳಕ್ಕೇರಿದೆ. ನಿತ್ಯತೆಯು ಹೊತ್ತಿದೆ. "ಶಿವತತ್ತ್ವಜಿಜ್ಞಾಸಯೆ ಶೀಲ" ಎಂದು ಸೂತ್ರಪ್ರಾಯವಾಗಿ ನಿರೂಪಿಸಿ ಶೀಲಕ್ಕೆ ಒಂದು ಹೊಸ ಅರ್ಥವನ್ನು ಅಳವಡಿಸಿದ್ದಾರೆ. ಓದುಗರಿಗೆ ಒಂದು ಹೊಸ ದೃಷ್ಟಿಯನ್ನು ಹೊಸಭಾವವನ್ನು ಕೊಟ್ಟಿದ್ದಾರೆ. ಜಿಜ್ಞಾಸಾಧಿಕರಣವನ್ನು ಆರಂಭಿಸಿದ್ದಾರೆ. ಪರಶಿವಬ್ರಹ್ಮ ಜಿಜ್ಞಾಸೆಯೆ ಶರಣನ ಶೀಲ.

ಶರಣನ ಜಿಜ್ಞಾಸೆಗೆ ವಿಷಯ ಶಿವತತ್ತ್ವ. ಇದರಿಂದ ಅಂತರಂಗ ಶುದ್ಧಿಯುಂಟಾಗುತ್ತದೆ. ಶಿವಾಚಾರ ಬಹಿರಂಗವನ್ನು ಶುದ್ಧವಿಸಿದರೆ ಶಿವ ವಿಚಾರ ಅಂತಃಕರಣಶುದ್ಧಿಗೆ ಕಾರಣವಾಗಿದೆ; ಅಂತಃಶೀಲವೆನಿಸಿದೆ. ಇಷ್ಟಲಿಂಗ ಆಚಾರಕ್ಕೆ ಅಧೀನ. ಪ್ರಾಣಲಿಂಗ ವಿಚಾರಕ್ಕೆ ಅಧೀನ. ಭಾವಲಿಂಗ ವಿಚಾರಾನುಭವಕ್ಕೆ ಅಧೀನ.

ಜಿಜ್ಞಾಸೆಯೆಂದರೆ ಅರಿತುಕೊಳ್ಳುವ ಬಯಕೆ. ಶಿವತತ್ತ್ವವನ್ನು ಅರಿತುಕೊಳ್ಳುವ ಆಸಕ್ತಿಯೂ ಶೀಲವೆನಿಸುತ್ತದೆ, ಶಿವಜಿಜ್ಞಾಸೆಗೆ ಅಂತಃಕರಣ ಶರಣಾಗಿರುವುದೇ ಸತ್ಯಶರಣತ್ವ. ಶರಣನ ಸತ್‌ಶೀಲ. ಶರಣ ಶಿವಜಿಜ್ಞಾಸು, ಶಿವತತ್ತ್ವಜಿಜ್ಞಾಸೆ ಶಿವನ ಅನುಭವಕ್ಕೆ ಶಿವನ ಆನಂದಕ್ಕೆ ಹಾದಿಯನ್ನು ಮಾಡಿಕೊಡುತ್ತದೆ. ಶರಣನ ಶೀಲವನ್ನು ಉಳಿಸಿ ಬೆಳಸುತ್ತದೆ.

ಶಿವಜಿಜ್ಞಾಸೆಯಲ್ಲಿಯೇ ತಲ್ಲೀನವಾದರೆ ಶಿವೇತರ ವಿಚಾರಗಳಿಗೆ ಅವಕಾಶವಿರುವುದಿಲ್ಲ; ಆಸಕ್ತಿಯಿರುವುದಿಲ್ಲ. ಶಮದಮಾದಿಗಳು ಸಹಜವಾಗಿ ಸಂಭವಿಸುತ್ತವೆ. ಶಿವತತ್ತ್ವಜಿಜ್ಞಾಸೆಯು ಸಾಂಪ್ರದಾಯಿಕ ಮೂಢಶೀಲವನ್ನು ಒಪ್ಪದು; ಮೂಢಾಚಾರವನ್ನು ಒಪ್ಪದು.

ಶಿವಜಿಜ್ಞಾಸೆಯಿಂದ ಇಚ್ಛೆ ಸ್ವಚ್ಛವಾಗುತ್ತದೆ. ಅಜ್ಞಾನ ಅಳಿಯುತ್ತದೆ. ತಿಳಿಬೆಳಗು ಒಳಗೆ ತೊಳಗುತ್ತದೆ. ಅಜ್ಞಾನ ಜನ್ಯಕರ್ಮ-ದುಃಖಗಳು ದೂರಾಗುತ್ತವೆ. ಭವತಿಮಿರ ತೊಲಗುತ್ತದೆ. ಶಿವಜಿಜ್ಞಾಸೆಯಿಂದ ಶಿವತ್ವಪ್ರಾಪ್ತಿಯಾಗುತ್ತದೆ.

ಶಿವತತ್ತ್ವ ನಿತ್ಯಶುದ್ಧ, ನಿತ್ಯಬುದ್ಧ; ನಿತ್ಯಾನಂದ. ಅದು ಸರ್ವಸಮನ್ವಿತ. ಜೀವತತ್ತ್ವ ನಿಸರ್ಗ ಅಶುದ್ಧ, ನಿಸರ್ಗಬದ್ಧ, ದುಃಖಸಮನ್ವಿತ. ಇದರಿಂದಾಗಿ ಶಿವಜಿಜ್ಞಾಸೆಗೆ ಎಡೆಯಿದೆ; ಅರ್ಥವಿದೆ.

ಕೇವಲ ಶಿವಜಿಜ್ಞಾಸೆಯಲ್ಲ, ಶಿವ-ತತ್ತ್ವ-ಜಿಜ್ಞಾಸೆ. ತತ್ತ್ವಪದ ಪ್ರಯೋಗ ಭಾವಪೂರ್ಣವಾಗಿದೆ. ಶಿವನಿಗೆ ಭಿನ್ನವಾದ ಮೀಮಾಂಸೆಯನ್ನು ಮಾಡುವುದಲ್ಲ. ಶಿವನಾಗಿ ಶಿವನನ್ನು ಮೀಮಾಂಸಿಸುವುದು. ಶಿವತತ್ತ್ವಜಿಜ್ಞಾಸೆಯೆಂದರೆ ‘ಶಿವಾನುಭವ ಗೋಷ್ಠಿ’ ಎಂತಲೂ ಹೇಳಬಹುದು. ‘ತತ್‌-ತ್ವ’ ಅದೇ ಆಗುವ ಮೀಮಾಂಸೆ. ಅಥವಾ ಅಂಶಭಾವದಿಂದಾಗಿದ್ದು ಅಖಂಡ

ವಾಗುವ ತೀವ್ರಾಸಕ್ತಿ. ಶಿವಾಚಾರ, ಶಿವವಿಚಾರ, ಶಿವಾನುಭವ, ಶಿವಾನಂದ ಇವು ಶೀಲಸಂಪತ್ತು. ಇವನ್ನು ಸಂಪಾದಿಸುವುದೆ ಶರಣನ ಶೀಲಸಂಪಾದನೆ.

"ಪ್ರಪನ್ನಾರ್ತಿಹರೇ ದೇವೇ ಪರಮಾತ್ಮನಿ ಶಂಕರೇ ।
ಭಾವಸ್ಯ ಸ್ಥಿರತಾ ಯೋಗಃ ಶೀಲಮಿತ್ಯುಚ್ಯತೇ ಬುಧೈಃ ॥೨॥

ಮೊದಲ ಮಂತ್ರದಲ್ಲಿ 'ಜಿಜ್ಞಾಸಾಯೋಗ'ವೆ ಶೀಲವೆಂದು ಹೇಳಿ ಈಗ ಈ ಮಂತ್ರದಲ್ಲಿ 'ಭಾವ ಯೋಗ'ವೆ ಶೀಲವೆಂದು ನಿರೂಪಿಸಲಾಗಿದೆ.

ಶಿವನು ಪ್ರಪನ್ನಾರ್ತಿಹರನು ; ಅಂದರೆ ಮರೆ ಹೊಕ್ಕವರನ್ನು ಕಾಪಾಡುವವನು. ಶರಣಾಗತ ರಕ್ಷಕನು. ಬಗೆದುಂಬಿ ಬಳಿಗೆ ಬಂದವರ ಬವಣೆಯನ್ನು ಹರಿಸುವವನು ಆದರಿಂದಾಗಿ ಆತನು ಶಂ-ಕರನು ಸುಖದಾಯಕನು. ದೇವನು ಬೆಳಗುವವನು. ಪರಮಾತ್ಮನು. ಅಂಥವನಲ್ಲಿ ಬಗೆ ನೆಲೆಗೊಳ್ಳಬೇಕು. ಅದೇ ಯೋಗ, ಅದೇ ಶೀಲ. ಶಿವಜ್ಞಾನಿಗಳಾದ ಶಿವಾಚಾರ್ಯರ ಹೇಳಿಕೆಯಿದು.

ಭಾವ ನಿಶ್ಚಲತೆಯೆ ಯೋಗ ; ಭಾವಸ್ಥಿರತೆಯೆ ಶೀಲ. ಅರಿಯುವ ಧರ್ಮ ಜಿಜ್ಞಾಸೆಯಾದರೆ ಅವಿರಳವಾಗಿರುವಿಕೆ ಭಾವ. ಅವಿರಳತೆ ಅಚ್ಚಳಿಯದಂತಾಗುವಿಕೆಯೇ ಭಾವಸ್ಥಿರತೆ. ಸ್ಥಿರವೆಂದರೆ ಅಲುಗಾಡದೆ ನಿಡುಗಾಲ ನೆಲಸುವಿಕೆ. ಇನ್ನೆಲ್ಲಿಯೂ ಅಲ್ಲ, ಆ ಶಂ-ಕರನಲ್ಲಿ ! ಆ ಪರಮಾತ್ಮನಲ್ಲಿ !ಆ ದೇವನಲ್ಲಿ ! ಮರೆಹೊಕ್ಕವರ ಮನೋವ್ಯಥೆಯನ್ನು ಮಾಣಿಸುವವನಲ್ಲಿ ! ಅದು ಭಾವಯೋಗ, ಭಾವಶೀಲ; ಭಾವೈಕ್ಯ.

ಸ್ವ-ಭಾವವೂ ಶೀಲ ಶಬ್ದದ ಅರ್ಥ. ಸಹಜ ಸ್ವಭಾವದಿಂದಿರುವುದೂ ಶೀಲ. ಸ್ವಯಭಾವದಿಂದಿರುವುದೂ ಸುಶೀಲ. ಭಾವಸ್ವಯವಾಗಿ ಸಹಜವಾಗಿ ಸ್ವಕೀಯವಾಗಿ ಇರಬೇಕಾದರೆ ಭಾವ ಭ್ರಾಂತಿರಹಿತವಾಗಿರಬೇಕು. ನಿಶ್ಚಲವೂ ನಿರ್ಮಲವೂ ಆಗಿರಬೇಕು. ಶಿವಭಾವ ಸ್ಥಿರವಾಗಿರಬೇಕು. ಆಗ ಅದು ಭಾವಯೋಗವಾಗುತ್ತದೆ.

"ತಜ್ಜಪಸ್ತದರ್ಥಭಾವನಮ್"- ಯೋಗಸೂತ್ರ. ಪ್ರಣವಸ್ವರೂಪನಾಗಿದ್ದಾನೆ ಪರಮಾತ್ಮ. ಅವನಲ್ಲಿ ಭಾವಸ್ಥಿರವಾಗಬೇಕಾದರೆ ಆತನ ಸ್ವರೂಪವೇ ಆದ ಪ್ರಣವಜಪ, ಆ ಪ್ರಣವಾರ್ಥ ಭಾವನೆಗಳು ಅಳವಡಬೇಕು. ಅಳವಟ್ಟರೆ ಅದೇ ಪರಮೇಶ್ವರ ಪ್ರಣಿಧಾನ; ಅದೇ ಪರಶಿವನ ಪರಾಭಕ್ತಿ. ಈ ಭಾವ

ಪೂರ್ಣಭಕ್ತಿ, ಈ ಭಾವ ಸ್ಥಿರತೆಯು ಶೀಲ-ಶಿವನಿಗೆ ಅತ್ಯಂತ ಪ್ರಿಯವಾದ ಉಪಾಯ, ಅತ್ಯಂತ ಸನ್ನಿಹಿತಿವಾದ ಯೋಗ. ಶರಣನಿಗೆ ಸುಗಮವಾದ ಸಾಧನ. ಇದರಿಂದ ಪರಶಿವನ ಸ್ವರೂಪ ಭಾವನಿಷ್ಠವಾಗುತ್ತದೆ; ಭಾವಸಂಪತ್ತಾಗುತ್ತದೆ. ಪರಮಾತ್ಮನ ಸಾಕ್ಷಾತ್ಕಾರಕ್ಕೆ ಪರಶಿವಾನಂದ ಪ್ರಾಪ್ತಿಗೆ ಭಾವಯೋಗಕ್ಕಿಂತ ಬೇರೊಂದು ಸುಲಭಯೋಗವಿಲ್ಲ. ಭಾವಶೀಲಕ್ಕಿಂತ ಬೇರೊಂದು ಸದ್ವೃತ್ತಿಯಿಲ್ಲ.

ಯೋಗಾಂಗ ಶುದ್ಧಿಗೆ ಭಾವಶೀಲ ಅಥವಾ ಭಾವಯೋಗ ಅಗತ್ಯ. ಭಾವಯೋಗ ತಲ್ಲೀನತೆ ಅಥವಾ ಯೋಗಮತದಂತೆ ಅಸಂಪ್ರಜ್ಞಾತ ಸಮಾಧಿಗೆ ಸಾಧನ. ಭಕ್ತಮಾಹೇಶ್ವರರು ತ್ಯಾಗಾಂಗವನ್ನು ಜಾಗ್ರದವಸ್ಥೆಯನ್ನು ಇಷ್ಟಲಿಂಗೋಪಾಸನೆಯಿಂದ ಧಾರಣದಿಂದ ಶುದ್ಧವಿಸಿದರೆ, ಪ್ರಸಾದಿ ಪ್ರಾಣಲಿಂಗಿಗಳು ಭೋಗಾಂಗವನ್ನು ಸ್ವಪ್ನಾವಸ್ಥೆಯನ್ನು ಪ್ರಾಣಲಿಂಗ ಧ್ಯಾನದಿಂದ ಶುದ್ಧವಿಸುತ್ತಾರೆ. ಅಂತೆಯೇ ಶರಣ-ಐಕ್ಯರು ಯೋಗಾಂಗವನ್ನು ಸುಷುಪ್ತಿಯನ್ನು ಭಾವಲಿಂಗ ಸಮಾಧಿಯಿಂದ ಅಂದರೆ ಸ್ಥಿರಭಾವಶೀಲದಿಂದ ಶದ್ಧವಿಸುತ್ತಾರೆ. ತಮೋಗುಣವನ್ನು ತೊಡೆಯುತ್ತಾರೆ.

ಶರಣನಿಗೆ ಭಾವಸ್ಥಿರವಾಗುವುದೇ ಯೋಗ; ಅದೇ ಶೀಲ. ಸ್ಥಿರವಾದ ಭಾವ ಅದೊಂದು ಪರುಷಮಣಿ. ಅದರಿಂದ ಯೋಗಾಂಗವೆಂಬ ಲೋಹ ಹೇಮವಾಗುತ್ತದೆ. ಅಲಭ್ಯಲಾಭವಾಗುತ್ತದೆ. ಭಾವಶ್ರೀಮಂತಿಕೆ ಸಂಪ್ರಾಪ್ತವಾಗುತ್ತದೆ. ಭಾವಸಂಪತ್ತನ್ನು ಸಂಪಾದಿಸಿದವರು ಭುವನ ಪೂಜ್ಯರಾಗುತ್ತಾರೆ. "ಆವಾವ ಭಾವದಲ್ಲಿ ಮಾಡಿಕೂಡಿಹೆವೆಂಬರ ಬಾಗಿಲ ತೋರಯ್ಯ. ತನುವನೊಪ್ಪಿಸಿದವರ, ಮನವನೊಪ್ಪಿಸಿದವರ, ಧನವ (ಭಾವವ)ನೊಪ್ಪಿಸಿದವರ ಬಾಗಿಲತೋರಯ್ಯ. ಇವನೆಲ್ಲವನೊಪ್ಪಿಸಿ ಜಂಗಮವೆನ್ನವರೆನ್ನವರೆನ್ನವರೆಂಬವರ ಕೆರಹ ಹೊತ್ತಿರಿಸೆನ್ನನು, ಕೂಡಲ ಸಂಗಮದೇವಾ."

ಶಿವನಿಗೆ ಭಾವವನ್ನೊಪ್ಪಿಸಿದವರು ಮಹಾನುಭಾವರು. ಅವರಿಗೆ ಸ್ವಾನುಭವ ಸನ್ನಿಹಿತವಾಗಿರುತ್ತದೆ. ಪರಶಿವ ಸಾಕ್ಷಾತ್ಕಾರವಾಗಿರುತ್ತದೆ. ಇಂಥವರಲ್ಲಿ ಶರಣನಾದವನು ತನ್ನ ಆಪ್ತ-ಅಂಗ-ಸ್ಥಾನ-ಸದ್ಭಾವಗಳಿಂದ ಸೇವೆ ಸಲ್ಲಿಸಿ ಭಾವಸ್ಥೈರ್ಯವನ್ನು ಅಳವಡಿಸಿಕೊಳ್ಳುತ್ತಾನೆ. ಸಾತ್ವಿಕ ಭಾವಗಳನ್ನು ತಳೆಯುತ್ತಾನೆ.

ಗಿಂತ ಮೇಲಿನದು ಆಧ್ಯಾತ್ಮಿಕ ವಿಜ್ಞಾನ. ವಿಜ್ಞಾನಮಯ ಕೋಶವಿದೆ. ಆಧಿದೈವಿಕ ವಿಜ್ಞಾನ ವಿವಿಧ. ಅವೆಲ್ಲಕ್ಕು ಅಧಿಕವಾದುದು ಶೈವೀವಿಜ್ಞಾನ.

ಶೈವೀ ವಿಜ್ಞಾನದಂತೆ ಶೈವೀಧ್ಯಾನವೂ ಶ್ರೇಷ್ಠವಾದುದು. ಶಿವೈಕತಾನತೆಯೇ ಶಿವಧ್ಯಾನ. ಶಿವಜ್ಞಾನ ಶಿವಧ್ಯಾನಗಳೆರಡು ಶಿವಯೋಗದಂಗಗಳು.

"ಪ್ರಣವೋ ಧನುಃ ಶರೋಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥೪॥"
—ಮುಂಡಕೋಪನಿಷತ್

ಇದೊಂದು ಉತ್ತಮ ರೂಪಕ ; ಪೂರ್ಣ ರೂಪಕ. ಪ್ರಣವ ಪರಮಾತ್ಮನ ವಾಚಕ. ಅದುವೆ ಬಿಲ್ಲು. ಆತ್ಮಾಂಗವೆ ಬಾಣ. ಪರಶಿವ ಬ್ರಹ್ಮವೇ ಅದಕ್ಕೆ ಗುರಿ. ಉನ್ಮತ್ತನಾಗದೆ ವೇಧಿಸಿ (ಹೊಡೆ)ದರೆ ಬಾಣದಂತೆ ಬ್ರಹ್ಮದಲ್ಲಿ ಬೆರೆಯುತ್ತಾನೆ.

ಧ್ಯಾನೈಕತಾನತೆಗೆ ಇದೊಂದು ಉತ್ತಮ ಉದಾಹರಣೆ: ಧ್ಯೇಯಾಕಾರ ವೃತ್ತಿಯೇ ಧ್ಯಾನೈಕತಾನತೆ. "ತತ್ರ ಪ್ರತ್ಯಯೈಕ ತಾನತಾ ಧ್ಯಾನಂ" ಎಂದು ಯೋಗ ಸೂತ್ರ ನಿರೂಪಣೆ. ತದೇಕಪರನಾಗಿ ಚಿತ್ತೈಕಾಗ್ರತೆಯಿಂದ ಶಿವನನ್ನು ನೆನೆವುದೆ ಶಿವಧ್ಯಾನರೂಪ ಶೀಲ. ಸದಾ ಶಿವಪ್ರಾಪ್ತಿಗಾಗಿಯೆ ಉತ್ಸುಕನಾಗಿರಬೇಕು. ಭಿನ್ನ ಅರಿವು, ಭಿನ್ನ ನೆನಹು ಭಿನ್ನ ಒಲವುಗಳಿರಬಾರದು. ಶಿವನದೇ ಅರುಹು, ಶಿವನದೇ ನೆನಹು, ಶಿವನದೇ ಒಲವು ಉಂಟಾದರೆ ಅದು ಉತ್ತಮ ಶೀಲ.

ಇಷ್ಟಾಗಬೇಕಾದರೆ ಮುಮ್ಮೊದಲು ಇಷ್ಟಲಿಂಗದಲ್ಲಿ ದೃಷ್ಟಿನಿಲ್ಲಬೇಕು. ನಿಂತರೆ ಪ್ರಾಣಲಿಂಗದಲ್ಲಿ ಮನ ನಿಲ್ಲುತ್ತದೆ. ಆ ಬಳಿಕ ಭಾವಲಿಂಗದಲ್ಲಿ ಭಾವ ಬೆರೆಯುತ್ತದೆ. ಇದುವೇ ನಿಜವಾದ ಶೀಲ. ಇವು ಮೂರೂ ಬೇರೆ ಕಡೆಗೆ ಸೂಸಬಾರದು.

ಇಷ್ಟಲಿಂಗದಲ್ಲಿ ದೃಷ್ಟಿಯನ್ನು ನಿಲ್ಲಿಸುವುದು ಸಕಲ ಧ್ಯಾನ, ಅಥವಾ ಸಕಲ ಶೀಲ ; ಸಕಲಯೋಗ. ಹೇಗೆ ಹೇಳಿದರೂ ಒಂದೆ. ಪ್ರಾಣಲಿಂಗದಲ್ಲಿ ಮನ ನಿಂತರೆ ಅದು ಸಕಲ-ನಿಷ್ಕಲ ಧ್ಯಾನ. ಭಾವಲಿಂಗದಲ್ಲಿ ಭಾವನಿಂತರೆ ಅದು ನಿಷ್ಕಲ ಅಥವಾ ಕೇವಲ ಧ್ಯಾನ.

ಈ ಸ್ಥಿತಿಯಲ್ಲಿರುವ ಶರಣ ಭಾವಯೋಗಿ. ಈತನ ಈ ಭಾವಯೋಗ ಇನ್ನೂ ದೃಢವಾದರೆ ಸುಸ್ಥಿರವಾದರೆ ಆಗುವ ಭಾವಾತೀತತೆಯನ್ನು ಮುಂದಿನ ಎರಡು ಮಂತ್ರಗಳಲ್ಲಿ ಶ್ರೀ ಜಗದ್ಗುರು ರೇಣುಕರು ಸೊಗಸಾಗಿ ನಿರೂಪಿಸಿದ್ದಾರೆ.

ಭಾವಯೋಗದಲ್ಲಿ ಜ್ಞಾತೃತ್ವ ಧ್ಯಾತೃತ್ವಗಳಿರುತ್ತವೆ. ಭಾವಾತೀತ ಯೋಗದಲ್ಲಿ ಇವೆರಡೂ ಇರುವುದಿಲ್ಲ. ಜ್ಞೇಯದಲ್ಲಿ ಅಥವಾ ಧ್ಯೇಯದಲ್ಲಿ ತಲ್ಲೀನತೆಯುಂಟಾಗಿರುತ್ತದೆ.

"ಶೀಲಂ ಶಿವೈಕವಿಜ್ಞಾನಂ ಶಿವಧ್ಯಾನೈಕ ತಾನಾತಾ ।
ಶಿವಪ್ರಾಪ್ತಿ ಸಮುತ್ಕಂಠಾ ತದ್ಯೋಗೀ ಶೀಲವಾನ್ ಸ್ಮೃತಃ ॥೩॥
ಶಿವಾದನ್ಯತ್ರ ವಿಜ್ಞಾನೇ ವೈಮುಖ್ಯಂ ಯಸ್ಯ ಸುಸ್ಥಿರಂ ।
ತದಾಸಕ್ತಾ ಮನೋವೃತ್ತಿ ಸ್ತಮಾಹುಃ ಶೀಲಭಾಜನಂ ॥೪॥"

ಶೈವೀ ವಿಜ್ಞಾನ, ಶೈವೀಧ್ಯಾನದಲ್ಲಿಯೇ ಏಕತಾನತೆ, ಶಿವಪ್ರಾಪ್ತಿಯಲ್ಲಿ ವಿಶೇಷವಾದ ಉತ್ಸುಕತೆ ಇವು ಸಹ ಶೀಲವೆನಿಸುತ್ತವೆ. ಇವುಳ್ಳವನು ಶೀಲವಂತನೆನಿಸುತ್ತಾನೆ.

ಶಿವಶರಣನಿಗೆ ಶೈವೇತರ ವಿಜ್ಞಾನದಲ್ಲಿ ವಿಮುಖತೆಯಿರಬೇಕು. ಶಿವಾನುಭವದಲ್ಲಿಯೇ ಮನಭಾವಗಳು ಸುಸ್ಥಿರವಾಗಿರಬೇಕು. ಶರಣನ ಮನೋವೃತ್ತಿ ಶಿವಾಸಕ್ತವಾಗಿರಬೇಕು. ಅಂಥವನನ್ನು ಶೀಲಸಂಪನ್ನನೆಂದು ಶಿವಾಚಾರ್ಯರು ಹೇಳುವರು.

ಎಲ್ಲ ವಿಜ್ಞಾನಗಳಿಗಿಂತ ಶಿವಾತ್ಮವಿಜ್ಞಾನ ಶ್ರೇಷ್ಠ ಶೀಲ. ವಿಜ್ಞಾನಸ್ವರೂಪನಾಗಿದ್ದಾನೆ ಪರಶಿವ.

"ವಿಜ್ಞಾನಂ ಬ್ರಹ್ಮೇತಿ ವ್ಯಜಾನಾತ್ ।
ವಿಜ್ಞಾನಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ ।
ವಿಜ್ಞಾನೇನ ಜಾತಾನಿ ಜೀವಂತಿ ।
ವಿಜ್ಞಾನಂ ಪ್ರಯಂತ್ಯಭಿಸಂವಿಶಂತೀತಿ ।..."

—ತೈತ್ತಿರೀಯ

ಆಧಿ ಭೌತಿಕ, ಆಧ್ಯಾತ್ಮಿಕ, ಆಧಿ ದೈವಿಕವೆಂದು ವಿಜ್ಞಾನ ತ್ರಿವಿಧ. ಆಧಿ ಭೌತಿಕ ವಿಜ್ಞಾನಕ್ಕಿಂತ ಆಧ್ಯಾತ್ಮಿಕ ವಿಜ್ಞಾನ ವಿಶೇಷ; ಅನ್ನ, ಪ್ರಾಣ ಮನಗಳ

ಗಿಂತ ಮೇಲಿನದು ಆಧ್ಯಾತ್ಮಿಕ ವಿಜ್ಞಾನ. ವಿಜ್ಞಾನಮಯ ಕೋಶವಿದೆ. ಆಧಿದೈವಿಕ ವಿಜ್ಞಾನ ವಿವಿಧ. ಅವೆಲ್ಲಕ್ಕು ಅಧಿಕವಾದುದು ಶೈವೀವಿಜ್ಞಾನ.

ಶೈವೀ ವಿಜ್ಞಾನದಂತೆ ಶೈವೀಧ್ಯಾನವೂ ಶ್ರೇಷ್ಠವಾದುದು. ಶಿವೈಕತಾನತೆಯೇ ಶಿವಧ್ಯಾನ. ಶಿವಜ್ಞಾನ ಶಿವಧ್ಯಾನಗಳೆರಡು ಶಿವಯೋಗದಂಗಗಳು.

"ಪ್ರಣವೋ ಧನುಃ ಶರೋಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ ।
ಅಪ್ರಮತ್ತೇನ ವೇದ್ಧವ್ಯಂ ಶರವತ್ತನ್ಮಯೋ ಭವೇತ್ ॥೪॥"

—ಮುಂಡಕೋಪನಿಷತ್

ಇದೊಂದು ಉತ್ತಮ ರೂಪಕ ; ಪೂರ್ಣ ರೂಪಕ. ಪ್ರಣವ ಪರಮಾತ್ಮನ ವಾಚಕ. ಅದುವೆ ಬಿಲ್ಲು. ಆತ್ಮಾಂಗವೆ ಬಾಣ. ಪರಶಿವ ಬ್ರಹ್ಮವೇ ಅದಕ್ಕೆ ಗುರಿ. ಉನ್ಮತ್ತನಾಗದೆ ವೇಧಿಸಿ (ಹೊಡೆ)ದರೆ ಬಾಣದಂತೆ ಬ್ರಹ್ಮದಲ್ಲಿ ಬೆರೆಯುತ್ತಾನೆ.

ಧ್ಯಾನೈಕತಾನತೆಗೆ ಇದೊಂದು ಉತ್ತಮ ಉದಾಹರಣೆ. ಧ್ಯೇಯಾಕಾರ ವೃತ್ತಿಯೇ ಧ್ಯಾನೈಕತಾನತೆ. "ತತ್ರ ಪ್ರತ್ಯಯೈಕ ತಾನತಾ ಧ್ಯಾನಂ" ಎಂದು ಯೋಗ ಸೂತ್ರ ನಿರೂಪಣೆ. ತದೇಕಪರನಾಗಿ ಚಿತ್ತೈಕಾಗ್ರತೆಯಿಂದ ಶಿವನನ್ನು ನೆನೆವುದೆ ಶಿವಧ್ಯಾನರೂಪ ಶೀಲ. ಸದಾ ಶಿವಪ್ರಾಪ್ತಿಗಾಗಿಯೆ ಉತ್ಸುಕವಾಗಿರಬೇಕು. ಭಿನ್ನ ಅರಿವು, ಭಿನ್ನ ನೆನಹು ಭಿನ್ನ ಒಲವುಗಳಿರಬಾರದು. ಶಿವನದೇ ಅರುಹು, ಶಿವನದೇ ನೆನಹು, ಶಿವನದೇ ಒಲವು ಉಂಟಾದರೆ ಅದು ಉತ್ತಮ ಶೀಲ.

ಇಷ್ಟಾಗಬೇಕಾದರೆ ಮುಮ್ಮೊದಲು ಇಷ್ಟಲಿಂಗದಲ್ಲಿ ದೃಷ್ಟಿನಿಲ್ಲಬೇಕು. ನಿಂತರೆ ಪ್ರಾಣಲಿಂಗದಲ್ಲಿ ಮನ ನಿಲ್ಲುತ್ತದೆ. ಆ ಬಳಿಕ ಭಾವಲಿಂಗದಲ್ಲಿ ಭಾವ ಬೆರೆಯುತ್ತದೆ. ಇದುವೇ ನಿಜವಾದ ಶೀಲ. ಇವು ಮೂರೂ ಬೇರೆ ಕಡೆಗೆ ಸೂಸಬಾರದು.

ಇಷ್ಟಲಿಂಗದಲ್ಲಿ ದೃಷ್ಟಿಯನ್ನು ನಿಲ್ಲಿಸುವುದು ಸಕಲ ಧ್ಯಾನ, ಅಥವಾ ಸಕಲ ಶೀಲ ; ಸಕಲಯೋಗ. ಹೇಗೆ ಹೇಳಿದರೂ ಒಂದೆ. ಪ್ರಾಣಲಿಂಗದಲ್ಲಿ ಮನ ನಿಂತರೆ ಅದು ಸಕಲ-ನಿಷ್ಕಲ ಧ್ಯಾನ. ಭಾವಲಿಂಗದಲ್ಲಿ ಭಾವನಿಂತರೆ ಅದು ನಿಷ್ಕಲ ಅಥವಾ ಕೇವಲ ಧ್ಯಾನ.

ಶರಣನಿಗೆ ವಿಶುದ್ಧ ಚಕ್ರದಲ್ಲಿರುವ ತನ್ನ ಪ್ರಸಾದಲಿಂಗದಲ್ಲಿ ಅರುಹು ನೆನಹು ಒಲವುಗಳಿರುವುದರಿಂದ ಆತನ ಶೀಲಯೋಗ ಪೂರ್ಣವಾಗಿರುತ್ತದೆ; ಅಂದರೆ ನಿರವಶೇಷವಾಗಿರುತ್ತದೆ. ಅಂದರೆ ಐಕ್ಯತೆಗೆ ಅಣಿಯಾಗಿರುತ್ತದೆ. ಶೂನ್ಯಸ್ವರೂಪವನ್ನು ತಳೆದಿರುತ್ತದೆ. ಸುಸ್ಥಿರವಾದ ಶಿವಾಸಕ್ತಮನೋವೃತ್ತಿ ಯುಂಟಾಗುತ್ತದೆ. ಅಂದರೆ ತ್ರಿಪುಟಿಭಾವವಳಿದಿರುತ್ತದೆ. ನಾನು ಧ್ಯಾನ ಮಾಡುತ್ತಿದ್ದೇನೆ, ಧಾರಣ ಮಾಡಿದ್ದೇನೆ ಎಂಬ ಭಾವವೇ ಇರುವುದಿಲ್ಲ ಇಲ್ಲಿ ಶೂನ್ಯಸ್ವರೂಪವೆಂದರೆ ಪೂರ್ಣಸ್ವರೂಪ. ಧ್ಯಾನ ಧಾರಣಾದಿ ಅನುಸಂಧಾನ ವಿಲೀನತೆ. ಅನ್ಯತ್ರ ಅವಿಚಲತೆ. ವೃತ್ತಿರೂಪ ಸಾವಯವತೆಯು ಶೂನ್ಯತ್ವ. ವೃತ್ತಿನಿಷ್ಪತ್ತಿ. ತ್ರಿಕರಣ ತ್ರಿತನುಗಳ ಪರಿಪಕ್ವತೆ. ಧ್ಯಾತೃ ಧ್ಯಾನಗಳೆರಡೂ ಧ್ಯೇಯರೂಪಾಗಿರುವಿಕೆಯೇ ಪೂರ್ಣವಾದ ಶೀಲಯೋಗ; ಅದುಳ್ಳ ಶರಣನೇ ಶೀಲವಂತ. ಆತ ಆಗ ಆ ಪ್ರಸಾದಲಿಂಗಸ್ವರೂಪನಾಗಿರುತ್ತಾನೆ. ಭಾವಾತೀತತ್ವ ಪ್ರಾಪ್ತವಾಗಿರುತ್ತದೆ. ತನು ಮನಪ್ರಾಣ ಭಾವ ಆತ್ಮಗಳೆಲ್ಲವು ನೀರಲ್ಲಿ ನೀರ್ತೆರೆ ಗಳಡಗುವಂತೆ ಅಡಗುತ್ತವೆ. ಅಂದರೆ ಶೈವಾಕಾರವಾಗಿರುತ್ತವೆ.

"ಯಸ್ಮಿನ್ ದ್ಯೌಃ ಪೃಥಿವೀ ಚಾಂತರಿಕ್ಷ-
ಮೋತಂ ಮನಃ ಸಹ ಪ್ರಾಣೈಶ್ಚ ಸರ್ವೈಃ ।
ತಮೇವೈಕಂ ಜಾನಥ ಆತ್ಮಾನಮನ್ಯಾ
ವಾಚೋ ವಿಮುಂಚಥಾಮೃತಸ್ಯೈಷ ಸೇತುಃ ॥''

—ಮುಂಡಕೋಪನಿಷತ್

ಮನ ಬುದ್ಧಿ ಪ್ರಾಣಾದಿಗಳಿಂದ ಕೂಡಿದ ಪಿಂಡಾಂಡವೇ ತಲ್ಲೀನವಾದಾಗ ಬ್ರಹ್ಮಾಂಡ (ನೆಲ ಮುಗಿಲು ಸಗ್ಗಗಳು)ವೂ ಪೂರ್ಣಶೀಲವಂತನಾದ ಶರಣನಿಗೆ ಶಿವನಲ್ಲಿ ತಲ್ಲೀನವಾಗಿರುತ್ತದೆ. ಅಂದರೆ ವ್ಯಷ್ಟಿ-ಸಮಷ್ಟಿ ಸಂಸಾರವೆರಡನ್ನೂ ಜಯಿಸಿರುತ್ತಾನೆ. ಅಮೃತತ್ವವನ್ನು ಪಡೆದಿರುತ್ತಾನೆ. ಅಂದರೆ ಸಂಸಾರ ಸಾಗರವನ್ನು ದಾಟಲು ಅಮೃತರೂಪನಾದ ಶಿವನೊಬ್ಬನನ್ನೆ ಸೇತುವನ್ನಾಗಿಸಿ ಕೊಂಡಿರುತ್ತಾನೆ. ಇದೇ ಪೂರ್ಣಶೀಲ; ಏಕೈಕ ಶೀಲ. ಶಿವ ಸೇತುವೆಯಲ್ಲಿ ಬಾಳನ್ನು (ಜೀವನವನ್ನು) ಸಾಗಿಸುವವನೇ ಅಂದರೆ ನಿಜವಾದ ಶೀಲವಂತ.

ಶೀಲವಂತನಿಗೆ ಶಿವನೇ ಜೀವನಾಧಾರ ; ಜೀವನ ಸರ್ವಸ್ವ. ಶೀಲವಂತನಾದ ಶರಣನ ಜೀವನದಲ್ಲಿ ಶಿವತ್ವವು ಹಾಸುಹೊಕ್ಕಾಗಿರುತ್ತದೆ. ಪತಿವ್ರತೆಗೆ ಪತಿಯೇ ಸರ್ವಸ್ವವಾಗಿರುವಂತೆ ಶಿವವಂತ—ಶರಣನಿಗೆ ಶಿವನೇ ಪರಮಪತಿಯಾಗಿರುತ್ತಾನೆ. ಆತನೊಡನೆ ಶರಣ ದಿವ್ಯಸಂಸಾರಿಯಾಗಿ ತನ್ನ ಸರ್ವಸ್ವವನ್ನು ಆತನಿಗೆ ನಿವೇದಿಸಿ ನಿತ್ಯಾನಂದದಲ್ಲಿರುತ್ತಾನೆ. ನಿಜ ಶೀಲವಂತನಾಗಿರುತ್ತಾನೆ.

"ಯಃ ಸರ್ವಜ್ಞಃ ಸರ್ವವಿದ್ ಯಸ್ಯೈಷ ಮಹಿಮಾ ಭುವಿ ।
ದಿವ್ಯೇ ಬ್ರಹ್ಮಪುರೇ ಹ್ಯೇಷ ವ್ಯೋಮ್ನ್ಯಾತ್ಮಾ ಪ್ರತಿಷ್ಠಿತಃ ॥
ಮನೋಮಯಃ ಪ್ರಾಣಶರೀರನೇತಾ
ಪ್ರತಿಷ್ಠಿತೋಽನ್ನೇ ಹೃದಯಂ ಸನ್ನಿಧಾಯ ।
ತದ್ವಿಜ್ಞಾನೇನ ಪರಿಪಶ್ಯಂತಿ ಧೀರಾಃ
ಆನಂದರೂಪಮಮೃತಂ ಯದ್ವಿಭಾತಿ ॥೭॥
—ಮುಂಡಕೋಪನಿಷತ್

ಭಾವಲಿಂಗವಾಗಲಿ ಭಾವಲಿಂಗಾಂತರ್ಗತ ಪ್ರಸಾದಲಿಂಗ ಮಹಾಲಿಂಗಗಳಾಗಲಿ, ಕೇವಲ ಯೋಗಾಂಗ ನಿಷ್ಠಗಳಲ್ಲ. ಅವು ಯೋಗಾಂಗದಲ್ಲಿದ್ದರೂ ಪ್ರಾಣಲಿಂಗ ರೂಪದಲ್ಲಿ ಪ್ರಾಣಾಂಗವನ್ನು ಕ್ರಿಯಾಲಿಂಗರೂಪದಲ್ಲಿ ಅನ್ನಾಂಗ ಅಂದರೆ ತ್ಯಾಗಾಂಗವನ್ನು ವ್ಯಾಪಿಸಿರುತ್ತವೆ. ಅವುಗಳ ವಿಜ್ಞಾನದಿಂದ ಆನಂದ ರೂಪ ಅಮೃತ ಲಾಭವಾಗುತ್ತದೆ.

ಭಾವಲಿಂಗವೇ ಅಥವಾ ಪ್ರಸಾದಲಿಂಗವೆ ಪರಬ್ರಹ್ಮ ; ಪರಮಾತ್ಮ. ಅದು ಸರ್ವಜ್ಞಸ್ವರೂಪವಾಗಿದೆ ; ಸರ್ವದಾ ಸರ್ವವನ್ನು ತಿಳಿಯುತ್ತದೆ. ಅದು ಅಜ್ಞಾನದಿಂದ ಕಾಲದಿಂದ ಬಾಧಿತವಲ್ಲ ; ಸೀಮಿತವಲ್ಲ. ಈ ಜಗತ್ತಿನಲ್ಲಿ ಅದರ ಮಹಿಮೆ ಅಗಾಧವಾಗಿದೆ ; ಆಶ್ಚರ್ಯಕರವಾಗಿದೆ. ಅದು ಆ ದಿವ್ಯಾಕಾಶ ಸ್ವರೂಪವಾದ ಬ್ರಹ್ಮಲೋಕದಲ್ಲಿ ಸ್ವಸ್ವರೂಪದಿಂದ ಪ್ರತಿಷ್ಠಿತವಾಗಿದೆ. ಎಲ್ಲ ಪ್ರಾಣಿಗಳ ಪ್ರಾಣಶರೀರಗಳನ್ನು ನಿಯಮನ ಮಾಡುತ್ತದೆ. ಅಂತೆಯೇ ನೇತ್ರವಾಗಿದೆ. ಮನೋಮಯವಾಗಿದೆ ಹೃದಯ ಕಮಲವನ್ನು ಆಶ್ರಯಿಸಿ ಅನ್ನಮಯವಾದ ತ್ಯಾಗಾಂಗದಲ್ಲಿಯೂ [illegible]ತಿರುತ್ತದೆ.

ಅರ್ಥಾತ್ ಪ್ರಾಣದಲ್ಲಿ ಪ್ರಾಣಲಿಂಗವಾಗಿ, ಕಾಯದಲ್ಲಿ ಕ್ರಿಯಾಲಿಂಗವಾಗಿ ಇರುತ್ತದೆ. ವೀರರಾದವರು ತನ್ನ ವಿಜ್ಞಾನ ಯೋಗದಿಂದ ವಿಜ್ಞಾನವನೊಳಗೊಂಡ ಶಿವಯೋಗದಿಂದ ನಿರೀಕ್ಷಿಸಿ ಪ್ರತ್ಯಕ್ಷವನ್ನಾಗಿಸುತ್ತಾರೆ ; ಆನಂದರೂಪ ಅಮೃತವನ್ನು ಪಡೆಯುತ್ತಾರೆ ವಿನಾಶವಿರಹಿತರಾಗುತ್ತಾರೆ. ಚಿರಂತನತೆಯನ್ನು ಪ್ರಕಾಶಿಸುತ್ತಾರೆ. ಸರ್ವ ಸಂಶಯಗಳಿಂದ ದುಷ್ಕ್ರಿಯೆಗಳಿಂದ ದುರ್ಭಾವನೆಗಳಿಂದ ದೂರರಾಗಿರುತ್ತಾರೆ. ಸದಾಶಿವ ಭಾವಸನ್ನಿಹಿತರಾಗಿರುತ್ತಾರೆ. ಶಿವತ್ವದೊಲುಮೆ ಅವರ ರಕ್ತಗತವಾಗಿ ಜೀವನದ ಜೀವಾಳವಾಗಿರುತ್ತದೆ. ಅದಿಲ್ಲದೆ ಅವರ ಜೀವನವಿರುವುದಿಲ್ಲ ; ಪ್ರಾಣವಿರುವುದಿಲ್ಲ.

"ಪತಿವ್ರತಾಯಾ ಯಚ್ಛೀಲಂ ಪತಿರಾಗಾತ್ಪ್ರಶಸ್ಯತೇ ।
ತಥಾ ಶಿವಾನುರಾಗೇಣ ಸುಶೀಲೋ ಭಕ್ತ ಉಚ್ಯತೇ ॥೫॥

ಪತಿಂ ವಿನಾ ಯಥಾ ಸ್ತ್ರೀಣಾಂ ಸೇವ್ಯಾನ್ಯಸ್ಯ ತು ಗರ್ಹಣಾ ।
ಶಿವಂ ವಿನಾ ತಥ್ಯಾನ್ಯೇಷಾಂ ಸೇವಾ ನಿಂದಾ ಕೃತಾತ್ಮನಾಂ ॥೬॥

ಹದಿಬದಿಗೆ ನಲ್ಲನ ನೆಹವೇ ಶೀಲ. ಅಂತೆಯೇ ಭಕ್ತನಿಗೆ ಶಿವಾನುರಾಗವೇ ಸುಶೀಲ. ಶರಣನಿಗೂ ಅದೇ ಪ್ರಶಸ್ತ ಸೌಶೀಲ್ಯ. ಅದೇ ಭಕ್ತತ್ವದ ಮೌಲ್ಯ.

ಪತಿಸೇವೆಯೇ ಪತಿವ್ರತೆಯರಿಗೆ ಭೂಷಣ. ಪರಪುರುಷ ಸೇವೆ ಗರ್ಹಣ. ಅಂತೆಯೇ ಶರಣರಿಗೆ ಶಿವಸೇವೆಯೇ ಸ್ತುತ್ಯ. ಅನ್ಯಸೇವೆ ನಿಂದ್ಯ. ಶರಣರು ಶಿವಸೇವೆಯಿಂದ ಕೃತಾತ್ಮರಾಗಿರುತ್ತಾರೆ.

ಏಕೆಂದರೆ ಎಲ್ಲರಿಗೂ ಶಿವತ್ವವೇ ಅವಶ್ಯ. ಅದು ನಿರ್ಮಲವಾಗಿರುತ್ತದೆ. ನಿಜಶಾಂತಸ್ವರೂಪವಾಗಿರುತ್ತದೆ.

"ಹಿರಣ್ಮಯೇ ಪರೇ ಕೋಶೇ ವಿರಜಂ ಬ್ರಹ್ಮ ನಿಷ್ಕಲಂ ।
ತಚ್ಛುಭ್ರಂ ಜ್ಯೋತಿಷಾಂ ಜ್ಯೋತಿಸ್ತದ್ಯದಾತ್ಮವಿದೋ ವಿದುಃ ॥೯॥

—ಮುಂಡಕೋಪನಿಷತ್

ಶಿವಸ್ವರೂಪವಿದು. ಅದು ರಜೋರಹಿತವಾದುದು ; ಅವಯವರಹಿತವಾದುದು. [illegible] ಅದು ಪ್ರಕಾಶ

ಮಯವಾದ ಪರಮಕೋಶದಲ್ಲಿ ಇರುತ್ತದೆ. ಶುಭ್ರವಾಗಿ ಬೆಳಗಿಗೆ ಬೆಳಗಾಗಿ ವಿರಾಜಮಾನವಾಗಿರುತ್ತದೆ. ಅದನ್ನು ಆತ್ಮಜ್ಞಾನಿಗಳು ಅರಿಯುತ್ತಾರೆ; ಅಳವಡಿಸಿಕೊಳ್ಳುತ್ತಾರೆ.

ಆತ್ಮವಿದರಿಗೆ ಹೆಣ್ಣುಗಂಡೆಂಬ ಸಾಕಾರ ನಿರಾಕಾರವೆಂಬ ಯಾವ ಭೇದವಿಲ್ಲ. ಅವರು ಉಭಯ ಸ್ವರೂಪರೂ ಆಗಬಲ್ಲರು ; ಆಗುವರು.

"ಪುರುಷನೆಂದು ಕರೆವುತಿರ್ಪರು ಜಗದವರೆಲ್ಲ,
ನಾನು ಪುರುಷನಲ್ಲವಯ್ಯ ; ಅದೆಂತೆಂದಡೆ,
ಹೊರಗಣ ಸಾಕಾರವೆ ನೀನು, ಒಳಗಣ ನಿರಾಕಾರವೆ ನಾನು ;
ಹೊರಗಣ ಸಾಕಾರ ಪುರುಷರೂಪು ನೀನಾಗಿ ;
ಒಳಗಣ ನಿರಾಕಾರ ಸ್ತ್ರೀರೂಪು ನಾನಾಗಿ
ನಿಮಗೆ ರಾಣಿವಾಸವಾದೆನಯ್ಯಾ ಅಖಂಡೇಶ್ವರಾ.

ಎಲೆ ಶಿವನೇ ನೀನು ಎನ್ನ ಮೆಚ್ಚಿ ಕೈವಿಡಿದ ಕಾರಣ
ಎಮ್ಮವರು ಸಕಲಗಣಂಗಳ ಸಾಕ್ಷಿಯ ಮಾಡಿ
ನಿನಗೆ ಎನ್ನ ಮದುವೆಯ ಮಾಡಿಕೊಟ್ಟರು ;
ನೀನು ಎನ್ನನಗಲಿದಡೆ ಗುರುದ್ರೋಹಿ,
ಆನು ನಿನ್ನನಗಲಿದಡೆ ಸಮಯಕ್ಕೆ ಹೊರಗು,
ಅದೆಂತೆಂದಡೆ, ಮುನ್ನ ಶ್ರೀಗುರುಸ್ವಾಮಿ,
ಎನ್ನ ಪ್ರಾಣದೊಳಗೆ ನಿನ್ನಪ್ರಾಣವ ಹುದುಗಿಸಿ
ಎಂದೆಂದೂ ಅಗಲಬೇಡೆಂದು ನಿರೂಪಿಸಿದನು.
ಆ ನಿರೂಪವನು ಮಹಾಪ್ರಸಾದವೆಂದು ಕೈಕೊಂಡ ಬಳಿಕ
ನಾವಿಬ್ಬರು ಎಂದೆಂದಿಗೂ ಅಗಲದಿರಬೇಕಯ್ಯಾ ಅಖಂಡೇಶ್ವರಾ."

ಮೊದಲ ವಚನದಲ್ಲಿ ಶರಣನ ಅಂದರೆ ಶೀಲವಂತನ ಸ್ತ್ರೀತ್ವ ನಿರೂಪಣೆಯಿದೆ; ಎರಡನೆಯ ವಚನದಲ್ಲಿ ಶಿವಪತಿತ್ವದ ನಿರೂಪಣದೊಡನೆ ಅವಿರಳ ಸಂಬಂಧವೂ ನಿರ್ದೇಶಿತವಾಗಿದೆ. ಮುಂದಿನ ಈ ಮೂರನೆಯ ವಚನದಲ್ಲಿ ಶಿವಪತಿಯ ಸ್ವರೂಪ ಸೌಂದರ್ಯದ ರೂಪಕವರ್ಣನೆಯಿದೆ:

> “ಗಂಡನುಳ್ಳ ಗರತಿಯುರೆಲ್ಲರು ನಿಮ್ಮ ಗಂಡನ ಕುರುಹ ನೀವೆ ಹೇಳಿರೆ, ನೀವರಿಯದಿರ್ದಡೆ ನಾವು ನಮ್ಮ ಗಂಡನ ಕುರಹ ಹೇಳಿಹವು ಕೇಳಿರೆ; ಹೊಳೆವ ಕೆಂಜೆಡಗಳ ಬೆಳಗುವ ಭಾಳಲೋಚನದ ಥಳಥಳಿಪ ಸುಲಿಪಲ್ಲನ ಕಳೆದುಂಬಿ ನೋಡುವ ಕಂಗಳ ನೋಟದ ಸೊಗಸಿಂದೆ ನಗುವ ಮುಗುಳು ನಗೆಯು, ರತ್ನದಂತೆ ಬೆಳಗುವ ರಂಗದುಟಿಯು, ಚಂಪಕದ ನನೆಯಂತೆ ಇಂಪಾದ ನಾಸಿಕದ, ಶಶಿಯಂತೆ ಬೆಳಗುವ ಎಸೆವ ಕದಪಿನ, ಮಿಸುಪ ಎದೆಭುಜ ಕಂಠದ, ಶೃಂಗಾರದ ಕುಕ್ಷಿಯು, ಸುಳಿದೆಗೆದ ನಾಭಿಯು. ತೊಳಪತೊಡೆ, ಮಣಿಪಾದ ಹರಡಿನ, ನಕ್ಷತ್ರದಂತೆ ಹೊಳೆವ ನಖದ ಪಂಙ್ತಿಯು, ಚರಣಕಮಲದಲ್ಲಿ ಹರಿಯು ನಯನದ ಕುರುಹಿನ, ಸಕಲ ಸೌಂದರ್ಯವನೊಳಕೊಂಡು, ರವಿಕೋಟಿ ಪ್ರಭೆಯಂತೆ ರಾಜಿಸುವ ರಾಜಾಧಿರಾಜ ನಮ್ಮ ಅಖಂಡೇಶ್ವರನೆಂಬನಲ್ಲನ ಕುರುಹು ಇಂತುಂಟು ಕೇಳಿರವ್ವ.”

ಮುಂಡಕಶ್ರುತಿ ಮತದಂತೆ ಶುಭ್ರ ಜ್ಯೋತಿಗಳಿಗೆ ಜ್ಯೋತಿಯಾದ ಪರಬ್ರಹ್ಮದ ಶಿವತ್ವರೂಪ ಶುಭ್ರತ್ವವನ್ನು ಈವಚನ ಸಾಕಾರ ರೂಪಕದಲ್ಲಿ ಸೊಗಸಾಗಿ ಬಣ್ಣಿಸಿದೆ. ಜಗದ್ಗುರು ರೇಣುಕ ಗೀತಾಭಿಪ್ರಾಯದಂತೆ ಶಿವಪತಿತ್ವವನ್ನೂ ನಿರ್ದೇಶಿಸಿದೆ.

ಇನ್ನು ಅನನ್ಯಸೇವೆಗೆ ಈ ವಚನವನ್ನು ವಚಿಸಬೇಕು: “ತನ್ನ ನಲ್ಲದೆ ಅನ್ಯವ ನೋಡೆನವ್ವ; ತನ್ನನಲ್ಲದೆ ಅನ್ಯವ ಮುಟ್ಟೆನೆವ್ವ; ತನ್ನನಲ್ಲದೆ ಅನ್ಯವ ನೆನೆಯೆನವ್ವ; ತನ್ನನಲ್ಲದೆ ಅನ್ಯವ ಬಯಸೆನವ್ವ; ತನ್ನನಗಲಿ ಇನ್ನೆಂತು ಬದುಕುವೆನವ್ವ; ಅಖಂಡೇಶ್ವರನೆಂಬ ನಲ್ಲನ ಮುನಿಸನು ತಿಳುಹಿರವ್ವ!”

ಇನ್ನು ಶರಣನಿಗೆ ಶಿವಾನುರಾಗವೆ ಸುಶೀಲ. ಅದಿದ್ದರೆ ಆತನಿಗೆ ಭಕ್ತತ್ವದ ಸೌಶೀಲ್ಯ ಎಂದು ರೇಣುಕ ಶಿವಾಚಾರ್ಯರು ನಿರೂಪಿಸಿದುದನ್ನು ಅಖಂಡೇಶ್ವರನ ಈ ಕೆಳಗಿನ ವಚನಗಳು ಸಹಕರಿಸಿವೆ.

“ಅರಸನ ಕಾಣದ ಬಳಿಕ ಹರುಷವಿಲ್ಲವ್ವ ಎನಗೆ,
ಅರಸು ಅಖಂಡೇಶ್ವರನೆಂಬ ಪರಶಿವನ ಬೆರೆಸದ ಬಳಿಕ
ಸರಸವೆಲ್ಲಿಯದವ್ವ ಎನಗೆ!

ಕಂಡರೆ ಸಂತೋಷ, ಕಾಣದಿರ್ದಡೆ ಕಡು ದುಃಖವೆನಗೆ; ಹಿಂಡು ದೈವದ ಗಂಡ ಮಂಡಲಾಧಿಪತಿ ಅಖಂಡೇಶ್ವರನು ನಿಮಿಷವಾದಡು ತಡೆದಡೆ ಪ್ರಾಣ ಉಳಿಯದಪ್ಪ.

ಅರಳಿಯ ಮರದೊಳಗಿರುವ ಅರಗಿಳಿಗಳಿರಾ,
ನಮ್ಮ ಅಖಂಡೇಶ್ವರನ ಕಂಡರೆ ಹೇಳಿರೆ!
ಮಾವಿನ ಮರದೊಳಗೆ ಕೂಗುವ ಕೋಗಿಲೆ ಹಿಂಡುಗಳಿರಾ,
ನಮ್ಮ ನಾಗಭೂಷಣನ ಕಂಡರೆ ಹೇಳಿರೆ !
ಕೊಳನ ತೀರದಲಾಡುವ ಕಳಹಂಸಗಳಿರಾ,
ನಮ್ಮ ಎಳೆಯಚಂದ್ರಧರನ ಕಂಡರೆ ಹೇಳಿರೆ !
ಮೇಘಧ್ವನಿಗೆ ಕುಣಿವ ನವಿಲುಗಳಿರಾ,
ನಮ್ಮ ಅಖಂಡೇಶ್ವರನೆಂಬ ಅವಿರಳ ಪರಶಿವನ ಕಂಡರೆ ಹೇಳಿರೆ !"

ಈ ಶರಣರ ಮನ ಶಿವಾನುರಾಗದಲ್ಲಿ ಕರಗಿ ಹಾಲಾಗಿ ಹರಿದಿದೆ. ಹಂಬಲಾಗಿ ಹೊನ್ನಿನಂತೆ ಹೊಳಪೇರಿದೆ. ಹಳಹಳಸಿದೆ. 'ಶಿವನ ಕೂಡಿರ್ಪ ಶರಣರ ಶೀಲವೇನೆಂಬೆನಯ್ಯಾ ? ನೀರು ನೀರ, ಕ್ಷೀರವು ಕ್ಷೀರ ಬೆರದಂತೆ ತನು ಮನ ಧನಂಗಳು ಗುರುಲಿಂಗ ಜಂಗಮದಲ್ಲಿ ಭರಿತವಾದ ಮಹಾಶರಣರ ಶೀಲವ ನೀವೇ ಬಲ್ಲಿರಯ್ಯ ಅಖಂಡೇಶ್ವರಾ.' ಆಗ ಶರಣ ಸ್ವಾಹಂಕಾರದ ಸಂಕುಚಿತ ವರ್ತಲದಿಂದ ಸಾಗಿ ಶಿವಸಾಗರದಲ್ಲಿ ಸೇರಿ ಶೈವೀ ಶೀಲಸಂಪನ್ನನಾಗುತ್ತಾನೆ. ಅಂದರೆ ವಿಶುದ್ಧ ವಿಶಾಲ ಸ್ವಭಾವವನ್ನು ತಳೆಯುತ್ತಾನೆ. ಸಂಕುಚಿತದ ಸಂಚಲದಿಂದ ಪಾರಾಗುತ್ತಾನೆ. ಅಪೂರ್ಣವಾದ ಭವ ಜ್ಞಾನದಿಂದ ಪೂರ್ಣ ಜ್ಞಾನವನ್ನು ಪಡೆಯುತ್ತಾನೆ.

"ಬಹುನಾತ್ರ ಕಿಮುಕ್ತೇನ ಶಿವಜ್ಞಾನೈಕ ನಿಷ್ಠತಾ ।
ಶೀಲಮಿತ್ಯುಚ್ಯತೇ ಸದ್ಭಿಃ ಶೀಲವಾಂಸ್ತತ್ಪರೋಮತಃ ॥೭॥

ಶೀಲ ವಿಷಯದಲ್ಲಿ ಹೆಚ್ಚು ಹೇಳುವುದೇನು ? ಶಿವಜ್ಞಾನವೊಂದರಲ್ಲಿಯೆ ಇರುವ ನಿಷ್ಠೆ ಶೀಲವೆಂದು ಸತ್ಪುರುಷರ ಹೇಳಿಕೆ. ಅದರಲ್ಲಿ ಆಸಕ್ತನಾದವನೆ ಶೀಲವಂತನೆಂದು ಗ್ರಹಿಕೆ.

"ಶೀಲವಂತರು ಶೀಲವಂತರೆಂದೆಂಬಿರಿ;
ಶೀಲದ ಹೊಲಬನರಿಯದ ಭ್ರಮಿತ ಪ್ರಾಣಿಗಳು ನೀವು ಕೇಳಿ ಭೋ!
ಕಾಮವೆಂಬುದೊಂದು ಪಾಪಿ, ಮರಹೆಂಬುದೊಂದು ದ್ರೋಹಿ;
ಮತ್ಸರವೆಂಬುದೊಂದು ಹೊಲೆಯ, ಕ್ರೋಧವೆಂಬುದೊಂದು
ಕೈ ಸೊನೆಗಾರ; ಇಂತಿವನರಿದು ಮರೆದು ಹರವಸಂಬೋಗಿ
ಹೊಯಿ ಹೊಡೆದಂತಿರ್ದಡೆ ಕೂಡಲಚನ್ನಸಂಗಯ್ಯ, ಅವರ ಶೀಲ
ವಂತರೆಂಬೆ.

ಶೀಲವಂತರು ಲಕ್ಷ ಲಕ್ಷ, ನೇಮಸ್ಥರು ಲಕ್ಷ ಲಕ್ಷ ;
ವ್ರತಸ್ಥರು ಲಕ್ಷ ಲಕ್ಷ, ಅರ್ಥಪ್ರಾಣಾಭಿಮಾನವನೊಪ್ಪಿಸಿದ
ವೈರಾಗಿಗಳು ಲಕ್ಷ ಲಕ್ಷ; ಕೂಡಲ ಚನ್ನಸಂಗಯ್ಯನಲ್ಲಿ
ಇವರೆಲ್ಲರು ಛಲ ಪದಾರ್ಥರಲ್ಲದೆ ಲಿಂಗ ಪದಾರ್ಥರಲ್ಲ.

ಅಜ್ಞಾನಕ್ಕೆ ಕಾರಣವಾದ ಅರಿಷಡ್ವರ್ಗದ ಉಬ್ಬರ ಹರಿಯಬೇಕು. ಅದು ಶೀಲ. ಶಿವಜ್ಞಾನಾಮೃತ ತನ್ನೊಳಗೆ ತುಂಬಿದ್ದರೆ ಶೀಲ. ಇದರಿಂದ ಮನದ ಕಳವಳ ಅಳಿದು ಮನಸ್ಸು ಮಹಾ ಪ್ರಸಾದ ಲಿಂಗದಲ್ಲಿ ನೆಲೆಗೊಂಡರೆ ಶೀಲ. ನೆಲೆಗೊಂಡು ಪರಮ ಪರಿಣಾಮದಲ್ಲಿ ನಿಶ್ಚಲವಾಗಿದ್ದರೆ ಶೀಲ.

"ಶೀಲವಂತರೆಲ್ಲ ಅವರಂತಿರಲಿ, ತಮ್ಮ ತಮ್ಮ ಮನದಿ
ಮದವ ಕಳೆದು, ತಮ್ಮೊಳಗಿರ್ದ ಭವಿಗಳ ಭಕ್ತರ ಮಾಡಿ,
ತಮ್ಮಲ್ಲಿರುವ ಅಷ್ಟಮದಂಗಳು-ಸಪ್ತವ್ಯಸನಂಗಳು;
ಅರಿಷ್ಟರ್ಗಂಗಗಳು-ಪಂಚಭೂತಂಗಳು-ಚತುಷ್ಕರಣಂಗಳು-
ತ್ರಿಕರಣಂಗಳು-ತ್ರಿಗುಣಂಗಳು ಶಿವಸಂಸ್ಕಾರದಿಂದ
ಲಿಂಗಕರಣಂಗಳೆಂದೆನಿಸಿ ನಿತ್ಯ ಲಿಂಗಾರ್ಚನೆಯ
ಮಾಡಬಲ್ಲಾತನೆ ಶೀಲವಂತನಯ್ಯಾ, ಅವನ ಶ್ರೀಪಾದವನು
ಹಸ್ತವನೆತ್ತಿ ಹೊಗಳುತಿದ್ದವು ವೇದಂಗಳು;

“ಓಂ ಅಯಂ ಮೇ ಹಸ್ತೋ ಭಗವಾನ್ ಅಯಂ ಮೇ ಭಗವತ್ತರಃ ।
ಅಯಂ ಮೇ ವಿಶ್ವಭೇಷಜಃ ಅಯಂ ಶಿವಾಭಿಮರ್ಶನಃ
ಅಯಂ ಮಾತಾ ಅಯಂ ಪಿತಾ ॥”

ಇಂತಿಪ್ಪ ಲಿಂಗದ ಅರ್ಚನೆಯ ಮಾಡಬಲ್ಲಾತನೆ,
ಶೀಲಸಂಬಂಧಿಯೆನಿಸಿಕೊಳಬಲ್ಲನಯ್ಯಾ,
ಕೂಡಲ ಚನ್ನಸಂಗಮ ದೇವಾ.”

ಶಿವಜ್ಞಾನೈಕ ನಿಷ್ಠೆಯೆಂದರೆ ಕೇವಲ ಜ್ಞಾನವೊಂದರ ನಿಷ್ಠೆಯಲ್ಲ. ಕ್ರಿಯೆ
ಯನ್ನೊಳಗೊಂಡ ಜ್ಞಾನನಿಷ್ಠೆಯೆಂದರ್ಥ. ಶಿವ ವಿಶೇಷಣದಿಂದ ಈ ಅರ್ಥ
ವುಂಟಾಗುತ್ತದೆ. ಶಿವಜ್ಞಾನ ಯಾವಾಗಲೂ ಕ್ರಿಯೆಯಿಂದೊಡಗೂಡಿರುತ್ತದೆ.
ಅರ್ಥದೊಡನೆ ಶಬ್ದವಿರುವಂತೆ ಹಾಲಿನೊಡನೆ ಬಿಳುಪು ಇರುವಂತೆ ಇರುತ್ತದೆ.
ತ್ರಿಕರಣ ಶಿವಸಂಸ್ಕರಣವುಳ್ಳವಾಗಿರುವುದೇ ಶಿವಜ್ಞಾನರೂಪ ಶೀಲ. ನಿತ್ಯ
ಲಿಂಗಾರ್ಚನೆಯೇ ಈ ಶೀಲವಂತನ ಕ್ರಿಯೆ. ತನು ಶುದ್ಧವಾಗದೆ ಶೀಲ ಸಂಪೂರ್ಣ
ವಾಗದು. ಮನ ಭಾವಗಳಂತೆ ತನುವಿನ ಶುದ್ಧಿಯೂ ಶೀಲದ ಪೂರ್ಣತೆಯ
ಕುರುಹು. ಆದರೆ ತನು ಶುದ್ಧಿಗೆ ಜಲವೊಂದೆ ಸಾಧನವಲ್ಲ. ಪರಿಶುದ್ಧಕ್ರಿಯೆ–ಪ್ರಸಾದಗಳೂ ಮುಖ್ಯಕಾರಣಗಳು.

“ಶೀಲ ಶೀಲವೆಂದೇನೋ ? ಮಾಡಿದ ಮನೆ, ಹೂಡಿದ ಒಲೆ,
ಅಟ್ಟುಂಬ ಮಡಕೆ, ಕಟ್ಟಿದ ಕೆರೆ, ಬಿತ್ತಿದ ಬೆಳೆ–ಇಂತಿವಕೆ ಶೀಲವಲ್ಲದ
ತನ್ನ ಮನಕೆ ಶೀಲವಿಲ್ಲ ; ಶೀಲವದೆಂತೆಂದಡೆ, ಲಿಂಗ ಬಂದು ಮನವ
ನಿಂಬುಗೊಂಬುದೆ ಶೀಲ ; ಜಂಗಮ ಬಂದು ಧನವನಿಂಬುಗೊಂಬುದ
ಶೀಲ ; ಪ್ರಸಾದ ಬಂದು ತನುವನಿಂಬುಗೊಂಬುದೆ ಶೀಲ. ಇಂತಪ್ಪ
ಶೀಲಕ್ಕೆ ನಮೋ ನಮೋ ಎಂಬೆ ! ಉಳಿದ ದುಶ್ಶೀಲರ ಎನಗೆ ತೋರ
ದಿರು ಕೂಡಲ ಚನ್ನಸಂಗಮ ದೇವಾ ! ”

ಭಕ್ತರ ಮಠಕ್ಕೆ ಬಂದು ಒಳಹೊರಗೆಂಬುದು ಶೀಲವೇ ? ಎನ್
ಲಿಂಗಕೆ ಒಳ್ಳೆಯ ಅಗ್ಗವಣಿಯ ತನ್ನಿ, ಒಳ್ಳೆಯ ಪುಷ್ಪವ ತನ್ನಿ

ಒಳ್ಳೆಯ ಓಗರವ ಮಾಡಿ ಎಂಬುದು ಶೀಲವೆ ?—ಅಲ್ಲ ; ಪಂಚೇಂದ್ರಿಯ ಸಪ್ತಧಾತು ಅರಿಷಡ್ವರ್ಗ ಅಷ್ಟಮದಂಗಳ ಕೊಂದಾತನೆ ಶೀಲವಂತ ಕೂಡಲ ಚನ್ನಸಂಗಮ ದೇವಾ.

ನದಿ ಕೂಪ ತಟಾಕದಲ್ಲಿ ಕನ್ನವನ್ನಿಕ್ಕಿ ಉದಕವ ತಂದು ಮಜ್ಜನಕ್ಕೆರೆವರೆಲ್ಲಾ ಶೀಲವಂತರೆ ? ಪಾಕದಲ್ಲಿ ಭವಿಪಾಕ ಪರಪಾಕವೆಂದು ವಿವರಿಸಿ ಕಳೆದು ಭುಂಜಿಸುವ ಉದರ ಪೋಷಕರೆಲ್ಲಾ ಶೀಲವಂತರಪ್ಪರೆ? ಅಲ್ಲ ; ಅಶನಪರತು ವ್ಯಸನ ಬೆಂದು ವೃತ್ತಿಗಳೆಲ್ಲವೂ ತಲ್ಲೀಯವಾಗಿ ತನುಗುಣಾದಿಗಳೆಲ್ಲ ಸಮಾಪ್ತಿಯಾಗಿದ್ದಡೆ ಕೂಡಲ ಚನ್ನಸಂಗಯ್ಯನಲ್ಲಿ ಅವರ ಅಚ್ಚಶೀಲವಂತರೆಂಬೆ.

ಈ ಮೂರು ವಚನಗಳಲ್ಲಿ ಬಾಹ್ಯ ಶೀಲ ಮುಖ್ಯವಲ್ಲ. ಜತೆಗೆ ಅಂತಃಶೀಲವೂ ಅಗತ್ಯ ಎಂಬುದನ್ನು ಮತ್ತೆ ಮತ್ತೆ ಒತ್ತಿ ಹೇಳಲಾಗಿದೆ. ಕೇವಲ ಮೂಢ ಸಾಂಪ್ರದಾಯಕ ಶೀಲದಿಂದ ಪ್ರಯೋಜನವಿಲ್ಲೆಂಬುದನ್ನೂ ನಿರೂಪಿಸಿವೆ.

“ಶೀಲ ಶೀಲವೆಂದು ಗರ್ವಿಸಿ ನುಡಿಯುತಿಪ್ಪಿರಿ, ಶೀಲವಾವುದೆಂದರಿಯಿರಿ ; ಇದ್ದುದಕ್ಕೆ ವಂಚನೆಯ ಮಾಡದಿಪ್ಪುದೆ ಶೀಲ ; ಇಲ್ಲದುದಕ್ಕೆ ಕಡನ ಬೇಡದಿಪ್ಪುದೆ ಶೀಲ. ಪರಧನ ಪರಸತಿಗಳುಪದಿಪ್ಪುದೆ ಶೀಲ ; ಪರದೈವ ಪರಸಮಯಕ್ಕ ಎಳಸದಿಪ್ಪುದೆ ಶೀಲ ; ಗುರು ನಿಂದೆ ಶಿವನಿಂದೆ ಜಂಗಮನಿಂದೆಯ ಕೇಳದಿಪ್ಪುದೆ ಶೀಲ ; ಕೂಡಲ ಚನ್ನಸಂಗಯ್ಯನ ಶರಣರ ಬರವಿಂಗೆ ಮೆಯ್ಯಾಂತು ಪರಿಣಾಮಿಸಬಲ್ಲಡೆ ಅಚ್ಚಶೀಲ.

ಶೀಲ ಶೀಲವೆಂದರೇನೋ, ಪಿಂಡ ಬ್ರಹ್ಮಾಂಡ ಸಂಯೋಗವಾಗದನಕ್ಕ ? ಅಷ್ಟ ತನುವಿನ ಗುಣಧರ್ಮವನರಿದು ಬಿಡದನಕ್ಕ ? ಅಕ್ರೋಧ, ಸತ್ಯವಚನ, ಸಾವಧಾನ, ವ್ರತಾನುಗ್ರಹವಾಗದನಕ್ಕ ? ‘ಅಕ್ರೋಧಃ ಸತ್ಯವಚನಂ ಸಾವಧಾನೋ ದಮಃ ಕ್ಷಮಾ । ಅನುಗ್ರ

ಹಶ್ಚ ದಾನಂ ಚ ಶೀಲಮೇವ ಪ್ರಶಸ್ಯತೇ ॥ ಎಂದುದಾಗಿ ಕೂಡಲ ಚನ್ನಸಂಗಯ್ಯಾ ಶೀಲವೆಂಬುದು ಅಪೂರ್ವ.

ಶೀಲ ಶೀಲವೆಂದು ನುಡಿವ ಉದ್ದೇಶಿ ಪ್ರಾಣಿಗಳೆಲ್ಲರು ಅನಂತ ಶೀಲರು, ಅರಿವಿನ ನಿರ್ಣಯವನರಿಯರು. ಹೊರಗನೆ ಬಳಸುವರು, ಒಳಗಣ ಸುದ್ಧಿಯನರಿಯರು. ನೇಮ ಶೀಲವೆಂದು ಹೆಸರಿಸುವರು, ನಿರ್ಣಯವನರಿಯರು; ಕೂಡಲ ಚನ್ನಸಂಗಯ್ಯನಲ್ಲಿ ಉದ್ದೇಶಿ ಪ್ರಾಣಿಗಳು.

ಶೀಲಸಂಬಂಧವನೆಂತು ಮಾಡುವರಯ್ಯಾ, ಮನದಂತುವನರಿಯದ ಕಾರಣ ? ಕಾಯದ ಕಳವಳವು ತಮ ತಮಗೆಳದಾಡುತ್ತಿರಲು, ಶೀಲ ಶೀಲದಂತೆ ತಾವು ತಮ್ಮಂತೆ; ಲಿಂಗ ಲಿಂಗದಂತೆ. ಮನದೊಳಗೆ ಎನಗೆ ತನಗೆಂಬ ಭವ ಬಿಡದನಕ್ಕ ಶೀಲ ಮತ್ತೆಲ್ಲಿಯದೊ ? ಅಷ್ಟದಳವಳಿದು ಷಡುವರ್ಗವರತಡೆ, ಕೂಡಲ ಚನ್ನಸಂಗನಲ್ಲಿ ಅಚ್ಚ ಶೀಲವೆಂಬೆನು.

ಇವೆಲ್ಲ ವಚನಗಳಿಂದ ಶೀಲ ಮೀಮಾಂಸೆ ಸಾಕಷ್ಟು ಸಾಗಿಬಂದಂತಾಯಿತು. ಇವೆಲ್ಲವುಗಳ ಅಭಿಪ್ರಾಯಗಳು ಶಿವಜ್ಞಾನೈಕ ನಿಷ್ಠತೆಯುಳ್ಳ ಶುದ್ಧ ಪ್ರಬುದ್ಧ ಶೀಲಕ್ಕೆ ಸೋಪಾನಗಳು. ಅಚ್ಚ ಶೀಲವಂತನೆನಿಸುವುದು ಅಷ್ಟೇನು ಸುಲಭವಲ್ಲ. ಸಾಧಿಸಿದರೆ ದುರ್ಲಭವೂ ಅಲ್ಲ. ಶಿವಶರಣನಾಗಿ ಶಿವಾನುಗ್ರಹವೊಂದನ್ನು ಸಂಗಳಿಸಿದರೆ ಒಳ ಹೊರಗಿನ ಎರಡು ಶೀಲಗಳನ್ನೂ ಸಂಪಾಧಿಸಲು ಸಾಧ್ಯ. ಶೀಲ ಶ್ರೀಮಂತನಾಗಲು ಸಾಧ್ಯ

"ತನು ಗುರುವಾದುದೇ ಶೀಲ, ಮನ ಲಿಂಗವಾದುದೆ ಶೀಲ; ಧನ ಜಂಗಮವಾದುದೆ ಶೀಲ, ಅಖಂಡೇಶ್ವರನೆಂಬ ಪರಶಿವನು ತಾನೆ ಆಗಿ ಸುಳಿವುದೆ ಮಹಾ ಶೀಲ ನೋಡಿರಣ್ಣ."

"ಶಿವಾತ್ಮ ಬೋಧೈಕರತಃ ಸ್ಥಿರಾಶಯಃ
ಶಿವಂ ಪ್ರಪನ್ನೋ ಜಗತಾಮಧೀಶಂ ।
ಶಿವೈಕನಿಷ್ಠಾಹಿತಶೀಲ ಭೂಷಣಃ
ಶಿವೈಕ್ಯವಾನೇಷ ಹಿ ಕಥ್ಯತೆ ಬುಧೈಃ ॥೮॥"

ಶಿವಾತ್ಮ ಭೋಧವೊಂದರಲ್ಲಿಯೆ ನಿರತನಾಗಿ, ಸ್ಥಿರವಾದ ಅಭಿಪ್ರಾಯವುಳ್ಳವನಾಗಿ, ಜಗದೊಡೆಯನಾದ ಶಿವನನ್ನೇ ಮೊರೆಹೊಕ್ಕವನಾಗಿ,

ಶಿವೈಕನಿಷ್ಠೆಯಿಂದ ಕೂಡಿದ ಶೀಲವೇ ಆಭರಣವಾಗಿ ಇರುವವನೇ (ಶರಣನನೇ) ಮುಂದೆ ಶಿವೈಕ್ಯಸ್ಥಲ ಸಂಪನ್ನನಾಗುವನೆಂದು ಶಿವಾಚಾರ್ಯರು ನಿರೂಪಿಸುವರು.

ಶಿವಾತ್ಮಭೋಧೆಯಿಂದ ಸಂಶಯ ನಿವೃತ್ತಿಯನ್ನು ಮಾಡಿಕೊಳ್ಳುವುದೂ ಶೀಲ. ನಿಜವನರಿದು ನಿಶ್ಚಯಾತ್ಮನಾಗುವುದಕ್ಕಿಂತ ಬೇರೆ ಶೀಲವಿಲ್ಲ.

ಶಿವಾತ್ಮಜ್ಞಾನವೇ ಜ್ಞಾನ. ಶಿವನಾರು, ತಾನಾರು? ಶಿವನಿಗೂ ತನಗೂ ಇರುವ ಸಂಬಂಧ ಎಂತಹುದು ? ಎಂಬುದನ್ನು ಶರಣನು ಸರಿಯಾಗಿ ಅರಿಯಬೇಕು. ಶಿವನ ಅಂಶವೆ ತಾನೆಂದು, ಅನಾದಿ ಅವಿದ್ಯೆಯಿಂದಾಗಿ ಅಗಲಿ ಬಂದಾಗಿದೆಯೆಂದು, ಅಜ್ಞಾನ ಅಕ್ರಿಯ ಅಲ್ಪತ್ವಗಳನ್ನು ಕಳೆದುಕೊಂಡರೆ ಮರಳಿ ಆತ್ಮನು ಶಿವಸ್ವರೂಪ ಪರಮಾತ್ಮನಾಗಬಲ್ಲನೆಂದು ಅರಿವುದೇ ಶಿವಾತ್ಮಬೋಧ.

ಈ ಬಗೆಯ ಶಿವಾತ್ಮ ಬೋಧವಾದರೆ ದೃಢವಾದ ಅಭಿಪ್ರಾಯ ಅಳವಡುತ್ತದೆ. ಸ್ಥಿರಾಶಯನಾಗಬೇಕಾದರೆ ನಿಯಮಶೀಲನಾಗಬೇಕು. ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ. ಈಶ್ವರ ಪ್ರಣಿಧಾನ ಇವೈದು ನಿಯಮ ಶೀಲವೆನಿಸುತ್ತವೆ. ಇವುಗಳಲ್ಲಿ ಶೌಚ ಇಬ್ಬಗೆ. ಒಂದು ಮಣ್ಣು ನೀರುಗಳಿಂದ ಮಾಡುವ ಬಾಹ್ಯ ಶೌಚ. ಇನ್ನೊಂದು ಭಾವಶುದ್ಧಿರೂಪ ಅಂತಃಶೌಚ. ಇವೆರಡು ಶೌಚಗಳಿಂದ 'ಸತ್ವಶುದ್ಧಿ ಸೌಮನಸ್ಯೈಕಾಗ್ರೇಂದ್ರಿಯ ಜಯಾತ್ಮದರ್ಶನ ಯೋಗ್ಯತ್ವಾನಿಚ' ಎಂಬ ಯೋಗಸೂತ್ರಾಭಿಪ್ರಾಯದಂತೆ ಸತ್ವಶುದ್ಧಿ, ಸೌಮನಸ್ಸು, ಏಕಾಗ್ರತೆ, ಇಂದ್ರಿಯಜಯ, ಆತ್ಮದರ್ಶನ, ಇವುಗಳನ್ನು ಪಡೆವ ಶಕ್ತಿ ಸಮನಿಸುತ್ತದೆ.

ಸದಾ ಸಂತೋಷದಿಂದಿರುವುದರಿಂದ ಉಭಯ ಶ್ರೀಮಂತಿಕೆ ಪ್ರಾಪ್ತವಾಗುತ್ತದೆ. ಭೌತಿಕ ಸಂಪತ್ತು ಆತ್ಮಿಕಸಂಪತ್ತುಗಳೆರಡೂ ಲಭ್ಯವಾಗುತ್ತವೆ.

ಅರ್ಚನರೂಪ ತಪಸ್ಸಿನಿಂದ ತನು ಮನಗಳೆರಡು ಶುದ್ಧವಾಗುತ್ತವೆ.

ಸ್ವಾಧ್ಯಾಯದಿಂದ ಇಷ್ಟ ಸಿದ್ಧಿಯುಂಟಾಗುತ್ತದೆ. ಷಡಕ್ಷರ ಮಂತ್ರ ಜಪ ಮತ್ತು ಶಿವಾಗಮ ಶಿವಶರಣರ ವಚನಗಳ ಅಭ್ಯಾಸ ಶಿವಾಚಾರ್ಯ ಸಾಹಿತ್ಯಪಠನ ಇವೆಲ್ಲ ಸ್ವಾಧ್ಯಾಯವೆನಿಸುತ್ತವೆ.

ಷಡ್ವಿಧ ಸದ್ಭಕ್ತಿಗಳಿಂದ ಭಕ್ತಾದಿ ಐಕ್ಯಾಂತಸ್ಥಲಸಂಪನ್ನತೆಯುಂಟಾಗಂತ್ತದೆ. 'ಸಮಾಧಿಸಿದ್ಧಿರೀಶ್ವರ ಪ್ರಣಿಧಾನಾತ್' ಎಂದು ಪಾತಂಜಲ ಋಷಿಯ ಹೇಳಿಕೆ. ಇವುಗಳಿಂದ ಸ್ಥಿರಾಶಯ ಅಂದರೆ ದೃಢಭಾವವುಂಟಾಗುತ್ತದೆ. ದೃಢಭಾವದಿಂದ

ಶಿವಸಾಕ್ಷಾತ್ಕಾರವುಂಟಾಗುತ್ತದೆ. ಇಂತಾಗುವುದೇ ಶಿವೈಕನಿಷ್ಠಾರೂಪ ಶೀಲ. ಇದು ಶರಣಸ್ಥಲ ಸಂಪನ್ನತೆಗೆ ಸಂಪಾದನ, ಭೂಷಣ. ಈ ಶೀಲ ಸಂಪಾದನೆಯಿಂದ ಭೂಷಿತನಾದ ಶರಣನು ಮುಂದೆ ಐಕ್ಯಸ್ಥಲಕ್ಕೆ ಹೆಜ್ಜೆ ಹಾಕಲು ಸರ್ವ ಸಮರ್ಥನಾಗುತ್ತಾನೆ. "ಕಾಯವೇ ಕೈಲಾಸವಾಗಿ, ಮನವೇ ಅವಿರಳ ಪುಷ್ಪದ ಮಾಲೆಯ ಪೂಜೆಯಾಗಿ, ಅಖಂಡ ಪರಿಪೂರ್ಣ ಜ್ಞಾನದ ಬೆಳಗಿನೊಳಗೆ ಸುಳಿವ ಮಹಾಶರಣರ ತೋರಿಸಿ ಬದುಕಿಸಯ್ಯಾ ಅಖಂಡೇಶ್ವರಾ." "ಇಷ್ಟಲಿಂಗದಲ್ಲಿ ತನುವನಡಗಿಸಿ, ಪ್ರಾಣಲಿಂಗದಲ್ಲಿ ಮನವನಡಗಿಸಿ, ಭಾವಲಿಂಗದಲ್ಲಿ ಜೀವವ ನಿಕ್ಷೇಪಿಸಿ ಆ ಇಷ್ಟ ಪ್ರಾಣ ಭಾವಲಿಂಗವು ಒಂದಾದ ಮಹಾಘನ ಪರಬ್ರಹ್ಮದಲ್ಲಿ ತಾನೆಂಬ ನೆನಹಡಗಿ, ದ್ವಂದ್ವಕರ್ಮಂಗಳ ನೀಗಿ, ಆ ಪರಿಪೂರ್ಣ ಪರಬ್ರಹ್ಮವೆ ತಾನಾದುದು ಮಹಾಶೀಲವಯ್ಯಾ ಅಖಂಡೇಶ್ವರಾ." ಶರಣನ ತನು ಪ್ರಾಣ ಭಾವಗಳು ಜೀವವು ಸಹ ನಿರತಿಶಯ ನಿರಹಂಕಾರದ ನಿಲುಕಡಗೆ ನಿಲುಕುತ್ತವೆ. ಆ ಮಹಾಘನದ ವಿಮರ್ಶಾತೀತ ವಿಶಾಲ ಸ್ಥಲದಲ್ಲಿ ವಿಹರಿಸುತ್ತವೆ. ವಿಶ್ವ ವ್ಯಕ್ತಿ ಮಾತ್ರವಲ್ಲ, ವಿಶ್ವಚೇತನ ವಿಶ್ವ ಪ್ರಕಾಶನ ತಾನೆಂಬ ಪರಮಾನುಭವ ಪರಮಾನಂದಗಳುಂಟಾಗುತ್ತವೆ. ಇಂತಹ ಅನಂತ ವಿಶ್ವ ಕರ್ತೃತ್ವರೂಪ ಮಹಾಶೀಲ ಮೈಗೂಡುವುದು. ಆ ಮಹಾಶೀಲವೇ ಪರಿಪೂರ್ಣ ಪರಶಿವ. ಅದನ್ನು ಅಂಗವಿಸಿಕೊಂಡ ಅಚ್ಚ ಶರಣನೇ ಅಖಂಡ ಶಿವ. ಆತನದು ತಾನೆಂಬ ಅಣುನೆನಹು ಅಡಗಿದ ಪರಿಪೂರ್ಣ ಮನೋಭಾವ. ಆಗ ಶರಣನು ತನ್ನ ತನು ತನ್ನ ಮನ, ತನ್ನ ಪ್ರಾಣ, ತನ್ನ ಜೀವಗಳ ಸಂಕುಚಿತ ಸುಖಕ್ಕಾಗಿ ಹೊಡೆದಾಡನು. ದ್ವಂದ್ವಕರ್ಮಗಳ ದಂದುಗಕ್ಕೆ ಧುಮುಕನು. ಆ ಮಹಾಶೀಲವೆ ಶರಣನ ಮಹಾಮನೆ. ಸರ್ವಾತ್ಮ ದರ್ಶನವೇ ಆ ಮಹಾಮನೆಯ ಮನೋಹರ ನೋಟ, ಸಕಲ ಜೀವಾತ್ಮರ ಸುಖವೇ ತನಗೆ,ಪೂರ್ಣಾನಂದದ ಸವಿಯೂಟ.

"ಮನದೊಳಗೆ ಘನವು ವೇದ್ಯವಾದ ಬಳಿಕ
ಪುಣ್ಯವಿಲ್ಲ, ಪಾಪವಿಲ್ಲ ; ಸುಖವಿಲ್ಲ, ದುಃಖವಿಲ್ಲ ;
ಕಾಲ ಕರ್ಮವಿಲ್ಲ ; ಜನನವಿಲ್ಲ, ಮರಣವಿಲ್ಲ ;
ಗುಹೇಶ್ವರಾ, ನಿಮ್ಮ ಶರಣನು ಘನ ಮಹಿಮ ನೋಡಯ್ಯಾ !"

ತ್ರಿವಿಧ ಶರಣಸ್ಥಲಂ

ಶರಣ ಸ್ಥಲ, ತಾಮಸನಿರಸನ, ನಿರ್ದೇಶನ, ಶೀಲ ಸಂಪಾದನ- ಈ ನಾಲ್ಕು ಉಪ ಸ್ಥಲಗಳ ಆಚರಣೆಯಿಂದ ರೂಪಿತನಾದ ಶರಣಾಂಗನು ಇಷ್ಟಲಿಂಗಾರ್ಚಕ, ಪ್ರಾಣಲಿಂಗಾರ್ಚಕ ತೃಪ್ತಿಲಿಂಗಾರ್ಚಕ- ಎಂದು ಮೂಬಗೆಯಾಗಿರುತ್ತಾನೆ. ಇವು ಆಚಾರ, ವಿಚಾರ, ಅನುಭೋಗಗಳಿಂದ ಅನುಕ್ರಮವಾಗಿ ಉಂಟಾಗುತ್ತವೆ. ತ್ಯಾಗಾಂಗದಲ್ಲಿ ಆಚಾರ, ಭೋಗಾಂಗದಲ್ಲಿ ವಿಚಾರ, ಯೋಗಾಂಗದಲ್ಲಿ ಅನುಭೋಗ ಉಂಟಾಗಿ ಈ ವಿಂಗಡಣೆಗೆ ಅವಕಾಶವಾಗುತ್ತದೆ. ತ್ಯಾಗಾಂಗನು ಕ್ರಿಯಾಲಿಂಗಕ್ಕೆ ಶರಣಾಗಿ ಇಷ್ಟಲಿಂಗಾರ್ಚಕ ಶರಣನೆನಿಸುತ್ತಾನೆ. ಭೋಗಾಂಗನು ಜ್ಞಾನ ಲಿಂಗಕ್ಕೆ ಶರಣು ಹೊಕ್ಕು ಪ್ರಾಣಲಿಂಗಾರ್ಚಕ ಶರಣನೆನಿಸುತ್ತಾನೆ. ಯೋಗಾಂಗನು ಭಾವ ಲಿಂಗಕ್ಕೆ ಮೊರೆಯಿಟ್ಟು ತೃಪ್ತಿಲಿಂಗಾರ್ಚಕ ಶರಣನೆನಿಸುತ್ತಾನೆ.

"ಅನಿಷ್ಟ ನಷ್ಟವಾಯಿತ್ತಾಗಿ ಇಷ್ಟಲಿಂಗಾರ್ಚಕ ;
ಸ್ವಯ-ಪರವನರಿಯನಾಗಿ ಪ್ರಾಣಲಿಂಗಾರ್ಚಕ ;
ಇಹ–ಪರವನರಿಯನಾಗಿ ತೃಪ್ತಿಲಿಂಗಾರ್ಚಕ."

ಎಂದು ಮಹಾಜ್ಞಾನಿಯಾದ ಚನ್ನಬಸವಣ್ಣನು ತ್ರಿವಿಧ ಶರಣಸ್ಥಲಗಳನ್ನು ವಿವರಿಸಿದ್ದಾನೆ. ಈ ವಿವರಣೆ ಮೇಲಿನ ನಮ್ಮ ಅಭಿಪ್ರಾಯಕ್ಕೆ ಪೋಷಕವಾಗಿದೆ.

ಈ ತ್ರಿವಿಧಾರ್ಚನೆ ಶರಣನಿಗೆ ಆಗತ್ಯ. ಶರಣಾಗುವ ಲಕ್ಷಣವುಳ್ಳ ಮೊದಲಿನ ಶರಣೋಪಸ್ಥಲದಿಂದ ತನ್ನ ಅನಿಷ್ಟವನ್ನು ಅಡಗಿಸಿ ಆಚಾರನಿಷ್ಠನಾಗಿ ಇಷ್ಟ ಲಿಂಗವನ್ನು ತಾಮಸನಿರಸನೋಪಸ್ಥಲದಿಂದ ಸಮದರ್ಶನ ವಿಚಾರವಂತನಾಗಿ

ಪ್ರಾಣಲಿಂಗವನ್ನು, ನಿರ್ದೇಶನ ಮತ್ತು ಶೀಲಸಂಪಾದನ ಎಂಬ ಎರಡು ಉಪಸ್ಥಲಗಳಿಂದ ಅತೃಪ್ತಿಗೆ ಕಾರಣವಾದ ಇಹ-ಪರ ಭೋಗ ತ್ಯಾಗವಂತನಾಗಿ ತೃಪ್ತಿ ತಳೆದು ತೃಪ್ತಿಲಿಂಗವನ್ನು ತನ್ನಲ್ಲಿ ಅಳವಡಿಸಿಕೊಳ್ಳುತ್ತಾನೆ.

ಇಷ್ಟಲಿಂಗಾರ್ಚಕ ಶರಣನಿಗೆ ನಿಷ್ಪತ್ತಿಲಿಂಗ, ಪ್ರಾಣಲಿಂಗಾರ್ಚಕ ಶರಣನಿಗೆ ಆಕಾಶಲಿಂಗ, ಭಾವಲಿಂಗಾರ್ಚಕ ಶರಣನಿಗೆ ಪ್ರಕಾಶಲಿಂಗ ಆರಾಧ್ಯವಾಗಿರುತ್ತವೆ. ನಿಷ್ಪತ್ತಿ, ಆಕಾಶ, ಪ್ರಕಾಶ-ಲಿಂಗಗಳು ಪ್ರಸಾದಲಿಂಗ ತ್ರಿವಿಧಗಳು.

ಇವಲ್ಲದೆ ಶುದ್ಧ, ಸಿದ್ಧ, ಪ್ರಸಿದ್ಧ ಇವು ಪ್ರಸಾದ ಲಿಂಗದ ಮೂರು ಲಿಂಗಗಳೆಂದು ಹೇಳುವುದುಂಟು. ಶ್ರೀ ಗುರುದೇವನಿಂದ ಕ್ರಿಯಾಸಂಸ್ಕಾರ ಪಡೆದು ಸದಾಚಾರದಿಂದ ಶುದ್ಧತೆಯನ್ನು ಹೊಂದಿ ಕಾರ್ಮಿಕ ಮಲವನ್ನು ಕಳೆದುಕೊಂಡು ಅನಿಷ್ಟವನ್ನು ನಷ್ಟಗೊಳಿಸುವುದೆ ಶುದ್ಧ ಪ್ರಸಾದಲಿಂಗ. ಶ್ರೀ ಗುರುವಿನಿಂದ ಮಂತ್ರದೀಕ್ಷೆಯ ಪಡದು ಸದ್ವಿಚಾರದಿಂದ ಸಿದ್ಧತೆಯನ್ನು ಸಂಪಾದಿಸಿ ಮಾಯೀಯ ಮಲವನ್ನು ನಿವಾರಿಸಿ ಸ್ವ–ಪರ ಅಂದರೆ ತಾನು-ಅನ್ಯರೆಂಬ ಭೇದವಳಿದುದೆ ಸಿದ್ಧ ಪ್ರಸಾದಲಿಂಗ. ಶ್ರೀ ಗುರುದೇವನಿಂದ ವೇಧಾದೀಕ್ಷೆಯನ್ನು ಪಡೆದು ಸ್ವಾನುಭವದಿಂದ ಪ್ರಸಿದ್ಧತೆಯನ್ನು ಆರ್ಜಿಸಿ ಆಣವೀಯ ಮಲವನ್ನು ಕಳೆದು ಇಹ-ಪರವೆಂಬ ಭೇದವಳಿದು ಇಹ-ಪರಗಳೆರಡಕ್ಕೂ ಸಲ್ಲುವಂತಾಗುವುದೆ ಪ್ರಸಿದ್ಧ ಪ್ರಸಾದಲಿಂಗ. ಆಚಾರದಲ್ಲಿ ಶುದ್ಧತೆ, ವಿಚಾರದಲ್ಲಿ ಸಿದ್ದತೆ, ಅನುಭವದಲ್ಲಿ ಪ್ರಸಿದ್ಧತೆಯನ್ನು ಪಡೆವುದೇ ಶರಣತ್ರೈವಿಧ್ಯದ ಸಾರ್ಥಕತೆ.

ಪ್ರಾಣಲಿಂಗಿಗೆ ತ್ರಿಕರಣಗಣಗಳ ಶುದ್ಧಿ ಮುಖ್ಯವಾದರೆ ಶರಣನಿಗೆ ತ್ರಿವಿಧಾಂಗಗಳ ಶುದ್ಧಿ ಸಿದ್ಧಿ ಪ್ರಸಿದ್ಧಿ ಮುಖ್ಯ. ಕ್ರಿಯೆ ಜ್ಞಾನಾನುಭವಗಳ ಸಮೀಕರಣವೆ ಶರಣನ ಧ್ಯೇಯ ಇಷ್ಟವೆ ತ್ಯಾಗಾಂಗವಾಗಿ ಅರಿವೆ ಭೋಗಾಂಗವಾಗಿ ಅನುಭವವೇ ಯೋಗಾಂಗವಾಗಿ ಇರುತ್ತಾನೆ ಶರಣ. ಇಹ–ಪರ, ಸ್ವ-ಪರ ಭೇದಭಾವಗಳನ್ನು ಬಿಟ್ಟಿರುತ್ತಾನೆ. ಅಂಗತ್ರಯವನ್ನು ನಿಷ್ಪತ್ತಿಗೊಳಿಸುವುದೇ ಶರಣತ್ರಯ ಧ್ಯೇಯ. ನಿರ್ಮಲ, ನಿರ್ಮಾಯ, ಸತ್ಯಜ್ಞಾನಾನಂದ ಈ ಮೂರನ್ನು ಕ್ರಮವಾಗಿ ಅಂಗತ್ರಯದಲ್ಲಿ ಅಳವಡಿಸಿಕೊಳ್ಳುವುದೇ ಶರಣತ್ರಯರ ಗುರಿ. ಕಾಯಲಯ, ಮನಸ್ಥಿತಿ, ಭಾವೋತ್ಪತ್ತಿಯೆಂಬ ವೃತ್ತಿತ್ರಯಕ್ಕೆ ಒಳಗಾಗುವನಲ್ಲ.

> "ಕ್ರಿಯೆಯೆ ಅಧಿಕವೆಂದು ದೊಡ್ಡ ಸಿದ್ಧಾಂತಿಗಳ ಮಾತು ಸೊಗಸದಯ್ಯ ಎನಗೆ. ಪಕ್ಷಿ ಉಭಯ ರೆಕ್ಕೆಯಿಂದ ಗಗನಕ್ಕೆ ಹಾರುವಂತೆ, ಅಂತರಂಗದಲ್ಲಿ ಸಮ್ಯಗ್‌ಜ್ಞಾನ, ಬಹಿರಂಗದಲ್ಲಿ ಶಿವ ಸತ್ಕ್ರಿಯಾ ಸಮ್ಯಗ್‌ಜ್ಞಾನ ಸಂಪನ್ನರಾದ ಶರಣರ ತೋರಿ ಬದುಕಿಸಯ್ಯ ಎನ್ನ ಅಖಂಡೇಶ್ವರಾ."

ಅಂತರಂಗದ ಅರಿವಿಗೆ ಆಚಾರವೇ ಕಾಯ : ಆಚಾರಕಾಯವಿಲ್ಲವಾದರೆ ಅರುವಿಗೆ ಆಶ್ರಯವೆಲ್ಲ. ಅರಿವು ಅನುಭೋಗದಲ್ಲಿ ಬೆರೆಯದಿದ್ದರೆ ಆನಂದವಿಲ್ಲ. ಆನಂದವಿಲ್ಲವಾದರೆ ಶರಣತ್ವ ಸಿದ್ಧಿಯಿಲ್ಲ. ಇದರಿಂದಾಗಿ ಆಚಾರ-ಅರಿವು-ಅನುಭೋಗ ಈ ಮೂರು ಶರಣನಿಗಾಗಬೇಕಾದರೆ ಇಷ್ಟ-ಪ್ರಾಣ-ಭಾವ ಲಿಂಗಗಳ ಅರ್ಚಕನಾಗದೆ ಬೇರೆ ದಾರಿಯಿಲ್ಲ.

೧. ಇಷ್ಟಲಿಂಗಾರ್ಚಕ :

ಶರಣನಾದರೂ ತ್ಯಾಗಾಂಗದ ಹಂಗಿರುತ್ತದೆ. ತ್ಯಾಗಾಂಗ ಇರುವವರೆವಿಗೂ ಕ್ರಿಯಾಲಿಂಗಾರ್ಚನವನ್ನು ಕೈಬಿಡುವಂತಿಲ್ಲ. ಆಚಾರವೇ ಎಲ್ಲಕ್ಕೂ ಎಲ್ಲರಿಗೂ ಆಧಾರ. ಅದಿಲ್ಲದೆ ಯಾವುದೂ ಆಗದು. "ಕಾಯದಿಂದ ಕ್ರಿಯೆಯ ಕಂಡು, ಭಾವದಿಂದ ಲಿಂಗವ ಕಂಡು, ಲಿಂಗದಿಂದ ಸ್ವಾನುಭವವಾಗಿ ಅಂಗದ ಸಂಗಕ್ಕೆ ಒಳಗಾಯಿತ್ತು ಕದಂಬ ಲಿಂಗವನರಿಯಲಾಗಿ !" ಇದರರ್ಥವನ್ನು ಹಿಂದಿನವರು ಹೀಗೆ ಮಾಡಿದ್ದಾರೆ : "ಅಂಗದಲ್ಲಿ ಲಿಂಗ ಸಂಬಂಧವಾಗಿರುವುದರಿಂದ ಅಷ್ಟವಿಧಾರ್ಚನೆ ಷೋಡಶೋಪಚಾರಗಳಿಂದ ಇಷ್ಟವ ಪೂಜೆಯ ಮಾಡಿ, ಅಂಗ-ಲಿಂಗ ಒಂದೇ ಎಂಬ ಸಮರಸಭಾವದಿಂದ ಇಷ್ಟಲಿಂಗವನೇ ಅಂತರಂಗದಲ್ಲಿ ಪ್ರಾಣಲಿಂಗವಾಗಿ ಕಂಡು, ಪ್ರಾಣಲಿಂಗಕ್ಕೆ ಮಾಡುವ ನಿರ್ಗುಣ ಪೂಜೆಗಳಿಂದ ಸ್ವಾನುಭಾವ ಜ್ಞಾನಸ್ವರೂಪವಾದ ಭಾವಲಿಂಗವು ಆತ್ಮನಲ್ಲಿ ಸಂಬಂಧವಾಗಿ, ಮಹಾಲಿಂಗವೇ ತ್ರಿವಿಧಾಂಗದಲ್ಲಿ ತ್ರಿವಿಧಲಿಂಗವಾಗಿಪ್ಪುದೆಂದು ಅರಿಯಲಾಗಿ, ಆ ಅರಿದ ಜ್ಞಾನವೇ ತನುತ್ರಯ ಷಡಿಂದ್ರಿಯಂಗಳ ಪ್ರಪಂಚಿಗೆ ಬೇರಾಗಿಪ್ಪುದೆಂದರ್ಥ." ತ್ರಿವಿಧ ಅಂಗಗಳು- ತ್ರಿವಿಧ ಲಿಂಗಗಳು ಒಂದರಲ್ಲೊಂದು ಹಾಸುಹೊಕ್ಕಾಗಿವೆ. ಒಂದನ್ನು ಅಗಲಿ ಇನ್ನೊಂದಿರುವುದಿಲ್ಲ. ಇದರಿಂದಾಗಿ ತ್ರಿವಿಧಾರ್ಚನೆ ಅನಿವಾರ್ಯ. ಅಲ್ಲದೆ ಕ್ರಿಯೆ, ಜ್ಞಾನ, ಅನುಭವ ಈ ಮೂರರಿಂದ ಜೀವನ. "ಇಷ್ಟವ ಹಿಡಿದಾಡುವನ್ನಬರ ಪೂಜೆಯ ಕಟ್ಟು ಗೊತ್ತಿನಲ್ಲಿರಬೇಕು. ಇಷ್ಟವರತು ಅಂಗದಾಚರಣೆಯಳಿದು ಉಭಯ ನಷ್ಟವಾದಲ್ಲಿ ಮನಸಂದಿತ್ತು, ಮಾರಯ್ಯಾ." ಇಲ್ಲಿ ಹೇಳಿದ ಇಷ್ಟವರತು ಅಂದರೆ ಪ್ರಾಣಲಿಂಗದಲ್ಲಿ ನಿಷ್ಪತ್ತಿಗೊಳ್ಳುವುದು. ಅಂಗದಾಚರಣೆಯುಳಿದು ಅಂದರೆ ಅರಿವಿನಲ್ಲಿ ಕರಿಗೊಳ್ಳುವಿಕೆ

ಉಭಯು ಅಂದರೆ ಆಚಾರ ವಿಚಾರಗಳೆರಡೂ ನಷ್ಟವೆಂದರೆ ಅನುಭವದಲ್ಲಿ ಅವಿರಳವಾಗುವಿಕೆ. ಹಾಗಾದರೆ ಮನ ಲಿಂಗದಲ್ಲಿ ಸಲ್ಲುವುದು. “ತತ್ವಂಗಳ ಗೊತ್ತು ಗುಟ್ಟನರಿದೆನೆಂದು ಬಿಡಬಾರದು ಇಷ್ಟಲಿಂಗದ ಪೂಜೆಯ. ಆತ್ಮನ ಗೊತ್ತನರಿತೆನೆಂದು ಮರೆಯಲಾಗದು. ಪಾಪ ಪುಣ್ಯವಿಲ್ಲ ಎಂದು ನಿಃಕರಿಸಿ ನಡೆಯಲಾಗದು. ಈ ಗುಣ ಒಂದೂ ಇಲ್ಲ ಎಂದು ಬಿಡಬಹುದೆ ? ನಾನೆಂಬುದು ಇದಿರೇನೆಂಬುದ ಅರಿವನ್ನಕ್ಕ ಶೃತಕ್ಕೆ ದೃಷ್ಟ, ದೃಷ್ಟಕ್ಕೆ ಅನುಮಾನ, ಅನುಮಾನಕ್ಕೆ ನಿಶ್ಚಯ; ನಿಶ್ಚಯ ನಿಜವಾದಲ್ಲಿ ಗೋಪತಿನಾಥ ವಿಶ್ವೇಶ್ವರ ಲಿಂಗದ ಕ್ರಿಯಾನುಗ್ರಹ ನಿರ್ವಾಹ.”

ಕ್ರಿಯಾನುಗ್ರಹಕ್ಕೆ ಇಷ್ಟಲಿಂಗಾರ್ಚನ ಅಗತ್ಯ; ಇದರಿಂದಾಗಿ ಶರಣ ಇಷ್ಟಲಿಂಗಾರ್ಚಕನಾಗಿಯೇ ತೀರಬೇಕು.

“ಇಷ್ಟಲಿಂಗದ ಪೂಜೆ ಯಾವುದು, ಪ್ರಾಣಲಿಂಗದ ಪೂಜೆ ಯಾವುದು, ಭಾವಲಿಂಗದ ಪೂಜೆ ಯಾವುದೆಂದರೆ ಹೇಳಿಹೆ ಕೇಳಿರಯ್ಯಾ : ಇಷ್ಟಲಿಂಗಕ್ಕೆ ಅಷ್ಟವಿಧಾರ್ಚನೆಯ ಮಾಡುವುದು; ಇದು ಇಷ್ಟಲಿಂಗ ಪೂಜೆ ಆ ಲಿಂಗವ ಮನದಲ್ಲಿ ಧ್ಯಾನಿಸಿ, ಮನೋಮಧ್ಯದಲ್ಲಿಪ್ಪ ನಿಃಕಲ ಬ್ರಹ್ಮವನು ಧ್ಯಾನವೆಂಬ ಹಸ್ತದಲ್ಲಿ ಹಿಡಿದು, ಕರಸ್ಥಲದಲ್ಲಿಪ್ಪ ಲಿಂಗದ ಗೊತ್ತಿನಲ್ಲಿ ಕಟ್ಟಿ ನೆರೆವುದೀಗ ಪ್ರಾಣಲಿಂಗದ ಪೂಜೆ. ಮನಸ್ಸು ಲಿಂಗದಲ್ಲಿ ತಲ್ಲೀಯವಾಗಿ ನಚ್ಚಿ ಮಚ್ಚಿ ಅಚ್ಚೊತ್ತಿ ಅಪ್ಪಿ ಅಗಲದಿಪ್ಪುದೆ ಭಾವಲಿಂಗದ ಪೂಜೆ. ಇವು ಮೂರು ಲಿಂಗದ ಅರ್ಚನೆ, ಮೂರು ಲಿಂಗದ ಉಪಚಾರ; ಶಿವಾರ್ಥಿಗಳಾದ ವೀರಶೈವರು ಮಾಡುವ ಲಿಂಗಾರ್ಚನೆಯ ಕ್ರಮವಿದು ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೆ !”

೨. ಪ್ರಾಣಲಿಂಗಾರ್ಚಕ

ಕೇವಲ ಆಚಾರದಿಂದ ಮನ ಸವೆಯುವದಿಲ್ಲ. ಆಚಾರಕ್ಕೆ ತಕ್ಕ ವಿಚಾರವೂ ಬೇಕು. ಆಚಾರ ಬಹಿರಂಗದರ್ಶನೆ. ವಿಚಾರ ಅಂತರಂಗದರ್ಶನೆ. ಆಚಾರ ಇಷ್ಟಲಿಂಗದ ಪೂಜೆ ; ವಿಚಾರ ಪ್ರಾಣಲಿಂಗದ ಪೂಜೆ. ಸದ್ವಿಚಾರ ನಿರತನಾದರೆ ಮನ ವಿಕಾರವಳಿದು ಮನ ಆ ವಿಚಾರ ಲೋಲವಾಗುತ್ತದೆ ; ನಿಶ್ಚಲವಾಗುತ್ತದೆ.

"ಕಾಯವಿಕಾರವಳಿದಲ್ಲದೆ ಗುರುಸ್ಥಲಕ್ಕೆ ಸಲ್ಲ.
ಮನೋವಿಕಾರವಳಿದಲ್ಲದೆ ಲಿಂಗಪೂಜಕನಲ್ಲ.
ತ್ರಿವಿಧ ಮಲ ದೂರಸ್ಥನಲ್ಲದೆ ವಿರಕ್ತ ಅನುಭಾವಿಯಲ್ಲ,
ಇಂತೀ ಒಂದೊಂದರಲ್ಲಿ ಒಂದು ಕಲೆ ಇದ್ದಲ್ಲದೆ ನೀದಲ್ಲಿ ಸನ್ಮುಕ್ತನಲ್ಲ.
ಬಂದ ಮೋಕ್ಷ ಕರ್ಮಂಗಳ ಬಿಟ್ಟು, ನಿಜಸಂದು, ಸುಖಿಯಾಗಬಲ್ಲಡೆ
ಕಾಲಕರ್ಮವಿರಹಿತ ತ್ರಿಪುರಾಂತಕ ಲಿಂಗದಲ್ಲಿ
ಸದ್ಭಾವವಂತ ಶರಣನಾದವನ ತೆರವು."

ಇಷ್ಟಲಿಂಗ ಪೂಜೆಯಿಂದ ಕರ್ಮ ನಿರ್ಮಳವಾಗುತ್ತದೆ. ಪ್ರಾಣಲಿಂಗ ಪೂಜೆಯಿಂದ ಮಾಯೆ ಮಾಣುತ್ತದೆ. ಇಲ್ಲಿ ಮಾಯೆಯೆಂದರೆ ಮರವೆ. ಪ್ರಾಣ ಲಿಂಗವೆಂದರೆ ಪ್ರಣವಸ್ವರೂಪ ಪರಶಿವಜ್ಞಾನ. ಪೂಜೆಯೆಂದರೆ ಶಿವಜ್ಞಾನ ಚಿಂತನ, ಸ್ವಾಧ್ಯಾಯ ನಿರತತೆ

ವಿಚಾರ ಪ್ರೌಢಿಮೆ, ವಿಚಾರ ಸಾತತ್ಯ, ವಿಚಾರಶಿವತ್ವ ವಿಶೇಷವಾಗಬೇಕು. ಆಗ ಲಿಂಗವೇ ಪ್ರಾಣವಾಗುತ್ತದೆ. ಅಂದರೆ ವಿಚಾರವೇ ಪ್ರಾಣವಾಗುತ್ತದೆ. ಅದು ಅಜ್ಞಶೀಲ; ಅದು ಅಸ್ಖಲಿಂಗಾರ್ಚನ,

ಶೀಲ ಶೀಲವೆಂದು ಗರ್ವಿಸಿ ಕೃತಕದಲ್ಲಿ ನುಡಿವ
ಉದ್ದೇಶಿ ಪ್ರಾಣಿಗಳೆಲ್ಲರು ಅನಂತಶೀಲರು,
ಹೂಬಾವಿ ಮಠಕ್ಕೆ ಸೀಮೆಯ ಮಾಡುವುದು ಶೀಲವಲ್ಲ,
ತನ್ನ ಮನಕ್ಕೆ ಸೀಮೆಯ ಮಾಡುವುದು–ಶೀಲ.
ಲಿಂಗ ಪ್ರಾಣವ ಮಾಡುವುದು ಶೀಲವಲ್ಲದೆ,
ಪ್ರಾಣಲಿಂಗವ ಮಾಡುವುದು ಶೀಲವೆ ?
ಇಂತಿವೆಲ್ಲ ಶೀಲರು ದುಶ್ಶೀಲರು.
ಸರಳೇಶ್ವರದೇವ ನಾನೆಂದರಿಯೆ ನೀನಿರಿಸಿದಂತಿಪ್ಪ."

ಪರಶಿವನೇ ನಾನೆಂದರಿಯುವುದೇ ಜ್ಞಾನಾನುಗ್ರಹ; ಅದೇ ಚಿನ್ಮಯ ದೀಕ್ಷೆ. ಅದು ಆಳವಡಬೇಕಾದರೆ ಪ್ರಾಣಲಿಂಗಾರ್ಚಕನಾಗಬೇಕು. ಆಚಾರದಲ್ಲಿ ವಿಚಾರ, ವಿಚಾರದಲ್ಲಿ ಆಚಾರ ಕರಿಗೊಂಡಿರುವುದೆ ಪ್ರಾಣೇಷ್ಟಲಿಂಗ ಪೂಜೆ.

"ಇಷ್ಟಲಿಂಗದ ಮುಖವಾವುದು ? ಪ್ರಾಣಲಿಂಗದ ಮುಖವಾವುದು ? ಭಾವಲಿಂಗದ ಮುಖವಾವುದು ಎಂದರೆ ಹೇಳಿಹೆ ಕೇಳಿರಣ್ಣಾ : ಇಷ್ಟಲಿಂಗದ ಮುಖವೈದು: ಪ್ರಾಣವಾಯುಗಳ ಮುಖವನೆಯ್ದಿ ಪ್ರಾಣಲಿಂಗವೆನಿಸಿಕೊಂಡಿತ್ತು. ಭಾವವನೆಯ್ದಿ ಭಾವಲಿಂಗವೆನಿಸಿಕೊಂಡಿತ್ತು. ಒಂದೇ ಲಿಂಗ ತನುತ್ರಯಂಗಳಲ್ಲಿ ಇಷ್ಟ ಪ್ರಾಣ ಭಾವರೂಪಕವಾಗಿಪ್ಪದು. ಜೀವತ್ರಯಂಗಳಲ್ಲಿ ಮಂತ್ರಜ್ಞಾನ ಧ್ಯಾನ ರೂಪಕವಾಗಿದ್ದುದು. ಅವಸ್ಥಾತ್ರಯಂಗಳಲ್ಲಿ ಸತ್ಕ್ರಿಯಾಚರಣೆ ತದ್ವಾಸನೆ ತಲ್ಲೀಯವಾಗಿಪ್ಪದು. ಮಲತ್ರಯಂಗಳಲ್ಲಿ ಸ್ವಯ ಚರ ಪರ ರೂಪಕವಾಗಿಪ್ಪದು.

ಈ ಷಣತ್ರಯಂಗಳಲ್ಲಿ ತ್ರೈಲಿಂಗ ಪೇಮಶತಿಗೆ ಸಕಲ ಸಾಧನಂಗಳಾಗಿ ಮಾಯಾಭ್ರಾಂತಿಯುನು ನಿಭ್ರಾಂತಿಯೆನಿಸಿ ಶುದ್ಧ ಪ್ರಭಾಪರಿಪೂರ್ಣಲಿಂಗ ತಾನೆ ಪ್ರಸನ್ನ ಪ್ರಸಾದರೂಪಕನಾಗಿರುತಿಪ್ಪದಯ್ಯಾ, ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ !"

೩. ತೃಪ್ತಿಲಿಂಗಾರ್ಚಕ

ಆಚಾರ ವಿಚಾರದಲ್ಲಿ ಕರಿಗೊಂಡಂತೆ, ವಿಚಾರ ಅನುಭವದಲ್ಲಿ ಕರಿಗೊಳ್ಳಬೇಕು. ಆಗ ತೃಪ್ತಿ ತುಂಬಿ ಬರುತ್ತದೆ. ಆ ತುಂಬು ತೃಪ್ತಿಯನ್ನು ಭಾವಲಿಂಗಕ್ಕೆ ನಿವೇದಿಸಿದಲ್ಲಿ ಅದೇ ತೃಪ್ತಿಲಿಂಗಾರ್ಚನೆ. ನಿವೇದಿಸಿದಾತನು ತೃಪ್ತಿಲಿಂಗಾರ್ಚಕನು. ಆತನ ಭಾವಗತ ಭ್ರಮೆಗಳು ಬಿಟ್ಟೋಡುತ್ತವೆ; ಬಯಕೆ ಬಯಲಾಗುತ್ತದೆ. ಅನುಭವವೇ ತೃಪ್ತಿಲಿಂಗ. ಆ ಅನುಭವವನ್ನು ಅಳವಡಿಸಿಕೊಳ್ಳುವುದೇ ತೃಪ್ತಿಲಿಂಗಾರ್ಚನ.

"ಕಾಯದ ಕಳವಳದಲ್ಲಿ ಕಂಗೆಡುವವನಲ್ಲ ಶರಣ.
ಜೀವನೋಪಾಧಿಕೆಯ ಹೊದ್ದುವವನಲ್ಲ ಶರಣ.
ಭಾವದ ಭ್ರಮೆಯಲ್ಲಿ ಸುಳಿವವನಲ್ಲ ಶರಣ.

ಮನದ ಮರವೆಯಲ್ಲಿ ಮಗ್ನನಲ್ಲ ಶರಣ.
ಕಂಗಳ ಕತ್ತಲೆಯಲ್ಲಿ ಸುತ್ತಿ ಸುಳಿವನಲ್ಲ' ಶರಣ.
ಇಂದ್ರಿಯಂಗಳ ವಿಕಾರದಲ್ಲಿ ಹರಿದಾಡುವವನಲ್ಲ ಶರಣ.

ಪರತರ ಲಿಂಗದ ಬೆಳಗಿನೊಳಗೆ ಬೆರೆದು.
ತೆರಹಿಲ್ಲದೆ ಬೆಳಗುವ ಗಂಭೀರ ಶರಣನ ನಿಲುವಿಗೆ
ನಮೋ ನಮೋ ಎಂಬೆನಯ್ಯ ಅಖಂಡೇಶ್ವರಾ."

ತೃಪ್ತಿಲಿಂಗಾರ್ಚಕ ಶರಣ ಕಾಲ, ಕಾಂಕ್ಷೆ, ಕಲ್ಪನೆಗಳಿಗೆ ಸಿಕ್ಕು ಎದೆಗೆಡುವವನಲ್ಲ. ಇಷ್ಟ ಅನುಭಾವ್ಯದಲ್ಲಿಯೇ ಒದಗಿದ್ದ ಸೌಖ್ಯದಲ್ಲಿಯೇ ಆತನಿಗೆ ತೃಪ್ತಿ.

ಇಲ್ಲದ ಸಲ್ಲದ ವಿಕಲ್ಪಗಳಿಗೆ ಎಡೆಗೊಡನು. ಶಿವಾನುಭವವೇ ಆತನ ಸರ್ವಸ್ವ. ಅದೇ ಆತನ ಪರಮ ಪರಿಣಾಮ. ಆತನ ಭಾವದಲ್ಲಿ ಅನುಭಾವಕ್ಕಲ್ಲದೆ ಅನ್ಯದಕ್ಕೆ ಅವಕಾಶ ಅದೆಷ್ಟೋ ಇರುವುದಿಲ್ಲ. ಅದರಿಂದಾಗಿ ಆತನಿಗೆ ಕಾಲ ಭಯವಿಲ್ಲ. ಕಿಂಚಿತ್ತತೆಯ ಅಂದರೆ ಅಣುತ್ವದ ಭ್ರಮೆಯಿಲ್ಲ. ಕೊರತೆಯೆಂಬುದರ ವೆತೆಗಿಂಬಿರುವುದಿಲ್ಲ. ಕುಲಛಲಗಳ ಮನ ಧನಗಳ ಮದವಿಲ್ಲ. ಕರ್ಮ-ಧರ್ಮಗಳ ಹಮ್ಮುಬಿಮ್ಮುಗಳ ಕಿರುಕುಳವಿಲ್ಲ.

"ಕುಲಮದವಳಿಯದನ್ನಕ್ಕರ ಶರಣನಾಗಲೇಕೋ ?
ವಿಧಿವಶ ಬಿಡದನ್ನಕ್ಕರ ಭಕ್ತರ ಭಕ್ತನಾಗಲೇಕೋ ?
ಹಮ್ಮಿನ ಬಿಮ್ಮು ಸೊಮ್ಮು ಸಂಬಂಧ ಬಿಟ್ಟು ಕಿಂಕರನ
ಕಿಂಕರನಾಗಬೇಕು. ಹೆಪ್ಪನೆರೆದು ಹಾಲುಕೆಟ್ಟು ತುಪ್ಪವಪ್ಪಂತೆ
ಇಪ್ಪರು ಕೂಡಲಸಂಗಮದೇವಾ ನಿಮ್ಮ ಶರಣರು."

ಅನುಭವಾಮೃತ ತೃಪ್ತಿಯೇ ತೃಪ್ತಿ. ಅದನ್ನು ತಂದುಕೊಳ್ಳುವುದೇ ತೃಪ್ತಿಲಿಂಗಾರಾಧನೆ. ಅದರಿಂದ ನಿಷ್ಕಲತೆ. ಅದೇ ಅಖಂಡತೆ. ಅಂಥವರಿಗೆ ಅತೃಪ್ತಿಯೇ ಇಲ್ಲ ; ಇರಲು ಸಾಧ್ಯವಿಲ್ಲ. ಆತನ ಭಾವ ಆ ಅಖಂಡ ಬಯಲ ಬ್ರಹ್ಮವನಪ್ಪಿರುತ್ತದೆ.

"ಸತ್ತು ಚಿತ್ತಾನಂದ ನಿತ್ಯ ಪರಿಪೂರ್ಣ ಅಖಂಡವೆಂಬ ಲಕ್ಷಣ ಯುಕ್ತನಾದ ಮಹಾಲಿಂಗವೇ ಪತಿ, ತಾನೇ ಶರಣ ಸತಿ ಎಂಬ ದೃಢ ಬುದ್ಧಿ ನಿಶ್ಚಲವಾಗಿರಬೇಕು. ಮತ್ತು ತಾನೇ ಸರ್ವಾಧಾರ ಪರಮ ಸ್ವತಂತ್ರನೆಂಬ ಭಾವವು ಇಂಬುಗೊಂಡಿರಬೇಕು. ಅಂಗಭೋಗೋಪಭೋಗಗಳೆಲ್ಲವೂ ಹಿಂದುಳಿದು, ಲಿಂಗಭೋಗೋಪಭೋಗಗಳೇ ಮುಂದುಗೊಂಡಿರ್ಪನು — ಶರಣನೋಡಾ. ಇಂತಪ್ಪ ಮಹಾಶರಣರ ಸಂಗದಲ್ಲಿರಿಸಿ ಸಲಹಯ್ಯ ಎನ್ನ ಅಖಂಡೇಶ್ವರಾ.

ಕಾಯಾನುಭಾವಿಗಳು ಕಾಯದಲ್ಲಿಯೇ ಮುಕ್ತರು.
ಜೀವಾನುಭಾವಿಗಳು ಜೀವದಲ್ಲಿಯೇ ಮುಕ್ತರು.

ಪವನಾನುಭಾವಿಗಳೆಲ್ಲ ಪವನದಲ್ಲಿಯೇ ಮುಕ್ತರು,
ಯೋಗಾನುಭಾವಿಗಳೆಲ್ಲ ಯೋಗದಲ್ಲಿಯೇ ಮುಕ್ತರು.
ಇವರನೆಂತು ಸರಿ ಎಂಬೆನಯ್ಯಾ—ಲಿಂಗಾನುಭಾವಿಗಳಿಗೆ ?
ಶಿವಲಿಂಗಪ್ರಕಾಶದಲ್ಲಿ ಸದಾಸನ್ನಿಹಿತರು ನಮ್ಮ ಶರಣರು
ಕೂಡಲ ಚೆನ್ನಸಂಗಮದೇವಾ."

ಆತ್ಮಸಂಗವಾದವರ್ಗೆ ಬಹಿರ್ಭಾವವಿಲ್ಲ.
ಇಂದ್ರಿಯಗಳು ಲಿಂಗವಾದವರ್ಗೆ ವಿಷಯ ಸೂತಕವಿಲ್ಲ.
ಕರಣಂಗಳು ಲಿಂಗವಾದವರ್ಗೆ ಹಿಂದು ಮುಂದೆಂಬ ಸಂಶಯವಿಲ್ಲ.
ಲಿಂಗಾಲಯ ಮನವಾದವರ್ಗೆ ಇಹ-ಪರವೆಂಬ ಸಂಬಂಧವಿಲ್ಲ.
ಲೋಕದಂತೆ ನಡೆವರು, ಮಾಯಾಮೋಹದಂತಿಹರು ;
ತನು ವ್ಯವಹಾರಿಗಳಲ್ಲದೆ ಮನವು ಮಹದಲ್ಲಿ
ಪರಿಣಾಮಿಗಳು ನೋಡಾ. ಇಂತಲ್ಲದೆ ಲಿಂಗಾನುಭಾವ
ಸುಖಿಗಳ ಲೋಕದ ಪ್ರಪಂಚಿಗಳೆಂದರೆ
ಮನೋ ಮಧ್ಯದೊಳಿಪ್ಪ ಜ್ಯೋತಿರ್ಲಿಂಗ ನಗದಿಹನೆ ಗುಹೇಶ್ವರಾ ?

ತೃಪ್ತಿಲಿಂಗಾರ್ಚಕ ಶರಣ ಪೂರ್ಣರೂಪಕ್ಕೆ ಬಂದಿರುತ್ತಾನೆ. ಪೂರ್ಣಸ್ವರೂಪ ಪ್ರಸಾದಲಿಂಗ ಪರಿಣಾಮಿಯಾಗಿರುತ್ತಾನೆ. ಪೂರ್ಣತೃಪ್ತಿಯನ್ನು ಪಡೆದಿರುತ್ತಾನೆ. ಲಿಂಗಾನುಭಾವವೆ ಪರಮ ಪ್ರಸಾದವಾಗಿರುತ್ತದೆ. ಆತನ ಬಗೆ ಹೊರಕ್ಕೆ ತುಳುಕದು. ತುಳುಕಿದರೂ ಆತನಿಗೆ ವಿಷಯ ಸೂತಕ, ಸಂಶಯ ಸೂತಕಗಳಿರುವುದಿಲ್ಲ. ವಿಷಯಗಳೆಲ್ಲ ಆತನಿಗೆ ಪ್ರಸಾದಗಳಾಗಿ ಪರಣಮಿಸಿರುತ್ತವೆ- ಆತನ ಭೋಗವೂ ಒಂದು ಯೋಗವಾಗಿರುತ್ತದೆ. ಆತನಿಗೆ ಹಿಂದು ಮುಂದೆಂಬ ಕ್ರಮವಿರುವುದಿಲ್ಲ. ಕೊರತೆಯಿಲ್ಲದ ತೆರಹಿಲ್ಲದ ಪೂರ್ಣಾನುಭವಕ್ಕೆ ಹಿಂದೇನು, ಮುಂದೇನು ? ಸಂಶಯವೆಂದರೇನು ? ಆತನಿಗೆ ಇಹ-ಪರಗಳ ಭೇದವಾಗಲಿ, ಸಂಬಂಧವಾಗಲಿ ಇರುವುದಿಲ್ಲ. ಎಲ್ಲಿದ್ದರೂ ಆತನಿಗೆ ತೃಪ್ತಿ. ಏನಿದ್ದರೂ ತೃಪ್ತಿ ; ಏನಿಲ್ಲದಿದ್ದರೂ ತೃಪ್ತಿ. ಆತನು ಪ್ರಪಂಚದಲ್ಲಿದ್ದರೂ

ಪರಮಾರ್ಥಸಂಪನ್ನನಾಗಿರುತ್ತಾನೆ. ಆತನ ಇರವು ಆತನದೆ! ಅದನ್ನು ಹಾಗೆ ಹೀಗೆ ಎಂದು ಹೇಳಲಾಗುವುದಿಲ್ಲ. ನಿತ್ಯತೃಪ್ತಿಯೇ ಆತನ ಪೂರ್ಣಪ್ರಾಪ್ತಿ.

> "ಇಷ್ಟ-ಪ್ರಾಣ-ಭಾವಲಿಂಗಗಳ ಅರ್ಪಣ ಹೇಳಿಹೆ ಕೇಳಿರಯ್ಯಾ: ಇಷ್ಟಲಿಂಗಕ್ಕೆ ಶರೀರವೇ ಸಮರ್ಪಣ ಪ್ರಾಣಲಿಂಗಕ್ಕೆ ಮನವೇ ಸಮರ್ಪಣ. ಭಾವಲಿಂಗಕ್ಕೆ ತೃಪ್ತಿಯೆ ಸಮರ್ಪಣ. ಶರೀರವೆಂದರೆ ರೂಪು, ಮನವೆಂದರೆ ರುಚಿ, ತೃಪ್ತಿಯೆಂದರೆ ಸಂತೋಷ. ಈ ತೆರನ ನರಿದು ಲಿಂಗಕ್ಕೆ ಸಮರ್ಪಿಸಿ ಪ್ರಸಾದವ ಭೋಗಿಸಬಲ್ಲಾತನೇ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಿಯೆಂದು ಹೇಳಲ್ಪಟ್ಟಿತ್ತಯ್ಯಾ, ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ !"

ಷಡ್ವಿಧ ಶರಣಸ್ಥಲಂ

ಶಿವಶರಣನ ಸ್ವಾನುಭಾವ ಸಾಹಿತ್ಯದಲ್ಲಿ ಜ್ಯೋತಿರ್ಮಯ ಪ್ರಾಸಾದಿಕ ಶಬ್ದವಿರುತ್ತದೆ. ಆ ಶಬ್ದದಲ್ಲಿ ಸ್ಪರ್ಶರೂಪು ರಸಗಂಧಗಳೂ ತೃಪ್ತಿಯೂ ಇರುತ್ತವೆ. ಇದರಿಂದಾಗಿ ಶರಣನು ಆರು ತೆರನಾಗಿ ಪರಿಣಮಿಸುತ್ತಾನೆ. ಪರಾಶಕ್ತಿ ಶಾಂತ್ಯತೀತ ಕಲೆಯುಳ್ಳ 'ಪ್ರಸಾದಲಿಂಗಕ್ಕೆ ಆನಂದಭಕ್ತಿಯುಳ್ಳ ಅಂಗನು ಸುಜ್ಞಾನ ಹಸ್ತದಿಂದ ಶ್ರೋತ್ರಮುಖದಲ್ಲಿ ಶಬ್ದ ಪದಾರ್ಥವನ್ನರ್ಪಿಸಿ ಸುಶಬ್ದ ಪ್ರಸಾದವನ್ನಾಗಿಸಿ ಆಲಿಸುವುದರಿಂದ ' ಶರಣ 'ನೆನಿಸುತ್ತಾನೆ. ಆ ಶಬ್ದ ಪದಾರ್ಥದಲ್ಲಿ ಸೂಕ್ಷ್ಮವಾಗಿ ಸ್ಪರ್ಶಾದಿಗಳಿರುವುದರಿಂದ ಇವುಗಳ ಅರ್ಪಣದಿಂದ ಶರಣಾಂಗನು ಶರಣನ ಪ್ರಾಣಲಿಂಗಿ, ಶರಣನ ಪ್ರಸಾದಿ, ಶರಣನ ಮಾಹೇಶ್ವರ, ಶರಣನ ಭಕ್ತ, ಶರಣನ ಐಕ್ಯ ಎಂದಾಗಿ ಆರು ಬಗೆಯಾಗುತ್ತಾನೆ.

" ಆಕಾಶವೇ ಅಂಗವಾದ ಶರಣನಲ್ಲಿಯೇ
ಐಕ್ಯ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿಯಪ್ಪ
ಅಂಗಪಂಚಕವು ಗರ್ಭೀಕೃತವಾಗಿ
ಶರಣಂಗೆ ಪ್ರಸಾದಲಿಂಗವೆ ಸ್ವಾಯತವಾಗಿ
ಆ ಪ್ರಸಾದಲಿಂಗದಲ್ಲಿಯೇ ಮಹಾಲಿಂಗ ಆಚಾರಲಿಂಗ
ಗುರುಲಿಂಗ ಶಿವಲಿಂಗ ಜಂಗಮಲಿಂಗವೆನಿಸುವ
ಲಿಂಗಪಂಚಕವು ಗರ್ಭೀಕೃತವಾಗಿ, ಪ್ರಸಾದಲಿಂಗವೆ ಆಶ್ರಯವಾಗಿ,
ಇಂತೀ ಷಡ್ವಿಧ ಲಿಂಗದಲ್ಲಿ ಬೆರಸಿ
ಬೇರಿಲ್ಲದಿರಬಲ್ಲರೆ ಶರಣನೆಂಬೆನಯ್ಯಾ,
ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೆ !"

ಆಕಾಶಾಂಗನಾದ ಶರಣನು ಕೇವಲ ಶರಣನಲ್ಲ ; ಭಕ್ತತ್ವ ಮಾಹೇಶ್ವರತ್ವಾದಿಗಳಿಂದ ಪರಿವೇಷ್ಟಿತನಾದವನು. ಅಷ್ಟೇ ಅಲ್ಲ ಅವಿನಾಭಾವ ಸಂಬಂಧವುಳ್ಳವನು. ಬೆರಸಿ ಬೇರಿಲ್ಲದಿರುವವನು.

ಶಬ್ದದೊಳಗಿನ ಗಂಧಾದಿಗಳಿಂದ ಶರಣ ಆರು ಬಗೆಯಾಗವಂತೆ ಗಂಟೆ ವೀಣೆ ಪಟಹ ಕಹಳಗಳ ನಾದ ಭೇದದಿಂದಲೂ ಇವುಗಳ ಮಿಶ್ರಾರ್ಪಣದಿಂದಲೂ ಆರು ತೆರನಾಗುತ್ತಾನೆ. ಗಂಟೆ ತಾಳ ಕಂಸಾಳಾದಿ ಧಾತು ವಾದ್ಯಗಳನ್ನು ಪ್ರಸಾದಲಿಂಗದೊಳಗಿನ ಆಚಾರಲಿಂಗಕ್ಕೆ ಅರ್ಪಿಸಿ ಶರಣನೊಳಗಿನ ಭಕ್ತನೆನಿಸುತ್ತಾನೆ. ವೀಣೆ ರುದ್ರವೀಣೆ ತುಂಬುರವೀಣೆ ಕಿನ್ನರವೀಣೆ ಕೈಲಾಸವೀಣೆ ಮುಂತಾದ ತಂತಿ ವಾದ್ಯಗಳ ನಾದವನ್ನು ಪ್ರಸಾದಲಿಂಗದೊಳಗಿನ ಗುರುಲಿಂಗಕ್ಕೆ ಅರ್ಪಿಸಿ ಶರಣನೊಳಗಿನ ಮಾಹೇಶ್ವರನೆನಿಸುತ್ತಾನೆ. ಪಟಹ ಪಡಡಕ್ಕೆ ಡಮರುಗ ಡಿಂಡಿಮ ಆವುಜ ಪಟಾವುಜ ಮೃದಂಗ ಮುರಜ ಭೇರಿ ಮುಂತಾದ ಚರ್ಮವಾದ್ಯಗಳ ನಾದವನ್ನು ಪ್ರಸಾದಲಿಂಗದೊಳಗಿನ ಶಿವಲಿಂಗಕ್ಕೆ ಅರ್ಪಿಸಿ ಶರಣ ಪ್ರಸಾದಿಯೆನಿಸುತ್ತಾನೆ. ಕಹಳೆ ಹೆಗ್ಗಹಳೆ ಶಂಖ ವಾಸ ನಾಗಸ್ವರ ಉಪಾಂಗ ಮೊದಲಾದ ವಾಯುವಾದ್ಯಗಳ ನಾದವನ್ನು ಪ್ರಸಾದಲಿಂಗದೊಳಗಿನ ಜಂಗಮಲಿಂಗಕ್ಕೆ ಅರ್ಪಿಸಿ ಶರಣಪ್ರಾಣಲಿಂಗಿಯೆನಿಸುತ್ತಾನೆ. ಸಂಗೀತ, ಸಾಹಿತ್ಯ. ಶಬ್ದಾರ್ಥ ಮೊದಲಾದ ಶಬ್ದನಾದವನ್ನು ಪ್ರಸಾದಲಿಂಗದೊಳಗಿನ ಪ್ರಸಾದಲಿಂಗಕ್ಕೆ ಅರ್ಪಿಸಿ ಶರಣನೊಳಗಿನ ಶರಣನೆನಿಸುತ್ತಾನೆ. ಇನ್ನು ಪಂಚಮಹಾವಾದ್ಯಗಳ ಮಿಶ್ರವಾದ ತೃಪ್ತಿಯನ್ನು ಪ್ರಸಾದಲಿಂಗದೊಳಗಿನ ಮಹಾಲಿಂಗಕ್ಕರ್ಪಿಸಿ ಶರಣೈಕ್ಯನೆನಿಸುತ್ತಾನೆ.

ಆಯತ ಶರಣ, ಸ್ವಾಯತ ಶರಣ, ಸನ್ನಿಹಿತ ಶರಣ, ಕಳಾಗ್ರಾಹಕ ಶರಣ ಮನೋಮಗ್ನ ಶರಣ, ಘನಸಾಮರಸ್ಯ ಶರಣ ಎಂದು ಆರು ಬಗೆಯಾಗುತ್ತಾನೆ. ಅಂಗಗಳ ವಿಕಾಸದಿಂದ ಕಲೆಗಳ ವಿಕಾಸದಿಂದ ಈ ಭೇದಗಳ ಪ್ರತೀತಿ. ಅಲ್ಲದೆ ಆ ಆ ಲಿಂಗಗಳ ಸಾನ್ನಿಧ್ಯವನ್ನೂ ಈ ಹೆಸರುಗಳು ಸೂಚಿಸುತ್ತವೆ.

ಆರು ಲಿಂಗಗಳ ಆರು ಬಗೆಯ ಆನಂದಗಳನ್ನು ಅನುಭವಿಸುವವನೂ ಸಹ ಆರು ಬಗೆಯ ಶರಣನೆನಿಸಿ ಹೀಗೆ ಹೆಸರುಗಳನ್ನು ತಳೆಯುತ್ತಾನೆ : ಆಚಾರಾನಂದಿ

ಗೌರವಾನಂದಿ, ಲಿಂಗಾನಂದಿ, ಜಂಗಮಾನಂದಿ, ಪ್ರಸಾದಾನಂದಿ, ಮಹಾನಂದಿ ಎಂದೂ ಶರಣ ಆರು ತೆರನಾಗುತ್ತಾನೆ.

ಮೋಹಿ, ಭಕ್ತ, ವೀರ, ಪ್ರಾಣಿ, ಪ್ರಸಾದಿ, ತೃಪ್ತ-ಎಂದು ಆರು ಬಗೆಯ ಹೆಸರುಗಳನ್ನೂ ಶರಣ ತೊಡುತ್ತಾನೆ.

"ಆಕಾಶದೊಳಗಣ ಭೂಮ್ಯಂಗನೆ ಶರಣನ ಭಕ್ತ,
ಆಕಾಶದೊಳಗಣ ಸಲಿಲಾಂಗನೆ ಶರಣ ಮಾಹೇಶ್ವರ,
ಆಕಾಶದೊಳಗಣ ಅನಲಾಂಗನೆ ಶರಣಪ್ರಸಾದಿ.
ಆಕಾಶದೊಳಗಣ ಅನಿಲಾಂಗನೆ ಶರಣ ಪ್ರಾಣಲಿಂಗಿ.
ಆಕಾಶದೊಳಗಣ ಆಕಾಶಾಂಗನೆ ಶರಣನ ಶರಣ.
ಆಕಾಶದೊಳಗಣ ಆತ್ಮಾಂಗನೆ ಶರಣೈಕ್ಯ.
ಶ್ರೀ ನಿಡುಮಾಮಿಡಿ ಶ್ರೀಗಿರಿಸೂರ್ಯಸಿಂಹಾಸನಾಧೀಶ್ವರ."

"ಷಡಂಗ ವೇದ್ಯನೆ ಶರಣ. ಆ ಶರಣನ ಷಡಾಧಾರ ಚಕ್ರಕಂಜದಲ್ಲಿದ್ದ ಷಡ್ವಿಧ ಲಿಂಗದಲ್ಲಿ ಷಡ್ವಿಧಾಂಗವನು ಷಡ್ವಿದ ಭಕ್ತಿಯಿಂದೆ ವ್ಯಾಪಿಸಲ್ತಕ್ಕಂಥಾತನೆ ಆನಂದ ಭಕ್ತಿಯನ್ನುಳ್ಳ ಶರಣ. ಆ ಶರಣನ ಯೋಗಭಕ್ತ; ಆ ಶರಣನ ಆಧಾರ ಚಕ್ರದ ನಾಲ್ಕೆಸಳ ಕುಂಜದಲ್ಲಿರ್ದ ಪ್ರಸಾದಲಿಂಗದೊಳಗಣ ಆಚಾರಲಿಂಗದಲ್ಲಿ ಆನಂದಭಕ್ತಿಯೊಳಗಣ ಶ್ರದ್ಧಾಭಕ್ತಿಯಿಂದೆ ಕೂಟಸ್ಥವಾದಂಥಾತನೆ ಶರಣನೊಳಗಣ ಭಕ್ತ. ಆ ಶರಣಯೋಗ ಮಾಹೇಶ್ವರ, ಆನಂದ ಭಕ್ತಿಯನ್ನುಳ್ಳ ಶರಣನ ಸ್ವಾಧಿಷ್ಠಾನ ಚಕ್ರದ ಆರೆಸಳಕಂಜದಲ್ಲಿದ್ದ ಪ್ರಸಾದಲಿಂಗದೊಳಗಣ ಗುರುಲಿಂಗದಲ್ಲಿ ಆನಂದಭಕ್ತಿಯೊಳಗಣ ನೈಷ್ಠಿಕಾಭಕ್ತಿಯಿಂದ ಕೂಟಸ್ಥವಾದಂಥಾತನೆ ಶರಣನೊಳಗಣ ಮಾಹೇಶ್ವರ. ಆ ಶರಣನ ಯೋಗಪ್ರಸಾದಿ, ಆನಂದಭಕ್ತಿಯನುಳ್ಳ ಶರಣನ ಮಣಿಪೂರಕ ಚಕ್ರದ ಹತ್ತೆಸಳಕಂಜದಲ್ಲಿರ್ದ ಪ್ರಸಾದಲಿಂಗದೊಳಗಣ ಶಿವಲಿಂಗದಲ್ಲಿ ಆನಂದಭಕ್ತಿಯೊಳಗಣ ಸಾವಧಾನ ಭಕ್ತಿಯಿಂದೆ ಕೂಟಸ್ಥವಾದಂಥಾತನೆ ಶರಣನೊಳಗಣ ಪ್ರಸಾದಿ. ಆ ಶರಣನ ಯೋಗ ಪ್ರಾಣಲಿಂಗಿ, ಆನಂದಭಕ್ತಿಯನುಳ್ಳ ಶರಣನ ಅನಾಹುತ, ಚಕ್ರದ ಹನ್ನೆರಡೆಸಳ ಕಂಜದಲ್ಲಿರ್ದ ಪ್ರಸಾದಲಿಂಗದೊಳಗಣ ಜಂಗಮಲಿಂಗದಲ್ಲಿ ಆನಂದಭಕ್ತಿಯೊಳಗಣ ಅನುಭಾವಭಕ್ತಿ

ಯಿಂದೆ ಕೂಟಸ್ಥವಾದಂಥಾತನೆ ಶರಣನೊಳಗಣ ಪ್ರಾಣಲಿಂಗಿ. ಆ ಶರಣನ ಯೋಗ ಶರಣ. ಆನಂದಭಕ್ತಿಯನುಳ್ಳ ಶರಣನ ವಿಶುದ್ಧಿ ಚಕ್ರದ ಹದಿನಾರೆಸಳ ಕಂಜದಲ್ಲಿರ್ದ ಪ್ರಸಾದಲಿಂಗದೊಳಗಣ ಪ್ರಸಾದಲಿಂಗದಲ್ಲಿ ಆನಂದಭಕ್ತಿಯೊಳಗಣ ಆನಂದಭಕ್ತಿಯಿಂದೆ ಕೂಟಸ್ಥವಾದಂಥಾತನೆ ಶರಣನೊಳಗಣ ಶರಣ. ಆ ಶರಣನ ಯೋಗ ಐಕ್ಯ, ಆನಂದಭಕ್ತಿಯನುಳ್ಳ ಶರಣನ ಆಜ್ಞಾಚಕ್ರದ ಎರಡೆಸಳ ಕಂಜದಲ್ಲಿದ್ದ ಪ್ರಸಾದಲಿಂಗದೊಳಗಣ ಮಹಾಲಿಂಗದಲ್ಲಿ ಆನಂದಭಕ್ತಿಯೊಳಗಣ ಸಮರಸಭಕ್ತಿಯಿಂದೆ ಕೂಟಸ್ಥವಾದಂಥಾತನೆ ಶರಣನೊಳಗಣ ಐಕ್ಯನು. ಇನ್ನು ಈ ಪ್ರಕಾರದ ದೆಸೆಯಿಂದೆ ಶರಣನ ಯೋಗಾಂಗಸ್ಥಲವಾರು. ಶರಣನ ಷಡಾಧಾರಚಕ್ರಕಂಜದಲ್ಲಿರ್ಪ ಷಡ್ವಿಧ ಲಿಂಗದಲ್ಲಿ ಷಡ್ವಿಧಾಂಗವನು ಷಡ್ವಿಧಭಕ್ತಿಯಿಂದ ಕೂಟಸ್ಥವಾದಂಥ ಶರಣಸ್ಥಲಂಗಳು ಷಟ್‌ಪ್ರಕಾರವು.

೧. ಶರಣನ ಭಕ್ತಸ್ಥಲ:

ಭೋಗಾಂಗಕ್ಕೆ ಎರಡೆಸಳು. ಒಂದು ಶರಣಾಂಗ; ಇನ್ನೊಂದು ಐಕ್ಯಾಂಗ ಇದೀಗ ಶರಣಾಂಗ ವಿಚಾರ. ಈತನಿಗೆ ಆಕಾಶಾಂಗವೇ ಮುಖ್ಯ. ಉಳಿದವುಗಳು ಗೌಣಾಂಗವಾಗಿರುವವು. ಆಕಾಶದೊಳಗೆ ಪೃಥ್ವ್ಯಂಶವಿದೆ. ಅಂತೆಯೇ ಶಬ್ದ ಪದಾರ್ಥದಲ್ಲಿ ಗಂಧಪದಾರ್ಥ ಗೌಣವಾಗಿರುತ್ತದೆ. ಇಲ್ಲಿ ಗಂಧವೆಂದರೆ ಶಬ್ದಸಂಸ್ಕಾರ; ಅಥವಾ ಶಾಬ್ದಿಕ ವಾಸನೆ.

ಶಬ್ದಸಂಸ್ಕಾರ ತ್ರಿವಿದ : ಲೌಕಿಕ ತಾಂತ್ರಿಕ ಮಾಂತ್ರಿಕವೆಂದು. ಲೌಕಿಕ ಶಬ್ದ ಸಂಸ್ಕಾರ ಶುದ್ಧಾಶುದ್ಧ ಭೇದದಿಂದ ದ್ವಿವಿಧ. ತಾಂತ್ರಿಕವೇ ಗುರುದೇವನ ಮುಖಾಂತರ ಬಂದು ಮಾಂತ್ರಿಕವಾಗುತ್ತದೆ. ಲೌಕಿಕ ವರ್ಣಾಧ್ವ, ತಾಂತ್ರಿಕ ಪದಾಧ್ವ. ಮಾಂತ್ರಿಕ ಮಂತ್ರಾಧ್ವ. ಇವುಗಳಿಂದಾಗಿ ಮಾಂತ್ರಿಕ ಸಂಸ್ಕಾರ ಶ್ರೇಷ್ಠ.

ಶರಣ ನುಡಿದುದು ಮಂತ್ರಮಯ, ಪ್ರಸಾದಮಯ. ಆತ ಲಿಂಗ ಮೆಚ್ಚುವಂತೆ ನುಡಿಯಬಲ್ಲ. ಆದರಿಂದಾಗಿ ಆತನ ನುಡಿಯಲ್ಲಿ ಶುದ್ಧಸಂಸ್ಕಾರರೂಪ ಗಂಧವಿರುತ್ತದೆ. ಅದನ್ನು ಪ್ರಸಾದಲಿಂಗದೊಳಗಿನ ಆಚಾರಲಿಂಗಕ್ಕೆ ಆನಂದ ಭಕ್ತಿಯೊಳಗಿನ ಶ್ರದ್ಧಾಭಕ್ತಿಯಿಂದ ಶ್ರೋತ್ರಮುಖದೊಳಗಿನ ನಾಸಿಕಮುಖದಲ್ಲಿ ಸುಜ್ಞಾನ ಹಸ್ತದೊಳಗಿನ ಸುಚಿತ್ತ ಹಸ್ತದಿಂದ ಸಮರ್ಪಿಸಬೇಕು. ಆಗ ಶರಣನ ಭಕ್ತಸ್ಥಲ ಸಮನಿಸುತ್ತವೆ.

ಪಂಚೀಕರಣ ಪದ್ಧತಿಯಂತೆ ಶ್ರೋತ್ರದಲ್ಲಿ ಘ್ರಾಣಾಂಶವಿದೆ. ಆ ಘ್ರಾಣಾಂಶದ ಪೂರ್ವಾಶ್ರಯವನ್ನು ಪರಿಹರಿಸಲು ಶಬ್ದದೊಳಗಿನ ಗಂಧಾಂಶವನ್ನು ಪ್ರಸಾದಲಿಂಗದೊಳಗಿನ [illegible]

ಯಿಂದೆ ಕೂಟಸ್ಥವಾದಂಥಾತನೆ ಶರಣನೊಳಗಣ ಪ್ರಾಣಲಿಂಗಿ. ಆ ಶರಣನ ಯೋಗ ಶರಣ. ಆನಂದಭಕ್ತಿಯನುಳ್ಳ ಶರಣನ ವಿಶುದ್ಧಿ ಚಕ್ರದ ಹದಿನಾರೆಸಳ ಕಂಜದಲ್ಲಿರ್ದ ಪ್ರಸಾದಲಿಂಗದೊಳಗಣ ಪ್ರಸಾದಲಿಂಗದಲ್ಲಿ ಆನಂದಭಕ್ತಿಯೊಳಗಣ ಆನಂದಭಕ್ತಿಯಿಂದೆ ಕೂಟಸ್ಥವಾದಂಥಾತನೆ ಶರಣನೊಳಗಣ ಶರಣ. ಆ ಶರಣನ ಯೋಗ ಐಕ್ಯ, ಆನಂದಭಕ್ತಿಯನುಳ್ಳ ಶರಣನ ಆಜ್ಞಾಚಕ್ರದ ಎರಡೆಸಳ ಕಂಜದಲ್ಲಿದ್ದ ಪ್ರಸಾದಲಿಂಗದೊಳಗಣ ಮಹಾಲಿಂಗದಲ್ಲಿ ಆನಂದಭಕ್ತಿಯೊಳಗಣ ಸಮರಸ ಭಕ್ತಿಯಿಂದೆ ಕೂಟಸ್ಥವಾದಂಥಾತನೆ ಶರಣನೊಳಗಣ ಐಕ್ಯನು. ಇನ್ನು ಈ ಪ್ರಕಾರದ ದೆಸೆಯಿಂದೆ ಶರಣನ ಯೋಗಾಂಗಸ್ಥಲವಾರು. ಶರಣನ ಷಡಾಧಾರಚಕ್ರಕಂಜದಲ್ಲಿರ್ಪ ಷಡ್ವಿಧ ಲಿಂಗದಲ್ಲಿ ಷಡ್ವಿಧಾಂಗವನು ಷಡ್ವಿಧಭಕ್ತಿಯಿಂದ ಕೂಟಸ್ಥವಾದಂಥ ಶರಣಸ್ಥಲಂಗಳು ಷಟ್ಪ್ರಕಾರವು.

೧. ಶರಣನ ಭಕ್ತಸ್ಥಲ:

ಯೋಗಾಂಗಕ್ಕೆ ಎರಡೆಸೆಳು. ಒಂದು ಶರಣಾಂಗ; ಇನ್ನೊಂದು ಐಕ್ಯಾಂಗ ಇದೀಗ ಶರಣಾಂಗ ವಿಚಾರ. ಈತನಿಗೆ ಆಕಾಶಾಂಗವೇ ಮುಖ್ಯ. ಉಳಿದವುಗಳು ಗೌಣಾಂಗವಾಗಿರುವವು. ಆಕಾಶದೊಳಗೆ ಪೃಥ್ವ್ಯಂಶವಿದೆ. ಅಂತೆಯೇ ಶಬ್ದ ಪದಾರ್ಥದಲ್ಲಿ ಗಂಧಪದಾರ್ಥ ಗೌಣವಾಗಿರುತ್ತದೆ. ಇಲ್ಲಿ ಗಂಧವೆಂದರೆ ಶಬ್ದಸಂಸ್ಕಾರ; ಅಥವಾ ಶಾಬ್ದಿಕ ವಾಸನೆ.

ಶಬ್ದಸಂಸ್ಕಾರ ತ್ರಿವಿದ : ಲೌಕಿಕ ತಾಂತ್ರಿಕ ಮಾಂತ್ರಿಕವೆಂದು. ಲೌಕಿಕ ಶಬ್ದ ಸಂಸ್ಕಾರ ಶುದ್ಧಾಶುದ್ಧ ಭೇದದಿಂದ ದ್ವಿವಿಧ. ತಾಂತ್ರಿಕವೇ ಗುರುದೇವನ ಮುಖಾಂತರ ಬಂದು ಮಾಂತ್ರಿಕವಾಗುತ್ತದೆ. ಲೌಕಿಕ ವರ್ಣಾಧ್ವ, ತಾಂತ್ರಿಕ ಪದಾಧ್ವ. ಮಾಂತ್ರಿಕ ಮಂತ್ರಾಧ್ವ. ಇವುಗಳಿಂದಾಗಿ ಮಾಂತ್ರಿಕ ಸಂಸ್ಕಾರ ಶ್ರೇಷ್ಠ.

ಶರಣ ನುಡಿದುದು ಮಂತ್ರಮಯ, ಪ್ರಸಾದಮಯ. ಆತ ಲಿಂಗ ಮೆಚ್ಚುವಂತೆ ನುಡಿಯಬಲ್ಲ. ಆದರಿಂದಾಗಿ ಆತನ ನುಡಿಯಲ್ಲಿ ಶುದ್ಧಸಂಸ್ಕಾರರೂಪ ಗಂಧವಿರುತ್ತದೆ. ಅದನ್ನು ಪ್ರಸಾದಲಿಂಗದೊಳಗಿನ ಆಚಾರಲಿಂಗಕ್ಕೆ ಆನಂದ ಭಕ್ತಿಯೊಳಗಿನ ಶ್ರದ್ಧಾಭಕ್ತಿಯಿಂದ ಶೋತ್ರಮುಖದೊಳಗಿನ ನಾಸಿಕಮುಖದಲ್ಲಿ ಸುಜ್ಞಾನ ಹಸ್ತದೊಳಗಿನ ಸುಚಿತ್ತ ಹಸ್ತದಿಂದ ಸಮರ್ಪಿಸಬೇಕು. ಆಗ ಶರಣನ ಭಕ್ತಸ್ಥಲ ಸಮನಿಸುತ್ತವೆ.

ಪಂಚೀಕರಣ ಪದ್ಧತಿಯಂತೆ ಶ್ರೋತ್ರದಲ್ಲಿ ಘ್ರಾಣಾಂಶವಿದೆ. ಆ ಘ್ರಾಣಾಂಶದ ಪೂರ್ವಾಶ್ರಯವನ್ನು ಪರಿಹರಿಸಲು ಶಬ್ದದೊಳಗಿನ ಗಂಧಾಂಶವನ್ನು ಪ್ರಸಾದಲಿಂಗದೊಳಗಿನ ಆಚಾರಲಿಂಗಕ್ಕೆ ಅರ್ಪಿಸಬೇಕು.

ಶರಣನದು ಆಕಾಶಾಂಗ. ಆಕಾಶಾಂಗದಲ್ಲಿ ಗೌಣವಾಗಿ ಪೃಥ್ವ್ಯಂಗವಿದೆ. ಇದರ ಪೂರ್ವಾಶ್ರಯ ದೋಷವೂ ಪರಿಹಾರವಾಗಬೇಕು ಇದಕ್ಕಾಗಿ ಮೇಲಿನಂತೆ ಆಚರಿಸಬೇಕು. ಆಕಾಶದ ಪೂರ್ವಾಶ್ರಯವನ್ನು ಪರಿಹರಿಸುವಾಗ ಶರಣನೆನಿಸುತ್ತಾನೆ, ಆ ಆಕಾಶದೊಳಗಿನ ಪೃಥ್ವ್ಯಂಶದ ಪೂರ್ವಾಶ್ರಯವನ್ನು ಪರಿಹರಿಸುವಾಗ ಶರಣನ ಭಕ್ತನೆನಿಸುತ್ತಾನೆ.

ವಿಶುದ್ಧಿಗೆ ಮೂಲ ಆಧಾರ. ಆಧಾರ ಸುರಲತೆಗೆ ಫಲ ವಿಶುದ್ಧಿ. ಇವೆರಡಕ್ಕೂ ಈ ಬಗೆಯಲ್ಲಿ ಅನ್ಯೋನ್ಯತೆಯಿದೆ. ಪರಾಶಕ್ತಿಗೆ ಕ್ರಿಯಾಶಕ್ತಿ ಮಗಳು. ಕ್ರಿಯಾಶಕ್ತಿಗೆ ಪರಾಶಕ್ತಿ ಮಾತೆ. ಸುಜ್ಞಾನ ಪ್ರಾಪ್ತಿಗೆ ಸುಚಿತ್ತದ ನೆರವು ಬೇಕು. ಅಂತೆಯೇ ಆನಂದಕ್ಕೆ ಶ್ರದ್ಧೆಯಿದ್ದಾಗಬೇಕು. ಇವೆಲ್ಲ ಕಾರಣಗಳಿಂದಾಗಿ ಶರಣನ ಭಕ್ತಸ್ಥಲ ಸಿದ್ಧವಾಗುತ್ತದೆ.

ಪ್ರಸನ್ನ ಚೇತನ ಅಳವಡಬೇಕಾದರೆ ಆಚಾರ ಚೇತನ ಅವಶ್ಯಕ.
ಶರಣಾಂಗಕ್ಕೆ ಭಕ್ತಾಂಗವೇ ಆಶ್ರಯ;
ಭಕ್ತಾಂಗಕ್ಕೆ ಆಚಾರವೇ ಆಶ್ರಯ,
ಆಚಾರಕ್ಕೆ ಸುಸಂಸ್ಕಾರವೇ ಆಶ್ರಯ.
ಸುಸಂಸ್ಕಾರಕ್ಕೆ ಸುಶಬ್ದಪ್ರಸಾದವೆ ಆಶ್ರಯ.
ಸುಶಬ್ದ ಪ್ರಸಾದಕ್ಕೆ ಶಿವಸಾದಾಖ್ಯಸ್ವರೂಪ
ಪ್ರಸಾದಲಿಂಗವೇ ಆಶ್ರಯ. ಇಂತಿವನು
ಅರಿದು ಆನಂದದಿಂದೆ ಆಚರಿಸಬಲ್ಲಾತನೇ
ಶರಣನ ಭಕ್ತ ನೋಡಾ,
ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರ."

ಶರಣ ಭಕ್ತನು ಆಚಾರಯುಕ್ತ ಆನಂದದಲ್ಲಿ ಶ್ರದ್ಧಾನ್ವಿತನಾಗಿರಬೇಕು. ಆಚಾರ ರಹಿತ ಆನಂದದಲ್ಲಿ ಆಸಕ್ತಿಯಿರಬಾರದು. ಆನಂದಾಸ್ವಾದನೆಯಲ್ಲಿ ಸುಸಂಸ್ಕಾರ ಸದ್ವಾಸನೆಗಳಿರಬೇಕು. ಅಂತಹ ಆನಂದಸ್ಫುರಣದಿಂದ ಪ್ರಸನ್ನಭಾವ ಪ್ರಾಪ್ತವಾಗುತ್ತದೆ. ಆ ಪ್ರಸನ್ನಭಾವದಿಂದ ಭಾವಪೂರ್ಣ ಶಿವಸಾಹಿತ್ಯ ಸೃಷ್ಟಿಯಾಗುತ್ತದೆ.

೨. ಶರಣನ ಮಾಹೇಶ್ವರ ಸ್ಥಲ :

ಶರಣನ ಆಕಾಶಾಂಗದಲ್ಲಿ ಜಲಾಂಗವೂ ಇದೆ. ಗೌಣವಾಗಿದೆ. ಅಂತೆಯೆ ಶರಣನ ಕರ್ಣಮುಖದಲ್ಲಿ ಜಿಹ್ವಾಂಶವೂ ಇದೆ. ಪ್ರಸಾದಲಿಂಗದಲ್ಲಿ ಗುರುಲಿಂಗ ಗರ್ಭೀಕರಿಸಿಕೊಂಡಿದೆ. ಸುಶಬ್ದಪ್ರಸಾದದಲ್ಲಿ ಸುರಸ ಪ್ರಸಾದವಿದೆ. ಅದರಿಂದ ಆನಂದನಿಷ್ಠೆ ಅವಸರ. ಪರಾವಾಕ್‌ಶಕ್ತಿವಿಡಿದು ಜ್ಞಾನಶಕ್ತಿ, ಸುಜ್ಞಾನವಿಡಿದು ಸುಬುದ್ಧಿ ಉಂಟಾಗುವವು. ಇದರಿಂದ ಶರಣ ಮಾಹೇಶ್ವರತ್ವ ಸಮನಿಸುವುದು.

ಪ್ರಸಾದಲಿಂಗದೊಳಗಿನ ಗುರುಲಿಂಗೋಪಾಸನೆಯಿಂದ ಯೋಗಾಂಗದಲ್ಲಿರುವ ಶರಣನು ತ್ಯಾಗಾಂಗ ಮಾಹೇಶ್ವರನಾದಂತೆ ಶರಣಾಂಗ ಮಾಹೇಶ್ವರನಾಗುತ್ತಾನೆ. ಶಬ್ದದಲ್ಲಿ ರಸವಿದೆ. ಆ ರಸವನ್ನು ಗ್ರಹಿಸಲು ಶ್ರೋತ್ರದಲ್ಲಿ ರಸನ ಶಕ್ತಿಯೂ ಇದೆ. ಸುಶಬ್ದ ಪ್ರಸಾದನಿಷ್ಠ ಸುರಪ್ರಸಾದವನ್ನು ಕರ್ಣಾಂಗದೊಳಗಿನ ಜಿಹ್ವೋಪಾಂಗನು ಸುಜ್ಞಾನದೊಳಗಿನ ಸುಬುದ್ಧಿ ಹಸ್ತದಿಂದ ಆನಂದಯುಕ್ತ ನಿಷ್ಠಾಭಕ್ತಿಯಿಂದ ಪ್ರಸಾದಲಿಂಗದೊಳಗಿನ ಗುರುಲಿಂಗಕ್ಕೆ ಸಲ್ಲಿಸುತ್ತಾನೆ. ಇದರಿಂದಾಗಿ ರಸನಾಂಶದಿಂದೊಡಗೂಡಿದ ಶ್ರೋತ್ರ ಶರಣನ ಮಾಹೇಶ್ವರನೆನಿಸುತ್ತದೆ.

ಪರಾಶಕ್ತಿಯಿಂದ ನಾದೋತ್ಪತ್ತಿಯಾದಂತೆ ಬಿಂದೂತ್ಪತ್ತಿಯೂ ಆಗುತ್ತದೆ. ನಾದಾತ್ಮಕ ಶಬ್ದ ರಸಾತ್ಮಕವಾಗಿವೆ. ರಸಾತ್ಮಕ ಶಬ್ದ ಅಥವಾ ಸಾಹಿತ್ಯ ಗುರುಲಿಂಗಜನ್ಯ. ಇದರಿಂದಾಗಿ ಶರಣನು ಮಾಹೇಶ್ವರನಾಗದೆ ಶಬ್ದರಸರುಚಿಗಳನ್ನು ಅನುಭವಿಸನು ; ಅನುಭವಿಸಿ ಆನಂದಿಸನು.

"ಶರಣಾಂಗನಿಪ್ಪನು ಮಾಹೇಶ್ವರಾಂಗನಾಶ್ರಯದೊಳಗೆ !
ಶ್ರೋತ್ರ ಮುಖವಿಪ್ಪುದು ಜಿಹ್ವಾಮುಖದಾಶ್ರಯದೊಳಗೆ!
ಆನಂದ ಭಕ್ತಿಯಿಪ್ಪುದು ನಿಷ್ಠಾ ಭಕ್ತಿಯಾಶ್ರಯದೊಳಗೆ!

ಸುಜ್ಞಾನ ಹಸ್ತವಿಪ್ಪುದು ಸುಬುದ್ಧಿ ಹಸ್ತದಾಶ್ರಯದೊಳಗೆ !
ಸುಶಬ್ದ ಪ್ರಸಾದವಿಪ್ಪುದು ಸುರಸ ಪ್ರಸಾದದಾಶ್ರಯದೊಳಗೆ !
ಈ ಎಲ್ಲ ಉಭಯಂಗಳಲ್ಲಿ ನಿಷ್ಠೆ ಕರಿಗೊಂಡಿಪ್ಪುದ
ಶರಣನ ಮಾಹೇಶ್ವರಸ್ಥಲ ನೋಡಾ,
ಶ್ರೀ ನೀಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರ !”

“ಜೀವನಬುದ್ಧಿ ಪರಮನಬುದ್ಧಿಯಿರಬೇಕೆಂದೆಂಬರು ; ಇದು ಶಿವಶರಣರ ಗುಣವೆ, ಲೋಕದ ಅಜ್ಞಾನಿಗಳ ಗುಣವಲ್ಲದೆ ! ಎರಡು ಚಿತ್ತವುಳ್ಳವ ಭಕ್ತನೇ ? ಎರಡು ಬುದ್ಧಿಯುಳ್ಳವ ಮಾಹೇಶ್ವರನೆ ? ಎರಡಹಂಕಾರವುಳ್ಳವ ಪ್ರಸಾದಿಯೆ? ಎರಡು ಮನವುಳ್ಳವ ಪ್ರಾಣಲಿಂಗಿಯೇ ? ಎರಡರು ಹುಳ್ಳವ ಶರಣನೇ ? ಎರಡು ಭಾವವುಳ್ಳವ ಲಿಂಗೈಕ್ಯನೆ ? ಎರಡೆಂಬ ಜೀವಭಾವನುಳಿದು ಶಿವಭಾವ ಸಂಪನ್ನನಾದ ಏಕೋಭಾವಿ ನಿಮ್ಮ ಮಾಹೇಶ್ವರನು, ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ !”

ನಾಲಗೆಯ ಕೊನೆಯಲ್ಲಿ ನಂಜಿನ ಸೋನೆ ಸುರಿವನ್ನಕ್ಕರ
ಬಾರದುದ ಬಯಸುತ್ತಿಪ್ಪುದು ನೋಡಾ.
ನಾಲಗೆಯ ನಂಜ ಕೆಡಿಸಿ, ಅಮೃತವ ಸವಿಯಬಲ್ಲರಾಗಿ
ನಿಮ್ಮ ಶರಣರು ಅನುಪಮ ಸುಖಿಗಳಯ್ಯಾ,
ಮಹಾಲಿಂಗಗುರುಶಿವಸಿದ್ಧೇಶ್ವರ ಪ್ರಭುವೇ.”

೩. ಶರಣ ಪ್ರಸಾದಿಸ್ಥಲ:

ಗಗನಾಂಗದಲ್ಲಿ ತೇಜಾಂಗಕ್ಕೆ ತಾವಿದೆ. ಕಿವಿಯಲ್ಲಿ ಕಣ್ಣಿದೆ. ಶಬ್ದ ಜನ್ಯ ರೂಪವನ್ನು ಕಣ್ಣು ಕಾಣಿಸುತ್ತದೆ. ಕಣ್ಣಿಲ್ಲದಿದ್ದರೂ ವರ್ಣನೆಯಿಂದ ರೂಪಪರಿಜ್ಞಾನವಾಗುತ್ತದೆ. ಶ್ರೋತ್ರಗತ ನೇತ್ರಾಂಶದಲ್ಲಿ ಶಿವಲಿಂಗವಿದೆ. ಅದು ಪ್ರಸಾದ ಲಿಂಗಾಂತರ್ಗತವಾಗಿದೆ. ಅದಕ್ಕೆ ಶಬ್ದದೊಳಗಿನ ರೂಪ ಪದಾರ್ಥವನ್ನು ಸುಜ್ಞಾನದೊಳಗಿನ ಸುಬುದ್ಧಿಯಿಂದ ಸಮರ್ಪಿಸಿ ಶರಣ ಪ್ರಸಾದಿಯಾಗುತ್ತಾನೆ. ಆನಂದದೊಳಗಿನ ಅವಧಾನದಿಂದ ಅರಿಯುತ್ತಾನೆ. ಶಾಂತ್ಯತೀತ ಕಲೆಯೊಳಗಿನ ವಿದ್ಯಾಕಲೆಯನ್ನು ವಿಶುದ್ಧಿ ಅನಾಹತಗಳ ಸಂಬಂಧದಲ್ಲಿ ಸವಿಯುತ್ತಾನೆ; ಸೊಗಸುತ್ತಾನೆ.

ಶರಣನು ಸುಶಬ್ದ ಪ್ರಸಾದವನ್ನು ಶ್ರೋತ್ರಮುಖಕ್ಕೆ ಸೋಂಕಿಸಿಗೊಂಡಾಗ ಅದರೊಳಗಿನ ಸುರೂಪದ ಅನುಭವದಲ್ಲಿ ಅವಧಾನವನ್ನು ತಾಳುವುದೇ ಶರಣನ ಪ್ರಸಾದಿತ್ವ. ಆ ಸುಶಬ್ದದೊಳಗಿನ ಸುರೂಪಾವಧಾನದಿಂದ ಒಳಗಿರುವ ತಿಳಿಗಣ್ಣಿಗೆ ಚಿತ್ಕಳೆ–ಚಿತ್ಪರಿಣಾಮಗಳುಂಟಾಗುತ್ತವೆ. ಆ ಚಿತ್ಕಳೆಯಲ್ಲಿ ಆ ಸತ್ಯ ಶಿವ ಸೌಂದರ್ಯದ ಸಂದರ್ಶನವಾಗಿ ಅಲ್ಲಿರುವ ಆತ್ಮನಿಗೆ ಪರಮಾತ್ಮತ್ವ ಪ್ರಾಪ್ತವಾಗುತ್ತದೆ; ಶರಣನಿಗೆ ಶಿವಸ್ವರೂಪವುಂಟಾಗುತ್ತದೆ. ಅದರಿಂದ ಶರಣನ ವಾಕ್ಕು ಪರಿಪಕ್ವವಾಗಿ ಶಿವವಾಗುತ್ತದೆ. ಶರಣಪ್ರಸಾದಿ ನುಡಿದದ್ದೆಲ್ಲ ಮಂತ್ರವಾಗುತ್ತದೆ; ಪ್ರಾಸಾದಿಕತೆಯನ್ನು ಪಡೆಯುತ್ತದೆ.

ಶ್ರೋತ್ರೇಂದ್ರಿಯ ವಿಕಾರವಳಿಯಬೇಕಾದರೆ ವಾಕ್ ಶುದ್ಧವಾಗಬೇಕು. ಶಬ್ದಗತವಿಕಾರವಳಿಯಬೇಕು. ಕಂಡ ಕಂಡ ಅಶಿವ ಸಾಹಿತ್ಯವನ್ನು ಓದಬಾರದು; ಕೇಳಬಾರದು.

ಶಬ್ದ ಶ್ರವಣದಲ್ಲಿ ಶಿವತ್ವವುಂಟಾಗಬೇಕು ; ಸಾಹಿತ್ಯದಲ್ಲಿ ಕಾವ್ಯದಲ್ಲಿ ಶಿವಭಾವ ತುಂಬಿರಬೇಕು.

ಶಬ್ದ ಚಿತ್ರದಲ್ಲಿ ಶಿವಸೌಂದರ್ಯವನ್ನು ಮನಗಾಣುವವನೇ ಶರಣಪ್ರಸಾದಿ. ಭಾವಪೂರ್ಣ ಸತ್ಯಶಬ್ದ ಚಿತ್ರವೇ ಸುಂದರ. ಅದರ ಪರಿಣಾಮವೇ ಜೀವನ ಮಂದಾರ. ಶಿವಸಾಹಿತ್ಯಚಿತ್ರಣದಲ್ಲಿ ತುಂಬಾ ಎಚ್ಚರಿಕೆಯನ್ನು ತಳೆದವನೆ ಶರಣಪ್ರಸಾದಿ,

ಶರಣಾಂಗದಲ್ಲಿನ ಪ್ರಸಾದ್ಯಂಗನೆ ಭೂಮಿಕೆ.
ಆನಂದದಲ್ಲಿನ ಅವಧಾನವೆ ಅಚ್ಚ ಭಕ್ತಿ
ಪರಾಶಕ್ತಿಯಲ್ಲಿನ ಇಚ್ಛೆಯೇ ಆಕರ್ಷಕ ಶಕ್ತಿ.
ಸುಜ್ಞಾನದಲ್ಲಿನ ನಿರಹಂಕಾರವೆ ಅಭಯ ಹಸ್ತ,
ಶ್ರೋತ್ರದಲ್ಲಿನ ನೇತ್ರವೇ ಆರೋಗಣೆಯ ಮುಖ.
ಶಬ್ದದಲ್ಲಿನ ರೂಪವೇ ಆದರ್ಶನೀಯ ಪದಾರ್ಥ :
ಸುಶಬ್ದದಲ್ಲಿನ ಸುರೂಪವೇ ಪರಮಪ್ರಸಾದ.
ಪ್ರಸಾದಲಿಂಗದಲ್ಲಿನ ಶಿವಲಿಂಗವೆ ಚಲುವ ಚೈತನ್ಯ.
ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರ,
ಇದನರಿತ ಅವಧಾನಿಯೆ ನಿಜಶರಣ ಪ್ರಸಾದಿ."

"ಎಂಟೆಸಳ ಮಂಟಪದಲ್ಲಿ ರವಿ ಶಶಿ ಶಿಖಿಯ ಪೀಠದಲ್ಲಿ, ಶಶಿವದನೆ ವಿಶ್ವತೋಮುಖವಾಗಿದ್ದಾಳೆ ನೋಡಾ ! ಶಶಿಮುಖಿಯ ಸಂಗದಿಂದ ಪಶುಪತಿಯು ನೆರೆದು, ವಿಶ್ವತೋಮುಖ ಪ್ರಸಾದಿಯಾಗಿರ್ದನು ಕಾಣಾ, ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೆ !" ಈ ವಚನದಲ್ಲಿ ಶರಣನ ಪ್ರಸಾದಿಯ ಲಕ್ಷಣ ಸುಂದರವಾಗಿ ನಿರೂಪಿತವಾಗಿದೆ. ಶಶಿವದನೆ ಶರಣಸತಿ, ಅವಳ ವಿಶಾಲ ಮನೋಭಾವ, ಅವಳ ವಿಶ್ವನಾಥನ ಸಂಗ, ಅವಳ ವಿಶುದ್ಧವೂ ವಿಶಿಷ್ಟವೂ ಆದ ಪರಿಣಾಮ ಇಲ್ಲಿ ಚಲುವಾಗಿ ಚಿತ್ರಿತವಾಗಿವೆ.

೪. ಶರಣನ ಪ್ರಾಣಲಿಂಗಿ ಸ್ಥಲ:

ಶರಣನ ಆಕಾಶಾಂಗದಲ್ಲಿ ಮಾರುತಾಂಗವಿದೆ. ಕಿವಿಯಲ್ಲಿ ತೊವಳಿದೆ. ಶಬ್ದದಲ್ಲಿ ಸ್ಪರ್ಶಗುಣವಿದೆ. ಕರ್ಣಗತ ಚರ್ಮದಲ್ಲಿ ಜಂಗಮಲಿಂಗವಿದೆಯಾದರೂ ಅದು ಪ್ರಸಾದಲಿಂಗ ಗರ್ಭದಲ್ಲಿದೆ. ಆ ಪ್ರಸಾದಲಿಂಗದೊಳಗಿನ ಜಂಗಮ ಲಿಂಗಕ್ಕೆ ಶರಣನೊಳಗಿನ ಪ್ರಾಣಲಿಂಗಿಯು ಆನಂದಭಕ್ತಿಯೊಳಗಿನ 'ಅನುಭವಭಕ್ತಿ ಯಿಂದ ಕರ್ಣಮುಖದೊಳಗಿನ ಚರ್ಮಮುಖದಲ್ಲಿ ಜ್ಞಾನಹಸ್ತದೊಳಗಿನ ಮನ ಹಸ್ತದಿಂದ ಶಬ್ದ ಪದಾರ್ಥದೊಳಗಿನ ಸ್ಪರ್ಶ ಪದಾರ್ಥವನ್ನು ಸಲ್ಲಿಸುತ್ತಾನೆ. ಶಬ್ದ ಸ್ಪರ್ಶ ಪ್ರಸಾದವನ್ನು ಪಡೆದು ಶರಣ ಪ್ರಾಣಲಿಂಗಿಯೆನಿಸುತ್ತಾನೆ.

ಸರ್ವಾಂಗ ವ್ಯಾಪ್ತವಾದ ತ್ವಕ್ ಶ್ರವಣಾಂಗದಲ್ಲಿಯೂ ಇರುವ ಕಾರಣ ಕರ್ಣಾವಚ್ಛಿನ್ನ ಚೈತನ್ಯವಾದ ಪ್ರಸಾದಲಿಂಗದಲ್ಲಿ ಚರ್ಮಾವಚ್ಛಿನ್ನ ಜಂಗಮಲಿಂಗ ವಿರುವುದು ಸಹಜ ಸಮನ್ವಯ. ಅಂತೆಯೇ ಶಬ್ದಸ್ಪರ್ಶ ಸಾಧ್ಯ; ಇದರಿಂದ ಶಬ್ದ ಸಂವೇದ್ಯ. ಅಲ್ಲದೆ ಆನಂದಾನುಭೂತಿಗೆ ಅವಕಾಶವಾಗುತ್ತದೆ. ಶಬ್ದ ಸ್ಪರ್ಶಾನುಭವದಿಂದ ಶಬ್ದಾನಂದ ಸಂಭವಿಸುತ್ತದೆ. ಮನಕ್ಕೆ ಶಬ್ದಾರ್ಥಭಾವ ರಸಗಳ ಸಂವೇದನವಾಗುತ್ತದೆ, ಇವುಗಳ ಜ್ಞಾನದಿಂದ ಮನ ವಸ್ತುನಿಷ್ಠವಾಗಿ ವಸ್ತುವಿನ ಸಾಕ್ಷಾತ್ಕಾರವಾಗುತ್ತದೆ. ಶಿವಸ್ವರೂಪವುಂಟಾಗುತ್ತದೆ. ಆಗ ಶರಣನ ತ್ವಕ್ ತನ್ನ ಪೂರ್ವಾಶ್ರಯವನ್ನು ನಿರಸನಗೊಳಿಸಿಕೊಳ್ಳುತ್ತದೆ. ಶರಣ ಸೋಂಕಿದುದೆಲ್ಲ ಶುದ್ಧವಾಗುತ್ತದೆ. ಕೇಳಿದ್ದೆಲ್ಲ ಪಾವನವಾಗಿ ಪರಿಣಮಿಸುತ್ತದೆ.

ಆಕಾಶದಿಂದ ವಾಯುವಿನ ಉತ್ಪತ್ತಿ. ಶ್ರವಣೇಂದ್ರಿಯು ಪರಿಣಾಮ ತ್ವಗಿಂದ್ರಿಯ. ಕಾರಣ ಸ್ಪರ್ಶದ ಮೂಲ ಸೂಕ್ಷ್ಮಶಬ್ದ. ಸ್ಪರ್ಶಜನ್ಯ ಸ್ಥೂಲ ಶಬ್ದ. ಶಬ್ದದಲ್ಲಿ ಸ್ಪರ್ಶಶಕ್ತಿಯಿದ್ದೇ ಇರುತ್ತದೆ, ಶಬ್ದಜನ್ಯ ಸ್ಪರ್ಶಾನುಭೂತಿ ಯಲ್ಲಿ ಶರಣನ ಪ್ರಾಣಲಿಂಗವು ಪಾತ್ರವಿರುತ್ತದೆ. ಅಂತೆಯೇ ಸ್ಪರ್ಶಜನ್ಯ

ಶಬ್ದಾನಂದದಲ್ಲಿ ಪ್ರಾಣಲಿಂಗಿಯೆ ಶರಣನ ಪಾತ್ರವಿರುತ್ತದೆ. ಶಬ್ದಸ್ಪರ್ಶದಲ್ಲಿ ಆನಂದಾನುಭವದಲ್ಲಿ ನಿಜದ ನಿಲುಕಣೆಯುಳ್ಳವನೆ ಶರಣನ ಪ್ರಾಣಲಿಂಗಿ.

ಶರಣಾಂಗದಲ್ಲಿ ಪ್ರಾಣಲಿಂಗ್ಯಂಗನಿಲ್ಲದೆ
ಆನಂದದನುಭವವಿಲ್ಲ ನೋಡಾ.
ಅನುಭವವಿಲ್ಲದೆ ಆನಂದದಾದಿಯಿಲ್ಲ ನೋಡಾ.
ಆನಂವದಾದಿಯಿಲ್ಲದೆ ಸುಜ್ಞಾನದಲ್ಲಿ ಮನವಿರದು ನೋಡಾ.
ಸುಶಬ್ದವನು ಶ್ರೋತ್ರವಾಲಿಸದು ನೋಡಾ.
ಆಲಿಸದಿರ್ದಡೆ ಶಬ್ದಸ್ಪರ್ಶವೆಲ್ಲಿಯದು ಹೇಳಾ ?
ಶಬ್ದಸ್ಪರ್ಶವಿಲ್ಲದೆ ಪ್ರಸಾದಲಿಂಗದೊಳಗಣ
ಜಂಗಮಲಿಂಗ ಚೈತನ್ಯ ಜಾಗ್ರತವಾಗದಯ್ಯಾ !
ಜಾಗ್ರತವಾಗದ ಬಳಿಕ ಶಾಂತತೆ ಸಮನಿಸದಯ್ಯಾ !
ಇದು ಕಾರಣ, ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯ
ಸಿಂಹಾಸನಾಧೀಶನಲ್ಲಿ ಶರಣನ ಪ್ರಾಣಲಿಂಗಿಯಾಗದೆ
ಬೇರೆ ಹೊಲಬಿಲ್ಲ ನೋಡಾ !

೫. ಶರಣನ ಶರಣ ಸ್ಥಲ:

ಆಕಾಶಾತ್ಮಗಳೆರಡರಿಂದ ಕೂಡಿದುದು ಯೋಗಾಂಗ. ಯೋಗಾಂಗದ ಆಕಾಶತತ್ತ್ವವೆ ಶರಣ. ಆಕಾಶ ತತ್ತ್ವದಿಂದಾದ ಶ್ರೋತ್ರಾಂಗವೇ ಶರಣನ ಶರಣ, ಪ್ರಸಾದಲಿಂಗಾರಾಧಕನು ಶರಣ. ಪ್ರಸಾದಲಿಂಗದೊಳಗಿನ ಪ್ರಸಾದ ಲಿಂಗಾರಾಧಕನು ಶರಣನ ಶರಣ, ಪದಾರ್ಥನಿಷ್ಠ ಶಬ್ದವನ್ನು ಶರಣಾಂಗ ಗ್ರಹಿಸುತ್ತಾನೆ.

ಶ್ರೋತ್ರ, ಶ್ರೋತ್ರತ್ವ ಎಂದು ಎರಡು ಬಗೆ. ಶ್ರೋತ್ರಾಂಗದೊಳಗಿನ ಶ್ರೋತ್ರಾಂಗಕ್ಕೆ ಶ್ರೋತ್ರತ್ವವೆಂದು ಹೆಸರು. ಶ್ರೋತ್ರ ಶಬ್ದವನ್ನು ಗ್ರಹಿಸಿದರೆ ಶ್ರೋತ್ರತ್ವವು ಶಬ್ದತ್ವವನ್ನು ಗ್ರಹಿಸುತ್ತದೆ. ಶ್ರೋತ್ರತ್ವ ಶರಣನ ಶರಣ. ಶರಣ ಸ್ಥೂಲವನ್ನು ಶರಣನ ಶರಣ ಸೂಕ್ಷ್ಮವನ್ನು ಶರಣನ ಶರಣನ ಶರಣ ಕಾರಣವನ್ನು ಗ್ರಹಿಸುತ್ತಾರೆ.

ವಿಶುದ್ಧಚಕ್ರದಲ್ಲಿ ಸದಾಶಿವನರ್ಚಕನಿದ್ದಾನೆ. ಆತನು ಶರಣನ ಶರಣನೆನಿಸುತ್ತಾನೆ, ಆತನು ಅಸಬ್ದನಾದವನ್ನು ಗ್ರಹಿಸುತ್ತಾನೆ. ಅಂದರೆ ಶಬ್ದ ಮುಗ್ಧನಾದವನ್ನು ಗ್ರಹಿಸುತ್ತಾನೆ, ಅದನ್ನು ಮೌನಬೋಧವೆಂದು ಅನಾಹತನಾದವೆಂದು ಹೇಳುತ್ತಾರೆ.

ಆಕಾಶಾಂಗ ಶರಣನು ಉತ್ಪಾದಕನೆನಿಸಿದರೆ ಶ್ರೋತ್ರಾಂಗ ಶರಣನು ಗ್ರಾಹಕನೆನಿಸುತ್ತಾನೆ; ವಿಶುದ್ಧ್ಯಂಗನು ಧಾರಕನೆನಿಸುತ್ತಾನೆ.

ಪ್ರಸಾದಲಿಂಗ ಪೂರ್ಣ ಚೇತನ ಮತ್ತು ಆನಂದ ಚೇತನಗಳ ಸಂಕೇತ. ತುರೀಯಾತೀತವಾದ ತಿರೋಧಾನ ಸ್ವರೂಪ. ಶಾಂತ್ಯತೀತಕಳೆಯಿಂದ ಪರಿಪೂರ್ಣ ಲಕ್ಷಣದಿಂದ ಲಕ್ಷಿತವಾಗಿದೆ. ಆಕಾಶಕ್ಕೆ ಆಕಾಶವಾಗಿದೆ. ಆದರಿಂದಾಗಿ

ಪ್ರಸಾದಲಿಂಗದೊಳಗಿನ ಪ್ರಸಾದಲಿಂಗ ಸಿದ್ಧವಾಗಿ ಶರಣನೊಳಗಿನ ಶರಣನೂ ಸಿದ್ಧನಾಗುತ್ತಾನೆ.

ಕರ್ಣ ಜ್ಞಾನ ಮುಖ ಮಾತು ಇವು ಆಕಾಶ ತತ್ತ್ವದ ಮುಖ್ಯಾಂಗವಾಗಿವೆ. ಇವುಗಳಲ್ಲಿ ಶಬ್ದ ಗ್ರಹಣ-ಧಾರಣ-ತ್ಯಜನ ಕ್ರಿಯಾನ್ವಿತವಾಗುತ್ತದೆ.

"ಆಕಾಶಾಂಗಕ್ಕೆ ಶಬ್ದವೆ ಸಂಪತ್ತು.
ಶಬ್ದಕ್ಕೆ ಶ್ರೋತ್ರಾಂಗವೆ ಸಂಪತ್ತು.
ಶ್ರೋತ್ರಾಂಗಕ್ಕೆ ವಿಶುದ್ಧಿಚಕ್ರವೆ ಸಂಪತ್ತು.
ವಿಶುದ್ಧಿ ಚಕ್ರಕ್ಕೆ ಪ್ರಸಾದ ಲಿಂಗವೇ ಸಂಪತ್ತು.
ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರ."

"ಉರಿಯ ಗಗನದೊಳಗೆ ಶರೀರವಿಲ್ಲದ ತರುಣಿ ಉದಯವಾಗಿ ಉರಿಯ ಮಣಿಯ ಪವಣಿಗೆಯ ಮಾಡುವುದ ಕಂಡೆನಯ್ಯಾ. ಉರಿಯನುಂಡು ಶರೀರವಿಲ್ಲದಾಕೆಯು ನೆರೆದು ಪರಮಾಮೃತವ ಸೇವಿಸಿ ಪರಮ ಪರಿಣಾಮದೊಳಗೋಲಾಡಿದೆನಯ್ಯಾ. ಮಹಾಲಿಂಗ ಗುರುಶಿವಸಿದ್ಧೇಶ್ವರ ಪ್ರಭುವೆ"

೬. ಶರಣನ ಐಕ್ಯಸ್ಥಲ :

ಶರಣಾಂಗನ ವಿಶುದ್ಧಿ ಚಕ್ರಸ್ಥಾನದಲ್ಲಿ ಆತ್ಮತತ್ತ್ವವಿರುತ್ತದೆ. ಅದೇ ಪ್ರಸಾದಲಿಂಗದ ಮಹಾಗಂಲಿವೆನಿಸುತ್ತದೆ. ಅಲ್ಲಿ ತೃಪ್ತಿ ಪದಾರ್ಥವಿದೆ. ಆ ತೃಪ್ತಿಯು ಶಬ್ದ ಪದಾರ್ಥಕ್ಕೆ ಸಂಬಂಧವುಳ್ಳದು, ಭಾವದಲ್ಲಿ ತೃಪ್ತಿಯ ತೃಪ್ತಿಯಿರುತ್ತದೆ. ಅದನ್ನು ಪ್ರಸಾದಲಿಂಗದೊಳಗಿನ ಮಹಾಲಿಂಗಕ್ಕೆ ಆನಂದದೊಳಗಿನ ಸಮರಸ ಭಕ್ತಿಯಿಂದ ಅರ್ಪಿಸಿ ಅದನ್ನು ಸುತೃಪ್ತಿ ಪ್ರಸಾದವನ್ನಾಗಿಸಿಕೊಂಡು ಅದರಲ್ಲಿ ಪರಿಣಮಿಸಿ ಶಾಂತ್ಯತೀತೋತ್ತರ ಕಲೆಯಲ್ಲಿ ಪರವಶನಾತ ಆ ಪ್ರಸಾದ ಲಿಂಗದ ಮಹಾಲಿಂಗದಲ್ಲಿ ಅಂತರ್ಭಾವಗೊಂಡು ಅಂತಃಕರಣವುಳ್ಳವನಾಗಿ ಶಬ್ದಮುಗ್ಗನಾಗಿ ಅಂಗನು ಶರಣನ ಐಕ್ಯಸ್ಥಲ ಸಂಪನ್ನನಾಗುತ್ತಾನೆ.

ಶರಣೈಕ್ಯನ ಆಕಾಶಾಂಗದಲ್ಲಿ ಆತ್ಮಾಂಗವಿರುತ್ತದೆ. ಶ್ರೋತ್ರದಲ್ಲಿ ಭಾವಾಂಶವಿದೆ. ಶಬ್ದದಲ್ಲಿ ತೃಪ್ತ್ಯಂಶವಿದೆ. ಪರಾಶಕ್ತಿಯೊಳಗೆ ಚಿಚ್ಛಕ್ತ್ಯಂಶವಿದೆ. ಸುಜ್ಞಾನದೊಳಗೆ ಸದ್ಭಾವ ಹಸ್ತವಿದೆ. ಆನಂದ ಭಕ್ತಿಯೊಳಗೆ ಸಮರಸ ಭಕ್ತ್ಯಂಶವಿದೆ. ಅಂತೆಯೇ ಪ್ರಸಾದಲಿಂಗದೊಳಗೆ ಮಹಾಲಿಂಗವಿದೆ. ಅದಕ್ಕೆ ಶರಣೈಕ್ಯನು ಸುಜ್ಞಾನದೊಳಗಿನ ಸದ್ಭಾವದಿಂದ ಶಬ್ದದೊಳಗಿನ ತೃಪ್ತಿಯನ್ನು ಶ್ರೋತ್ರದೊಳಗಿನ ಹೃದಯಮುಖದಲ್ಲಿ ಸಲ್ಲಿಸಿ ಪರಮಾನಂದದೊಳಗಿನ ಸಮರಸ ಭಕ್ತಿಯಿಂದ ಶಾಂತ್ಯತೀತದೊಳಗಿನ ಶಾಂತ್ಯತೀತೋತ್ತರ ಕಳೆಯನ್ನು ಕೈಗೂಡಿಸಿಕೊಳ್ಳುತ್ತಾನೆ. ಇದರಿಂದಾಗಿ ಶರಣೈಕ್ಯನ ಶ್ರೋತ್ರಾವಚ್ಛಿನ್ನ ಚೈತನ್ಯಕ್ಕೆ ಮಹಾಲಿಂಗತ್ವವುಂಟಾಗುತ್ತದೆ ಆಕಾಶಾಂಗಾತ್ಮನಿಗೆ ಶರಣೈಕ್ಯ ಸ್ಥಲವುಂಟಾಗುತ್ತದೆ.

ಶ್ರವಣಾನಂದದಲ್ಲಿ ಶ್ರೋತ್ರ ವಿಶುದ್ಧಿ ಸುಜ್ಞಾನಗಳಿಗೆ ಸನ್ನಿಹಿತ ಸಂಬಂಧವಿದೆ. ಇವು ಏಕೀಭವಿಸದೆ ಶ್ರವಣ ಸುಖ ಸಿಕ್ಕದು. ಶ್ರವಣಾನುಭವ ಸಂಪ್ರಾಪ್ತವಾಗದು. ಶಬ್ದ ಬ್ರಹ್ಮ ಸಂತೃಪ್ತಿ ಸಮನಿಸದು.

ಶ್ರವಣದಲ್ಲಿ ಸುಜ್ಞಾನ ಸಂಭವಿಸಬೇಕು. ವಿಶುದ್ಧಿ ಸಂಭವಿಸಬೇಕು, ಆಗ ಚಿತ್ಕಳೆ ಚಿಮ್ಮುತ್ತದೆ. ಚಿದಾಕಾಶ ವಿಕಾಸವಾಗುತ್ತದೆ, ವಿಶುದ್ಧವಾಗುತ್ತದೆ, ಆಗ ಶ್ರಾವಿತ ಶಬ್ದ ಮಂತ್ರವಾಗಿ ಮಹಾಲಿಂಗವಾಗಿ ಪರಿಣಮಿಸುತ್ತದೆ. ಆ ಮಹಾಲಿಂಗರೂಪ ಪರಾವಾಗ್ ಬ್ರಹ್ಮದಿಂದ ಪೂರ್ಣಭಾವವುಂಟಾಗುತ್ತದೆ. ಆ ಪೂರ್ಣ ಭಾವವುಳ್ಳವರ ಮಾತು ಜ್ಯೋತಿರ್ಲಿಂಗವಾಗುತ್ತದೆ. ಆದರಿಂದ ಶ್ರಾವಕರ ಸರ್ವಪಾಪ ಸಂಹಾರವಾಗುತ್ತದೆ. ಸಚ್ಚಿದಾನಂದ ನಿತ್ಯ ಪೂರ್ಣ ಸ್ವರೂಪ ಸಂಗಮಿಸುತ್ತದೆ.

ಸಾಭಾರಿ ಶ್ರೀಗುರುದೇವನ ಉಪದೇಶದ ವರ್ಣ, ಪದ, ವಾಕ್ಯ ಮತ್ತು ಮಂತ್ರಗಳಲ್ಲಿ ಜ್ಯೋತಿರ್ಲಿಂಗವಿರುತ್ತದೆ. ಅದನ್ನು ತ್ರಿಕರಣ ಪೂರ್ವಕ ಶ್ರವಣ ಮಾಡಿದ ಶರಣ ಆ ಗುರುದೇವನ ಸಾಹಿತ್ಯ ಜ್ಯೋತಿರ್ಲಿಂಗದಲ್ಲಿ ಸಮರಸತೆಯನ್ನು ಪಡೆಯುತ್ತಾನೆ.

ಅಂದರೆ ಶರಣ ಸತಿ ಗುರುಲಿಂಗಪತಿಯಲ್ಲಿ ಸಮರಸಗೊಳ್ಳುತ್ತಾಳೆ.

ಶ್ರಾವಕರಲ್ಲಿ ಪಾತ್ರಭೇದವಿದೆ. ಹತ್ತರಿದ್ದೂ ಕೇಳದಿರುವವರು, ಕಿವಿಯಿಂದ ಮಾತ್ರ ಕೇಳುವವರು, ಕೇಳಿದ್ದನ್ನು ಮನದ ನೆನಹಿಗೆ ತರುವವರು, ನೆನಹಿಗೆ ತಂದುದನ್ನು ಅಳವಡಿಸಿಕೊಂಡು ಅನುಭವಿಸಿ ಆನಂದಿಸುವವರು, ಆನಂದಿಸಿ ಅವಿನಾಭಾವದಲ್ಲಿರುವವರು. ಹೀಗೆ ಅಯ್ದು ಬಗೆಯಾಗಿರುವರು. ಇವರಲ್ಲಿ ಅಯ್ದನೆಯವನೆ ಶರಣೈಕ್ಯ.

ಸದ್ಗುರುದೇವನ ಭಾವಪೂರ್ಣವಾಣಿ ಅದೊಂದು ಸತ್ವಮಯ ಬೀಜ. ಅದು ಕಲ್ಲಮೇಲೆ ಬಿದ್ದರೆ ಮೊಳೆಯದು ; ಕಾಡನೆಲದಲ್ಲಿ ಕಸವಿರುವ ನೆಲದಲ್ಲಿ ಮೊಳೆತರೂ ಬೆಳೆಯದು. ಬೆಳೆದರೂ ಪೂರ್ಣಫಲಿಸದು. ಸತ್ತ್ವವುಳ್ಳ ಭೂಮಿಯಲ್ಲಿ ಅದು ಸತ್ವದಿಂದ ಬೆಳೆದು ಸಂಪೂರ್ಣ ಫಲಪ್ರದವಾಗುತ್ತದೆ.

"ಶುದ್ಧ ಶಿವತತ್ತ್ವವೇದ್ಯವಾಗಿ ಶಬ್ದಮುಗ್ಧನಾದೆನಾಗಿ
ಮೂರ್ತಿ ಅಮೂರ್ತಿ ತತ್ತ್ವಾತತ್ತ್ವಂಗಳನರಿಯು,

ಮದಮೋಹಂಗಳ ಮರೆದೆ. ಅದೇನು ಕಾರಣವೆಂದರೆ :
ಮುಂದೆ ಅರಿವುದಕ್ಕೆ ಕುರುಹಿಲ್ಲವಾಗಿ, ಅರುಹು ಕುರುಹ
ನೊಳಕೊಂಡು ತೆರಹಿಲ್ಲದ ಪರಿಪೂರ್ಣಂಗೆ ಮಾಯೆಯೆಲ್ಲಿಯದೊ ?
ದೇಹಮದವೆಲ್ಲಿಯದೊ ? ದೇಹಿಯದೆಲ್ಲಿಯವನೊ ?
ಮಾಯೆ ದೇಹ-ದೇಹಿಯಿಲ್ಲವಾಗಿ
ಸ್ವಯವೆಲ್ಲಿಯದು, ಪರವೆಲ್ಲಿಯದು ?
ಪರವಸ್ತು ತಾನಾದ ಶರಣಂಗೆ ಮುಂದೇನನು ಹೇಳಲಿಲ್ಲ ಕಾಣಾ,
ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ !"

ಶ್ರೀಗುರುದೇವನ ಶಬ್ದೋಪದೇಶದಲ್ಲಿ ಸಾಹಿತ್ಯೋಪದಶದಲ್ಲಿ ಮಹಾ ಪ್ರಕಾಶವಿರುತ್ತನೆ ; ಮಹಾನುಭವವಿರುತ್ತದೆ. ಅದರಲ್ಲಿ ಪ್ರಸಾದ ಸ್ವರೂಪ ಮಹಾಲಿಂಗ ಸಾಕ್ಷಾತ್ಕಾರವಾಗುತ್ತದೆ. ಅದುವೇ ಶುದ್ಧ ಪರಶಿವ ತತ್ತ್ವ. ಅದರ ಸಾಮರಸ್ಯದಲ್ಲಿ ಶಬ್ದಮುಗ್ಧತೆ ಸಂಗಮಿಸುತ್ತದೆ ಜ್ಞಾನ ನಷ್ಟಸ್ಥಲ ವುಂಟಾಗುತ್ತದೆ. ಆಗ ಅರುಹು ಕುರುಹುಗಳೆರಡೂ ತೆರಹಿಲ್ಲದಂತಾಗುತ್ತವೆ. ಅದೇ ಪರಿಪೂರ್ಣ ಸ್ವರೂಪ. ಅದು ಅಳವಟ್ಟಾಗ ಭಿನ್ನಪ್ರಪತ್ತಿಯಿರುವುದಿಲ್ಲ.

“ ಕರ್ಣದ ಕೊನೆಯಲ್ಲಿ ಎರಡು ಪರ್ಣ ಹುಟ್ಟಿ
ನಿರ್ನಾಮ ಶ್ರುತವ ನೆಲಗೊಳಲೀಯದು ನೋಡಾ.
ಕರ್ಣದ ಕೊನೆಯ ಪರ್ಣವ ಹರಿದು
ನಿರ್ಮಲ ನಿರಾವರಣನೇ ಕರ್ಣವಾಗಿಪ್ಪ
ಪ್ರಭುದೇವರ ಪಾದಕ್ಕೆ ನಮೋ ನಮೋ ಎಂಬೆನು ಕಾಣಾ;
ಮಹಾಲಿಂಗ ಗುರು ಶಿವಸಿದ್ಧೇಶ್ವರ ಪ್ರಭುವೇ."

ಶ್ರೋತೃ-ಶ್ರವಣಭಾವ ಮತ್ತು ಶ್ರೋತೃ ಶ್ರಾವಯಿತೃ ಭೇದಗಳು ಶರಣನಲ್ಲಿ ಇರಬಾರದು. ಇದ್ದರೆ ಅದೇ ಆವರಣವಾಗಿ ಅವಿನಾಭಾವಕ್ಕೆ ಅಡೆತಡೆಗಳನುಂಟುಮಾಡುತ್ತದೆ. ನಿರ್ಮಲತೆಗೆ ನೆಲೆಯನ್ನು ಕಲ್ಪಿಸದು. ಒಂದು ಎರಡಾಗಿ ನಿಲ್ಲುತ್ತದೆ. ಹರಿಪಕ್ಕೆ ಹೊರಬನ್ನು ಹಾಕುತ್ತದೆ.

ನಿರೂಪಕ್ಕೆ ನಾಮವಿಲ್ಲ. ಅದು ನಿರ್ನಾಮ. ಆ ನಿರಾಕಾರ ನಿರ್ನಾಮದ ಶ್ರವಣ ಸಮವೇಧಿಸಬೇಕು. ಅವಾಚ್ಯ ಪ್ರಣವ ಪ್ರಸಿದ್ಧ ಪ್ರಸಾದ ಪರಿಣಾಮ ವುಂಟಾಗಬೇಕು ಆಗ ಅಂಗ-ಲಿಂಗ ಭೇದವಿಲ್ಲ. ಶಿಷ್ಯ-ಶ್ರೀಗುರು ಭೇದವಿಲ್ಲ. ಕರ್ತೃ-ಕ್ರಿಯೆಗಳ ಭೇದವಿರುವುದಿಲ್ಲ. ಆಗ ಅಪರೋಕ್ಷಾನುಭಾವ-ಅವಿನಾಭಾವಗಳು ಉಂಟಾಗುತ್ತವೆ. ಅಲ್ಲಿ ನಾಮ ಸೀಮೆಯ ಕಲ್ಪನೆ-ಶಬ್ದಾರ್ಥ ವಿಂಗಡಣೆ ಇರುವುದಿಲ್ಲ.

"ತತ್ತ್ವಾತತ್ತ್ವವೆಂಬ ಮಿಥ್ಯಾಛಾಯೆಯಿಲ್ಲದ
ಬಚ್ಚಬರಿಯ ಬಯಲ ಬಣ್ಣ ಶೃಂಗರಿಸಿ
ಪರತತ್ತ್ವವಾಯಿತ್ತು ನೋಡಾ
ಆ ಪರತತ್ತ್ವ ತನ್ನ ಶಕ್ತಿ ಸಾಮರ್ಥ್ಯದಿಂದಲಿ ಭಜಿಸಿ,
ಅಂಗ ಲಿಂಗವಾಯಿತ್ತು ನೋಡಾ.
ಅಂಗವೆಂದರೆ ಶರೀರ ; ಲಿಂಗವೆಂದರೆ ಪ್ರಾಣ.
ಇದು ಕಾರಣ ಶರಣ-ಲಿಂಗಕ್ಕೆ ಭಿನ್ನವೆಲ್ಲಿಯದು ?
ಭೇದವೆಲ್ಲಿಯದು ಬಿಡಾ ಮರುಳೆ !
ಶರಣನೇ ಲಿಂಗವೆಂಬುದು ಸತ್ಯ.
ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ !"

ಶರಣೈಕ್ಯನಿಗೆ ಅದು ತತ್ತ್ವ, ಇದು ಅತತ್ತ್ವ ಎಂಬ ಕವಲ ಭಾವವಿರುವುದಿಲ್ಲ ; ಭಾವಛಾಯೆಯೂ ಇರುವುದಿಲ್ಲ. ಶರಣೈಕ್ಯನೊಬ್ಬ ಬಚ್ಚ ಬರಿಯ ಬಯಲ ಬಣ್ಣ ಸಿಂಗಾರದ ಪರತತ್ತ್ವ. ಆಹಾ ! ಎಂತಹ ಚೆಲುವಾತು. ಅನುಭವ ಲತೆ ಕಾತು ಹಣ್ಣಾಗಿದೆ ಈ ಶಬ್ದ ಸಂದೋಹವೆಂಬ ಮಂಟಪದಮೇಲೆ! ತಾನೇ ಪ್ರಸಾದ ಲಿಂಗದೊಳಗಿನ ಮಹಾಲಿಂಗವಾದ ಶಕ್ತಿ ಸಾಮರ್ಥ್ಯ ಶಿವಶರಣನದು: ಶರಣೈಕ್ಯನ ಶರೀರವಲ್ಲ ಶಿವಸ್ವರೂಪ, ಲಿಂಗಸ್ವರೂಪ. ದೇಹ ಆತ್ಮ ಪರಮಾತ್ಮರಿಗೆ ಭಿನ್ನಭೇದವಿಲ್ಲ. 'ಶರಣನೇ ಲಿಂಗವೆಂಬುದು ಸತ್ಯ' ಎಂಬ ವಾಣಿಯಲ್ಲಿ ದೃಢವಾದ ಸತ್ಯಪ್ರತಿಜ್ಞೆಯಿದೆ. ಸ್ವಾನುಭವದ ಸತ್ವ ಪ್ರತಿಭೆಯಿದೆ. ಲಿಂಗಾನುಭಾವದ ದೃಷ್ಟಿಯಲ್ಲಿ ಜಡಾಜಡ ಸಮನ್ವಯದ ದಿವ್ಯತೆ ಅಳವಟ್ಟಿದೆ.

"ಒಬ್ಬನಿಗಿಬ್ಬರು ನೋಡಾ.
ಒಬ್ಬಳು ಕಾಯದ ರೂಪಿಯಾಗಿ ಕಾಯವ ಶುದ್ಧವ ಮಾಡುವಳು ;
ಕಾಯದ ಗುಣವ ಹೊದ್ದಳು ನೋಡಾ.
ಮತ್ತೊಬ್ಬಳು ಪ್ರಾಣದ ರೂಪಿಯಾಗಿ ಪ್ರಾಣವ ಶುದ್ಧವ
ಮಾಡುವಳು ;
ಈ ಪ್ರಾಣನ ಗುಣವ ಹೊದ್ದಳು ನೋಡಾ.
ಇಬ್ಬರ ಸಂಗದಿಂದ ತಾನೊಬ್ಬ ಸಾಯಲು
ಮೂರು ಲೋಕದ ತಬ್ಬಿಬ್ಬ ಬಿಟ್ಟಿತ್ತು; ತಲ್ಲಣವಡಗಿತ್ತು.
ಎಲ್ಲರೂ ನಿರಾಳರಾದರು; ಅವರು ನಿಮ್ಮವರು ನೋಡಾ,
ಮಹಾ ಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ."

ಒಬ್ಬ ಆ ಪರಮಾತ್ಮ. ಆತನಿಗಿಬ್ಬರು ಸ್ತ್ರೀಯರು ಭಕ್ತಿ-ಶಕ್ತಿಯರು, ಅಥವಾ ಕ್ರಿಯಾಶಕ್ತಿ-ಜ್ಞಾನಶಕ್ತಿಯರು, ಭಕ್ತಿಯು ಕ್ರಿಯಾಸ್ವರೂಪಿಣಿಯಾಗಿ ಕಾಯ ಶುದ್ಧಿಯನ್ನು ಮಾಡುವಳು. ಶಕ್ತಿಯು ಜ್ಞಾನಸ್ವರೂಪಿಣಿಯಾಗಿ ಪ್ರಾಣ ಶುದ್ಧಿಯನ್ನು ನೆರವೇರಿಸುವಳು. ಅಂದರೆ ಕಾಯಗುಣ, ಪ್ರಾಣಗುಣಗಳನ್ನು ತೊಡೆಯುವರು, ಭಕ್ತಿ-ಶಕ್ತಿಗಳ, ಕ್ರಿಯಾ-ಜ್ಞಾನಗಳ ಸಂಗದಿಂದ ತಾನೊಬ್ಬ ಅಂದರೆ ಅಹಂಕಾರ ಅಳಿಯಲು ತ್ರಿವಿಧ ತನುಭಾವ ತೊಲಗುವುದು; ತಲ್ಲಣ ತೊಲಗುವುದು. ಮೂವರಿಗೂ ನಿರಾವಿಲತೆ ನೆಲೆಗೊಳ್ಳುವುದು. ಮೂರಂಗರು ಮೂರ್ಲಿಂಗರು ಮಹಾಲಿಂಗ ಸ್ವರೂಪರಾಗುವರು. ಶರಣೈಕ್ಯ ಸ್ವರೂಪದ ಸುಂದರ ಚಿತ್ರಣವಿದು, ರಂಜನಾತ್ಮಕ ರೂಪಕ ವಿಶ್ಲೇಷಣವಿದು. ಮಾರ್ಮಿಕವಾದ ಮೀಮಾಂಸೆಯಿದು,

"ಆಕಾಶವರ್ಣದ ಅಂಗನೆ
ಲೋಕಾಲೋಕಂಗಳ ನೋಡಿಹೆನೆಂದು ಇಳಿದು ಬರಲು
ಆ ಲೋಕದವರೆಲ್ಲಾ ಕಂಡು ನಮ್ಮ ಈ ಲೋಕದ ಸ್ತ್ರೀಯಲ್ಲ;
ಇವಳಾವ ಲೋಕದ ಸ್ತ್ರೀಯೇಕೆಂದು ನೋಡುತ್ತ ನೋಡುತ್ತ
ಆ ದೇವ ಸ್ತ್ರೀಯ ಸಂಗವ ಮಾಡಿ ದೇವನಾದುದ ಕಂಡೆ.

ಭಾವಭ್ರಮೆಗೆ ಹೊರಗಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ !"

ಈ ವಚನದ ಬೆಡಗು ಬಿನ್ನಾಣ ಅಸಾಧಾರಣ, ಪರಾಶಕ್ತಿಸ್ವರೂಪಳಾದ ಶರಣಾಂಗನೆಯ ಸಡಗರ ಭಾವಾಕರ್ಷಣ. ಅವಳ ಆ ಚಲುವು ಅವಳ ಆ ಮೈವಣ್ಣ ನೀಲಾಕಾಶವರ್ಣ. ಆಕಾಶವೇ ಅಂಗವಾದ ಶರಣ ಸತಿಗೆ-ಪರಾಶಕ್ತಿಗೆ ಇದು ಹೆಚ್ಚಿನದಲ್ಲ, ಅಚ್ಚರಿಯದೇನಲ್ಲ. ಅವಳು ಈ ಇಳೆಗೆ ಇಳಿದು ಬಂದ ಅವಳ ಅವತರಣ ನಿರೀಕ್ಷಣ ನಿದರ್ಶನ. ವಿಶುದ್ಧಿಯಿಂದ ಆಧಾರಕ್ಕೆ ಇಳಿದು ಬಂದಿದಾಳೆ. ಈ ಇಳೆಯನ್ನೆಲ್ಲ ಇನಿದಾಗಿಸಿದ್ದಾಳೆ. ಇದೆಲ್ಲ ಅವಳಿಂದ ಪರಾಪ್ರಕೃತಿಯಾಗಿ ಪರಮ ಪ್ರಮದೆಯಾಗಿ ಪರಿಣಮಿಸಿದೆ. ಆಚಾರಲಿಂಗಯ್ಯನು ವಿಚಾರ ನೇತ್ರದಿಂದ ನಿಟ್ಟಿಸಿ ಪರಮ ಪ್ರೇಮದಿಂ(ಇಚ್ಛೆಯಿಂ)ದ ಕೂಡಿ ಪ್ರಸನ್ನಾತ್ಮನಾಗಿ ಮಹಾಲಿಂಗವಾಗುವನು. ಭಾವಭ್ರಮೆಗೆ ಒಳಗಾಗನು.

"ಸತ್ಯದ ಭಾವಿಯಲ್ಲಿ ಭಕ್ತಿಯಂ ಬೆಳಸು
ಕರಣದ ಕತ್ತಲೆಯೊಂಬ ಕಳೆಯ ಕಳೆದು
ಶಕ್ತಿ ಭಕ್ತಿಯನೊಳಕೊಂಡು ನಿಂದ ಮುಕ್ತ್ಯಂಗನೆ
ಸಚ್ಚಿದಾನಂದಸ್ವರೂಪಿ ನೋಡಾ. ನಿತ್ಯ ನಿಜತತ್ತ್ವ ನೆರೆದು,
ಉತ್ಪತ್ತಿ ಸ್ಥಿತಿ ಪ್ರಳಯವ ಮೀರಿದ ಶರಣನ
ಪರಮ ಭಕ್ತಿಯನೇನೆಂದು ಉಪಮಿಸುವೆನಯ್ಯಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ !

ಆಧಾರಶಕ್ತಿ ಅನಾದಿ ಪುರುಷನ ಕೂಡಲು
ತ್ರೈಜಗದುತ್ಪತ್ತಿಯಾಯಿತ್ತು ನೋಡಾ.
ತ್ರೈಜಗ ಹುಟ್ಟುವದಕ್ಕತ್ತ ಮುನ್ನ
ತಾ ಹುಟ್ಟಿದೆನೆಂದರಿಯ ಬಲ್ಲರೆ
ಮೂರುಲೋಕದ ಉತ್ಪತ್ತಿ ಸ್ಥಿತಿ ಪ್ರಳಯದೊಳಗಲ್ಲ.
ಆ ಪ್ರಳಯ ವಿರಹಿತನಾದಾತನೇ ಅಚ್ಚ ಶರಣನು,
ಆತ ನಿತ್ಯ ನಿರಂಜನನು, ಆ ಮಹಾತ್ಮನನೇನೆಂಬೆನಯ್ಯಾ,
ಮಹಾಲಿಂಗಗುರು ಶಿವ ಸಿದ್ಧೇಶ್ವರ ಪ್ರಭುವೇ !"

ಆಕಾಶವರ್ಣದ ಆ ಪರಾಶಕ್ತಿ ಮಗಳ ಮೋಹದಿಂದ ಆಧಾರಕ್ಕೆ ಇಳಿದು ಬಂದು ಕ್ರಿಯೆಯನ್ನು ಪರಾಕ್ರಿಯೆಯನ್ನಾಗಿಸಿ ಶ್ರದ್ಧೆಯನ್ನು ಪರಾಶ್ರದ್ಧೆಯನ್ನಾಗಿಸಿ ಪರಾಭಕ್ತಿಯ ಬೆಳೆಯನ್ನು ಬೆಳೆಸಲು ಕರಣ ಕತ್ತಲೆಯೆಂಬ ಕಸವ ಕಳೆದು ಶಕ್ತಿ-ಭಕ್ತಿಯರೊಂದಾಗಿ ಮುಕ್ತ್ಯಂಗನೆಯೆನಿಸುವಳು. ಸಚ್ಚಿದಾನಂದ ಸ್ವರೂಪಿಣಿಯಾಗುವಳು. ನಿತ್ಯಲಕ್ಷಣಲಕ್ಷಿತೆಯಾಗುವಳು. ಉತ್ಪತ್ತ್ಯಾದಿಗಳನ್ನು ಕಳೆದು ಪರಿಪೂರ್ಣಳಾಗುವಳು. ಶರಣಾಂಗನನ್ನೂ ಆಗಿಸುವಳು. ಎಲ್ಲಕ್ಕೂ ಆಧಾರಶಕ್ತಿಯಾಗಿ ಅನಾದಿ ಪುರುಷನ ಕೂಡುವಳು. ಪರಮಾತ್ಮನು ಪರಾಶಕ್ತಿಯಲ್ಲಿ ಕೂಡುವುದರಿಂದ ಮೂಜಗದುತ್ಪತ್ತಿ. ಇದಕ್ಕೆ ಮೊದಲು ಬಯಲ ಬಣ್ಣಗೊಂಡು ಆತ್ಮನಾಗುವನು. ಆ ಆತ್ಮನೇ ಶರಣನು. ಆವನು ಪ್ರಳಯರಹಿತನಂ ಕಾಲ ಕರ್ಮರಹಿತನು. ರಂಜನ ರಹಿತನು. ಕರಣ ಕತ್ತಲೆ ಕಳೆದು ಸ್ವಯಂ ಜ್ಯೋತಿಯಾದ ಶರಣನಿಗೆ ಕಾಲ ಕರ್ಮಜನ್ಮಗಳೆಂಬ ಗೆದ್ದಲು ಹುಳು ಹಿಡಿಯಬಲ್ಲವೆ ?

"ಕಂಗಳ ನೋಟ, ಕರಸ್ಥಲದ ಲಿಂಗ, ಹೃದಯದ
ಜ್ಞಾನಲಿಂಗ ಲಿಂಗವೆಂಬ ಲಿಗಮುಖದಲ್ಲಿ ಮಾತ್ತಾಡುತ್ತಿರಲಾಗಿ
ನಡೆವ ಕಾಲು ಕೆಟ್ಟು, ಹಿಡಿವ ಕೈಯ ಕತ್ತಲೆ ಹರಿದು
ಬೆಳಗಾಯಿತ್ತಯ್ಯಾ.
ನೆನೆವ ಮನದ ಕತ್ತಲೆ ಹರಿದು ಬೆಳಗಾಯಿತ್ತಯ್ಯಾ.
ನೋಡುವ ಕಂಗಳ ಕತ್ತಲೆ ಹರಿದ ಬೆಳಗಾಯಿತ್ತಯ್ಯಾ.
ಬೆಳಗಿನೊಳು ಬೆಳಗಾಗಿ, ಬೆಳಗು ಸಮರಸವಾಗಿ,
ಇಂದು ಇಂದುವ ಕೂಡಿದಂತೆ, ರವಿ ರವಿಯ ಕೂಡಿದಂತೆ,
ಮಿಂಚು ಮಿಂಚನು ಬೆರಸಿದಂತೆ ಉಭಯದ ಸಂಚವಳಿದು
ಸ್ವಯಂ ಜ್ಯೋತಿಯಾದೆನು ಕಾಣಾ,
ಮಹಾಲಿಂಗನುರು ಶಿದಸಿದ್ಧೇಶ್ವರ ಪ್ರಭುವೇ !

ಶರಣೈಕ್ಯನ ಶರೀರವೆಲ್ಲ ಸ್ವಯಂಜ್ಯೋತಿ. ಆತ್ಮವೆಲ್ಲ ಪರಂಜ್ಯೋತಿ; ಜ್ಯೋತಿ ಜ್ಯೋತಿಯೊಡನೆ ಮಾತಾಡುತ್ತದೆ. ನೋಡುತ್ತದೆ, ನೋಡುತ್ತದೆ;

ಮುಟ್ಟಿ ಅರಿಯುತ್ತದೆ, ಕೂಡಿ ನಡೆಯುತ್ತದೆ, ನೆನೆದು ನೆರೆದೆರಕವಾಗುತ್ತದೆ. ಒಳಹೊರಗೆ ತೊಳಗಿ ಬೆಳಗುತ್ತದೆ. ಸ್ವಯಂಜ್ಯೋತಿಯಾಗಿ ಚರಜ್ಯೋತಿಯಾಗಿ ಪರಜ್ಯೋತಿ ಸ್ವರೂಪವಾಗಿ ಲಿಂಗಕ್ಕೆ ಲಿಂಗಾರ್ಪಣವಾಗುತ್ತದೆ ; ಲಿಂಗದಲ್ಲಿ ಲಿಂಗ ಬೆರೆದು ಹಿರಿ ಬೆಳಗಾಗಿ ಮಹಾಲಿಂಗವಾಗುತ್ತದೆ.

"ನಾನು ನೀನೆಂಬ ಉಭಯ ತನುಗುಣನಾಸ್ತಿಯಾಗಿ
ಅರುಹು-ಮರಹೆಂಬ ಉಭಯದ ಮರಹು ಅಳಿಯಿತ್ತಯ್ಯಾ,
ಮರಹು ಅಳಿಯಿತ್ತಾಗಿ ಮಹದರುಹಿನ ಆಚರಣೆ
ಕರಿಗೊಂಡಿತ್ತಯ್ಯಾ.

ಮಹದರುಹಿನ ಆಚರಣೆ ಕರಿಗೊಂಡಿತ್ತಾಗಿ
ಮಹಾಲಿಂಗದ ಬೆಳಗು ಒಳಗೊಂಡಿತ್ತಯ್ಯಾ.
ಮಹಾಲಿಂಗದ ಬೆಳಗು ಒಳಕೊಂಡಿತ್ತಾಗಿ.
ಮಂಗಳಮಯ ಮಹಾಲಿಂಗಗುರು ಶಿವಸಿದ್ಧೇಶ್ವರ
ಪ್ರಭುವಿನಲ್ಲಿ ಪರಮ ಪರಿಣಾಮ ನೆಲೆಗೊಂಡಿತ್ತಯ್ಯಾ.

ಒಳಗೆಂದೆನು, ಹೊರಗೆಂದೆನು;
ಅರುಹೆಂದೆನು, ಮರಹೆಂದೆನು;
ತಾನೆಂದೆನು, ಇದಿರೆಂದೆನೇ;
ಬರಿಯ ಬಯಲು ಭ್ರಮೆಗೊಳಗಾಯಿತ್ತಲ್ಲಾ ಈ ಲೋಕ !
ಒಳಗು ತಾನೆ, ಹೊರಗು ತಾನೆ;
ಅರುಹು ತಾನೆ, ಮರಹು ತಾನೆ;
ತೆರಹಿಲ್ಲದ ಪರಿಪೂರ್ಣ ಪರಾಪರವು ತಾನೆ ನೋಡಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ !"

ನಾನೆಂಬುದು ತನುಗುಣವಾದಂತೆ ನೀನೆಂಬದೂ ತನುಗುಣ. ಇವೆರಡೂ ಇಲ್ಲವಾಗಬೇಕು, ನನ್ನ ಅರುಹು, ನಿನ್ನ ಮರುಹು ಎರಡು ಪ್ರಯೋಜನವಿಲ್ಲ. ನಿನ್ನರಿಯದ ಅರಿವು ಅದೊಂದು ಮರುಹು ಈ ಉಭಯವನೊಳಕೊಂಡ ಆ ಮಹದರಿವಿನಾಚರಣೆ ಅಳವಡಬೇಕು. ಅದೇ ಮಹಾಲಿಂಗದ ಬೆಳಗು. ಅದೇ ಪರಮ ಪರಿಣಾಮ. ಅದಕ್ಕೆ ಒಳಹೊರಗೆಂಬುದಿಲ್ಲ, ಅದು ಅರುಹಲ್ಲ; ಮರಹಲ್ಲ.

ನಾನಲ್ಲ, ತಾನಲ್ಲ ; ಅದು ಬಿಡಿ ಬಿಡಿಯಾಗಿ ಏನೂ ಅಲ್ಲ. ಇಡಿಯಾಗಿ ಎಲ್ಲವೂ ಆಹುದು. ಅದು ತೆರಹಿಲ್ಲದ ಪರಿಪೂರ್ಣ, ಅದು ಪರಾಪರ. ಅದೇ ತಾನು, ತಾನೇ ಅದು. ಅರುಹು-ಮರಹುಗಳನೊಳಗೊಂಡ ಮಹದರುಹಿನಾಚರಣೆಯದು.

"ಶಶಿವದನೆಯ ಮಸ್ತಕವನೊಡೆದು
ಅಸಮಾಕ್ಷನುದಯವಾದನು ನೋಡಿರೇ.
ಅಸವಯಕ್ಷನುಯಕ್ಕೆ ರವಿ ಶಶಿ ಶಿಖಿಯೊಂದಾಗಿ
ಅಸಮಾಕ್ಷನ ನೆರೆದು ಸತಿ-ಪತಿ ಭಾವ ಸತ್ತಿತ್ತು.
ಪರವಸ್ತುವೆಂದು ಬೇರುಂಟೆ, ತಾನಲ್ಲದೆ ?
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭವೇ!

ವಾರಿ ಬಲಿದು ವಾರಿಶಿಲೆಯಾದಂತೆ
ವಾರಿ ಶಿರ ಕರಗಿ ಉದಕವಾದಂತೆ
ನಿನ್ನ ವಿನೋದಕ್ಕೆ ನೀನೆ ಶರಣನಾದೆ,
ನಿನ್ನ ವಿನೋದಕ್ಕೆ ನೀನೇ ಲಿಂಗವಾದೆ
ನಿನ್ನ ವಿನೋದ ನಿಂದಲ್ಲಿ ನೀನೆ ಶರಣ–ಲಿಂಗವೆಂಬುಭಯವಳಿದು
ನಿರಾಳ ನಿರ್ಮಾಯನಾಗಿ ಶಬ್ದಮಯನಾದೆನು ಕಾಣಾ,
ಮಹಾಲಿಂಗಗುರು ಶಿವಸಿದ್ಧೇಶ್ವರ ಪ್ರಭುವೇ!"

ಶರಣೈಕ್ಯನ ಸಹಜವಾದ ನಿರಾಳವಾದ ನಿಲವಿದು. ನಿರ್ಮಾಯನಾದವಿದು ಮಹದರುವಿನಾಚರಣವಿದು.

ಸತಿ–ಪತಿ ಭಾವ, ಶರಣ-ಲಿಂಗವೆಂಬ ಭಾವ ನಿರ್ಭಾವವಾದ ನಿಸ್ಸೀಮವಿದು, ನಿರ್ನಾಮವಿದು. ಶಿಲೆಯಾದುದು ; ಅದೇ ಕಲೆಯಾದುದು ಅದೇ! ಸಾಕಾರ-ನಿರಾಕಾರಕ್ಕೆ ಭೇದವಿಲ್ಲ.

ಆ ಪರಾಶಕ್ತಿಯ ಮಸ್ತಕದಲ್ಲಿ ಆ ಮಹದರಿವಿದೆ. ಅದನ್ನು ಬಿಚ್ಚದೆ ಅದು ಈಚೆಗೆ ಬಾರದು. ಆಚರಣೆಗೆ ಅಂದದು. ಆ ಮಹದರಿವಿನ ಅಚ್ಚಿ ಹಣೆಯಿಂದ ಹೊರ ಹೊಮ್ಮಿದಾಗ ಕ್ರಿಯೆಜ್ಞಾನಾನುಭವಗಳು ಒಂದಾಗುವವು. ಒಂದಾದ ಆ ಪರವಶಾನುಭವದಲ್ಲಿ ಸತಿ-ಪತಿ ಭಾವಕ್ಕೆ ಇಂಬಿರುವುದಿಲ್ಲ. ಪರಾಪರ ಭೇದಕ್ಕೆ ಇಂಬಿರುವುದಿಲ್ಲ. ಶರಣ-ಲಿಂಗವೆಂಬ ಬಿರುಕಿಗೆ ಎಡೆಯಿರುವುದಿಲ್ಲ, ಅದೇ ಶರಣೈಕ್ಯಸ್ಥಲ.

"ಅಂಗವೆಂಬಂಗನೆಯು ಆತ್ಮನೆಂಬ ಪುರುಷನಪ್ಪಿ
ಮುಂಡೆತನವಿಲ್ಲದಿಪ್ಪ ಭೇದವ ತಿಳಿದು, ನೋಡಿರಣ್ಣಾ!
ಕುಂಟಿಣಿಯಾದ ಒಡಹುಟ್ಟಿದ ಮನ ನಪುಂಸಕನಾದ ಕಾರಣ,
ಲಿಂಗಸಂಗಿಯಲ್ಲದೆ ಹೋದ ಕೇಳಿರಣ್ಣಾ !
ಆತ್ಮನು ಪುರುಷನಾದಡೂ ಲಿಂಗವ ಕೂಡುವ ಭರದಿಂದ ಸತಿಯಾಗ ಬಲ್ಲ!
ಶರಣಸತಿ ಲಿಂಗಪತಿ ಎಂಬುದುಂಟಾಗಿ
ಶಿವಜ್ಞಾನವೆಂಬ ಸಖಿಯು ಕೈವಿಡಿದು,
ಸೌರಾಷ್ಟ್ರ ಸೋಮೇಶ್ವರ ಲಿಂಗವ ಕೂಡಿ ಸುಖಿಯಾದನು."

ವೀರಶಿವಾಗಮ ಷಡ್ವಿಧ

ಇಲ್ಲಿಯವರೆಗೆ ಸ್ವಾನುಭವ ಶರಣರ ಶಿವಾನುಭವಗಳನ್ನು ಹಿಡಿದು 'ಶರಣ ಷಡ್ವಿಧವನ್ನು ವಿಚಾರಿಸಿದ್ದಾಯಿತು; ವಿವರಿಸಿದ್ದಾಯಿತು. ಇನ್ನು ಆಗಮಿಕ ದೃಷ್ಟಿಯಲ್ಲಿ ಅವಲೋಕಿಸಲಾಗುತ್ತದೆ. ಸೂಕ್ಷ್ಮಾಗಮದ ಎಂಟನೆಯ ಪಟಲದಲ್ಲಿ ಹೀಗೆ ಹೇಳಿದೆ.

"ಏವಂ ಪ್ರಸಾದಲಿಂಗಸ್ಯ ಸ್ಥಲಂಚ ಶೃಣು ತತ್ತ್ವತಃ ।
ಅನ್ಯದ್ರವ್ಯರುಚಿಂ ತ್ಯಕ್ತ್ವಾ ಪೂರ್ವ ಪೂಜಾದಿವರ್ಜಿತಃ ।
ಪ್ರಸಾದಲಿಂಗಮೋಹೀ ಸ್ಯಾದನ್ಯಮೋಹವಿವರ್ಜಿತಃ ॥೬೬॥

ಪ್ರಸಾದಲಿಂಗ ಭಕ್ತಸ್ತು ಪೂರ್ವಾಹಾರನಿರಾಸಕಃ ।
ಪ್ರಸಾದ ಪೂಜಕೋ ದೇವಿ ಪರಮ್ಯೈತ್ರ್ಯಾದಿ ವರ್ಜಿತಃ ॥೬೪॥

ಕರೇಣ ಪರವಿತ್ತಂತು ಕದಾಪಿ ನಹಿ 'ಸಂಸ್ಪೃಶೇತ್ ।
ಸತು ಪ್ರಸಾದ ಲಿಂಗೈಕವೀರಃ ಸ್ಯಾನ್ನಿಸ್ಪೃಹಃ ಸದಾ ॥೬೫॥

ಆದಾನಾರ್ಥಂಚ ದಾನಾರ್ಥಂ ಕರಂ ನೈವ ಪ್ರಸಾರಯೆತ್ ।
ನಾನ್ಯತ್ ಕಿಂಚಿತ್ಪ್ರಸಾದಸ್ಯ ಪ್ರಸಾದೀ ಕ್ವಾಪಿ ಸಂಸ್ಪೃಶೇತ್ ॥೬೬॥

ನಕುರ್ಯಾಜ್ಜೀವಹಿಂಸಾಂ ಚ ಪರೈರ್ವಾ ನಾಪಿ ಕಾರಯೇತ್ ।
ಪ್ರಸಾದಲಿಂಗ ಪ್ರಾಣೀ ಸ್ಯಾತ್ ಸ ಭವೇದಾತ್ಮಭೋಧಕಃ ॥೬೭॥

ಇತ್ಥಂ ಪ್ರಸಾದಲಿಂಗೈಕಪರೋ ಭೂತದಯಾನ್ವಿತಃ ।
ಯಃ ಪೂಜಯತಿ ಮಾಂದೇವಿ ಮತ್ಸಾಯುಜ್ಯಮವಾಪ್ನುಯಾತ್॥೬೮॥

ಪ್ರತಿ ಪ್ರಾಣಿಯಲ್ಲಿಯೂ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದು ಜನನ ಮರಣಾತ್ಮಕ ಈ ಲೋಕವನ್ನು ದಾಟಿ ಅಂದರೆ ನೋವನ್ನು ನೀಗಿ ಸೊಗವನ್ನು ಪಡೆವ ಧೀರನೆ ಶರಣನು; ಶಾಶ್ವತನು.

“ಪ್ರಸಾದಲಿಂಗ ಮೋಹಿತನಾದಡೆ
ಶಬ್ದಜಾಲಂಗಳಿಗೆ ಕಿವಿಯೊಡ್ಡದಿರಬೇಕು,
ಪ್ರಸಾದಲಿಂಗಭಕ್ತನಾದಡೆ,
ದಾಸೋಹದ ಹಮ್ಮಿಲ್ಲದಿರಬೇಕು;
ಪ್ರಸಾದಲಿಂಗವೀರನಾದಡೆ,
ಚಿದಹಮ್ಮಿಲ್ಲದಿರಬೇಕು,
ಪ್ರಸಾದಲಿಂಗಪ್ರಾಣಿಯಾದಡೆ,
ಪ್ರಾಣಲಿಂಗದೊಳಭಿನ್ನನಾಗಿರಬೇಕು ;
ಪ್ರಸಾದಲಿಂಗ ಪ್ರಸಾದಿಯಾದಡೆ,
ಪ್ರಸಾದ ಪ್ರಸನ್ನವಾಗಿರಬೇಕು ;
ಪ್ರಸಾದಲಿಂಗತೃಪ್ತನಾದಡೆ,
ಇಂದ್ರಿಯಂಗಳ ಇಚ್ಛೆಯಿಲ್ಲದಿರಬೇಕು.”

ಹೀಗೆಂದು ಹೇಳಿ ಆದಯ್ಯ ಶಿವಶರಣ ಸೂಕ್ಷ್ಮಾಗಮ ಭೇದಗಳನ್ನು ಒಪ್ಪಿಕೊಂಡಿದ್ದಾನೆ.

“ಪ್ರಸಾದಲಿಂಗ ಮೋಹಿತನಾದಡೆ, ಅಂಗರುಚಿಗೆ ಇಚ್ಛೈಸಲಾಗದು.
ಪ್ರಸಾದಲಿಂಗಭಕ್ತನಾದಡೆ, ಪೂರ್ವಾಹಾರವಕೊಳ್ಳಲಾಗದು.
ಪ್ರಸಾದಲಿಂಗ ಪೂಜಕನಾದಡೆ, ಅಪ್ರಸಾದಿಗಳಿಗೆ ಉಣಲಿಕ್ಕಾಗದು
ಪ್ರಸಾದಲಿಂಗ ವೀರನಾದಡೆ, ಅನ್ಯರಿಗೆ ಕೈಯಾನಲಾಗದು.
ಪ್ರಸಾದಲಿಂಗ ಪ್ರಸಾದಿಯಾದಡೆ, ಜೀವಹಿಂಸೆಯ ಮಾಡಲಾಗದು.
ಪ್ರಸಾದಲಿಂಗ ಪ್ರಾಣಿಯಾದಡೆ, ಆತ್ಮನಿಗ್ರಹವ ಮಾಡಲಾಗದಂ.
ಇದು ಕಾರಣ, ಕೂಡಲಚನ್ನಸಂಗಯ್ಯನಲ್ಲಿ ಈ ಆರುಸಹಿತ ಪ್ರಸಾದ ಲಿಂಗಭಕ್ತಿ”,

ಶರಣ ತನ್ನ ಪ್ರಸಾದಲಿಂಗದಲ್ಲಿ ಮೋಹ, ಭಕ್ತಿ, ಪೂಜೆ, ಧೃತಿ, ಪ್ರಸನ್ನತೆ, ಪ್ರಾಣಗಳನ್ನು ಇಟ್ಟುಕೊಂಡಿರಬೇಕು. ಇಟ್ಟುಕೊಂಡವನು ಭೂತದಯೆಯುಳ್ಳವನಾಗುತ್ತಾನೆ. ಮತ್ತು ಪ್ರಸಾದಲಿಂಗಾರಾಧನೆಯಿಂದ ಪರಶಿವ ಸಾಯುಜ್ಯವನ್ನು ಪಡೆಯುತ್ತಾನೆ.

ಈ ಕ್ರಮಾರಾಧನೆಯಿಂದ ಈ ಹೆಸರುಗಳು ಬರುತ್ತವೆ. ಪ್ರಸಾದಲಿಂಗ ಮೋಹಿ, ಪ್ರಸಾದಲಿಂಗಭಕ್ತ, ಪ್ರಸಾದಲಿಂಗಪೂಜಕ, ಪ್ರಸಾದಲಿಂಗವೀರ, ಪ್ರಸಾದಲಿಂಗಪ್ರಸಾದಿ, ಪ್ರಸಾದಲಿಂಗ ಪ್ರಾಣಿ ಎಂಬುದಾಗಿ ಹೇಳಿಸಿಕೊಳ್ಳುತ್ತಾನೆ. ಪ್ರಸಾದಲಿಂಗ ಷಡ್ಭಕ್ತನೆನಿಸುತ್ತಾನೆ.

ಪ್ರಸಾದಲಿಂಗ ಮೋಹಿಗೆ ಪ್ರಸಾದಲಿಂಗದ ಪ್ರೇಮವೇ ಪ್ರೇಮವಾಗಿರುತ್ತದೆ. ಬೇರೆ ಯಾವ ದ್ರವ್ಯದ ಅಭಿರುಚಿಯಿರುವುದಿಲ್ಲ. ಪ್ರಾಕೃತಿಕ ಪೂಜೆಯಲ್ಲಿ ಆಸಕ್ತಿಯಿರುವುದಿಲ್ಲ.

ಪ್ರಸಾದಲಿಂಗಭಕ್ತನಿಗೆ ಪೂರ್ವದ ಆಹಾರದಲ್ಲಿ ಆಶೆಯಿರುವುದಿಲ್ಲ.

ಪ್ರಸಾದಲಿಂಗಪೂಜಕನಿಗೆ ಪರರ ಮೈತ್ರಿಯಲ್ಲಿ ಮನಸ್ಸಿರುವುದಿಲ್ಲ. ಇದರಿಂದ ಉಪಯೋಗವೂ ಇರುವುದಿಲ್ಲ.

ಪ್ರಸಾದಲಿಂಗವೀರನು ಪರರ ದ್ರವಿಣವನ್ನು ಕೈಯಿಂದ ಮುಟ್ಟನು. ನಿರಂತರ ನಿಸ್ಪೃಹನಾಗಿರುತ್ತಾನೆ.

ಪ್ರಸಾದಲಿಂಗಪ್ರಸಾದಿಯು ಯಾವುದನ್ನೂ ಕೂಡಕೊಳ್ಳಲು ಕೈಚಾಚನು ಅನ್ಯರ ಪ್ರಸಾದಕ್ಕೆ ಬಾಯ್ದೆರೆಯನು.

ಪ್ರಸಾದಲಿಂಗ ಪ್ರಾಣಿಯು ತಾನೆಂದಿಗೂ ಜೀವಹಿಂಸೆಯನ್ನು ಮಾಡನು' ಮತ್ತೊಬ್ಬರಿಂದ ಮಾಡಿಸನು. ಆತನು ಸರ್ವವೂ ಆತ್ಮಸ್ವರೂಪವೆಂದು ಭಾವಿಸುವನು, ಬೋಧಿಸುವನು.

ಪ್ರಸಾದ ಲಿಂಗಾರಾಧಕ ಶರಣನಿಗೆ ಭೂತದಯೆಯೇ ಜೀವನಸ್ವತ್ತಾಗಿರುತ್ತದೆ. ಭೂತಾತ್ಮನೂ ಭೂಮಾತ್ಮನೂ ಆಗಿರುತ್ತಾನೆ.

"ಭೂತೇಷು ಭೂರ್ತೇಷು ವಿಚಿತ್ಯಧೀರಾಃ ಪ್ರೇತ್ಯಾಸ್ಮಾಲ್ಲೋಕಾದಾಮೃತಾ ಭವಂತಿ

—ಕೇನ್ನೋಪನಿಷತ್

ಪ್ರತಿ ಪ್ರಾಣಿಯಲ್ಲಿಯೂ ಪರಮಾತ್ಮನ ಸಾಕ್ಷಾತ್ಕಾರವನ್ನು ಪಡೆದು ಜನನ ಮರಣಾತ್ಮಕ ಈ ಲೋಕವನ್ನು ದಾಟಿ ಅಂದರೆ ನೋವನ್ನು ನೀಗಿ ಸೊಗವನ್ನು ಪಡೆವ ಧೀರನೆ ಶರಣನು; ಶಾಶ್ವತನು.

"ಪ್ರಸಾದಲಿಂಗ ಮೋಹಿತನಾದಡೆ
ಶಬ್ದಜಾಲಂಗಳಿಗೆ ಕಿವಿಯೊಡ್ಡದಿರಬೇಕು,
ಪ್ರಸಾದಲಿಂಗಭಕ್ತನಾದಡೆ,
ದಾಸೋಹದ ಹಮ್ಮಿಲ್ಲದಿರಬೇಕು;
ಪ್ರಸಾದಲಿಂಗವೀರನಾದಡೆ,
ಚಿದಹಮ್ಮಿಲ್ಲದಿರಬೇಕು,
ಪ್ರಸಾದಲಿಂಗಪ್ರಾಣಿಯಾದಡೆ,
ಪ್ರಾಣಲಿಂಗದೊಳಭಿನ್ನನಾಗಿರಬೇಕು ;
ಪ್ರಸಾದಲಿಂಗ ಪ್ರಸಾದಿಯಾದಡೆ,
ಪ್ರಸಾದ ಪ್ರಸನ್ನವಾಗಿರಬೇಕು ;
ಪ್ರಸಾದಲಿಂಗತೃಪ್ತನಾದಡೆ,
ಇಂದ್ರಿಯಂಗಳ ಇಚ್ಛೆಯಿಲ್ಲದಿರಬೇಕು."

ಹೀಗೆಂದು ಹೇಳಿ ಆದಯ್ಯ ಶಿವಶರಣ ಸೂಕ್ಷ್ಮಾಗಮ ಭೇದಗಳನ್ನು ಒಪ್ಪಿಕೊಂಡಿದ್ದಾನೆ.

"ಪ್ರಸಾದಲಿಂಗ ಮೋಹಿತನಾದಡೆ, ಅಂಗರುಚಿಗೆ ಇಚ್ಛೈಸಲಾಗದು.
ಪ್ರಸಾದಲಿಂಗಭಕ್ತನಾದಡೆ, ಪೂರ್ವಾಹಾರವಕೊಳ್ಳಲಾಗದು.
ಪ್ರಸಾದಲಿಂಗ ಪೂಜಕನಾದಡೆ, ಅಪ್ರಸಾದಿಗಳಿಗೆ ಉಣಲಿಕ್ಕಾಗದು
ಪ್ರಸಾದಲಿಂಗ ವೀರನಾದಡೆ, ಅನ್ಯರಿಗೆ ಕೈಯಾನಲಾಗದು.
ಪ್ರಸಾದಲಿಂಗ ಪ್ರಸಾದಿಯಾದಡೆ, ಜೀವಹಿಂಸೆಯ ಮಾಡಲಾಗದು.
ಪ್ರಸಾದಲಿಂಗ ಪ್ರಾಣಿಯಾದಡೆ, ಆತ್ಮನಿಗ್ರಹವ ಮಾಡಲಾಗದಂ.
ಇದು ಕಾರಣ, ಕೂಡಲಚನ್ನಸಂಗಯ್ಯನಲ್ಲಿ ಈ ಆರುಸಹಿತ ಪ್ರಸಾದ
ಲಿಂಗಭಕ್ತಿ",

ಶರಣಾಂಗಸ್ಥಲ ಸಾರಾಂಶ

"ಕರ್ಮೇಂದ್ರಿಯ ಜ್ಞಾನೇಂದ್ರಿಯ ವಿಷಯಂಗಳ ದುರ್ವರ್ತನ ಗುಣಂಗಳ ತನ್ನ ಸ್ವಾನುಭಾವ ಜ್ಞಾನದಿಂ ಹೇಯವಂತನಾಗಿ ಚಿನ್ನಾದ ಚಿದ್ಬಿಂದು ಚಿತ್ಕಳಾ ಸದ್ಗುರು ಮೂರ್ತಿಕರುಣಾ ಕಟಾಕ್ಷೆಯಿಂದ ಇಪ್ಪತ್ತೊಂದು ಯುಗದಲ್ಲಿ ಪಾವನ ಸತ್ಯ ಸದ್ಗುಣಾನಂದ ಲೀಲೆಯ ಬೆಸಗೊಂಡು ಭಕ್ತ ಮಾಹೇಶ ಪ್ರಸಾದಿ ಪ್ರಾಣಲಿಂಗಿ ಸ್ಥಲವ ಮುಂದುಗೊಂಡು ಪಂಚವಿಧ ಪದಾರ್ಥಂಗಳ ಶರಣಗಣ ಲಿಂಗಜಂಗಮ ಪ್ರಸಾದಲಿಂಗಕ್ಕೆ ನಿವೇದಿಸಿ ನಿರ್ಮಾಯ ಸ್ವರೂಪನಾಗಿಪ್ಪಾತನೆಂಬುದೀಗ ಶರಣನೆಂಬ ಶಬ್ದಕ್ಕರ್ಥ." 'ಹೃದಯಾದಿ ಕಂಠಪರಿಯಂತರ ಆಕಾಶತತ್ತ್ವ; ಆ ತತ್ತ್ವದ ಸಂಚಲ ಗುಣವಳಿದು ಶಿವಸಾದಾಖ್ಯದಿಂ ಆನಂದವೇ ಶರಣಸ್ಥಲ.'

ಶರಣನ ಸ್ವರೂಪದ ಒಮ್ಮುಖ ಒಡಮೂಡಿದೆ ಇದರಲ್ಲಿ. ಸದ್ವರ್ತನಶೀಲ ಸ್ವಾನುಭವಲೋಲ ಆಗಿರಬೇಕು ಶರಣ. ಚಿತ್ಕಳಾಗುರು ಮೂರ್ತಿಯ ಕಾರುಣ್ಯ ರಸದ ಸವಿಯನ್ನು ಸದಾಕಾಲ ಸವಿದಾಡುತ್ತಿರಬೇಕು ಶರಣ. ತನ್ನ ಆದರ್ಶ ಜೀವನದಿಂದ ಯುಗ ಯುಗಾಂತರಗಳನ್ನು ನಿರ್ಮಿಸಬೇಕು. ಅದಕ್ಕಿಂತ ಬೇರಿಲ್ಲ ಸತ್ಯಾನಂದಲೀಲೆ. ಐದು ಪದಾರ್ಥಗಳನ್ನು ಪ್ರಸಾದವನ್ನಾಗಿಸಿಕೊಳ್ಳುವುದೇ ಶರಣನ ನಿರ್ಮಾಯ ಸ್ವರೂಪ. ಈ ಮಾತು ಮನನೀಯ. ಗಂಧ ರಸ ರೂಪ ಸ್ಪರ್ಶ ಶಬ್ದ ಇವು ಪಂಚಪದಾರ್ಥಗಳು. ಇವೆಲ್ಲವೂ ಪ್ರಸಾದವಾಗಬೇಕು ಶರಣನಿಗೆ. ಗಂಧ ಪ್ರಸಾದವಾಗದೆ ರಸಪ್ರಸಾದವಾಗದು ; ರಸಪ್ರದವಾಗದೆ ರೂಪ ಪ್ರಸಾದವಾಗದು ; ರೂಪ ಪ್ರಸಾದವಾಗದೆ ಸ್ಪರ್ಶಪ್ರಸಾದವಾಗದು ; ಸ್ಪರ್ಶ ಪ್ರಸಾದವಾಗದೆ ಶಬ್ದ ಪ್ರಸಾದವಾಗದು. ಶಬ್ದಪ್ರಸಾದವಾಗದೆ ಶರಣನೆನಿಸನು. ಈ ಪಂಚ ಪ್ರಸಾದಗಳಿಂದ ಪ್ರಾಕೃತಿಕಾಂಗವೂ ಪ್ರಸಾದವಾಗುತ್ತದೆ. ಪ್ರಸಾದಲಿಂಗ[illegible]ನಿಗೆ [illegible]ಯುಂಟಾಗುತ್ತದೆ. ಪ್ರಸಾದಿಕ ಸಾಹಿತೆ

ರಚನೆಗೆ, ಪ್ರತಿಭಾವಂತ ಕಾವ್ಯ ಕಾರ್ಯಕ್ಕೆ ಸಾಮರ್ಥ್ಯ ಸಂಭವಿಸುತ್ತದೆ, ಶರಣನಿಗೆ ಪ್ರಾಸಾದಿಕತೆಯೇ ಪೂರ್ಣೋದ್ದೇಶ.

ಶರಣನ ಮನ ಜ್ಞಾನಗಳು ವಾಕ್ಕರ್ಣಗಳು ಪ್ರಸಾದ ರೂಪ ಚೇತನ ಚಿಂತನ-ಮಂಥನಗಳಲ್ಲಿರಬೇಕು; ವಚನ-ಶ್ರವಣಗಳಲ್ಲಿರಬೇಕು. ಆದಾಗಬೇಕಾದರೆ ಆಕಾಶಾಂಗದ ಪೂರ್ವಾಶ್ರಯ ನಿರಸನವಾಗಿ ಚಿದಾಕಾಶದ ಆರಾಧನೆ ಅಳವಡಬೇಕು. ಪಂಚವಿಧ ಭಕ್ತಿ, ಪಂಚವಿಧ ಶಕ್ತಿಗಳ ಸಮನ್ವಯವಾಗಬೇಕು. ಶರಣನಲ್ಲಿ. ಪಂಚಕಲೆ ಪಂಚಕಳೆಗಳಿಂದ ಕೂಡಿರಬೇಕು ಶರಣ. ಮೀರಿದ ಕ್ರಿಯೆಯ ಎರಡನೆಯ ಹಂತವನ್ನು ಹತ್ತಿ ನಿಂತಿರಬೇಕು. ಜ್ಞಾನ ಶುದ್ಧಿ ಸುಜ್ಞಾನ ಸಿದ್ಧಿ ಉಂಟಾಗಿ ಮಹಾಜ್ಞಾನ ಮೈಗೂಡಿರಬೇಕು.

ಶರಣನಿಗೆ ಶಿವನೆ ಪಂಚಪ್ರಾಣ; ಪರಮ ಜೀವನ ಶರಣನ ವಾಣಿಯಲ್ಲಿ ಶಿವನಾಮ, ಕಿವಿಯಲ್ಲಿ ಶಿವಕೀರ್ತಿ, ಮನದಲ್ಲಿ ಶಿವಧ್ಯಾನ, ಜ್ಞಾನದಲ್ಲಿ ಶಿವ ಧಾರಣ ನೆಲೆಗೊಂಡಿರುತ್ತವೆ. ಮತ್ತೊಂದನ್ನರಿಯನು, ಮಂಗಳೇತರ ಕಾರ್ಯಗಳನ್ನು ಮಾಡುನು. "ಮಂಡೆಯ ಬೋಳಿಸಿಕೊಂಡು ಗಂಡುದೊತ್ತು ವೊಕ್ಕೆನಯ್ಯಾ ಲಜ್ಜೆಗೆಟ್ಟಾದರೂ ಲಿಂಗವನೊಲಿಸುವೆ, ನಾಣುಗೆಟ್ಟಾದರೂ ಲಿಂಗವನೊಲಿಸುವೆ! ಕೆಲದ ಸಂಸಾರಿಗಳು ನಗುತಿರ್ದೊಡಿರಲಿ, ಕೂಡಲಸಂಗಮದೇವಾ, ಶರಣಾಗತಿ ವೊಕ್ಕೆನಯ್ಯಾ !" ಇದು ಶರಣನ ಶೈವೀಭಲ. ಶೈವೀ ಶೀಲ.

"ಕಂಡುದಕ್ಕೆ ಳಸೆನೆನ್ನ ಮನದಲ್ಲಿ, ನೋಡಿ ಸೋಲೆನೆನ್ನ ಕಣ್ಗಳಲ್ಲಿ, ಅಡಿ ಹುಸಿಯೆನೆನ್ನ ಜಿಹ್ವೆಯಲ್ಲಿ, ಕೂಡಲಸಂಗಮದೇವಾ, ನಿಮ್ಮ ಶರಣನ ಪರಿ ಇಂತುಟಯ್ಯಾ." ಲಿಂಗದಲ್ಲಿ ಸಮ್ಯಕ್ಕರು; ಲಿಂಗದಲ್ಲಿ ಸದರ್ಥರು ಶಿವಶರಣರು ಶಿವನ ನಂಬಿದ ಶರಣರು ಮಹಿಮರು, ಸುಚರಿತ್ರರು ಶಿವರಸದ ವಾರುಧಿಗಳು; ಶಿವಾನುಭಾವ ಸುಖಿಗಳು ಕಾಲಕರ್ಮರಹಿತರು. ಭವವಿರಹಿತರು. ಶರಣನಿದ್ದೆಗೆಯ್ದರೆ ಸಮಾಧಿಕಾಣಿರೋ! ಶರಣನೆದ್ದು ಕುಳಿತರೆ ಶಿವರಾತ್ರಿಕಾಣಿರೋ! ಶರಣ ನಡೆದುದೆ ಪಾವನ, ಶರಣ ನುಡಿದುದೆ ಶಿವತತ್ತ್ವಕಾಣಿರೋ ! ಕೂಡಲಸಂಗನ ಶರಣನ ಕಾಯವೇ ಕೈಲಾಸ ಕಾಣಿರೋ! ತೆರಹಿಲ್ಲದ ನಡೆ, ತೆರಹಿಲ್ಲದ ನುಡಿ,

ತೆರಹಿಲ್ಲದ ಸಂಭಾಷಣೆಯು ಸುಖವು; ತೆರಹಿಲ್ಲದೆ ನಂಬಿದ ಸ್ವಾನುಭಾವ ಸುಖವು. ತೆರಹಿಲ್ಲದ ಮಹಿಮೆ, ತೆರಹಿಲ್ಲದ ವಿಚಾರ, ಕೂಡಲಸಂಗಮದೇವಾ ನಿಮ್ಮ ಶರಣಂಗೆ!" ಇದರಿಂದಾಗಿ ಆ ಪರಶಿವನ ಪ್ರಮಾಣ ಶರಣ ಬಲ್ಲ. ಶಿವನಿಗೆ ಶರಣನೇ ಎಲ್ಲ.

ಶಿವನೇ ತಾನಾದ ಶರಣನಿಗೆ ಭವವೆಂದರೇನು ? ಬಂಧನವೆಂದರೇನು ? ಆತನ ಭವವೂ ಶಿವವಾಗುತ್ತದೆ.

"ಪರುಷಕ್ಕೆ ಬೆಲೆಯಿಲ್ಲ, ಪ್ರಾಣಕ್ಕೆ ನಿರ್ಮಾಲ್ಯವಿಲ್ಲ.
ರುಚಿಗೆ ಎಂಜಲವಿಲ್ಲ, ಸುಖಕ್ಕೆ ಆರೋಚಕವಿಲ್ಲ.
ಗುಹೇಶ್ವರಾ, ನಿಮ್ಮ ಶರಣಂಗೆ ಭವವಿಲ್ಲ, ಬಂಧನವಿಲ್ಲಯ್ಯಾ!"

"ಲಿಂಗ ಶರಣನ ಪಂಚೇಂದ್ರಿಯಂಗಳು ಲಿಂಗಮುಖವಾಗಿ ನಿಂದು
ಮನಸಹಿತ ಪಂಚವಿಷಯಂಗಳಖಿಲ ಸುಖಂಗಳ
ಲಿಂಗಾರ್ಪಿತದಿಂದ ಚರಿಸುತ್ತ ಬೇರೆ ಮತ್ತೊಂದು ದೆಸೆ
ಇಲ್ಲದೆ ನಿಂದಿಹವು, ಸೌರಾಷ್ಟ್ರ ಸೋಮೇಶ್ವರಲಿಂಗ
ನಿವಾಸಿಯಾದ ಶರಣಂಗೆ !"

"ಹರಣವಿದ್ದು ಹರಣವಿಲ್ಲ, ಹರಣ ಲಿಂಗದಲ್ಲಿ ನಿರಿಯಾಣವಾಯಿತ್ತಾಗಿ!
ಮನವಿದ್ದು ಮನವಿಲ್ಲ, ಮನವ ಮಹದಲ್ಲಿ ಲಯವಾಯಿತ್ತಾಗಿ !
ಜೀವವಿದ್ದು ಜೀವವಿಲ್ಲ, ಜೀವ ಸಜ್ಜೀವವಾಗಿ ಪರಮನಲ್ಲಿ ಐಕ್ಯವಾಯಿತ್ತಾಗಿ!
ಭಾವವಿದ್ದು ಭಾವವಿಲ್ಲ, ಭಾವ ನಿರ್ಭಾವದಲ್ಲಿ ನಿಂದಿತ್ತಾಗಿ!
ಕರಣಂಗಳಿದ್ದು ಕರಣಂಗಳಿಲ್ಲ, ಕರಣಂಗಳು ಲಿಂಗದ ಕಿರಣಂಗಳ ನೈದಿದವಾಗಿ!
ಇಂತು ಸರ್ವವಿದ್ದು ಸರ್ವವಿಲ್ಲ. ಇದು ಕಾರಣ,
ಸೌರಾಷ್ಟ್ರ ಸೋಮೇಶ್ವರಾ. ನಿಮ್ಮ ಶರಣರು, ಉಂಡು ಉಪವಾಸಿಗಳು ಬಳಸಿ ಬ್ರಹ್ಮಚಾರಿಗಳು."

ಶಬ್ದಬ್ರಹ್ಮ ಶರಣ

"ಕಂಗಳ ಕರುಳ ಕೊಯ್ದವರ
ಮನದ ತಿರುಳ ಹುರಿದವರ
ಮಾತಿನ ಮೊದಲ ಬಲ್ಲವರ
ಎನಗೊಮ್ಮೆ ತೋರಾ ಗುಹೇಶ್ವರಾ !"

ಸೃಷ್ಟಿ ದೃಷ್ಟಿಯೊಳಗಡಗಿ, ದೃಷ್ಟಿ ದಿವ್ಯಲಿಂಗದೊಳಗಡಗಿದವರು ಮತ್ತು ಮನದ ಸಂಕಲ್ಪ ವಿಕಲ್ಪ ಸಂಶಯ ವಿಪರ್ಯಯಗಳನ್ನೆಲ್ಲ ತೊಡೆದು ನಿರ್ಮಲ ಮನವನ್ನು ಜ್ಞಾನ ಲಿಂಗದಲ್ಲಿ ಇರಿಸಿದವರು ಮಾತಿನ ಮೊದಲ ತಿಳಿಯಬಲ್ಲರು. ವ್ಯರ್ಥವಾದ ಅರ್ಥವಿಲ್ಲದ ವಾಗ್ ವ್ಯವಹಾರಗಳನ್ನೆಲ್ಲ ನಿಲ್ಲಿಸಿ ಅಂದರೆ ಮಾತಿನ ಮಥನಕ್ಕೆ ಸಿಕ್ಕದೆ ಮಾತಿನ ರುಚಿಗೆ ಮರುಳಾಗದೆ ಮಾತನ್ನು ಮಂತ್ರವಾಗಿಸ ಬಲ್ಲವರು ಮಾತಿನ ಮೂಲವನ್ನು ಅರಿಯ ಬಲ್ಲರು. ಮಾತೆಂಬ ಜ್ಯೋತಿರ್ಲಿಂಗದ ಸಾಕ್ಷಾತ್ಕಾರವನ್ನು ಸಂಪಾದಿಸಿದವನು ಆಕಾಶಾಂಗನಾದ ಶರಣನು. ಶರಣನು ಸಾಮಾನ್ಯವಾಗಿ ಶಬ್ದ ಮುಗ್ಧನಾಗಿ ಶಬ್ದ ಬ್ರಹ್ಮನೆನಿಸಿರುತ್ತಾನೆ. ಅಂತಹ ಶರಣನ ಸಂದರ್ಶನ ಮಾತ್ರದಿಂದ ಕೃತಾರ್ಥರಾಗುತ್ತಾರೆ ಜನರು.

ಶರಣನ ಶಬ್ದ ಜ್ಞಾನ ಪ್ರಮಾಣಾತೀತ, ಪರಿಪೂರ್ಣ. ಆತನು ಉಚ್ಚರಿಸಿದ ಶಬ್ದದಲ್ಲಿ ಸರ್ವಶಕ್ತಿಗಳಿರುತ್ತವೆ. ಶ್ರೇಷ್ಠ ಚೈತನ್ಯವಿರುತ್ತದೆ. ಶಬ್ದಮಯ ಶರಣಾಂಗನಲ್ಲಿ ಅರ್ಥಮಯ ಲಿಂಗವಿರುತ್ತದೆ. ಶರಣನ ಶಬ್ದದಲ್ಲಿ ಪಂಚತನ್ಮಾತ್ರಗಳೂ ಪಂಚಾಮೃತವೂ ಸಂಗಮವಾಗಿರುತ್ತವೆ. ಸ್ವಾನುಭವ ತುಂಬಿರುತ್ತದೆ. ಅನುಭವ ಪ್ರಮಾಣವಿಲ್ಲದೆ ಆತನು ಆಡುವುದಿಲ್ಲ. ಆತನಿಗೆ ಬೇರೆ ಪ್ರಮಾಣಗಳು ಪ್ರಾಮುಖ್ಯವಲ್ಲ.

"ವೇದ ಪ್ರಮಾಣವಲ್ಲ; ಶಾಸ್ತ್ರಪ್ರಮಾಣವಲ್ಲ;
ಶಬ್ದ ಪ್ರಮಾಣವಲ್ಲ ಕಾಣಿಭೋ ಲಿಂಗಕ್ಕೆ
ಅಂಗಸಂಗದ ಮಧ್ಯದಲ್ಲಿರ್ದು ಬೈಚಿಟ್ಟು ಬಳಸಿದ–
ಗುಹೇಶ್ವರಾ ನಿಮ್ಮ ಶರಣ."

ಪರಮಜ್ಞಾನಿ ಪರಮಾನುಭಾವಿಯಾದ ಶರಣನಿಗೆ ಶಾಸ್ತ್ರ ಪ್ರಮಾಣ ಮುಖ್ಯವಲ್ಲ. ಶಬ್ದ ಪ್ರಯಾಣ ಮುಖ್ಯವಲ್ಲ. ಶಬ್ದಕ್ಕೆ ಶಾಸ್ತ್ರಕ್ಕೆ ಮೂಲವಾದ ಆ ಪರಾಶಕ್ತಿ ಪರಶಿವ ಚೈತನ್ಯ ಮುಖ್ಯ. ಶಾಸ್ತ್ರ ಜಾಲದಲ್ಲಿ ಬಿದ್ದವನು ಶಬ್ದ ಮೋಹಕ್ಕೆ ಸಿಕ್ಕವನು ನೇರ ದಾರಿ ಗಾಣದೆ ಗುರಿ ನಿಲುಕದೆ ಬಳಲುವನು, ಅದೇ ಶರಣನು ಸ್ವಾನುಭವದ ಬೆನ್ನುಹತ್ತಿ ಶಿವ ಸುಖಿಯಾಗುವನು. ಶರಣನ ಅನುಭವವು ಶಬ್ದದ ಬೆನ್ನು ಹತ್ತುದು. ಪ್ರತಿಯಾಗಿ ಭಾಷೆಯೇ ಆತನ ಅನುಭಾವದ ಬೆನ್ನು ಹತ್ತುತ್ತದೆ.

"ನಿರಾಳವೆಂಬ ಕೂಸಿಂಗೆ ಬೆಣ್ಣೆಯನಿಕ್ಕಿ
ಹೆಸರಿಟ್ಟು ಕರೆದವರಾರೋ ?
ಅಕಟಕಟಾ, ಶಬ್ದದ ಲಜ್ಜೆಯ ನೋಡಾ !
ಗುಹೇಶ್ವರನರಿಯದ ಅನುಭವಿಗಳೆಲ್ಲರ ತರಕಟ ಕಾಡಿತ್ತು."

ಆ ಪರವಸ್ತು ನಿರಾಳ, ನಿರವಯುಲ, ನಿರ್ವಾಚ್ಯ. ಅಂತಹದನ್ನು 'ವಾಗ್ಬ್ರಹ್ಮಿಗಳು ಬರಿಯ ಅರಿವಿನ ಸವಿಬೆಣ್ಣೆಯ ವಶಪಡಿಸಿ ಹೆಸರಿಟ್ಟು ಕರೆದರೆ ಅಂದರೆ ನಾಮ ಮಾತ್ರಕ್ಕೆ ತಂದರೆ ಅದು ಸಾಧ್ಯವಾಗದು ; ಸ್ವಾನುಭವವಿಲ್ಲದ ಶಬ್ದಕ್ಕೆ ಅದೇ ಒಂದು ಲಜ್ಜೆ. ಜೊಳ್ಳು ಮಾತಿನ ಅರಿಕೆಯನ್ನು ಅನುಭವವೆಂದು ಹೇಳುವವರಿಗೆ ಸ್ವರೂಪಸಿದ್ಧಿಯಾಗದು.

"ಧಾತು ಮಾತು ಪಲ್ಲಟಿಸಿದಡೆ ಗಮನವೆಲ್ಲಿಯದೋ ?
ಧ್ಯಾನ ಮೌನವೆಂಬುದು ತುನುಗುಣ ಸಂದೇಹವಯ್ಯಾ !
ಸುಜ್ಞಾನಭರಿತ ಅನುಪಮ ಸುಖಿ ಗುಹೇಶ್ವರಾ, ನಿಮ್ಮ ಶರಣನು."

ತನ್ನ ಸ್ವರೂಪವನರಿಯದೆ ನಿಜದ ನಿಲವ ನೋಡದೆ ಬರೀ ನುಡಿಯುವವರಿಗೆ ಗತಿಯಿಲ್ಲ, ಅನುಭೂತಿ ಮುನ್ನವೇ ಇಲ್ಲ. ಏನು ಕೆಟ್ಟರೂ ಧಾತು ಕೆಡ

ಬಾರದು ; ಏನು ತಪ್ಪಿದರೂ ಮಾತು ತಪ್ಪಬಾರದು ; ನುಡಿದು ನಡೆಯದಿದ್ದರೆ. ಅದೇ ಹುಸಿ ; ಅದೇ ತಪ್ಪು. ಮಾತು ಪಲ್ಲಟವಾದರೆ ಬಾಳು ಬದುಕು ಪಲ್ಲಟವಾಗುತ್ತದೆ. ಧ್ಯಾನಸಂಕಲ್ಪ ಮೌನಸಂಕಲ್ಪ ನಿಜದ ನಿರ್ಣಯಕ್ಕೆ ನಿಲುಕಿಸವು. ಅವು ತನುಗುಣವೆನಿಸಿ ಸಂಶಯಕ್ಕೆ ಎಡೆಯಾಗುತ್ತದೆ. ಸಹಜವಾಗಬೇಕಲ್ಲದೆ ಸಂಕಲ್ಪಕಾರಣವಾಗಿರಬಾರದು. ಅಲ್ಲದೆ ಲಿಂಗಮೆಚ್ಚಿ ನುಡಿದ ನುಡಿ ಮಾತುಗಾರಿಕೆಯಲ್ಲ ; ಅದು ಮೌನಕ್ಕಿಂತ ಧ್ಯಾನಕ್ಕಿಂತ ಹೆಚ್ಚಿನದು. ಆದ್ದರಿಂದ ಸುಜ್ಞಾನ ರೂಪ ಸ್ವಾನುಭವ ಭರಿತ ವಾಗ್ಗೋಷ್ಠಿಯುಳ್ಳವನು ಅನುಪಮ ಸುಖಿಯಾಗುವನು ; ಅವನೇ ಶಿವಶರಣನೆನಿಸುವನು. ಆತನಾಡಿದ್ದೆಲ್ಲ ಪರಮ ಪ್ರಸಾದ. ಆತನದು ಪ್ರಾಸಾದಿಕ ವಾಣಿ.

ಶರಣವಾಣಿ ಪರಶಿವನ ವಾಹನ. ಶರಣನ ಆ ಪರಾವಾಣಿಯೆಂಬ ಬೆಳುಗುದುರೆಯನೇರಿ ಪರಶಿವನು ಪ್ರಯಾಣ ಮಾಡುತ್ತಾನೆ. ಪ್ರಣವಮೂರ್ತಿಯಾಗಿ ವೈಖರಿಯಲ್ಲಿ ವಿರಾಜಿಸುತ್ತಾನೆ. ಪ್ರಣವಾಶ್ವಕ್ಕೆ ನಾಲ್ಕು ಮಾತ್ರೆಗಳೇ ನಾಲ್ಕು ಕಾಲುಗಳು. ಅಥವಾ ಚತುರ್ವಿಧ ವಾಣಿಗಳೇ ಚತುಷ್ಪಾದಗಳು.

“ಸ್ವರವೆಂಬ ಕುದುರಗೆ ವಿಷ್ಣುವೆಂಬ ಕಡಿವಾಣ,
ಚಂದ್ರಸೂರ್ಯರೆಂಬ ಅಂಕಣೆ ; ಬ್ರಹ್ಮವೆ ಹಲ್ಲಣ,
ಸುರಾಳವೆಂಬಲ್ಲಿ ನಿರಾಳವಾಯಿತ್ತು —
ಗುಹೇಶ್ವರನೆಂಬ ರಾವುತಂಗೆ !”

ಶರಣನ ಪ್ರಣಸ್ವರವೆ ಕುದುರೆ. ಆ ಕುದುರೆಗೆ ಆದಿಶಕ್ತಿ ಸ್ವರೂಪನಾದ ವಿಷ್ಣುವೇ ಕಡಿವಾಣ, ಆದಿಶಕ್ತಿಯೇ ಅರ್ಥಶಕ್ತಿ. ಅರ್ಥಶಕ್ತಿಯಿಂದ ಪ್ರಣವಪ್ರಜ್ಞೆಯುಂಟಾಗುತ್ತದೆ. ಪ್ರಣವ ಸ್ವರೂಪ ಸಂಪ್ರಾಪ್ತವಾಗುತ್ತದೆ. ಕಡಿವಾಣದಿಂದ ಕುದುರೆ ವಶವರ್ತಿಯಾಗಿರುವಂತೆ ಪ್ರಣವಾರ್ಥಮನನದಿಂದ ಪ್ರಣವಸ್ವರೂಪವಶವಾಗುತ್ತದೆ. ಚಂದ್ರಸೂರ್ಯರೆಂಬ ಹೆಸರುಳ್ಳ ಇಡಾಪಿಂಗಳಾನಾಡಿಗಳೇ ಎರಡು ಪಾದಗಳನ್ನಿಡುವ ಅಥವಾ ಮೆಟ್ಟುವ ಅಂಕಣೆ (ರಿಕಾಪು)ಗಳು. ಇಡಾಪಿಂಗಳ ನಾಡಿಗಳ ಆಶ್ರಯದಲ್ಲಿಯೇ ಸ್ವರ ಸಂಚರಿಸಬೇಕು. ಬ್ರಹ್ಮನಾಳವೆ ಹಲ್ಲಣ. ಹಲ್ಲಣವೆಂದರೆ ತಡಿ ಅಥವಾ ಜೀನು. ಸ್ವರ ಬ್ರಹ್ಮನಾಳದಲ್ಲಿ

ನೆಲಸಿರುತ್ತದೆ. ಇದರಿಂದಾಗಿ ಬ್ರಹ್ಮವೆ ಹಲ್ಲಣ, ಹೀಗೆ ಸಗುಣದಿಂದ ನಿರ್ಗುಣಕ್ಕೆ ಗಮನಿಸುತ್ತದೆ; ಪಯಣ ಮಾಡುತ್ತದೆ. ಆ ಕುದುರೆಯನ್ನೇರಿ ಕುಳಿತರಾವುತನೆಂದರೆ ಗುಹೇಶ್ವರನು. ಹೀಗೆ ಶರಣನ ಸ್ವರದಲ್ಲಿ ಪರಶಿವ ಬ್ರಹ್ಮವು ಸದಾ ಸಂಚರಿಸುತ್ತದೆ. ಆತನ ಶಬ್ದವೆಲ್ಲ ಪರಬ್ರಹ್ಮಸ್ವರೂಪವಾಗಿರುತ್ತದೆ.

"ಹಿಂದಣ ಕವಿಗಳೆನ್ನ ತೊತ್ತಿನ ಮಕ್ಕಳು.
ಮುಂದಣ ಕವಿಗಳೆನ್ನ ಕರುಣದ ಕಂದಗಳು.
ಆಕಾಶದ ಕವಿಗಳೆನ್ನ ಶೊಟ್ಟಿಲ ಕೂಸುಗಳು.
ಹರಿಬ್ರಹ್ಮರೆನ್ನ ಕಕ್ಷಕುಳ.
ನೀ ಮಾವ, ನಾನಳಿಯ ಗುಹೇಶ್ವರಾ."

ಬುದ್ಧಿಪ್ರಧಾನರಾದ ತ್ರಿಕಾಲದ ಕವಿಗಳೆಲ್ಲರೂ ಶರಣನಿಗೆ ಶಿಶುಗಳು. ಭಾವಪ್ರಧಾನನಾದ ಶರಣ ಪ್ರೌಢನಾದ ಶಿವಕವಿ. ಈತ ಶಿವಜ್ಞಾನಿ ಮಾತ್ರವಲ್ಲ ಶಿವಾನುಭಾವಿ. ಇತರ ಕವಿಗಳು ಈತನಿಂದ ಉಪಜೀವಿಗಳು. ಹರಿಬ್ರಹ್ಮಾದಿಗಳು ಶರಣನ ಕಂಕುಳ ಕುಳುಗಳು. ಅಂದರೆ ಬಗಲಿನಲ್ಲಿ ಸಿಕ್ಕುಬಿದ್ದಿರುವವರು. ಇನ್ನು ಆ ಚಿಚ್ಛಕ್ತಿ ಪರಶಿವನಿಂದ ಹುಟ್ಟಿ ಮಗಳಾಗಿರುವಳು. ಅವಳನ್ನು ಒಲಿಸಿಕೊಂಡು ಒಡಗೂಡಿದ ಕಾರಣ ಶರಣ ಪರಶಿವನಿಗೆ ಅಳಿಯ, ಮಗಳ ಗಂಡ. ಅಂದರೆ ಚಿಚ್ಛಕ್ತಿ ಸಂಪನ್ನ ಶರಣ. ಆತನ ಅರಿವು ಅಗ್ಗಳಿಕೆಯುಳ್ಳುದು. ಅದು ಇದಿರಿಟ್ಟು ಅರಿಯುವ ಅರಿವಲ್ಲ. ಅವಿರಳವಾಗುವ ಅರಿವು. ಆತನ ಆ ಚಿತ್‌ಶಕ್ತಿ ಅಗಾಧವಾದುದು. ತಾನೇ ತಾನಾಗುವ ನಿಲವುಳ್ಳುದು. ಆತನೇ ಒಂದು ದಿವ್ಯಕಾವ್ಯವಾಗಿರುತ್ತಾನೆ. ಲಿಂಗಸಾಹಿತ್ಯವಾಗಿರುತ್ತಾನೆ.

ಆಕಾಶಾಂಗನಾದ ಶರಣನಿಗೆ ಸಹಜವಾಗಿ ಶಬ್ದಜನಕತ್ವವಿದೆ. ಬಯಲಿಕೆ ಬಣ್ಣವಿಡುವ ಭಾವ ಬಲುಮೆಯಿದೆ. ಜತೆಗೆ ಪ್ರಸಾದಲಿಂಗಸಾಧಕನಾದ ಶರಣ

ಪ್ರಾಸಾದಿಕ ಶಬ್ದ ಸ್ವರೂಪವೇ ಆಗುವಲ್ಲಿ ಅಚ್ಚರಿಯೇನಿಲ್ಲ ; ಹೆಚ್ಚಿನದೇನಲ್ಲ. ಅನುಭವಾನಂದದೊಳಗಿನ ಅಚ್ಚಕುರುಹು ಶರಣ. ಶಿವಶಬ್ದದೊಳಗಿನ ಸುಳುಹು ಶರಣ. ಅಂದರೆ ಶಬ್ದಚೈತನ್ಯ ಶರಣ. ಶರಣನ ಸುಶಬ್ದ ಪ್ರಸಾದ ಅದೊಂದು ಸಚ್ಚಿತ್ತಮೋದ-ಬ್ರಹ್ಮವನ್ನೆ ಶಬ್ದವನ್ನಾಗಿಸುವ ಸಮರ್ಥ ಶರಣ. ಪರಾವಾಕ್ ಶಕ್ತಿಯುಕ್ತ ಪ್ರಸಾದಲಿಂಗರೂಪ ಪರಬ್ರಹ್ಮ ಸ್ವರೂಪ ಶರಣ ಬೇರಲ್ಲ, ವಿಜ್ಞಾನ ರೂಪ ಪರಬ್ರಹ್ಮ ಬೇರಲ್ಲ. ಎರಡಾಗಿಯೂ ಇರಬಲ್ಲ, ಒಂದಾಗಿಯೂ ಇರಬಲ್ಲ.

ಉತ್ತರ ಭಾಗ

(ಪ್ರಸಾದಲಿಂಗ ಸಂಪುಟ)

ಲಿಂಗಸ್ಥಲಂಗಳು

ಪ್ರಸಾದಲಿಂಗಂ—

ಶಿವಾಖ್ಯಂ ಪರಮಂ ಬ್ರಹ್ಮ
ಪರಮಾಕಾಶಲಕ್ಷಣಮ್ ।
ಲಿಂಗಮಿತ್ಯುಚ್ಯತೇ ಸದ್ಭಿಃ
ಯದ್ವಿನಾ ನ ಜಗತ್ಸ್ಥಿತಿಃ ॥

—ಶ್ರೀ ಶಿವಾಚಾರ್ಯ

ಪ್ರಸಾದಿಸ್ಥಲದ ಲಿಂಗಸ್ಥಲಂಗಳು

(ನಿರವಯ ಸ್ಥಲ ನಿರೂಪಣ)

ಪ್ರಸಾದಲಿಂಗ ಪರಿಜ್ಞಾನ:

‘ಪ್ರಸಾದಲಿಂಗ’ ಇದೊಂದು ಸಮಸ್ತಪದ. ಇದರಲ್ಲಿ ಎರಡು ಶಬ್ದಗಳಿವೆ. ಒಂದು ಪ್ರಸಾದಪದ; ಇನ್ನೊಂದು ಲಿಂಗ ಪದ. ಇವುಗಳಲ್ಲಿ ಪ್ರಥಮವಾಗಿ ಪ್ರಸಾದ ಪದ ಪರಿಚಯ ಅಥವಾ ಪರಿಜ್ಞಾನ. ಕ್ರಮಪ್ರಾಪ್ತ-ಅಗತ್ಯ.

ಪ್ರಸಾದವೆಂದರೆ ಅನುಗ್ರಹ, ಅನುಗ್ರಹಿಸಿ ಕೊಟ್ಟುದು, ಅಮಳತೆ, ಆನಂದ, ಕಾವ್ಯ ಗುಣಗಳಲ್ಲೊಂದು - ಇವೆ ಮೊದಲಾದ ಅರ್ಥಗಳಿವೆ. ಪ್ರಸಾದಲಿಂಗವೆಂದರೆ ಪ್ರಸನ್ನತೆಗೆ ಅಧಿಷ್ಠಾನವಾದ ಚೈತನ್ಯ. ನಿರ್ಮಳಾತ್ಮ ಪರಾಶಕ್ತಿ-ಶಾಂತ್ಯತೀತಕಲೆಯುಳ್ಳ ವಸ್ತು. ಶಿವ ಸಾದಾಖ್ಯಸ್ವರೂಪ. ಯ-ಕಾರ ಮಂತ್ರಾಕ್ಷರಾತ್ಮಕ. ದರ್ಪಣಾಕಾರ, ಶ್ರೋತ್ರನಿಷ್ಠ. ಈಶಾನ ಮುಖವುಳ್ಳುದು. ಸುಶಬ್ದ ಪ್ರಸಾದಕಾರಿ. ಪೂರ್ಣ ಲಕ್ಷಣ ಲಕ್ಷಿತ. ವಿಶುದ್ಧಿ ಚಕ್ರಗತ. ಅನಾದಿ ವಸ್ತು ಸಂಜ್ಞೆ ಸಹಿತ, ಕಪೋತ ಕಳೆಯುಳ್ಳುದು.

ಲಿಂಗಮೈಶ್ವರಂ ತೈಜಸಂ ಪರಂ ಜ್ವಾಲಾ ಮಾಲಾವೃತಂ ದಿವ್ಯಮಪ್ರಮೇಯಮನಾಮಯಂ ಲೀಯಂತೇ ಮೂರ್ಧ್ನಿ ವೈ ವೇದಾಸ್ಸ ಷಡಂಗಪದಕ್ರಮಾಃ । ಜಠರೇ ಲೀಯಂತೇ ಸರ್ವಂ ಜಗತ್ ಸ್ಥಾವರ ಜಂಗಮಂ । ಪುನರುತ್ಪದ್ಯತೇ ಯಸ್ಮಾತ್ತದ್ಬ್ರಹ್ಮ ಲಿಂಗಸಂಜ್ಞಕಂ॥ ಪ್ರಣವೋ ವೇದಿರಸ್ಯಾಯಂ ನಾದೋ ಲಿಂಗಾಕೃತಿರ್ಮನೇ । ಬಿಂದುನಾದಮಯೇ ಲಿಂಗೇ ನಿತ್ಯಂ ಸನ್ನಿಹಿತಃ ಶಿವಃ॥ [illegible] ಮಹಾ

ಲಿಂಗ ಪ್ರಸಾದಾಭಿಖ್ಯಕಂ ದ್ವಯಂ । ಪ್ರಸಾದಲಿಂಗಂ ಕಥಿತಮೀಶಾನಮುಖ
ಸಂಜ್ಞಕಂ ।

—ಚಂದ್ರಜ್ಞಾನಾಗಮ, ಪ-3

ಈಶ್ವರನ ಪರಮ ಪ್ರಕಾಶವೆ ಲಿಂಗ. ಅದು ತೇಜಪುಂಜ, ದಿವ್ಯ, ಅಪ್ರಮೇಯ, ಅನಾಮಯ. ಲಿಂಗದ ಮಸ್ತಕದಲ್ಲಿ ಷಡಂಗಗಳಿಂದ ಕೂಡಿದ ನಾಲ್ಕು ವೇದಗಳಿವೆ. ಅದರ ಗರ್ಭದಲ್ಲಿ ಜಡಜಂಗಮಾತ್ಮಕವಾದ ಸರ್ವ ಜಗತ್ತಿದೆ ; ವ್ಯಕ್ತಾವ್ಯಕ್ತರೂಪದಲ್ಲಿರುತ್ತದೆ. ಪ್ರಣವಾತ್ಮಕವಾದ ಲಿಂಗವು ನಾದಾತ್ಮಕವೂ ಬಿಂದ್ವಾತ್ಮಕವೂ ಆಗಿದೆ. ಈ ಲಿಂಗದಲ್ಲಿ ಶಿವನು ನಿತ್ಯ ಸನ್ನಿಹಿತವಾಗಿರುತ್ತಾನೆ. ಆದನ್ನು ಅರ್ಚಿಸುವವನಿಗೆ ಅದು ಅಂತರಂಗದ ಐಶ್ವರ್ಯವನ್ನು ಅನುಗ್ರಹಿಸುತ್ತದೆ. ಅದರಿಂದ ಅದು ಪ್ರಸಾದಲಿಂಗವೆನಿಸಿದೆ. ಆದು ಭಾವಲಿಂಗದಿಂದ ಉದಯವಾಗಿದೆ. ಈಶಾನಮುಖವುಳ್ಳದಾಗಿದೆ. ಭಾವ ಪ್ರಸಾದವನ್ನು ಜ್ಞಾನ ಪ್ರಸಾದವನ್ನು ಅದು ಅನುಗ್ರಹಿಸುತ್ತದೆ.

ಯೋಗಾಂಗ ಜ್ಞಾನ ಚೈತನ್ಯ ಪ್ರಸಾದಲಿಂಗ. ಪ್ರಸನ್ನತೆಯನ್ನು ಪ್ರಕಾಶವನ್ನು ಸರ್ವಾಂಗಕ್ಕೆ ಪ್ರಸರಣ ಮಾಡುತ್ತದೆ. ಜತೆಗೆ ನಾದ ಪ್ರಸರಣವನ್ನೂ ಮಾಡುತ್ತದೆ. ನಾದ ಗ್ರಾಹಕ ಶಕ್ತಿಯೂ ಇದೆ. ಪರಾವಾಕ್ ಶಕ್ತಿಗೆ ಪ್ರೇರಕವೂ ಆಗಿದೆ. ಪಾದೋದಕ ಪ್ರಸಾದ, ನಿಷ್ಪತ್ತಿ, ಆಕಾಶ, ಪ್ರಕಾಶಗಳಿಗೆ ಆಶ್ರಯವಾಗಿದೆ. ಶ್ರೋತ್ರಕ್ಕೆ ಶ್ರೋತ್ರವಾಗಿದೆ ಪ್ರಸಾದಲಿಂಗ. ಷೋಡಶಸ್ವರಾಕ್ಷರ ಸ್ವರೂಪವೇ ಪ್ರಸಾದಲಿಂಗ. ಶಬ್ದವಿಷಯವನ್ನು ಪ್ರಸಾದವನ್ನಾಗಿಸುವುದರಿಂದ ಇದು ಪ್ರಸಾದಲಿಂಗ.

"ಜ್ಯೋತಿರ್ಮಯಂ ನಿಜಮಖಂಡ ಮತೀಂದ್ರಿಯಾರ್ಥಂ
ಜ್ಞಾನೋಪಲಬ್ಧ ಮಮೃತಂ ಪರಿಣಾಮಬೀಜಂ ।
ಸಾದಾಖ್ಯ ತತ್ತ್ವಮುದಿತಂ ಪರಯಾಸ್ವಶಕ್ತ್ಯಾ
ಪ್ರಾಹುಃ ಪ್ರಸಾದ ಘನಲಿಂಗಮುಪಾಧಿಹೀನಂ ॥"

—ಶಿವಾನುಭವ ಸೂತ್ರ

ಜ್ಯೋತಿರ್ಮಯವಾಗಿ ಸತ್ಯಾಖಂಡಸ್ವರೂಪವಾಗಿದೆ. ಅತೀಂದ್ರಿಯವಾಗಿದೆ. ಅರಿವಿಗೆ ಅಳವಡುತ್ತದೆ. ಅಮೃತವಾಗಿದೆ. ಜಗತ್ಪರಿಣಾಮಕ್ಕೆ ಕಾರಣವಾಗಿದೆ. ಸಾದಾಖ್ಯತತ್ತ್ವವಾಗಿದೆ. ಪರಾಶಕ್ತಿಯಿಂದ ಉದಿತವಾಗಿದೆ. ಉಪಾಧಿವಿರಹಿತವಾಗಿದೆ. ಇದನ್ನೇ ಪ್ರಸಾದಲಿಂಗವೆಂದು ಹೇಳುವರು. ಅದು ಜ್ಞಾನೋಪಲಭ್ಯ; ಪರಿಣಾಮಕಾರಣ. ಶಬ್ದದೊಳಗೆ ಚಿನ್ನಾದ ಸ್ವರೂಪದಲ್ಲಿರುತ್ತದೆ. ಚಿನ್ನಾದಾಮೃತವಾಗಿದೆ; ಚಿಜ್ಜ್ಯೋತಿಯಾಗಿದೆ; ಚಿತ್ಕಳಾಸ್ವರೂಪವಾಗಿದೆ. ಪ್ರಸನ್ನ ಸ್ವರೂಪದಲ್ಲಿರುವುದೇ ಅದರ ಸಲ್ಲಕ್ಷಣ.

ಭಾವಲಿಂಗ-ಪ್ರಸಾದಲಿಂಗ :

ಭಾವಲಿಂಗದ ಕಿರಣ ಪ್ರಸಾದಲಿಂಗ. ಇದರಿಂದಾಗಿ ಭಾವಲಿಂಗವನ್ನು ಮೊದಲು ಮನನಿಸಬೇಕಾಗುತ್ತದೆ.

"ನಿಷ್ಕಲಂ ಭಾವಲಿಂಗಂ ಸ್ಯಾದ್ಭಾವಗ್ರಾಹ್ಯಂ ಪರಾತ್ಪರಂ ।
ಸನ್ಮಾತ್ರಂ ಭಾವಲಿಂಗಂ ಸ್ಯಾದಿತಿನಿಷ್ಠಾ ಮಹಾತ್ಮನಾಂ ॥"

—ಶಿವಾನುಭವಸೂತ್ರ

ನಿಷ್ಕಲವಾಗಿದೆ, ಭಾವಗ್ರಾಹ್ಯವಾಗಿದೆ; ಸತ್ತಾಮಾತ್ರವಾಗಿದೆ. ಸದ್ರೂಪಂ ಭಾವಲಿಂಗಂ ಅಸಿ ಪದದರ್ಥ ಭಾವಲಿಂಗ, ತ್ವಂಪದದರ್ಥಪ್ರಾಣಲಿಂಗ, ತತ್ಪದದರ್ಥ ಇಷ್ಟಲಿಂಗವೆಂದು ಮೊಗ್ಗೆಯ ಮಾಯಿದೇವನು ನಿರೂಪಿಸಿದ್ದಾನೆ. ಪರತತ್ತ್ವವೆ ಭಾವಲಿಂಗ. ಕಾರಣಸ್ವರೂಪ ಭಾವಲಿಂಗ. ಆತ್ಮರೂಪವೂ ಅನುಸಂಧಾನಾತ್ಮಕವೂ [illegible] ಆಗಿದೆ.

"ಮಹಾಲಿಂಗಂ ಪ್ರಸಾದಾಖ್ಯಂ ಲಿಂಗಮಿತ್ಯುಭಯಸ್ಥಲಂ।
ಭಾವಲಿಂಗಂ ಭವತ್ಯೇವ ಸ್ವಾನುಭೂತಿ ಪ್ರಮಾಣತಃ ॥"

—ಶಿವಾನುಭವಸೂತ್ರ,

ಭಾವಲಿಂಗವೆ ಮಹಾಲಿಂಗ ಪ್ರಸಾದಲಿಂಗವೆಂದು ಎರಡು ಲಿಂಗಸ್ಥಲವಾಗಿ ಏರ್ಪಡುತ್ತದೆ. ಇದಕ್ಕೆ ಸ್ವಾನುಭವವೇ ಪ್ರಮಾಣ. ಆತ್ಮಾಂಗದಲ್ಲಿ ನೆಲೆಗೊಂಡ ಮನೋರ್ಲಯ ನಿರಂಜನ ಭಕ್ತಿ ಪೂಜಾಕ್ರಿಗಳನು ಕೈಕೊಂಡು ಒಪ್ಪುವಂತಹ ಮಹಾಜ್ಞಾನ ನಿರೀಕ್ಷಣ ಸ್ವರೂಪವಾದ ಭಾವಲಿಂಗವು.

"....ಪ್ರಾಣಲಿಂಗಕ್ಕೆ ಆದಿಯಾಗಿ, ಭಾವಭ್ರಮೆಗಳು ನಷ್ಟವಾಗಿ, ಅನಂ ಭಾವದಲ್ಲಿ ಅನುವಾಗಿ, ಭಾವ-ಸದ್ಭಾವ-ನಿರ್ಭಾವಂಗಳಲ್ಲಿ ಭರಿತವಾಗಿ, ಭಾವ ಬ್ರಹ್ಮವೆಂಬ ಭೇದವಿಲ್ಲದೆ ಸನ್ನಿಹಿತ ಭಾವದಿಂದ ಇಪ್ಪುದೀಗ ಭಾವಲಿಂಗ........"

ಎಂದು ಆದಯ್ಯಶರಣನು ಭಾವಲಿಂಗಸ್ವರೂಪವನ್ನು ನಿರೂಪಿಸಿದ್ದಾನೆ, ಪರಿಪೂರ್ಣಸ್ವರೂಪ ಭಾವಲಿಂಗ. ಯೋಗಾಂಗಾಧಿಷ್ಠಾನವಾಗಿದೆ ಭಾವಲಿಂಗ. ಭಾವಲಿಂಗಕ್ಕೆ ಸನ್ನಿಹಿತಲಿಂಗವೆಂದು ನಾಮಾಂತರವಿದೆ.

ಭಾವಲಿಂಗ ನಿಷ್ಕಲವಾದರೂ ಭಾವಗ್ರಾಹ್ಯವಾಗಿದೆ. ಮೊಗ್ಗೆಯ ಮಾಯಿದೇವ ಶಿವಾಚಾರ್ಯನ ಈ ಮಾತನ್ನು ಶ್ವೇತಾಶ್ವತರೋಪನಿಷತ್ ಕೆಳಗಿನಂತೆ ಒಪ್ಪಿಕೊಂಡಿದೆ.

ಭಾವಗ್ರಾಹ್ಯಮನೀಡಾಖ್ಯಂ ಭಾವಾ ಭಾವಕರಂ ಶಿವಂ ।
ಕಲಾಸರ್ಗಕರಂ ದೇವಂ ಯೇ ವಿದುಸ್ತೇ ಜಹುಸ್ತನುಂ॥"

ಭಾವ ಪ್ರಾಪ್ತಿಗೆ ಯೋಗ್ಯವಾಗಿದೆ. ಭಾವಕ್ಕೆ ಆಶ್ರಯವಾಗಿದೆ. ಆದರೆ ತನಗೊಂದು ಬೇರೆ ಆಶ್ರಯ ಬೇಕಿಲ್ಲ; ಇಲ್ಲ. ಭಾವಗ್ರಾಹ್ಯವಾದ ಆ ಲಿಂಗವು ಶಿವಸ್ವರೂಪವಾಗಿದೆ; ಕಲ್ಯಾಣದಾಯಕವಾಗಿದೆ. ಜಗತ್ತಿನ ಉತ್ಪತ್ತಿ ಸಂಹಾರ ಗಳಿಗೆ ಕಾರಣವಾಗಿದೆ. ಮತ್ತು ಷಟ್ ಕಲೆಗಳನ್ನು ಸೃಷ್ಟಿಸುತ್ತದೆ. ಕಲಾ ಸೃಷ್ಟಿಗೆ ಕಾರಣವಾದ ಕಳಾಮಯವಾದ ಕಲ್ಯಾಣಕರವಾದ ಭಾವಗ್ರಾಹ್ಯವಾದ ಭಾವಲಿಂಗವನು ಅರಿತು ಅಳವಡಿಸಿಕೊಂಡವರು ತನುಭಾವವನ್ನು ಅಂಗ ಭಾವ

ವನ್ನು ಜಯಿಸುವರು. ಅವರೇ ಶರಣರೆನಿಸುವರು. ಶಾಂತ್ಯತೀತ ಕಲಾನ್ವಿತರಾಗುವರು. ಭಾವಲಿಂಗ ಸಾಕ್ಷಾತ್ಕಾರ ಪಡೆವರು.

ಭಾವಗತ ಭಾವಲಿಂಗವು ತನ್ನ ಒಂದಂಶವಾದ ಪ್ರಸಾದಲಿಂಗವನ್ನು ವಿಶುದ್ಧಿ ಚಕ್ರದಲ್ಲಿ ಇರಿಸುತ್ತದೆ. ಅದುವೆ ಶ್ರೋತ್ರಾಂಗದಲ್ಲಿ ನೆಲಸುತ್ತದೆ.

"ಅಖಂಡ ಪರಿಪೂರ್ಣ ಶ್ರೀಗುರುಲಿಂಗ ಜಂಗಮದ ಬಳಿವಿಡಿದ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿ ಸ್ಥಲವ ಸದ್ಗುರು ಕೃಪೆಯಿಂದರಿದು ಆದ್ಯರ ವಚನ ಮೊದಲಾದ ಶಿವಶಾಸ್ತ್ರದನುಭಾವವ ಬೆಸಗೊಂಡು, ಮಿಶ್ರಾ ಮಿಶ್ರಂಗಳರ್ಪಿತಾವಧಾನ ಮೂವತ್ತೆರಡು ಉದ್ಧರಣೆಗಳಿಂದ ಆಚರಿಸುವ ಶಿವಶರಣಗಣಂಗಳ ವಿಶುದ್ಧಿ ಸಂಬಂಧವಾದ ಷೋಡಶದಳಯುಕ್ತವಾದ ಸುಜ್ಞಾನ ಪದ್ಮದಲ್ಲಿ ಮೂರ್ತಿಗೊಂಡಿರುವಾತನೆಂಬುದೀಗ ಪ್ರಸಾದಲಿಂಗವೆಂಬ ಶಬ್ದಕ್ಕರ್ಥ."

"ಗುರುಲಿಂಗಮಂ ಮಂತ್ರಸ್ವರೂಪವನೆತ್ತಿ ಕೊಂಡಾಡುವ ಜಿಹ್ವೆ ಆ ಮಂತ್ರಕ್ಕೆ ಮೆಚ್ಚಿ ಪಂಚರಸಂಗಳ ಮರೆಯಲೊಡನೆ ಆ ಜಿಹ್ವೆಯಲ್ಲಿ ಗುರುಲಿಂಗ ನೆಲೆಗೊಂಡಿತ್ತು. ಆ ಲಿಂಗಮಂ ಮನವೊಲಿದು ಹಾಡುವ ನಾದಮಂ ಕೇಳಿದ ಶ್ರೋತ್ರ, ಆ ನಾದಕ್ಕೆ ಮೆಚ್ಚಿ ಪಂಚನಾದಂಗಳ ಮರೆಯಲೊಡನೆ ಆ ಶ್ರೋತ್ರದಲ್ಲಿ ಪ್ರಸಾದಲಿಂಗ ನೆಲೆಗೊಂಡಿತ್ತು."

ಗುರು ಮಂತ್ರದಿಂದ ಪೂತಮಾದ ಪ್ರಾಣವೇ (ಪ್ರಾಣನಾದವೆ) ಪ್ರಸಾದಲಿಂಗಮಾಯಿತ್ತು.

"ಯಮ ನಿಯಮಾದಿ ಅಷ್ಟಾಂಗ ಯೋಗಂಗಳ ಅಂಗಸಾಧನ ತನು ಸಂಚಲವಹ ಹಮ್ಮಿನ ಮತ್ತತ್ವಮಂ ಬಿಟ್ಟು; ಚತುರ್ಮುದ್ರಾಂಗ ಲಕ್ಷಣ ಜೀವ ಮನ ಸಂಚಲ ಹಮ್ಮಿನ ಮತ್ತತ್ವಮಂ ಬಿಟ್ಟು; ಅಣಿಮಾದ್ಯಷ್ಟ ಸಿದ್ಧಿಗಳಿಂದಾತ್ಮ ಬುದ್ಧಿ ಹೀನತ್ವದ ಸಂಚಲದ ಹಮ್ಮಿನ ಮತ್ತತ್ವಮಂ ಬಿಟ್ಟು; ವಾಯು ಯೋಗ, ಮನ ಯೋಗ, ಲಯಯೋಗಂಗಳ ತಸ್ಕರ ಭ್ರಾಂತಿ ಸಂಚಲ ಹಮ್ಮಿನ ಮತ್ತತ್ವಮಂ ಬಿಟ್ಟು; ಪಿಂಡ ಬ್ರಹ್ಮಾಂಡಯೋರೈಕ್ಯಂ ಎಂಬ ಬ್ರಹ್ಮೋಹಮೆಂಬ ಶಿವದೂತ ಸಂಚಲ ಹಮ್ಮಿನ ಮತ್ತತ್ವಮಂ ಬಿಟ್ಟು, ಯತಿಯೋಗ ಸಿದ್ಧತ್ವ, ಮುದ್ರಾಲಕ್ಷಣ ಭ್ರಾಂತಿ ವೇದಾಂತವೆಂಬ ಅಂಗಯೋಗ ಮಾರ್ಗಂಗಳ ಹಮ್ಮಿನ ಮತ್ತತ್ವಮ

ಬಿಟ್ಟು; ಬೃತ್ಯಾಚಾರ, ಲಿಂಗಾಚಾರ, ಶಿವಾಚಾರ, ಗಣಾಚಾರ, ಸದಾಚಾರಂಗಳೆಂಬ ಪಂಚ ಆಚಾರಂಗಳ ಪರಾಶಕ್ತಿ ತಂತ್ರದ ಸುಜ್ಞಾನವ ನೆಲೆಗೊಳಿಸಿ ನಿಂದುದು ಪ್ರಸಾದಲಿಂಗ." ಸುಜ್ಞಾನದಿಂ ಶ್ರೋತ್ರದಿಂದ ಶಬ್ದವನಂಗೀಕರಿಸುವುದು ಪ್ರಸಾದಲಿಂಗ.

'ಶ್ರೋತ್ರಸ್ಯ ಶ್ರೋತ್ರಂ'

"ಯಚ್ಛ್ರೋತ್ರೇಣ ನ ಶೃಣೋತಿ ಯೇನ ಶ್ರೋತ್ರಮಿದಂ ಶ್ರುತಂ।
ತದೇವ ಬ್ರಹ್ಮ ತ್ವಂ ವಿದ್ಧಿ ನೇದಂ ಯದಿದಮುಪಾಸತೇ ॥೭॥"

— ಕೇನೋಪನಿಷತ್

ಕಿವಿಗೆ ಕಿವಿಯಾಗಿದೆ ಪ್ರಸಾದಲಿಂಗ. ಕಿವಿಗೆ ಶಬ್ದವನ್ನು ಕೇಳುವ ಶಕ್ತಿಯನ್ನು ಕರುಣಿಸುತ್ತದೆ ಪ್ರಸಾದಲಿಂಗ. ಜ್ಞಾನದಲ್ಲಿ ಧಾರಣವಾಗಿ ಅದನ್ನು ಸುಜ್ಞಾನವನ್ನಾಗಿಸುತ್ತದೆ. ಶಾಂತ್ಯತೀತ ಕಳೆಯಲ್ಲಿ ಸುಪ್ರತಿಷ್ಠಿತವಾಗಿರುತ್ತದೆ. ಆ ಪ್ರಸಾದ ಲಿಂಗ ಕಿವಿಯಿಂದ ಕೇಳದು; ಅದರಿಂದಲೇ ಕಿವಿ ಕೇಳುತ್ತದೆ. ಅದುವೇ ಪ್ರಸಾದಲಿಂಗ. ಸುಖಂಬಡೆದು ಪರಿಣಾಮತೆಯನ್ನೈದುವುದು ಪ್ರಸಾದಲಿಂಗ ವಿಷಯ." ಎಂದು ಆದಯ್ಯ ಶರಣನ ಅಭಿಮತವಾಗಿದೆ.

ಶ್ರೋತ್ರಕ್ಕೂ ವಾಕ್ಕಿಗೂ ಭೇದವಿಲ್ಲ. ಇವೆರಡಕ್ಕೂ ಒಂದೇ ಶಬ್ದ ವಿಷಯ. ಒಂದೇ ಮೂಲಭೂತ ಆಕಾಶ. ಈಶಾನ ಮೂರ್ತಿ ಅಧಿದೇವತೆ ಸೌತ್ತ್ಯಸ್ವರೂಪ ಪ್ರಸಾದಲಿಂಗ. ಅಂದರೆ ಈಳನಸ್ವರೂಪವಾಗಿದೆ. ಗುರುದೇವನ ಅನುಗ್ರಹ ಸ್ವರೂಪವಾಗಿದೆ ಪ್ರಾಸಾದಲಿಂಗ. ತನ್ನ ಶಾಂತ್ಯತೀತ ಕಳೆಯ ಸ್ವರೂಪವಾಗಿದೆ, ಹಾಗು ಪರಾವಾಕ್ ಶಕ್ತಿಯನ್ನೊಳಗೊಂಡಿದೆ. ಅಪರೋಕ್ಷಾನುಭವಾಮೃತ ಸ್ವರೂಪವೂ ಆಗಿದೆ. ಅದೇ ಪರಮ ಪ್ರಸನ್ನ ಸ್ವರೂಪ. ಮಾತಿನ ಮಿಂಚೇ ಪ್ರಸಾದಲಿಂಗ. ಮಾತಿನ ರಸಭಾವಾನಂದವೇ ಪ್ರಸಾದಲಿಂಗ,

ತ್ರಿವಿಧ ಪ್ರಸಾದಲಿಂಗ

ಶ್ರೋತ್ರಕ್ಕೆ ಶ್ರೋತ್ರವಾಗಿ ಶಬ್ದಕ್ಕೆ ಶಬ್ದವಾಗಿ ಸರ್ವಾಂಗವನ್ನು ಸ್ಪಂದಿಸಿ ಜಾಗ್ರತಗೊಳಿಸಿ ರಸಭಾವಗಳನ್ನು ಆನಂದ ಪರಿಣಾಮವನ್ನು ಹುಟ್ಟಿಸುವ ಚೇತನವೆ ಪ್ರಸಾದಲಿಂಗ. ಪರಾಶಕ್ತಿಯ ಶಾಂತ್ಯತೀತ ಕಲೆಯ ಸ್ವರೂಪ. ಶಿವಸಾದಾಖ್ಯ ಈಶಾನಮುಖವುಳ್ಳುದು. ಯಕಾರ ಪ್ರಣವಾತ್ಮಕವಾಗಿ ಶರಣಾಂಗನ ಮುಖ್ಯ ಜೀವಾಳವಾಗಿದೆ. ಆನಂದ ಪ್ರಕಾಶಕವಾಗಿದೆ.

ಬಾಳಿಗೆ ಬೆಳುಕು ಗಾಳಿಗಳು ಬೇಕಾಗುವಂತೆ ಪೊಳ್ಳು ಬೇಕೇ ಬೇಕು. ಪೊಳ್ಳಿಲ್ಲದೆ ಯಾವುದಕ್ಕೂ ಅವಕಾಶವಾಗುವುದಿಲ್ಲ. ಸಮಷ್ಟಿ ಸೃಷ್ಟಿಗೆ ಮಹಾಕಾಶ, ವ್ಯಷ್ಟಿ ಸೃಷ್ಟಿಗೆ ಘಟಾಕಾಶ. ಒಂದು ವಿಶ್ವ ಜೀವನ ನಿರ್ವಹಣ ಕಾರಣ. ಇನ್ನೊಂದು ವ್ಯಕ್ತಿ ಜೀವನ ನಿರ್ವಹಣ ಕಾರಣ, ಶ್ರೋತ್ರ-ಶ್ರೋತ್ರಾಕಾಶ, ವಾಕ್-ವಾಗಾಕಾಶಗಳಲ್ಲಿ ಉಂಟಾಗುವ ಗ್ರಹಣ ಉಚ್ಚಾರಣ ರೂಪ ಶಬ್ದದಲ್ಲಿ ಉಂಟಾಗುವ ಸಂವೇದನವೆ ಪ್ರಸಾದಲಿಂಗ. ಶಬ್ದ-ಜ್ಞಾನಗಳ ಸಮನ್ವಯದಲ್ಲಿ ಆನಂದಾನುಭೂತಿಯುಂಟಾಗುತ್ತದೆ.

ಈ ತೆರನಾದ ಪ್ರಸಾದಲಿಂಗವು ಶುದ್ಧ ಪ್ರಸಾದಲಿಂಗ, ಸಿದ್ಧ ಪ್ರಸಾದಲಿಂಗ, ಪ್ರಸಿದ್ಧ ಪ್ರಸಾದಲಿಂಗವೆಂದು ಮೂರು ಬಗೆಯಾಗಿದೆ. ಕಾರ್ಮಿಕ ದೋಷಗಳನ್ನು ಕಳೆದು ಕಾಯಶುದ್ಧಿಯನ್ನು ಮಾಡುವುದೆ ಶುದ್ಧ ಪ್ರಸಾದಲಿಂಗ ಮಾಯೀಯ (ಅಜ್ಞಾನ) ಮಲವನ್ನು ತೊಳೆದು ಮನವನ್ನು ಜ್ಞಾನಸಾಧನೆಗೆ ಸಿದ್ಧಗೊಳಿಸುವುದೆ ಸಿದ್ಧ ಪ್ರಸಾದಲಿಂಗ. ಆಣವ ಕೊಳೆಯನ್ನು ಕಳೆದು ಪ್ರಾಣ

ವನ್ನು ಅಥವಾ ಭಾವವನ್ನು ಶುದ್ಧಗೊಳಿಸಿ ಪ್ರಕಾಶಪಡಿಸುವುದೆ ಪ್ರಸಿದ್ಧ ಪ್ರಸಾದಲಿಂಗ. "ಶುದ್ಧ ಸಿದ್ಧ ಪ್ರಸಿದ್ಧದ ವಿವರವ ಕೇಳಿದಡೆ ಹೇಳುವೆನು : ವಿಶ್ವ ಮುಟ್ಟಿತ್ತು ಶುದ್ಧ, ತೈಜಸ ಮುಟ್ಟಿತ್ತು ಸಿದ್ಧ ; ಪ್ರಾಜ್ಞ ಮುಟ್ಟಿತ್ತು ಪ್ರಸಿದ್ಧ. ಪ್ರತ್ಯಗಾತ್ಮನಲ್ಲಿ ಪರಿಣಾಮಿ, ಕೂಡಲ ಚನ್ನಸಂಗಾ, ನಿಮ್ಮ ಶರಣ." ಈ ತ್ರಿವಿಧಲಿಂಗಗಳಿಂದ ತ್ರಿವಿಧ ಜೀವರ ಶುದ್ಧಿ ಸಿದ್ಧಿಗಳು ಸಂಭವಿಸುತ್ತವೆ. ಶುದ್ಧ ಪ್ರಸಾದಲಿಂಗದಿಂದ ವಿಶ್ವಾತ್ಮನು, ಸಿದ್ಧ ಪ್ರಸಾದ ಲಿಂಗದಿಂದ ತೈಜಸಾತ್ಮನು; ಪ್ರಸಿದ್ಧ ಪ್ರಸಾದಲಿಂಗದಿಂದ ಪ್ರಾಜ್ಞಾತ್ಮನು ತಂತಮ್ಮ ಜೀವತ್ವವನ್ನು ಕಳೆದುಕೊಳ್ಳುತ್ತಾರೆ. ಪರಿವಿಡಿದು ಶುದ್ಧ-ಸಿದ್ಧ-ಪ್ರಸಿದ್ಧ ಸ್ವರೂಪರಾಗಿ ಪರಿಣಮಿಸುತ್ತಾರೆ. ಇದೇ ಚನ್ನಬಸವಣ್ಣನು ಇನ್ನೊಂದು ಕಡೆ ಹೀಗೆ ಹೇಳಿದ್ದಾನೆ;

"ಶುದ್ಧವೆಂದಡೆ ಗುರುಮುಖದಿಂದ ಮಲತ್ರಯವ ಕಳೆದುಳಿದ ಶೇಷ; ಸಿದ್ಧವೆಂದಡೆ ಲಿಂಗಮುಖದಿಂದ ಕರಣ ಮಥನಂಗಳ ಕಳೆದುಳಿದ ಶೇಷ, ಪ್ರಸಿದ್ಧವೆಂದಡೆ ಜಂಗಮ ಮುಖದಿಂದ ಸರ್ವಚೈತನ್ಯಾತ್ಮಕ ತಾನೆಯಾಗಿ ಖಂಡಿತವಳಿದುಳಿದ ಶೇಷ.

ತ್ರಿವಿಧ ಲಿಂಗಗಳಿಂದ ಅರ್ಥ ಪ್ರಾಣ ಅಭಿಮಾನಗಳು ನಿಷ್ಪತ್ತಿಗೊಳ್ಳುತ್ತವೆ. ಸದಾಚಾರ ಶಿವಾಚಾರ ಸಮಯಾಚಾರಗಳು ನಿಷ್ಪತ್ತಿಗೊಳ್ಳುತ್ತವೆ. ತ್ರಿವಿಧ ಸಂಬಂಧ ಅವಿನಾಭಾವಗೊಳ್ಳುತ್ತವೆ. ತನು ಮನ ಭಾವಗಳು ಭವಿತನವನ್ನು ಕಳೆದುಕೊಳ್ಳುತ್ತವೆ. ಅಚ್ಚ ಪ್ರಸಾದ, ನಿಚ್ಚ ಪ್ರಸಾದ, ಸಮಯ ಪ್ರಸಾದ ಸಿದ್ಧಿಸುತ್ತವೆ.

ಅರ್ಪಿತ ಪ್ರಸಾದಿಯಾದ ಶರಣ ಶುದ್ಧ ಪ್ರಸಾದಲಿಂಗವನ್ನು ಅವಧಾನ ಪ್ರಸಾದಿಯಾದ ಶರಣ ಸಿದ್ಧ ಪ್ರಸಾದಲಿಂಗವನ್ನು, ಪರಿಣಾಮ ಪ್ರಸಾದಿಯಾದ ಶರಣ ಪ್ರಸಿದ್ಧ ಪ್ರಸಾದಲಿಂಗವನ್ನು ಅಳವಡಿಸಿಕೊಳ್ಳುತ್ತಾರೆ. ಇಷ್ಟಲಿಂಗಾರ್ಚಕ ಶರಣನೆ ಅರ್ಪಿತ ಪ್ರಸಾದಿ ಶರಣನೆನಿಸುತ್ತಾನೆ. ಪ್ರಾಣಲಿಂಗಾರ್ಚಕ ಶರಣನೆ ಅವಧಾನ ಪ್ರಸಾದಿ ಶರಣನೆನಿಸುತ್ತಾನೆ. ತೃಪ್ತಿಲಿಂಗಾರ್ಚಕ ಶರಣನೆ ಪರಿಣಾಮ ಪ್ರಸಾದಿ ಶರಣನೆನಿಸುತ್ತಾನೆ.

ಸದಾಚಾರವೆ ಶುದ್ಧ ಪ್ರಸಾದಲಿಂಗ; ಸದ್ವಿಚಾರವೆ ಸಿದ್ಧ ಪ್ರಸಾದಲಿಂಗ; ಸದನುಭವವೆ ಪ್ರಸಿದ್ಧ ಪ್ರಸಾದಲಿಂಗ. ತ್ಯಾಗಾಂಗದ ಪೂರ್ವಾಶ್ರಯ ಕಳೆದು

ಳಿದುದೆ ಶುದ್ಧ. ಭೋಗಾಂಗದ ಪೂರ್ವಾಶ್ರಯ ಕಳೆದುಳಿದುದೆ ಸಿದ್ಧ. ಯೋಗಾಂಗದ ಪೂರ್ವಾಶ್ರಯ ಕಳೆದುಳಿದುದೆ ಪ್ರಸಿದ್ಧ.

ಗುರುಮುಖದಿಂದ ಬಂದ ಮಂತ್ರ ಶುದ್ಧ. ಮಂತ್ರದಿಂದುಂಟಾದ ಅರ್ಥ ಸಿದ್ಧ. ಅರ್ಥದಿಂದುಂಟಾದ ಆನಂದ ಪ್ರಸಿದ್ಧ. ಮಂತ್ರರೂಪ ಶುದ್ಧವೆ ಸದ್ರೂಪು ಅರ್ಥರೂಪ ಸಿದ್ಧವೆ ಚಿದ್ರೂಪು. ಆನಂದಾತ್ಮಕ ಪ್ರಸಿದ್ಧವೆ. ಅನಂದ.

ಪ್ರಸಾದಲಿಂಗಕ್ಕೆ ಇವು ಮೂರು ಸಾಪೇಕ್ಷವಾಗಿವೆ, ಇವಿಲ್ಲದೆ ಪ್ರಸಾದತ್ವ ಪ್ರಾಪ್ತಿಯಾಗದು ; ಪ್ರಕಾಶವಾಗದು. ಪ್ರಸಾದವಿರುವಲ್ಲಿ ಶುದ್ಧತೆ ಸಿದ್ಧತೆ ಪ್ರಸಿದ್ಧತೆಗಳು ಇದ್ದೇ ಇರುತ್ತವೆ ; ಇರಬೇಕು. ಸುಶಬ್ದ ಪ್ರಸಾದದಲ್ಲಿ ಇವು ಮೂರೂ ಇರುತ್ತವೆ. ಶಬ್ದ ಶುದ್ಧಿಯೇ ಸುಶಬ್ದ, ಅದೇ ಸದ್ರೂಪ. ಸುಶಬ್ದಾರ್ಥವೇ ಸಿದ್ಧ; ಅದೇ ಚಿದ್ರೂಪ. ಸಶಬ್ದಾರ್ಥ ಜನ್ಯ ಅನುಭವವೆ ಪ್ರಸಿದ್ಧ; ಅದೇ ಪರಿಣಾಮ ಸ್ವರೂಪ.

ಸ್ವಚ್ಛವಾಗಿರುವಿಕೆ, ಸಜ್ಜಾಗಿರುವಿಕೆ, ಹೆಸರಾಗಿರುವಿಕೆ ಪ್ರಸಾದ ಲಕ್ಷಣ. ಹಾಗು ಪ್ರಸಾದಲಿಂಗ ಲಕ್ಷಣ. ಪ್ರಸಾದ ಬೇರಲ್ಲ ; ಪ್ರಸಾದಲಿಂಗ ಬೇರಲ್ಲ.

ಸುಶಬ್ದ ಗ್ರಹಣದಲ್ಲಿಯೆ ಅರ್ಥಸಿದ್ಧಿ ಧಾರಣವಾಗುತ್ತದೆ. ಅರ್ಥಸಿದ್ಧಿಯ ಧಾರಣದಿಂದ ಅನುಭವಾನಂದ ಸರ್ವಾಂಗದಲ್ಲಿ ಹರಡಿ ಪ್ರಸಿದ್ಧತ್ವ ಪ್ರಾಪ್ತವಾಗುತ್ತದೆ.

ಜಂಗಮಲಿಂಗದಲ್ಲಿ ಪ್ರಸಾದಲಿಂಗವಿದೆ ; ಪ್ರಸಾದಲಿಂಗದಲ್ಲಿ ಜಂಗಮಲಿಂಗವಿದೆ. ಇವೆರಡೂ ಪರಸ್ಪರ ಸಾಪೇಕ್ಷ ವಸ್ತುಗಳು. ಜಂಗಮ ಲಿಂಗಾಂತರ್ಗತ ಪ್ರಸಾದಲಿಂಗವು ಆದಿ ಪ್ರಸಾದಿ, ಅಂತ್ಯ ಪ್ರಸಾದಿ, ಸೇವ್ಯ ಪ್ರಸಾದಿ ಎಂದು ಮೂಬಗೆಯಾಗಿರುತ್ತದೆಂದು ಹಿಂದಿನ ಸಂಪುಟದಲ್ಲಿ ವಿವರವಾಗಿ ವಿಚಾರಿಸಲಾಗಿದೆ.

ಮನ ಜ್ಞಾನಗಳು ಶುದ್ಧವಾಗಬೇಕು; ಸಿದ್ಧವಾಗಬೇಕು. ಆಗ ಪ್ರಸನ್ನತ್ವ ಪ್ರಸಿದ್ಧವಾಗುತ್ತದೆ. ಅಂದರೆ ಅಂಗಾಂಗಗಳಲ್ಲಿ ತೆರಹಿಲ್ಲದಂತಾಗುತ್ತದೆ. ಪ್ರಸನ್ನತೆ ಕಾಯ ಕರಣೇಂದ್ರಿಯಗಳಲ್ಲಿ ತುಂಬಿ ತೊಳಗುತ್ತದೆ. ಅಂತಾದಾಗ ರಾಗದ್ವೇಷ ಶೋಕ ಮೋಹ ಭಯಗಳು ಬಿಟ್ಟು ಸರಿದು ದೂರಾಗುತ್ತವೆ.

ಚತುರ್ವಿಧ ಪ್ರಸಾದಲಿಂಗ

ನಾಲ್ಕವಸ್ಥೆಗಳ ನಿಷ್ಪತ್ತಿಗಾಗಿ. ನಾಲ್ಕು ಪುರುಷಾರ್ಥಗಳ ಪ್ರಪತ್ತಿಗಾಗಿ ಪ್ರಸಾದಲಿಂಗ ಮರಳಿ ನಾಲ್ಕು ಬಗೆಯಾಗುವುದು. ಪಾದೋದಕಲಿಂಗ, ನಿಷ್ಪತ್ತಿ ಲಿಂಗ, ಆಕಾಶಲಿಂಗ, ಪ್ರಕಾಶಲಿಂಗ, ಇವು ಪ್ರಸಾದಲಿಂಗದೊಳಗಿನ ಪ್ರಭೇದಗಳು. ಈ ನಾಲ್ಕು ಲಿಂಗಗಳು ಪರಾ-ಪಶ್ಯಂತಿ-ಮಧ್ಯಮೆ-ವೈಖರೀ ವಾಣಿಗಳಿಗೆ ಪರಿವಿಡಿದು ಪೂರಕಗಳೂ ಪ್ರೇರಕಗಳೂ ಆಗಿವೆ. ಚಿತ್ಪಾದೋದಕದಿಂದ ಪರಾವಾಣಿ ರೂಪಿತವಾಗಿ ಪ್ರೇರೇಪಿತವಾಗುತ್ತದೆ. ನಿಷ್ಪತ್ತಿ ಲಿಂಗದಿಂದ ಪಶ್ಯಂತಿ ಪರಿಪಕ್ವವಾಗಿ ಮಧ್ಯಮೆಯಾಗಲು ಪ್ರೇರಿತವಾಗುತ್ತದೆ, ಆಕಾಶಲಿಂಗದಿಂದ ಮಧ್ಯಮೆಗೆ ಅವಕಾಶವಾಗುತ್ತದೆ; ಚೇತನತೆಯುಂಟಾಗುತ್ತದೆ. ಪ್ರಕಾಶಲಿಂಗದಿಂದ ವೈಖರಿಯು ರೂಪಿತವಾಗಿ ಹೊರಹೊಮ್ಮಿ ಪ್ರಕಾಶಗೊಳ್ಳುತ್ತದೆ. ಅಂತೆಯೆ ಪಾದೋದಕ ಲಿಂಗದಿಂದ ಧರ್ಮ ಆರ್ದ್ರವಾಗಿ ಅಭಿವೃದ್ಧಿಗೊಳ್ಳುತ್ತದೆ. ನಿಷ್ಪತ್ತಿಲಿಂಗದಿಂದ ಅರ್ಥಸಾರ್ಥಕವಾಗುತ್ತದೆ. ಆಕಾಶಲಿಂಗದಿಂದ ಕಾಮ ಬಯಲಾಗುತ್ತದೆ; ಅಥವಾ ಸತ್ಯಸಾಧನೆಯಲ್ಲಿ ಪವಿತ್ರ ಪ್ರೇಮವಾಗಿ ಸಾರ್ಥಕವಾಗುತ್ತದೆ. ಪ್ರಕಾಶಲಿಂಗದಿಂದ ಮೋಕ್ಷ ಲಭಿಸುತ್ತದೆ; ಅಂದರೆ ತಾಮಸ ಬಂಧನದ ಬಿಡುಗಡೆಯಾಗುತ್ತದೆ. ತುರೀಯಾತೀತಾವಸ್ಥೆ ಇವುಗಳಿಂದ ಕರತಲಾಮಲವಾಗುತ್ತದೆ.

ಚತುರ್ವಿಧ ಪ್ರಸಾದಲಿಂಗಗಳಿಂದ ಚತುರ್ವಿಧ ಭ್ರಮೆಗಳು ಬಯಲಾಗುತ್ತವೆ. ನಾಹಂ ಬ್ರಮೆ, ಕೋಽಹಂ ಭ್ರಮೆ, ಸೋಽಹಂ ಭ್ರಮೆ, ಚಿದಹಂ ಭ್ರಮೆ ಇವು ನಾಲ್ಕು ಭ್ರಮೆಗಳು. ಈ ಭ್ರಮೆಗಳಿದ್ದರೆ ಶರಣತ್ವ ಸಮನಿಸದು,

ಇವನ್ನು ಕಳೆಯಲು ನಾಲ್ಕು ಪ್ರಸಾದಲಿಂಗಗಳಾಗಬೇಕು. ಪಾದೋದಕಲಿಂಗದಿಂದ ನಾಹಂ ಭ್ರಮೆ ನಿರಸನವಾಗುತ್ತದೆ. ನಿಷ್ಪತ್ತಿಲಿಂಗದಿಂದ ಕೋऽಹಂ ಭ್ರಮೆ ಕಳೆಯುತ್ತದೆ. ಆಕಾಶಲಿಂಗದಿಂದ ಸೋऽಹಂ ಭ್ರಮೆ ಸವೆಯುತ್ತದೆ. ಪ್ರಕಾಶಲಿಂಗದಿಂದ ಚಿದಹಂ ಭ್ರಮೆ ಚದರುತ್ತದೆ. ಚತುರ್ವಿಧ ಸಾರಾಯ ಸಂಪತ್ತು ಸಂಪಾದಿತವಾಗುತ್ತದೆ.

ಪ್ರಸಾದಲಿಂಗದ ಚತುರ್ವಿಧ ಕಿರಣಗಳು ಪರಿವಿಡಿದು ಚತುರ್ವಿದ ವೇದಗಳಿಗೆ ಚೈತನ್ಯವಾಗಿವೆ.

ಷಡ್ವಿಧ ಪ್ರಸಾದಲಿಂಗ

ಪರಿಣಾಮ ಭೇದದಿಂದ ಪ್ರಸಾದಲಿಂಗ ಆರು ಬಗೆಯಾಗುತ್ತದೆ. ಪರಿಣಾಮ ಷಡ್ವಿಧ. ಇಂದ್ರಿಯ ಪರಿಣಾಮ, ಪ್ರಾಣ ಪರಿಣಾಮ, ಜ್ಞಾನ ಪರಿಣಾಮ, ಭಾವ ಪರಿಣಾಮ, ತೂರ್ಯ ಪರಿಣಾಮ, ಮಹಾಪರಿಣಾಮ ಇವು ಆರು ಬಗೆಯ ಪರಿಣಾಮಗಳು. ಅಲ್ಲದೆ ಷಡಂಗ-ಷಟ್ಕಲೆಗಳ ಭೇದದಿಂದಲೂ ಪ್ರಸಾದಲಿಂಗ ಆರು ತೆರನಾಗುತ್ತದೆ. ಆರು ಬಗೆಯಾಗಿ ಷಡ್ಭಾವವಿಕಾರಗಳನ್ನು ಶಮನ ಮಾಡುತ್ತದೆ.

ಇಂದ್ರಿಯಾನಂದ, ಪ್ರಾಣಾನಂದ, ಜ್ಞಾನಾನಂದ, ಭಾವಾನಂದ, ತೂರ್ಯಾನಂದ, ಮಹಾನಂದ ಎಂಬ ಷಡ್ವಿಧ ಪ್ರಸಾದಲಿಂಗಗಳ ಹೆಸರುಗಳು. ಇವು ಶರಣನ ಸ್ವರೂಪವನ್ನು ಸಂಪೂರ್ಣಗೊಳಿಸುತ್ತವೆ. ಸೋಜ್ವಲಗೊಳಿಸುತ್ತವೆ. ಶರಣನ ಇಂದ್ರಿಯಾದಿಗಳಲ್ಲಿ ಪ್ರಸನ್ನ ಚೇತನಾನಂದವು ತೊಳಗಿ ತೋರುತ್ತದೆ. ಶರಣನಲ್ಲಿ ಪ್ರಸಾದಲಿಂಗವು ಆನಂದರೂಪದಲ್ಲಿರುತ್ತದೆ. ಅದು ಮೊದಲು ಇಂದ್ರಿಯಾನಂದದಲ್ಲಿ ಪರಿಣಮಿಸುತ್ತದೆ. ಈ ಇಂದ್ರಿಯಾನಂದಲಿಂಗವನ್ನೇ ಪ್ರಸಾದಲಿಂಗದೊಳಗಿನ ಆಚಾರಲಿಂಗವೆಂದು ಹೇಳುವುದು. ಶರಣನಿಗೆ ಆಚಾರ

ದಿಂದ ಇಂದ್ರಿಯಾನಂದವುಂಟಾಗುತ್ತದೆ. ಬಳಿಕ ಶರಣನ ಪ್ರಾಣದಲ್ಲಿ ಆನಂದೋದಯವಾಗುತ್ತದೆ. ಈ ಆನಂದವು ಇಂದ್ರಿಯಾನಂದಕ್ಕಿಂತ ಅತ್ಯಂತವೂ ಸೂಕ್ಷ್ಮವೂ ಆಗಿರುತ್ತದೆ. ಇದು ಪ್ರಸಾದಲಿಂಗದೊಳಗಿನ ಗುರುಲಿಂಗ ಸ್ವರೂಪವಾಗಿರುತ್ತದೆ. ಆಮೇಲೆ ಶರಣನ ಜ್ಞಾನದಲ್ಲಿ ಆನಂದ ಆವಿರ್ಭವಿಸುತ್ತದೆ. ಇದರಿಂದ ಶಿವತತ್ತ್ವದಲ್ಲಿ ಆಸ್ತಿಕ್ಯಭಾವ ಅತ್ಯಧಿಕವಾಗುತ್ತದೆ. ಶಿವಜ್ಞಾನ ಸ್ಥಿರವಾಗುತ್ತದೆ. ಇದು ಪ್ರಾಣಾನಂದಕ್ಕಿಂತ ಸೂಕ್ಷ್ಮವೂ ಶ್ರೇಷ್ಠವೂ ಆಗಿರುತ್ತದೆ. ಇದು ಪ್ರಸಾದಲಿಂಗದೊಳಗಿನ ಶಿವಲಿಂಗವಾಗಿರುತ್ತದೆ. ಮುಂದೆ ಶರಣನ ಭಾವದಲ್ಲಿ ಆನಂದ ಅಳವಡುತ್ತದೆ. ಇದರಿಂದ ಶರಣನು ಸದಾಕಾಲ ಶಿವಭಾವಿಯಾಗಿ ಸಂತೋಷಿಸುತ್ತಾನೆ. ಈ ಭಾವಾನಂದವು ಪ್ರಸಾದಲಿಂಗದೊಳಗಿನ ಜಂಗಮ ಲಿಂಗವೆಂದೆನಿಸಿಕೊಳ್ಳುತ್ತದೆ. ಈ ಭಾವಾನಂದಕ್ಕಿಂತಲೂ ಹೆಚ್ಚಿನದಾದ ತೂರ್ಯಾನಂದವು ಶರಣನಿಗೆ ಉಂಟಾಗುತ್ತದೆ. ಇಲ್ಲಿ ಶರಣನು ಸತಿ ಪತಿ ಭಾವವನ್ನು ಮೀರಿ ಆನಂದಿಸುತ್ತಾನೆ. ಇದು ಪ್ರಸಾದಲಿಂಗದೊಳಗಿನ ಪ್ರಸಾದಲಿಂಗವೆಂದೆನಿಸುತ್ತದೆ. ಇದಾದ ಬಳಿಕ ಇವಲ್ಲಕ್ಕೂ ಮಿಗಿಲಾದ ಮಹದಾನಂದ ಶರಣನಿಗೆ ಸಂಭವಿಸುತ್ತದೆ. ಇಲ್ಲಿ ದೃಕ್ಕ್ರಿಯೆಗಳೆಲ್ಲವೂ ನಿಷ್ಪತ್ತಿಗೊಂಡಿರುತ್ತವೆ. ಈ ಮಹದಾನಂದವನ್ನೇ ಪ್ರಸಾದಲಿಂಗದೊಳಗಿನ ಮಹಾಲಿಂಗವೆಂದು ಹೇಳುತ್ತಾರೆ. ಈ ಲಿಂಗಗಳು ಷಡಕ್ಷರ ಸ್ವರೂಪವಾಗಿರುತ್ತವೆ. ಷಡರ್ಪಣಕ್ಕೆ ಪಾತ್ರಗಳಾಗಿರುತ್ತವೆ. ಷಡಂಗರನ್ನು ಪ್ರಸನ್ನಗೊಳಿಸುತ್ತವೆ.

ದ್ವಾದಶ ಪ್ರಸಾದಲಿಂಗ

ಶರಣಸ್ಥಲವನ್ನು ಆಶ್ರಯಿಸಿ ಪ್ರಸಾದಲಿಂಗ ಹನ್ನೆರಡು ಹಸುಂಗೆಯಾಗುತ್ತದೆ. ದ್ವಾದಶೇಂದ್ರಿಯಗಳಲ್ಲಿ ದ್ವಾದಶಾದಿತ್ಯರಿಗಿಂತ ಮಿಗಿಲಾಗಿ ಪ್ರಸನ್ನ ಪರಿಣಾಮದಿಂದ ಬೆಳಗುತ್ತವೆ.

ಪಾದೋದಕಲಿಂಗ, ನಿಷ್ಪತ್ತಿಲಿಂಗ, ಆಕಾಶಲಿಂಗ, ಪ್ರಕಾಶಲಿಂಗ ಇವು ನಾಲ್ಕು ಒಂದೊಂದು ಮೂರು ಮೂರಾಗಿ ಹನ್ನೆರಡು ಲಿಂಗಗಳಾಗುತ್ತವೆ. ಪಾದೋದಕವೆಂತಲೂ ಲಿಂಗದಲ್ಲಿ ದೀಕ್ಷಾಪಾದೋದಕ - ಶಿಕ್ಷಾಪಾದೋದಕ-ಜ್ಞಾನಪಾದೋದಕವೆಂತಲೂ ನಿಷ್ಪತ್ತಿಲಿಂಗದಲ್ಲಿ ಕ್ರಿಯಾನಿಷ್ಪತ್ತಿ–ಭಾವನಿಷ್ಪತ್ತಿ ಜ್ಞಾನನಿಷ್ಪತ್ತಿಯೆಂತಲೂ ಆಕಾಶಲಿಂಗದಲ್ಲಿ ಪಿಂಡಾಕಾಶ-ಬಿಂದ್ವಾಕಾಶ-ಮಹದಾಕಾಶವೆಪ್ರಕಾಶಲಿಂಗದಲ್ಲಿ ಕ್ರಿಯಾಪ್ರಕಾಶ-ಭಾವ ಪ್ರಕಾಶ-ಜ್ಞಾನ ಪ್ರಕಾಶವೆಂತಲೂ ಭೇದಗಳಾಗಿ ಹನ್ನೆರಡು ಲಿಂಗಗಳು ಸಿದ್ಧವಾಗುತ್ತವೆ.

ಶಿವಲಿಂಗ-ಜಂಗಮಲಿಂಗಗಳೆರಡರಿಂದ ಭೋಗಾಂಗ ಪರಿಶುದ್ಧವಾಗಿ ಪ್ರಗತಿಗೇರುತ್ತದೆ. ಅದರ ಪ್ರಭಾವವು ಯೋಗಾಂಗದ ಮೇಲೆ ಬೀಳುತ್ತದೆ, ಅಂತೆಯೇ ಆ ಲಿಂಗಗಳ ಚಿತ್ಪ್ರಭಾವ ಪ್ರಸಾದ ಲಿಂಗದ ಮೇಲಾಗಿ ಪರಿಣಾಮ ಸ್ವರೂಪವಾದ ಪ್ರಸಾದಲಿಂಗವು ಪಾದೋದಕ ಸ್ವರೂಪದಲ್ಲಿ ಪ್ರವಹಿಸುತ್ತದೆ. ಪ್ರವಹಿಸಿ ಪ್ರಮೋದವನ್ನುಂಟು ಮಾಡುತ್ತದೆ.

ನಿಷ್ಪತ್ತಿಲಿಂಗದಿಂದ ಯೋಗಾಂಗದಲ್ಲಿ ಕ್ರಿಯೆ-ಭಾವ-ಜ್ಞಾನಗಳಲ್ಲಿ ಹೊಸ ಕ್ರಾಂತಿ ಹುಟ್ಟುತ್ತದೆ. ಹೊಸ ದೃಷ್ಟಿ ಹೊಮ್ಮುತ್ತದೆ. ಹೊಸ ಭಾವ ಬೆಳಗುತ್ತದೆ ಆಕಾಶಲಿಂಗದಿಂದ [illegible] ಅವಕಾಶ, ಪ್ರಕಾಶಲಿಂಗದಿಂದ

ದಿವ್ಯ ಪ್ರಕಾಶ ಅಳವಡುತ್ತವೆ. ಇವುಗಳಿಂದ ಬಾಳಿನಲ್ಲಿ ಒಂದು ಹೊಸಯುಗವೇ ಮೊದಲಾಗುತ್ತದೆ. ಕ್ರಿಯೆಯಲ್ಲಿ ಸೂಕ್ಷ್ಮ ಕಾರ್ಯಕ್ಷಮತೆ, ಜ್ಞಾನದಲ್ಲಿ ಹೊಸ ಕಾಂತಿಮತ್ತತೆ, ಭಾವದಲ್ಲಿ ನವಪರಿಣತತೆ ಪರಿಣಾಮಗಳು ತಲೆಯೆತ್ತುವವು. ತ್ರಿವಿಧಾಂಗಗಳಲ್ಲಿ ಒಮ್ಮೆಗೇ ಒಳಿತಾದ ಬದಲಾವಣೆಯಾಗುತ್ತದೆ; ಪರಿಪಕ್ವತೆಯುಂಟಾಗುತ್ತದೆ. ಹಿಂದೆ ಬೆಳೆದು ಬಂದ ಕ್ರಿಯೆ ಜ್ಞಾನ ಭಾವಗಳು ಅಸಾಧಾರಣ ಪ್ರಮಾಣದಲ್ಲಿ ಫಲೋನ್ಮುಖವಾಗುತ್ತವೆ. ಅಸದೃಶ ಶಕ್ತಿ ಸಂಪನ್ನವಾಗುತ್ತವೆ. ಅನಿರ್ವಚನೀಯ ಕಳಾನ್ವಿತವಾಗುತ್ತವೆ. ಅಪ್ರಮಾಣ ಆನಂದ ರಸಾನುಭೂತಿಯನ್ನು ಪ್ರವಹಿಸುತ್ತವೆ.

ಈ ಹನ್ನೆರಡು ಲಿಂಗಗಳು ಯೋಗಾಂಗಾಭಿವೃದ್ಧಿಗೆ ಶುದ್ಧಿಗೆ ಸಿದ್ಧಿಗೆ ಆಕರಗಳಾಗಿವೆ. ಮಹಾಜೀವನದಲ್ಲಿ ಬೆರೆದಿರಲು ಮುಖ್ಯವಾದ ಲಕ್ಷಣಗಳಾಗಿವೆ ಈ ಹನ್ನೆರಡು ಲಿಂಗಗಳ ಸ್ವರೂಪಲಕ್ಷಣಗಳನ್ನು ಮುಂದೆ ಶ್ರೀಜಗದ್ಗುರು ರೇಣುಕ ಶಿವಾಚಾರ್ಯರ ಶಿವವಾಣಿಯಲ್ಲಿ ವಿವರಿಸೋಣವಾಗುತ್ತದೆ.

೧. ದೀಕ್ಷಾ ಪಾದೋದಕ ಸ್ಥಳಂ

ಪ್ರಸಾದಲಿಂಗದ ನಾಲ್ಕು ಲಿಂಗಗಳಲ್ಲಿ ಪ್ರಥಮಲಿಂಗಪಾದೋದಕಲಿಂಗ. ಈ ಪಾದೋದಕ ಲಿಂಗದ ಮೂರುಲಿಂಗಗಳಲ್ಲಿ ಮೊದಲಿನದು ದೀಕ್ಷಾಪಾದೋದಕಸ್ಥಳ. ಇದು ದೀಕ್ಷಾಗುರುದೇವನಿಂದ ಉಂಟಾಗುವುದರಿಂದ ಈ ಹೆಸರು ಬಂದಿದೆ. ಇದಕ್ಕೆ ಗುರುಪಾದೋದಕವೆಂದೂ ಹೆಸರುಂಟು. ಇದು ಕ್ರಿಯಾಪ್ರಧಾನವಾಗಿರುತ್ತದೆ. ಇದರಿಂದಾಗಿ ಇದನ್ನು ಕ್ರಿಯಾ ಪಾದೋದಕವೆಂತಲೂ ಹೇಳಬಹುದಾಗಿದೆ. ಇದರಿಂದ ಕ್ರಿಯೆಗಳ ಸ್ಥೂಲ ಸಂಬಂಧ ಕಡಿಮೆಯಾಗುತ್ತದೆ. ಕ್ರಿಯಾ ದೀರ್ಘತೆಯೂ ಕಡಿಮೆಯಾಗುತ್ತದೆ; ಪರಿಪಕ್ವಗೊಳ್ಳುತ್ತದೆ.

ಸದ್ಗುರುದೇವನ ಕ್ರಿಯಾದೀಕ್ಷೆಯಿಂದ ಇಷ್ಟಲಿಂಗವು ಪಾದೋದಕ ಸ್ವರೂಪವನ್ನು ತಳೆಯುತ್ತದೆ. ಜಂಗಮಲಿಂಗ ಪ್ರತಿಷ್ಠೆಗೆ ಬೇಕಾದ ಅನುಗ್ರಹ ದೀಕ್ಷೆ ಸತ್ಯಶುದ್ಧ ದೀಕ್ಷೆಗಳೊಡನೆ ಮಂತ್ರದೀಕ್ಷೆಯು ಮುಗಿಸಿದ ಬಳಿಕ ಪ್ರಸಾದಲಿಂಗ ಪ್ರತಿಷ್ಠೆಗಾಗಿ ಬೇಕಾಗುವ ಏಕಾಗ್ರಚಿತ್ತ ದೀಕ್ಷೆ, ದೃಢವ್ರತ ದೀಕ್ಷೆ, ಪಂಚೇಂದ್ರಿಯಾರ್ಪಿತ ದೀಕ್ಷೆಗಳನ್ನು ಗುರುದೇವನು ಅನುಗ್ರಹಿಸಿ ಪಾದೋದಕಲಿಂಗದ ಮೊದಲನೆಯದಾದ ದೀಕ್ಷಾ ಪಾದೋದಕ ಸ್ಥಳವನ್ನು ರೂಪಿಸುತ್ತಾನೆ. ಶಿಷ್ಯನಾದ ಶರಣನಲ್ಲಿ ಕ್ರಿಯಾತ್ಮಕ ಶಕ್ತಿಯನ್ನು ಉತ್ತಮವಾದ ಉತ್ಸಾಹವನ್ನು ಕರುಣಿಸುತ್ತಾನೆ.

ಪ್ರಸಾದವನ್ನು ಪಡೆಯಲು ಸನ್ನಿಹಿತ ಸತ್ಕ್ರಿಯೆಯಿದು. ಮುಂದಿನ ನಿಷ್ಪತ್ತಿಗೆ ಸಂತೃಪ್ತಿಗೆ ಸಾಗಲು ಸಮೀಪದ ಸಾಧನೆಯಿದು ; ಅಷ್ಟೇ ಅಲ್ಲ, ಸಿದ್ಧಿಯ ಅಂಕುರವೂ ಆಗಿದೆ. ಈ ದೀಕ್ಷಾ ಪಾದೋದಕದಿಂದ ಪ್ರಸಾದ ಬೀಜ ಮೊಳೆದು ಮೈದೋರುತ್ತದೆ.

ಶಿಷ್ಯನಾದ ಶರಣನಿಗೆ ಈಗ ಉಂಟಾದುದು ಪ್ರಾಕೃತಿಕವಾದ ನೀರಡಿಕೆಯಲ್ಲ. ರಾಜಸ ತಾಮಸ ವೃತ್ತಿಗಳಿಂದಾದ ಹಸಿವಲ್ಲ. ಶರಣನು ಇವನ್ನೆಲ್ಲ ದಾಟಿ ಬಹುದೂರ ಬಂದಿದ್ದಾನೆ. ತ್ರಿಗುಣಗಳನ್ನು ಇವಕ್ಕೆ ಆಶ್ರಯವಾದ ಸ್ಥೂಲ ಸೂಕ್ಷ್ಮ ಕಾರಣ ತನುಗಳನ್ನು ನಿರಸನ ಮಾಡಿ ಸ್ವಪ್ರಕಾಶದಲ್ಲಿ ನಿಜನಿರ್ದೇಶದಲ್ಲಿ ನಿಂತಿದ್ದಾನೆ. ಪಾರಮಾರ್ಥಿಕ ಆನಂದಾಮೃತದ ಆಸಕ್ತಿಯನ್ನು ತಳೆದಿದ್ದಾನೆ. ಪ್ರಾಣಧರ್ಮಗಳನ್ನು ಮನೋಧರ್ಮಗಳನ್ನು ದಾಟಿ ಬಂದಿದ್ದಾನೆ. ತುರೀಯದಲ್ಲಿ ತೋರುವ ತೊಳಗುವ ಬೆಳಗನ್ನು ಕಂಡು ಚಿತ್ಕ್ರಿಯೆಗಳನ್ನೆಲ್ಲ ಮುಗಿಸಿಕೊಂಡು ಪಾದೋದಕ ಪ್ರಸಾದಗಳ ಪರಮಾನುಭಾವವನ್ನು ಪಡೆಯಲು ಆಸಕ್ತನಾಗಿದ್ದಾನೆ. ನಿತ್ಯವನ್ನಳವಡಿಸಿಕೊಂಡು ಪೂರ್ಣಸತ್ಯವನ್ನು ಸಂಪಾದಿಸುವ ದಿಟದ ಹವಣಿಕೆಯಲ್ಲಿ ಹಂಬಲದಲ್ಲಿ ಇದ್ದಾನೆ. ತನಗಿರುವ ಪರಮಾತ್ಮ ಸಂಬಂಧವನ್ನು ಸಂಪೂರ್ಣಗೊಳಿಸಲು ಅಂದರೆ ಆ ಪೂರ್ಣದಿಂದ ಈ ಪೂರ್ಣವನ್ನು ಅಳವಡಿಸಿಕೊಳ್ಳಲು ಅತ್ಯಂತ ಆತುರಗೊಂಡಿದ್ದಾನೆ. ಅಖಂಡಾಮೃತವನ್ನು ಪಾನಮಾಡಲು ಅಖಂಡ ಜೀವನದ ಸಾರವನ್ನು ಸವಿಯಲು ಸನ್ನದ್ಧನಾಗಿದ್ದಾನೆ.

ಸೇವ್ಯಪ್ರಸಾದಿತ್ವದ ಸಂಬಂಧವನ್ನು ಸಂಪಾದಿಸಿದ್ದಾನೆ. ಸೇವ್ಯಪ್ರಸಾದಿಗೆ ದೀಕ್ಷಾಪಾದೋದಕಪಾನ ಅತ್ಯಗತ್ಯ.

"ದೀಕ್ಷಯ್ಯಾಪಗತ ದ್ವೈತಂ ಯದ್‌ಜ್ಞಾನಂ ಗುರುಶಿಷ್ಯಯೋಃ ।
ಆನಂದ ಸ್ಯೈಕ್ಯಮೇತೇನ ದೀಕ್ಷಾ ಪಾದೋದಕಂ ಸ್ಮೃತಂ ॥೧॥"

ಗುರು ದೀಕ್ಷೆಯಿಂದ ದ್ವೈತಭಾವ ದೂರಾಗುತ್ತದೆ ; ಶಿವಾದ್ವೈತ ಜ್ಞಾನ ಸಮನಿಸುತ್ತದೆ. ಗುರು ಶಿಷ್ಯರಲ್ಲಿ ಒಂದೇ ಒಂದಾದ ಶಿವಾನಂದ ಸಂಪ್ರಾಪ್ತವಾಗುತ್ತದೆ. ಅದೇ ಅವರಿಬ್ಬರ ಸಾಮರಸ್ಯ. ಗುರುಶಿಷ್ಯರ ಆನಂದೈಕ್ಯತೆಯೇ ದೀಕ್ಷಾ ಪಾದೋದಕವೆಂದು ಅನುಭವದ ಅರಿಕೆ.

ಚಿತ್ಕ್ರಿಯೆಗಳ ಸಂಪುಟೀಕರಣವೇ ದೀಕ್ಷೆ ಅಥವಾ ಸಂಸ್ಕಾರ. ಅದರಿಂದ ಕ್ರಿಯೆ ಜ್ಞಾನಗಳಲ್ಲಿ ಅಂಗ ಲಿಂಗಗಳಲ್ಲಿ ಗುರು ಶಿಷ್ಯರಲ್ಲಿ ಇರುವ ಭೇದ ಅಡಗುತ್ತದೆ ; ಅಭೇದ ಅಳವಡುತ್ತದೆ. ಆನಂದೈಕ್ಯ ಅಂಗವಿಸುತ್ತದೆ. ಅದೇ ದೀಕ್ಷಾ ಪಾದೋದಕ. ಅದೇ ದೀಕ್ಷೆಯ ಧ್ಯೇಯ.

ಶಿಷ್ಯನಾದ ಶರಣನು ಶ್ರೀ ಗುರುದೇವನಲ್ಲಿರುವ ಚಿದಾನಂದ ಸ್ವರೂಪವನ್ನು ಪಡೆಯುವುದೇ ಸಂಸ್ಕಾರದ ಶ್ರೇಷ್ಠ ಉದ್ದೇಶ. ಒಂದನ್ನು ಕೊಟ್ಟು ಇನ್ನೊಂದನ್ನು ಕಳೆವುದೇ ದೀಕ್ಷೆಯ ಕ್ರಿಯೆ. ಸತ್ತನ್ನು ಕೊಟ್ಟು ಅಸತ್ತನ್ನು ಜ್ಞಾನವನ್ನು ಕೊಟ್ಟು ಅಜ್ಞಾನವನ್ನು ಸುಖವನ್ನು ಕೊಟ್ಟು ದುಃಖವನ್ನು ಅದ್ವೈತವನ್ನು ಕೊಟ್ಟು ದ್ವೈತವನ್ನು ನೀಗುವುದೆ ನಿಜವಾದ ದೀಕ್ಷೆಯ ನೋಟ. ಅದರ ಅರ್ಥವೂ ಅದೇ ಆಗಿದೆ.

ನಿರ್ಮಲ ಕ್ರಿಯೆ ಜ್ಞಾನಾನಂದವೆ ಶ್ರೀ ಗುರುದೇವನ ಕರುಣೆ. ಅದನ್ನು ಆತನಿಂದ ಪಡೆಯುವುದೇ ಶಿಷ್ಯನ ಕರ್ತವ್ಯ. ಪಡೆದುದೇ ದೀಕ್ಷೋಪದೇಶ. ಪಡೆದಾಗ ಗುರು–ಶಿಷ್ಯರಲ್ಲಿರುವ ಈ ಭಾವಸಂಧಿ ಬಿಟ್ಟು ಹೋಗಿರುತ್ತದೆ. ಆ ಆನಂದದಲ್ಲಿ ಅವರೀರ್ವರಲ್ಲಿ ಅವಿರಳತೆ ಅಳವಟ್ಟಿರುತ್ತದೆ. ಅದೇ ಆನಂದೈಕ್ಯ. ಆ ಆನಂದ ಅವರಿಬ್ಬರಲ್ಲಿ ಒಂದೆ !

“ಸತಿ ಪುರುಷರಿಬ್ಬರಿಂದ ಒಂದಾಗಿದ್ದ ಸುಖ
ಪುರುಷನಿಗೋ ಸತಿಗೋ ? ಇದ ನಾ ಭಾಗಿಸಲಂಜುವೆ.
ಇನ್ನಾರಿಗೆ ಸುಖವೆಂಬೆ, ಇನ್ನಾರಿಗೆ ದುಃಖವೆಂಬೆ ?
ಕೂಟದಿಂದ ಹುಟ್ಟಿದ ಶಿಶು ಬೆಳೆಯಿತ್ತು ಹೆಂಗಸಿನಲ್ಲಿ
ಆ ಮಗು ಅವನಿಗೋ ಅವಳಿಗೋ ?
ಬದುಕಿದಡೆ ಸುಖವಿಬ್ಬರಿಗೆ ಸರಿ ;
ಸತ್ತಡೆ ದುಃಖ ಇಬ್ಬರಿಗೂ ಸರಿ.
ಈ ಪುತ್ತಳಿಯ ಇರವ ಇನ್ನಾರಿಗೆ ಹೇಳುವೆ ?
ನಿಃಕಳಂಕ ಮಲ್ಲಿಕಾರ್ಜುನಾ !”

ಆದಯ್ಯ ಶರಣನು ಆನಂದೈಕ್ಯವನ್ನು ಆಕರ್ಷಕವಾಗಿ ಈ ವಚನದಲ್ಲಿ ವಿವರಿಸಿದ್ದಾನೆ. ಈ ಲೌಕಿಕ ಸತಿ-ಪತಿಗಳ ಸಂಧಿ ಸಮರಸಗಳೆ ಅಲೌಕಿಕ ಗುರು ಶಿಷ್ಯರ ಸಂಧಿ ಸಮರಸಗಳು. ಇವರಿಬ್ಬರೂ ಒಂದಾಗಿ ಲಿಂಗ ಶಿಶುವನ್ನು ಪಡೆಯುತ್ತಾರೆ. ಲಿಂಗಾನಂದವನ್ನು ಸಮ ಸಮವಾಗಿ ಸವಿಯುತ್ತಾರೆ.

ಗುರು ಕಾರುಣ್ಯದಾತೃ. ಶರಣ ಶರಣ್ಯಕರ್ತೃ. ಶರಣನು ಶ್ರೀಗುರು ದೇವನಲ್ಲಿಯೋ ತನ್ನ ಶರಣಾರ್ಥಿಯನ್ನು ತನ್ನ ದೀಕ್ಷಾ ಗುರುವಿನಲ್ಲಿಯೋ ಸಲ್ಲಿಸಬೇಕಾದುದು ಸಹಜ ; ಸಮರ್ಪಕ. ‘ಶಿಕ್ಷಕ’ ಇದರಲ್ಲಿ ಶಿಕ್ಷಣ ದಾತೃತ್ವ ಸ್ವಯಂ ಸಿದ್ಧವಾಗಿದೆ. ಅಂತೆಯೇ ‘ದೇಶಿಕ’ ಇದರಲ್ಲಿ ದೀಕ್ಷಾದಾತೃತ್ವ ಸ್ವಯಂ ಸಿದ್ಧವಾಗಿದೆ. ಶಿಕ್ಷಕನಿಗೆ ಶರಣಾದವನೆ ವಿದ್ಯಾರ್ಥಿ. ದೇಶಿಕನಿಗೆ ಸರ್ವಾತ್ಮ ಭಾವದಿಂದ ಶರಣು ಹೊಕ್ಕವನೇ ಶರಣಾರ್ಥಿ. ಈ ಶರಣಾರ್ಥಿಗೆ ಶ್ರೀಗುರು ಶಿವಾತ್ಮ ವಿದ್ಯೆಯನ್ನು ಅನುಗ್ರಹಿಸುತ್ತಾನೆ. ಆ ಶಿವಾತ್ಮ ವಿದ್ಯೆ ಸಚ್ಚಿದಾನಂದ ಸ್ವರೂಪ. ತ್ರಿವಿಧ ಲಿಂಗಸ್ವರೂಪ.

ದೀಕ್ಷೆ ದ್ವೈತಭಾವವನ್ನು ನೀಗುವ ದಿವ್ಯ ಸಂಸ್ಕಾರ. ದುರ್ಬಲತೆಯನ್ನು ದೂಡುವ ಕೊರತೆಯನ್ನು ತುಂಬಿ ತರುವ ಕಲ್ಪತರು. ವಿಷಮತೆಯನ್ನು ವಿಸರ್ಜಿಸುವ ಸಮತೆಯನ್ನು ಸಂಘಟಿಸುವ ಚಿಂತಾರತ್ನ.

“ಸತ್ವಗೆಟ್ಟಲ್ಲಿ ಕಾಷ್ಠವನೂರಿ ನಡೆಯಬೇಕು
[illegible]

ಮಹಾ ಪ್ರಸಾದವೆಂದು ಕೈಕೊಳ್ಳಬೇಕು
ಎನ್ನ ಭಕ್ತಿಗೆ ನೀ ಶಕ್ತಿಯಾದ ಕಾರಣ,
ಎನ್ನ ಸತ್ಯಕ್ಕೆ ನೀ ಸತಿಯಾದ ಕಾರಣ,
ಎನ್ನ ಸುಖ-ದುಃಖ ನಿನ್ನ ಸುಖ ದುಃಖ, ಅನ್ಯವಿಲ್ಲ.
ಇದಕ್ಕೆ ಭಿನ್ನ ಭೇದವೇನು ಹೇಳಾ,
ನಿಃಕಳಂಕ ಮಲ್ಲಿಕಾರ್ಜುನಾ".

ಶ್ರೀಗುರುವಿನ ಶಿವದೀಕ್ಷೋಪದೇಶ ಅದೊಂದು ಮುಂದುಕನ ಕೈಕೋಲಿದ್ದಂತೆ ಶಿಷ್ಯನಿಗೆ ಆಶ್ರಯ. ಸಂಶಯಾತ್ಮನಾದ ಶಿಷ್ಯನಿಗೆ ನಿಶ್ಚಯವನ್ನು ನಿರ್ದೇಶಿಸುವ ಮಹದನುಗ್ರಹ. ಸಂಶಯಕ್ಕಿಂತ ಸತ್ವಹೀನತೆ ಬೇರೊಂದಿಲ್ಲ. ದೇಹ ದೌರ್ಬಲ್ಯಕ್ಕಿಂತ ಆತ್ಮ ದೌರ್ಬಲ್ಯ ಹೆಚ್ಚು ಹಾನಿಕಾರಕ; ಹುಚ್ಚು ದುಃಖದಾಯಕ. ಆತ್ಮ ದೌರ್ಬಲ್ಯ ಅಳಿದು ಸತ್ಯ ಸತ್ವ ಮೈಗೂಡಿ ಕೈಗೂಡಿ ಬರಬೇಕಾದರೆ ಗುರು ಕಾರುಣ್ಯದಿಂದ ಮಾತ್ರ ಸಾಧ್ಯ. ಆ ಗುರು ಕಾರುಣ್ಯಾಮೃತವೇ ದೀಕ್ಷಾ ಪಾದೋದಕ ; ಅದೇ ಮಹಾ ಪ್ರಸಾದ.

ಸತಿ–ಪತಿ ಧರ್ಮಗಳೆರಡು ಕ್ರಮ ನಿಷ್ಠವಲ್ಲ ; ಸಮನಿಷ್ಠ. ಒಮ್ಮೆ ಶರಣ ಸತಿಯಾದರೆ ಮತ್ತೊಮ್ಮೆ ಲಿಂಗ ಅಥವಾ ಗುರು ಸತಿಯಾಗಬೇಕಾಗುತ್ತದೆ. ಇದರಿಂದಾಗಿ ಉಭಯ ನಿಷ್ಠವಾದವು. ಶಕ್ತಿ ಸಂಪನ್ನ ಲಿಂಗವಾಗಲಿ ಗುರುವಾಗಲಿ ಸತಿಭಾವನಿಷ್ಠವಾಗುವಲ್ಲಿ ಅನೌಚಿತ್ಯವೇನಿಲ್ಲ. ಅಂತಾದಾಗಲೇ ಸತಿ ಪತಿ ಭಾವಸಂಧಿ ಬಯಲಾಗಿ ಸಾಮರಸ್ಯ ಸಮನಿಸಬಲ್ಲುದು. ಎರಡಾತ್ಮವೂ ಒಂದೇ ಆದಾಗ ಸತಿಯಾರು ? ಪತಿಯಾರು ? ಆನಂದ ಸ್ವರೂಪಕ್ಕೆ ಲೈಂಗಿಕ ಕುರುಹಿಲ್ಲ.

ಪಾದೋದಕ ಅದೊಂದು ದಿವ್ಯರಸ. ಅದು ಅಂಗನಿಷ್ಠವಾಗಿ ರಸವೆನಿಸುತ್ತದೆ. ಲಿಂಗ ನಿಷ್ಠವಾಗಿ ಆನಂದವೆನಿಸುತ್ತದೆ. ಶಿಷ್ಯನ ಭಕ್ತಿರಸ ಮರದ ಹೂವಿನಲ್ಲಿದ್ದಂತೆ ! ಶ್ರೀಗುರುಲಿಂಗದೇವನ ಕಾರುಣ್ಯ ರಸ ಮರದ ಹಣ್ಣಿನಲ್ಲಿದ್ದಂತೆ ! ಇವೆರಡರ ಸಮರಸವೆ ಒಂದಾದ ಸಂತೋಷ. ಆ ಸಂತೋಷವೇ ದೀಕ್ಷಾಪಾದೋದಕ.

ದ್ವೈತಭಾವ ಇದೊಂದು ಬಂಧ. ಅದಿರುವವರೆಗೂ ದ್ವಂದ್ವ ತಪ್ಪುವುದಿಲ್ಲ; ದುಃಖ ತಪ್ಪುವುದಿಲ್ಲ. ಸಮತ್ವಯೋಗ ಸಮನಿಸುವುದಿಲ್ಲ. ಸಮಯೋಗ ಸಮನಿಸಬೇಕಾದರೆ ದೀಕ್ಷಾಪಾದೋದಕಕ್ಕೆ ಶರಣಾಗದೆ ಗತ್ಯಂತರವಿಲ್ಲ.

"ಅಸ್ಮಾತ್ತ್ವಿತತಾದ್ಬಂಧಾತ್ಪರಸಂಸ್ಥಾನರೋಧಕಾತ್ ।
ದೀಕ್ಷೈನಂ ಮೋಚಯೇತ್ಪೂರ್ವಂ ಶೈವಂ ಧಾಮನಯತ್ಯಪಿ॥"

—ಸ್ವಾಯಂಭುವಾಗಮ.

ಪರಾ ಸ್ವರೂಪಕ್ಕೆ ಸೇರಲು ಅಡೆ ತಡೆಯಾಗಿದೆ ಈ ದ್ವೈತ ಭಾವ. ಇದನ್ನು ಮೊದಲು ದೀಕ್ಷೆಯಿಂದ ಬಿಡಿಸಬೇಕು. ಬಳಿಕ ಶೈವಧಾಮ ಸಂಪ್ರಾಪ್ತವಾಗುತ್ತದೆ. ಆನಂದ ಭೂಮಿ ಲಭಿಸುತ್ತದೆ. ಈ ದಿಸೆಯಲ್ಲಿ ಗುರು ಶಿಷ್ಯ ಸಂಬಂಧ ಒಂದು ಉತ್ತಮವಾದ ಸಂಧಿ. ಅದೇ ಆತ್ಮೈಕ್ಯಾನುಬಂಧಿ.

"ಅಥಾಚಾರ್ಯಃ ಪೂರ್ವರೂಪಂ ಅಂತೇವಾಸ್ಯುತ್ತರ ರೂಪಂ ।
ವಿದ್ಯಾಸಂಧಿಃ । ಪ್ರವಚನಂ ಸಂಧಾನಂ । ಇತ್ಯಧಿ ವಿದ್ಯಂ ॥"

—ತೈತ್ತಿರೀಯೋಪನಿಷತ್.

'ಗುರು-ಶಿಷ್ಯ' ಇದೊಂದು ವಿದ್ಯಾಸಂಹಿತೆಯು. 'ಗುರು' ಪ್ರಥಮ ಪದ; ಶಿಷ್ಯ ಉತ್ತರ ಪದ ಅಂದರೆ ದ್ವಿತೀಯ ಪದ. ಅಂದರೆ ಗುರು ಪ್ರೂರ್ವ ಪ್ರಯೋಗಾರ್ಹ ಪದ; ಶಿಷ್ಯ ಅನಂತರ ಪ್ರಯೋಗಿಸಲು ಉಚಿತವಾದ ಪದ. ಈ ಗುರು-ಶಿಷ್ಯರ ಸಂಬಂಧಕ್ಕೆ ಶಿವಾದ್ವೈತ ವಿದ್ಯೆಯೇ ಸಂಧಿ. ಆಚಾರ್ಯನ ದೀಕ್ಷೋಪದೇಶವೇ ಪ್ರವಚನ. ಇದುವೆ ಉಭಯ ಸಂಧಾನ ಸಾಧನ. ಇದು ಶಿವಾತ್ಮ ವಿದ್ಯೆಯ ಸಂಹಿತೆಯು.

ಆನಂದ ರೂಪ ಪರಬ್ರಹ್ಮ ಸಾಕ್ಷಾತ್ಕಾರಕ್ಕೆ ಗುರು-ಶಿಷ್ಯ ದೀಕ್ಷೋಪದೇಶ ಈ ಮೂರು ಮುಖ್ಯ ಸಂಹಿತೆಗಳು. ಗುರು ಮುಖದಿಂದ ಶಿಷ್ಯನ ಶ್ರೋತ್ರಕ್ಕೆ ಪ್ರಣವ ಪಂಚಾಕ್ಷರ ಮಂತ್ರವು ಉಪದಿಷ್ಟವಾಗಿ ಮಂತ್ರಮಯ ಲಿಂಗಶಿಶು ಉದಯವಾಗುತ್ತದೆ. ಲಿಂಗಾನಂದರೂಪ ದೀಕ್ಷಾಪಾದೋದಕ ಪ್ರಾಪ್ತಿಯಾಗಿ ಅದರಲ್ಲಿ ಉಭಯ ಸಮರಸತ್ವ ಉಂಟಾಗುತ್ತದೆ.

"ಅಥವಾ ಪಾದಶಬ್ದೇನ ಗುರುರೇವ ನಿಗದ್ಯತೇ ।
ಶಿಷ್ಯಶ್ಚೋದಕಶಬ್ದೇನ ತಯೋರೈಕ್ಯಂತು ದೀಕ್ಷಯಾ ॥೨॥"

ಈ ಮಂತ್ರದಲ್ಲಿ ಶ್ರೀ ರೇಣುಕ ಜಗದ್ಗುರುವರ್ಯರು 'ದೀಕ್ಷಾಪಾದೋದಕ'ದ ನಿರ್ವಚನವನ್ನು ನಿರೂಪಿಸಿದ್ದಾರೆ. 'ದೀಕ್ಷಾ ಪಾದೋದಕ' ಇದರಲ್ಲಿ ಮೂರು ಶಬ್ದಗಳಿವೆ. 'ದೀಕ್ಷಾ–ಪಾದ – ಉದಕ' ಎಂಬಿವು. ಇವುಗಳಲ್ಲಿ ಪಾದ ಶಬ್ದದಿಂದ ಗುರು, ಉದಕ ಶಬ್ದದಿಂದ ಶಿಷ್ಯ, ದೀಕ್ಷಾ ಶಬ್ದದಿಂದ ಗುರು- ಶಿಷ್ಯರಿಬ್ಬರ ಐಕ್ಯ–ಎಂದು ನಿಗದವಾಗಿದೆ. ಈ ಸಂಹಿತೆಯು ನಿಗಮಾಗಮ ನಿರ್ಣಯವೆಂದು ಶಿವಾಚಾರ್ಯನ ಸಂಮತ

ಇಲ್ಲಿ ಪ್ರಯೋಗಿಸಿದ ಐಕ್ಯ ಪದ ಸಾಂಕೇತಿಕ. ಅದು ಪ್ರಸಾದ ಲಿಂಗ ಸೂಚಕ ; ಪರಮಾನಂದ ದ್ಯೋತಕ. ಗುರು ಮಂತ್ರೋಪದೇಶ ಮುಖಾಂತರ ಶಿಷ್ಯನಲ್ಲಿ ಹರಿದು ಬರುತ್ತಾನೆ. ಪಾದೋದಕ ಪದಗಳೆರಡು ಕೂಡಿರುವಂತೆ ಕೂಡುತ್ತಾರೆ.

ಗುರು ಶಿಷ್ಯರೊಂದಾಗದೆ ಪಾದೋದಕ ಪ್ರವಹಿಸುವುದಿಲ್ಲ. ಶಿಷ್ಯನ ಸೇವಾಕ್ರಿಯೆ, ಗುರುವಿನ ಸೇವ್ಯಜ್ಞಾನ ಒಂದಾಗಿ ಆನಂದಾಮೃತ ಪ್ರವಹಿಸುತ್ತದೆ. ಶ್ರೀಗುರುದೇವನುಪದೇಶವಿಲ್ಲದಾತ ಶಿಷ್ಯನಲ್ಲ. ಅಂಥವನು ಪಡೆದುಕೊಂಡರೆ ಆ ಚಿದಾನಂದಾಮೃತ ಹೊಮ್ಮದು ; ಸಮರಸ ಸಮನಿಸದು.

"ಕಂಗಳ ಕತ್ತಲೆಯು ಕೆಡಿಸಿದ ರವಿಯು
ಚಂದದಂತಾಯಿತ್ತು ಎನ್ನ ಗುರುವಿನುಪದೇಶ.
ಕನ್ನಡಿಯು ತನ್ನೊಳಗೆ ರವಿಯು
ಇರಿಸಿಕೊಂಡಂತಾಯಿತೆನ್ನ ಗುರುವಿನುಪದೇಶ.
ಜಲವು ನಿರ್ಮಳ ಗಗನವನೊಳಕೊಂಡ
ಪರಿಯಂತಾಯಿತ್ತೆನ್ನ ಗುರುವಿನುಪದೇಶ.
ಚಂದ್ರಕಾಂತದ ಶಿಲೆಯು ಚಂದ್ರಮನ
ಸೋಂಕಿದಂತಾಯಿತ್ತೆನ್ನ ಗುರುವಿನುಪದೇಶ.
ಕೊಡನೊಳಗಣ ಬಯಲ ಹಂಚಿಕೊಂಡ
ಪರಿಯಂತಾಯಿತ್ತೆನ್ನ ಗುರುವಿನುಪದೇಶ.

ಇದು ಕಾರಣ, ಮಹಾಘನ ಸದ್ಗುರು ಸಿದ್ಧಸೋಮನಾಥನೆಂಬ
ಲಿಂಗದಂತಾಯಿತ್ತೆನ್ನ ಗುರುವಿನುಪದೇಶ".

"ಅಯ್ಯಾ, ನೀನೆನಗೆ ಗುರುವಪ್ಪೊಡೆ,
ನಾ ನಿನಗೆ ಶಿಷ್ಯನಪ್ಪೊಡೆ,
ಎನ್ನ ಕರಣಾದಿ ಗುಣಂಗಳ ಕಳೆದು,
ಎನ್ನ ಕಾಯದ ಕರ್ಮವ ತೊಡೆದು,
ಎನ್ನ ಪ್ರಾಣನ ಧರ್ಮವ ನಿಲಿಸಿ, ನೀನೆನ್ನ ಕಾಯದಲಡಗಿ,
ನೀನೆನ್ನ ಪ್ರಾಣದಲಡಗಿ, ನೀನೆನ್ನ ಭಾವದಲಡಗಿ,
ನೀನೆನ್ನ ಕರಸ್ಥಲಕ್ಕೆ ಬಂದು ಕಾರುಣ್ಯವ ಮಾಡು ಗುಹೇಶ್ವರಾ".

ಜಗದ್ಗುರು ರೇಣುಕ ಶಿವಾಚಾರ್ಯರು ನಿರೂಪಿಸಿದಂತೆ ನಿರ್ವಚಿಸಿದಂತೆ ಗುರು ಶಿಷ್ಯರೈಕ್ಯವೇ ಉತ್ತಮ ಉಪದೇಶ. ಅದುವೇ ಗುರು ಶಿಷ್ಯೋಪದೇಶ ದೀಕ್ಷಾಪಾದೋದಕದ ಅರ್ಥವೇ ಅದು.

ಗುರು ಎಂದರೆ ಜ್ಞಾನವನ್ನು ಅನುಗ್ರಹಿಸುವ ಚೇತನ. ಪಾದವೆಂದರೂ ಅದೇ ಅರ್ಥ. ಪದ (ಶಬ್ದ)ದ ಸಂಬಂಧವಾದುದು ಪಾದ. ಪದಾರ್ಥವೆಂದರೂ ಪಾದವೆಂದರೂ ಒಂದೇ ಅಭಿಪ್ರಾಯ. ಶಬ್ದದ ಅರ್ಥಕ್ಕೆ ಪಾದವೆಂದು ಹೇಳಿದೆ. ಅದೇ ಜ್ಞಾನ. ಜ್ಞಾನವೇ ಗುರುವಿಗೆ ಚರಣ. ಅದು ಆತನಲ್ಲಿ ಊರ್ಧ್ವಮುಖವಾಗಿರುತ್ತದೆ. ಅದನ್ನು ಉದಕದಂತೆ ಕೆಳಕ್ಕೆ ಚರಣನಖಗಳ ಮುಖಾಂತರ ಹೊರ ಹೊಮ್ಮುವಂತೆ ಮಾಡುತ್ತಾನೆ ಶಿಷ್ಯ. ಗುರು ಶಿಷ್ಯರೊಂದಾಗಿ ಜ್ಞಾನೋದಕವನ್ನು ತಯಾರಿಸುತ್ತಾರೆ. ಅದಕ್ಕಾಗಿ ಗುರು ಉಪದೇಶಿಸಿದ ಮಂತ್ರವನ್ನೇ ಶಿಷ್ಯನು ಪಾದದ ಮೇಲೆ ಪ್ರಯೋಗಿಸುತ್ತಾನೆ. ಗುರು ಮುಮ್ಮೊದಲು ಉಪದೇಶ ಮುಖಾಂತರ ಶಿಷ್ಯನಲ್ಲಿ, ಶಿಷ್ಯನು ಬಳಿಕ ಪಾದಾರ್ಚನೆಯಲ್ಲಿ ಉಪಚಾರ ಮುಖಾಂತರ ಗುರುವಿನಲ್ಲಿ ಸಮರಸವಾಗುತ್ತಾರೆ.

ಪಾದೋದಕ ಅದೊಂದು ಶ್ರೀಗುರುದೇವನ ಬ್ರಹ್ಮವರ್ಚಸ್ಸು. ಅದುವೇ ಪರಮಾಮೃತ. ಅದನ್ನು ಶಿಷ್ಯನು ಸ್ವೀಕರಿಸಿ ತನ್ನ ಹೃದಯದಲ್ಲಿ ಧಾರಣ ಮಾಡುತ್ತಾನೆ. ಅದರ ಧಾರಣದಿಂದ ದಿವ್ಯ ತೇಜಸ್ಸು ದೊರಕುತ್ತದೆ.

"ಅಮೃತಸ್ಯ ದೇವ ಧಾರಣೋ ಭೂಯಾಸಮ್ ।
ಶರೀರಂ ಮೇ ವಿಚರ್ಷಣಮ್ । ಜಿಹ್ವಾ ಮೇ ಮಧುಮತ್ತಮಾ ।
ಕರ್ಣಾಭ್ಯಾಂ ಭೂರಿ ವಿಶ್ರುವಮ್ ।
ಬ್ರಹ್ಮಣಃ ಕೋಶೋಽಸಿ ಮೇಧಯಾ ಪಿಹಿತಃ ।
ಶ್ರುತಂ ಮೇ ಗೋಪಾಯ

—ತೈತ್ತಿರೀಯೋಪನಿಷತ್

ಪಾದೋದಕವೇ ಅಮೃತಮಯ ಪರಶಿವ. ಅದನ್ನು ತೆಗೆದುಕೊಂಡು ಹೃದಯದಲ್ಲಿ ಧಾರಣ ಮಾಡಬೇಕು. ಪಾದೋದಕ ಪರಬ್ರಹ್ಮವನ್ನು ಹೃದಯದಲ್ಲಿ ಧರಿಸಿದವರ ದೇಹಕ್ಕೆ ರೋಗ ರುಜಿನಗಳು ಬರುವುದಿಲ್ಲ. ನಾಲಗೆ ಸವಿಯಾಗುತ್ತದೆ. ಅಂದರೆ ಮಧುರ ಭಾಷಣ ಸಾಮರ್ಥ್ಯವನ್ನು ಪಡೆಯುತ್ತದೆ. ಕಿವಿಗಳೆರಡು ಪರಮ ಪ್ರಣವನಾದ ಶ್ರವಣ-ಅನುಸಂಧಾನಗಳನ್ನು ಮಾಡುತ್ತವೆ. ಬುದ್ಧಿ ಬ್ರಹ್ಮಜ್ಞಾನದ ಭಾಂಡಾಗಾರವಾಗುತ್ತದೆ. 'ದೀಕ್ಷಾಪಾದೋದಕ'ದ ಈ ನಿರ್ವಚನೋಪದೇಶ ಶಿಷ್ಯನನ್ನು ಸದಾ ರಕ್ಷಿಸುತ್ತದೆ.

ಪಾದೋದಕ ಮಂತ್ರಮಯವೂ ಅಹುದು ; ಗುರು ಮತ್ತು ಲಿಂನಮಯವೂ ಅಹುದು. ಆಚಾರ್ಯನಿಂದ ಬಂದ ಅದು ಶಿಷ್ಯನ ಆತ್ಮ ಕಲ್ಯಾಣಕ್ಕೆ ಕಾರಣವಾಗುತ್ತದೆ. ಗುರುದೇವನ ದೀಕ್ಷೋಪದೇಶದಿಂದ ಪಾದೋದಕ ಪಾನದಿಂದ ಶಿಷ್ಯನ ಉತ್ತಮ ಜೀವನ ರೂಪಿತವಾಗುತ್ತದೆ.

"ಪರಮಾನಂದ ಏವೋಕ್ತಃ ಪಾದಶಬ್ದೇನ ನಿರ್ಮಲಃ ।
ಜ್ಞಾನಂ ಚೋದಕಶಬ್ದೇನ ತಯೋರೈಕ್ಯಂತು ದೀಕ್ಷಯಾ ॥೩॥"

ಶಿವಾಚಾರ್ಯನು 'ದೀಕ್ಷಾಪಾದೋಕ' ಪದ ನಿರ್ವಚನವನ್ನು ಮತ್ತೊಂದು ಬಗೆಯಲ್ಲಿ ಇಲ್ಲಿ ನಿರ್ವಹಿಸಿದ್ದಾನೆ.

ಪಾದ ಶಬ್ದವು ಪರಮಾನಂದವನ್ನು, ಉದಕ ಶಬ್ದವು ನಿರ್ಮಲ ಜ್ಞಾನವನ್ನು, ದೀಕ್ಷಾ ಶಬ್ದವು ಆ ಪರಮಾನಂಧ–ಭಾವನ ಜ್ಞಾನಗಳೆರಡರ ಐಕ್ಯವನ್ನು ಬೋಧಿಸುತ್ತವೆ.

"ವಿಜ್ಞಾನಮಾನಂದಂ ಬ್ರಹ್ಮ" ಎಂಬ ಶ್ರುತ್ಯರ್ಥವನ್ನು "ದೀಕ್ಷಾಪಾದೋದಕ" ಪದದಲ್ಲಿ ನಿರ್ದಿಷ್ಟವಾಗಿ ನಿರೂಪಿಸಿದ್ದಾರೆ. 'ಆನಂದೋ ಬ್ರಹ್ಮ' 'ವಿಜ್ಞಾನಂ ಬ್ರಹ್ಮ' ಎಂದು ತೈತ್ತಿರೀಯ ಶ್ರುತಿ ಸಾರಿದೆ. ಈ ಮಾತುಗಳ ಸಮನ್ವಯ ಸ್ವರೂಪವೇ 'ದೀಕ್ಷಾಪಾದೋದಕ' ಪದಪುಂಜ. ಆನಂದ ಮಯವೂ ವಿಜ್ಞಾನ ಮಯವೂ ಆದುದೇ ಪಾದೋದಕ. ಆನಂದ-ಜ್ಞಾನಗಳ ಸಾಮರಸ್ಯದಲ್ಲಿ ಪರಮಾನುಭೂತಿಯುಂಟಾಗುತ್ತದೆ. ಅದೇ ಮಹಾಜ್ಞಾನಾನಂದ.

ಪ್ರಾಕೃತಿಕ ಬುದ್ಧಿಯಿಂದ ಪ್ರತ್ಯೇಕಗೊಂಡ ಜ್ಞಾನಾನಂದಗಳನ್ನು ಪಾದೋದಕವು ಸಮರಸಗೊಳಿಸುತ್ತದೆ. ಪರಮಾನುಭವಾಮೃತವಾಗಿ ಪರಿಣಮಿಸುತ್ತದೆ,

ಪಾದೋದಕವು ಗುರು ಶಿಷ್ಯರನ್ನು ಸಮರಸಗೊಳಿಸುವಂತೆ ಜ್ಞಾನಾನಂದಗಳನ್ನು ಸಮರಸಗೊಳಿಸುತ್ತದೆ.

"ಪಾದ ತೀರ್ಥವೆಂದಡೆ ಪರಿಪೂರ್ಣ ಮಹಾ ಜ್ಞಾನವು ತಾನೆ ನೋಡಾ:
ಪಾದ ತೀರ್ಥವೆಂದಡೆ ಪರಾತ್ಪರ ಪರವಸ್ತು ತಾನೆ ನೋಡಾ.
ಪಾದ ತೀರ್ಥವೆಂದಡೆ ಮಹಾಘನ ಪರತರ ಪರಂಜ್ಯೋತಿ ತಾನೆ ನೋಡಾ.
ಪಾದ ತೀರ್ಥವೆಂದಡೆ ಪರಮಾನಂದ ಪರಶಿವ ಸ್ವರೂಪು ನೋಡಾ.
ಶ್ರೀ ನಿಡುಮಾವಿಂಡಿ ಶ್ರೀಗಿರಿ ಸೂರ್ಯ ಸಿಂಹಾಸನಾಧೀಶ್ವರ".

ಪಾದ ತೀರ್ಥವು ರಸ ಸೂಚಕವಾಗಿದೆ. ರಸವಿರುವಲ್ಲಿ ಆನಂದ ವಿರುತ್ತದೆ ; ಅರಿವಿರುತ್ತದೆ.

"ರಸೋ ವೈ ಸಃ । ರಸಂ ಹ್ಯೇವಾಯಂ ಲಬ್ಧ್ವಾಽನಂದೀ ಭವತಿ ।"

—ತೈತ್ತರೀಯೋಪನಿಷತ್

ಪಾದೋದಕ ದ್ರವ್ಯ ರಸವಲ್ಲ, ದಿವ್ಯ ರಸ. ಅದನ್ನು ಪಡೆಯುವುದರಿಂದ ವಾಸ್ತವಿಕಾನಂದವುಂಟಾಗುತ್ತದೆ. ವಾಸ್ತವಿಕಾನಂದವು ಅನಿತ್ಯವಲ್ಲ, ಅಪೂರ್ಣವಲ್ಲ, ಪರಿಚ್ಛಿನ್ನವಲ್ಲ. ಅದು ನಿತ್ಯಾನಂದ, ಪೂರ್ಣಾನಂದ ; ಅಖಂಡಾನಂದ. ಆದ್ದರಿಂದ ಅದು ಪರಾತ್ಪರ ವಸ್ತು ; ಪರಿಪೂರ್ಣ ಮಹಾಜ್ಞಾನ ಸ್ವರೂಪ. ಅದರಿಂದಾಗಿ ಅದು ಪರಂಜ್ಯೋತಿ, ಪರಮಾನುಭೂತಿ. ಪ್ರಾಕೃತಿಕ ದ್ರವ್ಯ ರಸಾನಂದವನ್ನು ಪಡೆವುದು ಸರ್ವ ಸಾಮಾನ್ಯ ಜೀವನ ಸ್ವಭಾವ. ಪಾದೋದಕ ಸ್ವರೂಪ ಪರಮಾನಂದಾನುಭವವನ್ನು ಪಡೆವುದು ಸರ್ವಮಾನ್ಯರ ದಿವ್ಯ ಸ್ವಭಾವ. ಸತ್ಯ ಶರಣ ಸ್ವಭಾವ.

"ಪರಸಂವಿತ್ಪ್ರಕಾಶಾತ್ಮಾ ಪರಮಾನಂದ ಭಾವನಾಂ ।
ಅಧಿಗಮ್ಯ ಮಹಾಯೋಗೀ ನ ಭೇದಂ ಕ್ವಾಪಿ ಪಶ್ಯತಿ ॥೪॥"

ಪರಶಿವ ಸಂವಿತ್ತಿನಿಂದ ಪ್ರಕಾಶವಾದ ಆತ್ಮವುಳ್ಳ ಮಹಾಯೋಗಿಯು ಪರಮಾನಂದ ಭಾವನೆಯನ್ನು ಹೊಂದಿ ವಿಶ್ವದಲ್ಲಿ ಎಲ್ಲಿಯೂ ಶಿವನಿಗೆ ಭಿನ್ನವಾಗಿ ಕಾಣುವುದಿಲ್ಲ. ಅಂದರೆ ಎಲ್ಲವೂ ಆತನಿಗೆ ಶಿವಮಯವಾಗಿ ಕಾಣುತ್ತದೆ.

ದೀಕ್ಷಾಪಾದೋದಕದ ಪ್ರಾಪ್ತಿ ಅಂದೊಂದು ಮಹಾಯೋಗ. ಅದನ್ನು ಅನುಭಾವಿ ಆದೆಂದಿಗೂ ಕಳೆದುಕೊಳ್ಳನು. ಅದನ್ನು ಪಡೆದು ಮಹಾಯೋಗಿಯಾಗುತ್ತಾನೆ. ಅದು ಹಿಂದೆ ಹೇಳಿದಂತೆ ಪರಶಿವ ಸ್ವರೂಪವಾದುದರಿಂದ ತಾನೂ ಪರಸಂವಿತ್ತಿನಿಂದ ಪ್ರಕಾಶಿಸುತ್ತಾನೆ. ಪರಮಾನಂದವನ್ನು ಪಡೆಯುತ್ತಾನೆ. ಪ್ರಪಂಚವನ್ನೆಲ್ಲ ಪರಮಾತ್ಮ ಸ್ವರೂಪವನ್ನಾಗಿ ಭಾವಿಸುತ್ತಾನೆ.

ಆ ಪರಸಂವಿತ್ ನಿತ್ಯ ಚೈತನ್ಯ ಸ್ವರೂಪವಾಗಿದೆ ; ಅಜಡವಾಗಿದೆ. ಅದುವೇ ಮಹಾಯೋಗಿಯ ಅಂತರ್ಜ್ಯೋತಿಯಾಗಿ ಹೃದಯಾಕಾಶದಲ್ಲಿ ಪ್ರಕಾಶಮಾನವಾಗುತ್ತದೆ. ಆ ಚಿತ್ಪ್ರಕಾಶದ ಪರಿಣಾಮವಾಗಿ ಪ್ರಾಪ್ತವಾಗುವ ಆನಂದವೇ ಪರಮಾನಂದ. ಆದನ್ನು ಅಳವಡಿಸಿಕೊಂಡವನಿಗೆ ಅಖಂಡ ಶಿವಭಾವವುಂಟಾಗುತ್ತದೆ. ವಿಜ್ಞಾನಮಯಾನಂದವೇ ದೀಕ್ಷಾಪಾದೋದಕವೆಂದೂ ಅದರ ಪ್ರಾಪ್ತಿಯಿಂದ ಭೇದಭಾವವಳಿಯುತ್ತದೆಂದೂ ಈ ಮಂತ್ರದಿಂದ ಮನವರಿಕೆಯಾಗುತ್ತದೆ.

ಸಂವಿತ್ ಪರ, ಅಪರ ಎಂದು ಇಬ್ಬಗೆ. ಪರ ಸಂವಿತ್ ಬರೀ ಬೌದ್ಧಿಕ ಜ್ಞಾನವಲ್ಲ. ಅದು ಅತೀಂದ್ರಿಯ ಜ್ಞಾನ. ಸರ್ವಾಂತರ್ಯಾಮಿಯು ಸಂವಿತ್, ಆದರಿಂದ ಆತ್ಮ ಪ್ರಸನ್ನತೆ ಪ್ರಾಪ್ತವಾಗಿ ಅಖಂಡ ಭಾವ ಅಳವಡುತ್ತದೆ.

ಆ ಪರಸಂವಿತ್ ಸಾಮಾನ್ಯ ಶಬ್ದ ಪ್ರಜ್ಞೆಯಲ್ಲ. ವೈಷಯಿಕ ಪ್ರಜ್ಞೆಯಲ್ಲ. ಪ್ರಮಾಣ ಪರಿಮಿತ ಪ್ರಜ್ಞೆಯಲ್ಲ. ಅದು ಮಾತು ಮನಗಳನ್ನು ಮೀರಿದ ಪ್ರಜ್ಞೆ. ಶಬ್ದ ಸಂಕೇತದ ಆಚೆಗಿರುವ ಸಂವಿತ್. ಅದು ಪರ ಪ್ರಕಾಶ. ಪರಿಚ್ಛೇದರಹಿತ ಪ್ರಕಾಶ.

ಪಾದ–ಉದ ಇವೆರಡು ಪೂರ್ಣ ಸಾಂಕೇತಿಕ ಪದಗಳು. ಲಕ್ಷಣಾವೃತ್ತಿಯುಳ್ಳ ಪದಗಳು. ಪಾದವೆಂದರೆ ಸ್ಥೂಲ ಕರ್ಮೇಂದ್ರಿಯವಲ್ಲ. ಉದವೆಂದರೆ ಜಡಜಲವಲ್ಲ. ಪಾದವೆಂದರೆ ಪರಸಂವಿತ್ಪ್ರಕಾಶ. ಉದವೆಂದರೆ ಪರಮಾನಂದ. ಇವೆರಡು ಒಂದಾದುದೇ ಪಾದೋದ.

ಶಿವಾತ್ಮ ವಿದ್ಯಾಗುರುವಿನ ಪಾದ ಚಿಚ್ಚರಣ ; ಸಂವಿಚ್ಚರಣ. ಚಿಜ್ಜ್ಯೋತಿಯೇ ಗುರುದೇವನ ಚರಣಾಗಿರುತ್ತದೆ. "ಜ್ಯೋತಿಶ್ಚರಣಾಭಿಧಾನಾತ್" ಎಂದು ಬ್ರಹ್ಮಸೂತ್ರ ನಿರೂಪಿಸಿದೆ. ಭೌತಜ್ಯೋತಿಯಲ್ಲ. ಭೌತಜ್ಯೋತಿಗೆ ಪ್ರಾಕೃತ ಎಲ್ಲೆಯಿಲ್ಲ. ಆ ಪ್ರಕಾಶಕ್ಕೆ ಎಲ್ಲೆಯಿಲ್ಲ. ಅದು ಎಲ್ಲ ಲೋಕಗಳಲ್ಲಿ ಪ್ರಕಾಶಿಸುತ್ತದೆ. ದೇಶ ಕಾಲ ವಸ್ತುಗಳ ಪರಿಚ್ಛೇದ ಅದಕ್ಕಿಲ್ಲ.

" ಅಥ ಯದತಃ ಪರೋ ದಿವೋ ಜ್ಯೋತಿರ್ದೀಪ್ಯತೇ
ವಿಶ್ವತಃ ಪೃಷ್ಠೇಷು ಸರ್ವತಂ ಪೃಷ್ಠೇಷು
ಅನುತ್ತಮೇಷು ಉತ್ತಮೇಷು ಲೋಕೇಷು,
ಇದಂ ವಾವ ತದ್ಯದಿದಮಸ್ಮಿನ್ನಂತಃ ಪುರುಷೇ ಜೋತಿಃ ।"

—ಛಾಂದೋಗ್ಯೋಪನಿಷತ್

ಎಲ್ಲ ಕಾಲಗಳಲ್ಲಿ ಎಲ್ಲ ಲೋಕಗಳಲ್ಲಿ ಎಲ್ಲ ಜಡ ಜಂಗಮ ವಸ್ತುಗಳಲ್ಲಿ ಬೆಳಗುವ ಜ್ಯೋತಿಯದು. ಅದುವೇ ಪರಸಂವಿತ್ಪ್ರಕಾಶ. ಅದು ವಿಶೇಷವಾಗಿ ಪುರುಷ ಹೃದಯದಲ್ಲಿ ಬೆಳಗುತ್ತದೆ. ಅದು ಜಠರಾಗ್ನಿಯಲ್ಲ. ಭೌಮ್ಯಾಗ್ನಿ

ಯಲ್ಲ ; ಭಾನು ಶಶಿ ತಾರೆಗಳಲ್ಲ. ಇವೆಲ್ಲವುಗಳ ನಿವೃತ್ತಿಗಾಗಿ 'ಪರ ಸಂವಿತ್' ಎಂದು ಹೇಳಲಾಗಿದೆ. ಆ ಪ್ರಕಾಶ ಪುರುಷನಲ್ಲಿ ಅಂದರೆ ಪರಮಾತ್ಮನಲ್ಲಿ ಸಾಮಾನ್ಯವಾಗಿರುವುದು. ಶಿವಾತ್ಮ ವಿದ್ಯಾಗುರುವಿನಲ್ಲಿ ವಿಶೇಷವಾಗಿ ಅಂದರೆ ಅಭಿವ್ಯಕ್ತವಾಗಿ ಅನುಭವಕ್ಕೆ ಆಗರವಾಗಿ ಇರುವುದು. ಅದು ಗುರುದೇವನ ಶ್ರೀ ಚರಣಗಳಿಂದ ಹೊರ ಹೊಮ್ಮುತ್ತಿರುತ್ತದೆ. ಆದ್ದರಿಂದ ಅದು 'ಪಾದ' ವೆನಿಸಿದೆ. ಅದು ಪರ ಪ್ರಕಾಶವಾದಂತೆ, ಪರಮಾಮೃತವೂ ಆಗಿದೆ. ಆದ್ದರಿಂದ ಉದ ಪದ ನಿರ್ದಿಷ್ಟವಾಗಿದೆ. "ಪಾದೋಽಸ್ಯ ಸರ್ವಾಭೂತಾನಿ ತ್ರಿಪಾದಸ್ಯಾಮೃತಂ ದಿವಿ" ಎಂದು ಆದೇ ಛಾಂದೋಗ್ಯಶ್ರುತಿ ಸಾರಿದೆ. ಆ ಪರಸಂವಿತ್ಪ್ರಕಾಶ ಪಾದ ಪದ ಲಕ್ಷಿತವೂ ಆಹುದು ; ಅಮೃತ ಪದ ಲಕ್ಷಿತವೂ ಅಹುದು. ಇದರಿಂದಾಗಿ ಪಾದೋದವೆಂದರೆ ಪರಸಂವಿತ್ಪ್ರಕಾಶ ಮತ್ತು ಪರಮಾನಂದ. ಅಂತಹ ಪಾದೋದವನ್ನು ಪಡೆದ ಶರಣ, ಪಡೆದ ಶಿಷ್ಯ ಅವನೇ ಮಹಾಯೋಗಿ; ಪರಸಂವಿತ್ಪ್ರಕಾಶಾತ್ಮ ; ಪರಮಾನಂದ ಭಾವಿ. ಸರ್ವಸಮತಾ ಜೀವಿ.

ಶ್ರೀ ಶಿವಾತ್ಮ ವಿದ್ಯಾ ಗುರುದೇವನ ಪಾದೋದವನ್ನು ಪಾನ ಮಾಡಿದವರ ಮನ ಜ್ಯೋತಿರ್ಮಯವಾಗುತ್ತದೆ. ಮಾತು ಜ್ಯೋತಿರ್ಮಯವಾಗುತ್ತದೆ.

ಶರಣನ ಉಪಾಸನೆಗಾಗಿ ಉಪಯೋಗಕ್ಕಾಗಿ ಶ್ರೀಗುರುದೇವನ ಚರಣವಾಗಿ ಪಾಣಿಯಾಗಿ ವಾಣಿಯಾಗಿ ನೋಟವಾಗಿ ಜ್ಞಾನಾನಂದಗಳು ಪ್ರಕಾಶಾಮೃತಗಳಾಗಿ ಪರಿಣಮಿಸಿರುತ್ತವೆ. ಪರ್ಯವಸಾನದಲ್ಲಿ ಪರಂಜ್ಯೋತಿ ಸ್ವರೂಪವನ್ನು ತಳೆಯುತ್ತವೆ.

"ಏಷ ಸಂಪ್ರಸಾದೋಽಸ್ಮಾಚ್ಛರೀರಾತ್ ಸಮುತ್ಥಾಯ
ಪರಂಜ್ಯೋತಿರುಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ ।"

—ಛಾಂದೋಗ್ಯೋಪನಿಶತ್

ಆ ಪರಂಜ್ಯೋತಿಯೇ ಪರಮ ಗುರುವಿನಲ್ಲಿ ಪ್ರಸಾದಲಿಂಗವಾಗಿರುತ್ತದೆ. ಅಂತೆಯೇ ಉಪಾಸಕನಾದ ಶರಣನಲ್ಲಿಯೂ ಪ್ರಸಾದಲಿಂಗವಾಗಿರುತ್ತದೆ. ಐಕ್ಯ ಸ್ಥಲದಲ್ಲಿ ಮರಳಿ ಆ ಪರಂಜ್ಯೋತಿ ಸ್ವರೂಪವನ್ನು [illegible] ಶರಣ

ಸ್ಥಲದ ಜೀವನ್ಮುಕ್ತಿ ಸ್ಥಿತಿಯಲ್ಲಿ ಹೃದಯ ಪ್ರಾಣಗಳಲ್ಲಿ ಕಂಠ ಕರ್ಣಗಳಲ್ಲಿದ್ದು ಕಳೆಗೊಂಡಿರುತ್ತದೆ. 'ಯೋಽಯಂ ವಿಜ್ಞಾನಮಯಃ ಪ್ರಾಣೇಷು ಹೃದ್ಯಂತರ್ಜ್ಯೋತಿಃ ಪುರುಷಃ ; ಸ ಸಮಾನಃ ಸನ್ನು ಭೌಲೋಕಾವನುಸಂಚರತಿ ।' ಎಂದು ಅದೇ ಛಾಂದೋಗ್ಯ ಶ್ರುತಿಯು ಹೇಳಿದೆ. ಅದು ಆಕಾಶಾಂಗದಲ್ಲಿ ಅಂದರೆ ಯೋಗಾಂಗದಲ್ಲಿ ಪ್ರಕಾಶವಾಗಿ ಪ್ರಾಣಾಂಗ ಅಂದರೆ ಭೋಗಾಂಗದಲ್ಲಿ ರಶ್ಮಿಯಾಗಿ, ತ್ಯಾಗಾಂಗದಲ್ಲಿ ಪ್ರದೀಪ ಸ್ವರೂಪವಾಗಿರುತ್ತದೆ. ಹೀಗೆ ಆ ಪರ ಸಂವಿತ್ಪ್ರಕಾಶ ಸರ್ವಾಂಗದಲ್ಲಿ ವ್ಯಾಪಿಸಿ ಮಹಾಯೋಗಿಯು ಪರಸಂವಿತ್ಪ್ರಕಾಶಾತ್ಮನಾಗಿರುತ್ತಾನೆ. ಪ್ರದೀಪವೆ ಕ್ರಿಯಾಲಿಂಗ, ರಶ್ಮಿಯೇ ಜ್ಞಾನಲಿಂಗ ; ಪ್ರಕಾಶವೆ ಭಾವಲಿಂಗ. ಭಾವಲಿಂಗದ ಒಂದು ಸ್ವರೂಪವೆ ಪ್ರಸಾದಲಿಂಗ. ಇದರಲ್ಲಿ ಸಂವಿತ್ ಸಂತೋಷಗಳಿರುತ್ತವೆ. ಇವನ್ನು ಅಳವಡಿಸಿಕೊಂಡ ಶರಣ ಮಹಾಯೋಗವುಳ್ಳವನಾಗುತ್ತಾನೆ. ಆ ಮಹಾಯೋಗ ಮುಮ್ಮೊದಲು ಮಹಾ ಗುರುದೇವನ ಪಾದೋದಕದಿಂದ ಪ್ರಾಪ್ತವಾಗುತ್ತದೆ.

"ದೇಶಕಾಲಾದ್ಯವಚ್ಛೇದವಿಹೀನಂ ನಿತ್ಯನಿರ್ಮಲಂ ।
ಆನಂದಂ ಪ್ರಾಪ್ಯ ಬೋಧೇನ ನಾನ್ಯತ್ಕಾಂಕ್ಷತಿ ಸಂಯಮೀ ॥೫॥"

ದೇಶ ಕಾಲ ದ್ರವ್ಯಾದಿಗಳ ಭೇದವಿಲ್ಲದುದು, ನಿತ್ಯ ನಿರ್ಮಲವಾದುದು— ಆ ಪಾದೋದ ರೂಪ ಪರಮಾನಂದ. ಅದನ್ನು ಶ್ರೀಗುರುದೇವನ ಬೋಧದಿಂದ ಪಡೆದ ಶರಣನು ಬೇರೆ ಯಾವ ಪದಾರ್ಥವನ್ನು ಅಪೇಕ್ಷಿಸನು.

ಅದು ಅಪ್ರಮೇಯವಾಗಿ ದೇಶಾವಚ್ಛಿನ್ನತೆಯಿಲ್ಲ. ಅದು ನಿತ್ಯವಾಗಿ ಕಾಲಪರಿಚ್ಛಿನ್ನವಿಲ್ಲ. ಅದು ಸತ್ಯ ಸ್ವರೂಪವಾಗಿ ದ್ರವ್ಯ ಪರಿಚ್ಛಿತೆಯಿಲ್ಲ, ಅದು ಪರಿಪೂರ್ಣ ಸ್ವರೂಪ ಅದು ಭೇದಾಭೇದ ಸ್ವರೂಪವಾದ್ದರಿಂದ ಬಾಹ್ಯ ರೂಪಗಳಲ್ಲಿ ಭೇದವಿದ್ದರೂ ಅಂತರ್ದೃಷ್ಟಿಯಿಂದ ಅಭೇದವಾಗಿದೆ. ರೂಪಭೇದ ರುಚಿ ಭೇದಗಳಿವೆ. ಆದರೆ ತೃಪ್ತಿಗೆ ಭೇದವಿಲ್ಲ. ಶಬ್ದ ಭೇದವಿದ್ದರೂ ಭಾವ ಭೇದವಿಲ್ಲ. ಲಕ್ಷ್ಯ ಭೇದವಿಲ್ಲ.

ಆನಂದವೆ ಪರಶಿವ ಸ್ವರೂಪ. ಆನಂದವು ಎಲ್ಲ ದೇಶಗಳಲ್ಲಿ ಎಲ್ಲ ಕಾಲಗಳಲ್ಲಿ ಎಲ್ಲ ದ್ರವ್ಯಗಳಲ್ಲಿ ಇರುತ್ತದೆ. ಸಕಲ ಭಾವಾಧಿಷ್ಠಾತೃತ್ವ ಅದಕ್ಕಿದೆ. ಅದು ನಿತ್ಯನಿರ್ಮಲವಾಗಿರುವುದರಿಂದ ಅದು ತೃಪ್ತಿ ಸ್ವರೂಪವಾಗಿದೆ ;

ಪಾದೋದಕ ಸ್ವರೂಪವಾಗಿದೆ. ಅದನ್ನು ದೀಕ್ಷಾರೂಪ ಬೋಧೆಯಿಂದಲೇ ಪಡೆಯಬೇಕು,

ಎಲ್ಲೆಲ್ಲಿಯೂ ಇರುವ ಅಂದರೆ ಎಲ್ಲ ಭಾವವಸ್ತುಗಳಲ್ಲಿರುವ ಆನಂದ ನಿತ್ಯಾನಂದವಲ್ಲ, ಪೂರ್ಣಾಖಂಡಾನಂದವಲ್ಲ. ವಿಷಯೇಂದ್ರಿಯ ಸಂಬಂಧದಿಂದುಂಟಾಗುವ ಆನಂದಕ್ಕೆ ಬೋಧದ ಅವಶ್ಯಕತೆಯಿರುವುದಿಲ್ಲ. ಅತೀಂದ್ರಿಯಾನಂದ ಪ್ರಾಪ್ತಿಗೆ ಬೋಧ ಅವಶ್ಯಕ.

ಪರಿಮಿತ ವಸ್ತುಗಳಿಗೆ ಅವಚ್ಛೇದವಿದೆ. ಅಪರಿಮಿತ ವಸ್ತುವಿಗೆ ಅವಚ್ಛೇದವಿಲ್ಲ. ಜಾತಿ ಲಕ್ಷಣ ದೇಶ ಕಾಲಗಳಿಂದ ಪರಿಮಿತ ವಸ್ತುಗಳ ಭೇದಜ್ಞಾನವುಂಟಾಗುತ್ತದೆ. ಆನಂದಾನುಭೂತಿಗೆ ಜಾತಿ ರೂಪು ದೇಶ ಕಾಲಗಳ ಉಪಾಧಿ ಅಪೇಕ್ಷಿತವಲ್ಲ.

ಭಾವ ವಸ್ತುಗಳಲ್ಲಿ ಜಾತಿ ವೈಷಮ್ಯ ಲಕ್ಷಣ ವೈಷಮ್ಯಾದಿಗಳುಂಟು. ಭಾವಾತೀತವಾದ ಪರಮಾನಂದಕ್ಕೆ ಜಾತಿ ಲಕ್ಷಾದಿ ವೈಷಮ್ಯಗಳಿಲ್ಲ ದೇಶ ಕಾಲಾದಿ ಅವಚ್ಛೇದಗಳಿಲ್ಲ. ವೈಷಮ್ಯವೆಂದರೆ ವರ್ಗವೆಂದರ್ಥ. ಲಕ್ಷಣವೆಂದರೆ ವರ್ಣ ರೂಪುಗಳೆಂದರ್ಥ. ಜಾತಿಯೆಂದರೆ ಘಟತ್ವ ಪಟತ್ವ ಗೋತ್ವ ಮುಂತಾದವುಗಳು.

ಇನ್ನು ನಿತ್ಯ–ನಿರ್ಮಲ ವಿಚಾರ ; ನಿತ್ಯತ್ವ ನಿರ್ಮಲತ್ವಗಳು ಆನಂದ ಲಕ್ಷಣಗಳು. ಅನಿತ್ಯತ್ವ ಅಶುಚಿತ್ವಗಳು ದುಃಖ ಲಕ್ಷಣಗಳು. ಇವಿರುವಲ್ಲಿ ಅಜ್ಞಾನ ಅಸುಖಗಳಿರುವವು. ನಿತ್ಯತೆ ನಿರ್ಮಲತೆಗಳಿರುವಲ್ಲಿ ಜ್ಞಾನ ಸುಖಗಳಿರುವವು. ಬೋಧ (ದೀಕ್ಷೆ) ದಿಂದ ನಿತ್ಯತ್ವ ನಿರ್ಮಲತ್ವಗಳುಂಟಾಗುತ್ತವೆ. ದೀಕ್ಷಾಪಾದೋದಕದಲ್ಲಿ ನಿತ್ಯತ್ವ ನಿರ್ಮಲತ್ವಗಳುಂಟು.

ಇಹ–ಪರ ದೇಶಗಳ ಭೂತ ಭವಿಷತ್ಕಾಲಗಳ ಹಂಗು ಹರಿದ ಚಿತ್ಕಳಾ ಗುರುದೇವನಲ್ಲಿ ಅನಿತ್ಯತೆಗೆ ಇಂಬಿರದು. ಮಾಂಸಮಯತ್ವವನ್ನು ಕಳೆದು ಮಂತ್ರಮಯ ಪಿಂಡವನ್ನಾಗಿಸಿಕೊಂಡ ಆತನ ಆ ಅಂಗದಲ್ಲಿ ಮಲವಿರಲು ಸಾಧ್ಯವಿಲ್ಲ ; ಅಶುಚಿತ್ವಕ್ಕೆ ಎಡೆಯಿಲ್ಲ. ನಿತ್ಯ ನಿರ್ಮಲ ರೂಪನಾದ ಗುರುಚರಣೋದಕ ನಿತ್ಯ ನಿರ್ಮಲವಾಗದೇನು ? ಸುಖ ಸ್ವರೂಪವಾಗದೇನು ?

ಅಂತಹ ಆ ಆನಂದರೂಪ ಪಾದೋದಕವನ್ನು ಶರಣನು ಬೋಧದಿಂದ ಪಡೆಯಬೇಕು. ಏಕೆಂದರೆ ಚಿತ್ತವಾಸನೆಯಿದ್ದರೆ ಅದು ಲಭಿಸುವುದಿಲ್ಲ. ಆ ಚಿತ್ತವಾಸನೆಗೆ ಬೇಕಾದ ಕಾರ್ಯ ಕಾರಣಗಳಿದ್ದರೂ ಅದು ಲಭಿಸುವುದಿಲ್ಲ. ಅಂದರೆ ಅದರಿಂದ ಅಚ್ಚಳಿಯದ ಆನಂದವುಂಟಾಗುವುದಿಲ್ಲ.

ಚಿತ್ತ ವಾಸನೆಗಳು ಎಂದಿಗೂ ನಾಶವಾಗುವುದಿಲ್ಲ. ವ್ಯಕ್ತವಾಗದೆ ಸೂಕ್ಷ್ಮವಾಗಿ ಇದ್ದೇ ಇರುತ್ತವೆ. ಉದ್ಬೋಧಕ ಕಾರ್ಯ ಕಾರಣಗಳಿಂದ ಅವು ವ್ಯಕ್ತವಾಗುತ್ತವೆ.

"ಅತೀತಾನಾಗತಂ ಸ್ವರೂಪತೋಽಸ್ತ್ಯಧ್ವ ಭೇದಾದ್ಧರ್ಮಾಣಾಂ।"

ಎಂದು ಪಾತಂಜಲಯೋಗ ಸೂತ್ರವು ವಾಸನೆಗಳ ಅಸ್ತಿತ್ವವನ್ನು ಕಾರಣವನ್ನು ತಿಳಿಸಿದೆ. ಅಧ್ವಭೇದದಿಂದ ಅಂದರೆ ಕಾಲ ಕರ್ಮಗಳ ಭೇದದಿಂದ ವಾಸನೆಗಳು ಅತೀತವಾಗಿ ಅನಾಗತವಾಗಿ ಇರುತ್ತವೆಯೆಂದು ಪತಂಜಲಿ ಋಷಿಯು ನಿರೂಪಿಸಿದ್ದಾನೆ. ಅಂದರೆ ಭೂತಕಾಲದ ವಾಸನೆ, ವರ್ತಮಾನ ಕಾಲದ ವಾಸನೆ, ಭವಿಷ್ಯತ್ಕಾಲದ ವಾಸನೆ ಎಂದು ಮೂರು ಬಗೆ. ಇವನ್ನು ಅಣಗಿಸಬೇಕಾದರೆ ದೀಕ್ಷಾ ರೂಪ ಬೋಧೆ ಅತ್ಯವಶ್ಯ.

ಶರಣನಾದರೂ ವಾಸನೆಗೆ ಹೊರಗಾದವನಲ್ಲ. ಆ ಪರಸಂವಿತ್ಪ್ರಕಾಶವೂ ಪರಮಾನಂದವೂ ಆದ ಪಾದೋದಕ ಪ್ರಾಪ್ತಿಗೆ ಚಿತ್ತವಾಸನೆಗಳಿರಬಾರದು ಚಿತ್ತಶುದ್ಧಿಯಾಗಬೇಕಾದರೆ ಶ್ರೀಗುರುದೇವನ ದೀಕ್ಷೆ ಅಂದರೆ ಬೋಧೆ ಅನುಭವಿ ಪ್ರವಚನರೂಪದಲ್ಲಿ ಆಗಲೇಬೇಕು. ಆಗ ಆನಂದ ಲಭಿಸುತ್ತದೆ. ಅನ್ಯದರ ಆಶೆ ಅಳಿಯುತ್ತದೆ. ಆಗ ಶರಣ ಸಂಯಮಿಯಾಗುತ್ತಾನೆ.

"ಜ್ಞಾನಾಮೃತ ಮತಿಸ್ವಚ್ಛಂ ಗುರುಕಾರಣ್ಯಸಂಭವಂ।
ಆಸ್ವಾದ್ಯ ರಮತೇ ಯೋಗೀ ಸಂಸಾರಾಮಯಂವರ್ಜಿತಃ ॥೬॥"

ಆ ಆನಂದ ಬೇರಲ್ಲ ; ಅದು ಜ್ಞಾನಾಮೃತ. ಅದು ಅತ್ಯಂತ ನಿರ್ಮಲ ; ಮತ್ತು ಅದು ಗುರುಕಾರುಣ್ಯದಿಂದ ಲಭ್ಯ. ಅದನ್ನು ಪಡೆದ ಶರಣಯೋಗಿಯು ಸಂಸಾರ ದುಃಖದಿಂದ ಬಿಡುಗಡೆಯನ್ನು ಹೊಂದಿ ಸ್ವಸ್ವರೂಪದಲ್ಲಿ ಸಂತೋಷಿಸು

ತ್ತಾನೆ. ಅಂದರೆ ಆ ಜ್ಞಾನಾಮೃತವನ್ನು ಆಸ್ವಾದಿಸಿ ಆನಂದಿಸುತ್ತಾನೆ. ಗುರು ಕೃಪೆಗೆ ಪಾತ್ರನಾಗಿ ಭವರೋಗ ನೀಗುತ್ತಾನೆ.

ಜ್ಞಾನ ಅದೊಂದು ಅಮೃತ. ಆ ಜ್ಞಾನಾಮೃತ ಧೇನು ಗುರು. ಗುರುವಿನ ಕಾರುಣ್ಯದಿಂದ ಜ್ಞಾನಾಮೃತ ಲಭಿಸುತ್ತದೆ. ಹಾಲಿಗಿಂತಲೂ ಸ್ವಚ್ಛವಾದುದು ಗುರುಕಾರುಣ್ಯಜನ್ಯ ಜ್ಞಾನಾಮೃತ. ಅದು ಹಾಲಿಗಿಂತ ಹೆಚ್ಚು ಮಧುರ ಅದನ್ನು ಕುಡಿದವರು ನಿರಾಮಯರಾಗುತ್ತಾರೆ. ಸಂಸಾರ ರೋಗ ಸನಿಹಕ್ಕೆ ಸುಳಿಯದು. ಸಾವಿನಂಜಿಕೆ ಸಾಯುವದು. ಅದರ ಹೆಸರು ಅಮೃತ ಅದನ್ನು ಆಸ್ವಾದಿಸಿದವರು ಅಮರರು.

ಜ್ಞಾನಾಮೃತ ರಸಾಸ್ವಾದದಿಂದ ಅತ್ಯಾನಂದವುಂಟಾಗುತ್ತದೆ; ನಿತ್ಯಾನಂದವುಂಟಾಗುತ್ತದೆ. ಆ ಅಮೃತ ರಸಸಿದ್ಧ ಶ್ರೀಗುರು. ಅದರಿಂದ ಅವನು ಭವರೋಗ ವೈದ್ಯ. ದೀಕ್ಷಾಪಾದೋದಕವೇ ಆತನಿಂದ ಬರುವ ಜ್ಞಾನಾಮೃತ.

ಗುರುಕಾರುಣ್ಯ ಸ್ವರೂಪವನ್ನು ವಿವರವಾಗಿ ಈ ವಚನವು ತೋರಿಸಿ ತಿಳಿಸುತ್ತದೆ.

“ಗುರು ಶಿಷ್ಯಸಂಬಂಧ ವೆಂತೆಂದೊಡೆ, ಹೇಳಿಹೆ ಕೇಳಿರೋ ಸದ್ಭಕ್ತ ಶರಣ ಜನಂಗಳೆಲ್ಲರು: ಶ್ರೀಗುರು ಶಿಷ್ಯಂಗೆ ಉಪದೇಶ ಮಾಡುವ ಕಾಲದಲ್ಲಿ, ಶಿಷ್ಯನ ಸ್ಥೂಲತನು ಸೂಕ್ಷ್ಮತನು ಕಾರಣತನುವೆಂಬ ತನುತ್ರಯಂಗಳಲ್ಲಿ ಮುಸುಕಿದ ಆಣವಮಲ ಮಾಯಾಮಲ ಕಾರ್ಮಿಕಮಲತ್ರಯಂಗಳ ಕಳೆದು ಮಾಯಾಪ್ರಕೃತಿ ಕಾಯದ ಪೂರ್ವಾಶ್ರಯದಲ್ಲಿ ಚಿದಗ್ನಿಯಿಂದ ಸುಟ್ಟು ಚಿತ್ಕಾಯವೆಂದೆನಿಸಿ, ಆ ಚಿತ್ಕಾಯ ಸ್ವರೂಪಾದ ಶಿಷ್ಯನ ಮಸ್ತಕದಲ್ಲಿ ಹಸ್ತವನಿರಿಸಿ,

“ಯಥಾ ಕಾಲಸ್ತಥಾ ಭಾವೋ ಯಥಾ ಭಾವಸ್ತಥಾ ಮನಃ ।
ಯಥಾ ಮನಸ್ತಥಾ ತೃಪ್ತಿರ್ದೃಷ್ಟಿಸ್ತಥಾ ಸ್ಥಲಂ ॥

ಎಂಬ ಆಗಮೋಕ್ತವಾಗಿ, ಆ ಶಿಷ್ಯನ ಪಶ್ಚಿಮ ದೇಶದಲ್ಲಿ ಬೆಳಗುತ್ತಿದ್ದ ನಿತ ನಿರಂಜನ ಪರಮ ಕಳೆಯನ್ನು ಧ್ಯಾನಿಸಿ, ಭಾವಸ್ಥಲಕ್ಕೆ ತಂದು, ಆ ಭಾವ ಸ್ಥಲಿ

ದಿಂದ ಮನಸ್ಥಲಕ್ಕೆ ತಂದು, ಆ ಮನಸ್ಥಲದಿಂದ ದೃಷ್ಟಿಸ್ಥಲಕ್ಕೆ ತಂದು, ಆ ದೃಷ್ಟಿಸ್ಥಲದಿಂದ ಕರಸ್ಥಲಕ್ಕೆ ತಂದು, ಆ ಕರಸ್ಥಲದಿಂದ ಸಾಕಾರ ಮೂರ್ತಿಯಲ್ಲಿ ಮೂರ್ತಗೊಳಿಸಿ ಆ ಲಿಂಗಕ್ಕೆ ಜಂಗಮ ಪಾದತೀರ್ಥ ಪ್ರಸಾದವನೇ ಪ್ರಾಣಕಳೆ ಎಂದೆನಿಸಿ ಅರ್ಪಿಸಿ ಮತ್ತು ಇಷ್ಟಲಿಂಗವೇ ಅನಿಷ್ಟ ಪಂಚಕಂಗಳ ಕಳೆದು ಕತ್ತಲೆಯ ಓಡಿಸುವುದಕ್ಕೆ ಚತುರನೆಂದು ನಂಬುಗೆಗೊಳಿಸಿ, ಮತ್ತಮಾ ಇಷ್ಟಲಿಂಗದಲ್ಲಿ ವೃತ್ತ, ಕಟಿ, ವರ್ತುಲ, ಗೋಮುಖ, ನಾಳ, ಗೋಳಕವೆಂಬ ಆರು ಸ್ಥಲಂಗಳ ತೋರಿ, ಆ ಆರು ಸ್ಥಲಂಗಳಲ್ಲಿ ನ-ಮ-ಶಿ-ವಾ-ಯ–ಓಂಕಾರವೆಂಬ ಆರು ಪ್ರಣವಗಳನ್ನು ಬೋಧಿಸಿ, ಆ ಆರು ಪ್ರಣವಗಳನ್ನೇ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗಗಳೆಂಬ ಆರು ಲಿಂಗಗಳ ನರುಪಿ, ಆರು ಲಿಂಗಳಿಗೆ ಘ್ರಾಣ, ಜಿಹ್ವೆ, ನೇತ್ರ, ತ್ವಕ್ಕು, ಶ್ರೋತ್ರ, ಹೃದಯಗಳೆಂಬ ಆರು ಇಂದ್ರಿಯಂಗಳನ್ನೇ ಆರು ಮುಖಗಳೆಂದು ತಿಳುಪಿ, ಆ ಮುಖಂಗಳಿಗೆ ಗಂಧ ರುಚಿ ರೂಪು ಸ್ಪರ್ಶ ತೃಪ್ತಿ ಎಂಬಾರು ಪದಾರ್ಥಗಳನ್ನು ಶ್ರದ್ಧಾ, ನೈಷ್ಠಿಕಾ, ಸಾವಧಾನ, ಅನುಭಾವ, ಆನಂದ, ಸಮರಸವೆಂಬಾರು ಭಕ್ತಿಗಳಿಂದರ್ಪಿಸಿ, ಸಕೀಲವ ತೋರಿಸಬಲ್ಲಾತನೇ ಗುರುವು. ತೋರಿಸುವಿಕೆಯೇ ಕಾರುಣ್ಯ. ಗುರುವಿನ ಆ ಕಾರುಣ್ಯದಿಂದ ಪಡೆದಂಥ ಇಷ್ಟಲಿಂಗವನ್ನು ಕರ ಮನ ಭಾವ ಮಂಟಪದಲ್ಲಿ ಮೂರ್ತಿಗೊಳಿಸಿ, ಸಗುಣ ಪೂಜೆ, ನಿರ್ಗುಣ ಪೂಜೆ, ಕೇವಲ ನಿರ್ಗುಣ ಪೂಜೆ ಮಾಡಿ ಆ ಲಿಂಗದ ಮಹಾ ಬೆಳಗಿನೊಳಗೆ ತನ್ನಂಗದ ಕಳೆಯ ನಡಗಿಸಿ, ಉರಿ ಕಪ್ಪುರ ಸಂಯೋಗದಂತೆ ಅವಿರಳ ಸಮರಸವಾಗಿರ್ಪಾತನೇ ಶಿಷ್ಯನು. ಇಂತೀ ಅರುಹು ಆಚಾರ ಸನ್ನಿಹಿತ ಗುರು–ಶಿಷ್ಯರಿಬ್ಬರು ಬಯಲ ಬೆರೆದಂತೆ ನಿರವಯ ಬ್ರಹ್ಮದಲ್ಲಿ ನಿಪ್ಪತ್ತಿಯನ್ನೈದಿಪ್ಪರು ನೋಡಾ. ಇಂತೀ ಅರುಹಿನ ವಿಚಾರವನರಿಯದೆ ಮಾಡುವ ಮಾಟವೆಲ್ಲ ಅಜ್ಞಾನ ಗಡಣದೊಳಗು...... ....ಅಖಂಡೇಶ್ವರಾ."

"ಗುರುಶಿಷ್ಯ ಭಾವದಿಂದ ಪ್ರಶ್ನೋತ್ತರವಾಗಿ ಕೇಳುವಾತ ಶಿಷ್ಯನು. ಜ್ಞಾನಸದ್ವಾರದಿಂದ ಹೇಳುವಾತ ಗುರು. ಪೂರ್ವ ಪಕ್ಷ ಲೋಭದಿಂದ ಶರೀರಾದಿ ಸಮಸ್ತ ಲೋಕವನ್ನು ತೋರಿಸಿ, ಉತ್ತರ ಪಕ್ಷ ಲೋಭದಿಂದ ಶರೀರಾದಿ ವಿಶ್ವವು ಲಿಂಗದಲ್ಲಿ ಲೀಯವಾದ ನಿಲವ ತೋರಿದ ಗುರು. ಸರ್ವಾಚಾರ

ಜ್ಞಾನ ಪರನು, ಶಿವಾನುಭೂತಿ ಸಂಯುಕ್ತನು. ಶಿಷ್ಯನ ಸಂಶಯವ ಛೇದಿಸಿ ನಿಜವ ತೋರಿದ ಆ ಗುರುವಿನ ಶ್ರೀಪಾದಕ್ಕೆ ನಮೋ ನಮೋ ಎಂಬೆನು ಕಾಣಾ ನಿಜಗುರು ಸ್ವತಂತ್ರ ಶಂಭುಲಿಂಗೇಶ್ವರಾ."

ಈ ಎರಡು ವಚನಗಳಿಂದ ಗುರು ಕಾರುಣ್ಯ ಸ್ವರೂಪ, ಅದರಿಂದುಂಟಾಗುವ ಜ್ಞಾನಾಮೃತ ಪರಿಣಾಮ ಅತಿಸ್ಫುಟವಾಗಿ ಅಭಿವ್ಯಕ್ತವಾಗಿವೆ.

೨. ಶಿಕ್ಷಾ ಪಾದೋದಕ ಸ್ಥಳಂ

ಪಾದೋದಕ ಲಿಂಗದ ಎರಡನೆಯ ಕಿರಣ ಶಿಕ್ಷಾ ಪಾದೋದಕ ಸ್ಥಳ. ಇದು ಶಿಕ್ಷಾ ಗುರುದೇವನಿಂದ ಉಂಟಾಗಿ ಈ ಹೆಸರಾಗಿದೆ. ಇದಕ್ಕೆ ಲಿಂಗ ಪಾದೋದಕವೆಂತಲೂ ಹೆಸರುಂಟು. ಇದು ಜ್ಞಾನ ಪ್ರಧಾನವಾಗಿರುತ್ತದೆ. ಇದರಿಂದಾಗಿ ಇದನ್ನು ಮಂತ್ರ ಪಾದೋದಕ ಸ್ಥಳವೆಂದೂ ಹೇಳಬಹುದಾಗಿದೆ. ಇದರಿಂದ ತ್ರಿಪುಟರಹಿತವಾಗುತ್ತದೆ ; ಮನ ಪರಿಣಾಮಗೊಳ್ಳುತ್ತದೆ. ಮಹಾ ಜ್ಞಾನದಿಂದ ಮನ ಘನವಾಗುತ್ತದೆ. ಪ್ರಾರಬ್ಧ ಕರ್ಮ ಪರಿಹಾರವಾಗುತ್ತದೆ.

ಚಿದ್ಗುರು ದೇವನ ಮಂತ್ರ ದೀಕ್ಷೆಯಿಂದ ಪ್ರಾಣಲಿಂಗವು ಪಾದೋದಕ ಸ್ವರೂಪವನ್ನು ತಾಳುತ್ತದೆ. ಶಿಕ್ಷಾ ಗುರುದೇವರು ಶರಣನಿಗೆ ಅಹಿಂಸೆ, ಲಿಂಗ ನಿಷ್ಠೆಗಳನ್ನು ಬೋಧಿಸಿ ಮನೋಲಯಗೊಳಿಸುತ್ತಾನೆ. ಮಂತ್ರ ಶಕ್ತಿಯನ್ನು ಮನ ಪ್ರಾಣಗಳಲ್ಲಿ ತುಂಬುತ್ತಾನೆ. ಮಹಾಜ್ಞಾನದ ಹೊಂಗಿರಣಗಳನ್ನು ಹರಡುತ್ತಾನೆ. ಮಂತ್ರೋಪದೇಶವನ್ನು ಮಂತ್ರಾಭ್ಯಾಸವನ್ನು ಸರಿಯಾಗಿ ಶಿಕ್ಷಿಸುತ್ತಾನೆ.

ದೀಕ್ಷಾ ಗುರುವೇ ಶಿಕ್ಷಾ ಗುರುವಾಗಿ ಮಂತ್ರೋಪದೇಶವನ್ನು ಮಾಡುತ್ತಾನೆ. ಮಂತ್ರ ಮಹಾ ವಿದ್ಯೆಯನ್ನು ಮನಗಾಣಿಸುತ್ತಾನೆ. ಮಂತ್ರದ ಮೂಲಕ್ಕೆ ಕರೆದೊಯ್ಯುತ್ತಾನೆ. ಮಂತ್ರಕ್ರಮ, ಮಂತ್ರಜಪಕ್ರಮ, ಮಂತ್ರ ಧಾರಣಕ್ರಮಗಳ ಹೊಲಬನ್ನು ನೇರವಾಗಿ ತೋರುತ್ತಾನೆ. ಮಂತ್ರದಲ್ಲಿ ಶರಣನ ಮನ ರಸವಾದಾಗ ಶಿಕ್ಷಾ ಪಾದೋದಕ ಸ್ಥಳ ರೂಡಿತವಾಗುತ್ತದೆ. ಅಂದರೆ ಮಂತ್ರ ಮನನದಲ್ಲಿ ಮನ ಎರಕ ಹೊಯ್ದಂತಾಗುತ್ತದೆ.

ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ್ಯ, ಕಲ್ಪ-ಇವಾರು ವೇದ ಷಡಂಗಗಳು. ಇವುಗಳಲ್ಲಿ ಮೊದಲಿನದು ಶಿಕ್ಷಾ. ಇದು ಅಕ್ಷರ ಅಭ್ಯಾಸ ಕ್ರಮವನ್ನು ವಿವರಿಸುವ ಒಂದು ವೇದಾಂಗ ಗ್ರಂಥ. ಇವಕ್ಕೂ ಈ ಷಟ್‌ಸ್ಥಲದೊಳಗಿನ ಶಿಕ್ಷಾ ವಿಧಾನಕ್ಕೂ ತುಂಬಾ ಅಂತರ. ಒಂದು ಬೌದ್ಧಿಕ ಶಿಕ್ಷಣ ; ಇನ್ನೊಂದು ಆತ್ಮಿಕ ಶಿಕ್ಷಣ. ಅಕ್ಷರಗಳಿಗೆಲ್ಲ ಆದಿಯಾದ ಓಂಕಾರ ಶಿಕ್ಷಣವೇ ಶಿಕ್ಷಾ ಗುರುವಿನ ಗುರಿ. ಶಿಕ್ಷಾ ಗ್ರಂಥ ಜಡ ; ಶಿಕ್ಷಾ ಗುರು ಅಜಡ. ಇವನಿಂದ ಬರುವ ಮಂತ್ರ ಶಿಕ್ಷಣದಲ್ಲಿ ವಿಶಿಷ್ಟ ಪ್ರಭಾವವಿದೆ ; ಅನುಭಾವವಿದೆ. ಅಂತೆಯೇ ಶಿಕ್ಷಾ ಪಾದೋದಕದಲ್ಲಿಯೂ ಸೂಕ್ಷ್ಮಾಂಗ ಪ್ರಗತಿಗೆ ಬೇಕಾದ ಸಂವಿತ್ಪ್ರಭೆಯಿರುತ್ತದೆ ; ಸಂವಿತ್ಸುಧೆಯಿರುತ್ತದೆ.

ದೀಕ್ಷೆ ಕ್ರಿಯಾಮೀಮಾಂಸೆಯಾದರೆ, ಶಿಕ್ಷೆ ಮಂತ್ರ ಮೀಮಾಂಸೆ. ಅದು ಕ್ರಿಯಾಂಗವನ್ನು ಕಳೆಗೊಳಿಸಿದರೆ, ಇದು ಜ್ಞಾನಾಂಗವನ್ನು ಕಳೆಗೊಳಿಸುತ್ತದೆ; ಮಂತ್ರಾಂಗವನ್ನು ಮಹೋನ್ನತವಾಗಿಸುತ್ತದೆ. ಪ್ರಾಣವ ಪ್ರಕೃತಿ ಭಾವವನ್ನು ಪರಿಹರಿಸುತ್ತದೆ. ಚಂದ್ರನಂತೆ ತನ್ನ ಅಮೃತಮಯ ಕಿರಣಗಳನ್ನು ಹೃದಯ ಭೂಮಿಕೆಯನ್ನು ಹರಡುತ್ತದೆ.

"ಗುರು ಶಿಷ್ಯಮಯಂ ಜ್ಞಾನಂ ಶಿಕ್ಷಾ ಮನನಮೀರ್ಯತೇ ।
ತಯೋಸ್ಸಮರಸತ್ವಂ ಹಿ ಶಿಕ್ಷಾ ಪಾದೋದಕಂ ಸ್ಮೃತಂ ॥೧॥"

ಗುರು ಶಿಷ್ಯರಿಬ್ಬರ ದೀಕ್ಷಾ ಸಂಸ್ಕಾರ ಜನ್ಯ ಸಾಮರಸ್ಯದಿಂದ ಉಂಟಾದ ಜ್ಞಾನವೇ ಶಿಕ್ಷಾ ಮನನವೆನಿಸುತ್ತದೆ. ಜ್ಞಾನ-ಮನನಗಳೆರಡರ ಸಾಮರಸ್ಯವೇ ಶಿಕ್ಷಾ ಪಾದೋದಕವೆನಿಸುತ್ತದೆ.

ಗುರುವಿನ ಕ್ರಿಯಾದೀಕ್ಷೆಯ ಸಂಸ್ಕಾರದಿಂದ ಶಿಷ್ಯನಲ್ಲಿ ಶಿವಜ್ಞಾನವುಂಟಾಗುತ್ತದೆ. ಅದುವೆ ಗುರುಶಿಕ್ಷೆ. ಆ ಶಿವಜ್ಞಾನವು ಗುರು ಉಪದೇಶಿಸಿದ ಶಿವಪಂಚಾಕ್ಷರಿಯಿಂದಾಗುತ್ತದೆ. ಆ ಬೋಧೆಯ ಮನನವು ಶಿಕ್ಷೆಯೆನಿಸುತ್ತದೆ. ಮಂತ್ರ ಶ್ರವಣ ದೀಕ್ಷೆ. ಮಂತ್ರ ಮನನ ಶಿಕ್ಷೆ. ಜ್ಞಾನಮನನಗಳ ಸಾಮರಸ್ಯ ಸುಖರಸವೇ ಶಿಕ್ಷಾ ಪಾದೋದಕ.

ಆತ್ಮಜ್ಞಾನ ಅಂತರಂಗದಲ್ಲಿದ್ದರೂ ಅದು ತನ್ನಿಂದ ತಾನೇ ಉಂಟಾಗುವುದಿಲ್ಲ. ಗುರುವಿನ ಉದ್ಬೋಧ ಅನಿವಾರ್ಯ. ಒಂದು ಮಗುವಿನ ಉತ್ಪತ್ತಿಗೆ ಹೇಗೆ ಸತಿ–ಪತಿಗಳ ಸಮರಸತ್ವ ಅವಶ್ಯವೋ ಹಾಗೆ ಜ್ಞಾನ ಶಿಶುವಿನ ಉತ್ಪತ್ತಿಗೆ ಗುರುಶಿಷ್ಯರಿಬ್ಬರ ಏಕರಸತೆ ಅವಶ್ಯ. "ಜ್ಯೋತಿಯ ಸಂಗದಿಂದ ಕರ್ಪೂರ ಜ್ಯೋತಿಯಪ್ಪಂತೆ, ಅಪ್ಪುವಿನ ಸಂಗದಿಂದ ಉಪ್ಪು ಅಪ್ಪುವಪ್ಪಂತೆ ಶಿಷ್ಯ ಶ್ರೀಗುರುವಪ್ಪುದು ತಪ್ಪದು ಶಿವನಾಣೆ ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರಾ".

ಕಪ್ಪುರ ಆದೆಷ್ಟೇ ತೇಜಃಪದಾರ್ಥವಾದರೂ ಉರಿಯ ಸಂಗವಿಲ್ಲದೆ ಉರಿಯಾಗದು. ಉಪ್ಪು ಉದಕಸ್ವರೂಪವಾಗಿದ್ದರೂ ಉದಕದ ಸಂಗ ಬೇಕೇಬೇಕು. ಹಾಗೆ ಶಿಷ್ಯನು ಜ್ಞಾನಿಯಾಗಬೇಕಾದರೆ ಗುರುವಿನ ಸಂಗ ಬೇಕು; ಗುರುವಿನ ಶಿಕ್ಷೆಬೇಕು. ಗುರು ಬೋಧಿಸಿದುದನ್ನು ಮನನ ಮಾಡುವುದೇ ಶಿಕ್ಷೆ.

ಶ್ರೀಗುರು ಶಿಷ್ಯನ ಸರ್ವಾಂಗದಲ್ಲಿ ತನ್ನ ತನವನ್ನು ತುಂಬುವನು; ತನ್ನಂತೆ ಮಾಡುವನು.

"ಶ್ರೀಗುರುವು ಮಾಡಿದ ಗುರುತ್ವವು ಉಪಮಾತೀತವಯ್ಯಾ : ನೇತ್ರದಲ್ಲಿ ತನ್ನರೂಪ ತುಂಬಿ, ನೇತ್ರವ ಗುರುವ ಮಾಡಿದ. ಶ್ರೋತ್ರದಲ್ಲಿ ಮಹಾಮಂತ್ರವತುಂಬಿ, ಶ್ರೋತ್ರವ ಗುರುವ ಮಾಡಿದ. ಘ್ರಾಣದಲ್ಲಿ ಗುರುಪಾದಪದ್ಮದಲ್ಲಿಯ ಮಹಾಗಂಧವನು ತುಂಬಿ, ಘ್ರಾಣವನು ಗುರುವು ಮಾಡಿದ. ಜಿಹ್ವೆಯಲ್ಲಿ ತನ್ನ ಕರುಣ ಪ್ರಸಾದವ ತುಂಬಿ, ಜಿಹ್ವೆಯನು ಗುರುವ ಮಾಡಿದ. ಕಾಯವನು ಭಕ್ತಾಕಾಯ ಮಮಕಾಯವೆಂದು ಪ್ರಸಾದಕಾಯವೆಂದೆನಿಸಿ, ಕಾಯವನು ಗುರುವಮಾಡಿದ. ಪ್ರಾಣವನು ಲಿಂಗಪ್ರಾಣ ಸಂಬಂಧವಮಾಡಿ, ಪ್ರಾಣವನು ಗುರುವ ಮಾಡಿದ. ಅಂತು ಅಂತರಂಗ ಬಹಿರಂಗವನು ಗುರುವಮಾಡಿ

ಸರ್ವಾಂಗವನು ಗುಪ್ತವ ಮಾಡಿದ ಮಹಾಗುರುವಿಂಗೆ ನಾನಿನ್ನೇನ ಮಾಡುವೆನಯ್ಯಾ ? ಗುರುಪೂಜೆಯಂ ಮಾಡಲು ಆವಾವ ದ್ರವ್ಯಗಳನು ಆವಾವ ಪದಾರ್ಥಂಗಳನು ಆವಾವ ಪುಷ್ಪಾದಿಗಳನು ವಿಚಾರಿಸಿ ನೋಡಿಡಡೆ ಅವಾವೂ ಗುರುತ್ವವಿಲ್ಲ. ಸರ್ವದ್ರವ್ಯ ಮೂಲವು, ಸರ್ವಪದಾರ್ಥಮೂಲವು; ಸರ್ವರಸ ಪುಷ್ಪ ಫಲಾದಿಗಳೆಲ್ಲಕ್ಕೆಯು ಮೂಲಗಮನವು ಗುರುತ್ವವುಳ್ಳದು. ಎನ್ನ ಶಿವನು ಶ್ರೀಗುರುವಿನ ದರ್ಶನವ ಮಾಡಿ ಸುಖಿಯಪ್ಪನಯ್ಯಾ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ. "

ಇದು ಗುರುಶಿಷ್ಯಮಯತ್ವದರ್ಶನ. ಗುರುವಿನಿಂದಾದ ಶಿಷ್ಯ ಗುರುಮಯನಾಗಿರುತ್ತಾನೆ. ಗುರುಬೀಜ ; ಶಿಷ್ಯಅಂಕುರ. ಗುರು ಜ್ಞಾನಜ್ಯೋತಿ; ಅದನ್ನು ಸೋಂಕಿದ ಶಿಷ್ಯನೆಂಬ ಬತ್ತಿ ಜ್ಞಾನಜ್ಯೋತಿಯೇ ಆಗಬಲ್ಲದು; ಆಗುತ್ತದೆ.

ಗುರುಶಿಷ್ಯ ಸಮರಸತ್ವವೇ ಶಿಕ್ಷಾಪಾದೋದಕ ; ಅಥವಾ ಜ್ಞಾನ-ಶಿಕ್ಷಾಮನನ ಸಮರಸತ್ವವೇ ಶಿಕ್ಷಾಪಾದೋದಕ.

"ತಂದೆಯ ಸಾಮರ್ಥ್ಯದಿಂದ ಹುಟ್ಟಿದ ಮಗನಿಗೆ
ತಂದೆಯ ಸ್ವರೂಪಲ್ಲದೆ ಬೇರೊಂದು ರೂಪೆಂದು ತಿಳಿಯಲುಂಟೆ ?
ಶಿವ ತಾನೇ ತನ್ನ ಸಾಮರ್ಥ್ಯವೇ ಒಂದೆರಡಾಗಿ,
ಗುರುವೆಂದು ಶಿಷ್ಯನೆಂದು ಆಯಿತ್ತೆಂದರೆ,
ಆ ಗುರುವಿಂಗೆ ಶಿಷ್ಯಂಗೆ ಬೇರಿಟ್ಟು ನುಡಿಯಲಾಗದಯ್ಯಾ.
ಗುರುವಿನ ಅಂಗ ಶಿಷ್ಯ ; ಶಿಷ್ಯನ ಲಿಂಗ ಗುರು.
ಗುರುವಿನ ಪ್ರಾಣ ಶಿಷ್ಯ ; ಶಿಷ್ಯನ ಪ್ರಾಣಲಿಂಗ ಗುರು.
ಗುರು ಶಿಷ್ಯ ಸಂಬಂಧವಾದ ಬಳಿಕ ಗುರುಶಿಷ್ಯರೆಂದು
ಬೇರಿಟ್ಟು ನುಡಿವ ಭ್ರಷ್ಟರನೇನೆಂಬೆನಯ್ಯಾ,
ಮಹಾಲಿಂಗ ಗುರು ಶಿವ ಸಿದ್ಧೇಶ್ವರ ಪ್ರಭುವೇ ? "

"ಗುರು ಶಿಷ್ಯ ಸಂಬಂಧವನರಿಯಲೆಂದು ಹೋದರೆ
ತಾನೇ ಗುರುವಾದ, ತಾನೇ ಶಿಷ್ಯನಾದ, ತಾನೇ ಲಿಂಗವಾದ
ಗುಹೇಶ್ವರಾ. "

ಗುರುವಿನ ಜ್ಞಾನೋಪದೇಶ ಜ್ಞಾನ ಶಿಕ್ಷೆ ಭಿನ್ನ ಭಾವದ್ದಲ್ಲ; ಪ್ರತಿಭಾವದ್ದಲ್ಲ; ಅದು ಬಿಚ್ಚಿ ಬೇರಾಗದ ಉಪದೇಶ. ಗುರುಶಿಷ್ಯಭಾವಕ್ಕೆ ಭೇದವಿಲ್ಲ. ಭ್ರಮರಕೀಟ ನ್ಯಾಯದಂತೆ ತನ್ನ ನೆನೆವ ಶಿಷ್ಯನನ್ನು ಗುರು ತನ್ನಂತೆ ಮಾಡುವನು. ಗುರುವಿನ ಜ್ಞಾನಶಿಕ್ಷೆಯಲ್ಲಿ ಶಿಕ್ಷೆಯು ಮನನದಲ್ಲಿ ಅಂತಹ ಅಗಾಧ ಶಕ್ತಿಯಿದೆ. ಅವರಿಬ್ಬರದು ಅದೊಂದು ಸಹಜ ಸಂಬಂಧ; ಅವಿನಾಭಾವ ಸಂಬಂಧ.

ಶಿಷ್ಯನ ಜ್ಞಾನ ಶಿಕ್ಷಾಮನನ ಗುರುದೇವನಿಂದ ಬಂದುದು ಮಾತ್ರವಲ್ಲ ಗುರುದೇವನ ಚಿಚ್ಚರಣ ಸಂಮಿಳಿತವಾದುದು. ಅಂತಹ ಜ್ಞಾನ ಶಿಕ್ಷಾಮನನವೇ ಶಿಕ್ಷಾಪಾದೋದಕವೆನಿಸುವುದು.

"ಮಥಿತಾಚ್ಛಾಸ್ತ್ರಜಲಧೇರ್ಯುಕ್ತಿಮಂಥಾನ ವೈಭವಾತ್ ।
ಗುರುಣಾ ಲಭ್ಯತೇ ಬೋಧ ಸುಧಾ ಸುಮನಸಾಂ ಗಣೈಃ ॥೨॥"

ಶಾಸ್ತ್ರ ಒಂದು ಸಾಗರ. ಯುಕ್ತಿಯೇ ಒಂದು ಮಂಥನದಂಡ. ಮಂಥನ ಮಾಡುವವನು ಶ್ರೀಗುರು. ಇದರಿಂದ ಉತ್ಪನ್ನವಾಗುವುದು ಬೋಧಾಮೃತ. ಅದನ್ನು ಪಡೆಯುವವರು ಶುದ್ಧ ಮನಸ್ಕರಾದ ಶರಣಗಣರು; ಶಿಷ್ಯವೃಂದವು.

ಈ ಮಂತ್ರಶ್ಲೋಕ ರೂಪಕವಾಗಿದೆ. ಗುರುಪದ ಬೃಹಸ್ಪತಿಯನ್ನು ಸುಮನಪದ ಸುರರನ್ನು ಸಂಕೇತಿಸುತ್ತವೆ. ಇಡೀ ಶ್ಲೋಕವು ಸುರರ ಸಮುದ್ರ ಮಂಥನರೂಪ ಪುರಾಣಕಥನವನ್ನು ತನ್ನ ರೂಪಕಾಲಂಕಾರದಿಂದ ಸಂಕೇತಿಸುತ್ತದೆ.

ಶರಣರನ್ನು ಶಿವಯೋಗಿಗಳನ್ನು ಭೂಸುರರನ್ನಾಗಿಯೂ ವೀರಶೈವ ಸಾಭಾರಿ ಶ್ರೀಗುರುದೇವನನ್ನು ಬೃಹಸ್ಪತಿಯನ್ನಾಗಿಯೂ ಮರ್ತ್ಯವನ್ನು ಸ್ವರ್ಗವನ್ನಾಗಿಯೂ ವೀರಶೈವ ಶಾಸ್ತ್ರಗಳನ್ನು ಕ್ಷೀರಸಾಗರವನ್ನಾಗಿಯೂ ಶಿವಜ್ಞಾನವನ್ನು ಮಂಥನ ದಂಡವನ್ನಾಗಿಯೂ ಶಿವಾಗಮ ಮೀಮಾಂಸೆಯನ್ನು ಅಥವಾ ಗೋಷ್ಠಿಯನ್ನು ವೈಭವವನ್ನಾಗಿಯೂ, ಶ್ರೀಗುರುವಿನ ಬೋಧೆ (ಶಿಕ್ಷೆ)ಯನ್ನು ಸುಧೆಯನ್ನಾಗಿಯೂ ಶಿವಯೋಗಿ ಶಿವಾಚಾರ್ಯನು ರೂಪಿಸಿ ಇದನ್ನು ಸಂಪೂರ್ಣ

ರೂಪಕವನಾಗಿಸಿದ್ದಾನೆ. ವೈಭವ ಶಬ್ದ ಶಿವಕವಿಯ ಸ್ವಾನುಭವ ವೈಭವವನ್ನು ಸೂಚಿಸುವಂತಿದೆ. ಗುರ-ಸುಮನಸ ಪದಗಳು ಶ್ಲೇಷೋಕ್ತಿಗಳೂ ಆಗಿವೆ.

ಶರಣರಾಗಲಿ ಶಿಷ್ಯರಾಗಲಿ ಶಿವಯೋಗಿಗಳಾಗಲಿ ತಾವೇ ಶಾಸ್ತ್ರದಲ್ಲಿ ಪ್ರವೇಶಿಸಿ ಪಥವನ್ನು ಕಾಣರು. 'ಶಾಸ್ತ್ರಜಾಲಂ ಮಹಾರಣ್ಯಂ' 'ಅನಂತಪಾರಂ ಕಿಲ ಶಬ್ದಶಾಸ್ತ್ರಂ। ಸ್ವಲ್ಪಂ ತಥಾಯುರ್ಬಹವಶ್ಚ ವಿಘ್ನಾಃ, ಎಂಬೀ ಮಾತುಗಳು ಈ ದಿಸೆಯಲ್ಲಿ ಗಮನಾರ್ಹವಾಗಿವೆ. ಶಾಸ್ತ್ರಸಮೂಹ ಅದೊಂದು ಮಹಾರಣ್ಯ. ಶಬ್ದಶಾಸ್ತ್ರಕ್ಕೆ ಪಾರವೇಇಲ್ಲ ಮಾನವೀಯ ಆಯುಷ್ಯವೋ ಅತ್ಯಲ್ಪ. ಅದರಲ್ಲಿಯೇ ಅರಿಯೋಣವೆಂದರೆ ವಿಘ್ನಪರಂಪರೆಗಳು. ಇವುಗಳಿಂದಾಗಿ ಶ್ರೀಗುರುದೇವನಿಗೆ ಶರಣಾಗದೆ ಆತನ ಶಿಕ್ಷಾಸಂಸ್ಕಾರಕ್ಕೊಳಗಾಗದೆ ಬೇರೆ ಹೊಲಬಿಲ್ಲ.

ಪಾದೋದಕವು ಪರಬ್ರಹ್ಮ. ಅದು ಜಗತ್ಕಾರಣವಾಗಿರುವಂತೆ ಶಾಸ್ತ್ರಕಾರಣವೂ ಆಗಿದೆ. ಅದರಿಂದ ಆವಿರ್ಭವಿಸಿದ ಶಾಸ್ತ್ರಗಳು ನಾಲ್ಕು ವೇದಗಳು, ಇಪ್ಪತ್ತೆಂಟು ಶಿವಾಗಮಗಳು, ಉಪನಿಷತ್ತುಗಳು ಪುರಾಣೇತಿಹಾಸಗಳು. ಸೂತ್ರಗಳು, ಮಂತ್ರಗಳು, ಕಲೆಗಳು, ಕಾವ್ಯಗಳು, ಸ್ಮೃತಿಗಳು, ಭಾಷ್ಯಗಳು, ಶ್ಲೋಕಗಳು ಮೊದಲಾಗಿ ಹಲವಾರು. ಹೆಗ್ಗಡಲಷ್ಟಿವೆ. ಅಪಾರವಿದ್ಯೆಯೆನಿಸಿವೆ. ಪರಶಿವ ಬ್ರಹ್ಮನನ್ನು ತಿಳಿಯಲು ಕಾರಣಗಳಾಗಿವೆ; ಪ್ರಮಾಣಗಳಾಗಿವೆ. ಆದರೂ ಅವುಗಳಿಂದಲೇ ಪೂರ್ಣವಾಗಿ ಸಂಶಯ ನಿವೃತ್ತಿಯಾಗುವುದಿಲ್ಲ ನೇರವಾದ ಹೊಲಬು ದೊರೆಯುವುದಿಲ್ಲ. ಹಾಲಿದ್ದರೂ ಬೆಣ್ಣೆ ತಾನಾಗಿಯೇ ಹಾಲಿನಲ್ಲಿ ದೊರೆಯುವುದಿಲ್ಲ. ಹಾಲನ್ನು ಹೆಪ್ಪಿಟ್ಟು ಕಡೆಯುವವರು ಒಬ್ಬರು ಬೇಕು. ಶಾಸ್ತ್ರವೆಂಬ ಹಾಲ್ಗಡಲನು ಕಡೆದು ಬೆಣ್ಣೆಯಂತಿರುವ ಬೋಧಸುಧೆಯನ್ನು ತೆಗೆದು ಕೊಡಲು ಆಚಾರ್ಯನು ಬೇಕು. ಶಾಸ್ತ್ರ ಜಲಧಿಯ ಆಳಕ್ಕೆ ಇಳಿದು ಅದರೊಳಗಿರುವ ಅನರ್ಘ್ಯ ರತ್ನಗಳನ್ನು ತಂದುಕೊಡಲು ಗುರುದೇವನು ಬೇಕು. ಶಾಸ್ತ್ರ ಜಲಧಿ ರತ್ನಗರ್ಭೆ, ಆದರೆ ಅವು ಎಲ್ಲರಿಗೂ ಎಟಕುವವಲ್ಲ. ಅವನ್ನು ಒದಗಿಸಲು ಗುರುವೇ ಬೇಕು. ಗುರುಬೋಧವಿಲ್ಲದೆ ಶಾಸ್ತ್ರಗಳಿಂದ ನಿಜದ ನಿರ್ಣಯವಾಗದು "ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ ಸಕಲ ವೇದ ಶಾಸ್ತ್ರಗಳೆಂಬ ನೇಣಕಟ್ಟಿ ಹಿಡಿದು ತೂಗಿ ಜೋಗುಳ ಪಾಡುತ್ತಿದ್ದಾಳೆ-ಭ್ರಾಂತಿಯೆಂಬ ತಾಯಿ. ತೊಟ್ಟಿಲುಮುರಿದು ನೇಣುಹರಿದು

ಜೋಗುಳ ನಿಂದಲ್ಲದೆ ಗುಹೇಶ್ವರನೆಂಬ ಲಿಂಗವ ಕಾಣಬಾರದು." ಅಂದರೆ ಗುರುಮುಖದಿಂದಲೇ ಪಾದೋದಕ ರೂಪ ಪರಬ್ರಹ್ಮದ ಬೋಧೆಯುಂಟಾಗುತ್ತದೆ. ಅದುವೇ ಶಿಕ್ಷಾಪಾದೋದಕ. ಅದೇ ಪರವಿದ್ಯೆ. ಶಾಸ್ತ್ರಾರ್ಥಗಳನ್ನು ಆದರಲ್ಲಿಯೂ ಮುಖ್ಯವಾದವುಗಳನ್ನು ಆಯ್ದು ಅಳವಡಿಸಿಕೊಂಡು ಅನ್ಯರಿಗೆ ಬೋಧಿಸಲು ಶ್ರೀಗುರುದೇವನೇ ಸಮರ್ಥನು. ಶಾಸ್ತ್ರಾರ್ಥಗಳನ್ನು ತನ್ನ ಅನುಭವದ ಮೂಸೆಯಲ್ಲಿ ಎರಕಹೊಯ್ದು ಪರಿಶುದ್ಧಗೊಳಿಸಿರುತ್ತಾನೆ ಆಚಾರ್ಯ ಶಬ್ದದರ್ಥವೂ ಅದೇ ಆಗಿದೆ. ಶಾಸ್ತ್ರಾರ್ಥಗಳಂತೆ ತಾನು ಆಚರಿಸುತ್ತಾನೆ. ಇತರರನ್ನು ಆಚರಿಸಹಚ್ಚುತ್ತಾನೆ. ಜ್ಞಾನಾಚಾರವೇ ಗುರುವಿನ ಯುಕ್ತಿಮಂಥಾನ ವೈಭವ. ಅದರಿಂದ ಆತನಿಗಿರುತ್ತದೆ. ಬೋಧಾನುಭವ ; ಮಧುರಾನುಭವ. 'ಬ್ರಹ್ಮೈವೇದಮಮೃತಂ ಪುರಸ್ತಾತ್' ಎದುರಿಗಿರುವ ಈ ಪಾದೋದಕ ಸ್ವರೂಪ ಪರಬ್ರಹ್ಮವು ಅಮೃತವಾಗಿದೆ ಎಂದು ಮುಂಡಕ ಶ್ರುತಿ ಸಾರಿದೆ. ಶಾಸ್ತ್ರಸಾಗರದ ನೀರು ಉಪ್ಪು ; ಶ್ರೀಗುರುವಿನ ಬೋಧ (ಶಿಕ್ಷೆ)ಸುಧೆ.

"ಜ್ಞಾನ ಚಂದ್ರ ಸಮುದ್ಭೂತಾಂ ಪರಮಾನಂದ ಚಂದ್ರಿಕಾಂ ।
ಪಶ್ಯಂತಿ ಪರಮಾಕಾಶೇ ಮುಕ್ತಿ ರಾತ್ರೌ ಮಹಾಧಿಯಃ ॥೩॥"

ಶ್ರೀ ಗುರುದೇವನ ಶಿಕ್ಷೆಯಿಂದ ಬಂದ ಶಿವಜ್ಞಾನವೆಂಬುದೊಂದು ಚಂದ್ರ. ಆತನ ಚಂದ್ರಿಕೆ ಪರಮಾನಂದ. ಅದು ಬೆಳ್ಳಂ ಬೆಳಗುವುದು ಹೃದಯದಲ್ಲಿರುವ ಪರಮಾಕಾಶದಲ್ಲಿ ; ಪರಮಮುಕ್ತಿಯೆಂಬ ರಾತ್ರಿಯಲ್ಲಿ. ಆ ಬೆಳದಿಂಗಳನ್ನು ಕಾಣುವವರು ಮಹಾ ಜ್ಞಾನಿಗಳು.

ಪರಮಾನಂದ ಚಂದ್ರಿಕೆಯೇ ಶಿಕ್ಷಾಪಾದೋದಕ. ಪರಮ ಶಿವಜ್ಞಾನವೇ ಚಂದ್ರ. ಆ ಚಂದ್ರನಿರುವುದು ಭೂತಾಕಾಶದಲ್ಲಲ್ಲ, ಪರಮಾಕಾಶದಲ್ಲಿ; ಈ ಜಗದ ಜಡ ನಿಶಿಯಲ್ಲಲ್ಲ ; ಮುಕ್ತಿರೂಪ ಆ ಮಹಾತಮಸ್ಸಿನಲ್ಲಿ. ಪ್ರಶಾಂತಮಯವಾದ ಆ ಪರಮಾನಂದವನ್ನು ಪಡೆದವರು ಮಹಾನುಭಾವರು. ಅವರಿಗೆ ಯಾವ ದುಃಖವಿರುವುದಿಲ್ಲ ; ದುಮ್ಮಾನವಿರುವುದಿಲ್ಲ. ತಮಸ್ಸಿದ್ದರೂ ಅವರನ್ನು ಮುತ್ತದು. ಅವರು ಈ ಭೌತಿಕದಲ್ಲಿದ್ದರೂ ಭೌತಿಕಭಾವದಲ್ಲಿರುವುದಿಲ್ಲ. ಅವರ ಆ ಚಂದ್ರನಿಗೆ ಕ್ಷಯ ವೃದ್ಧಿಗಳಿಲ್ಲ. ಅದು ಪರಿಪೂರ್ಣಾಖಂಡ ಚಂದ್ರ, ದಿವ್ಯಜ್ಞಾನಚಂದ್ರ ; ಸರ್ವಜ್ಞಾನ ಚಂದ್ರ. ಆತನು ಈ ಭೌತಿಕ ಭೋಗಗಳನ್ನೆಲ್ಲ

ಆ ಪರಮ ಜ್ಞಾನದೊಡನೆ ಅನುಭವಿಸುತ್ತಾನೆ; ಆನಂದಿಸುತ್ತಾನೆ. ಆ ಪರಮಾನಂದ ಪಾದೋದಕದಿಂದ ಪಡಿ ಪದಾರ್ಥಗಳನ್ನು ಪ್ರಸಾದವನ್ನಾಗಿಸುತ್ತಾನೆ. ತನ್ನ ಮಾನವೀಯ ಜೀವನವನ್ನು ಮಹೋನ್ನತವಾದ ಸ್ಥಲಕ್ಕೆ ತಂದಿರುತ್ತಾನೆ. ಆತನು ಮಂದನಾಗಿ ಮೂರ್ಖನಾಗಿ ಬಾಳುವುದಿಲ್ಲ. ಕಾಳರಾತ್ರಿಯೆಂಬ ಕಾಲನ ಕೈಗೆ ಸಿಕ್ಕಿರುವುದಿಲ್ಲ. ಕರಾಳಕರ್ಮಕೋಟಲೆಯಲ್ಲಿ ತೊಳಲುವುದಿಲ್ಲ. ಆತನು ಪಡೆದ ಆ ಪರಮಾನಂದ ಅದೊಂದು ಶಾಶ್ವತವಾದ ಸವೆಯದ ಸುಧೆ.

"ಪರಾಚಃ ಕಾಮಾನನುಯಾಂತಿ ಬಾಲಾಃ
ತೇ ಮೃತ್ಯೋರ್ಯಾಂತಿ ವಿತತಸ್ಯ ಪಾಶಮ್ ।
ಅಥ ಧೀರಾ ಅಮೃತತ್ವಂ ವಿದಿತ್ವಾ
ಧ್ರುವಮಧ್ರುವೇಷ್ವಿಹ ನ ಪ್ರಾರ್ಥಯಂತೇ ॥"

— ಕಠೋಪನಿಷತ್

ಈ ಶ್ರುತಿಯು ಜಗದ್ಗುರು ರೇಣುಕವಾಣಿಯನ್ನೇ ಎತ್ತಿ ಹಿಡಿದಿದೆ. ಬಾಹ್ಯ ಭೋಗಗಳನ್ನು ಬಯಸುವವರು ಮೂರ್ಖರು. ಇವರು ವಿಷಯಗಳ ಬೆನ್ನು ಹತ್ತಿ ಕಣ್ಣು ಕಾಣದೆ ಎಲ್ಲೆಲ್ಲಿಯೂ ಹಬ್ಬಿರುವ ಅಥವಾ ಇರುವ ಮೃತ್ಯಕೂಪದಲ್ಲಿ ಬೀಳುತ್ತಾರೆ. ಮೃತ್ಯುಪಾಶದಿಂದ ಬಂಧಿತರಾಗುತ್ತಾರೆ. ಅದೇ ಬುದ್ಧಿವಂತರಾದ ಧೀರರು ನಿತ್ಯಾನಂದವನ್ನು ಪಡೆಯುತ್ತಾರೆ. ಅನಿತ್ಯವಾದ ಅಶುಚಿಯಾದ ಭೋಗಗಳನ್ನು ಬಯಸರು.

ಮಾನವೀಯ ಜೀವನದ ವಾಸ್ತವಿಕ ಉದ್ದೇಶವನ್ನು ತಿಳಿಯದವರು ಮೂರ್ಖರು, ಮತಿಹೀನರು. ಅವರ ಹೃದಯಾಕಾಶದಲ್ಲಿ ಕಾಳಿರುಳಿರುವುದಲ್ಲದೆ ಬೆಳದಿಂಗಳಿರುವುದಿಲ್ಲ. ಅದರಿಂದಾಗಿ ಸರ್ವ ಕಾಲಗಳಲ್ಲಿ ವ್ಯಾಪಿಸಿರುವ ಮೃತ್ಯುವನ್ನು ಅವರು ಅರಿಯುವುದಿಲ್ಲ. ತುತ್ತಾಗದೆ ಉಳಿಯುವುದಿಲ್ಲ. ಕಾಲದ ಪ್ರವಾಹದಲ್ಲಿ ಕೊಚ್ಚಿ ಹೋಗಿರುತ್ತಾರೆ; ನುಚ್ಚು ನೂರಾಗಿರುತ್ತಾರೆ. ಕ್ಷಣ ಕ್ಷಣವೂ ಅವರಿಗೆ ಬಂಧನಕಾರಿಯಾಗಿರುತ್ತದೆ. ಮೃತ್ಯುವಿನ ಹತ್ತಿರಕ್ಕೆ ಕರೆದೊಯ್ಯುತ್ತಿರುತ್ತದೆ. ಅಂದರೆ ಕಾಮವಿರುವಲ್ಲಿ ಕಾಲಭಯವಿದೆ; ಅಳಲಿಕೆಯಿದೆ; ಅಜ್ಞಾನತಿಮಿರವಿರುತ್ತದೆ. ಸತ್ಯಕಾಮರಲ್ಲಿ ಇವಿರುವುದಿಲ್ಲ. ಇವರಲ್ಲಿ ಉತ್ತಮ ಉದ್ದೇಶಗಳಿರುತ್ತವೆ. ಇವು ನಿತ್ಯ ನೂತನವಾಗಿ ಇತರರಿಗೆ ಮಾರ್ಗ

ದರ್ಶಕವಾಗಿ ಅಚ್ಚಳಿಯದೆ ನಿಚ್ಚಳವಾಗಿ ಬೆಳಗುತ್ತಿರುತ್ತವೆ. ಪಡೆದವರಿಗೆ ಪರಮಾನಂದವನ್ನುಂಟುಮಾಡುತ್ತವೆ. ಆ ಪರಮಾನಂದವೇ ಶಿಕ್ಷಾಪಾದೋದಕ. ಅದು ಶಿಕ್ಷಾಗುರುವಿನಿಂದ ಸಂಪ್ರಾಪ್ತವಾಗುತ್ತದೆ. ಈತನ ಕರುಣಾಮೃತವನ್ನು ಪಡೆದ ಶರಣನು ತಾಮಸಕ್ಕೊಳಗಾಗನು ; ಕ್ಷಣಭಂಗುರಕ್ಕೆ ಮನ ಮಾಡನು, ಕ್ಷಣ ಕ್ಷಣಕ್ಕೂ ಮರುಗನು.

"ಸ್ವಪ್ನಾಂತಂ ಜಾಗರಿತಾಂತಂ ಚೋಭೌಯೇನಾನುಪಶ್ಯತಿ ।
ಮಹಾಂತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ ॥"
—ಕಠೋಪನಿಷತ್

ಈ ಮಂತ್ರಾರ್ಥವನ್ನೂ ರೇಣುಕ ಜಗದ್ಗುರುವಿನ ಮಂತ್ರಶ್ಲೋಕದಲ್ಲಿ ಮನಗಾಣುತ್ತೇವೆ. ಇದರಲ್ಲಿರುವ ಮಹಾಂತಂ ವಿಭುಂ ಆತ್ಮಾನಂ ಎಂಬ ಪದಗಳು ಅಲ್ಲಿರುವ ಪರಮಾನಂದ ಪದದೊಳಗಿನ ಪರಮ ಪದವೊಂದರ ವ್ಯಾಖ್ಯಾನದಂತಿವೆ. 'ನ ಶೋಚತಿ' ಎಂಬುದು ಆನಂದಪದ ಸೂಚಕವಾಗಿದೆ. ಅನುಪಶ್ಯತಿಧೀರ ಎಂಬಿವು 'ಮಹಾಧಿಯಃ' ಎಂಬುದನ್ನು ಬೋಧಿಸಿದರೂ ಬೆನ್ನುಹತ್ತಲಾರವು. ಅಂತೆಯೇ ಸ್ವಪ್ನಾಂತಂ ಜಾಗರಿತಾಂತಂ ಪದಗಳೆರಡು ಪರಮಾಕಾಶೇ ಮುಕ್ತಿರಾತ್ರೌ ಎಂಬುವನ್ನು ಹೇಳ ಹೊರಟಿದ್ದರೂ ಆ ಎತ್ತರಕ್ಕೆ ಏರವೇನೋ ಎಂದೆನಿಸುತ್ತದೆ 'ಮುಕ್ತಿರಾತ್ರೌ' ಎಂತಹ ಆಳವಾದ ಅಭಿಪ್ರಾಯವುಳ್ಳ ಅಂದವಾದ ಪದ ! ಅಮೃತಮಯವಾದ ಉದ! ಆ ಮುಕ್ತಿರಾತ್ರಿಯಲ್ಲಿರುವವನು ಎಲ್ಲ ಕರ್ಮಗಳನ್ನೂ ಮೀರಿ ನಿಂತಿರುತ್ತಾನೆ. ತುರಿಯಾತೀತನಾಗಿ ತದಾಧಾರನಾಗಿ ಇರುತ್ತಾನೆ. ಅದು ಪರಮಾಕಾಶದಲ್ಲಿರುವ ಮುಕ್ತಿರಾತ್ರಿ ! ಆ ಪರಮಾಕಾಶಕ್ಕೆ ಕಾಲಸಂಕೋಲೆಯುಂಟೆ ? ಅವಸ್ಥೆಗಳ ಅಧಃಪತನವುಂಟೆ ? ಅಧೃವತೆಯುಂಟೆ ? ಅದು ಬಯಲಿಗೆ ಬಯಲಲ್ಲವೇ? ಅದು ನಿತ್ಯಕ್ಕೆ ನಿತ್ಯವಲ್ಲವೆ? ಅದು ವಿಭುವಿಗೆ ವಿಭುವಲ್ಲವೆ? ಅದು ಮಹಾಂತಕ್ಕೆ ಮಹಾಂತವಲ್ಲವೆ ? ಅಂತಹ ಅದರಲ್ಲಿ ಬೆಳ್ಳಾನೆ ಬೆಳಗುವ ಆಜ್ಞಾನಚಂದ್ರನಿಗೆ ಕಳಂಕವುಂಟೆ ? ಕ್ಷಯವೃದ್ಧಿಗಳುಂಟೆ ? ಅದರ ಆ ಪರಮಾನಂದ ಸ್ವರೂಪವಾದ ಬೆಳದಿಂಗಳಲ್ಲಿ ಎವೆಹಳಚದೆ ಇರುವ ಆ ಮಹಾಜ್ಞಾನಿಗಳಿಗೆ ನಿದ್ರೆಯ ಮುದ್ರೆಯಿರಬಲ್ಲುದೆ ? ಅವರು ಮೈಮರೆದು ಒರಗಿರಬಲ್ಲರೆ ? ಅವರು ನಿಚ್ಚ ಎಚ್ಚರಿರುವರು. ಜಡನಿದ್ರೆಯ ಜಂಜ

ಡಕ್ಕೆ ಜಗುಳರು ; ಜಗುಳಿ ಜಜ್ಜರಿತರಾಗರು: ಅವರು ಮುಕ್ತಿರಾತ್ರಿಯಲ್ಲಿ, ಸ್ವಸ್ವರೂಪವನ್ನು ನಟ್ಟನೋಟದಿಂದ ನಿಟ್ಟಿಸುವರು. ಜಡಬುದ್ಧಿ ಜಡಭಾವಗಳಿಗೆ ಜಂಕರು; ಶಂಕಿತರಾಗರು ಅವರು ಆ ಪರಮಾನಂದ ಚಂದ್ರಿಕೆಯನ್ನು ಪರಿಕಿಸುತ್ತಿರುತ್ತಾರೆ. ಅವರು ಪರಿಚ್ಛಿನ್ನರಲ್ಲ. ಅವರು ಆ ಪರಮ ಪರಿಣಾಮ ಪರಿಣತರು. ಅವರಿಗೆ ಈ ಅವಸ್ಥಗಳೆಂಬ ಪರಿಪಂಥಿಗಳಿಲ್ಲ ; ಪರಿಭ್ರಮಣವಿಲ್ಲ; ಪರಿಭವವಿಲ್ಲ. ಪರಮಿತಿಯೆಂಬುದು ಮೊದಲೇ ಇಲ್ಲ.

ಕನಸು ನನೆಸುಗಳನ್ನು ಮೀರಿದುದು ಮುಕ್ತಿರಾತ್ರಿ. ಆದರಿಂದಾಗಿ ಅಲ್ಲಿರುವವರಿಗೆ ಜೀವನದ ಸಣ್ಣ ಪುಟ್ಟ ಘಟನೆಗಳಿಗೆ ನೋವುಗಳಿಗೆ ಅವಕಾಶವಿರುವುದಿಲ್ಲ. ಅವರು ಆ ಪರಮಾನಂದದಲ್ಲಿ ಪರವಶರಾಗಿರುತ್ತಾರೆ. ಅದು ಸಣ್ಣದಲ್ಲ, ಬಣ್ಣವುಳ್ಳದಲ್ಲ. ಅದನ್ನು ಪಡೆದವರು ಸಣ್ಣವರಾಗಿ ಸ್ವಲ್ಪಮತಿಗಳಾಗಿ ಬಾಳರು. ಶೋಕಕ್ಕೆ ಸೋಂಕರು. ಅವರು ಅಚಿಂತ್ಯವಾದ ಅನಲ್ಪವಾದ ಶಕ್ತಿಯುಳ್ಳವರಾಗಿರುತ್ತಾರೆ. ಸದಾನಂದ ತುಂದಿಲರಾಗಿರುತ್ತಾರೆ.

ಕನಸು ನನೆಸುಗಳಿಂದ ನಿದ್ದೆ ನೀರಡಿಕೆಗಳಿಂದ ಅವರ ಕಣ್ಣು ಮುಚ್ಚಿರುವುದಿಲ್ಲ. ಅವರದು ಯಾವಾಗಲೂ ತೆರೆದ ಕಣ್ಣು. ಅವರ ಹೃದಯ ಮಾಗಿದ ಹಣ್ಣು. ನೋವಿನಿರುಳು ಅವರ ಸನಿಹದಲ್ಲಿ ಸುಳಿದಾಡುವುದಿಲ್ಲ. ಅವರ ಬಾಳಬಾನಿನಲ್ಲಿ ತಿಳಿವಿನ ತಂಗದಿರನು ಎಂದಿಗೂ ಮುಳುಗುವುದಿಲ್ಲ. ಅವನನ್ನು ಮೋಡಗಳು ಮುಸುಕುವುದಿಲ್ಲ. ಆ ತುಂಬು ತಂಗದಿರನು ಇರುವುದು ತೆರಹಿಲ್ಲದ ಹಿರಿದಾದ ನಿರವಯಲದಲ್ಲಿ! ಆತನಿಂದ ಹೊಮ್ಮಿಬಂದ ಆ ಆನಂದ ಚಂದ್ರಿಕೆ ಪರಿಪೂರ್ಣ, ಪರಮ ಶ್ರೇಷ್ಠ. ಅದನ್ನು ಎವೆ ಹಳಚವೆ ನೋಡುವವರ ಹೃದಯ ವಿಶ್ವವಿಶಾಲ ; ಅಲ್ಲಲ್ಲ ಮಿಗೆಯುಗಲ. ಆದರಿಂದಲೂ ಅವರು ಮಹಾಧೀಮಂತರು ; ಮಹಂತರು.

“ ಪರಮೇವಾಕ್ಷರಂ ಪ್ರತಿಪದ್ಯತೇ ಸ ಯೋ ಹ ವೈ
ತದ ಚ್ಛಾಯಮಶರೀರಮಲೋಹಿತಂ
ಶುಭ್ರಮಕ್ಷರಂ ವೇದಯತೇ ಯಸ್ತು ಸೌಮ್ಯ ।
ಸ ಸರ್ವಜ್ಞಃ ಸರ್ವೋ ಭವತಿ ॥”

—ಪ್ರಶ್ನೋಪನಿಷತ್

ಮೂಲ ಮಂತ್ರ ಶ್ಲೋಕದಲ್ಲಿ ಬರುವ ಪರಮಾನಂದ–ಪರಮಾಕಾಶ ಪದ

ಗಳಲ್ಲಿನ ಪರಂ ಅಥವಾ ಪದದ ಲಕ್ಷಣವನ್ನು ಅದನ್ನು ಅಳವಡಿಸಿಕೊಂಡವನ ಮಹಾಧೀಮಂತಿಕೆಯನ್ನು ಈ ಪ್ರಶ್ನೋಪನಿಷನ್ಮಂತ್ರವು ಪರಿಣಾಮಕಾರಿಯಾಗಿ ಪ್ರತಿಪಾದಿಸಿದೆ.

ಆ ಪರಂ ಪದವೇ ಪರಮಾಕಾಶ ; ಅದುವೇ ಪರಮಾನಂದ. 'ಪರಂ' ಅಂದರೂ ಅದೇ ; ಪರಮ ಅಂದರೂ ಅದೇ ! ಅದು ಅವಿನಾಶಿ, ಅದಕ್ಕೆ ನೆರಳಿಲ್ಲ, ಮರೆಯಿಲ್ಲ ; ಮೈಯಿಲ್ಲ. ಅದಕ್ಕೆ ಕೆಂಪು ಕಪ್ಪು ಮುಂತಾದ ಬಣ್ಣಗಳಿಲ್ಲ. ಅದು ಅಚ್ಚ ಸುಬ್ಬರ. ಅದು ಅಳಿಯದು, ಅಲುಗಾಡದು. ಅದನ್ನು ಅರಿತವನು ಅದನ್ನೇ ಪಡೆಯುತ್ತಾನೆ. ಮತ್ತು ಸರ್ವಜ್ಞನೆನಿಸುತ್ತಾನೆ ; ಸರ್ವಸ್ವರೂಪನಾಗುತ್ತಾನೆ. ಅಂದರೆ ಮಹಾಧೀಮಂತನೂ ಮಹದ್ರೂಪನೂ ಆಗುತ್ತಾನೆ

“ ದೃಷ್ಟೇ ತಸ್ಮಿನ್ ಪರಾನಂದೇ ದೇಶಕಾಲಾದಿವರ್ಜಿತೇ ।
ದ್ರಷ್ಟವ್ಯಂ ವಿದ್ಯತೇ ನಾನ್ಯತ್ ಶ್ರೋತವ್ಯಂ ಜ್ಞೇಯಮೇವ ವಾ ॥ ೪॥”

ದೇಶ ಕಾಲಾದಿಗಳ ಭೇದವಿಲ್ಲದ ಆ ಪರಾನಂದವು ಕಣ್ಮನಗಳಿಗೆ ಕಾಣಿಸಿಕೊಳ್ಳಲು ಅದಕ್ಕಿಂತ ಬೇರೆ ಕಾಣುವುದು-ಕೇಳುವುದು-ತಿಳಿಯುವುದು ಇರುವುದಿಲ್ಲ. ಪೂರ್ಣಕಾಮನಾಗುತ್ತಾನೆ.

ಕರಣೇಂದ್ರಿಯಗಳೆಲ್ಲ ಆ ಪರಾನಂದದಲ್ಲಿ ಪರವಶವಾದ ಬಳಿಕ ಕರಣಾದಿಗಳ ವೃತ್ತಿಗಳು ಇರುವ ಬಗೆ ಹೇಗೆ ? ವೃತ್ತಿಗಳೆಲ್ಲ ನಿವೃತ್ತಿಗೊಳ್ಳುವವು. ಮತ್ತು ಎಲ್ಲವೂ ಆ ಪರಾನಂದ ವಸ್ತುವಿನ ಸ್ವರೂಪವೇ ಆಗಿರುವವು. ಇದರಿಂದಾಗಿ ವಸ್ತ್ವಂತರ ದರ್ಶನವಿರದು. ಎಲ್ಲ ಅಕ್ಷರಗಳೂ ಅವನೇ ಆದ್ದರಿಂದ ಕೇಳಲು ಶಬ್ದಾಂತರವಿರದು. ತ್ರಿಪುಟಿರಹಿತವಾಗಿ ಜ್ಞೇಯಾಂತರವಿರದು. ಭಿನ್ನ ಜ್ಞಾನ ಭಿನ್ನ ಜ್ಞಾತೃಗಳು ಇರಲಾರವು.

“ಏಷ ಹಿ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಘ್ರಾತಾ ರಸಯಿತಾ
ಮಂತಾ ಬೋದ್ಧಾ ಕರ್ತಾ ವಿಜ್ಞಾನಾತ್ಮಾ ಪುರುಷಃ
ಸ ಪರೇಽಕ್ಷರ ಆತ್ಮನಿ ಸಂಪ್ರತಿಷ್ಠತೇ ॥”

—ಪ್ರಶ್ನೋಪನಿಷತ್

ಈ ಕಾರ್ಯ ಕರಣಗಳೆಲ್ಲ ಅವಿನಾಶಿಯಾದ ।ಆ ಪರಮಾತ್ಮನಲ್ಲಿ ಪರಾತ್ಮ ಸ್ವರೂಪನಾದ ಪರಾನಂದದಲ್ಲಿ ಪರವಶವಾದಾಗ ವಾಸ್ತವಿಕವಾದ ಪರಮಶಾಂತಿ ಪ್ರಾಪ್ತವಾಗುತ್ತದೆ. ಜ್ಞಾತೃತ್ವ ಕರ್ತೃತ್ವಾದಿಗಳು ತನ್ನವಾಗಿ ಉಳಿಯುವು. ಆ ಪರವಸ್ತುವಿನ ಅಧೀನವಾಗಿರುತ್ತವೆ. ಅಂದರೆ ಆ ಪರಾಹಂತಾಸ್ವರೂಪ ಸಂಪ್ರಾಪ್ತವಾಗುತ್ತದೆ. ಆಚಾರಾದಿ ಎಲ್ಲ ಲಿಂಗಗಳು, ಭಕ್ತಾದಿ ಎಲ್ಲ ಅಂಗಗಳು ಆ ಪರಾನಂದ ಸ್ವರೂಪ ಮಹಾಲಿಂಗದಲ್ಲಿ ಅವಿನಾಭಾವ ಸಂಬಂಧವನ್ನು ತಾಳುತ್ತವೆ.

ಆ ಪರಾನಂದಕ್ಕೆ ಪರವಾದ ವಸ್ತು ಬೇರೊಂದಿಲ್ಲ. ಅದೇ ಪರಾಗತಿ. ಅದು ಎಲ್ಲ ದೇಶ, ಎಲ್ಲ ಕಾಲ, ಎಲ್ಲ ವಸ್ತುಗಳಲ್ಲಿರುತ್ತದೆ. ಅದು ಸೂಕ್ಷ್ಮಾನುಭವಕ್ಕೆ ಗೋಚರವಾಗುತ್ತದೆ. ಅದು ಎಲ್ಲಕ್ಕೂ ಚರಮ ಆಧಾರವಾಗಿದೆ; ಪರಮ ಆಶ್ರಯವಾಗಿದೆ. ಅದಕ್ಕೆ ಶರಣಾಗದೆ ಗತ್ಯಂತರವಿಲ್ಲ.

ಸತ್ಯ ಶರಣನು ಪರಿಚ್ಛಿನ್ನವಾದ ರೂಪು ರುಚಿ ತೃಪ್ತಿಗಳಿಗೆ ಎಳಸಬಾರದು. ಎಳಸಿದರೆ ಪರಿಮಿತವಾಗಿ ದುಃಖಿಯಾಗುತ್ತಾನೆ; ಜೀವನೆನಿಸುತ್ತಾನೆ. ಜೀವನಿಗೆ ಅಲ್ಪಶಕ್ತಿಯುಳ್ಳ ಕರಣೇಂದ್ರಿಯಗಳಿರುತ್ತವೆ. ದಿವ್ಯದರ್ಶನ, ದಿವ್ಯಶ್ರವಣ, ದಿವ್ಯಜ್ಞಾನಗಳನ್ನು ಪಡೆದು ಪರಿಣಮಿಸುವ ಪರಾಶಕ್ತಿಯಿರುವುದಿಲ್ಲ. ಇದರಿಂದಾಗಿ ಪರಾನಂದ ಪ್ರಾಪ್ತಿಯಾಗುವುದಿಲ್ಲ. ಪರಾತ್ಮತ್ವ ಪ್ರಾಪ್ತಿಯಾಗುವುದಿಲ್ಲ. ಕಾರಣ ಶರಣನು ಆ ಪರಾಶಕ್ತಿಯನ್ನು ಸಂಪಾದಿಸಿಕೊಳ್ಳಬೇಕು. ಅದಾಗಬೇಕಾದರೆ ಶಿಕ್ಷಾಪಾದೋದಕ ಬೇಕು.

“ಪಾದೋದಕದಿಂದ ಪದನಾಸ್ತಿಯಾಗಿರಬೇಕು
ಲಿಂಗೋದಕದಿಂದ ಅಂಗ ಮಂಗಳಮಯವಾಗಬೇಕು.
ಪ್ರಸಾದೋದಕದಿಂದ ಆತ್ಮಭವಕ್ಕೆ ಬೀಜವಲ್ಲದಿರಬೇಕು.
ಒಂದನಳಿದು ಒಂದ ಕಂಡಿಹೆನೆಂದಡೆ ತಾವು ತಾವು ನಿಂದಲ್ಲಿಯೇ
ನಿರತರು. ಎನಗಾ ಉಭಯದ ಬಂಧನವಿಲ್ಲ,
ನಿಃಕಳಂಕ ಮಲ್ಲಿಕಾರ್ಜುನಾ.”

ಶಿಕ್ಷಾಪಾದೋದಕವು ಕಾರ್ಯ ಕರಣಗಳ ಸಂಬಂಧಬಂಧವನ್ನು ಬಿಡಿಸುತ್ತದೆ. ಲೋಕ ಲೋಕಾಂತರಗಳ ಫಲ ಪದಗಳ ಭಿನ್ನಬಯಕೆಯನ್ನು ಬಿಡಿಸುತ್ತದೆ.

ತ್ರಿಕಾಲಗಳ ಭೇದವನ್ನು ಶುಭಾಶುಭ ವಾಸನೆಗಳನ್ನು ನಶಿಸುತ್ತದೆ. ಹುಟ್ಟು ಸಾವುಗಳ ನೋವನ್ನು ನಿವಾರಿಸುತ್ತದೆ. ಅದು ಇದು ಎಂಬ ಭಿನ್ನಭಾವವನ್ನು ಭಿನ್ನದರ್ಶನವನ್ನು ಬಿಡಿಸುತ್ತದೆ. ಏಕಾತ್ಮಭಾವವುಂಟಾಗುತ್ತದೆ. ಇದೇ ನಿಜವಾದ ಜ್ಞಾನಾಮೃತ. ಇದನ್ನೇ ಶಿಕ್ಷಾಪಾದೋದಕವೆಂದು ಹೇಳುವರು. ಇದನು ಪಡೆದವರು ಮಹಾಜ್ಞಾನಿಗಳು. ಪೂರ್ಣಪ್ರಜ್ಞರು.

"ಪರಿಪೂರ್ಣವಪ್ಪ ಸಮ್ಯಕ್ ಜ್ಞಾನವಂತರೆಲ್ಲರು ಆಶೆಯೆಂಬ ಪಾಶವು ತಲೆದೋರೆ ತಮ್ಮ ಜ್ಞಾತೃ ಅಲ್ಲಿಯೇ ಶ್ರೇಷ್ಠಗೆಟ್ಟಿತ್ತು. ಸಕಳ ನಿಷ್ಕಳವೆಂಬುಭಯವ ಮರೆದ ಲಿಂಗಸುಖಿಗಳೆಲ್ಲರು ಭೋಗ ಭೋಜ್ಯಂಗಳೆಂಬ ತಾಮಸಕ್ಕೆ ಸಿಕ್ಕಿ ಭ್ರಾಮಕರಾದರೆಂಬುದಕ್ಕೆ ಸೂಚನೆ. ಇಂತೀ ಭಾವದ ಭ್ರಮೆಯ ಮರೆದು ಜೀವವಿಕಾರಿಗಳಾಗದೆ ಸರ್ವಜ್ಞಾನಿಗಳಾಗಿ, ನಿಃಕಳಂಕ ಮಲ್ಲಿಕಾರ್ಜುನ ಜಾಣಲಿಂಗವನರಿವಡೆ !"

"ಪೂಜಿಸುವ ಇಷ್ಟದಲ್ಲಿ ಅರಿವ ಆತ್ಮನಡಗಿ
ಪರಿಭ್ರಮಣ ನಿಂದು ಆ ಪರಬ್ರಹ್ಮದಿಂದ ಇಹಪರವೆಂಬ
ಉಭಯದ ಕುರುಹು ಅಡಗಿ, ತೋರುವುದು ತೋರಿಸಿಕೊಂಬುದು
ತನ್ನಿಷ್ಟವೆಂಬದಕ್ಕೆ ಸೂಚನೆ ನಿಃಕಳಂಕ ಮಲ್ಲಿಕಾರ್ಜುನಾ."

ಆ ಪರಾನಂದವು ಶರಣನ ಸರ್ವಾಂಗದಲ್ಲಿ ತುಂಬಿರುತ್ತದೆ. ಅದು ಎಲ್ಲ ಸ್ಥಲಗಳಲ್ಲಿ ಎಲ್ಲ ಕಾಲದಲ್ಲಿ ತುಂಬಿರುತ್ತದೆ. ತೆರಹಿಲ್ಲದೆ ತುಂಬಿದ ಅದರ ಪರಿಭ್ರಮಣಕ್ಕೆ ಇಂಬಿರುವುದಿಲ್ಲ. ಇಹ–ಪರವೆಂಬ ಇಷ್ಟ-ಪ್ರಾಣವೆಂಬ ಕುರುಹೈ ಇರುವುದಿಲ್ಲ. ದೃಶ್ಯದರ್ಶನ ದಟೃವಿನಲ್ಲಿ ಶ್ರೋತ್ರ ಶ್ರವಣ ಶ್ರೋತೃವಿನಲ್ಲಿ ಜ್ಞಾನ ಜ್ಞಾತೃ ಜ್ಞೇಯದಲ್ಲಿ ಪರಾನಂದವೇ ಪರಿಪೂರ್ಣವಾಗಿರುತ್ತದೆ. ದೃಷ್ಟ, ದ್ರಷ್ಟವ್ಯದಲ್ಲಿ ಶ್ರೋತೃ ಶ್ರೋವ್ಯತದಲ್ಲಿ, ಜ್ಞಾನ ಜ್ಞಾತೃ ಜ್ಞೇಯದಲ್ಲಿ ಬಿಂದು ಸಿಂಧುವಿನಲ್ಲಿ ಬೆರದಂತೆ ಬೆರೆದೇಕವಾಗಿರುತ್ತವೆ.

"ಆತ್ಮಾನಂದೇನ ತೃಪ್ತಸ್ಯ ಕಾ ಸ್ಪೃಹಾ ವಿಷಯೇ ಸುಖೇ ।
ಗಂಗಾಜಲೇನ ತ್ರಪ್ತಸ್ಯ ಕೂಪತೋಯೇ ಕುತೋ ರತಿಃ॥೫॥
ಯಸ್ಮಿನ್ನ ಪ್ರಾಪ್ತಕಲ್ಲೋಲೇ ಸುಖಸಿಂಧೌ ನಿಮಜ್ಜತಿ।
ಸಾಮರಸ್ಯನ್ಮಹಾಯೋಗೀ ತಸ್ಯ ಸೀಮಾ ಕುತೋಭವೇತ್ ॥೬॥"

ಇವೆರಡು ಮಂತ್ರಗಳಲ್ಲಿ ಶಿಕ್ಷಾಪಾದೋದಕ ಸ್ಥಲಸಂಪನ್ನ ಶರಣನ ನಿಷ್ಕಾಮ-ನಿಸ್ಸೀಮ ಸ್ವರೂಪಗಳನ್ನು ಚಲುವಾಗಿ ಚಿತ್ರಿಸಲಾಗಿದೆ.

ನಿಜವಾದ ನಿತ್ಯವಾದ ಆತ್ಮಾನಂದದಿಂದ ತೃಪ್ತನಾದವನಿಗೆ ಕ್ಷಣಿಕವಾದ ಕ್ಷುದ್ರವಾದ ವಿಷಯ ಸುಖದಲ್ಲಿ ಆಸೆ ಹುಟ್ಟದು. ತೊರೆಯ ಸವಿನೀರುಳ್ಳಿದ್ದು ತೃಪ್ತನಾದವನು ಬಾವಿಯ ಉಪ್ಪುನೀರನ್ನು ಬಯಸನು.

ತೆರೆಯಿಲ್ಲದ ಸೊಗಗಡಲಲ್ಲಿ ಮುಳುಗಿ ಸಮರಸನಾದ ಮಹಾಯೋಗಿಗೆ ಸೀಮೆಯೆಂಬುದಿಲ್ಲ. ಪರಿಮಿತಿಯಿಲ್ಲ. ಬಿಂದು ಸಿಂಧುವನ್ನು ಸೇರಿದಂತಾಗುತ್ತದೆ, ಸೇರಿದ ಹನಿ ಹೆಗ್ಗಡಲಷ್ಟು ಹರವಾಗುತ್ತದೆ.

ಪರಶಿವನ ಆ ಆನಂದಸಿಂಧುವಿನಲ್ಲಿ ಮುಪ್ಪು-ಮರಣ, ಹಸಿವು-ನೀರಡಿಕೆ ಶೋಕ-ಮೋಹಗಳೆಂಬ ಷಡೂರ್ಮಿಗಳಿರುವುದಿಲ್ಲ. ಶಿವಸುಖಿಗೆ ಈ ಆರ್ತರೆಗಳು ಅಪ್ಪಳಿಸುವುದಿಲ್ಲ. ಶಿವಸುಖದಲ್ಲಿ ಸಮರಸನಾದ ಮಹಾಯೋಗಿಗೆ ಸೀಮೆಯಿಲ್ಲ. ನಿಸ್ಸೀಮನಾಗಿ ನಿಖಿಲಲೋಕದಲ್ಲಿ ಸಂಪೂಜ್ಯನಾಗುತ್ತಾನೆ; ಶ್ರೇಷ್ಠ ಯೋಗಿಯೆನಿಸುತ್ತಾನೆ. ಆತನ ದಿವ್ಯಶಕ್ತಿಗೆ ಎಲ್ಲಿಯೂ ಯಾವ ಬಗೆಯ ಎಲ್ಲೆಯಿರುವುದಿಲ್ಲ. ಆತನ ಕೀರ್ತಿಗೆ ಕೊನೆಯಿರುವುದಿಲ್ಲ. ಆತನ ಹೃದಯಭೂಮಿಗೆ ಗಡಿಯೆಂಬುದಿಲ್ಲ. ಆತನ ಆ ಸರ್ವಜ್ಞಶಕ್ತಿಗೆ ಸೀಮೆಯೇ ಇರುವುದಿಲ್ಲ; ಆತನದು ಅನಂತಶಕ್ತಿ. ಆತ ನಿತ್ಯ ತೃಪ್ತ, ಸರ್ವಶಕ್ತ. ಆತನು ಆತ್ಮವೀರನಾಗಿ ಸಾವು ನೋವುಗಳಿಗೆ ಹಿಂಜರಿಯನು ; ಹಸಿವು ನೀರಡಿಕೆಗಳಿಗೆ ಅಂಜಿ ಅಳುಕನು. ಶೋಕ ಮೋಹಗಳಿಗೆ ಒಳಗಾಗನು. ಪರಮಸುಖದಲ್ಲಿ ಪರವಶನಾದ ಶರಣನಿಗೆ ಕಾಮವಿಲ್ಲ, ಸೀಮವಿಲ್ಲ.

“ ಅನಾಯಾಸದಿಂದ ಮನೆ ಮಾಡಿ
ನಿರಾಯಸದಿಂದ ಪರಮಸುಖಿ!
ರೂಹಿಸುವಲ್ಲಿ ರೂಪಾಧಿಕ,
ನೋಡಮಲ್ಲಿ ನೋಟ ಘನ!
ಇಂತಪ್ಪ ಸಹಜ ಸಂಗಿಯ ನಿಲುವಿನ ಪರಿ:
ಉದಕದೊಳಗಣ ಬಿಂದು ಉದಯರತ್ನದಂತೆ,
ಕೂಡಲಸಂಗನ ಶರಣರ ನಿಲವು!!”

ಆತ್ಮಾನಂದದಲ್ಲಿ ಅವಿರಳನಾದವನಿಗೆ ಆಸೆಯಿಲ್ಲ, ಆಯಾಸವಿಲ್ಲ. ಪರಮಸುಖಿಗೆ ಆಯಾಸವೆಂದರೇನು? ಅಲ್ಪವಾದ ವೈಷಯಿಕ ಆಸೆಯೆಂದರೇನು? ಕಾಮದ ಕಷ್ಟವೂ ಇರದು ; ವಿಷಯ ಸ್ಪೃಹೆಯೂ ಇರದು ಆತನಿಗೆ ಆತ್ಮಾನಂದ ಅದೊಂದು ದಿವ್ಯಗಂಗಾಮೃತ. ಆದರಿಂದ ಆತನು ಅತ್ಯಂತ ತೃಪ್ತನಾಗಿರುತ್ತಾನೆ. ಆತನಿಗೆ ವೈಷಯಿಕ ಸುಖಸವುಳುನೆಲದ ನೀರು; ಸಪ್ಪೆನೀರು. ಇದನ್ನು ಕುಡಿಯುವ ಕಾಂಕ್ಷೆಯಿರದು.

ಶರಣ ವಿಷಯರುಚಿಯನ್ನು ಮೀರಿದವನು; ಅಂತೆಯೇ ದೈಹಿಕ ರೂಪಕ್ಕೆ ಸೋಲದವನು. ನೀರೊಳಗಿನ ಹನಿಯೊಂದು ರತ್ನವಾದಂತೆ ಶರೀರಗಳೊಳಗೆ ಶರಣನ ನಿಲವು. ಆತನಿರುವೆಲ್ಲ ಸಹಜ. ಅಸಹಜಕ್ಕೆ ಆತನು ಆಸೆ ಮಾಡನು; ಆಯಾಸಗೊಳ್ಳನು.

ಆ ಪರಮ ಸುಖಾಂಬುಧಿ ಅಲ್ಲೋಲ ಕಲ್ಲೋಲವಾಗದ ಅನುಪಮ ಸಾಗರ. ಅದನ್ನು ತನ್ನ ಹೃಯದೊಳಗೆ ಇರಿಸಿಕೊಂಡ ಶರಣನಿಗೆ ಬೇರೆ ಯಾವ ವಾಸನೆಯ ಗಾಳಿ ಬೀಸದು. ಆಸೆಯ ಅಲೆಗಳು ಏಳವು. ಆರು ಊರ್ಮಿಗಳ ಅಬ್ಬರವಿರದು. ಅದು ಅಪಾರ ಸಾಗರ. ಆದಕ್ಕೆ ಎಲ್ಲೆ ಇಲ್ಲ. ತುರಿಯಾತೀತನಿಗೆ ಎಲ್ಲೆಯೆಂದರೇನು ? ಖಂಡರೂಪು-ಖಂಡರುಚಿಗಳನ್ನು ಮೀರಿದ ಶರಣನಿಗೆ ಸ್ಪೃಹೆಯಿಲ್ಲ, ಸೀಮೆಯಿಲ್ಲ; ಬಯಕೆ ಬಳಲಿಕೆಗಳಿಲ್ಲ.

"ಎನ್ನ ಕಂಗಳೊಳಗಣ ರೂಹಿಂಗೆ ಆನು ಬೇಟಗೊಂಡು
ಬಳಲುವಂತೆ ಹಿಡಿದು ನೆರೆಯಲಿಲ್ಲಯ್ಯಾ!
ತೂರ್ಯದ ತವಕವನೇನೆಂಬೆನಯ್ಯಾ!
ಸಂಗಯೋಗವಿಲ್ಲದ ರತಿಸುಖವನರಸಲುಂಟೆ
ಗುಹೇಶ್ವರಲಿಂಗದ ಕೃತಕದ ಅಳಿಯನೇನೆಂಬೆ?"

ಆ ಪರಾಶಕ್ತಿ ಪರಶಿವನ ಮಗಳು ಅವಳನ್ನು ಕೂಡಲೆಳಸಿದ ಶರಣಾಂಗ ಶಿವನಳಿಯನು ಅದು ಸಿದ್ಧಿಸಬೇಕಾದರೆ ಶರಣನು ಆತ್ಮಸೌಂದರ್ಯಕ್ಕೆ ಆತ್ಮ ಮಾದುರ್ಯಕ್ಕೆ ಎಳಸಬೇಕಲ್ಲದೆ ಆವಸ್ಥಾತ್ರಯದಲ್ಲಿದ್ದು ಅಂಗದ ಬಯಕೆಯಲ್ಲಿ ಬಿದ್ದು ಬಾಹ್ಯರೂಪು ರುಚಿಗಳಿಗೆ ಬಳಲಬಾರದು. ತೂರ್ಯತೂರ್ಯಾತೀತನ

ತವಕದಲ್ಲಿ ತಾನೇ ತಾನಾಗಿರಬೇಕು. ಹಾಗಿದ್ದವನ ಬಾಳೇ ಬಾಳು. ಆತನು ಸ್ತ್ರೀ ಸಂಗ ಸಂಯೋಗವಿಲ್ಲದ ದಿವ್ಯ ರತಿಸುಖವನ್ನು ಪಡೆಯಬಲ್ಲ. ಪರಾಶಕ್ತಿಯನ್ನು ಸಂಪಾದಿಸಬಲ್ಲ. ಆ ಪರಾನಂದದಲ್ಲಿ ಪರವಶನಾಗಿರಬಲ್ಲ. ವೈಷಯಿಕ ಸೀಮೆಯನ್ನು ಉಲ್ಲಂಘಿಸಬಲ್ಲ: ಇಲ್ಲವಾದರೆ ಆತನಿಗೆ ಪ್ರಸಾದ ಲಿಂಗ ವಂಚಿತವಾಗುತ್ತದೆ. ಅಂದರೆ ಅಲಭ್ಯವಾಗುತ್ತದೆ. ಅಂತಾದಾಗ ಶರಣ ಶಿವನಿಗೆ ಕೃತಕ ಅಳಿಯನಾಗಿರಬೇಕಾಗುತ್ತದೆ. ಅಂದರೆ ಆ ಪರಾಶಕ್ತಿಯ ಅಥವಾ ಪರಾತೃಪ್ತಿಯ ಸಾಮರಸ್ಯ ಸಮನಿಸದಿರುತ್ತದೆ. ವಿಷಯ ಸೀಮೆಯಲ್ಲಿದ್ದು ವಿಷಾದ-ವಿಯೋಗಗಳಿಂದ ವಿಹ್ವಲಗೊಳ್ಳಬೇಕಾಗುತ್ತದೆ. ವಿಭ್ರಮೆಗೊಳ್ಳಬೇಕಾಗುತ್ತದೆ.

"ಗುರುಪ್ರಸಾದ ಚಂದ್ರೇಣ ನಿಷ್ಕಳಂಕೇನ ಚಾರುಣಾ ।
ಯನ್ಮನಃ ಕುಮುದಂ ನಿತ್ಯಂ ಬೋಧಿತಂ ತಸ್ಯಕೋಭ್ರಮಃ ॥೭॥

ಶಿಕ್ಷಾಗುರುದೇವನ ಪ್ರಸಾದ ಅದೊಂದು ಚಲುವ ಚಂದಿರ; ಅದು ಕೊಳೆಯಿಲ್ಲದ ನಿರ್ಮಳ ಚಂದಿರ. ಮನದ ಮಂದಾರ. ಅದರಿಂದ ಶಿಷ್ಯನ ಮನವೆಂಬ ನೈದಿಲೆಯು ನಿಚ್ಚ ಅರಳುತ್ತದೆ. ಅಚ್ಚಳಿಯದಂತಿರುತ್ತದೆ. ಅದು ಅದೆಂದಿಗೂ ಭ್ರಮೆಯಿಂದ ಬಾಡದು. ಭಿನ್ನಭಾವವೆಂಬ ಭ್ರಮರ ಅದನ್ನು ಕೊರೆಯದು; ಅದರ ಮಕರಂದವನ್ನು ಕುಡಿಯದು. ಅಂದರೆ ಶಿವ ಬೇರೆ, ತಾನು ಬೇರೆ ಎಂಬ ದ್ವೈತ ವಿಕಾರ ಕಾಡದು. ಶಿವಾದ್ವೈತ ಸ್ವರೂಪವಾದ ತಂಬೆಳಗು ತೆರಹಿಲ್ಲದೆ ಮನದಲ್ಲಿ ತುಂಬಿರುತ್ತದೆ. ಶಿಕ್ಷಾಗುರುವಿನಿಂದ ಬಂದ ಶಿಕ್ಷಾಪಾದೋದಕವೆಂಬ ಪ್ರಸನ್ನ ಚಂದಿರನು ಹೃದಯಾಕಾಶದಲ್ಲಿ ನಿತ್ಯ ನಿಷ್ಕಳಂಕನಾಗಿ ಚಿನ್ಮಯ ಚನ್ನಿಗನಾಗಿ ಬೆಳ್ಳನೇ ಬೆಳಗುತ್ತಿರುತ್ತಾನೆ. ಗುರುಭೋಧಾಮೃತವನ್ನು ಪಾನ ಮಾಡುವವನಿಗೆ ಶಾಬ್ದಿಕ ಭ್ರಾಂತಿ ಸಂಭವಿಸದು.

"ಆಕಾಶದ ಬೀಜ ಅಗ್ನಿಯುಲೊಡಗಿ
ಶಾಖೆಯಿಲ್ಲದೆ ಮೊಳೆತು ಪಲ್ಲವಿಸಿತ್ತು;
ಅಧಿಪನೆಂಬವನನಾರಡಿಗೊಂಡಿತ್ತು:
ಈ ನಿರ್ಣಯವನರಿಯದವ ಮಾನವ;
ಗುಹೇಶ್ವರನೆಂಬುದು ಬಯಲ ವಿಕಾರ."

ಗುರುಬೋಧಾಮೃತವಿಲ್ಲದೆ ಬರೀ ಶಬ್ದ ಶಾಸ್ತ್ರದಿಂದ ಅರಿಯುವೆನೆಂಬವನು ಅರೆಮರುಳನಾಗಿ ನಿಜದ ನಿರ್ಣಯವನ್ನು ಅರಿಯದೆ ಮಾನವತ್ವದಿಂದ ಮುಂದುವರಿಯದೆ ಬಯಲ ವಿಕಾರಕ್ಕೆ ಒಳಗಾಗಿರುತ್ತಾನೆ, ಅರಿಯದೆ ಅರಿದೆನೆಂದು ಹೇಳುತ್ತಾನೆ. ವಾಗದ್ವೈತ ಅದೊಂದು ವಿಕಾರ. ವಾಗ್ವಿಕಾರ.

ಶಿಕ್ಷಾಗುರುವಿನ ಬೋಧಾಗ್ನಿಯಲ್ಲಿ ಶಾಸ್ತ್ರ ಶಬ್ದಗಳೆಂಬ ಬೀಜಗಳು ಹುರಿದಿರಬೇಕು. ಆಗ ಅನಾತ್ಮ ವಾಸನೆಯುಳ್ಳ ಅಂಕುರವಾಗದೆ ಆ ಮಹಾವಸ್ತುವಿನ ಅನುಭವರೂಪ ಐಕ್ಯೈಕ ಪರಾಭಕ್ತಿಯೆಂಬ ಅಂಕುರ ಪಲ್ಲವಿಸುತ್ತದೆ. ಆ ಶಿಕ್ಷಾಗುರು ಬೋಧೆಯಿಲ್ಲದೆ ಅರಿದೆನೆಂಬವನನ್ನು ಚಿದಹಂಭಾವಿಯನ್ನು ಅದು ಕಾಡಿಸುತ್ತದೆ. ಅಂದರೆ ಆ ಪರವಸ್ತುವಿನ ಆ ಪರಮಾಮೃತದ ಅನುಭವವಾಗದೆ ನಿರ್ಣಯಕ್ಕೆ ನಿಲುಕದೆ ಅಜ್ಞಾನಿಯೆನಿಸಬೇಕಾಗುತ್ತದೆ. ಮಾನವನೆನಿಸಬೇಕಾಗುತ್ತದೆ. ಶರಣತ್ವ ಸಮನಿಸದಿರುತ್ತದೆ. ಬಯಲ ಭ್ರಮೆಗೆ ಒಳಗಾಗಬೇಕಾಗುತ್ತದೆ. ಶಿಕ್ಷಾ ಗುರುದೇವನ ಬೋಧಾಮೃತವಿಲ್ಲದ ಬರಿಯ ಶಾಸ್ತ್ರಜ್ಞಾನ ಅದೊಂದು ಬಯಲಭ್ರಾಂತಿ.

“ಅರಿವಿನೊಳಗೊಂದು ಮರವೆ ಅದೆ ;
ಮರವೆಯೊಳಗೊಂದು ಅರಿವಿದೆ.
ಅರಿವು ಮರವೆ ಎಂಬೆರಡು ಅಳಿದರೆ ನಿರ್ಮಲವು ಅದೆ !
ತಾನೆಂಬಲ್ಲಿ ನಿಷ್ಪತ್ತಿಯಿಂದೆ. ಇದೇನು ಹೇಳಾ ಗುಹೇಶ್ವರಾ ?”

ಅರಿತೆನೆಂಬುದೆ ಮರವೆಯ ಮುಖ. ಮರತೆನೆಂಬುದೆ ಅರಿವಿಗೆ ಮುಖ. ಇವೆರಡು ಒಂದರ ಮೇಲೊಂದು ಬೆನ್ನು ಬಿದ್ದಿರುತ್ತವೆ. ಇವೆರಡೂ ನಿಷ್ಪತ್ತಿಗೊಳ್ಳಬೇಕು. ಆಗ ತನ್ನ ನಿಜದ ನಿಲವು ತನಗೆ ಕಾಣುತ್ತದೆ. ಇವೆರಡೂ ನಿಷ್ಪತ್ತಿಗೊಳ್ಳಬೇಕಾದರೆ ಶಿಕ್ಷಾಗುರುವಿನ ಪರಮಬೋಧವೆಂಬ ಶಿಕ್ಷಾಪಾದೋದಕಾಮೃತದ ಪಾನವಾಗಬೇಕು. ಆಗ ಆ ಪರಾನಂದಯೋಗ ತನ್ನಿಂದ ತಾನೇ ತನಗಳವಡುತ್ತದೆ. ಬರೀ ಶಬ್ದಜಾಲದಲ್ಲಿ ,ಶಾಸ್ತ್ರಾರಣ್ಯದಲ್ಲಿ ಬಿದ್ದವನಿಗೆ ಅದು ಅಳವಡದು.

"ಭೂತಳದ ಮತಿವಂತರು ಆತ್ಮನ ಸ್ಥಲವಿಡಲು,
ಮಾತು ಮಾಣಿಕವ ನುಂಗಿ, ಜಾತಿ ಧರ್ಮವನುಡಿಗಿ,
ವ್ರತದ ಭ್ರಮೆಗಳಂ ಸುಟ್ಟು, ಚಿತ್ತದ ಭಸ್ಮವ ಧರಿಸಿ
ಅಣಿಮಾಡಿ ಗುಣಂಗಳ ಗತಿಯ ಪಥವ ಮೀರಿ
ಭ್ರಾಂತ್ಯಳಿದು ಜ್ಯೋತಿ ಬೆಳಗುತಿದೆ ಗುಹೇಶ್ವರಾ."

ಶಿಕ್ಷಾಗುರುದೇವನ ಬೋಧಾಮೃತವಿಲ್ಲದೆ ಈ ಲೋಕದ ಮತಿವಂತರು ಪರಮಾತ್ಮನ ಪರಮಾನುಭವವನ್ನು ಪಡೆಯರು. ಬೌದ್ಧಿಕ ಬಲುಮೆ ಕೆಲಸಕ್ಕೆ ಬಾರದು. ಮಾತಿನ ಮಥನದಿಂದ ಆ ಮಹಾನಂದವನ್ನು ಮನಗಾಣಲಾಗದು. ಅದೇ ಗುರುಬೋಧಾಮೃತದಿಂದ ಮಂತ್ರಮಯವಾದ ಮಾತು ಪರಮಾರ್ಥ ತತ್ವರತ್ನವನ್ನು ತನ್ನೊಳಗೆ ಅಳವಡಿಸಿಕೊಂಡು ಜಾತಿ ಮತ ಪಂಥ ವರ್ಣಾಶ್ರಮಗಳ ಅಭಿಮಾನವನ್ನು ನಿರಾಕರಿಸಿ, ವ್ರತ ನೇಮ ಉಪವಾಸಾದಿಗಳನ್ನು ತೊಡೆದು ಭ್ರಮೆಯ ಸುಟ್ಟು, ಉಳಿದ ಚಿತ್ತದ ಚಿದ್ವಿಭೂತಿಯ ಧರಿಸಿ ಗುರು ಉಪದೇಶಿಸಿದ ಮಹಾಮಂತ್ರ ಜಪಕ್ಕೆ ಅಣಿಯಾಗಿ ತ್ರಿಗುಣಗಳ ತಿರ್ಯಗ್ಗತಿಯ ಮಾರ್ಗವನ್ನು ಮೀರಿ ಭ್ರಾಂತಿ ಹೀರಿ ತುರೀಯಾಚೆಯ ನೆಲೆಗೆ ಸೇರಿದರೆ ಆ ಪರಂಜ್ಯೋತಿ ಬೆಳಗುಗಳ ಬೆಳಗಾಗಿ ಬೆಳಗುತ್ತದೆ. ಆ ಹೆಬ್ಬೆಳಗಿನಲ್ಲಿ ಹೃದಯ ಕೈರವ ಅರಳುತ್ತದೆ. ಭ್ರಾಂತಿ ಸಂಶಯ ಅಜ್ಞಾನಾದಿಗಳು ಅಳಿಯುತ್ತವೆ. ಮಹಾಜ್ಞಾನಾಮೃತವು ಮನನೀಲೋತ್ಪಲವಲ್ಲಿ ತುಂಬಿ ತುಳುಕದಂತಿರುತ್ತದೆ. ಆ ಮಹಾಜ್ಞಾನಾಮೃತವು ಗುರುಪ್ರಸಾದ ಚಂದ್ರನ ಶುದ್ಧವೂ ಸುಂದರವೂ ಆದ ತಂಗದಿರ. ಆ ಶಿಕ್ಷಾಗುರುದೇವನ ಪಾದೋದಕ ಪ್ರಸಾದ ಅದೊಂದು ಅಪ್ರತಿಮ ವರ.

"ನೋಡಲಿಲ್ಲದ ಶೃಂಗಾರ, ಮಾತಾಡಲಿಲ್ಲದ ಶಬ್ದ,
ಬೇಡಲಿಲ್ಲದ ವರವ ನೋಡಿರೇ !
ನಿರಾಳವ ಬಾಡಲಿಲ್ಲದ ಶಶಿಯ ಬೆಳಗು ಕೂಡದೆ
ಕೂಡಿತ್ತೊಂದು ಸುಖವ ಕಂಡೆ.
ನಾನು ಇಲ್ಲದ ಉಪಕಾರ, ಮೊಲ್ಲದ ಸವಿಯಿಂದ
ಸುಖಿಯಾದೆ ಗುಹೇಶ್ವರಾ !"

ಶಿಕ್ಷಾ ಗುರುವಿನ ಬೋಧಾಮೃತವಾದ ಶಿಕ್ಷಾಪಾದೋದಕವೆಂಬ ಕೃಪೆಯನ್ನು ಕೈಗೂಡಿಸಿಕೊಂಡ ಶರಣನಿಗೆ ಅಭಿನ್ನ ಸ್ವರೂಪ ಸಾಕ್ಷಾತ್ಕಾರವಾಗಿರುತ್ತದೆ. ಅದರಿಂದ ಅದನ್ನು ಭಿನ್ನವಿಟ್ಟು ನೋಡನು. ಶಬ್ದಸಂದಣಿಗೆ ಸಿಕ್ಕನು; ಶಬ್ದಸೂತಕ ಆತನಿಗಿರದು. ಆತನಾಡಿದ್ದು ಶಬ್ದಬ್ರಹ್ಮ; ಮಾತೆಂಬ ಜ್ಯೋತಿರ್ಲಿಂಗ. ಆತನಿಗಾದ ಗುರುಕಾರುಣ್ಯ ಅದು ಬಯಸದೆ ಬೇಡದೆ ಬಂದ ಸಹಜ ವರ; ತಾ ಕಂಡ ತನ್ನ ನಿಜವೇ ತನ್ನ ವರ. ಪುಣ್ಯ ಹಣ್ಣಾದ ಶಿಷ್ಯನು ಕೇಳದಿದ್ದರೂ ಗುರುದೇವನು ತಾನೆ ಆತನಿಗೆ ಅಂತಃಕರಣದಿಂದ ಅನುಗ್ರಹಿಸುತ್ತಾನೆ. ಅಯಾಚಿತವಾಗಿ ಅನುಗ್ರಹೀತನಾದ ಆ ಭಾಗ್ಯವಂತನು ನಿರಾವಿಲನಾಗುತ್ತಾನೆ. ಆತನ ಹರುಷದ ಬೆಳಸು ಹುಲುಸಾಗಿ ಹೆರೆಹಿಂಗದಂತಿರುತ್ತದೆ. ತಾಪತ್ರಯದ ಸುಳುಹಿಲ್ಲದಿರುತ್ತದೆ ಕೊರಗು ಮರುಗುಗಳಿಲ್ಲದೆ ಇರುವುದರಿಂದ ಆತನ ಬಗೆ ಬಾನಿನಲ್ಲಿ ಕೃಶವಾಗದ ಶಶಿಯು ಅಂದರೆ ಗುರುಪ್ರಸಾದ ಚಂದ್ರನ ಚಾರುತರವಾದ ನಿರ್ಮಲ ಬೆಳಗು ತನ್ನಿಂದ ತಾನೇ ಕೂಡಿಯೂ ಕೂಡದಂತಿದ್ದು ಕಳೆಗೊಳ್ಳುತ್ತದೆ; ಅಂದರೆ ಪರಮ ಸುಖಸ್ವರೂಪದಿಂದಿರುತ್ತದೆ. ಆ ಪರಾನಂದವನ್ನು ಪಡೆದ ಶರಣನು ತನ್ನ ಬಾಳಿನಲ್ಲಿ ಬೇರೊಬ್ಬರ ಉಪಕಾರವನ್ನು ಅಪೇಕ್ಷಿಸದೆ ಕೊಡಬಲ್ಲ; ಕೇಳದ ಮುನ್ನ ಕೊಡಬಲ್ಲ. ಆ ಶರಣ ಇನ್ನೊಬ್ಬರ ಉಪಕಾರದಿಂದ ಸುಖಿಸುವವನಲ್ಲ. ತನ್ನ ನಿಜಸುಖದ ಸವಿಯನ್ನು ತಾನೇತಾನಾಗಿ ಸವಿದು ಸುಖಿಯಾಗಿರಬಲ್ಲ. ಗುರುಪ್ರಸಾದಸ್ವರೂಪ ಶಿಕ್ಷಾಪಾದೋದಕದ ವಿನಾ ಬೇರೆ ಏನನ್ನೂ ಬಯಸನು, ಬಳಲನು; ಶಿಕ್ಷಾಗುರುವಿನ ಅಂತಃಕರಣದಿಂದ ಚಿತ್ತಶುದ್ಧಿಯನ್ನು, ಚಿನ್ಮಯ ಪ್ರಭೆಯನ್ನು ನಿರಂತರ ಪಡೆದು ನಿಭ್ರಾಂತನಾಗಿರುತ್ತಾನೆ. ಗುರುಪ್ರಸಾದ-ಪಾದೋದಕ ಪರಿಣಾಮಿಯಾಗಿರುತ್ತಾನೆ; ಪರಮ ಪ್ರಾಣವಾಗಿರುತ್ತಾನೆ. ಆ ಶಿಕ್ಷಾಗುರುವಿನ ಬೋಧಪ್ರಸಾದ ಅಂತಹದು ಅಕಳಂಕವಾದುದು, ಆಕರ್ಷಣೀಯವಾದುದು; ಅತ್ಯಂತ ರುಚಿಯಾದುದು.

"ಬೆಲ್ಲದ ಪುತ್ತಳಿಯ ಕೈಯಲ್ಲಿ ಹಿಡಿದು,
ಎಲ್ಲಿ ಚುಂಬಿಸಿದಡೂ ಇನಿದಹುದು.
ಬಳ್ಳಿಯ ಬೇವಿನ ಹಣ್ಣ ಮೆಲ್ಲನೆ ಚುಂಬಿಸಿದಡೆ ಇನಿದಹುದೆ ?
ಎಲ್ಲ ಮಿಥ್ಯೆಯನು ಬಲ್ಲೆವೆಂದೆಂಬರು.
ಅವರು ಸಲ್ಲದೆ ಹೋದರಯ್ಯಾ, ಗುಹೇಶ್ವರಾ !"

ಶಿಕ್ಷಾಗುರುದೇವನ ಪರಮಪ್ರಸಾದದಿಂದ ಶರಣನು ಒಳ ಹೊರಗೆ ಪರಮಸುಖಸ್ವರೂಪ ಲಿಂಗವುಳ್ಳವನಾಗಿ ಒಳಹೊರಗೂ ಪ್ರಸನ್ನನಾಗಿರುತ್ತಾನೆ. ಶರಣನು ಖಂಡಿತ ಸುಖಿಯಲ್ಲ. ಬೆಲ್ಲದಚ್ಚಿನಂತೆ ಸರ್ವಾಂಗ ಲಿಂಗಸುಖಿ ; ಗುರುಪ್ರಸಾದ ಪರಿಣಾಮಿ ; ನಿಷ್ಕರ್ಮಿ ; ನಿರ್ಭಾವಿ. ಭವದ ಬಳ್ಳಿ ಸುತ್ತಿರುವವರು ಬೇವಿನ ಕಾಯನ್ನು ಮೆಲ್ಲುವರು. ಕಹಿಯುಂಡು ಅದೇ ಸಿಹಿಯೆಂದು ಸುಳ್ಳು ಹೇಳುವರು. ಬರಿದೆ ಬಳಲುವರು. ನಿಜಸುಖದ ಸೋಂಕು ಅವರಿಗಿರುವುದಿಲ್ಲ. ಅವರು ಗುರುಲಿಂಗದ ಕರುಣ ಪ್ರಸಾದಕ್ಕೆ ಸಲ್ಲದೆ ಹೋಗುವರು.

ಗುರುಪ್ರಸಾದವನ್ನು ಪಡೆದ ಶರಣನ ತನುಮನ ಭಾವಗಳೆಲ್ಲ ಲಿಂಗಧಾರಣವನ್ನು ತಳೆದು ಲಿಂಗಾರ್ಚನ ಲಿಂಗಧ್ಯಾನ ಲಿಂಗಾರ್ಪಣಗಳಿಂದ ತಂತಮ್ಮ ಗುಣಕರ್ಮಗಳನ್ನು ಕಳೆದುಕೊಂಡಿರುತ್ತವೆ. ಲಿಂಗಭಾವವಲ್ಲದೆ ಅಂಗಭಾವವಿರದು. ಕಾಯಗುಣ ಕರಣಗುಣ ಪ್ರಾಣಗಳಿರವು. ತ್ರಿವಿಧ ಕರ್ಮಗಳಿರವು. ಭಿನ್ನಭಾವವಿರದು. ರಾಜಸತಾಮಸಗಳಿರವು. ಸದಾ ಸಚ್ಚಿದಾನಂದ ಸ್ವರೂಪನಾಗಿ ಗುರುಪ್ರಸಾದ ಪ್ರಭೆಯಲ್ಲಿ ನಿಜನಿರ್ಣಯವನ್ನು ಕಂಡುಕೊಂಡು ಸಹಜ ಸುಖವನ್ನುಂಡು ತಾನೇ ತಾನಾಗಿರುತ್ತಾನೆ.

"ಅಂಬರವಿಲ್ಲದ ಮೇರುವ,
ಅಂಬುಧಿಯಿಲ್ಲದ ಗಂಪವ,
ತಂದವರಿಲ್ಲದೆ ಬಂದಿತ್ತು ; ನಿಜವನೊಳಕೊಂಡಿತ್ತು.
ಸಾಧನವಿಲ್ಲದ ಓಗರವ
ಭೋಜನವಿಲ್ಲದ ತೃಪ್ತಿಯಾಯಿತ್ತು ನೋಡಾ !
ಕ್ರಿಯಾ ವಿರಹಿತ ಯೋಗ ಫಲದಾಯಕ ಹೀನ
ಭಕ್ತಿ ಆಯತ ಸ್ವಾಯತವರಿಯದೆ ಹೋಯಿತ್ತು ಗುಹೇಶ್ವರಾ !॥

ತಾನೆಂಬ ಅಹಂಕಾರವಿಲ್ಲದೆ ಆ ಮಹಾದೇವನಾದ ಶಿವಸ್ವರೂಪ ಮೇರುವನ್ನು ಭವಸಾಗರವಿಲ್ಲದ ಮಹಾ ಘನಗಂಭೀರವನ್ನು ವೃತ್ತಿಜ್ಞಾನದಿಂದ ಅರಿದು ಅಳವಡಿಸಿಕೊಳ್ಳದೆ ಗುರು ಶಿಕ್ಷೆಯಿಂದುಂಟಾದ ನಿಜಾನುಭವದಿಂದ ನೆಲೆಗೊಳಿಸಿಕೊಂಡು ನಿಜವನೊಳಕೊಳ್ಳುವನು ನಿಜವಾಗಿ ಶರಣಾದ ಶಿಷ್ಯನು. ಶಿಕ್ಷಾಗುರುವಿನಿಂದ ಬಂದ ಪ್ರಸಾದ ಉಪಾಧಿರಹಿತವಾದುದು. ಸ್ವಯಂ ಪ್ರಕಾಶಸ್ವರೂಪ

ವಾದುದು. ಅದನ್ನು ಸರ್ವಾತ್ಮಭಾವದಿಂದ ಶರಣಾದ ಶಿಷ್ಯನು ಅಕಾಯವೆಂಬ ಭಾಜನದಲ್ಲಿರಿಸಿ ಭಿನ್ನರುಚಿಯಿಂದ ಭಂಜಿಸದೆ ಸಂತೃಪ್ತನಾಗುವನು, ಸುಖ ಸ್ವರೂಪ ತಾನಾಗುವನು. ನಿತ್ಯನಾಗಿ ಪೂರ್ಣನಾಗಿ ನಿಚ್ಚ ಪ್ರಸಾದಿಯೆನಿಸುವನು. ಇದು ಕ್ರಿಯಾಫಲವಿರಹಿತ ಯೋಗ. ಅಂದರೆ ಕ್ರಿಯೆ ಜ್ಞಾನಗಳು ನಿಷ್ಪತ್ತಿಗೊಂಡು ಸಹಜ ಸಮರಸಭಾವ. ಆ ಅವಿನಾಭಾವಾನಂದ ಭಕ್ತಿಯಲ್ಲಿ ಆಯತವೆಂಬ ಸ್ವಾಯತವೆಂಬ ಭಿನ್ನ ಜ್ಞಾನಗಳಿಗೆ ಇಂಬಿರುವುದಿಲ್ಲ. ಸ್ವಯಂ ಪ್ರಕಾಶಸ್ವರೂಪನಾಗಿ ಸಹಜಾನಂದಸ್ವರೂಪನಾಗಿರುವನು. ಆತ್ಮೀಯ ಗುರುದೇವನ ಆತ್ಮ ಪ್ರಸಾದವಾದ ಶಿಕ್ಷಾಪಾದೋದಕವೇ ತಾನಾಗಿ ನಿತ್ಯ ನಿಜದೆಚ್ಚರದಲ್ಲಿ ನಿರ್ಭ್ರಾಂತನಾಗಿರುತ್ತಾನೆ. ನಿಜಾನುಭವ ನಿಜಾನಂದಗಳಲ್ಲಿ ತಾನು ತಾನಾಗಿ ನಿಸ್ಸೀಮನಾಗಿ ನಿಷ್ಕಾಮನಾಗಿ ಇರುತ್ತಾನೆ.

ಶಿಕ್ಷಾ ಗುರುವಿನ ಶಿಕ್ಷಣವೂ ಒಂದು ಬಯಲನ್ನು ಮೀರಿ ನಿಂತ ಮಹಾ ಮೇರು. ಆದರದು ನಿಲುಕಿಸಲಾರದ ನೀಳ. ಮುನ್ನೀರಕ್ಕಿಂತಲೂ ಆಳ. ಶರಣನ ಸಹಜ ಸಾಧನೆ ಪರಿಪಕ್ವಗೊಂಡರೆ ಆಗ ಅದು ತನ್ನಿಂದ ತಾನೇ ಒದಗುತ್ತದೆ. ತನ್ನ ದಿಟವನ್ನು ತೋರುತ್ತದೆ. ಅದು ಆಗಬೇಕೆಂದು ಅಪೇಕ್ಷಿಸಬೇಕಿಲ್ಲ. ಅದನ್ನೇ ಸಾಧಿಸಬೇಕಿಲ್ಲ. ಅದು ಸಹಜವಾಗಿ ಸಂತೋಷ ಶೀಲನಿಗೆ ಸಾಧಿಸುತ್ತದೆ; ಸಂತೃಪ್ತಿಯನ್ನು ತರುತ್ತದೆ.

ದೀಕ್ಷಾಪಾದೋದಕ ಕ್ರಿಯಾಂಗ, ಶಿಕ್ಷಾಪಾದೋದಕ ಜ್ಞಾನಾಂಗ. ಒಂದು ತ್ಯಾಗಾಂಗ ಶುದ್ಧಿಗೆ ಕಾರಣ. ಇನ್ನೊಂದು ಭೋಗಾಂಗ ಸಿದ್ಧಿಗೆ ಕಾರಣ ಒಂದು ಆಯತ; ಇನ್ನೊಂದು ಸ್ವಾಯತ. ಮುಂದಿನ ಜ್ಞಾನ ಪಾದೋದಕ ಸನ್ನಿಹಿತ. ಯೋಗಾಂಗನಿಷ್ಠ. ಸಮರಸಕ್ಕೆ ಮೂಲ. ಸರ್ವ ಸ್ವತಂತ್ರ ಶೀಲ.

"ಉತ್ತರ ದಕ್ಷಿಣ ಪೂರ್ವ ಪಶ್ಚಿಮ
ಬಂದ ಬಟ್ಟೆಯನಾಲಿಸದೆ ವಾಯು ಬಂಧನವ ಮಾಡಿ
ಪಶ್ಚಿಮದ್ವಾರದಲ್ಲಿ ನಿವಾಸಿಯಾಗಿದ್ದ ಶರಣನು
ಅಧೋನಾಳದಲ್ಲಿ ನಿರುತ, ಮಧ್ಯನಾಳದಲ್ಲಿ ನಿರಾಳ
ಊರ್ಧ್ವನಾಳದಲ್ಲಿ ಸುರಾಳ;
ವ್ಯೋಮಕುಸುಮ ಕೊನೆಯ ಶಶಿಕಲಾಮೃತವ
ಧರಿಸಿದ ಘಟ್ಟಕ್ಕೆ ಕೇಡಿಲ್ಲಾಗಿ

ಲಿಂಗಕ್ಕೆ ಪ್ರಾಣಕ್ಕೆ ಒಂದೆಂಬ ಕಾರಣ ಅಚಳವೆನಿಸಿತ್ತು.
ಇದು ಕಾರಣ, ಕೂಡಲ ಚನ್ನಸಂಗಯ್ಯ
ಎನ್ನ ಪ್ರಾಣಕ್ಕೆ ಭವವಿಲ್ಲ, ಬಂಧನವಿಲ್ಲ.’’

ವಿಶುದ್ಧಿಯಿಂದ ವಿಯತ್ತಲಕ್ಕೆ ಏರಿದ ಶರಣ ಪಡುವಣದ ಹೆಬ್ಬಾಗಿಲಲ್ಲಿರುತ್ತಾನೆ. ದಿಕ್ಕು ದೆಸೆಗಳ ಹಂಗಿಲ್ಲದಿರುತ್ತಾನೆ. ಸಂಚಲನಕ್ಕೆ ಕಾರಣವಾದ ವಾಯುವನ್ನು ಬಂಧಿಸಿ ನಿಲ್ಲಿಸಿರುತ್ತಾನೆ ಇಡಾ ಪಿಂಗಳಾ ಸುಷುಮ್ನಗಳಲ್ಲಿ ನಿರುತ-ನಿರಾಳ-ಸುರಾಳನಾಗಿರುತ್ತಾನೆ. ನಿರುತನೆಂದರೆ ಯಾವಾಗಲೂ ಸತ್ಯವಂತನಾಗಿ ನಿಷ್ಕಪಟಿಯಾಗಿರುತ್ತಾನೆ. ನಿರಾಳನೆಂದರೆ ಪ್ರಶಾಂತನಾಗಿ ಪರಿಶುದ್ಧನಾಗಿ ನಿಶ್ಚಿಂತನಾಗಿರುತ್ತಾನೆ. ಸುರಾಳನೆಂದರೆ ಯೋಗ್ಯನಾಗಿ ನಿಭ್ರಾಂತನಾಗಿ ಘನಲಿಂಗದಲ್ಲಿರುತ್ತಾನೆ. ಈ ವಚನದಲ್ಲಿ ಬರುವ ವ್ಯೋಮಕುಸುಮವೆಂದರೆ ಶಿರದೊಳಗಿರುವ ಸಹಸ್ರ ಕಮಲ. ಅದರ ಅಂಚಿನಲ್ಲಿ ಶಶಿಕಲಾಮೃತ ತುಂಬಿದ ಕೊಡ ಕೇಡಿಲ್ಲದಂತಿರುತ್ತದೆ. ಅದೇ ಮಹಾಜ್ಞಾನಪಾದೋದಕ, ಚಿದಾನಂದಾಮೃತ. ಶರಣನು ಅದನ್ನು ಕೆಳಕ್ಕೆ ತುಳುಕಿಸಿ ಭಾವ ಪ್ರಾಣ ಕಾಯಗಳನ್ನು ಅಮೃತಮಯವಾಗಿಸುತ್ತಾನೆ ಅಂದರೆ ಅಂಗಕಳೆಯನ್ನು ಲಿಂಗಕಳೆಯನ್ನಾಗಿಸುತ್ತಾನೆ. ಎರಡೊಂದಾಗಿಸುತ್ತಾನೆ. ಚಳ ಅಚಳವೆಂದೆನಿಸುತ್ತಾನೆ. ಆಗ ಆತನ ಪ್ರಾಣಕ್ಕೆ ಭವಭಯವಿಲ್ಲ, ಬಂಧನವೇದನವಿಲ್ಲ.

ಜ್ಞಾನ ಕ್ರಿಯಾನುಭವ ಸ್ವರೂಪರಾದ ಗುರು-ಲಿಂಗ-ಜಂಗಮರನ್ನು ತ್ರಿವಿಧ ಪಾದೋದಕಗಳ ಸ್ವರೂಪದಲ್ಲಿ ತನ್ನೊಳಗೆ ಒಳಗೊಳ್ಳುವ ಒಂದು ವಿಶಿಷ್ಟವಿಧಾನ ಪಾದೋದಕ ಸ್ವೀಕಾರ. ಗುರುಲಿಂಗ ಜಂಗಮರಲ್ಲಿರುವ ಸತ್ಕಳೆ ಚಿತ್ಕಳೆ ಆನಂದಾನುಭವ ಕಳೆಗಳು ಉದಕದೊಡನೆ ಪಡೆವವನಲ್ಲಿ ಪ್ರವೇಶಿಸುತ್ತವೆ. ಪಾದೋದಕಗಳನ್ನು ಪಡೆದುಕೊಳ್ಳುವ ಕ್ರಿಯೆಯು ಅರಿವಿರಬೇಕು ; ಅನುಭವವಿರಬೇಕು. ಜತೆಗೆ ಶ್ರದ್ಧೆ ನಿಷ್ಠೆ ಎಚ್ಚರಿಕೆಗಳೂ ಇದ್ದಾಗಬೇಕು. ಇದು ಭಾವಪ್ರಧಾನವೂ ಅಹುದು ; ದೃಕ್ಕ್ರಿಯಾಪ್ರಧಾನವೂ ಅಹುದು. ಸಹಜಾಚರಣೆ ಸಂಬಂಧಾಚರಣೆಗಳಿಂದ ಈ ತ್ರಿವಿಧೋದಕಗಳು ಲಭ್ಯವಾಗುತ್ತವೆ. ಗುರುವಿನಲ್ಲಿ ಜಂಗಮವನ್ನು ಜಂಗಮದಲ್ಲಿ ಗುರುವನ್ನು ಸಂಬಂಧಾಚರಣೆ

ಯಿಂದ ಪಡೆಯಬೇಕಾಗುತ್ತದೆ. ಗುರುವಿನಲ್ಲಿ ಜಂಗಮತ್ವವಿದೆ. ಜಂಗಮದಲ್ಲಿ ಗುರುತ್ವವಿದೆ—ಸಂಬಂಧದಿಂದ !

ತ್ರಿವಿಧ ಪಾದೋದಕಗಳು ಸಚ್ಚಿದಾನಂದ ಸ್ವರೂಪವಾಗಿರುವುದರಿಂದ ಅವನ್ನು ಸ್ವೀಕರಿಸಿದವರಲ್ಲಿ ಲಿಂಗ ಚೈತನ್ಯಕಳೆಗಳು ಉಂಟಾಗುತ್ತವೆ. ಗುರು ಕಳೆ ಜಂಗಮ ಕಳೆಗಳೂ ಸಮನಿಸುತ್ತವೆ. ಈ ಮೂರೂ ಭಿನ್ನವಲ್ಲ. ಒಂದಕ್ಕೆ ಇನ್ನೊಂದು ಆಧಾರವಾಗಿರುತ್ತವೆ. ಗುರು ಪಾದೋಕವೇ ಲಿಂಗ-ಜಂಗಮ ಪಾದೋದಕವಾಗಿ ಪರಿಣಮಿಸುತ್ತದೆ. ಶಿಷ್ಯನ ಹೃದಯ ಭೂಮಿಯಲ್ಲಿ ಗುರು ಬಿತ್ತಿದ ಬೀಜ ಮೊಳೆತು ಬೆಳೆಯಬೇಕಾದರೆ ಪಾದೋದಕ ಸ್ವೀಕಾರ ಅನಿವಾರ್ಯ. ಪಾದೋದಕವಿಲ್ಲದೆ ಪ್ರಸಾದ ಸಿದ್ಧವಾಗದು. ಪಾದೋದಕ ಪರಬ್ರಹ್ಮಸ್ವರೂಪವಾದ್ದರಿಂದ ಅದರ ಮಿಶ್ರಣದಿಂದ ಪದಾರ್ಥ ಪ್ರಸಾದವಾಗುತ್ತದೆ. ಪ್ರಾಕೃತಿಕ ಸೂತಕವಿರದು. ಎಂಜಲೆಂಬುದಿರದು. ಅಂತೆಯೇ ಕಾಯ ಕರಣೇಂದ್ರಿಯ ಭಾವವೂ ತೊಲಗುವುದು. ಕಾಮ-ಕರ್ಮಗಳೂ ಪಾಪ ತಾಪಗಳೂ ತೊಲಗುವವು. ಪವಿತ್ರತೆ ಪ್ರಸನ್ನತೆಗಳು ಪ್ರಾಪ್ತವಾಗುವವು.

---

೩. ಜ್ಞಾನಪಾದೋದಕ ಸ್ಥಳಂ

ಪಾದೋದಕಲಿಂಗದ ಮೂರನೆಯ ಕಿರಣ ಜ್ಞಾನ ಪಾದೋದಕ ಸ್ಥಳ. ಇದು ಜ್ಞಾನ (ಮೋಕ್ಷ) ಗುರುವಿನಿಂದ ಉಂಟಾಗಿ ಈ ಹೆಸರು ಬಂದಿದೆ. ಇದನ್ನು ಜಂಗಮ ಪಾದೋದಕವೆಂದೂ ಹೇಳುವುದುಂಟು. ಇದು ಅನುಭವ ಪ್ರಧಾನವಾಗಿರುತ್ತದೆ. ಇದನ್ನು ಅನುಭವ ಪಾದೋದಕವೆಂದು ಹೇಳಿದರೂ ಸಲ್ಲುತ್ತದೆ. ಪರಮಾನಂದ ಪಾದೋದಕವೆಂಬುದಾಗಿಯೂ ಕರೆಯುತ್ತಾರೆ. ಇದು ಆಣವಮಲವನ್ನು ಆಗಾಮಿಕರ್ಮವನ್ನು ಕಳೆಯುತ್ತದೆ. ಭಾವದ ಭ್ರಮೆ ಬಯಲಾಗುತ್ತದೆ.

ಮೋಕ್ಷ ಗುರುದೇವನ ವೇಧಾದೀಕ್ಷೆಯಿಂದ ಭಾವಲಿಂಗವು ಪಾದೋದಕ ಸ್ವರೂಪವನ್ನು ಧರಿಸುತ್ತದೆ, ಅನುಭವಾಮೃತವಾಗಿ ಪರಿಣಮಿಸುತ್ತದೆ. ಮೋಕ್ಷಗುರುದೇವನು ಶರಣನಿಗೆ ಮನೋಲಯ ದೀಕ್ಷೆ ಮತ್ತು ಸದ್ಯೋನ್ಮುಕ್ತಿ ದೀಕ್ಷೆಗಳನ್ನು ಕರುಣಿಸುತ್ತಾನೆ. ಮಹಾಜ್ಞಾನ ಶಕ್ತಿಯನ್ನು ಶಿಷ್ಯನ ಭಾವ ಜೀವಗಳಲ್ಲಿ ತುಂಬುತ್ತಾನೆ.

ದೀಕ್ಷಾಗುರುವೆ ಶಿಕ್ಷಾಗುರುವಾದಂತೆ ಶಿಕ್ಷಾಗುರುವೆ ಮೋಕ್ಷ (ಜ್ಞಾನ) ಗುರುವಾಗಿ ವೇಧೋಪದೇಶವನ್ನು ಅನುಗ್ರಹಿಸುತ್ತಾನೆ, ಹಸ್ತ ಮಸ್ತಕ ಸಂಯೋಗ ಸಂಸ್ಕಾರವನ್ನು ಕರುಣಿಸುತ್ತಾನೆ. ಶಿಷ್ಯನ ಶಿರದರಮನೆಯಲ್ಲಿ ಮಹಾಜ್ಞಾನದ ಮಹಾತೇಜಸ್ಸನ್ನು ಗುರು ತನ್ನ ಅಮೃತಹಸ್ತ ಸ್ಪರ್ಶದಿಂದ ಪ್ರವೇಶಿಸಿ ಪ್ರಕಾಶಿಸುವಂತೆ ಮಾಡುತ್ತಾನೆ. ಮಂತ್ರಸ್ಪಂದನದಿಂದ ಹಸ್ತ ಸ್ಪರ್ಶದಿಂದ ಆಕಾಶಾಂಗದ ಪೂರ್ವಾಶ್ರಯವನ್ನು ನಿರಸನ ಮಾಡುತ್ತಾನೆ.

ಶಿಕ್ಷೆಯಿಂದ ಮಂತ್ರ ಮೀಮಾಂಸೆಯಾದರೆ ಮೋಕ್ಷರೂಪ ಮಹಾಜ್ಞಾನದಿಂದ ಅಥವಾ ವೇಧಾಸಂಸ್ಕಾರದಿಂದ ಅನುಭವಮೀಮಾಂಸೆಯುಂಟಾಗುತ್ತದೆ. ಕಾರಣಾಂಗದ ಕಳೆಯೇರುತ್ತದೆ. ಮಂತ್ರಮೀಮಾಂಸೆಯಿಂದ ಮಾನಸಿಕ ಆರೋಗ್ಯವುಂಟಾದರೆ ವೇಧಾಸಂಸ್ಕಾರದಿಂದ ಅನುಭಾವ ಮೀಮಾಂಸೆಯಿಂದ ಭಾವ ಭಾಗ್ಯವುಂಟಾಗುತ್ತದೆ. ಅಂದರೆ ಭಾವ ಸಂಸ್ಕಾರ ಬೆಳೆದು ಬರುತ್ತದೆ: ಭಾವ ಸಂಪತ್ತಿ ಸಮೃದ್ಧಿಸುತ್ತದೆ. ಇದರಿಂದ ಶಿಷ್ಯನು ಭಾವುಕನಾಗಿ ಬಾಳುತ್ತಾನೆ. ಸದ್ಭಾವನೆಯನ್ನು ಬೆಳಸುತ್ತಾನೆ. ಭಾವಪೂರ್ಣವಾದ ಭಾಷೆಯನ್ನು ಸೃಷ್ಟಿಸಲು ಸಮರ್ಥನಾಗುತ್ತಾನೆ. ಭಾವರಸಭರಿತ ಕಾವ್ಯಕಲೆ ಕೈಗೂಡುತ್ತದೆ. ದಿವ್ಯರಸಋಷಿಯಾಗಿ ತನ್ನ ದಿವ್ಯ ಜ್ಞಾನಾನುಭವಗಳನ್ನು ಸಾಹಿತ್ಯದಲ್ಲಿ ಸೂರೆಗೊಳ್ಳುತ್ತಾನೆ. ಅದರಲ್ಲಿ ತಾನು ತ್ರಿಕಾಲಾಬಾಧಿತನಾಗಿ ತೊಳಗುತ್ತಾನೆ. ಅದರಿಂದ ಸಮ್ಯಕ್ ಜ್ಞಾನವೆಂಬ ಸ್ವಯಗುರುದೇವನೊಡನೆ ಸಾಮರಸ್ಯವುಂಟಾಗುತ್ತದೆ. ಆತನ ಆ ಶಿವಸಾಹಿತ್ಯದಲ್ಲಿ ಜ್ಞಾನಪಾದೋದಕವೆಂಬ ಗಂಗೆ ಹರಿದು ಅಂಗವನ್ನೆಲ್ಲ ಮಂಗಳಮಯವಾಗಿಸುತ್ತದೆ.

"ಸದೈಕ್ಯ ಸಂಪದಾನಂದಜ್ಞಾನಂ ಜ್ಞಾನಗುರುರ್ಮತಃ।
ತತ್ಸಾಮರಸ್ಯಂ ಶಿಷ್ಯಸ್ಯ ಜ್ಞಾನ ಪಾದೋದಕಂ ವಿದುಃ" ॥೧॥

ಶಿಕ್ಷಾ ಪಾದೋದಕದಲ್ಲಿ ಉಂಟಾದ ಸದ್‌ಭಾವ ಸಾಮರಸ್ಯವೇ ಮಹಾ ಸಂಪತ್ತು. ಅದರಿಂದ ಆನಂದಜ್ಞಾನ. ಅದುಳ್ಳವನೇ ಜ್ಞಾನಗುರು. ಆ ಜ್ಞಾನಗುರುವಿನಲ್ಲಿ ಸಾಮರಸ್ಯವನ್ನು ಪಡೆದ ಶಿಷ್ಯನಿಗೆ ಆ ಆನಂದಜ್ಞಾನ ವುಂಟಾಗುತ್ತದೆ, ಅದುವೇ ಜ್ಞಾನಪಾದೋದಕ.

ಹಿಂದೆ ಹೇಳಿದ ಶಿಕ್ಷಾ ಪಾದೋದಕದ ಅನುಭವಸುಖವೇ ಪರಾನಂದ ಸ್ವರೂಪ ಜ್ಞಾನ. ಅದನ್ನೆ ಜ್ಞಾನಗುರುವೆಂದು ಹೇಳಿಕೆ. ಆ ಜ್ಞಾನ ಗುರುವಿನೊಡನೆ ಸಾಮರಸ್ಯವುಳ್ಳವನೇ ಶಿಷ್ಯನು. ಆತನಿಗೆ ಜ್ಞಾನ ಪಾದೋದಕವು ಜ್ಞಾನ ಗುರುವಿನ ನಿಧಿಧ್ಯಾಸದಿಂದ ಲಭಿಸುತ್ತದೆ.

ಕ್ರಿಯೆಜ್ಞಾನಗಳ ಸಾಮರಸ್ಯವೆ ಅನುಭವ. ಅನುಭವಜ್ಞಾನಗಳ ಸಾಮರಸ್ಯವೇ ಮೋಕ್ಷ (ಮಹಾಜ್ಞಾನ) ಪಾದೋದಕ. ಮೊದಲಿನದು ದೀಕ್ಷಾ ಪಾದೋದಕ; ಎರಡನೆಯದು ಶಿಕ್ಷಾಪಾದೋದಕ; ಮೂರನೆಯದು ಮೋಕ್ಷ ಪಾದೋದಕ; ಅಥವಾ ಜ್ಞಾನ ಪಾದೋದಕ.

ಸಾಮಾನ್ಯ ಜ್ಞಾನ ಸರ್ವರಲ್ಲಿರುತ್ತದೆ. ವಿಶಿಷ್ಟ ಶಿವಜ್ಞಾನ ಸರ್ವರಲ್ಲಿರದು. ಅದು ಮೋಕ್ಷಗುರುವಿನಲ್ಲಿರುತ್ತದೆ. ಪರಾನಂದದಲ್ಲಿ ಐಕ್ಯವಾದ ಜ್ಞಾನವುಳ್ಳವನೇ ಜ್ಞಾನಗುರು. ಆತನ ಶುಶ್ರೂಷೆಯಲ್ಲಿ ಸಮರಸ ಭಾವವನ್ನು ಪಡೆದ ಶಿಷ್ಯನು ಆತನ ಆ ಜ್ಞಾನ ಪಾದೋದಕವನ್ನು ಪಡೆಯುತ್ತಾನೆ,

'ವಿಜ್ಞಾನಮಾನಂದಂ ಬ್ರಹ್ಮಂ' ಇದು ಜ್ಞಾನ ಪಾದೋದಕದ ಸಲ್ಲಕ್ಷಣ. ವಿಜ್ಞಾನಾನಂದ ಸ್ವರೂಪವೇ ಜ್ಞಾನಪಾದೋದಕ, ಜ್ಞಾನಪಾದೋದಕವೇ ಪರಬ್ರಹ್ಮ. ಜ್ಞಾನವೇ ಪಾದ; ಆನಂದವೇ ಉದಕ. ಜ್ಞಾನ–ಆನಂದಗಳ ಐಕ್ಯವೇ ಅಂದರೆ ಏಕೀಭಾವವೇ ಪಾದೋದಕ. ಇದು ಜ್ಞಾನ ಗುರುವಿನಿಂದ ಲಭಿಸುತ್ತದೆ.

ಅಜ್ಞಾನ ಸಂಶಯಗಳಿಂದ ಮುಕ್ತನಾದವನೆ ಜ್ಞಾನಗುರು; ಅಥವಾ ಮೋಕ್ಷಗುರು. ಈ ಗುರುವಿನಲ್ಲಿ ಸತ್ ಚಿತ್ ಆನಂದಗಳು ಸಮರಸವಾಗಿರುತ್ತವೆ. ಸಚ್ಚಿದಾನಂದ ಸ್ವರೂಪನಾಗಿರುತ್ತಾನೆ. ಅಂತಹ ಗುರುವಿನಲ್ಲಿ ಶಿಷ್ಯನು ತ್ರಿಕರಣಪೂರ್ವಕವಾಗಿ ಸಮರಸನಾಗಿರಬೇಕು. ಆ ಸಮರಸಭಾವವೇ ಜ್ಞಾನ

ಪಾದೋದಕವೆನಿಸುತ್ತದೆ. ಅದನ್ನೇ ಸಮತಾಜಲವೆನ್ನುತ್ತಾರೆ. ಅದರಿಂದ ಇಹ–ಪರಗಳೆರಡೂ ಒಂದೇ ಆಗಿರುತ್ತವೆ.

ಈ ಜ್ಞಾನಾನಂದಸ್ವರೂಪ ಪಾದೋದಕದ ಅನುಭವ ಅಳವಡಬೇಕು. ಅದಿಲ್ಲದೆ ಹೋದರೆ ಸುಖವಿಲ್ಲ.

"ಆಸರಿನ ಭಕ್ತಿ ಜಡರುಗಳು ಬೇಸತ್ತು ಜಂಗಮಕ್ಕೆರಗಿ
ಪಾದಪ್ರಕ್ಷಾಲನೆಯಂ ಮಾಡಿ ಪಾದೋದಕವ ಧರಿಸುತ್ತಿರ್ಪರು.
ಆವುದು ಕ್ರಮವೆಂದರಿಯರು.
ಅಂದಡೆ, ಪಾದೋದಕವ ಅರಿಯದಿರ್ದಡೆ ಬಳಿನೀರೆಂದರಿಯರು.
ಅರಿದರಿದು ಬರುದೊರೆವೋದರು ಮಾನವರೆಲ್ಲ.
ಅರಿವು ಸಾಮಾನ್ಯವೆ ? ನಂಬುವುದು; ನಂಬದಿರ್ದಡೆ
ಮುಂದೆ ನರಕ ತಪ್ಪದು ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ."

ಪಾದೋದಕ ಕೇವಲ ಬಾಹ್ಯಾಚರಣೆಯಿಂದಾಗುವುದಲ್ಲ. ಅರಿವಿನ ಅಂತರಾಚರಣೆಯೂ ಬೇಕು. ಬಾಹ್ಯಗಮನವುಳ್ಳವ ಜಂಗಮನಲ್ಲ ; ಅಂತರ್ಗಮನವುಳ್ಳವ ಜಂಗಮ. ಜಡಭಕ್ತಿಯುಳ್ಳವ ಭಕ್ತನಲ್ಲ; ಶರಣ ಮೊದಲೇ ಅಲ್ಲ. ಬಾಹ್ಯಜಂಗಮನ ಬಾಹ್ಯ ಪಾದ ತೊಳೆದ ನೀರು ಪಾದೋದಕವಾಗದು. ಅಂತರ್ವರ್ಣನ ಅಂತರ್ಜ್ಞಾನ ಅಂತರನುಭವಗಳಲ್ಲಿ ಗಮನವುಳ್ಳ ಪ್ರಣವ ಸ್ವರೂಪಿಯ ಚಿಚ್ಚರಣನನ್ನು ಆನಂದಭಕ್ತಿಯೆಂಬ ಉತ್ತಮೋದಕದಿಂದ ಪ್ರಕ್ಷಾಲನ ಮಾಡುವುದೆ ವಿಜ್ಞಾನಾನಂದ ಸ್ವರೂಪ ಪಾದೋದಕ. ಅದು ಸಮತೆಜಲ. ಅದು ಸ್ವೀಕಾರ ಯೋಗ್ಯ. ಅದರಿಂದ ಸದೈಕ್ಯ ಸಂಪತ್ತು.

"ಲಿಂಗೋದಕ ಲಿಂಗಾರ್ಚನೆ,
ಪಾದೋದಕ ಪಂಚೇಂದ್ರಿಯಾರ್ಚನೆ,
ಪ್ರಸಾದೋದಕ ಪ್ರಾಣಾರ್ಚನೆ
ಲಿಂಗೋದಕ, ಪಾದೋದಕ, ಪ್ರಸಾದೋದಕ,
ಇಂತೀ ತ್ರಿವಿಧ ಉದಕವನಲ್ಲದೆ ಮುಟ್ಟಲಾಗದು
ಕೂಡಲಸಂಗಮದೇವಾ,

ಈ ದಿಸೆಯಲ್ಲಿ ಈ ಚನ್ನಬಸವಣ್ಣನವರ ಈ ಚಿನ್ಮಯವಾಣಿ ಚಿತ್ತ್ಯಸುವಂತಹದು. ತ್ರಿವಿಧೋದಕ ನಿರ್ಣಯ ಈ ಸೂತ್ರ ವಚನದಲ್ಲಿ ನಿರ್ದಿಷ್ಟವಾಗಿದೆ, ವಿಸ್ಪುಟವಾಗಿದೆ.

ಪಾದೋದಕ ಪರಿಜ್ಞಾನ ಪರಿಪೂರ್ಣವಾಗಿರಬೇಕು. ಆಗ ನಾವು ತಮಸ್ಸಿನಿಂದ ಬೆಳಕಿಗೆ ಬರಲು ದಾರಿಯಾಗುತ್ತದೆ. ತಮಸ್ಸನ್ನು ತೊಳೆಯಲು ಸದವಕಾಶವಾಗುತ್ತದೆ. ಇಲ್ಲವಾದರೆ ತಾಮಸವೃತ್ತಿಯಲ್ಲಿ ತೊಳಲಬೇಕಾಗುತ್ತದೆ. ಅಸತ್ತಿನಲ್ಲಿ ಅಚಿತ್ತಿನಲ್ಲಿ ಅಸುಖದಲ್ಲಿ ತಿರ್ರನೇ ತಿರುತಿರುಗಿ ಕೊಳೆ ನೀರು ಕುಡಿಯಬೇಕಾಗುತ್ತದೆ, ಕಜ್ಜಲವನ್ನು ಕಣ್ಣಿಗೆ ಹಚ್ಚಿಕೊಂಡಿರುವ ಅವಸ್ಥೆಗೀಡಾಗಬೇಕಾಗುತ್ತದೆ. ಆದ್ದರಿಂದ ವಾಸ್ತವ ಜ್ಞಾನವನ್ನು ಶರಣನು ಸಂಪಾದಿಸಬೇಕು.

"ಅವಿದ್ಯಾರಾಹು ನಿರ್ಮುಕ್ತೋ ಜ್ಞಾನ ಚಂದ್ರಃ ಸುನಿರ್ಮಲಃ।
ಪ್ರಕಾಶತೇ ಪರಾಕಾಶೇ ಪರಾನಂದ ಮಹಾದ್ಯುತಿಃ ॥ ೨ ॥
ಅಜ್ಞಾನ ಮೇಘ ನಿರ್ಮುಕ್ತಃ ಪೂರ್ಣಜ್ಞಾನ ಸುಧಾಕರಃ।
ಆನಂದ ಜಲಧೇರ್ವೃದ್ಧಿ ಮನುಪಶ್ಯನ್ವಿಭಾಸತೇ" ॥ ೩ ॥

ವಾಸ್ತವಿಕ ವಿಜ್ಞಾನವೇ ಶಿವಾದ್ವೈತಜ್ಞಾನ, ಅದುವೇ ಮಲರಹಿತ. ಅವಿದ್ಯೆಯೆಂಬ ರಾಹುವಿನ ಗ್ರಹಣದಿಂದ ಮುಕ್ತ. ಅದು ಆ ಪರಾನಂದ ಮಹಾಜ್ಯೋತಿ ಅದು ಹೃದಯದಲ್ಲಿರುವ ಪರಾಕಾಶದಲ್ಲಿ ಪ್ರಕಾಶಿಸುತ್ತದೆ.

ಹಾಗೆ ಪ್ರಕಾಶಿಸುವುದೇ ಪೂರ್ಣಜ್ಞಾನ. ಅದುವೇ ಪೂರ್ಣ ಸುಧಾಕರ. ಅದಕ್ಕೆ ಅಜ್ಞಾನವೆಂಬ ಮೇಘ ಆವರಿಸದು. ಆ ಪೂರ್ಣಪ್ರಜ್ಞಾಚಂದ್ರನು ಪರಮಾನಂದ ಸಾಗರವನ್ನು ಉಕ್ಕಿಸುತ್ತಾನೆ. ಹೆಚ್ಚಿದ ಹೆಗ್ಗಡಲನ್ನು ನೋಡುತ್ತ ಹೆಚ್ಚಾಗಿ ಬೆಳಗುತ್ತಾನೆ.

ಮರವೆಗೆ ಮೂಲ ಮುಮ್ಮಲ. ಮೂರು ಮಲಗಳ ಆವರಣ ಇರುವಲ್ಲಿ ಅರಿವೆಂಬ ತಂಗದಿರನು ತೊಳಗನು. ತೊಳಗದ ಬಳಿಕ ಅವಿದ್ಯೆ ಬಿಡದು. ಅಂತರಂಗದ ಕತ್ತಲೆ ಅಳಿಯದು. ಆನಂದವುಂಟಾಗದು. ಬಾಳಿನುದ್ದಕ್ಕೂ [illegible]ಬ್ಬಿನಲ್ಲಿಯೇ [illegible]ದ್ದಾಗಬೇಕಾಗುತ್ತದೆ.

ಶಿವಾದ್ವೈತ ಪರಮಜ್ಞಾನವೆಂಬ ಪೂರ್ಣ ಚಂದ್ರನು ನಿರ್ಮಲನಾಗಿ ನಿಜಹೃದಯಾಕಾಶದಲ್ಲಿ ಬೆಳ್ಳನೆ ಬೆಳಗಿದರೆ ಪರಮಾನಂದಸಾಗರ ಸಂವೃದ್ಧಿಯಾಗಿ ಸೂಸುತ್ತದೆ. ಆಗ ಆ ಹೃದಯದಲ್ಲಿ ಅವಿದ್ಯೆ ಅಜ್ಞಾನಗಳು ಅದೆನಿತೂ ಇರುವುದಿಲ್ಲ.

"ಆತ್ಮನ ನಿಜವನರಿದು ಪರಮಾತ್ಮ ತಾನೆಂಬು
ಅರಿದ ಶರಣಂಗೆ ಎಂತಿರ್ದಡಂತೆ ಪೂಜೆ ನೋಡಾ ;
ಆ ಶರಣ ಭೋಗಿಸಿತ್ತೆಲ್ಲವೂ ಲಿಂಗಾರ್ಪಿತ,
ರುಚಿಸಿತ್ತೆಲ್ಲವೂ ಪ್ರಸಾದ,
ಆ ಶರಣನರಿತುದೆಲ್ಲವೂ ಪರಬ್ರಹ್ಮ
ನುಡಿದುದೆಲ್ಲವೂ ಶಿವತತ್ತ್ವ;
ಆ ಶರಣ ತಾನೇ ಕೂಡಲ ಚನ್ನಸಂಗಯ್ಯನು."

ಕೇವಲ ಚಿತ್ ರವಿ, ಚಿದಾನಂದ ಪೂರ್ಣಿಮಾ ಚಂದ್ರ. ಚಿದಾನಂದವೇ ಜ್ಞಾನಪಾದೋದಕ. ಚಿದಾನಂದವು ಸುಧಾಕರನೂ ಅಹುದು, ಸಾಗರವೂ ಅಹುದು. ಶಶಿ ಸಾಗರಗಳ ಸಂಬಂಧ ಸೃಷ್ಟಿಯಲ್ಲಿರುವಂತೆ ಚಿದಾನಂದಗಳ ಸಂಬಂಧ ಅಂತಃಸೃಷ್ಟಿಯಲ್ಲಿಯೂ ಇದೆ. ಚಿತ್ಪಾದ, ಆನಂದೋದಕವಾಗಿ ಪಾದೋದಕವಾಗುತ್ತದೆ. ಮಲದ ಮರವೆಯನ್ನು ಹರಿಯುತ್ತದೆ.

"ಜ್ಞಾನಚಂದ್ರೋದಯೇ ಜಾತೇ ಧ್ವಸ್ತಮೋಹತಮೋಭರಃ ।
ಪಶ್ಯಂತಿ ಪರಮಾಂ ಕಾಷ್ಠಾಂ ಯೋಗಿನಃ ಸುಖರೂಪಿಣೀಂ ॥ ೪ ॥
ಮಾಯಾರಜನ್ಯಾಂ ವಿರಮೇ ಬೋಧಸೂರ್ಯೇ ಪ್ರಕಾಶತೇ ।
ನಿರಸ್ತಸರ್ವವ್ಯಾಪಾರಶ್ಚಿತ್ರಂ ಸ್ವಪಿತಿ ಸಂಯಮೀ ॥ ೫ ॥"

ಹಿಂದಿನ ಮಂತ್ರಶ್ಲೋಕಗಳೆರಡರಲ್ಲಿ ಮಲ ಮರವೆಗಳ ವಿಚಾರ ಪ್ರತಿಪಾದನೆಯನ್ನು ಮಾಡಿ ಇದೀಗ ಈ ಎರಡು ಮಂತ್ರಶ್ಲೋಕಗಳಲ್ಲಿ ಮಾಯಾ-ಮೋಹಗಳ ಮೀಮಾಂಸೆಯನ್ನು ಮಾಡಲಾಗಿದೆ.

ಮಲದಿಂದ ಮರವೆ ಮೈದೋರುವಂತೆ ಮಾಯೆಯಿಂದ ಮೋಹ ಮೈಗೂಡುತ್ತದೆ. [illegible] ರಾಹು

ಮೇಘಗಳಿಂದ ಪಾರಾದ ಚಂದ್ರನು ಕತ್ತಲೆಯನ್ನು ತೀರ ಕಳೆಯಲಾರನು. ಮೋಹಾಂಧಕಾರ ಪೂರ್ಣ ಪರಿಹಾರವಾಗಬೇಕಾದರೆ ಚಂದ್ರನಿಗಿಂತ ಸೂರ್ಯನ ಅಗತ್ಯ ಅದೆಷ್ಟಾದರೂ ಇರುತ್ತದೆಯೆಂಬುದನ್ನು ಈ ಎರಡನೆ ಮಂತ್ರಶ್ಲೋಕ ಮನದಟ್ಟಾಗಿಸುತ್ತದೆ. ಇದೊಂದು ಮನಂಬುಗುವ ಮೀಮಾಂಸೆ. ಅರಿವನ್ನು ಅರಳಿಸುವ ಅನುಭವ.

ಸಂಪೂರ್ಣ ಶಿವಾದ್ವೈತವೆಂಬ ಚಿಚ್ಚಂದ್ರೋದಯವಾಗಲು ಮೋಹತಮಸ್ಸಿನ ಭರ ತಗ್ಗುತ್ತದೆ. ಪರಮಸುಖರೂಪ ಸ್ವರೂಪವನ್ನು ಯೋಗಿಯಾದ ಶರಣನು ಒಳಗಣ್ಣಿನಿಂದ ನೋಡುತ್ತಾನೆ. ಅಂದರೆ ಸ್ವರೂಪ ಸಾಕ್ಷಾತ್ಕಾರವನ್ನು ಪಡೆಯುತ್ತಾನೆ.

ಮಾಯಾ ರಾತ್ರಿಗೆ ಬೋಧಸೂರ್ಯನೇ ಉದಯಿಸಬೇಕು. ಬೋಧಸೂರ್ಯನು ಬೆಳಗಲು ಮಾಯಾರಾತ್ರಿಯು ತೀರ ಇಲ್ಲದಂತಾಗುತ್ತದೆ. ಸಂಯಮಿಯ ಸ್ವಾಂತರಂಗದಲ್ಲಿ ಅಚ್ಚಳಿಯದ ಬೆಳಗು ಬೆಳಗುತ್ತದೆ. ಆದರೆ ಸಂಯಮಿಯಾದ ಶರಣನು ಸರ್ವವ್ಯವಹಾರಗಳನ್ನು ಬಿಟ್ಟು ಸುಖನಿದ್ರೆಯಲ್ಲಿರುತ್ತಾನೆ. ಇದೊಂದು ಶರಣನ ವಿಚಿತ್ರಲೀಲೆ. ಲೋಕೋತ್ತರ ಮಣಿಹ.

ಸೂರ್ಯೋದಯವಾದರೆ ಲೋಕದ ಜನ ಎಚ್ಚತ್ತು ಎದ್ದು ಎಲ್ಲ ಬಗೆಯ ವ್ಯವಹಾರಗಳಲ್ಲಿ ಪ್ರವೃತ್ತರಾದರೆ ಸಂಯಮಿಯಾದ ಶರಣ ಸುಖವಾಗಿ ಪವಡಿಸುತ್ತಾನೆ. ಅಂದರೆ ಕರಣೇಂದ್ರಿಯಗಳ ವೃತ್ತಿಯಿಲ್ಲದೆ ಶಿವಯೋಗವಿದ್ಯೆಯಲ್ಲಿ ಶಿವಾದ್ವೈತಬೋಧದಲ್ಲಿ ಪ್ರಶಾಂತನಾಗಿರುತ್ತಾನೆ. ಅಂದರೆ ಮಾಯಾ ಮೋಹಗಳಿಗೆ ವಶನಾಗದೆ ಪರಮಾನಂದದಲ್ಲಿ ಪರವಶನಾಗಿ ತಾನೇ ತಾನಾಗಿರುತ್ತಾನೆ. ಜ್ಞಾನಾನಂದಗಳೆರಡೂ ಶರಣನಲ್ಲಿ ಲಿಂಗವಾಗಿ ‘ಪರಿಣಮಿಸುತ್ತವೆ. ಪ್ರಸಾದಲಿಂಗದಲ್ಲಿ ಇವೆರಡೂ ಇರುತ್ತವೆ. ಇಲ್ಲಿ ‘ಸ್ವಪಿತಿ’ ಪದ ಗಮನೀಯ. ಸುಷುಪ್ತಿ ಪ್ರಸನ್ನಸ್ಥಲ. ಸಾಮಾನ್ಯ ಸುಷುಪ್ತಿಯೇ ಹೀಗಿರುವಾಗ ಶರಣನ ಜಾಗ್ರತ್ ಸುಷುಪ್ತಿಯಲ್ಲಿ ಸಂಪ್ರಸಾದ ಲಭಿಸುತ್ತದೆಂದು ಬೇರೆ ಹೇಳಬೇಕಿಲ್ಲ. ದೈನಂದಿನ ಸುಷುಪ್ತಿಯಲ್ಲಿರುವವರು ಸರ್ವವ್ಯವಹಾರಗಳಿಂದ ನಿರ್ಲಿಪ್ತರಾಗಿರುವುದು ವಿದಿತ ವಿಷಯ. ನಿತ್ಯ ನಿವೃತ್ತಿರೂಪ ಸುಷುಪ್ತಿಯಲ್ಲಿರುವ ಸಂಯಮಿಗೆ ಇನ್ನಾವ ವ್ಯಾಪಾರವಿದ್ದೀತು ? ಬೋಧಸೂರ್ಯನು

ಬೆಳಗುತ್ತಿರುವಾಗ ಮಾಯಾಜನ್ಯ ಮೋಹರಜನಿಗೆ ಅವಕಾಶವಿರುವದಾದರೂ ಹೇಗೆ ?

"ಅನಾದ್ಯವಿದ್ಯಾ ವಿಚ್ಛಿತ್ತಿವೇಳಾಯಾಂ ಪರಯೋಗಿನಃ ।
ಪ್ರಕಾಶತೇ ಪರಾನಂದಃ ಪ್ರಪಂಚೇನ ವಿನಾಕೃತಃ ॥ ೬ ॥
ನಿತ್ಯಾನಂದೇ ನಿಜಾಕಾರೇ ವಿಮಲೇ ಪರತೇಜಸಿ ।
ವಿಲೀನ ಚೇತಸಾಂ ಪುಂಸಾಂ ಕುತೋ ವಿಶ್ವವಿಕಲ್ಪನಾ ॥ ೭ ॥"

ಮರವೆ ಸ್ವಸ್ವರೂಪವನ್ನು ಮರೆ ಮಾಡುತ್ತದೆ. ಮೋಹವು ವಿಶ್ವವಿಕಲ್ಪನೆಯನ್ನುಂಟು ಮಾಡುತ್ತದೆ. ಒಂದು ವಸ್ತುವನ್ನು 'ನಾಸ್ತಿ' ಎನಿಸಿದರೆ ಇನ್ನೊಂದು 'ನ ಭಾತಿ' ಎನಿಸುತ್ತದೆ. ಅಂದರೆ ಅಜ್ಞಾನ ಇಲ್ಲೆನಿಸಿದರೆ, ಮೋಹ ತೋರದೆನಿಸುತ್ತದೆ ; ಸತ್ಯವಾದ ವಿಶ್ವವನ್ನು ಮಿಥ್ಯೆಯೆಂದೆನಿಸುತ್ತದೆ. ಪರಮಾರ್ಥವನ್ನು ಅಪ್ರಿಯವನ್ನಾಗಿಸುತ್ತದೆ. ಶ್ರವಣ, ಕೀರ್ತನ, ಸ್ಮರಣ, ಅರ್ಚನಾದಿಗಳನ್ನು ಮನ ಬಯಸದು, ಆಚರಿಸದು. ಅವಿದ್ಯೆಯ ಮಡುಲಲ್ಲಿ ಮಲಗಿರುತ್ತದೆ. ತಿಳಿಗಣ್ಣು ತೆರೆದಿರದು. ಪ್ರಪಂಚವನ್ನು ಪರಮಾರ್ಥವನ್ನು ಬೆಳಗುವ ಪರಾನಂದ ಪ್ರವಹಿಸದು. ಅದು ಪ್ರಕಾಶಿಸಬೇಕಾದರೆ ಅನಾದಿಯಾದ ಅವಿದ್ಯೆಯ ವಿಚ್ಛಿತ್ತಿಯಾಗಬೇಕು. ಪರಯೋಗದಲ್ಲಿ ಪರಮಪ್ರೇಮ ಬೆಳೆದು ಬರಬೇಕು.

ಆ ನಿತ್ಯಾನಂದವು ತನಗೆ ಬೇರಲ್ಲ, ತನ್ನ ಸ್ವರೂಪವೇ ಆಗಿದೆ. ಅದು ಸತ್‌ಸ್ವರೂಪವೂ ಅಹುದು ; ಚಿತ್‌ಸ್ವರೂಪವೂ ಅಹುದು. ಆದರಿಂದ ಆ ನಿತ್ಯಾನಂದವು ನಿರ್ಮಲವಾಗಿ ಪರತೇಜವಾಗಿ ತನ್ನಲ್ಲಿ ತೊಳಗುತ್ತದೆ. ಆ ಪರಂಜ್ಯೋತಿಯಲ್ಲಿ ಪರವಶವಾದ ಮನಸ್ಸುಳ್ಳವರಿಗೆ ವಿಶ್ವವಿಕಲ್ಪನೆಯುಂಟಾಗದು. ವಿಶ್ವ ಜಡ, ವಿಶ್ವ ಮಿಥ್ಯ, ವಿಶ್ವದಿಂದ ಬಂಧನ, ವಿಶ್ವವೊಂದು ಮಾಯೆ ಎಂದು ಮುಂತಾಗಿ ವಿಕಲ್ಪಭಾವವುಂಟಾಗದೆ ವಿಶ್ವವೂ ಆ ಪರವಸ್ತುಸ್ವರೂಪ, ಸತ್ಯಸ್ವರೂಪ ಎಂಬ ಸಹಜಭಾವವುಂಟಾಗುತ್ತದೆ. ಆ ಪರಯೋಗಿಗೆ ವಿಶ್ವವೂ ಭಿನ್ನವಾಗಿರದು ; ಭವಹರನ ಸ್ವರೂಪವಾಗಿಯೇ ತೋರುವದು.

ಬಂಜೆಯ ಮಗ, ಮುಗಿಲ ಮಲ್ಲಿಗೆ, ಮೊಲದ ಕೊಂಬು, ಎಂದು ಹೇಳುವುದು ವಿಕಲ್ಪಭಾವನೆ ; "ವಿಕಲ್ಪವೃತ್ತಿ. ಇದು ಅರ್ಥವಿಲ್ಲದ ವೃತ್ತಿ, ವಸ್ತುವಿಲ್ಲದ ಭಾವನೆ. ವಿಶ್ವ ಹೀಗಲ್ಲ. ಬಂಜೆಯ ಮಗನಂತೆ ವಿಶ್ವ ಇಲ್ಲದಿಲ್ಲ; ತೋರದಿಲ್ಲ. ಸತ್ಯವಾದ ಆ ಪರವಸ್ತು ಅಸತ್ಯವಾದ ವಿಶ್ವವನ್ನು ಹುಟ್ಟಿಸದು. ಅಲ್ಲವೆ ಜಗತ್ಕಾರಣತ್ವ ಆ ಪರವಸ್ತುವಿಗೆ ಸಂಭವಿಸದೆ ಹೋಗಬೇಕಾಗುತ್ತದೆ. ಹೋಗಲಿ ಎಂದರೆ ಆ ವಸ್ತು ಶಕ್ತಿಹೀನವಾಗಬೇಕಾಗುತ್ತದೆ. ಹಾಗೆ ಹೇಳಿದರೆ ಅನಂತಶಕ್ತಿತ್ವ ಸಂಭವಿಸದು. ಸರ್ವಕರ್ತೃತ್ವ ಸಂಭವಿಸದು. "ಯತೋ ವಾ ಇಮಾನಿ ಭೂತಾನಿ ಜಾಯಂತೇ" ಎಂಬ ಶ್ರುತಿಯ ಮಾತು ಸುಳ್ಳಾಗಬೇಕಾಗುತ್ತದೆ. ಆದ್ದರಿಂದ ವಿಶ್ವ ವಿಕಲ್ಪವೆಂದು ಹೇಳುವುದು ಸರಿಯಲ್ಲ. ಅದು ವಿಷಯ ಕಲ್ಪನೆ, ವಿಪರ್ಯಯ ಭಾವನೆ. ಪರಂಜ್ಯೋತಿಯ ಸಾಕ್ಷಾತ್ಕಾರದಲ್ಲಿ ಇವು ಯಾವೂ ಇರಲಾರವು.

"ಕುತೋ ಬ್ರಹ್ಮಾ ಕುತೋ ವಿಷ್ಣುಃ ಕುತೋ ರುದ್ರಃ
ಕುತೋ ರವಿಃ ।
ಸಾಕ್ಷಾತ್ಕೃತಪರಾನಂದ ಜ್ಯೋತಿಷಸ್ಸಾಮ್ಯಕಲ್ಪನೇ ॥೮॥

ಅಪರೋಕ್ಷಪರಾನಂದವಿಲಾಸಸ್ಯ ಮಹಾತ್ಮನಃ ।
ಬ್ರಹ್ಮವಿಷ್ಣ್ವಾದಯೋದೇವಾ ವಿಶೇಷಾಃ ಸುಖಬಿಂದವಃ ॥೯॥"

ಪರಾನಂದ ಪರಂಜ್ಯೋತಿಯ ಸಾಕ್ಷಾತ್ಕಾರವಾದ ಶರಣನಿಗೆ ಸರ್ವಸಾಮ್ಯ ಭಾವನೆಯುಂಟಾಗುತ್ತದೆ. ಮತ್ತು ಆ ಪರಾನಂದ ಪರಂಜ್ಯೋತಿಯು ಸರ್ವೋತ್ತಮವಾಗಿರುತ್ತದೆ. ಅದರ ಮುಂದೆ ಬ್ರಹ್ಮ ವಿಷ್ಣುಗಳ ತೇಜಸ್ಸಾಗಲಿ, ರುದ್ರರವಿಗಳ ತೇಜಸ್ಸಾಗಲಿ ಸರಿಬಾರವು.

ಅದು ಅಪರೋಕ್ಷ ಪರಾನಂದ. ಅದನ್ನು ಅಳವಡಿಸಿಕೊಂಡ ಮಹಿಮನಿಗೆ ಉಳಿದ ಆನಂಧಗಳು ಬಿಂದುಮಾತ್ರಗಳು. ಆತನ ಮುಂದೆ ಬ್ರಹ್ಮಾದಿಗಳು ಪಡುವ ಆನಂದ ಬಿಂದುಪ್ರಾಯ.

ಆ ಪರಾನಂದಸ್ವರೂಪ ಪರವಸ್ತು ಭೂಮವಾಗಿದೆ. ಆದ್ದರಿಂದಲೇ ಅದು ಪರಾನಂದಸ್ವರೂಪವಾಗಿದೆ. ಮಹಾವಸ್ತುವಿನಲ್ಲಿ ಮಹಾನಂದವಿರುವುದು ಸಹಜ.

ಭೂಮವೆಂದರೆ ಅಸಾಮಾನ್ಯ. ಸರ್ವವನ್ನೂ ಒಳಗೊಂಡ ಸರ್ವಾತ್ಮ. ಸರ್ವಶಕ್ತಿಸ್ವರೂಪ, ಸರ್ವವ್ಯಕ್ತಿಸ್ವರೂಪ ಅದೇ ಆಗಿದೆ. ಪರಕ್ಕೆ ಪರವಾದ ಮಹತ್ತಿಗೆ ಮಹತ್ತಾದ ಅದರ ಮುಂದೆ ಉಳಿದುದೆಲ್ಲವೂ ಅತ್ಯಲ್ಪ, ಅಣುವಿಗೆ ಅಣು. ಯಾವುದು ಪರಾತ್ಪರವೋ ಅದೇ ಪರಾನಂದಸ್ವರೂಪ ; ಅದೇ ಪರಂಜ್ಯೋತಿಸ್ವರೂಪ.

"ಯೋವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ
ಭೂಮೈವ ಸುಖಂ, ಭೂಮಾ ತ್ವೇವ ವಿಜಿಜ್ಞಾಸಿತವ್ಯಃ ।
ಯತ್ರ ನಾನ್ಯತ್ಪಶ್ಯತಿ ನಾನ್ಯಚ್ಛೃಣೋತಿ ನಾನ್ಯದ್ವಿಜಾನಾತಿ
ಸ ಭೂಮಾಽಥ ಯತ್ರಾನ್ಯತ್ ಪಶ್ಯತ್ಯನ್ಯಚ್ಛೃಣೋತ್ಯನ್ಯದ್ವಿಜಾ
ನಾತಿ ತದಲ್ಪಮ್ ॥"

ಎಂದು ಛಾಂದೋಗ್ಯ ಶ್ರುತಿ ಅಲ್ಪ ಅನಲ್ಪಗಳ ವಿವೇಚನೆಯನ್ನು ವಿಸ್ಫುಟವಾಗಿ ನಿರೂಪಿಸಿದೆ. ಭೂಮತ್ವವಿರುವಲ್ಲಿ ಪರತ್ವವಿರುತ್ತದೆ; ಸುಖಸ್ವರೂಪವಿರುತ್ತದೆ. ಬೇರೊಂದನ್ನು ಕಾಣದೆ ಕೇಳದೆ ತಿಳಿಯದೆ ಇರುವುದೇ ಭೂಮತ್ವಲಕ್ಷಣ. ಎಲ್ಲೆಲ್ಲಿಯೂ ಅದೇ ಇರುವಾಗ ಬೇರೆಯದಕ್ಕೆ ತಾವೆಲ್ಲಿ? ಎಲ್ಲವನ್ನೂ ಅದರ ಸ್ವರೂಪವನ್ನಾಗಿಯೇ ಕಾಣುವುದೇ ಸಾಮ್ಯದರ್ಶನ. ಆ ಪರಾನಂದವೇ ಭೂಮಾನಂದ. ಅದನ್ನು ಸಾಕ್ಷಾತ್ಕರಿಸಿಕೊಳ್ಳಬೇಕು ಆಕಾಶಾಂಗನಾದ ಶರಣ. ಭೂಮೋಪಾಸನೆಗೆ ಸಮರ್ಥ ಶರಣ, ಅದರಲ್ಲಿಯೂ ಜ್ಞಾನ ಪಾದೋದಕ ಸ್ಥಲಸ್ಥನಾದ ಶರಣನಿಗೆ ಸಾಧ್ಯ. ಪರ, ಮಹತ್, ಭೂಮಾ ಇವು ಪರ್ಯಾಯ ಪದಗಳು.

ವಿಶುದ್ಧಿಯಲ್ಲಿ ವಿರಾಜಿಸುವ ಪ್ರಸಾದಲಿಂಗವು ಪರಂಜ್ಯೋತಿ ಸ್ವರೂಪವೂ ಪರಾನಂದ ಸ್ವರೂಪವೂ ಆಗಿದೆ. ಬಯಲಕ್ಕೆ ಬಯಲಾಗಿ ಭೂಮವೂ ಆಗಿದೆ. ಆ ಭೂಮವನ್ನು ಆರಾಧಿಸುವ ಶರಣನು ಬೇರೊಂದನ್ನು ಬಗೆಯನು.

ಅದುವೇ ಆತನ ಸರ್ವಸ್ವ ; ಸ್ವಸ್ವರೂಪ. ಅನಲ್ಪವಸ್ತು ಲಭ್ಯವಾದಾಗ ಅಲ್ಪಕ್ಕೆ ಆಶಿಸುವುದೆಂದರೇನು?

"ಏಷ ಸಂಪ್ರಸಾದೋಽಸ್ಮಾಚ್ಛರೀರಾತ್ ಸಮುತ್ಥಾಯ ಪರಂ
ಜ್ಯೋತಿರೂಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ ।"

ಎಂದು ಛಾಂದೋಗ್ಯ ಶ್ರುತಿಯ ನಿರೂಪಣೆ. ಶರಣನು ಪ್ರಸಾದಲಿಂಗದ ಆರಾಧನೆಯಿಂದ ತಾನು ಪ್ರಸಾದಸ್ವರೂಪನಾಗುತ್ತಾನೆ. ಶರೀರಭಾವದಿಂದ ಬಿಡುಗಡೆಯುಳ್ಳವನಾಗುತ್ತಾನೆ. ಪರಕಾಯನಾಗುತ್ತಾನೆ. ಪರಂಜ್ಯೋತಿಯನ್ನು ಪಡೆಯುತ್ತಾನೆ. ಪರಾನಂದವಿಲಾಸದಲ್ಲಿ ಪರವಶನಾಗಿರುತ್ತಾನೆ. ಅಪರ ಸುಖಗಳಿಗೆ ಆಶಿಸದೆ ಸ್ವಸ್ವರೂಪಸಂಪನ್ನನಾಗಿರುತ್ತಾನೆ.

ಸ್ವಾಭಾವಿಕವಾಗಿ ಪರಂಜ್ಯೋತಿಯೂ ಪರಾನಂದಸ್ವರೂಪನೂ ಸರ್ವಾತ್ಮನೂ ಸರ್ವೋನ್ನತನೂ ಸರ್ವಕಾರಣನೂ ಆದ ಆ ಪರಶಿವಬ್ರಹ್ಮಸಾಕ್ಷಾತ್ಕಾರವನ್ನು ಶರಣನು ವಿಶುದ್ಧಿಯಲ್ಲಿದ್ದು ಪಡೆಯುತ್ತಾನೆ. ಪಡೆದು ಪೂರ್ಣಕಾಮಿಯೂ ಪೂರ್ಣಪರಿಣಾಮಿಯೂ ಆಗಿರುತ್ತಾನೆ. ಅನ್ಯವೂ ಅಲ್ಪವೂ ಆದುದನ್ನು ಅದೆಷ್ಟೂ ಆಶಿಸನು. ಮಹಾತ್ಮನಾಗಿ ಮರ್ತ್ಯದ ಮಣಿಹವನು ಮುಂದುವರಿಸುತ್ತಾನೆ. "ಭೂಮಾ ಸಂಪ್ರಸಾದಾತ್ ಅಧ್ಯುಪದೇಶಾತ್" ಎಂಬೀ ಬ್ರಹ್ಮಸೂತ್ರಾಭಿಪ್ರಾಯದಂತೆಯೂ ಶರಣನ ಪ್ರಸಾದಲಿಂಗವೇ ಭೂಮಾ ಪದವಾಚ್ಯವಾಗುತ್ತದೆ. ಏಕೆಂದರೆ ಅದು ಜ್ಞಾನಗುರುದೇವನ ಸಂಪ್ರಸಾದಸ್ವರೂಪ ಪರಮಾನುಗ್ರಹ (ಅಧ್ಯುಪದೇಶ)ದಿಂದ ಪ್ರಾಪ್ತವಾಗಿರುತ್ತದೆ. ಸರ್ವಪ್ರಸಾದಗಳಿಗೆ ಸರ್ವಪ್ರಕಾಶಗಳಿಗೆ ಅದು ಅಧಿಷ್ಠಾನವಾಗಿರುತ್ತದೆ. ಆ ಭೂಮಾನಂದದಿಂದಲೇ ಬ್ರಹ್ಮಾದಿಗಳು ಉಪಜೀವಿಸುತ್ತಾರೆ ; ಪ್ರತಿಬಿಂಬಿಸುತ್ತಾರೆ. ಈ ಕಣ್ಣಿಗೆ ಆಧಾರನು ಆದಿತ್ಯನು. ಆ ಆದಿತ್ಯನಿಗೆ ಆಧಾರನು ಆ ಪರಾನಂದಜ್ಯೋತಿಯು. ಅದಕ್ಕೆ ಬೇರೊಂದು ಆಧಾರವಿಲ್ಲ. ಅದು ಅಮಿತ ; ಅಮೃತ. ಅದು ಸರ್ವಸೇತು ; ಸರ್ವಹೇತು. ಅದು ಶಿವಾದ್ವೈತ ಜ್ಞಾನಕ್ಕಾಗಿ ಶರಣನಲ್ಲಿ ಪ್ರಸಾದಲಿಂಗವಾಗಿ ಬಂದಿದೆ. ಪರಮಗುರುದೇವನ ಕರುಣಾಮೃತವಾಗಿ ಜ್ಞಾನಪಾದೋದಕವಾಗಿ ಬಂದಿದೆ.

"ಪಾದೋಽಸ್ಯ ಸರ್ವಾಭೂತಾನಿ" ಪಾದ ಸಣ್ಣದಲ್ಲ; ಪಾದವೂ ಭೂಮಾ ವಾಚ್ಯವಾಗಿದೆ. ಎಲ್ಲ ಭೂತಗಳೂ ಆತನ ಪಾದವಾಗಿವೆ. ಅಂತಹ ಪಾದ ಪರುಷದಿಂದ ಬಂದ ಉದಕವು ಪರಮೋತ್ಕೃಷ್ಟ ಆನಂದಜ್ಯೋತಿಯಲ್ಲದೆ ಅನ್ಯವಲ್ಲ; ಅಲ್ಪವಲ್ಲ.

"ಯನ್ಮಾತ್ರಾಸಹಿತಂ ಲೋಕೇ ವಾಂಛಂತಿ ವಿಷಯಂ ನರಾಃ ।
ತದಪ್ರಮೇಯಮಾನಂದಂ ಪರಮಂ ಕೋ ನ ವಾಂಛತಿ? ॥ ೧೦ ॥"

ಈ ಲೋಕದ ವಿಷಯ ಆ ಪರಾನಂದ ಜ್ಯೋತಿಯ ಒಂದಂಶ ಮಾತ್ರ. ಇದನ್ನೇ ಮಾನವರು ಬಯಸುತ್ತಾರೆ. ಅದಾದರೋ ಅಪ್ರಮೇಯ ಆನಂದ, ಅತ್ಯಧಿಕ ಆನಂದ; ಅದನ್ನು ಅರಿತವರು ಅಪೇಕ್ಷಿಸದೆ ಇರಲಾರರು; ಮೃತ್ಯು ಮುಖದಿಂದ ಪಾರಾಗಿ ಅಮೃತತ್ವವನ್ನು ಪಡೆಯಬೇಕಾದರೆ ಆ ಪರಾನಂದ ಜ್ಯೋತಿಯನ್ನು (ಜ್ಞಾನ ಪಾದೋದಕವನ್ನು) ಬಿಟ್ಟು ಬೇರೆ ಗತಿಯಿಲ್ಲ. ಏಕೆಂದರೆ ಅದು ಅಪ್ರಮೇಯ, ಪರಾತ್ಪರ.

"ಯಸ್ಮಾತ್ಪರಂ ನಾಪರಮಸ್ತಿ ಕಿಂಚಿತ್
ಯಸ್ಮಾನ್ನಾಣೀಯೋ ನ ಜ್ಯಾಯೋಽಸ್ತಿ ಕಶ್ಚಿತ್ ।
ವೃಕ್ಷ ಇವಸ್ತಬ್ಧೋ ದಿವಿ ತಿಷ್ಠತ್ಯೇಕಃ
ತೇನೇದಂ ಪೂರ್ಣಂ ಪುರುಷೇಣ ಸರ್ವಮ್ ॥"

—ಶ್ವೇತಾಶ್ವತರೋಪನಿಷತ್, ಅ.೩. ಶ್ಲೋ-೯.

ಅದಕ್ಕಿಂತ ಅಧಿಕವಾದುದಿಲ್ಲ. ಆನಂದಜ್ಯೋತಿಯಾದ ಜ್ಞಾನಪಾದೋದಕವೇ ಪರಮದೇವ, ಪ್ರಮೇಯರಹಿತದೇವ. ಅದಕ್ಕಿಂತ ಸೂಕ್ಷ್ಮವಿಲ್ಲ; ಅದಕ್ಕಿಂತ ಜ್ಯೇಷ್ಠವಿಲ್ಲ. ಅದು ಅಣುವಿಗೆ ಅಣು, ಮಹತ್ತಿಗೆ ಮಹತ್ತು, ಅದು ಸರ್ವಶ್ರೇಷ್ಠ; ಸರ್ವವ್ಯಾಪಕ. ಅದರಲ್ಲಿ ಎಲ್ಲವೂ ಸ್ತಬ್ಧವಾಗುತ್ತದೆ. ಅದು ದಿವ್ಯಾಕಾಶದಲ್ಲಿ ವಿಶುದ್ಧಿಯಲ್ಲಿ ಪರಾನಂದಜ್ಯೋತಿಯಾಗಿ ಪ್ರಕಾಶಿಸುತ್ತದೆ. ಅದರಿಂದ ಈ ಎಲ್ಲ ಜಗತ್ತು ಪೂರ್ಣವಾಗಿದೆ. ಬ್ರಹ್ಮಾಂಡದಂತೆ ಅದನ್ನು ಪಡೆದ ಶರಣನ ಪಿಂಡಾಂಡವೂ ಪೂರ್ಣವಾಗಿರುತ್ತದೆ. ಅದು

ಕಾರವೂ ಅಹುದು ; ನಿರಾಕಾರವೂ ಅಹುದು, ಅಂತೆಯೇ ಜ್ಞಾನ ಪಾದೋದಕ ಸ್ವರೂಪವಿರುತ್ತದೆ.

> "ನಿತ್ಯವೆಂಬ ಭಕ್ತನ ಮನೆಗೆ
> ಘನಚೈತನ್ಯವೆಂಬ ಜಂಗಮ ಬಂದರೆ
> ಜಲವಿಲ್ಲದ ಜಲದಲ್ಲಿ ಪಾದಾರ್ಚನೆಯ ಮಾಡಿ,
> ಆ ಪಾದೋದಕವೇ ಮಹಾಪಾದೋದಕವಯ್ಯ
> ಆ ಪಾದೋದಕದಲ್ಲಿ ಪರಮ ಪರಿಣಾಮಿ
> ಕೂಡಲ ಚನ್ನಸಂಗಾ ನಿಮ್ಮ ಶರಣ."

ನಿತ್ಯತ್ವವೇ ಭಕ್ತ ; ಪರಕಾಯವೆ ಮಾಮನೆ; ಪೂರ್ಣಚೈತನ್ಯವ ಜಂಗಮ, ಪರಮ ಪ್ರಸನ್ನಭಾವವೇ ಮಹಾಪಾದೋದಕ. ಆ ಪರಾನಂದದ ಪರಿಣಾಮದಲ್ಲಿರುವವನೆ ಶರಣ. ಇದರಿಂದ ಶರಣನ ಹಿರಿಮೆ ಹೃದಯಂಗಮವಾಗುತ್ತದೆ. ಇದು ಶರಣನ ಪರಿಪಕ್ವ ಜೀವನ.

ತ್ರಿವಿಧೋದಕದ ತಿರುಳು

ತ್ರಿವಿಧ ಪಾದೋದಕವನ್ನು ಕರುಣಿಸಲು ಪರವಸ್ತುವೊಂದೇ ಗುರು-ಲಿಂಗ-ಜಂಗಮ ಸ್ವರೂಪದಲ್ಲಿ ತ್ರಿವಿಧವಾಗಿ ತಿರೆಗೈತಂದಿದೆ. ತ್ರಿವಿಧವಾಗಿದ್ದರೂ ಏಕವಿಧವಾಗಿರಬಲ್ಲುದು. ಬಾಹ್ಯದಲ್ಲಿ ತ್ರಿವಿಧ. ಅಂತರಂಗದಲ್ಲಿ ಏಕವಿಧ. ಕ್ರಿಯೆಯಾಗಿ ಜ್ಞಾನವಾಗಿ ಅನುಭವವಾಗಿ ಅಂತರಂಗದಲ್ಲಿ ಅಳವಡುತ್ತದೆ. ಕ್ರಮವಾಗಿ ಸತ್ ಚಿತ್ ಆನಂದವಾಗಿ ಪರಿಣಮಿಸುತ್ತದೆ.

ಗುರು ತನ್ನ ಸದ್ರೂಪವನ್ನು ಶಿಷ್ಯನ ಕಣ್ಣನಲ್ಲಿ ತುಂಬಿ ದೀಕ್ಷಾ ಪಾದೋದಕವನ್ನಾಗಿಸುತ್ತಾನೆ. ಗುರು ತನ್ನ ಚಿದ್ರೂಪವನ್ನು ಮಂತ್ರಮುಖದಲ್ಲಿ ಶಿಷ್ಯನ ಕಿವಿಯಲ್ಲಿ ಬೋಧಿಸಿ ಮನದಲ್ಲಿ ನಿಲ್ಲಿಸಿ ಶಿಕ್ಷಾಪಾದೋದಕವನ್ನಾಗಿಸುತ್ತಾನೆ

ಶ್ರೀ ಗುರು ತನ್ನ ಆನಂದಸ್ವರೂಪವನ್ನು ಶಿಷ್ಯನ ರಸನೆಯಲ್ಲಿ ರಸಸ್ವರೂಪದಲ್ಲಿ ಕರುಣಿಸಿ ಜ್ಞಾನಪಾದೋದಕವನ್ನಾಗಿಸುತ್ತಾನೆ. ಈ ಮೂರನ್ನು ಪರಿವಿಡಿದ ಕರುಣಜಲ, ವಿನಯಜಲ, ಸಮತಾಜಲವೆಂದು ಮತ್ತೊಂದು ಬಗೆಯಲ್ಲಿ ಹೇಳುವುದುಂಟು. ಅಲ್ಲದೆ ಗುರುಪಾದೋದಕ–ಲಿಂಗಪಾದೋದಕ–ಜಂಗಮ ಪಾದೋದಕವೆಂದೂ ಹೇಳುವುದುಂಟು. ‘ಗುರು-ಕ್ರಿಯಾ-ಜ್ಞಾನ’ ಪಾದೋದಕಗಳೆಂದೂ ಹೇಳುವರು.

ಇವಲ್ಲದೆ ಸ್ಪರ್ಶನೋದಕ, ಶಿವಧಾನೋದಕ, ಆಪ್ಯಾಯನೋದಕ, ಹಸ್ತೋದಕ, ಪರಿಣಾಮೋದಕ, ನಿರ್ನಾಮೋದಕ, ಸತ್ಯೋದಕ ಎಂಬುದಾಗಿ ಬೇರೆ ಏಳು ಪಾದೋದಕಗಳುಂಟು. ಇವು ಅವರವರಿಂದಲೇ ಉಂಟಾಗುತ್ತವೆ. ಕ್ರಿಯಾಭೇದದಿಂದ ಸಂಭವಿಸುತ್ತವೆ. ಇವುಗಳ ವಿಚಾರ ಇಲ್ಲಿ ಅಪ್ರಸ್ತುತವೆಂದು ವಿವರಿಸುವುದಿಲ್ಲ. ಇವು ಏಳು ಅವರವರು ಸ್ವೀಕರಿಸುವಾಗ ಸಂಭವಿಸುತ್ತವೆ.

ಗುರುದೇವನಲ್ಲಿ ಕ್ರಿಯೆ ಜ್ಞಾನಾನುಭವಗಳ ರೂಪದಲ್ಲಿರುವ ಸತ್ ಚಿತ್ ಆನಂದಗಳನ್ನು ಶಿಷ್ಯನು ಪಾದಾರ್ಚನೆಯ ಮುಖಾಂತರ ಹೊರಹೊಮ್ಮಿಸಿ ತಿಳಿನೀರಿನಲ್ಲಿ ಸಂಬಂಧಿಸಿ ಸಂಗ್ರಹಿಸಿಕೊಂಡು ಸ್ವೀಕರಿಸುವುದೇ ತ್ರಿವಿಧ ಪಾದೋದಕ ತತ್ತ್ವ. ಇದರಿಂದ ತ್ರಿಕರಣಗಳು ತ್ರಿವಿಧತನುಗಳು ಪಾವನವಾಗುತ್ತವೆ. ಗುರುವಿನ ಕ್ರಿಯಾಸಾರವೇ ಕ್ರಿಯಾಪಾದೋದಕ ; ಮಂತ್ರಮಯ ಜ್ಞಾನಸಾರವೇ ಜ್ಞಾನಪಾದೋದಕ ; ಅನುಭವಾತ್ಮಕ ಆನಂದಸಾರವೇ ಅನುಭಾವ ಪಾದೋದಕ ಅಥವಾ ಆನಂದ ಪಾದೋದಕ.

ತ್ರಿವಿಧ ಪಾದೋದಕ ಪ್ರಾಪ್ತಿಯೆಂದರೆ ತ್ರಿವಿಧ ಸಾರಾಮೃತವೃಷ್ಟಿ. ಅದು ಶರಣನ ತ್ರಿವಿಧ ಅಂಗಗಳೆಂಬ ಭೂಮಿಕೆಗಳಲ್ಲಿ ವರ್ಷಣವಾಗಿ ಪರತತ್ತ್ವದ ಬೆಳೆ ಹುಲುಸಾಗುತ್ತದೆ. ಶರಣನ ಕಾಯ ಸತ್ಕಾಯವಾಗುತ್ತದೆ. ಪ್ರಾಣ ಚಿತ್ಪ್ರಾಣವಾಗುತ್ತದೆ ; ಭಾವ ಜೀವಗಳು ಅನುಭವ-ಆನಂದಸ್ವರೂಪಗಳಾಗುತ್ತವೆ. ಸತ್ಕಾಯದಲ್ಲಿ ಸತ್ಕಳೆ, ಚಿತ್ಪ್ರಾಣದಲ್ಲಿ ಚಿದ್ಬಿಂದು, ಸುಖಭಾವದಲ್ಲಿ ಆನಂದಮಯನಾದವಾಗಿ ವಿರಾಜಿಸುತ್ತವೆ. ಅರುಹು-ಕುರುಹು,

ಸುಳುಹುಗಳಾಗಿ ಪರಿವಿಡಿದು ಪರಿಶೋಭಿಸುತ್ತವೆ. ಅರುಹೇ ಗುರುವಾಗಿ ಕುರುಹೇ ಲಿಂಗವಾಗಿ ಸುಳುಹೇ ಜಂಗಮವಾಗಿ ರಸನೆಯು ರಸವೆಲ್ಲ ಪಾದೋದಕವಾಗಿ ಪರಿಣಮಿಸುತ್ತವೆ. ಉಪದೇಶ (ದೀಕ್ಷೆ)ದಲ್ಲಿ ಗುರು ಮತ್ತು ಗುರುಪಾದೋದಕ ಸಂಬಂಧವಾಗಿ, ಉಪಚಾರ (ಅರ್ಚನ) ದಲ್ಲಿ ಲಿಂಗ ಮತ್ತು ಲಿಂಗಪಾದೋದಕ ಸಂಬಂಧವಾಗಿ, ಉಪಭೋಗ (ಅರ್ಪಣ) ದಲ್ಲಿ ಜಂಗಮ ಮತ್ತು ಜಂಗಮಪಾದೋದಕ ಸಂಬಂಧವಾಗಿ ಶಿಷ್ಯ ಅಥವಾ ಶರಣನು ತ್ರಿವಿಧೈಕ ಸ್ವರೂಪನಾಗುತ್ತಾನೆ. ಅಂದರೆ ಕ್ರಮವಿಡಿದು ಸತ್ಕ್ರಿಯೆ, ಸಮ್ಯಗ್ ಜ್ಞಾನ, ಸ್ವಾನುಭವಗಳನ್ನು ಶರಣನು ಸಂಪೂರ್ಣ ಸಂಪಾದಿಸಿ ತ್ರಿವಿಧ ತತ್ತ್ವವನ್ನು ತನ್ನೊಳಗೆ ಏಕೀಕರಿಸುತ್ತಾನೆ. ಪರಾನಂದ ಜ್ಯೋತಿರೂಪ ಪರಮಪಾದೋದಕವನ್ನಾಗಿಸುತ್ತಾನೆ.

ಬಾಹ್ಯಾಕಾಶ ನಾದ ಬಿಂದು ಕಳಾತ್ಮಕವಾಗಿದೆ. ಶಬ್ದವಿದೆ, ಜಲಬಿಂದುವಿದೆ ; ರವಿ ಶಶಿ ತಾರೆಗಳೆಂಬ ಕಳೆಯಿದೆ. ಅಂತೆಯೇ ಆಕಾಶಾಂಗನಾದ ಶರಣನಲ್ಲಿ ಚಿನ್ನಾದ ಚಿದ್ಬಿಂದು ಚಿತ್ಕಳೆಗಳಿರುತ್ತವೆ. ಇವೇ ತ್ರಿವಿಧೋದಕಗಳಾಗಿ ಕ್ರಿಯೆ ಜ್ಞಾನಾನುಭವಗಳಾಗಿ ಶರಣನಲ್ಲಿ ನೆಲಸಿರುತ್ತವೆ. ಈ ಔಚಿತ್ಯವಿಡಿದು ಪಾದೋದಕಲಿಂಗ ಶರಣಸ್ಥಲಕ್ಕೆ ಸಂಬಂಧವಾಗಿರುವುದು ಸಹಜವಾಗಿದೆ. ತ್ರಿವಿಧೋದಕ ತತ್ತ್ವಾನುಭವ ಶರಣನಿಗೆ ಸಂಪೂರ್ಣವಾಗಿರುತ್ತದೆ. ಶರಣಸ್ಥಲಕ್ಕೆ ಬಾರದ ವಿನಾ ಏರದ ವಿನಾ ಮೂರರ ಮನವರಿಕೆಯಾಗದು. ಆದರೂ ಪರಿಪೂರ್ಣವಾಗದು. ಪರಿಪೂರ್ಣತೆಯೂ ಶರಣನ ಸಲ್ಲಕ್ಷಣ ತಾನೆ ?

“ಕರುಣಜಲ ವಿನಯಜಲ ಸಮತೆಜಲ :
ಕರುಣಜಲವೇ ಗುರುಪಾದೋದಕ,
ವಿನಯಜಲವೇ ಲಿಂಗ ಪಾದೋದಕ ;
ಸಮತೆ ಜಲವೇ ಜಂಗಮ ಪಾದೋದಕ.
ಗುರು ಪಾದೋದಕ ಸಂಚಿತಕರ್ಮ ನಾಸ್ತಿ,
ಲಿಂಗಪಾದೋದಕ ಪ್ರಾರಬ್ಧ ಕರ್ಮ ನಾಸ್ತಿ ;
ಜಂಗಮ ಪಾದೋದಕ ಆಗಾಮಿಕರ್ಮನಾಸ್ತಿ.

ಇಂತೀ ತ್ರಿವಿಧೋದಕದಲ್ಲಿ ತ್ರಿವಿಧಕರ್ಮನಾಸ್ತಿ.
ಇದು ಕಾರಣ, ಕೂಡಲ ಚನ್ನಸಂಗಮ ದೇವಾ,
ತ್ರಿವಿಧೋದಕವ ನಿಮ್ಮ ಶರಣ ಬಲ್ಲ."

ಸಂಚಿತ ಕರ್ಮವೆಂದರೆ ಜನನಕರ್ಮ, ಸೃಷ್ಟಿಕರ್ಮ. ಪ್ರಾರಬ್ಧವೆಂದರೆ ಜೀವನಕರ್ಮ ಅಥವಾ ಸ್ಥಿತಿಕರ್ಮ. ಆಗಾಮಿಕರ್ಮವೆಂದರೆ ಮರಣ ಅಥವಾ ಲಯ ಕರ್ಮ. ತ್ರಿವಿಧೋದಕಗಳಿಂದ ಶರಣನು ಸೃಷ್ಟಿಸ್ಥಿತಿ ಲಯಗಳಿಂದುಂಟಾಗುವ ವಿಕಾರಗಳನ್ನು ಕಳೆದುಕೊಳ್ಳುತ್ತಾನೆ. ಗರ್ಭಾಷ್ಟಮ ದೀಕ್ಷೆಯಿಂದ ಕಾರುಣ್ಯಜಲವೊದಗಿ ಜನ್ಮಸೂತಕ ತೊಳೆದು ಹೋಗುತ್ತದೆ. ಬಾಳಿನುದ್ದಕ್ಕೂ ಗುರುವಿನ ಶಿಕ್ಷಣವುಂಟಾಗಿ ವಿನಯಶೀಲತೆ ಸಮನಿಸಿ ಸ್ಥಿತಿಸೂತಕ ನಶಿಸುತ್ತದೆ. ಮಹಾಜ್ಞಾನ ಗುರುವಿನಿಂದ ದ್ವಂದ್ವಗಳಲ್ಲಿ ಸಮತ್ವವಿರಬೇಕೆಂಬ ಮಹಾಬೋಧವುಂಟಾಗಿ ಇಹಪರಾದಿಗಳಲ್ಲಿ ಸುಖದುಃಖಾದಿಗಳಲ್ಲಿ ಜನನ ಮರಣಾದಿಗಳಲ್ಲಿ ಸಮತಾಭಾವ ಸಮನಿಸುತ್ತದೆ. ಅದೇ ಸಮತೆ ಜಲ. ಜನ್ಮದಿಂದ ಬೆನ್ನುಹತ್ತಿ ಬರುವ ಅಜ್ಞಾನಾಂಧತೆ ಭವಿತನಗಳನ್ನು ಕಳೆಯುವುದೇ ಕರುಣ ಜಲ ; ಜತೆಗೆ ಶಿವಜ್ಞಾನವನ್ನು ಕೊಡುವುದರಿಂದ ದೀಕ್ಷಾಪಾದೋದಕವೆನಿಸುತ್ತದೆ. ಜೀವನದಲ್ಲಿ ಪ್ರಾಕೃತಿಕವಾಗಿ ಉಂಟಾಗುವ ರಾಗ ದ್ವೇಷ ಶೋಕ ಮೋಹಗಳನ್ನು ಗುರು ತನ್ನ ಶಿಕ್ಷೋಪದೇಶದಿಂದ ಕಳೆದು ಶರಣ ಶಿಷ್ಯನನ್ನು ವಿನಯಶಾಲಿಯನ್ನಾಗಿಸುವುದರಿಂದ ಅದಕ್ಕೆ ವಿನಯ ಜಲ ಅಥವಾ ಶಿಕ್ಷಾ ಪಾದೋದಕವೆಂಬ ಹೆಸರು. ಮೂರನೆಯದಾಗಿ ಮರಣ ಭಯ ದ್ವಂದ್ವಭಯಗಳನ್ನು ದೂರಮಾಡುವುದರಿಂದ ಯಾವುದೇ ಬರಲಿ ಅದನ್ನೆಲ್ಲ ಸಮತಾಭಾವದಿಂದ ನೋಡುವ ಶಕ್ತಿ ಸಂಭವಿಸುವುದರಿಂದ ಅದನ್ನು ಸಮತೆ ಜಲ ಅಥವಾ ಜ್ಞಾನ ಪಾದೋದಕವೆಂದು ಹೆಸರಿಸಲಾಗಿದೆ. ಈ ಮೂರನ್ನು ಶರಣನು ತನ್ನಲ್ಲಿ ಅಳವಡಿಸಿಕೊಂಡಿರುತ್ತಾನೆ. ಅಳವಡಿಸಿಕೊಂಡು ಆ ಪರಮಾಕಾಶದ ಸನ್ನಾದವಾಗಿ ಚಿತ್ಕಳೆಯಾಗಿ ಪರಮಾನಂದ ಬಿಂದುವಾಗಿ ಪರಿಶೋಭಿಸುತ್ತಾನೆ,

"ತಾನು ಗುರು ಲಿಂಗ ಜಂಗಮದ ಪಾದಕ್ಕೆರಗಿ
ಲೀಯವಾದ ಬಳಿಕ, ಇದು ಶಿಷ್ಯ ನೋಡಯ್ಯ!
ಗುರು ಲಿಂಗ ಜಂಗಮ ಪಾದವೇ ತನ್ನ ಸರ್ವಾಂಗದಲ್ಲಿ ಅಚ್ಚೊತ್ತಿ

ದಂತಾಯಿತ್ತಾಗಿ, ಅಲ್ಲಿಯೇ ಪಾದಾರ್ಚನೆ–ಅಲ್ಲಿಯೇ ಪಾದೋದಕ ಸೇವನೆ ಬೇರೆ ಇಲ್ಲವಯ್ಯ ! ಅದೆಂತೆಂದೊಡೆ : ಪರಮಜ್ಞಾ ಲಿಂಗ ಜಂಗಮ ಸಂಬಂಧ ಸಮರತಿಯ ಸೋಂಕಿನಲ್ಲಿ ಪರಮಾನ ಜಲವೇ ಪ್ರವಾಹವಾಗಿ ಸರ್ವಾಂಗದಲ್ಲಿ ಪುಳಕಿತವಾಗಿ ಹರಿಯುತ್ತಿರಲು ಆ ಪರಮ ಸುಖ ಸೇವನೆಯೇ ಈ ಪರಮಾಮೃತ ತೃ ಯಾಯಿತ್ತು. ಇದರಿಂದ ಬದುಕಿದೆನಯ್ಯ ಕಲಿದೇವಯ್ಯ !"

ತ್ರಿವಿಧ ಪಾದೋದಕ ಭೇದದಲ್ಲಿ ಹುಟ್ಟಿ ಅಭೇದವಾಗುವ ಮೀಮಾಂ ಮನೋಹರವಾಗಿ ಈ ವಚನದಲ್ಲಿ ತುಂಬಿದೆ. ಇದರ ವಿವರಣೆ ಅನಗತ್ಯ ಇದೇ ಅಭಿಪ್ರಾಯವನ್ನು ಮುಂದುವರಿಸಿಕೊಂಡು ಇನ್ನೂ ವಿವರವಾಗಿ ಪ್ರಭುದೇವರು ಹೀಗೆ ಹೇಳಿದ್ದಾರೆ:

" ಅಂಗವಿಕಾರ ಆಚಾರದೊಳಡಗಿ,
ಆಚಾರ ಕ್ರಿಯೆಗಳು ಗುರುವಿನೊಳಡಗಿ,
ಗುರು ಎನ್ನಂಗದೊಳಡಗಿ,
ಅಂಗ ಲಿಂಗತೃಪ್ತಿಯೊಳಡಗಿ,
ಲಿಂಗನಿಷ್ಠೆ ಅಂಗದಾಚರಣೆಯ ಆಚಾರವಾವರಿಸಿ,
ಆಚಾರದ ನಿಲವ ಗುರುಮೂರ್ತಿಯಾವರಿಸಿ,
ಗುರುಮೂರ್ತಿಯು ಸರ್ವಾಂಗವಾವರಿಸಿ,
ಸರ್ವಾಂಗವ ಲಿಂಗನಿಷ್ಠೆಯಾವರಿಸಿ,
ಲಿಂಗನಿಷ್ಠೆಯ ಸಾವಧಾನವಾವರಿಸಿ,
ಸಾವಧಾನವ ಸುವಿಚಾರವಾವರಿಸಿ,
ಸುವಿಚಾರವ ಮಹಾಜ್ಞಾನವಾವರಿಸಿ,
ಮಹಾ ಜ್ಞಾನದೊಳಗೆ ಪರಮಾನಂದ ನಿಜನಿಂದು,
ಆ ನಿಜದೊಳಗೆ ಪರಮಾಮೃತ ತುಂಬಿ,
ಮೊದಲ ಕಟ್ಟೆಯನೊಡೆದು, ನಡುವಣ ಕಟ್ಟೆಯನಾಂತು, ನಿಂದು
ನಡುವಣ ಕಟ್ಟೆಯೂ ಮೊದಲ ಕಟ್ಟೆಯೂ ಎರಡು ಕೂಡಿ
ಒಂದು ಕಡೆಯ ಕಟ್ಟೆಯು ನಾಂತುದು,

ಈ ಮೂರರು ಕಟ್ಟೆಯೊಡೆದ ಮಹಾ ಜಲವನು ಪರಮ
ಪದವಾಂತುದು. ಆ ಪದದಲ್ಲಿ ನಾನೆರಗಿ
ಪಾದೋದಕವ ಕೊಂಡು ಎನ್ನ ನಾನರಿಯದಾದೆ
ಕಾಣಾ ಗುಹೇಶ್ವರಾ !"

ತ್ರಿವಿಧ ತ್ರಿವಿಧಗಳು ಯಾವು ಯಾವು ಇವೆಯೋ ಅವೆಲ್ಲ ತ್ರಿವಿಧೋದಕಗಳಲ್ಲಿ ಸಮರಸವಾಗುತ್ತವೆ. ಮುಖ್ಯವಾಗಿ ಆಚಾರತ್ರಯ ಗುರುತ್ರಯ ಲಿಂಗತ್ರಯ ಜಂಗಮತ್ರಯ ಅಂಗತ್ರಯ ಧರ್ಮತ್ರಯಗಳೆಲ್ಲವೂ ಶರಣನಲ್ಲಿ ಸಮರಸವಾಗುತ್ತವೆ. ಭವ, ಜೀವಭಾವ, ಭಯಗಳಳಿದು ಪರಮಾನಂದ ಪ್ರಸಾದೈಕ ಭಾವವುಳಿದಿರುತ್ತದೆ. ಕ್ರಿಯಾ, ಭಾವ, ಜ್ಞಾನಗಳು ನಿಷ್ಪತ್ತಿಗೊಂಡು ಪ್ರಸಾದ ಲಿಂಗಾನಂದದಲ್ಲಿ ಪ್ರಕಾಶಗೊಳ್ಳುವವು. ಶರಣಾಂಗ ಸ್ಥೂಲಭಾವದಿಂದ ಸೂಕ್ಷ್ಮತಮಭಾವಕ್ಕೇರಿ ಬಯಲೊಳಗೆ ಬಯಲಾಗುವುದು ; ಬೆಳಗಿಗೆ ಬೆಳಗಾಗುವುದು.

" ಅರಿವತತು ಮರಹರತು
ಕುರುಹಳಿದು ನಿರುಗೆಗಂಡು ಬೆರಗುವಡೆದು,
ಹೃದಯಾಕಾಶದ ಬಟ್ಟಬಯಲೊಳಗೆ ಭರಿತವಾಗಿರ್ದ
ಮಹಾ ಶರಣರ ತೋರಿಸಿ ಬದುಕಿಸಾ !
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಧರ್ಮ ನಿಮ್ಮ ಧರ್ಮ !"

---

೪. ಕ್ರಿಯಾ ನಿಷ್ಪತ್ತಿ ಸ್ಥಳಂ

ಶರಣನ ಪ್ರಸಾದ ಲಿಂಗದ ದ್ವಿತೀಯ ಕಿರಣ ನಿಷ್ಪತ್ತಿಲಿಂಗ. ಈ ನಿಷ್ಪತ್ತಿ ಲಿಂಗದಲ್ಲಿ ಕ್ರಿಯಾ ನಿಷ್ಪತ್ತಿ ಲಿಂಗ, ಭಾವ ನಿಷ್ಪತ್ತಿಲಿಂಗ, ಜ್ಞಾನ ನಿಷ್ಪತ್ತಿಲಿಂಗ ಎಂದು ಮೂರುಲಿಂಗಗಳಿರುತ್ತವೆ. ಇವುಗಳಲ್ಲಿ ಮೊದಲನೆಯ ಕ್ರಿಯಾ ನಿಷ್ಪತ್ತಿ ಲಿಂಗ ಇದುಕ್ರಿಯಾಪಾದೋದಕ ಸಿದ್ಧಿಯಿಂದ ಉಂಟಾಗುತ್ತದೆ. ಇದನ್ನೇ

ನಿರೂಪಿಸುವಮೊದಲು ನಿಷ್ಪತ್ತಿಲಿಂಗದ ನಿರೂಪಣೆಕ್ರಮಪ್ರಾಪ್ತ. ನಿಷ್ಪತ್ತಿಯೆಂದರೆಪೂರ್ಣಸಿದ್ಧಿಸುವಿಕೆ.ಇದು ತ್ರಿವಿಧ ತನುಗಳಲ್ಲಿ ತ್ರಿವಿಧ ರೂಪದಲ್ಲಿನಿಷ್ಪತ್ತಿಗೊಳ್ಳುತ್ತದೆ ಅಂದಗೆ ಪೂರ್ಣವಾಗುತ್ತದೆ. ಮೊದಲು ಕ್ರಿಯಾಂಗದಲ್ಲಿ ಕ್ರಿಯೆ ನಿಷ್ಪತ್ತಿಗೊಳ್ಳಬೇಕು. ಹಾಗಾಗುವಿಕೆಯೇ ಕ್ರಿಯಾನಿಷ್ಪತ್ತಿ ಸ್ಥಳ. ಇದರಿಂದ ಕ್ರಿಯಾಂಗ ಕೊನೆಗೊಳ್ಳುತ್ತದೆ. ಕ್ರಿಯಾದೀಕ್ಷೆಯಿಂದ ಕ್ರಿಯೆ ಸ್ವಾಯತ್ತವಾಗುವುದೇ ಕ್ರಿಯಾ ನಿಷ್ಪತ್ತಿ. ಅಲ್ಲದೆ ಪಾದೋದಕ ಸಿದ್ಧವಾಗಿರುವಲ್ಲಿ ಅರ್ಚನ ಕ್ರಿಯೆಗೆ ಅವಕಾಶವಿರುವುದಿಲ್ಲ. ಆಗ ಕ್ರಿಯೆ ನಿಷ್ಪತ್ತಿಗೊಳ್ಳಬೇಕು. ಅಂದರೆ ವಿಶ್ರಾಂತಿಗೊಳ್ಳಬೇಕು. ಪಾಕ ಸಿದ್ಧವಾಗಿರುವಾಗ ಬೇರೆ ಪಾಕ ಕ್ರಿಯೆ ಹೇಗೆ ಪ್ರಾರಂಭವಾಗಲಾರದೋ ಹಾಗೆ ಪಾದೋದಕ ಪ್ರಸಾದ ಸಿದ್ಧಿಗಾಗಿ ಮಾಡುವ ಅರ್ಚನ ಕ್ರಿಯೆ ಅವಿರುವಾಗ ಆರಂಭವಾಗ ಬಾರದು. ಆಗ ಅರ್ಚಿಸದಿದ್ದರೂ ಅರ್ಚಿಸಿದಷ್ಟೇ ಫಲಸಿದ್ಧಿಯಾಗುತ್ತದೆ. ಅಕ್ರಿಯ ದೋಷ ಅಂಟುವುದಿಲ್ಲ.

ಆಕಾಶಾಂಗನಾದ [ಅಂದರೆ ಯೋಗಾಂಗದಒಮ್ಮೈಲ ಯಾದ ಶರಣನು ಆರಾಧಿಸುವ ಲಿಂಗ ಪ್ರಸಾದಲಿಂಗ; ಈತನ ತ್ಯಾಗಾಂಗ ಭೋಗಾಂಗಗಳ ಶುದ್ಧಿ ಸಿದ್ಧಿಗಳನ್ನು ಪಡೆದು ಬಂದಿರುತ್ತಾನೆ. ಆದರಿಂದ ತ್ಯಾಗಾಂಗ ಕ್ರಿಯೆಗಳಾಗಲಿ, ಭೋಗಾಂಗದಲ್ಲಿನ ಮನಪ್ರಾಣಗಳ ವ್ಯಾಪಾರವಾಗಲಿ ಈತನಿಗಿರುವುದಿಲ್ಲ. ಎಲೆ-ಹೂವುಗಳು ಹಣ್ಣಿನಲ್ಲಿ ಪರಿಣಾಮಗೊಳ್ಳುವಂತೆ ತ್ಯಾಗಾಂಗ-ಭೋಗಾಂಗ ಕ್ರಿಯೆಗಳು ಯೋಗಾಂಗದ ಶರಣನ ಪ್ರಸಾದಲಿಂಗದಲ್ಲಿ ಪರಿಪೂರ್ಣವಾಗಿ ಪರಿಣಾಮಗೊಂಡಿರುತ್ತವೆ. ಇವೆಲ್ಲವನ್ನು ನಿಷ್ಪತ್ತಿಗೊಳಿಸುವುದು ಪ್ರಸಾದಲಿಂಗದ ಪ್ರಥಮ ಕರ್ತವ್ಯ. ನಿಷ್ಪತ್ತಿಗೊಳಿಸುವುದೆಂದರೆ ಇಲ್ಲದಂತೆ ಮಾಡುವುದಲ್ಲ. ತನ್ನೊಳಗೆ ಪರಿಪಕ್ವಗೊಳಿಸಿಕೊಂಡ ಪೂರ್ಣವಾಗಿಪ್ರಕಾಶಪಡಿಸುವಿಕೆ. ಇದು ಮುಂದಿನ ಮಾತು ಈಗ ಬರೀ ಪರಿಸಕ್ವವಾಗಿಸುವಿಕೆ. ಇದಕ್ಕೆ ನಿಷ್ಪತ್ತಿಯೆಂದು ನಿರ್ದೇಶಿಸಲಾಗಿದೆ ಅರ್ಚನಕ್ರಿಯೆ ಪ್ರಸಾದದಲ್ಲಿ ಪೂರ್ಣಗೊಳ್ಳುವುದೆ ಕ್ರಿಯಾನಿಷ್ಪತ್ತಿಸ್ಥಳವೆನಿಸುತ್ತದೆ, ಇದೇ ಅಭಿಪ್ರಾಯವು ಶಿವಕವಿ ಶಿವಾನುಭಾವಿ ಶಿವಯೋಗಿ ಶಿವಾಚಾರ್ಯನ ಸಂಧಾವಾಣಿಯಲ್ಲಿ ಸುಂದರವಾಗಿ ಸಮುಲ್ಲಿಖಿತವಾಗಿದೆ.

" ಜ್ಞಾನಿನೋ ಯಾನಿ ಕರ್ಮಾಣಿ ತಾನಿ ನೋ ಜನ್ಮಹೇತವಃ ।
ಅಗ್ನಿದಗ್ಧಾನಿ ಬೀಜಾನಿ ಯಥಾ ನಾಂಕುರಕಾರಣಂ ॥೧॥"

ಸಮಕ್ ಜ್ಞಾನಿಯಾದ ಶರಣನ ಕ್ರಿಯೆಗಳು ಜನ್ಮಕಾರಣಗಳಲ್ಲ. ಬೆಂಗಾಳಂಗಳು ಮೊಳೆಯಲಾರವು.

ಬೆಂಗಾಳ ನಿರ್ದೇಶನದಿಂದ ಕ್ರಿಯಾನಿಷ್ಪತ್ತಿ ಸ್ಪುಟವಾಗಿ ನಿರ್ದಿಷ್ಟವಾಗಿದೆ. ಶರಣನ ಕರ್ಮಗಳು ಜನ್ಮ ಜನ್ಮಾಂತರಗಳಿಗೆ ತಾರವು. ಏಕೆಂದರೆ ಶರಣನ ಸಮ್ಯಗ್ ಜ್ಞಾನದಲ್ಲಿ ಅವು ಪರಿಪಕ್ವವಾಗಿರುತ್ತವೆ. ಸಧ್ಯದಲ್ಲಿಯೇ ಕ್ರಿಯೆಗಳಿಗೆ ಆಶ್ರಯವಾದ ಕಾಯ ತನ್ನ ಕಾಯತನವನ್ನುದು ಕೊಂಡು ಪರಕಾಯವಾಗಿರುತ್ತದೆ. ಬೀಜ ಭೂಮಿಗಳೆರಡೂ ನಿಷ್ಪತ್ತಿಗೊಂಡ ಬಳಿಕ ಜನ್ಮಗಳಿಗೆ ಅವಕಾಶವಾಗುವ ಬಗೆಯೆಲ್ಲಿ ? ಶರಣನ ಕಾಯ–ಕ್ರಿಯೆಗಳು ಲಿಂಗವಾಗಿರುವಾಗ ಭವಭಂಗಕ್ಕೆ ಎಡೆಯಿರುವುದಿಲ್ಲ.

" ಲಿಂಗವಿಡಿದು ಲಿಂಗಮಾಹೇಶ್ವರನೆನಿಸಿಕೊಂಬೆ.
ಲಿಂಗವಿಡಿದು ಲಿಂಗಪ್ರಾಣಿ ಎನಿಸಿಕೊಂಬೆ.
ಅರಿವರತು ಕ್ರಿಯಾನುಭಾವವಿಡಿದಿಹರೆ
ಕೂಡಲ ಚನ್ನಸಂಗಮನಾಥ.

ಶರಣನ ಕ್ರಿಯೆಯಲ್ಲಿ ಜ್ಞಾನಾನುಭಾವಗಳಿರುತ್ತವೆ. ಜ್ಞಾನಾನುಭವಗಳು ಕ್ರಿಯೆಯನ್ನು ಪೂರ್ಣರೂಪಕ್ಕೆ ತರುತ್ತವೆ. ಅದರಲ್ಲಿ ಕ್ರಿಯಾನುಭಾವ ಕ್ರಿಯೆಯನ್ನು ಅಭಿನ್ನವಾಗಿಸಿ ಚೈತನ್ಯರೂಪಾಗಿಸುತ್ತದೆ. ಸ್ಥೌಲ್ಯಭಾವವನ್ನು ತೆಗೆದು ಸೂಕ್ಷ್ಮಭಾವವನ್ನು ತುಂಬುತ್ತದೆ. ಸಿದ್ಧಿಗೇರಿಸಿ ಲಿಂಗವನ್ನಾಗಿಸುತ್ತದೆ. ಸ್ಥೂಲ ಅರ್ಚನಾಚಾರಗಳಿಗಿಂತ ಅತ್ಯಂತ ಸೂಕ್ಷ್ಮದ ನೆಲೆಗೊಯ್ಯುತ್ತದೆ. ಕ್ರಿಯೆಯೆಂಬ ಸ್ಫಟಿಕ ಘಟದಲ್ಲಿ ಅನುಭಾವವೆಂಬ ಅಚ್ಚ ಬೆಳಗನ್ನು ತುಂಬಿದಂತಾಗುತ್ತದೆ.

" ಅಂಗದ ಲಿಂಗ ಲಿಂಗವೆಂದು ಪೂಜಿಸುವೆನೆ ?
ಅದು ಅಂಗದ ಲಿಂಗವಲ್ಲ : ಅದೇನು ಕಾರಣ ?
ಅದು ಅಂಗದ ಮೇಲರತು ಮುಂದೆ ಜಂಗಮ ಲಿಂಗ

ವೆಂದು ತೋರಿತ್ತಾಗಿ! ಜಂಗಮ ಲಿಂಗವೆಂದು
ಅರ್ಚಿಸಿ ಪೂಜಿಸಿಕೊಂಡಿಹೆನೆ ? ಅದು ಜಂಗಮಲಿಂಗವಲ್ಲ ;
ಅದೇನು ಕಾರಣ ? ಮುಂದೆ ಪ್ರಸಾದಲಿಂಗವೆಂದು ತೋರಿತ್ತಾಗಿ!
ಆ ಪ್ರಸಾದಲಿಂಗವೆಂದು ಅರ್ಚಿಸಿ ಪೂಜಿಸಿಕೊಂಡಿಹೆನೆ ?
ಅದು ಪ್ರಸಾದಲಿಂಗವಲ್ಲ ; ಅದೇನು ಕಾರಣ ?
ಮುಂದೆ ಮಹಾ ಪ್ರಸಾದವೆಂದು ತೋರಿತ್ತಾಗಿ !
ಆ ಮಹಾ ಪ್ರಸಾದವೇ ನೀನಾಗಿ ಸುಖಿಯಾದೆ
ಕೂಡಲ ಚನ್ನಸಂಗಮದೇವಾ."

ಇಷ್ಟಲಿಂಗ ಪ್ರಾಣಲಿಂಗದಲ್ಲಿ, ಪ್ರಾಣಲಿಂಗ ಭಾವಲಿಂಗದಲ್ಲಿ ಅರತು ಹೋಗುತ್ತವೆ. ಅಂತೆಯೇ ತ್ಯಾಗಾಂಗ ಭೋಗಾಂಗದಲ್ಲಿ, ಭೋಗಾಂಗ ಯೋಗಾಂಗದಲ್ಲಿ ಅರತಿರುತ್ತವೆ. ಆಚಾರಲಿಂಗ ಗುರುಲಿಂಗದಲ್ಲಿ ಗುರುಲಿಂಗ ಶಿವಲಿಂಗದಲ್ಲಿ ಶಿವಲಿಂಗ ಜಂಗಮಲಿಂಗದಲ್ಲಿ ಜಂಗಮಲಿಂಗ ಪ್ರಸಾದಲಿಂಗದಲ್ಲಿ ಪ್ರಸಾದಲಿಂಗ ಆ ಮಹಾಪ್ರಸಾದ ಸ್ವರೂಪ ಮಹಾಲಿಂಗದಲ್ಲಿ ಬೆರೆದೇಕವಾಗುತ್ತವೆ. ಇವುಗಳಂತೆ ಅರ್ಚನ ಕ್ರಿಯೆ ಅರ್ಪಣ ಜ್ಞಾನದಲ್ಲಿ, ಅರ್ಪಣ ಜ್ಞಾನ ಅನುಭವ ಜ್ಯೋತಿಯಲ್ಲಿ, ಅನುಭವ ಜ್ಯೋತಿ ಆನಂದಾಮೃತದಲ್ಲಿ ಆನಂದಾಮೃತ ಅಖಂಡ ಚೈತನ್ಯದಲ್ಲಿ ಅವಿರಳಗೊಳ್ಳುತ್ತವೆ. ಇದರಿಂದಾಗಿ ಸಮ್ಯಗ್ ಜ್ಞಾನಿಯ ಕರ್ಮಗಳು ಜನ್ಮದಾಯಕಗಳಲ್ಲ; ಜಡಫಲದಾಯಕಗಳಲ್ಲ.

ಜ್ಞಾನಿಯಾಗದವನ ಕರ್ಮಗಳು ಜನ್ಮಕಾರಣಗಳಾಗುತ್ತವೆ. ಕಣ್ಣಿಲ್ಲದವರು ಜಡಕರ್ಮಿಗಳಾಗುತ್ತಾರೆ. ಮುಂದುಗಾಣದೆ ಪುಣ್ಯಪಾಪಗಳ ಬೆನ್ನುಬಿದ್ದಿರುತ್ತಾರೆ. ರಾಟಾಳದಂತೆ ಜನ್ಮಜನ್ಮಾಂತರಗಳಲ್ಲಿ ತನುವೆತ್ತು ತಿರುಗುತ್ತಿರುತ್ತಾರೆ. ಜಡಕರ್ಮಗಳಲ್ಲಿ ಜರ್ಜರಿತರಾಗಿರುತ್ತಾರೆ. ಕರ್ಮಗಳನ್ನು ಮೀರಿ ನಡೆಯಲು ಅವರಿಗೆ ಶಕ್ತಿ ಸಾಲದು. ಅರಿವಿನ ಬೆಳಗಿಲ್ಲದೆ ಕರ್ಮಕತ್ತಲೆಯುಲ್ಲಿ ಬಿದ್ದು ಬೀದಿ ತೋರದೆ ನೆಲೆಗೆ ನಿಲುಕರು. ಬಟ್ಟೆದಪ್ಪಿ ಬಳಲುವರು,

ಆದ್ದರಿಂದ ಶಿವಜ್ಞಾನಿಯಾಗಬೇಕು. ಶಿವಜ್ಞಾನದ ಬೆಳಗಿನಲ್ಲಿ ಮುನ್ನಡೆಯಬೇಕು. ಸತ್ಕ್ರಿಯಾನಿರತವಾಗಿರಬೇಕು. ಫಲಾಪೇಕ್ಷೆಯಿಲ್ಲದೆ ಇದ್ದರೆ ನಿರ್ಲೇಪನಾಗಿ ನಿಷ್ಪತ್ತಿಗೊಳಗಾಗುವನು.

“ನಿಜವನರಿದು ನಿರ್ಮಲಜ್ಞಾನಿಯಾದ ಕರ್ಮರಹಿತ
ಶಿವಯೋಗಿ ಕರ್ಮಕಾಯನಲ್ಲ, ಕರ್ಮಭೋಗಿಯಲ್ಲ ;
ಕರ್ಮಾಧೀನನು ತಾ ಮುನ್ನವೇ ಅಲ್ಲ. ಅದೆಂತೆಂದೊಡೆ :
ಪರಿಪಕ್ವವಾದ ಹಣ್ಣು ರಸ ತುಂಬಿ ತೊಟ್ಟು ಕಳೆದ ಬಳಿಕ
ಮರಳಿ ವೃಕ್ಷವನಡರಿ ತೊಟ್ಟು ಹತ್ತುವುದೇ ಹೇಳಾ ?
ಆಗಾಮಿ ಪರಿಪಕ್ವವಾಗಿ ಸಂಚಿತವಾಯಿತ್ತು
ಸಂಚಿತ ಪರಿಪಕ್ವವಾಗಿ ಪ್ರಾರಬ್ಧವಾಯಿತ್ತು
ಪ್ರಾರಬ್ಧ ಪರಿಪಕ್ವವಾಗಿ ನಿಷ್ಪತ್ತಿಗೊಂಡಿತ್ತು
ಇನ್ನು ಕರ್ಮವುಂಟೆ ? ಇಲ್ಲವಾಗಿ, ನಿಜಗುರು ಸ್ವತಂತ್ರ
ಸಿದ್ಧಲಿಂಗೇಶ್ವರನ ಶರಣರು ಕರ್ಮರಹಿತರು.”

ಶಿವನರಿದು ಶಿವಕ್ರಿಯೆಗಳಲ್ಲಿರುವ ಶರಣನಿಗೆ ಕ್ರಿಯೆಗಳ ತೊಡರಿಲ್ಲ. ಕಳಾಂಗನಿಗೆ ಕರ್ಮಭಂಗವಿಲ್ಲ ; ಕರ್ಮಮಲವಿಲ್ಲ. ಪ್ರತಿಯಾಗಿ ಸಹಜಕ್ರಿಯೆಯಿಂದ ಶರಣನ ಚಿತ್ತ ಶುದ್ಧಿಯುಂಟಾಗುತ್ತದೆ. ವಿಷಯ ವಾಸನೆ ಅಳಿಯುತ್ತದೆ. ಶೈವೀ ವಾಸನೆ ಅಳವಡುತ್ತದೆ. ಸರ್ವಸೂತಕಗಳು ತೊಲಗುತ್ತವೆ. ಶಿವಜ್ಞಾನಿಯ ಶಿವಕ್ರಿಯೆಗಳಿಗೆ ಶಿವನು ಮೆಚ್ಚುತ್ತಾನೆ. ಜ್ಞಾನಿ ನುಡಿದಂತೆ ನಡೆಯುವನಾದ್ದರಿಂದ ಆತನ ಜನ್ಮ ಕಡೆಯಾಗಿರುತ್ತದೆ. ನಿಜಾತ್ಮಜ್ಞಾನಿಯು ನಿರಾಶೆಯಲ್ಲಿರುತ್ತಾನೆ ; ನಿರ್ಭಯವಾಗಿರುತ್ತಾನೆ. ಆತನ ಕರ್ಮ ನಿರ್ಮೂಳವಾಗಿರುತ್ತದೆ. ನಿಷ್ಪತ್ತಿಗೊಳಗಾಗಿರುತ್ತದೆ.

“ಮಾಡುವಂತಿರಬೇಕು, ಮಾಡದಂತಿರಬೇಕು ;
ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು.
ಕೂಡಲ ಸಂಗಮದೇವರ ನೆನೆವುತ್ತ ನೆನೆವುತ್ತ ನೆನೆಯದಂತಿರ
ಬೇಕು.”

ಶರಣನ ಕ್ರಿಯಾನಿರತತೆಯಿದು ; ಕ್ರಿಯಾನಿಷ್ಪತ್ತಿಯಿದು. ಶಿವಜ್ಞಾನಿಯೊಬ್ಬ ಪರುಷಮಣಿ. ಆತನ ಕರ್ಮ ಅದೊಂದು ಕಬ್ಬುನ. ಅದು ಆತನ ಸೋಂಕಿದೊಡನೆ ಸುವರ್ಣವಾಗುತ್ತದೆ. ಏಕೆಂದರೆ ಆತನ ತನು ಶುಚಿ, ಮನ ಶುಚಿ, ಭಾವ ಶುಚಿ, ಹಸ್ತಾದಿಗಳು ಶುಚಿ. ಸರ್ವಾಂಗಲಿಂಗಿಯಾದ ಶರಣ ಸತ್ಕರ್ಮ ದಿವ್ಯಸ್ಪರ್ಶಮಣಿ. ಪಂಚಪುರುಷಗಳ ಗಣಿ. ಆತ ನೋಡಿದ್ದು ನುಡಿದದ್ದು ಮುಟ್ಟಿದ್ದು ಮೂಸಿದ್ದು ನೆನೆದದ್ದು ಪಾವನವಾಗುತ್ತದೆ.

"ಕರ್ಮಣಾಕಕಿಂ ಕೃತೇನಾಪಿ ಜ್ಞಾನಿನೋ ನಿರಹಂಕೃತೇಃ ।
ವಿಕ್ರಿಯಾ ಪ್ರತಿಬಿಂಬಸ್ಥಾ ಕಿಂ ಕರೋತಿ ಹಿಮದ್ಯುತೇಃ ॥ ೨ ॥"

ನಾನು ಮಾಡುವವನೆಂಬ ಅಹಂಕಾರ ಮಮಕಾರಗಳಿಲ್ಲದ ಜ್ಞಾನಿಯು ಕರ್ಮವನ್ನು ಮಾಡಿದರೂ ಕರ್ಮಸೂತಕವಿಲ್ಲ ; ಕರ್ಮಫಲವಿಲ್ಲ ; ಕರ್ಮಬಂಧನವಿಲ್ಲ. ಪ್ರತಿಬಿಂಬದಲ್ಲಿ ತೋರುವ ವಿಕಾರಗಳು ಚಂದ್ರಬಿಂಬಕ್ಕಿರಲ ಸಾಧ್ಯವೆ ?

"ಜಲದಲ್ಲಿರುವ ಚಂದ್ರನ ಚಲನೆ ಜಲದಲ್ಲಲ್ಲದೆ
ನಿಜ ಚಂದ್ರನಲ್ಲಿಲ್ಲವಯ್ಯ
ಘಟದಲ್ಲಿಯ ಬಿಂದುಗಳು ಘಟದಲ್ಲಲ್ಲದೆ
ಬಿಂಬದಲ್ಲಿಲ್ಲ ನೋಡಯ್ಯ
ಜಲದಲ್ಲಿಯ ಚಲನೆ, ಘಟದಲ್ಲಿಯ ಬಿಂಬ
ನಿಜವಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ."

ಕರ್ಮಬೀಜಕ್ಕೆ ಅಹಂಕಾರವೆ ಮೊಳಕೆ. ತಾನೇ ಕರ್ತೃ, ತಾನೇ ಭೋಕ್ತೃ, ತಾನೇ ಜ್ಞಾತೃ ಎಂಬ ಹಮ್ಮಿನಿಂದ ಮಾಡಬಾರದು. ಕ್ರಿಯೆಯಲ್ಲಿಯೂ ಹಮ್ಮು ಬಿಮ್ಮು ತರವಲ್ಲ, ಮತ್ತು ಮೂಢನಾಗಿ ಮಂದನಾಗಿ ಕ್ರಿಯಾನಿರತನಾಗಬಾರದು. ಅಜ್ಞಾನ ಅಹಂಕಾರಗಳು ಜಡವಾದವುಗಳು. ಅಸ್ಮಿತೆ ರಾಗದ್ವೇಷ ಅಭಿನಿವೇಶಗಳಿಗೆ ಕಾರಣವಾದವುಗಳು.

"ಜ್ಞಾನೀ ಕರ್ಮನಿರೂಢೋಽಪಿ ಲಿಪ್ಯತೇ ನ ಕ್ರಿಯಾಫಲೈಃ ।
ಘೃತಾದಿನಾ ಯಥಾ ಜಿಹ್ವಾ ಭೋಕ್ತ್ರೀ ಚಾಪಿ ನ ಲಿಪ್ಯತೇ ॥೩॥

ನಿರಸ್ತೋಪಾಧಿ ಸಂಬಂಧೇ ಜೀವೇ ಯಾ ಯಾ ಕ್ರಿಯಾಸ್ಥಿತಿಃ ।
ಸಾ ಸಾ ಪ್ರತೀತಿಮಾತ್ರೇಣ ನಿಷ್ಫಲಾ ಚಾತ್ರಲೀಯಂತೇ ॥೪॥"

ತುಪ್ಪವನ್ನು ತಿಂದರೂ ನಾಲಗೆಗೆ ಜಿಡ್ಡು ಹತ್ತದು; ನಾಲಗೆ ನಿರ್ಲೇಪವಾಗಿರುತ್ತದೆ. ಅಂತೆಯೇ ಶಿವಜ್ಞಾನಿಯು ಕರ್ಮನಿರತನಾದರೂ ಕರ್ಮಫಲಗಳು ಸೋಕವು.

ಆತ್ಮನಿಗೆ ಯಾವ ಉಪಾಧಿ ಸಂಬಂಧವಿಲ್ಲ. ಅದರಿಂದಾಗಿ ಆತನು ಯಾವ ಕ್ರಿಯೆಗಳನ್ನೇ ಮಾಡಲಿ, ಅವೆಲ್ಲ ತೋರಿಕೆಗೆ ಮಾತ್ರ ಇರುವವಲ್ಲದೆ ಫಲದಾಯಕಗಳಾಗವು. ಅಲ್ಲದೆ ಅವು ಆತ್ಮನಲ್ಲಿಯೇ ಅಡಗುವವು. ಅಂದರೆ ನಿಷ್ಪತ್ತಿಗೊಳ್ಳುವವು.

ಶರಣನು ನಿರುಪಾಧಿಕನು. ಆತನಿಗೆ ಯಾವುದೂ ಸೋಂಕದು.

"ಸುಳಿದೊಡೆ ಒಡಲಿಲ್ಲ, ನಿಂದಡೆ ನೆಳಲಿಲ್ಲಿಲ್ಲ;
ನಡೆದಡೆ ಗವಂನವಿಲ್ಲ, ನುಡಿದಡೆ ಶಬ್ದವಿಲ್ಲ;
ದಗ್ಧಪಟ ನ್ಯಾಯದಂತೆ ಆತನಿಪ್ಪನು.
ಉಂಡಡೆ ಉಪಾಧಿಯಿಲ್ಲ, ಉಣದಿರ್ದಡೆ ಕಾಂಕ್ಷೆಯಿಲ್ಲ;
ಯಥಾಲಾಭ ಸಂತುಷ್ಟನಾಗಿ ಸ್ತುತಿ ಇಲ್ಲ, ನಿಂದೆ ಇಲ್ಲ;
ನಂಟರಿಲ್ಲ, ಹಗೆ ಇಲ್ಲ; ಅರುಹು ಇಲ್ಲ, ಮರಹು ಇಲ್ಲ;
ತಾನೆಂಬ ನೆನಹಿಲ್ಲವಾಗಿ! ಸೌರಾಷ್ಟ್ರ ಸೋಮೇಶ್ವರಾ,
ನಿಮ್ಮ ಶರಣರು ಲಿಂಗ ಪ್ರಾಣಿಗಳಾಗಿ ಒಡಲ ಮರೆಗೊಂಡು
ಎಂತಿರ್ದೊಡಂ ಎಂತು ನಡೆದೊಡಂ ಅಂತೇ ಸಂದಿರ್ದ."

ಅಹಂಕಾರ ಎಷ್ಟು ಕೇಡಿನದೋ ಆಶೆಯೂ ಅಷ್ಟೇ ಕೇಡಿನದು. ಆಸೆಯಿಂದಲೂ ಮಾಡಬಾರದು. ತನ್ನ ಒಡಲಾಸೆ ಶರಣನಿಗೆ ಒಗ್ಗದು. ಶಿವನಿಗಾಗಿ ಮಾಡಬೇಕು. ಶಿವನೇ ಮಾಡುವವನು ಮಾಡಿಸುವವ-ಎಂಬ ಭಾವವಿರಬೇಕು. ಮಾಡುವ ಮಾಟದಲ್ಲಿ ನಿರಹಂಕಾರ ನಿರಾಶೆಗಳಿದ್ದು ಶಿವಭಾವ ಸಮನಿಸಿರಬೇಕು. ತುಪ್ಪ ತೊಡೆದ ಕೈ ಕಣಕ ಹಿಡಿದಂತಿರಬೇಕು. "ಮಾಡುವ ಭಕ್ತನು ನೀನೇ, ಮಾಡಿಸಿಕೊಂಬ ದೇವನು ನೀನೇ; ಎಂದರಿದೆ. ಇದು ಕಾರಣ

ಅಖಂಡೇಶ್ವರಾ ನಿಮ್ಮ ಫಲಪದವ ಬೇಡಲಿಲ್ಲ. ನೀವು ಒಲಿದು ಎನಗೆ ಕೊಡಲಿಲ್ಲ.”

“ ಕ್ಷೀರಸಾಗರದೊಳಗಿದ್ದ ಹಂಸೆ ಹಾಲ ಬಯಸಲುಂಟೆ ?
ಪುಷ್ಪದೊಳಗಿರ್ದ ತುಂಬಿ ಪರಿಮಳವನರಸಲುಂಟೆ ?
ಕಡಲೊಳಗಿರ್ದ ಕಪ್ಪೆ ಜಲವ ಬಯಸಲುಂಟೆ ? ಇದೆಂತಯ್ಯಾ !
ತಾ ಲಿಂಗದೊಳಗಿರ್ದು, ಬೇರೆ ಕಾಮ್ಯದೊಳಗಿರ್ಪ
ಭ್ರಾಂತರನೇನೆಂಬೆನಯ್ಯಾ ಗುಹೇಶ್ವರಾ ?”

“ ಮಾಟಕೂಟ ಫಲಪ್ರಾಪ್ತಿ ಎಂಬ ಮಾತ ಕೇಳಲಾಗದು.
ಶಿವ ಶಿವಾ, ನಿಮ್ಮ ಭಕ್ತರಿಗೆ ಮಾಡಿದೆನೆನ್ನದಿರೆಂದು
ಶ್ರೀ ಗುರುಲಿಂಗವು ಕೃಪೆಮಾಡಿದ ಕಾರಣ,
ಅಲ್ಲಿ ಮಾಡುವವನು ಮಾಡಿಸಿಕೊಂಬುವವನು ನೀನೇ ಅಯ್ಯಾ,
ಕೂಡಲ ಸಂಗಮದೇವಾ ! ಮಾಡುವಲ್ಲಿ ಎನ್ನ ನಾನರಿದು
ಮಾಡಿದೆನಾದಡೆ, ನೀಡುವಲ್ಲಿ ರುಚಿಗೆ ಮನವೆಳಸಿ ಹಾರೈಸಿದೆನಾದಡೆ
ನಿಮಗಂದೇ ದ್ರೋಹವಯ್ಯಾ ! ಮಾಡುವಲ್ಲಿ ನೀಡುವಲ್ಲಿ
ಶುದ್ಧನಲ್ಲದಿರ್ದಡೆ, ನೀನಂದೇ ಮೂಗ ಕೊಯ್ಯ,
ಕೂಡಲಸಂಗಮದೇವಾ.”

“ ಕರ್ತೃಭೃತ್ಯರಾಗಿ ಮಾಡುವ ಮಾಟದಲ್ಲಿ ವಿಚಾರವುಂಟು. ಅದೆಂತೆಂದೊಡೆ: ಸಂಸಾರದಿ ಧನವುಳ್ಳೊಡೆ ಜಂಗಮಲಿಂಗವಹುದು. ಅದಕ್ಕೆ ಮಾಡಿದಲ್ಲಿ ಫಲಪದವುಂಟು. ಆ ಫಲಪದವುಂಟಾದಲ್ಲಿ ಭವವುಂಟು. ಫಲಪದವಿಲ್ಲದಲ್ಲಿ ಭವವಿಲ್ಲ. ಮನದಂತೆ ಮಂಗಳವೆಂಬ ಸಟೆಯ ದಿಟವಮಾಡಿ ಈ ಉಭಯದೊಳಗೆ ಆವುದು ಪ್ರಿಯವಾಗಿ ಮಾಡುವರು ಆ ಹಾಗಿಹರಯ್ಯ ಕೂಡಲ ಚನ್ನಸಂಗಮದೇವಾ.” “ಲೋಕ ತನ್ನೊಳಗಾದ ಬಳಿಕ ಲೋಕದ ಸೊಮ್ಮು ತನಗೇಕಯ್ಯಾ ? ಪರುಷ ತಾನಾದ ಬಳಿಕ ಸುವರ್ಣದ ಸೊಮ್ಮು ತನಗೇಕಯ್ಯಾ ? ಧೇನು ತಾನಾದ ಬಳಿಕ ಗೋವಿನ ಸೊಮ್ಮು ತನಗೇಕಯ್ಯ ಕಪಿಲಸಿದ್ಧ ಮಲ್ಲಿಕಾರ್ಜುನಾ ?”

"ಹಮ್ಮಿನ ಭಕ್ತಿ ಕರ್ಮಕ್ಕೆ ಮೊದಲು. ಮರ್ಮವನರಿಯದ ಮಾತು ಸಮಾಧಾನದ ಕೇಡು. ಬಂದ ಸಮಯೋಚಿತವನರಿಯದಿದ್ದರೆ, ನಿಂದಿರಲೊಲ್ಲ ಕೂಡಲ ಸಂಗಮದೇವ"

"ಈ ಸತ್ಕ್ರಿಯೆಗೆ ಈ ಫಲ, ಈ ಪುಷ್ಪಕ್ಕೀಫಲ—ಎಂಬ ಕೈಕೂಲಿಕಾರರು ಅವರೆಲ್ಲ ಕರ್ಮಿಗಳಯ್ಯ. ಪುಣ್ಯ ಪಾಪವನುಂಬ ಕರ್ಮಿಗಳಯ್ಯ. ಸ್ವರ್ಗ ನರಕವನುಂಬ ಕರ್ಮಿಗಳಯ್ಯ. ಒಡಲೊಡನೆ ಪಡೆದರ್ಥ ಮೃಡದೇವ ಸೊಡ್ಡಳನಿಗೆಂಬಾತ ಬೆಡಗಿನ ಶಿವಪುತ್ರ. ಉಳಿದವರೆಲ್ಲ ಜಗದ ಮಿತ್ರರು ; ಶತೃಗಳು"

ಕ್ರಿಯಾನಿರತ ಶರಣ ಇವನ್ನೆಲ್ಲ ಚೆನ್ನಾಗಿ ಅರಿತು ಮನ ಘನವಾಗಿ ಮಾಡಬೇಕು. ಹಮ್ಮು ಬಿಮ್ಮುಗಳಿಲ್ಲದೆ ಗತಿ ಮುಕ್ತಿಗಳ ಬಯಸದೆ ಸಹಜವಾಗಿ ಮಾಡಬೇಕು. ಮಾಡಿದೆನೆಂದು ಆಡಿಕೊಳ್ಳಬಾರದು ; ಮನದಲ್ಲಿಯೂ ಮೂಡಿರಬಾರದು. ಮಾತು ಬಾರದ ಮಗು ಕನಸ ಕಂಡಂತಿರಬೇಕು ; ಮೊಲೆಯುಂಡಂತಿರಬೇಕು.

"ಗಚ್ಛನ್ ತಿಷ್ಠನ್ ಸ್ವಪನ್ ವಾಪಿ ನ ನಿಷ್ಕರ್ಮಾಸ್ತಿ ಕಶ್ಚನ ।
ಸ್ವಭಾವೋ ದೇಹಿನಾಂ ಕರ್ಮ ಜ್ಞಾನಿನಾಂ ತತ್ತು ನಿಷ್ಫಲಂ ॥೫॥"

ಕರ್ಮಗಳನ್ನು ಮಾಡದೆ ಯಾರೂ ಇರಲು ಸಾಧ್ಯವಿಲ್ಲ. ಕರ್ಮಾಂಗವನ್ನು ಹೊತ್ತು ಬಂದವರೆಲ್ಲರೂ ಒಂದಿಲ್ಲೊಂದು ಕರ್ಮವನ್ನು ದಿವಸ ದಿವಸವೂ ನಿಮಿಷ ನಿಮಿಷವೂ ಮಾಡಿಯೇ ತೀರಬೇಕು. ನಡೆವ ನಿಲ್ಲುವ ಮಲಗುವ ಕುಳಿತುಕೊಳ್ಳುವ ಇವೇ ಮುಂತಾದ ಕರ್ಮಗಳು ದೇಹವುಳ್ಳವರಿಗೆ ಸ್ವಾಭಾವಿಕವಾಗಿರುತ್ತವೆ. ಇವನ್ನು ತಪ್ಪಿಸಲು ಸಾಧ್ಯವಿಲ್ಲ. ಜ್ಞಾನಿಗಳು ಮಾತ್ರ ಈ ಕರ್ಮಗಳ ಫಲಗಳಿಂದ ದೂರಿರುತ್ತಾರೆ.

ಕರ್ಮಗಳು ಸ್ವಾಭಾವಿಕ ಅಸ್ವಾಭಾವಿಕ ಎಂದು ಎರಡು ಬಗೆ. ನಿಸರ್ಗವಾದವು ಸ್ವಾಭಾವಿಕಗಳು ; ಸಾಧಿಸಿ ಮಾಡಿದವುಗಳು ಅಸ್ವಾಭಾವಿಕಗಳು. ಸಾಧಿತಕ್ರಿಯೆಗಳಲ್ಲಿ ಸತ್ಕ್ರಿಯೆಗಳು ದುಷ್ಕ್ರಿಯೆಗಳು—ಎಂದು ಇಬ್ಬಗೆ, ಮಾಡಬೇಕಾದವುಗಳು, ಮಾಡಬಾರದವುಗಳು ; ಮೊದಲಿನವು ಕ್ರಿಯೆಗಳು ; ಎರಡನೆಯವು ಕರ್ಮಗಳು.

"ಕ್ರಿವಿಡಿದು ಆಚರಿಸಬೇಕಲ್ಲದೆ ಅಕ್ರಿಯೆಯೊಡನೆ
ಆಚರಿಸಲಾಗದು. ಜ್ಞಾನವಿಡಿದು ನೋಡಬೇಕಲ್ಲದೆ
ದೃಷ್ಟಿವಿಡಿದು ನೋಡಬಾರದು. ಲಿಂಗವಿಡಿದು ಪೂಜಿಸುವುದಲ್ಲದ
ಅಂಗವಿಡಿದು ಪೂಜಿಸಲಾಗದು, ನಮ್ಮ ಕಪಿಲಸಿದ್ಧ
ಮಲ್ಲಿಕಾರ್ಜುನನಲ್ಲಿ."

"ನೆನೆದರಾಗದು ಸಾಧಿಸದನ್ನಕ್ಕ. ಸಾಧಿಸಿದರಾಗದು
ತಿಳಿಯದನ್ನಕ್ಕ.
ತಿಳಿಯದರಾಗದು ಎಳೆಬಾಲಚಂದ್ರಧರ ಕಪಿಲಸಿದ್ಧ
ಮಲ್ಲಿಕಾರ್ಜುನನ ಕೈವಲ್ಯಪದವು."

ತಿಳಿದವರು ಸ್ವಾರ್ಥಕ್ಕೆ ಮಾಡರು. ಜಗದ ಹಿತಕ್ಕಾಗಿ ಮಾಡುವರು. ದೇವನೊಲಿಸಿದವರ ದಿವ್ಯಕೃಪೆಗಾಗಿ ಮಾಡುವರು. ಇಂತಹ ಅಪೇಕ್ಷೆಗಳು ಆಶೆಯಲ್ಲ. ಇಂತಹ ಕ್ರಿಯೆಗಳು ಜಡಕರ್ಮಗಳಲ್ಲ. ನಿಂದ್ಯಕ್ರಿಯೆಗಳಲ್ಲ. ಉತ್ತಮರ ಕೃಪೆಗಾಗಿ ಮಾಡಿದ್ದೆಲ್ಲವೂ ಉತ್ತಮವೆ !

"ಭಕ್ತರಲ್ಲದವರನಾಸೆಗೈದರೆ ಕಕ್ಕುಲತೆಯಲ್ಲದೆ ಕಾರ್ಯವಿಲ್ಲ
ಆಸೆಗೈದರೆ ಆಸೆಗೈವುದು ಭಕ್ತರನು, ಆಸೆಗೈದು ಬಂದ
ಶಿವಂಗೆ ಸುತನ ಕೊಟ್ಟರು, ಧನವ ಕೊಟ್ಟರು, ಮನವ
ಕೊಟ್ಟರು, ಅಸುವ ಕೊಟ್ಟರು. ಶರಣನ ಸರಿ ಆವ ಲೋಕ
ದೊಳಗೂ ಇಲ್ಲ. ಶರಣಭರಿತಲಿಂಗವಾಗಿ ಬೇಡಿದ್ದ ಕೊಡುವ
ರಯ್ಯ ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರಾ."

ಚಿತ್ತಶುದ್ಧಿಯಿಂದ ಸ್ವಾರ್ಥಬುದ್ಧಿಯಿಲ್ಲದೆ ಮಾಡುವುದೆಲ್ಲ ಮಾಟ. ಮಹಾದೇವನಿಗೆ ಅದು ಸವಿಯೂಟ. ಅಚ್ಚ ಅರಿವುಳ್ಳವರಿಗೆ ಪರಮನ ನೆನೆದು ಪರವಶರಾಗುವ ಅಭಿಲಾಷೆಯೇ ಅತ್ಯಧಿಕವಾಗಿರುತ್ತದೆ. ಅವರಿಗೆ ಅದರ ವಿನಾ ಬೇರೆ ಏನೂ ಬೇಕಿರುವುದಿಲ್ಲ. ಬೇರೆ ಬೇಗುದಿಗೆ ಬೇವಸಕ್ಕೆ ಒಳಗಾಗುವುದಿಲ್ಲ.

"ಹೊರಕಣ್ಣು ಮುಚ್ಚಿ, ಒಳಕಣ್ಣು ತೆರೆದು,
ಮನದೊಡೆಯ ಬಂದಾನೆಂದು ಕಿವಿಯೊಡ್ಡಿ ಕೇಳುತ್ತಿದ್ದೆನಯ್ಯ,
ಅವನೆತ್ತಣಿಂದ ಬಂದು ನಿಜರೂಪು ಸುಳಿಯಿತ್ತೆಂದರಿಯೆ.
ಪರಮನ ಪ್ರತಿಬಿಂಬ ಹೊಳೆದಡೆ, ಕಣ್ಣ ತುಂಬೆ ಕಂಡು,
ಕರ ತುಂಬ ಹಿಡಿದು, ಮನ ಮುಟ್ಟಿ ನೆರೆವೆನು ಕಾಣಾ
ಕಪಿಲಸಿದ್ಧಮಲ್ಲಿಕಾರ್ಜುನಾ."

ಈ ಭಾವ ನಿರ್ಭರವುಳ್ಳವರಿಗೆ ಕರ್ಮಕಾರ್ಪಣ್ಯವಿರುವುದಿಲ್ಲ.

"ಪರಿಪೂರ್ಣ ಮಹಾನಂದಭಾವಿನಃ ಶುದ್ಧಚೇತಸಃ ।
ನ ಭವೇತ್ ಕರ್ಮಕಾರ್ಪಣ್ಯಂ ನಾನಾಭೋಗ ಫಲಪ್ರದಂ ॥ ೬ ॥

ಪ್ರಾಪಂಚಿಕ ಸುಖ ಅಪೂರ್ಣ; ಪಾರಮಾರ್ಥಿಕ ಸುಖ ಪರಿಪೂರ್ಣ. ಇದನ್ನು ಬಯಸುವವರು ಅಶುದ್ಧಚಿತ್ತರು; ಜಡಕರ್ಮಿಗಳು. ಅಸ್ವಾಭಾವಿಕ ಕರ್ಮನಿರತರು ಆ ಪರಿಪೂರ್ಣಸುಖವನ್ನು ಬಯಸುವವರು ಶುದ್ಧಚಿತ್ತರು. ಅಜಡಕ್ರಿಯಾವಂತರು; ಸ್ವಾಭಾವಿಕ ಸತ್ಕ್ರಿಯಾ ಸಮನ್ವಿತರು. ಅವರಿಗೆ ಆ ಏಕೈಕ ಪರಿಪೂರ್ಣಾನಂದದ ಆಸಕ್ತಿಯಿರುತ್ತದೆ. ಅಂಥವರನ್ನು ಅನೇಕ ಅಲ್ಪ ಸುಖಗಳನ್ನು ಕೊಡುವ ಕರ್ಮಗಳು ಬಂಧಿಸವು; ಭ್ರಾಂತಿಯನ್ನು ಹುಟ್ಟಿಸವು. ಷಡೂರ್ಮಿಗಳ ಸಂಗವಿಲ್ಲದ ಶರಣ ಚೂರ್ಣಭೋಗಗಳ ಅಜ್ಞಾನದ ಅಲ್ಪ ಸುಖಗಳ ಆಸೆಗೆ ಒಳಗಾಗನು. ಷಡೂರ್ಮಿಗಳನ್ನು ಜಯಿಸಿದವನೇ ಪರಮಶರಣ.

"ಹಸಿವರತಲ್ಲದೆ ಪ್ರಸಾದಿಯಲ್ಲ.
ತೃಷೆಯರತಲ್ಲದೆ ಪಾದೋದಕಿಯಲ್ಲ.
ನಿದ್ರೆಯರತಲ್ಲದೆ ಭವವಿರಹಿತನಲ್ಲ.
ಅನಲ ಪವನಗುಣವರತಲ್ಲದೆ ಜನನಮರಣ ವಿರಹಿತನಲ್ಲ.
ಇದು ಕಾರಣ ಕೂಡಲ ಚೆನ್ನಸಂಗಯ್ಯನಲ್ಲಿ
ಎಲ್ಲರಿಗೆಲ್ಲಿಯದೋ ಲಿಂಗೈಕ್ಯವು"

ಸಣ್ಣ ಪುಟ್ಟ ಆಸೆ ಅಭಿಲಾಷೆಗಳಿಲ್ಲದ ಶರಣ ಸಣ್ಣ ಪುಟ ಕರ್ಮಗಳಿಗೆ ಕೈಯಿಡನು; ಮನ ಮಾಡನು. ಸದಾಚಾರ ಶಿವಾಚಾರಗಳಿಂದ ಕ್ರಿಯಾನಿಷ್ಪತ್ತಿಯನ್ನು ಪಡೆಯುತ್ತಾನೆ.

"ಆಚಾರಲಿಂಗವಿಡಿದು ಅನುಭಾವಲಿಂಗ ಸಿದ್ಧಿ.
ಅನುಭಾವಲಿಂಗವಿಡಿದು ಮಾರ್ಗಕ್ರಿಲಿಂಗ ಸಿದ್ಧಿ.
ಮಾರ್ಗಕ್ರಿಲಿಂಗವಿಡಿದು ಮೀರಿದ ಕ್ರಿಲಿಂಗ ಸಿದ್ಧಿ.
ಮೀರಿದ ಕ್ರಿಲಿಂಗವಿಡಿದು ಕ್ರಿಯಾನಿಷ್ಪತ್ತಿ ಲಿಂಗ ಸಿದ್ಧಿ.
ಇದು ಕಾರಣ ಕೂಡಲಸಂಗಮದೇವಾ,
ಲಿಂಗವಿಡಿದು ಲಿಂಗಸಿದ್ಧಿ."

ಕ್ರಿಯಾನಿಷ್ಪತ್ತಿಯೆಂದರೆ ಕ್ರಿಯಾಹೀನತೆಯಲ್ಲ. ಕ್ರಿಯೆಯ ಪರಿಪೂರ್ಣತೆ ಮತ್ತು ಪರಿಪಕ್ವತೆ. ಕ್ರಿಯಾನಿಷ್ಪತ್ತಿಯೊಡನೆ ಕಾಯನಿಷ್ಪತ್ತಿಯೂ ಕರಿಗೊಂಡಿರುತ್ತದೆ.

"ಅಂಗಲಿಂಗಸಂಗವು, ಲಿಂಗವಲ್ಲಿ ಆಯತವಾಯಿತ್ತಯ್ಯ.
ನಿಮಿಷ ಕರಸ್ಥಲ ಹಿಂಗಿದಡೆ ಭಂಗವಯ್ಯ.
ಕಂಗಳೇ ಕರುವಾಗಿ ಲಿಂಗವೇ ಗೂಡಾಗಿ ನಿಂದ ನಿಷ್ಪತ್ತಿಯಲ್ಲಿ
ಕೂಡಲ ಚನ್ನಸಂಗಾ ನಿಮ್ಮ ಶರಣ."

ಕ್ರಿಯಾನಿಷ್ಪತ್ತಿಲಿಂಗ ಸಿದ್ಧಿಯಾದಾಗ ಕಾಯಾಂಗ ಲಿಂಗದಲ್ಲಿ ಆಯತವಾಗಿರುತ್ತದೆ. ಆದರೂ ಕ್ರಿಯಾಹೀನವಾಗಿರದು. ನಿಮಿಷವೂ ಕ್ರಿಯಾಚೈತನ್ಯವಿಲ್ಲದೆ ಇರದು. ಕ್ರಿಯಾಹೀನವಾದರೆ ಅದೇ ಭಂಗ. ದೃಷ್ಟಿ ದ್ರಷ್ಟೃಗಳೆರಡೂ ಕ್ರಿಯೆಯಲ್ಲಿ ನಿಷ್ಪತ್ತಿಗೊಂಡಿರುತ್ತವೆ.

"ಮಾರ್ಗಕ್ರಿಯಾ ಸಮಯದಲ್ಲಿ ಶಿವಭಕ್ತಿ ಸಂಪುಟ.
ಮೀರಿದ ಕ್ರಿಯಾ ಸಮಯದಲ್ಲಿ ಶಿವಲಿಂಗ ಸಂಪುಟ.
ಕ್ರಿಯಾನುಭಾವ ನೆಲೆಗೊಂಡಲ್ಲಿ ಮನಲಿಂಗ ಸಂಪುಟ.
ಮನಲಿಂಗ ಲೀಯವಾದ ಬಳಿಕ ತೆರಹಿಲ್ಲದ
ಕುರುಹಳಿದ ಲಿಂಗೈಕ್ಯಂಗೆ ಸುತ್ತಿದ್ದ ಪ್ರಪಂಚು
ಮೆಲ್ಲ ಮೆಲ್ಲನೆ ಅಚ್ಚುಗವಿಲ್ಲದೆ ಹಿಂಗಿದವು ಕೂಡಲ ಚನ್ನಸಂಗ."
"ಇಹಪರವೆಂಬ ಇದ್ದೆಸೆಗಿದ್ದೆಸೆಯಾದವನ
ಪರಿಹೊಸತು. ನೆಯಿ ಹತ್ತದ ನಾಲಗೆಯಂತೆ,

ಹುಡಿ ಹತ್ತದ ಗಾಳಿಯಂತೆ,
ಕಾಡಿಗೆ ಹತ್ತದ ಆಲಿಯಂತೆ ಇದ್ದೆನಯ್ಯ.
ಸಿಮ್ಮಲಿಗೆಲಿಯ ಚನ್ನರಾಮನೆಂಬ ಲಿಂಗದಲ್ಲಿ
ಆಚರಿಸುತ್ತ ಆಚರಿಸುತ್ತ ಆಚರಿಸದಂತಿದ್ದೆನಯ್ಯ."

ಇಹ ಪರ ಲೋಕದವರಿಗೆ ಕ್ರಿಯಾಶಕ್ತಿ ಅದೊಂದು ಮಾತೃಶಕ್ತಿ. ಅದಿಲ್ಲದೆ ಬಾಳು ಬೆಳಗದು; ಮಾಗದು. ಕ್ರಿಯಾಶಕ್ತಿಯಿಲ್ಲದೆ ಜೀವನವಿಲ್ಲ. ಆದರೆ ಕ್ರಿಯಾಭಿಮಾನ, ಕ್ರಿಯಾಹಂಕಾರಗಳಿರಬಾರದು. ತುಪ್ಪ ತಿನ್ನುವ ನಾಲಗೆಯಂತೆ ಕ್ರಿಯಾನಿರತರಾಗಿರಬೇಕು. ಹುಡಿಹತ್ತದ ಗಾಳಿಯಂತೆ ಕ್ರಿಯಾಭರಿತರಾಗಿರಬೇಕು. ಗಾಳಿಯು ಮೈದುಂಬ ದೂಳಿಯಿಲ್ಲದಿರುವುದಿಲ್ಲ. ಇದ್ದರೂ ಹೊದ್ದಿರುವುದಿಲ್ಲ ಅಂದರೆ ಅದರ ಮೈಗೆ ಸೋಂಕಿರುವುದಿಲ್ಲ. ಕಣ್ಣೊಳಗೆ ಕಾಡಿಗೆಯಿದ್ದರೂ ಕಳಂಕವಲ್ಲ; ಪ್ರತಿಯಾಗಿ ಅಲಂಕಾರ. ಅಂತೆಯೇ ಕ್ರಿಯೆಯನ್ನು ಕೈಬಿಡದೆ ನಡೆಸಿಕೊಂಡು ಬರಬೇಕು. ಆದರೆ ಕ್ರಿಯಾಫಲಾಕಾಂಕ್ಷೆಯನ್ನು ಇಟ್ಟುಕೊಂಡಿರಬಾರದು. ಕ್ರಿಯೆಯೊಳಗಿದ್ದರೂ ಕ್ರಿಯಾವಿಶ್ರಾಂತಿಯುಂಟಾಗಿರಬೇಕು. ಕ್ರಿಯೆಯ ಫಲತ್ಯಾಗದ ಉದ್ದೇಶವಿದು: ತಾ ಮಾಡಿದ ಕಾರ್ಯ ಫಲಿಸಿದರೆ ತಾನೇ ಮಾಡಿದರಾಯಿತೆಂಬ ಅಭಿಮಾನ ಅಹಂಕಾರಗಳು ಹುಟ್ಟುತ್ತವೆ. ಫಲಾಶೆಯೂ ಹುಟ್ಟುತ್ತದೆ. ಅಹಂಕಾರ ಆಶೆಗಳಿಗಿಂತ ಬೇರೆ ಬಂಧನವಿಲ್ಲ. ಕಾರಣ ಕ್ರಿಯಾನಿಷ್ಪತ್ತಿ ಅಗತ್ಯ.

೫. ಭಾವ ನಿಷ್ಪತ್ತಿ ಸ್ಥಳಂ

ಪ್ರಸಾದಲಿಂಗದೊಳಗಿನ ನಿಷ್ಪತ್ತಿಲಿಂಗದ ಎರಡನೆಯ ಉಪಾಂಗಕಿರಣ ಭಾವನಿಷ್ಪತ್ತಿಲಿಂಗ. ಪ್ರಸಾದ ಲಿಂಗದ ದ್ವಿತೀಯ ಘಟಕ ನಿಷ್ಪತ್ತಿಲಿಂಗ; ನಿಷ್ಪತ್ತಿಲಿಂಗದ ದ್ವಿತೀಯ ಘಟಕ ಭಾವನಿಷ್ಪತ್ತಿಲಿಂಗ. ನಿಷ್ಪತ್ತಿಲಿಂಗದ

ಹೊರಮೈ ಕ್ರಿಯಾನಿಷ್ಪತ್ತಿ, ನಡುಮೈ ಭಾವನಿಷ್ಪತ್ತಿ. ಹಣ್ಣಸಿಪ್ಪೆಗೆ ಬಣ್ಣ ಬಂದ ಬಳಿಕ ಒಳಗಿರುವ ರಸ ಪಕ್ವಗೊಂಡು ರಂಚಿಗೊಳ್ಳುವುದು ಸಹಜ. ಅದರಂತೆ ಕ್ರಿಯಾನಿಷ್ಪತ್ತಿಯಾದ ಬಳಿಕ ಭಾವನಿಷ್ಪತ್ತಿಗೊಳ್ಳುವುದು ಕ್ರಮಪ್ರಾಪ್ತ; ಸ್ವಾಭಾವಿಕ.

ಇಲ್ಲಿ ಭಾವವೆಂದರೆ ಮನಸ್ಸು, ಉದ್ದೇಶ, ಇರುವಿಕೆ, ಅಭಿಪ್ರಾಯ, ಚಿತ್ತವೃತ್ತಿ ಮುಂತಾದ ಅರ್ಥಗಳೂ ಭಾವ ಪದಕ್ಕಿವೆ ಸತ್ತಾ ಸೂಚಕವಾದ ಭಾವಪದದಿಂದ ಸ್ಥಿತಿಯೂ ಅರ್ಥವಾಗುತ್ತದೆ. ಸ್ಥಿತಿವಾಚಿ ಭಾವಕ್ಕೆ ಕ್ರಿಯೆಯೇ ಜೀವಾಳ. ಕ್ರಿಯಾನಿಷ್ಪತ್ತಿ ಕೈಗೂಡಿದಾಗ ಭಾವನಿಷ್ಪತ್ತಿಯಾಗಬೇಕೆಂಬುದು ಭಾವ್ಯ ಭಾವ ನಿಷ್ಪತ್ತಿಗೊಳ್ಳದೆ ಬಾಳು ಹಸನಾಗದು. ಭವದ ಭಾದೆ ಹಿಂಗದು

"ಭಾವ ಬಲಿದಲ್ಲಿ ಲಿಂಗವೆನಿಸಿತ್ತು.
ಭಾವ ವಿಭಾವವಾದಲ್ಲಿ ಪಾಷಾಣವೆನಿಸಿತ್ತು.
ಭಾವ ನಿರ್ಭಾವವಾದಲ್ಲಿ ಏನೆಂದೆನಿಸದು ನೋಡಾ
ಕಪಿಲಸಿದ್ಧ ಮಲ್ಲಿಕಾರ್ಜುನಾ."

"ಭಾವೇನ ನಾಸ್ತಿ ಸಂಬಂಧಃ ಕೇವಲ ಜ್ಞಾನಯೋಗಿನಃ ।
ತಥ್ಯಾಪಿ ಭಾವಂ ಕುರ್ವೀತ ಶಿವೇ ಸಂಸಾರಮೋಚಕೇ ॥ ೧ ॥

ಕ್ರಿಯಾನಿಷ್ಪತ್ತಿಗೊಂಡ ಶರಣನಿಗೆ ಮನೋವೃತ್ತಿಯೂ ನಿಷ್ಪತ್ತಿಗೊಂಡಿರುತ್ತದೆ. ಸ್ಥಿರಭಾವವುಳ್ಳವನಾಗಿರುತ್ತಾನೆ. ಅದರಿಂದ ಆತನು ಕೇವಲ ಜ್ಞಾನಯೋಗಿಯಾಗಿ ಮಾನಸಿಕ ವ್ಯಾಪಾರವಿಲ್ಲದನಾಗಿರುತ್ತಾನೆ. ಸಂಕಲ್ಪ ವಿಕಲ್ಪ ಸಂಶಯ ಚಾಪಲ್ಯಗಳಿಂದ ವಿರಹಿತನಾಗಿರುತ್ತಾನೆ. ಆದರೂ ಹುಟ್ಟು ಸಾವುಗಳನ್ನು ಹಿಟ್ಟುಗುಟ್ಟುವ ಶಿವನಲ್ಲಿ ಭಾವವನ್ನಿರಿಸಿಯೇ ಆಗಬೇಕು.

ಭಾವವಿಲ್ಲದ ಪೂಜೆ ನೀರಸ; ನಿರರ್ಥ. ಭಕ್ತಿ ಬಾವವಿಲ್ಲದೆ ಶಿವತ್ವ ಸಮನಿಸದು. "ಯಥಾ ಬಾವಸ್ತಥಾ ದೇವಃ" ಎಂಬಂತೆ ಭಾವ ಬಲಿದಲ್ಲಿ ದೇವತ್ವವಿರುತ್ತದೆ. ಹೃದಯ ಪರಿಪಕ್ವಗೊಂಡಿರುತ್ತದೆ. "ಹಿಂದೆ ಕಾಯಿ ಸೊನೆಯರತಲ್ಲದೆ ಹಣ್ಣಿನ ರಸ ಚಿಹ್ನ ತೋರದು. ಕಾಯ ಕರ್ಮವ ಮಾಡಿ ಜೀವ ಜ್ಞಾನವನರಿದು, ತ್ರಿವಿಧ ಭಾವ ಶುದ್ಧವಾಗಿಯಲ್ಲದೆ ಕಾಣಲಿಲ್ಲ ಕಪಿಲ

ಸಿದ್ಧ ಮಲ್ಲಿಕಾರ್ಜುನ ಲಿಂಗವ ” ಕಾಯ ಕ್ರಿಯಾನಿರತವಾದರೆ ಭಾವ ಭಕ್ತಿ ನಿರತವಾಗಿರಬೇಕು. ಇಲ್ಲವಾದರೆ ಶರಣನಿಗೂ ಶಿವನಿಗೂ ಅಭಿನ್ನಭಾವ ಬಾರದು; ಸಾಮರಸ್ಯ ಸಮನಿಸದು.

“ಅಂಗದ ಮೇಲೆ ಲಿಂಗವರತು,
ಲಿಂಗದ ಮೇಲೆ ಅಂಗವರತು,
ಭಾವ ತುಂಬಿ ಪರಿಣಾಮವರತು,
ನಾಮವಿಲ್ಲದ ದೇವರಿಗೆ
ನೇಮವೆಲ್ಲಿಯದೋ ಗುಹೇಶ್ವರಾ ?”

ಕ್ರಿಯಾನಿಷ್ಪತ್ತಿಯಿಂದ ಶರಣನ ಅಂಗವೆಲ್ಲ ಲಿಂಗವೇ ಆಗಿ ಲಿಂಗವೆಲ್ಲ ಅಂಗವಾಗಿ ಅಂಗಲಿಂಗವೆಂಬ ಭಿನ್ನಭಾವವಿಲ್ಲದಾಗಿ ಪೂರ್ಣಗೊಂಡಿರುತ್ತವೆ. ಅಂಗಲಿಂಗಗಳಂತೆ ಮನ ಭಾವಗಳೂ ಅಖಂಡ ಪರಿಪೂರ್ಣವಾಗಬೇಕಾದರೆ ಶಿವಭಾವವಿಲ್ಲದಾಗದು. ಬಗೆದುಂಬಿ ಸೊಗ ಮಾಗಬೇಕು. ಆಗ ನಾನು ಜೀವ, ನೀನು ದೇವ ಎಂಬ ಭೇದವಳಿದು ನಾಮ ಸೀಮೆಗಳಳಿದು ನೇಮನಿತ್ಯಗಳು ನಿಷ್ಪತ್ತಿಗೊಳ್ಳುವವು.

ಸಂಚಾರೀ ಭಾವದಿಂದ ನಿಷ್ಪತ್ತಿ ನಿಲುಕಡೆಗೆ ಬಾರದು.

“ಸುಳಿದು ಸುತ್ತುವ ಮನದ ವ್ಯವಹಾರವುಳ್ಳನ್ನಕ್ಕ
ಶಿವಪಥವ ನಾನರಿಯೆ; ಅರಿಯೆ, ಅರಿಯೆ, ಅರಿಯೆ ಗುಹೇಶ್ವರಾ
ನಿಜವನರಿದ ಬಳಿಕ ಲೋಕದ ಗತಿಯನು ನಾನರಿಯೆ ;
ಅರಿಯೆನು, ಅರಿಯೆನು, ಅರಿಯೆನು.”

ಸಂಚಲನ ಭಾವದಿಂದ ಶಿವಪಥವರಿಯಲು ಸಾಧ್ಯವಿಲ್ಲ, ಅದೇ ಸ್ಥಿರ ಭಾವದಿಂದ ಶಿವನನರಿದ ಬಳಿಕ ಭವಪಥವನ್ನು ಅರಿಯಲು ಸಾಧ್ಯವಿಲ್ಲ. ಅಂದರೆ ನಿಶ್ಚಲ ಭಾವದಿಂದ ಶಿವಸಾಕ್ಷಾತ್ಕಾರ ; ಚಂಚಲ ಭಾವದಿಂದ ಈ ಲೋಕದ ಸಂಸಾರ. ಅಲ್ಲಿ ಭಾವ ನಿಷ್ಪತ್ತಿಗೊಳ್ಳುತ್ತದೆ ; ಇಲ್ಲಿ ಭಾವ ವಿಭಾವಗಳು ಉತ್ಪತ್ತಿಗೊಳ್ಳುತ್ತವೆ.

"ದೃಷ್ಟಿ ಮುಟ್ಟಿತ್ತು ನೋಡಾ
ನಟ್ಟು ತೆಗೆಯಬಹುದು ನೋಡಾ
ಅಲ್ಲಿಯೇ ಅಚ್ಚೊತ್ತಿದಂತಿದ್ದಿತ್ತು ನೋಡಾ.
ಆಶ್ರಯುವ ಗೆಲಿದು ನಿರಾಶ್ರಯುದ ನಿಷ್ಪತ್ತಿಯಲ್ಲಿ
ನಿಂದನು ಕೂಡಲ ಚನ್ನಸಂಗಾ ನಿಮ್ಮ ಶರಣ."

ಭಾವ ನಿಂದು ನಿಷ್ಪತ್ತಿಗೊಂಡಲ್ಲಿ ಮನ ದೃಷ್ಟಿಗಳು ನಿಂದು ನಿಷ್ಪತ್ತಿಗೊಳ್ಳುತ್ತವೆ. ಶಿವನಲ್ಲಿಯೇ ಸಮರಸವಾಗುತ್ತವೆ. ಶಿವನಲ್ಲಿ ಕಣ್ಣು ಅಚ್ಚೊತ್ತಿದರೆ ಕಾಲ ಭಯವಿಲ್ಲ. ಭಾವ ಅಚ್ಚೊತ್ತಿದ್ದರೆ ಭವ (ಜನ್ಮ) ಭಯವಿಲ್ಲ. ಹಾಗಾದ ಬಳಿಕ ಆ ಆನಂದಕ್ಕೆ ಆ ಪರಾನುಭೂತಿಗೆ ಮೇರೆಯಿಲ್ಲ.

"ಕಂಗಳಲ್ಲಿ ನಟ್ಟ ಛಾಯೆವನಾರಿಗೆ ತೋರಬಹುದಯ್ಯಾ ?
ಮನ ಸೋಂಕಿದ ಸುಖವ ಮೊಟ್ಟೆಯ ಕಟ್ಟಬಹಂದೆ ?
ಆತ ನಿಂದ ಸುಖವಾತಂಗೆ ಸಾಧ್ಯವಾಯಿಂತ್ತು.
ಆತ ನಿಂದ ನಿಲವನೇನೆಂಬೆ ಗುಹೇಶ್ವರಾ ?"

"ಪರಿಪೂರ್ಣ ಪ್ರಬೋಧೋಽಪಿ ಭಾವಂ ಶಂಭೌ
ನವರ್ಜಯೇತ್ ।
ಭಾವೋ ಹಿ ನಿಹಿತಸ್ತಸ್ಮಿನ್ ಭವಸಾಗರತಾರಕಃ ॥ ೨ ॥"

ಪೂರ್ಣ ಪ್ರಜ್ಞೆಯುಳ್ಳವನಾದರೂ ಭಕ್ತಿಭಾವವಿದ್ದಾಗಬೇಕು. ಶಿವಭಾವವಿಲ್ಲದೆ ಪ್ರಜ್ಞೆ ಫಲಿಸದು. 'ಆಗದಾಗದು ಪರವಿವೇಕಿಗೆ ಮುಕ್ತಿ.' ಎಂದು ನಿಜಚರಿತ ನಿಜಗುಣರ ನಿರೂಪಣೆ. ಶಿವಭಾವವೇ ಭವಸಾಗರವನ್ನು ದಾಟಿಸಬಲ್ಲುದು.

ಭಾವವಿಲ್ಲದ ಬೋಧ, ಶಿವಭಾವವಿಲ್ಲದ ಪ್ರಬೋಧ ಶೋಭಿಸವು ; ರುಚಿಸವು. ಪರಿಪೂರ್ಣ ಪ್ರಬೋಧವಾದರೂ ಪರಿಣಾಮವನ್ನು ತಾರದು. ಅರಿವಿಗೆ ಅಂತ್ಯವಿಲ್ಲ ; ಮರವೆಗೆ ಆದಿಯಿಲ್ಲ, "ಅರಿವ ಅರಿವಿನ ಮುಂದಣ ಅರಿವುದಿದೇನೋ ? ಅರಿವಿನ ಎರಡರ ಅರಿವು ನಿಷ್ಪತ್ತಿ ಮಾಯೆಯ ಮುಂದಡಗಿತ್ತಲ್ಲಾ ! ಅರಿದಡೆ ಹಿಂದಾಯಿತ್ತು ; ಮರೆದಡೆ ಮುಂದಾಯಿತ್ತು.

ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ. ನಿತ್ಯಸಾರ." ಪ್ರಬೋಧದಿಂದ ಮಾತ್ರ ಪ್ರಪಂಚ ಹಿಂಗದು ; ಪ್ರಭಾವವೂ ಬೇಕು. ಪ್ರ-ಭಾವ ಬೇಕಾದರೆ ಪರಶಿವನಲ್ಲಿ ಪರವಶವಾಗುವ ಭಕ್ತಿ ಬಲವಾಗಬೇಕು. ಶಿವಭಾವ ಭರಿತವಾಗದೆ ಭವಸಾಗರ ಬೆನ್ನು ಹಿಂದಾಗದು. ಅರುಹಿನಲ್ಲಿ ತೆರಹಿಗಿಂಬಿದೆ. ಬಗೆಯಲ್ಲಿ ಬೆಸುಗೆಗಿಂಬಿದೆ.

"ಎನ್ನ ಮನದಲ್ಲಿ ಇದೇ ಪಥವಯ್ಯ. ಬೆರಸುವಡೆ ಪ್ರಾಣದ ಮಥನ ಭಾವ ನಟ್ಟು ತನುಸ್ಥಿತಿಯ ಮರೆದು ಭ್ರಾಂತು ಸೂತಕವೆಲ್ಲ ವಿವರಿಸಿ ಹೋದವು; ಶೂನ್ಯ ಸಿಂಹಾಸನದ ಮೇಲೆ ಕೂಡಲ ಚನ್ನಸಂಗಾ ನಿಮ್ಮ ಶರಣನ ಪ್ರಭೆಯಿಂದ."

ಭಾವ ಬೆಸುಗೆಯಾಗದೆ ಕರಣಗುಣ ಹಿಂಗವು ; ಮನೋವೃತ್ತಿ ನಿವೃತ್ತಿಯಾಗದು ; ನಿಷ್ಪತ್ತಿಯಾಗದು. ಪ್ರಾಣಮಥನ ಭಾವದಲ್ಲಿ ಬೆರೆದೇಕವಾಗಬೇಕು. ಅಂತೆಯೇ ತನುಸ್ಥಿತಿಯೂ ತಲ್ಲೀನವಾಗಿ ಭ್ರಾಂತಿಸೂತಕ ಬಯಲಾಗದೆ ಶೂನ್ಯ ಸಿಂಹಾಸನದ ಸಂದರ್ಶನವಾಗದು ; ಅದರ ಮೇಲೆ ರಾಜಿಸುವ ಶಿವಸಮರಸ ಸಂವೇಧಿಸದು. ಅಂತಾಗಬೇಕಾದರೆ ಶರಣನಲ್ಲಿ ಪ್ರ-ಭಾವ ಇದ್ದಾಗಬೇಕು. ಕರಣವೃತ್ತಿಗಳು ಭಾವದೊಡನೆ ನಿಷ್ಪತ್ತಿಗೊಳ್ಳಬೇಕು.

"ಕರಣಾದಿ ಗುಣಂಗಳಳಿದು ನವಚಕ್ರಂಗಳ ಭಿನ್ನವಾದ ಬಳಿಕ
ಇನ್ನೇನೋ-ಇನ್ನೇನೋ ?
ಸ್ವರ್ಗವಿಲ್ಲ, ನರಕವಿಲ್ಲ ; ಇನ್ನೇನೋ-ಇನ್ನೇನೋ
ಪುಣ್ಯವಿಲ್ಲ, ಪಾಪವಿಲ್ಲ ; ಇನ್ನೇನೋ-ಇನ್ನೇನೋ ?
ಗುಹೇಶ್ವರಲಿಂಗ ವೇಧಿಸಿ ಸುಖಿಯಾದ ಬಳಿಕ ಇನ್ನೇನೋ-
ಇನ್ನೇನೋ ?"

ಪರಿಪೂರ್ಣ ಪ್ರಬೋಧದೊಡನೆ ಪರಿಪೂರ್ಣ ಪ್ರಭಾವವುಂಟಾರೆದ ಪರಮಾನಂದ ಪ್ರಾಪ್ತಿಯಾಗಿ ಭಾವನಿಷ್ಪತ್ತಿಯುಂಟಾಗುತ್ತದೆ.

"ನಿವರ್ತ್ಯ ಜನ್ಮಜಂ ದುಃಖಂ ಭಾವಃ ಶ್ರೇಯೋ ನಿವರ್ತತೇ ।
ಯಥಾ ಕಾಷ್ಠಾದಿಕಂ ದಗ್ಧ್ವಾ ಸ್ವಯಂ ಶಾಮ್ಯತಿ ಪಾವಕಃ ॥ ೩ ॥

ಪ್ರಕಾಶಿತೇ ಶಿವಾನಂದೇ ತದ್ಭಾವೈಃ ಕಿಂ ಪ್ರಯೋಜನಂ ।
ಸಿದ್ಧೌ ಸಾಧ್ಯೇ ಚಿರೇಣಾಪಿ ಸಾಧನೈಃ ಕಿಂ ಪ್ರಯೋಜನಂ ॥ ೪ ॥"

ಶಿವಭಾವಕ್ಕೆ ಸಾರ್ಥಕ್ಯ ಜನ್ಮದುಃಖ ನಿವೃತ್ತಿ. ಅದಾದ ಬಳಿಕ ಭಾವ ನಿರ್ಭಾವವಾಗುತ್ತದೆ. ಕಟ್ಟಿಗೆಯನ್ನು ಸುಟ್ಟ ಬಳಿಕ ಬೆಂಕಿ ತಾನೇ ಶಾಂತವಾಗುತ್ತದೆ.

ಸಿದ್ಧಿಯವರೆವಿಗೂ ಸಾಧನೆ ಇದ್ದಾಗಬೇಕು. ಸಿದ್ಧಿಯಾದ ಬಳಿಕ ಸಾಧನ ಪ್ರಯೋಜನವಾಗದು. ಭಾವಸಾಧನೆಗೆ ಶಿವಾನಂದ ಪ್ರಾಪ್ತಿಯೇ ಸಿದ್ಧಿ. ಶಿವಭಾವವು ಶಿವಾನಂದವನ್ನು ಪ್ರಕಾಶಿಸುತ್ತದೆ. ಆ ಬಳಿಕ ಅದರ ಆಗತ್ಯವಿಲ್ಲ; ಆದ್ದರಿಂದ ಆಗ ಅದು ನಿರ್ಭಾವ ಸ್ವರೂಪವನ್ನು ತಾಳುತ್ತದೆ. ಅದನ್ನೇ ಭಾವ ನಿಷ್ಪತ್ತಿಯೆನ್ನುತ್ತೇವೆ.

"ನೆನಹಿನ ಸುಖವ ನೋಟ ನುಂಗಿತ್ತು
ನೋಟದ ಸುಖವ ಕೂಟ ನುಂಗಿತ್ತು
ಕೂಟದ ಸುಖವನಾ ಲಿಂಗ ನುಂಗಿತ್ತು
ಆ ಲಿಂಗದ ಸುಖವ ಸಂಗ ನುಂಗಿತ್ತು
ಸಂಗದ ಸುಖವ ಸಮರತಿ ನುಂಗಿತ್ತು
ಸಮರತಿಯ ಸುಖವ ಪರವು ನುಂಗಿತ್ತು
ಪರದ ಸುಖವ ಕೂಡಲ ಚನ್ನಸಂಗಯ್ಯ ತಾನೇ ಬಲ್ಲ."

"ಏಕೀಕೃತೇ ಶಿವೇ ಭಾವೇ ಜ್ಞಾನೇನ ಸಹ ಸಂಯಮೀ ।
ವಿಸ್ಮಿತಾತ್ಮ ಸಮಾವೇಶಃ ಶಿವಭಾವೇ ವಿಭಾಸತೇ ॥ ೫ ॥

ನ ಭಾವೇನ ವಿನಾ ಜ್ಞಾನಂ ನ ಭಾವೋ ಜ್ಞಾನಮಂತರಾ
ಮೋಕ್ಷಾಯ ಕಾರಣಂ ಪ್ರೋಕ್ತಂ ತಸ್ಮಾದುಭಯಮಾ
ಶ್ರಯೇತ್ ॥ ೬ ॥"

ಶಿವಭಾವವನ್ನು ಶಿವಜ್ಞಾನದೊಡನೆ ಒಂದಾಗಿಸಿ ಭಾವ ನಿಷ್ಪತ್ತಿಯನ್ನು ಗಳಿಸಿದ ಸಂಯಮಿಯಾದ ಶರಣನು ಅಚ್ಚರಿಯನ್ನುಂಟುಮಾಡುವ ಅವಿರಳತೆಯುಳ್ಳವನಾಗಿ ಶಿವಭಾವದಲ್ಲಿ ಶೋಭಿಸುತ್ತಾನೆ.

ಮೋಕ್ಷಕ್ಕೆ ಪ್ರ-ಭಾವ, ಪ್ರ-ಬೋಧಗಳೆರಡೂ ಬೇಕು. ಒಂದೊಂದರಿಂದ ಒದಗದು. ಕಾರಣ ಶರಣನು ಅವೆರಡನ್ನೂ ಆಶ್ರಯಿಸಬೇಕು. ಭಕ್ತಿ ಜ್ಞಾನಗಳಿಂದ ಮುಕ್ತಿ.

"ಸತ್ಯವಿಲ್ಲದ ಭಕ್ತಿ ಹತ್ತುಸಾವಿರ ಕಾಲ ಮಾಡಿದಡೇನು ?
ನಿಷ್ಠೆಯಿಲ್ಲದ ಪೂಜೆಯನೇಸು ಕಾಲ ಮಾಡಿಡಡೇನು,
ಭಾವನೆಲೆಗೊಳ್ಳದನ್ನಕ್ಕರ ?
ನಿಜವಿಲ್ಲದ ಪ್ರಸಾದವನೇಸು ಕಾಲ ಕೊಂಡಡೇನು ?
ಅಭ್ಯಾಸವಾಯಿತ್ತಲ್ಲದೆ ಸಹಜವಲ್ಲ, ಸಮ್ಮತವಲ್ಲ ;
ಒಬ್ಬರ ಕಂಡೊಬ್ಬರು ಮಾಡುವರಲ್ಲದೆ ತಮ್ಮ ತಾವು
ವಿಚಾರಿಸಿಕೊಳ್ಳಲರಿಯರು. ಇಂತೀ ವಿವರವನರಿಯದ
ಅಜ್ಞಾನಿಗಳಿಗೆ ಭಕ್ತಮಾಹೇಶ್ವರರೆನಲಾಗದಯ್ಯ ;
ಕೂಡಲಚನ್ನಸಂಗಮದೇವಾ !"

"ಆವ ಜ್ಞಾನಿಯಾದರೇನು ? ದೇಹಾವಸಾನದಲ್ಲಿಯ
ಭಾವದಂತೆ ತಪ್ಪಲರಿಯದು ನೋಡಾ !
ಆವ ಜ್ಞಾನಿಯಾದರೇನು ನೋಡಾ ?
ಭಾವವೆಂಬುದು ಜನ್ಮಕ್ಕೆ ಈಡು ;
ನಿರ್ಭಾವವೆಂಬುದು ಜನ್ಮಕ್ಕೆ ಕಾಡುಗಿಚ್ಚು ನೋಡಾ,
ಕಪಿಲಸಿದ್ಧ ಮಲ್ಲಿಕಾರ್ಜುನಾ.

"ಮನವೆಂಬುದು ಬೇರಲ್ಲ
ಮಹಾದೇವನ ಮಹಾ ಅರುಹು ನೋಡಾ
ಸಂಕಲ್ಪ ವಿಕಲ್ಪಂಗಳ ಧರಿಸಿದಲ್ಲಿ ಮನವೆನಿಸಿತ್ತು
ಅದಂ ಅಳಿದಲ್ಲಿ ಮಹಾಜ್ಞಾನವೆನಿಸಿತ್ತು.
ಅಳಿದು ಭಾವ ತಲೆದೋರಿದಲ್ಲಿ
ಕಪಿಲಸಿದ್ಧ ಮಲ್ಲಿಕಾರ್ಜುನನೆನಿಸಿತ್ತು."

ತನ್ನ ವಂಗೆತು ಈ ಭವದಲ್ಲಿದ್ದರೆ ಭಾವವೆನಿಸುವುದು. ತನ್ನ ಅರಿತಂ ಆ ಶಿವದಲ್ಲಿದ್ದರೆ ನಿರ್ಭಾವವೆನಿಸುವುದು. ಅದೇ ಭಾವನಿಷ್ಪತ್ತಿಯೆನಿಸುವುದು.

“ಕಂಡು ಕಂಡು ಕಾಣಲುಂಟೆ ಅಯ್ಯಾ?
ಕೇಳಿ ಕಂಡಿಹೆನೆಂದಡೆ ಮನಸ್ಸು ನಾಚಿತ್ತು
ನಾಚಿದ ಮನಸ್ಸಿಂಗೆ ನೋಡಿದ ನೋಟಕ್ಕೆ
ಭಾವ ಬತ್ತಲೆಯಾಗದನ್ನಕ್ಕರ
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ, ಇಲ್ಲ.”

ಸುಜ್ಞಾನ ದೃಷ್ಟಿಯಿಂದ ಅಂತರಂಗದಲ್ಲಿ ಪ್ರಾಣಲಿಂಗವನ್ನು ಕಂಡು, ಆ ಪ್ರಾಣಲಿಂಗವೇ ಇಷ್ಟಲಿಂಗವಾಗಿ ಕಂಡು; ಬಳಿಕ ಇಷ್ಟಲಿಂಗವನ್ನು ಬಿಟ್ಟು ಪ್ರಾಣಲಿಂಗವನ್ನು ಕಾಣಲಾಗದು. ಶ್ರವಣ ಮಾತ್ರದ ಜ್ಞಾನದಿಂದ ಪ್ರಾಣಲಿಂಗವನ್ನು ಕಾಣಲಾಗುವುದಿಲ್ಲ. ಕಂಡೆನೆಂದು ಹೇಳಿದರೆ ಜೊಳ್ಳುಮಾತದು. ಅದಕ್ಕೆ ಮನವೊಪ್ಪದು. ಸ್ವಯಜ್ಞಾನದಿಂದ ಮನಗಂಡ ಪ್ರಾಣಲಿಂಗಕ್ಕೂ ಸತ್ಕ್ರಿಯಾ ದೃಷ್ಟಿಯಲ್ಲಿ ಕಂಡ ಇಷ್ಟಲಿಂಗಕ್ಕೂ ಇರುವ ಭಿನ್ನಭಾವ ನಷ್ಟವಾಗದೆ ಭಾವಲಿಂಗದ ಸಾಕ್ಷಾತ್ಕಾರ ಸಾಧ್ಯವಾಗದು.

ಭಾವ ಬತ್ತಲೆಯಾಗದೆ ಭಾವ ಸೌಂದರ್ಯವುಂಟಾಗುವುದಿಲ್ಲ. ಭವಹರನು ಒಲಿಯುವುದಿಲ್ಲ. ಭಾವವು ಭವದಲ್ಲಿರಬಾರದು. ಭವದ ಉಡುಗೆಯನ್ನು ಉಡಬಾರದು. ಭ್ರಾಂತಿಯ ಭೂಷಣಗಳನ್ನು ಹಾಕಿಕೊಳ್ಳಬಾರದು ಇವೆಲ್ಲ ಅಸಹಜಗಳು; ಅಸ್ವಾಭಾವಿಕಗಳು. ಹೊರಗೊಂದು ಒಳಗೊಂದಾಗಿರುವಿಕೆ. ಭಾವ ಬತ್ತಲೆಯಾಗಿರುವಿಕೆಯೆಂದರೆ ವಿಕಲ್ಪಾದಿಗಳಿಲ್ಲದೆ ಸಹಜವಾಗಿ ಸ್ವಾಭಾವಿಕವಾಗಿ ಇರುವಿಕೆ. ಭ್ರಾಂತಿಗೆ ಒಳಗಾಗದಿರುವಿಕೆ.

“ಭಾವ ನಿರ್ಭಾವಂಗಳ ಸುಳುಹು ನಷ್ಟವಾದ ಸದ್ಭಾವದ ಧೂಪವನಿಕ್ಕಿ, ಸಮ್ಯಕ್ ಜ್ಞಾನದಿಂ ಪ್ರಕಾಶಿಸಿ ತೋರ್ಪ ದೀಪಮಂ ಬೆಳಗಿ, ಬ್ರಹ್ಮರಂದ್ರದಿಂದೊಸರ್ದು ಪರಿತಪ್ಪ ಪರಮಾಮೃತವನಾರೋಗಿಸಿ, ಆರೋಗಣೆಯ ಮಾಡಿ, ನವದ್ವಾರ ಉಲುಹಡಗಿದ ನಿಃಶಬ್ದವೆಂಬ ತಾಂಬೂಲವನಿತ್ತು, ಇಂತಪ್ಪ ಅಷ್ಟವಿಧಾರ್ಚನೆಯಿಂದರ್ಚಿಸಿ, ಪರಮಪರಿಣಾಮವಿಂಬುಗೊಂಡ ಪರಮ ಪ್ರಸಾದವನವಗ್ರಹಿಸಿ ಪರಮ ಸುಖಿಯಾಗಿಪ್ಪ ಮಹಾಶರಣರ ತೋರಿಸಿ ಬದುಕಿಸಾ ಸೌರಾಷ್ಟ್ರ ಸೋಮೇಶ್ವರಾ !!”

೬. ಜ್ಞಾನ ನಿಷ್ಪತ್ತಿ ಸ್ಥಳಂ

ನಿಷ್ಪತ್ತಿಲಿಂಗದ ಮೂರನೆಯ ನಿಲುವು ಜ್ಞಾನನಿಷ್ಪತ್ತಿಲಿಂಗ. ನಿಷ್ಪತ್ತಿಲಿಂಗದ ಚರಮಾಂಶ; ಅಂತರಂಗ. ಮನ ಘನವಾದಾಗ, ಭಾವ ಶಿವವಾದಾಗ ಜ್ಞಾನ ಪೂರ್ಣಗೊಂಡು ಪರಿಪಕ್ವವಾಗುವುದು ಅತಿಶಯವೇನಲ್ಲ; ಅಸಹಜವೇನಲ್ಲ; ಬಗೆಯ ಬಯಲಲ್ಲಿ ಅಚ್ಚ ಅರಿವಿನ ನೇಸರ ಮೂಡಿ ಮುಂಬೆಳಗಿ ತೊಳಗುವುದು, ತೊಳಗಿ ತುಂಬಿರುವುದು; ತುಂಬಿ ನಿಷ್ಪನ್ನವಾಗಿರುವುದು, ನಿಷ್ಪಂದವಾಗಿರುವುದು. ನಿಷ್ಕಳಂಕವಾಗಿರುವುದು; ನಿಶ್ಚಿತಾರ್ಥವುಳ್ಳುದಾಗಿರುವುದು. ನಿರುಪಮವಾಗಿರುವುದು. ನಿರಾಳವಾಗಿ ನಿರಾವರಣ ಕಾರಣವಾಗಿರುವುದು.

ಚಿತ್ಪೂರ್ಣಸ್ವರೂಪವೇ ಜ್ಞಾನನಿಷ್ಪತ್ತಿ. ಅದರಲ್ಲಿ ಚಿತ್ತ ಬುದ್ಧಿ ಅಹಂಕಾರ ಮನ ಜ್ಞಾನ ಜ್ಞಾತೃ ಎಲ್ಲವೂ ಅಜ್ಞಾನಾವರಣದಿಂದ ದೂರಾಗಿರುತ್ತವೆ; ನಿಶ್ಚಿತಾರ್ಥದ ನಿಲುಗಡೆಯಲ್ಲಿರುತ್ತವೆ. ಬೆಳ್ಳನೇ ಬೆಳಗಿರುತ್ತವೆ. ಪರಶಿವ ಪರಿಣಾಮ ಪ್ರಸಾದವಾಗಿರುತ್ತವೆ. ನೆರೆಯರಿದು ಮಾತು ಮೌನವಾಗಿರುತ್ತದೆ. ಕರಣೇಂದ್ರಿಯಗಳು ವಿಶ್ರಾಂತಿಗೊಂಡಿರುತ್ತವೆ.

"ಕಾಯ ಗುಣಂಗಳಳಿದು ಜೀವನ್ಮುಕ್ತನಾದ ಬಳಿಕ
ಸಮ್ಯಕ್‌ಜ್ಞಾನವೆಂಬುದೊಂದು ಶಾಂತಿಯು ದೊರಕೊಂಡಿತ್ತು.
ಅಂತರಂಗ ಬಹಿರಂಗವೆಂಬವನರಿಯನಾಗಿ
ದ್ವೈತಾದ್ವೈತವ ನಿಃಕರಿಸಿ ನಿರ್ವಾಣ ನಿಷ್ಪತ್ತಿಯಾಗಿ
ಗುಹೇಶ್ವರಾ ನಿಮ್ಮ ಶರಣನನುಪಮ ಸುಖಿಯಾಗಿದ್ದ."

ಇದೇ ಅಭಿಪ್ರಾಯವನ್ನು ಶಿವಾಚಾರ್ಯನ ಶಿವವಾಣಿಯಲ್ಲಿ ಸವಿಯೋಣ :

"ಪರಿಪೂರ್ಣೇ ಮಹಾನಂದೇ ಪರಮಾಕಾಶಲಕ್ಷಣೇ ।
ಶಿವೇ ವಿಲೀನಚಿತ್ತಸ್ಯ ಕಂತೋ ಜ್ಞೇಯಾಂತರೇ ಕಥಾ ॥೧॥

ಪರಶಿವನು ನಿತ್ಯಸತ್ತಾಸ್ವರೂಪನು. ಪರಿಪೂರ್ಣ ಚಿದ್ರೂಪನು. ಅಖಂಡಾನಂದಮಯ. ಪರಮಾಕಾಶ ಲಕ್ಷಣಲಕ್ಷಿತನು. ಅವನಲ್ಲಿ ಅವಿರಳವಾದ ಅಂತಃಕರಣವುಳ್ಳ ಶರಣನಿಗೆ ಅರಿಯಬೇಕಾದ ಬೇರೊಂದು ವಸ್ತುವಿರುವದಿಲ್ಲ. ಇದ್ದರೂ ಅರಿವ ಅಗತ್ಯವಿರುವುದಿಲ್ಲ. 'ತಸ್ಮಿನ್ ವಿಜ್ಞಾತೇ ಸರ್ವಂ ವಿಜ್ಞಾತಂ ಭವತಿ.'

ಶರಣನ ಜ್ಞಾನನಿಷ್ಪತ್ತಿ ಸ್ವಾಭಾವಿಕವಾದುದು. ತೆರಹಿಲ್ಲದೆ ತುಂಬಿದುದು. ಅಜ್ಞಾನ ಅನಿಶ್ಚಯಗಳಿಗೆ ಆದೆಷ್ಟೂ ಅವಕಾಶವಿಲ್ಲದುದು. ಅಸುಖಕ್ಕೆ ಅವಕಾಶವಿಲ್ಲದುದು. ಅದು ಅಲ್ಪಾಕಾಶವಲ್ಲ ; ಭೌತಾಕಾಶವನ್ನೊಳಗೊಂಡ ಭೌಮಾಕಾಶ.

ಶರಣನ ಸಮ್ಯಕ್‌ಜ್ಞಾನ ನಿಷ್ಪನ್ನತೆ ಸ್ವಪ್ನಜ್ಞಾನದಂತೆ ಅಳಿದು ಹೋಗುವುದಲ್ಲ ಅವಸ್ಥೆಗಳಿಂದ ವಿಷಯಗಳಿಂದ ಪರಿಮಿತವಾದುದಲ್ಲ ; ಪರಿವರ್ತಿತವಾಗುವುದಲ್ಲ. ಸರ್ವಾವಸ್ಥೆಗಳಲ್ಲಿಯೂ ತಾನೇ ತಾನಾಗಿ ಬೆಳಗುವಂತಹದು. ಸರ್ವ ವಿಷಯಗಳಲ್ಲಿ ಸ್ವಸ್ವರೂಪದಿಂದ ಪ್ರಸನ್ನವಾಗಿರುವಂತಹದು. ಅದು ಪರಿಪೂರ್ಣವಾಗಿರುವಾಗ ಅದಕ್ಕೆ ಬೇರೆಯೆಂಬುದೇನಿರಬಲ್ಲುದು ?

" ಅಖಂಡಾನಂದ ಸಂವಿತ್ತಿಸ್ವರೂಪಂ ಬ್ರಹ್ಮ ಕೇವಲಂ ।
ಸರ್ವಂ ತದ್ರೂಪಮಿತ್ಯೇಷಾ ಸ್ಥಿತಿಜ್ಞಾನ ಮಿಹೋಚ್ಯತೇ ॥೨॥"

ರೂಪಭೇದದಿಂದ ಜ್ಞಾನಭೇದ ; ಮತ್ತು ಜ್ಞಾನದ ಉದಯ ಬೆಳವಣಿಗೆ ಮರೆಯುವಿಕೆ ಅಳಿಯುವಿಕೆಗಳು ಸಂಭವಿಸುತ್ತವೆ. ರೂಪಾಖಂಡತೆಯಲ್ಲಿ ಜ್ಞಾನವೂ ಅಖಂಡವಾಗಿರುತ್ತದೆ. ಹುಟ್ಟು ಹೊಂದುಗಳಿರುವುದಿಲ್ಲ. ಉತ್ಪನ್ನಾದಿಗಳಿಲ್ಲದಂತಿರುವುದೆ ನಿಷ್ಪನ್ನತೆ. ಅಖಂಡ ಚಿದಾನಂದ ಸ್ವರೂಪವಾದುದು ಆ ಪರಶಿವ ಬ್ರಹ್ಮವೊಂದೆ ! ಸರ್ವಾಕಾರವೂ ಅದೇ ಆಗಿದೆ. ಅದರ ಆ ಅಖಂಡ ಸ್ವರೂಪ ಜ್ಞಾನವೇ ನಿಷ್ಪನ್ನಜ್ಞಾನ. ಜ್ಞಾತೃವಾದ ತಾನೂ ತದ್ರೂಪವಾದಾಗ ಸರ್ವ ಜಗತ್ತೂ ತದ್ರೂಪವಾದಾಗ ಬೇರೆ ಜ್ಞೇಯ ವಸ್ತುವೇ ಇರುವುದಿಲ್ಲ, ಶಿವನದು ಸರ್ವಜ್ಞಸ್ವರೂಪ. ಅದಾಗುವುದೇ ಪೂರ್ಣ ಪ್ರಜ್ಞೆ.

ಅಖಂಡಾನಂದ ಸಂವಿತ್ತಿ ಸ್ವರೂಪವೇ ಪರಶಿವನಿಗೆ ಪ್ರಧಾನ ಲಕ್ಷಣ. 'ವಿಜ್ಞಾನಮಾನಂದಂ ಬ್ರಹ್ಮ' ಎಂಬುದಾಗಿ ಶ್ರುತಿಮತವಿದೆ ; ಸ್ವಾನುಭವ

ಸಿದ್ಧಾಂತವೂ ಅದೇ ಆಗಿರುತ್ತದೆ. ಶಿವಾದ್ವೈತ ಸಿದ್ಧಾಂತ ಮತವೂ ಅದೇ ಆಗಿದೆ.

ಪರಶಿವನ ಆ ಚಿದಾನಂದ ಸ್ವರೂಪ ಖಂಡವಲ್ಲ ; ಅಖಂಡ. ಅಂತೆಯೇ ಅದು ಜ್ಞಾನ ಘನವಾಗಿದೆ ; ಆನಂದಘನವಾಗಿದೆ. ಸರ್ವಾತ್ಮವಾಗಿ ಸರ್ವ ಸತ್ತಾಸ್ವರೂಪವಾಗಿದೆ. ಏಕೆಂದರೆ ಎಲ್ಲ ಭೇದಗಳನ್ನೊಳಗೊಂಡ ಅಭೇದ ಸ್ವರೂಪವಾಗಿದೆ. ಭಿನ್ನ ರೂಪಗಳಲ್ಲಿ ಅಭಿನ್ನ ಸ್ವರೂಪದಿಂದ ಸಚ್ಚಿದಾನಂದವಾಗಿದೆ. ವ್ಯಷ್ಟಿರೂಪಗಳಲ್ಲೆಲ್ಲಾ ಸಮಷ್ಟಿಸ್ವರೂಪವೊಂದು ಹಾಸುಹೊಕ್ಕಾಗಿರುತ್ತದೆ. ವ್ಯಷ್ಟಿರೂಪಗಳೇ ದೃಷ್ಟಿದೋಷದಿಂದ ಅಶಿವ ರೂಪಗಳು; ಅಸ್ವಾಭಾವಿಕಗಳು. ಸಮಷ್ಟಿ ಸ್ವರೂಪವೇ ಶಿವಸ್ವರೂಪ ; ಸ್ವಾಭಾವಿಕ. ಅದು ಅಖಂಡಾನಂದ ಸಂವಿತ್ಸಾಧಕವಾಗುತ್ತದೆ. ಆಗ ಶರಣನಿಗೆ ಸರ್ವವೂ ಶಿವ ಸ್ವರೂಪವಾಗಿ ಕಾಣುವುದು. ಹಾಗಾಗಿ ಬೇರೆ ಅರಿಯಬೇಕಾದುದು ಇರುವುದಿಲ್ಲವಾಗಿ ಜ್ಞಾನವಿಶ್ರಾಂತಿಯುಂಟಾಗುತ್ತದೆ. ಅಲ್ಲದೆ ಸರ್ವರೂಪ, ಸರ್ವರಂಚಿ, ಸರ್ವಪರಿಣಾಮಗಳಿಂದುಂಟಾಗುವ ಸಮ್ಯಗ್‌ಜ್ಞಾನವನ್ನು ಶಿವನಿಗರ್ಪಿಸುವಿಕೆಯೂ ಜ್ಞಾನ ನಿಷ್ಪತ್ತಿಯೆನಿಸುತ್ತದೆ. ಪಂಚವಿಧ ಇಂದ್ರಿಯಾರ್ಥಗಳ ಜ್ಞಾನಾರ್ಪಣವೂ ಜ್ಞಾನನಿಷ್ಪತ್ತಿಯೆನಿಸುತ್ತದೆ. ಆಗ ಅಖಂಡಾನಂದ ಸಂವಿತ್ಸ್ವರೂಪವುಂಟಾಗುತ್ತದೆ. ಸರ್ವಶಿವಸ್ವರೂಪ ಸಮ್ಯಗ್‌ಜ್ಞಾನ ಸ್ವಾಭಾವಿಕವಾಗಿ ಸ್ವಾಯತ್ತವಾಗಿರುತ್ತದೆ.

“ ಸತ್ತಾತ್ಮನ್ಯಾನುವೃತ್ತಂ ಯದ್ಘಟಾದಿಷು ಪರಂ ಹಿ ತತ್ ।
ಪರಿಣಾಮಭಾವೇನ ಹಿ ಸ್ಥಿತಿರ್ಜ್ಞಾನಮಿಹೋಚ್ಯತೇ ॥೩॥

ಆ ಪರವಸ್ತು ಸತ್ತಾತ್ಮಕವಾಗಿದೆ. ಜಗತ್ತಿನಲ್ಲಿರುವ ಘಟಪಟಾದಿ ಎಲ್ಲ ದ್ರವ್ಯಗಳು ಆ ಸತ್ತಾತ್ಮಕ ವಸ್ತುವಿನ ಅಂಶಗಳಾಗಿವೆ ; ಅದರ ಪರಿಣಾಮಗಳಾಗಿವೆ. ಅದರಿಂದ ಜಾಗತಿಕ ದ್ರವ್ಯಗಳೆಲ್ಲವೂ ಸತ್ತಾಸ್ವರೂಪವಾಗಿವೆ ; ಸತವಾಗಿವೆ ಎಂದು ನೆರೆ ಅರಿವುದೇ ಜ್ಞಾನವೆನಿಸುತ್ತದೆ ಶಿವಾದ್ವೈತ ಸಿದ್ಧಾಂತದಲ್ಲಿ !

ಜಾಗತಿಕ ಸತ್ಯಜ್ಞಾನವೇ ಶಿವಾದ್ವೈತ ಸಮ್ಯಕ್‌ಜ್ಞಾನ. ಅದೇ ಅಖಂಡ ಜ್ಞಾನ. ಅದು ಉಂಟಾದ ಬಳಿಕ ಅರಿಯಬೇಕಾದುದು ಇರುವುದಿಲ್ಲವಾಗಿ ಜ್ಞಾನ ವಿಶ್ರಾಂತಿ ಸಹಜವಾಗಿ ಸಿದ್ಧಿಸುತ್ತದೆ. ಅದು ಸತ್ಯ, ಇದು ಸತ್ಯ ; ಸತ

ದಿಂದ ಸತ್ಯ ಸಂಭವಿಸಿದೆ. ಸತ್ಯವಾಗಿದೆ ; ಸತ್ಯದಲ್ಲಿಯೇ ಸಮರಸವಾಗುತ್ತದೆ. ಈ ಸತ್ಯ ಜ್ಞಾನದಿಂದ ಜ್ಞಾನಕ್ಕೆ ಪೂರ್ಣತೆ ಪ್ರಾಪ್ತವಾಗುತ್ತದೆ. ಸ್ವಾಭಾವಿಕ ಸತ್ಯದ ಸ್ವರೂಪ ಸಂವಿತ್ತಿಯಾಗುತ್ತದೆ. ಸಂಪೂರ್ಣಾನಂದವೂ ಸಮನಿಸುತ್ತದೆ.

ಈ ಜಗತ್ತೆಲ್ಲವೂ ಆ ಪರವಸ್ತುವಿನ ಅವಿಕೃತ ಪರಿಣಾಮವೇ ಹೊರತು ಬೇರಲ್ಲ. ರೂಪ ನಾಮಗಳ ಭೇದವಿದ್ದರೂ ಸ್ವರೂಪ ಭೇದವಿಲ್ಲ. ಸಕ್ಕರೆಯ ಬೊಂಬೆಗಳಲ್ಲಿ ರೂಪನಾಮಗಳ ಭೇದವಿದೆಯಾದರೂ ಸಕ್ಕರೆ ಬೇರೆಯಲ್ಲ; ಒಂದೇ ! ಅಂತೆಯೇ ಜಾಗತಿಕ ಘಟಾದಿ ದ್ರವ್ಯನಿಷ್ಠ ಸತ್ತಾಭಾವ ಅದೊಂದೇ! ಅದೂ ಪರವಸ್ತುವೇ !

ಭೋಗವಸ್ತು ಸತ್ತಾಸ್ವರೂಪವಾಗಿದ್ದಂತೆ ಭೋಕ್ತೃವಾದ ತಾನೂ ಆ ಸ್ವರೂಪನೆಂದು ಯಾವ ಸಂಶಯವಿಲ್ಲದೆ ಅರಿಯಬೇಕು. ಆಗ ಅಖಂಡಾನಂದ ವುಂಟಾಗುತ್ತದೆ.

“ ಸಮ್ಯಗ್ಜ್ಞಾನಮಹಂ ಸಾಕ್ಷಾಚ್ಛಿವ ಏವೇತಿ ವೇದನಂ ।
ವೇದನೇನೈವ ತೇನಾಯ ಮಾಪ್ತಕಾಮಃ ಸುಖೀ ಭವೇತ್ ॥೪॥
‘ ಶಿವರೂಪತಯಾ ಸರ್ವಂ ಯಸ್ಯ ಭಾತಿ ಸ್ವರೂಪತಃ ।’
‘ಅಹಮಿತಿ ಶಿವ ಏವ ಸತ್ಯಚಿದ್ಘನಃ ಸ್ಫುರತಿ
ತದಾ ಪೃಥುಗಸ್ತಿ ನೈವ ವಸ್ತು ।
ಇದಮಿತಿ ವಪುಷಾ ನ ತೇನ ಬಂಧನಂ
ನ ಹಿ ಶರಣಸ್ಯ ವಿಮೋಚನಂ ಚ ಕಿಂಚಿತ್ ॥”

—ಶಿವಾನುಭವಸೂತ್ರ, ಅಧಿ—೮.

ಭೋಕ್ತೃ ಭೋಗಗಳ ಸತ್ತಾತ್ಮಕ ಸಂವಿತ್ತಿಯುಂಟಾಗುವುದೇ ಪೂರ್ಣಪ್ರಜ್ಞೆ. ಅದೇ ಸಂವಿದ್ವಿಶ್ರಾಂತಿ. ಅದುಂಟಾದ ಶರಣನಿಗೆ ಬಂಧ ಮೋಕ್ಷಗಳ ಸಂಬಂಧವಿಲ್ಲ.

“ಜ್ಞಾತಾ ಚಾಹಂ ಜ್ಞೇಯಮಿದಮಿತಿ ವ್ಯವಹೃತಿಃ ಕುತಃ ।
ಅಭೇದ ಬ್ರಹ್ಮಸಾರಸ್ಯೇ ನಿರಸ್ತಾಖಿಲ ವಸ್ತುನಿ ॥೪॥”

ವಸ್ತುಭೇದಗಳನ್ನೆಲ್ಲ ವಿಸರ್ಜಿಸಿ ಅಖಂಡಬ್ರಹ್ಮವಸ್ತುವಿನ ಸಮ್ಯಗ್‌ಜ್ಞಾನ ವುಂಟಾದ ಶರಣನಲ್ಲಿ ನಾನು ಜ್ಞಾತೃ, ಅದು ಜ್ಞೇಯ ಎಂಬ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ. ತ್ರಿಪುಟಿಭಾವವಿರುವುದಿಲ್ಲ. ಅದೇ ಜ್ಞಾನ ನಿಷ್ಪತ್ತಿ.

"ಮಹಾನಾದ ಕಳೆಯೇ ಲಿಂಗಕ್ಕಾಶ್ರಯವಾಗಿ,
ಲಿಂಗದ ಕಳೆಯೇ ಹೃದಯಕ್ಕಾಶ್ರಯವಾಗಿ,
ಹೃದಯದ ಕಳೆಯೇ ಜ್ಞಾನಕ್ಕಾಶ್ರಯವಾಗಿ,
ಜ್ಞಾನದ ಕಳೆಯೇ ನಿತ್ಯಕ್ಕಾಶ್ರಯವಾಗಿ,
ನಿತ್ಯನಿರವಯ ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ, ಇಲ್ಲ."

ಆ ಮಹಾನಾದವೆ ಪರಶಿವನ ಚಿತ್ಕಳೆ. ಗುರುವರನ ಕರುಣೆಯಿಂದ ಅದು ಕ್ರಿಯಾಲಿಂಗದ ಚೈತನ್ಯವಾಗುತ್ತದೆ. ಈ ಕ್ರಿಯಾಲಿಂಗ ಚೈತನ್ಯಕಳೆಯೇ ಜ್ಞಾನಲಿಂಗ (ಭಾವಲಿಂಗ)ಕ್ಕೆ ಆಶ್ರಯವಾಗಿರುತ್ತದೆ. ಜ್ಞಾನಲಿಂಗದ ಚೈತನ್ಯ ಕಳೆಯೇ ನಿತ್ಯವಾದ ಮಹಾಲಿಂಗಕ್ಕೆ ಚೈತನ್ಯವಾಗಿರುತ್ತದೆ. ಜ್ಞಾನಲಿಂಗವೇ ಮಹಾಲಿಂಗವಾಗಿ ನಿತ್ಯನಿರವಯವಾಗಿ ಉಭಯಾಂಗಗಳಲ್ಲಿ ಭಿನ್ನವಿಲ್ಲದಿರುತ್ತದೆ. ಅಂದರೆ ಜ್ಞಾತೃವೇ ಜ್ಞೇಯವಾದ ಬಳಿಕ ಜ್ಞಾತೃಜ್ಞಾನಗಳಿರಲು ಸಾಧ್ಯವಿಲ್ಲ ವಾಗಿ ಜ್ಞಾನ ನಿಷ್ಪತ್ತಿಗೊಂಡಿರುತ್ತದೆ. ನೆನಹು ನಿಷ್ಪತ್ತಿಗೊಳ್ಳುತ್ತದೆ. ನೆನವಮನ, ಅರಿವ ಜ್ಞಾನಕರಣ-ವಸ್ತುಸ್ವರೂಪವಾದ ಬಳಿಕ ನೆನೆವವರಾರು, ನೆನೆಹಿಸಿಕೊಂಬು ವವರಾರು? ಅರಿವುದಾವುದು, ಅರುಹಿಸಿಕೊಂಬುವವರಾರು? ಆವುಳ್ಳವ ರಾರು? ಎಲ್ಲವೂ ಏಕರಸವಾಗಿ ನಾಮರೂಪುಕ್ರಿಯೆ ಪ್ರಜ್ಞೆ ಎಲ್ಲವೂ ನಿಷ್ಪತ್ತಿ ಗೊಳ್ಳುತ್ತವೆ. ಅಂದರೆ ಕ್ರಿಯಾನಿಷ್ಪತ್ತಿಯಿಂದ ಕ್ರಿಯಾಲಿಂಗವೆಂಬ ನಾಮವೂ ನಿಷ್ಪತ್ತಿಗೊಳ್ಳುತ್ತದೆ. ಅಂತೆಯೇ ಪ್ರಾಣಲಿಂಗ-ಭಾವಲಿಂಗಗಳ ನಾಮಗಳೂ ನಿಷ್ಪತ್ತಿಗೊಳ್ಳುತ್ತವೆ.

"ಅಂಗದ ಮೇಲಣ ಲಿಂಗ ಪ್ರಾಣದ ಮೇಲೆ ಬಾದು
ನಿಲ್ಲುವನ್ನಕ್ಕ ಪೂಜಿಸಬೇಕು.
ಪ್ರಾಣದ ಮೇಲಣ ಅರಿವು ಕರಿಗೊಂಬನ್ನಕ್ಕ ನೆನೆಯಬೇಕು.
ನೆನಹು ನಿಷ್ಪತ್ತಿಯಾದ ಮತ್ತೆ ಈಶಾನ್ಯ-
ಮೂರ್ತಿ ಮಲ್ಲಿಕಾರ್ಜುನಲಿಂಗವೆಂಬ ನಾಮವಡಗಿತ್ತು."

ಕ್ರಿಯಾನಿಷ್ಪತ್ತಿ ಜ್ಞಾನದಲ್ಲಿ, ಜ್ಞಾನನಿಷ್ಪತ್ತಿ ಧ್ಯಾನದಲ್ಲಿ, ಧ್ಯಾನನಿಷ್ಪತ್ತಿ ಧಾರಣದಲ್ಲಿ ಧಾರಣವಿಶ್ರಾಂತಿ ಲಿಂಗಾಂಗಸಾಮರಸ್ಯದಲ್ಲಿ. ಆಗ ಯಾವ ನಾಮ ನೇಮಗಳಿಲ್ಲ; ಚಲುವು ಒಲವುಗಳಿಲ್ಲ. ಅರ್ಚನ ಅರಿವುಗಳಿಲ್ಲ. ಎಲ್ಲವೂ ವಿಶ್ರಾಂತಿಗೊಂಡಿರುತ್ತವೆ. ಆ ಪರಮಾಕಾಶದಲ್ಲಿ ಪರಿಣಾಮಗೊಂಡಿರುತ್ತವೆ. ಶೂನ್ಯ ನಿಶ್ಶೂನ್ಯ ವಸ್ತುವಿನ ಗರ್ಭದಲ್ಲಿ ಅಡಗುತ್ತವೆ.

“ ಬೆಂಕಿಗೆ ಉರಿ ಮೊದಲೋ, ಹೊಗೆ ಮೊದಲೋ,
ಎಂಬುದನರಿದಲ್ಲಿ ಇಷ್ಟಲಿಂಗಸಂಬಂಧಿ.
ಉಭಯವನರಿದಲ್ಲಿ ಪ್ರಾಣಲಿಂಗಸಂಬಂಧಿ.
ಆ ಉಭಯ ನಷ್ಟವಾದಲ್ಲಿ ಏನೂ ಎನಲಿಲ್ಲ ಜಾಂಬೇಶ್ವರಾ.”

ಹೊಡೆಗಿಚ್ಚಿಗೆ ಹೊಗೆ ಮೊದಲು; ಬಳಿಕ ಉರಿ. ಅಂತೆಯೇ ಚೈತನ್ಯಕ್ಕೆ ಅಥವಾ ಅಂಗಕ್ಕೆ ಕ್ರಿಯೆ ಮೊದಲು; ಬಳಿಕ ಜ್ಞಾನ. ಎಂದರಿದರೆ ಅಂದರೆ ಇಷ್ಟಲಿಂಗದ ಕ್ರಿಯೆಯಿಂದಲೇ ಪ್ರಾಣಲಿಂಗವು ಪ್ರಭಾವಿಸುವುದೆಂದು ತಿಳಿದರೆ ಅದು ಇಷ್ಟಲಿಂಗಸಂಬಂಧ. ಉಭಯ ಸಮನ್ವಯಗೊಂಡಿರುವುದೇ ಪ್ರಾಣಲಿಂಗ ಸಂಬಂಧ. ಕ್ರಿಯಾ–ಜ್ಞಾನಗಳೆರಡೂ ವಿಶ್ರಾಂತಿಗೊಂಡಿರುವುದೇ ಶೂನ್ಯ ಸಂಪಾದನೆ. ಅಂದರೆ ಪ್ರಾಣ ಮತ್ತು ಲಿಂಗರೂಪ ಚೇತನ ಒಂದೇ ಆಗಿ ಸನ್ನಿಹಿತ ಸಂಬಂಧವುಳ್ಳವಾದಾಗ ಕ್ರಿಯೆಯನ್ನು ಹಿಡಿದು ಆಚರಿಸಬೇಕೆಂಬುದಿಲ್ಲ; ಜ್ಞಾನವಿಡಿದು ವಿಚಾರಿಸಬೇಕೆಂಬುದಿಲ್ಲ. ಉಭಯವೂ ಶೂನ್ಯಗರ್ಭವನ್ನು ಸೇರುತ್ತವೆ. ನಿಶ್ಶೂನ್ಯ ಸ್ವರೂಪವಾಗುತ್ತವೆ.

“ ಕಾಷ್ಠದ ಕೆಂಡದಂತೆ ಹೊರೆ ಇಲ್ಲದೆ ಇಪ್ಪೆಯಯ್ಯ !
ಬೆಂಕಿಯ ಬೆಳಗಿನಂತೆ ನೀನಿಪ್ಪೆಯಯ್ಯ !
ಇದು ಕಾರಣ, ನಿಮ್ಮ ಕಂಡಾ ಪರಮಜ್ಞಾನಿ
ನಿಮ್ಮೊಳಗೆ ಗುಹೇಶ್ವರಾ!”

ಕಟ್ಟಿಗೆಯಲ್ಲಿ ಕಿಚ್ಚು, ಬೆಂಕಿಯಲ್ಲಿ ಬೆಳಗು ಹೊರೆಯಿಲ್ಲದೆ ತುಂಬಿಕೊಂಡು ಬೇರಿಲ್ಲದಂತೆ ಶರಣನ ಆತ್ಮಾಂಗದಲ್ಲಿ ಚಿತ ರಮಲಿಂಗವು ಬೇರಾಗದೆ ತೆರಹಿಲ್ಲದೆ

ಇರುತ್ತದೆ. ಸಮ್ಯಗ್‌ಜ್ಞಾನವುಳ್ಳ ಶರಣನು ಸಮ್ಯಗ್‌ಜ್ಞಾನಸ್ವರೂಪಲಿಂಗವೆ ಆಗಿರುತ್ತಾನೆ. ಅಂದರೆ ಜ್ಞಾತೃತ್ವ ಜ್ಞೇಯತ್ವಗಳು ವಿಶ್ರಾಂತಿಗೊಳ್ಳುತ್ತವೆ. ಹೇಗೆಂದರೆ ಕಾಷ್ಠದೊಳಗಿನ ಕಿಚ್ಚು ಹೊಮ್ಮಿ ಕಾಷ್ಠವೆಲ್ಲ ಕಿಚ್ಚಾಗಿ ಆಮೇಲೆ ಕಿಚ್ಚು ಕಾಣದಂತಾಗುತ್ತದೆ. ಹಾಗಾದರೂ ಅವೆರಡೂ ಪೂರ್ಣನಷ್ಟವಾಗುವುದಿಲ್ಲ. ಪರವಸ್ತುವಿನಲ್ಲಿ ಪ್ರಲೀನವಾಗುತ್ತವೆ. ಇಲ್ಲಿ ಇನ್ನೊಂದು ವಿಚಾರವಿದೆ. ಕಾಷ್ಠದೊಳಗಿನ ಕಿಚ್ಚು ಹೊರಹೊಮ್ಮದ ಮುನ್ನ ಕಿಚ್ಚೆಲ್ಲ ಕಾಷ್ಠವಾಗಿದ್ದಿತು. ಬಳಿಕ ಕಾಷ್ಠವೆಲ್ಲ ಕಿಚ್ಚಾಗುತ್ತದೆ. ಆ ಕಿಚ್ಚನ್ನೆಲ್ಲ ಪ್ರಕಾಶ ತುಂಬಿಕೊಂಡಿರುತ್ತದೆ. ಅಂತೆಯೇ ಜ್ಞಾನನಿಷ್ಪತ್ತಿಯಲ್ಲಿ ಶರಣಾಂಗನು ಪರಿಪೂರ್ಣ ಚಿತ್ಕಳಾಸ್ವರೂಪನಾಗಿರುತ್ತಾನೆ.

“ ಹುರಿದು ಬಿತ್ತಿದ ಬೀಜ ಮೊಳೆದೋರದಂತೆ,
ಜ್ಞಾನ ಕಾಯಂಗೆ ಬಹುಕಾಯವಿಲ್ಲ. ಅರಿವಿನ ಮುಂದಿನ
ಕುರುಹು ಅರಿವನವಗ್ರಹಿಸಿ ಜ್ಞಾನ ನಿಷ್ಪತ್ತಿಯಾಯಿತ್ತು.
ಸೌರಾಷ್ಟ್ರ ಸೋಮೇಶ್ವರಲಿಂಗವೆಂಬ ಕುರುಹು ಮರೆದ ಕಾರಣ
ನಿಶ್ಶೂನ್ಯ ನಿರ್ಗಮನವಾಯಿತ್ತು.”

“ ಅಂಗದ ಮೇಲೆ ಲಿಂಗಸಂಬಂಧವಾದ ಬಳಿಕ
ಪ್ರಾಣನ ಮೇಲೆ ಜ್ಞಾನ ನಿರ್ಧರವಾಯಿತ್ತು-ನೋಡಾ !
ಒಳಗು ಹೊರಗು ಎಂಬ ಉಭಯವು ಏಕಾರ್ಥವಾಯಿತ್ತು
ಗುಹೇಶ್ವರಾ ನಿಮ್ಮ ನೆರೆದೆನಾಗಿ !”

ಕಾಷ್ಠದ ಮೇಲೆ ಕೆಂಡ ಬಾರದೆ ಕಾಷ್ಠ ಕಿಚ್ಚಾಗದು. ಅಂಗದ ಮೇಲೆ ಲಿಂಗ ಬಾರದೆ (ಧಾರಣವಾಗದೆ) ಜ್ಞಾನ ಪ್ರಾಣದಲ್ಲಿ ಪ್ರಕಾಶಿಸದು. ಕಾಷ್ಠದಾಶ್ರಯದಲ್ಲಿ ಕಿಚ್ಚು ಪ್ರಕಾಶಿಸುವಂತೆ ಕ್ರಿಯಾಂಗದಾಶ್ರಯದಲ್ಲಿ ಜ್ಞಾನಪ್ರಭೆ ಪ್ರಕಾಶಿಸುತ್ತದೆ. ಅಂತರಂಗವೆಂಬ ಭೇದವಿಲ್ಲದಂತೆ ಮಾಡುತ್ತದೆ, ಸಮ್ಯಗ್ ಜ್ಞಾನಿಯ ಬಹಿರಂಗವೂ ದೃಕ್ಕ್ರಿಯಾದೀಪ್ತಿಯಾಗಿ ಬೆಳಗುತ್ತದೆ.

"ಒಳಗೆ ಸಾಧಿಸಿ, ಹೊರಗೆ ಧವಳಿಸಿ,
ಭಾವದಿಂದ ಗುಡಿ ತೋರಣವ ಕಟ್ಟಿದೆನಯ್ಯ;
ಲಿಂಗಬಾರಯ್ಯ, ಎನ್ನದೇವ ಬಾರಯ್ಯ;
ಅಂತರಂಗದ ಪರಂಜ್ಯೋತಿಯನಿದಿರುಗೊಂಬೆ-
ಎನ್ನ ಮಹಾಲಿಂಗ ಗಜೇಶ್ವರಯ್ಯನ !"

ನಿಷ್ಪತ್ತಿಯೊಳಗಿನ ನಿಜದ ನಿರತಿಶಯವಾದ ಹೃದಯ ಹಂಬಲವಿದು. ಆ ಪರಂಜ್ಯೋತಿಗಾಗಿ ಇದಿರುಗೊಂಡು ನಿಂತಿದೆ ನಿಷ್ಪತ್ತಿಗೊಂಡ (ಪರಿಪಕ್ವಗೊಂಡ) ಅಂಗ. ಸಾಧಿಸಿ ಶೋಧಿಸಿ ಧವಳಿಸಿ ಗುಡಿತೋರಣ ಕಟ್ಟಿ ಕರೆಯುತಿದೆ ಒಳ್ಗರುಳು. 'ಎನ್ನ ದೇವ ಬಾರಯ್ಯ' ಎನ್ನುತಿದೆ ತುಂಬಿದೆದೆ, ಈ ಭಾವದ ಭರವನ್ನು ಈ ಭಕ್ತಿಯ ಭರವನ್ನು ನಮ್ಮ ಭಾಷೆಯಲ್ಲಿ ಬಿಚ್ಚದೆ ಭಕ್ತಿಭಾವದ ಪರಾಕಾಷ್ಠತೆಯಲ್ಲಿದ್ದು ಹಮ್ಮೈಸಿದ ಬಸವಣ್ಣನವರ ಭಾವಾವೇಶದ ವಚನ ವಾಣಿಯಲ್ಲಿ ಬಿಚ್ಚೋಣ:

"ಎನ್ನ ಗಂಡ ಬರಬೇಕೆಂದು ಎನ್ನಂತರಂಗವೆಂಬ
ಮನೆಯ ತೆರಹು ಮಾಡಿ, ಅಷ್ಟದಳ ಕಮಲವೆಂಬ
ಓವರಿಯೊಳಗೆ ನಿಜನಿವಾಸವೆಂಬ ಹಾಸಿಗೆಯ ಹಾಸಿ,
ಧ್ಯಾನಮೌನವೆಂಬ ಮೇಲುಕಟ್ಟು ಕಟ್ಟಿ
ಜ್ಞಾನವೆಂಬ ದೀಪವ ಬೆಳಗಿ,
ನಿಷ್ಕ್ರಿಯೆಗಳೆಂಬ ಉಪಕರಣಂಗಳ ಹರಹಿಕೊಂಡು
ಪಶ್ಚಿಮದ್ವಾರವೆಂಬ ಬಾಗಿಲ ತೆಗೆದು,
ಕಂಗಳೇ ಪ್ರಾಣವಾಗಿ ಹಾರುತಿದ್ದೆನಯ್ಯ !
ನಾನು ಬಾರೆನೆಂದು ಉಮ್ಮಳಿಸಿಹೆನೆಂದು
ತಾನೇ ಬಂದು ಎನ್ನ ಹೃದಯ ಸಿಂಹಾಸನದ ಮೇಲೆ
ಮೂರ್ತಿಗೊಂಡಡೆ ಎನ್ನ ಮನದ ಬಯಕೆ ಸಯವಾಯಿತ್ತು.
ಹಿಂದೆ ಹನ್ನೆರಡು ವರ್ಷದಲ್ಲಿ ಚಿಂತೆಯಿಂದ ನಿಶ್ಚಿಂತವಾಯಿತ್ತು.
ಕೂಡಲಸಂಗಮದೇವ, ಕೃಪಾಮೂರ್ತಿಯಾದ ಕಾರಣ
ನಾನು ಬದುಕಿದೆನು.

೭. ಪಿಂಡಾಕಾಶ ಸ್ಥಳಂ

ಪಾದೋದಕಲಿಂಗ, ನಿಷ್ಪತ್ತಿಲಿಂಗಗಳೆರಡರ ಒಳಲಿಂಗಗಳಾರರ ನಿರೂಪಣೆಯಾದ ಬಳಿಕ ಅದೇ ಪ್ರಸಾದ ಲಿಂಗದೊಳಗಿನ ಮೂರನೆಯದಾದ 'ಆಕಾಶಲಿಂಗ'ದೊಳಗಿನ ಪಿಂಡಾಕಾಶಸ್ಥಳದ ವಿಚಾರ ಇದೀಗ ಕ್ರಮಪ್ರಾಪ್ತವಾಗಿದೆ. ಇದು ಆಕಾಶಲಿಂಗದ ಆರಂಭಸ್ಥಳ, ಜ್ಞಾನನಿಷ್ಪತ್ತಿಲಿಂಗದ ಬೆಂಬಳಿವಿಡಿದು ಬಂದಿರುವ ಸ್ಥಳ. ನಿಷ್ಪತ್ತಿಲಿಂಗವಿಡಿದು ಆಕಾಶಲಿಂಗ ಬರುತ್ತದೆ, ಜ್ಞಾನನಿಷ್ಪತ್ತಿವಿಡಿದು ಪಿಂಡಾಕಾಶ ಸ್ಥಳ ಪರಿಣಮಿಸುತ್ತದೆ. ವಿಶ್ರಾಂತಿಗೊಂಡ ಸಮ್ಯಗ್ ಸಂವಿತ್ತಿ ಆಕಾಶದಂತೆ ಪಿಂಡದಲ್ಲಿ ಪರಿಪೂರ್ಣವಾಗಿ ಹಬ್ಬಿರುತ್ತದೆ. ಅಂತಾದಾಗ ಅದುವೇ ಪಿಂಡಾಕಾಶಸ್ಥಳವೆನಿಸುತ್ತದೆ. ಆಗ ಶರಣನ ಚಿತ್ಪಿಂಡದಲ್ಲಿರುವ ಆಕಾಶ ಭೂತಾಕಾಶವಲ್ಲ; ಪರಮಾಕಾಶ. ಶರಣನದು ಮಾಂಸಪಿಂಡವಲ್ಲ, ಮೃತ್ಪಿಂಡವಲ್ಲ; ಚಿತ್ಪಿಂಡ. ಶರಣನ ಆ ಪಿಂಡದಲ್ಲಿ ಆಕಾಶಕ್ಕೆ ಆಕಾಶವಾದ ಆ ಚಿತ್ಪ್ರಕಾಶ ತೆರಹಿಲ್ಲದೆ ತುಂಬಿ ಪಿಂಡಸ್ಥ ಪಂಚಭೂತಗಳನ್ನು ಚಿದ್ರೂಪವನ್ನಾಗಿಸುತ್ತದೆ.

ಭಕ್ತನು ಪೃಥ್ವ್ಯಂಶವನ್ನು, ಮಾಹೇಶ್ವರನು ಜಲಾಂಶವನ್ನು, ಪ್ರಸಾದಿಯು ತೇಜಾಂಶವನ್ನು, ಪ್ರಾಣಲಿಂಗಿಯು ವಾಯ್ವಂಶವನ್ನು, ಸತ್-ಚಿತ್-ಸುಖ-ನಿತ್ಯಸ್ವರೂಪಗಳನ್ನಾಗಿ ಮಾಡಿದ್ದರೆ ಶರಣನು ಉಳಿದ ಆಕಾಶಾಂಶವನ್ನು ತನ್ನ ಜ್ಞಾನನಿಷ್ಪತ್ತಿಯಿಂದ ಪರಿಪೂರ್ಣವನ್ನಾಗಿಸುತ್ತಾನೆ. ಅಂದರೆ ಪರಮಾಕಾಶ ಸ್ವರೂಪವಾದ ಪ್ರಸಾದಲಿಂಗವನ್ನು ಪಿಂಡಾಕಾಶವನ್ನಾಗಿಸುತ್ತಾನೆ. ವಿದ್ಯುತ್ಪ್ರಕಾಶಕ್ಕೆ ಆಕಾರವಿಲ್ಲದಿದ್ದರೂ ಬಲ್ಬಿನೊಳಗೆ ಬಂದು ಬಲ್ಬಿನಾಕಾರವಾಗಿ ತೋರುವಂತೆ ಆ ಚಿದಾನಂದ ಪರವಸ್ತು ಶರಣನೆಂಬ ಪಿಂಡದಲ್ಲಿ ಪಜ್ವಳಿಸಿ ಪಿಂಡಾಕಾಶಸ್ಥಳವಾಗುತ್ತದೆ. ಅಂದರೆ ಶರಣನಲ್ಲಿ ನಿಷ್ಪತ್ತಿಗೊಂಡ ಮಹಾಜ್ಞಾನವು ಪಿಂಡಾಕಾಶದ ನಿಲವಿನಲ್ಲಿ ನೆಲೆಗೊಂಡಿರುತ್ತದೆ.

" ಮರದೊಳಗೆ ಮಂದಾಗ್ನಿಯನುರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ.
ಶರೀರದೊಳಗಾತ್ಮನನಾರೂ ಕಾಣದಂತಿರಿಸಿದೆ
ನೀ ಬೆರಸಿದ ಭೇದಕ್ಕೆ ಬೆರಗಾಡೆನಯ್ಯ ರಾಮನಾಥ."

ಶರಣನೊಳಗಿರುವ ಆ ಪರಾನಂದ ಜ್ಯೋತಿಯು ನೊರೆವಾಲೊಳಗೆ ನರುಗಂಪಿನ ತುಪ್ಪವಿರುವಂತೆ ಇರುತ್ತದೆ. ಮರದೊಳಗೆ ಉರಿಯಿರುವಂತೆ ಇರುತ್ತದೆ. ಇದ್ದರೂ ಇದ್ದು ಬೆಳಗುತ್ತಿದ್ದರೂ ಇನ್ನೊಬ್ಬರಿಗೆ ಕಾಣದಂತಿರುತ್ತದೆ. ನಿಜ ಶರಣಪಿಂಡ ಚಿತ್ಪಿಂಡ; ಪೂರ್ಣಪಿಂಡ.

"ಸ್ವಕಾಯದಂತರ್ಗತದಲ್ಲಿ ಚಿದಾಕಾಶದಲ್ಲಿ
ನಿರ್ಮಲತೆಯಿಂ ಪರಮಹಂಸನು,
ಶ್ರದ್ಧೆ ನಿಷ್ಠೆ ಸಾವಧಾನದಿಂದದ್ರಿಜೆಯ ಪತಿಯಪ್ಪ
ಪರಶಿವಲಿಂಗವಮಂ ವೇಧಿಸಿ
ತಿಥಿ ವಾರ ನಕ್ಷತ್ರ ಯೋಗ ಕರಣಂಗಳೆಂಬ ಶಂಕೆಗೆಟ್ಟು
ಹೃತ್ಕಮಲ ಮಧ್ಯದಲ್ಲಿ ಮಹಾಪ್ರಕಾಶ ಉದಯಿಸಲು.
ಇದಕ್ಕೆ ಶ್ರುತಿ : "ಹಂಸಃ ಶುಚಿಃ ಸದ್ವಸುರಂತರಿಕ್ಷ ಸದ್ಧೋತಾ ।
ವೇದಿ ಸದತಿಥಿರ್ದುರೋಣಸತ್ ।
ನೃಷದ್ವರ ಸದೃತ ಸದ್‌ವ್ಯೋಮ ಸದಬ್ಜಾ ಗೋಜಾ ।
ಋತಜಾ ಅದ್ರಿಜಾ ಋತಂ ಬೃಹತ್ ॥"

ಇಂತೆಂದುದಾಗಿ, ಸದಾ ಸದ್ವ್ಯೋಮ ವ್ಯಕ್ತದಿಂ
ಸೌರಾಷ್ಟ್ರ ಸೋಮೇಶ್ವರ ಲಿಂಗವೆ
ತಾವಾಗಿಪ್ಪರಯ್ಯ ಪರಮಸ್ವಭಾವಿಗಳು !"

ಶ್ರುತ್ಯರ್ಥವಿದು: ಹಂಸಃ– ಪರಮಹಂಸನು ಶುಚಿಃ– ನಿರ್ಮಲತ್ವದಿಂದೆ ಸತ್–ಇದ್ದುದಾಗಿ, ವಸುಃ–ಜ್ಞಾನಾಗ್ನಿರೂಪನಾಗಿ ಅಂತರಿಕ್ಷ-ಚಿದಾಕಾಶದಲ್ಲಿ ಸತ್-ಇದ್ದುದಾಗಿ, ಹೋತಾ ಸಕಲಸುಖವನ್ನು ಮಹಾಲಿಂಗಕ್ಕೆ ಕೊಟ್ಟಾತ

ನಾಗಿ, ವೇದಿಸತ್–ವೇದಿಸಿ ಇರ್ದಂಥ, ಅತಿಥಿ-ತಿಥಿ ವಾರ ನಕ್ಷತ್ರ ಯೋಗ ಕರಣಂಗಳೆಂಬ ಶಂಕೆ ಇಲ್ಲದಂಥ, ದುರೋಣ ತನ್ನ ಕಾಯುವೆಂಬ ಮನೆಯಲ್ಲಿ ಸತ್-ಇದ್ದಂಥ, ನೃ-ಪರಬ್ರಹ್ಮವಾದಂಥ ಪರಶಿವನಲ್ಲಿ ಸತ್-ಇದ್ದುದಾಗಿ, ವ್ಯೋಮ ಹೃದಯಾಕಾಶದಲ್ಲಿ ಸತ್-ಇದ್ದಂತಾದ್ದಹುದು. ಅಬ್ಜಾ-ನಿಷ್ಠಾ ಭಕ್ತಿಯಿಂದ ಗೋಜಾ-ಶ್ರದ್ದಾಭಕ್ತಿಯಿಂದಲೂ ಸಾವಧಾನಾದಿಭಕ್ತಿಯಿಂದಲೂ ಅದ್ರಿಜಾಯುತಂ-ಪಾರ್ವತೀಪತಿಯಪ್ಪ ಪರಶಿವಲಿಂಗವನ್ನು ಬೃಹತ್-ದೊಡ್ಡಿತ್ತಾದುದನ್ನಾಗಿ ತನ್ನ ಪಿಂಡದಲ್ಲಿ ಪರಿಭಾವಿಸುವುದು,

ಘನಕ್ಕೆ ಘನವಾದ ಆ ಪರಾಕಾಶಸ್ವರೂಪ ಪರಶಿವಲಿಂಗವು ಮೂರಾಗಿ ಆರಾಗಿ ನೆಲಸಿ ಕ್ರಿಯೆ ಭಾವ ಜ್ಞಾನಗಳನ್ನು ತನ್ನೊಳಗಾಗಿಸಿಕೊಂಡು ಅಂದರೆ ಕ್ರಿಯಾವಿಶ್ರಾಂತಿಯಾಗಿ, ಭಾವ ಬೆತ್ತಲೆಯಾಗಿ ಅಂದರೆ ।ದಿಗಂಬರವಾಗಿ ಜ್ಞಾನ ಶೂನ್ಯವಾಗಿ ತನ್ನೊಳಗಾಗಿ ತಾನು ಶರಣನ ಪಿಂಡಾಕಾಶವಾಗಿ ಅಂದರೆ ಗೋಳಕಾಕಾರವಾಗಿ-ಶೂನ್ಯಲಿಂಗವಾಗಿ ಶರಣನಲ್ಲಿ ಶೋಭಿಸುತ್ತದೆ. ಸ್ವಾನುಭವಕ್ಕೆ ವಸ್ತುವಾಗುತ್ತದೆ.

"ನೆಲದ ಮೇಲಣ ನಿಧಾನವ ಕಂಡರಲ್ಲದೆ,
ಆಕಾಶದೊಳಗೆ ಹೂಳಿದ್ದ ನಿಕ್ಷೇಪವ ಕಂಡವರಾರನೂ ಕಾಣೆ."

ಎಂದು ಹೇಳಿ ಆದಯ್ಯ ಶಿವಶರಣನು ಪಿಂಡಚೈತನ್ಯದ ದರ್ಶನಕ್ಷಮತೆಯನ್ನು ಸ್ವಯಪ್ರಮೆಯಿಂದ ನಿರೂಪಿಸಿದ್ದಾನೆ.

"ಯಥಾ ಪಿಂಡಸ್ಥ ಆಕಾಶಸ್ತಥಾತ್ಮಾ ಪೂರ್ಣ ಉಚ್ಯತೇ ।
ಏತದರ್ಥ ವಿವೇಕೋ ಯಃ ಪಿಂಡಾಕಾಶಸ್ಥಳಂ ವಿದುಃ ॥ ೧ ॥

ಘಟೋಪಾಧಿರ್ಯಥಾಕಾಶಃ ಪರಿಪೂರ್ಣಃ ಸ್ವರೂಪತಃ ।
ತಥಾ ಪಿಂಡಸ್ಥಿತೋಹ್ಯಾತ್ಮಾ ಪರಿಪೂರ್ಣಃ ಪ್ರಕಾಶತೇ ॥ ೨ ॥"

ಕಾಯಾಕಾಶದಂತೆ ಕಾಯಾತ್ಮನು ಪೂರ್ಣನು. ಕಾಯಾವಚ್ಛಿನ್ನತೆಯಿಂದ ಆಕಾಶವಾಗಲಿ ಆತ್ಮವಾಗಲಿ ಪರಿಚ್ಛಿನವಾಗುವುದಿಲ್ಲ. ಸ್ವಾಭಾವಿಕವಾಗಿ ಆಕಾಶಾತ್ಮರು ಪರಿಪೂರ್ಣರು. ತಾಮಸರಾಜಸಾದಿ ಗುಣಯುಕ್ತ ತನು

ಗಳಲ್ಲಿ ಪೂರ್ಣವಾಗಿರುವಾಗ ತಾಮಸಾದಿ ಗುಣತ್ರಯವಿಲ್ಲದ ಶರಣನ ಪರಿಪಕ್ವ ಅಂಗದಲ್ಲಿ ಆತ್ಮನಿರುಪ ಒಗೆ ಇನ್ನೂ ಮಿಗಿಲಾಗಿರುತ್ತದೆ. ಅಂದರೆ ಅವನ ಅಂಗವೇ ಲಿಂಗವಾಗಿರುತ್ತದೆ. ಆತನ ಮಂತ್ರಮಯ ಪಿಂಡವೇ ಆಕಾಶ (ಪರ ಬ್ರಹ್ಮ) ಸ್ವರೂಪವಾಗಿರುತ್ತದೆ. ಏಕೆಂದರೆ ಅದಕ್ಕೆ ಸ್ವಸ್ವರೂಪವನ್ನು ತಿಳಿವ ಸಹಜ ಶಕ್ತಿ ಸಮನಿಸಿರುತ್ತದೆ. ಕ್ರಿಯೆ-ಭಾವ-ಜ್ಞಾನ-ನಿಷ್ಪತ್ತಿಗೊಂಡ ಕಾರಣ ಆತನ ಪಿಂಡವೇ ಪರಮಾಕಾಶ ಸ್ವರೂಪವಾಗಿರುತ್ತದೆ. ಪರಿಪೂರ್ಣಸ್ವರೂಪನಾಗಿರುತ್ತಾನೆ.

"ಒಂದನೆಯ ಬಾಗಿಲಲ್ಲಿ ಮನವಿಪ್ಪುದು
ಎರಡನೆಯ ಬಾಗಿಲಲ್ಲಿ ನೆನಹಿಪ್ಪುದು
ಮೂರನೆಯ ಬಾಗಿಲಲ್ಲಿ ಭಾವವಿಪ್ಪುದು
ನಾಲ್ಕನೆಯ ಬಾಗಿಲಲ್ಲಿ ಧ್ಯಾನವಿಪ್ಪುದು
ಐದನೆಯ ಬಾಗಲಲ್ಲಿ ಯೋಗವಿಪ್ಪುದು
ಆರನೆಯ ಬಾಗಿಲಲ್ಲಿ ಷಟ್‌ಸ್ಥಲಂಗಳಿಪ್ಪವು
ಏಳನೆಯ ಬಾಗಿಲಲ್ಲಿ ಸಪ್ತಮಾತೃಕೆಯರಿಪ್ಪರು
ಎಂಟನೆಯ ಬಾಗಿಲಲ್ಲಿ ಅಷ್ಟಮೂರ್ತಿಗಳಿಪ್ಪರು.
ಒಂಬತ್ತನೆಯ ಬಾಗಿಲಲ್ಲಿ ನವಚಕ್ರಂಗಳಿಪ್ಪವು.
ಹತ್ತನೆಯ ಬಾಗಿಲಲ್ಲಿ ಜ್ಞಾನವಿಪ್ಪುದು.
ಒಂಬತ್ತು ಬಾಗಿಲಕದವನಿಕ್ಕಿ ಹೃದಯಾಕಾಶವೆಂಬ
ಬಯಲೊಳಗೆ ಭರಿತನಾಗಿದ್ದ ನಮ್ಮ ಕೂಡಲ ಚನ್ನಸಂಗಮದೇವ!"

ಹತ್ತು ಬಾಗಿಲ ಹೊತ್ತ ಈ ಪಿಂಡದಲ್ಲಿರುವ ಲಿಂಗಸಾಹಿತ್ಯವಿದು. ಇವೆಲ್ಲಕ್ಕೂ ಇಲ್ಲಿ ಅವಕಾಶವಿದೆ. ಆದರಿಂದ ಇದು ಪಿಂಡಾಕಾಶ. ಒಂಬತ್ತು ಬಾಗಿಲ ಸಾಹಿತ್ಯ ನಿಷ್ಪತ್ತಿಗೊಂಡು ಶರಣನ ಹೃದಯಾಕಾಶದಲ್ಲಿ ಪರಿಪೂರ್ಣನಾಗಿ ಪ್ರಜ್ವಲಿಸುತ್ತಿರುತ್ತಾನೆ ಚನ್ನಸಂಗಮದೇವ. ಪಿಂಡಗೂಡಿ ಚನ್ನಿಗನಾಗಿರುತ್ತಾನೆ. ಪಿಂಡ ಪರಮ ಎಂಬ ಪ್ರಭೇದವಿರುವುದಿಲ್ಲ. ಎರಡೊಂದಾದ ಬಳಿಕ ಶುದ್ಧ

ಜೀವನಾರು ? ಸಿದ್ಧ ಶಿವನಾರು ? ಪಿಂಡವೆ ಆಕಾಶವಾಗಿ ಆಕಾಶವೆ ಪಿಂಡವಾಗಿ ತಾದಾತ್ಮ್ಯಭಾವವನ್ನು ತಾಳಿರುತ್ತವೆ.

“ ಅಸಮಾನಾಢ್ಯರ ಪ್ರತಿಮ ಸ್ವತಂತ್ರ ಸ್ವಲೀಲರಪ್ಪ
ಶರಣರೆಂತಿರ್ಪರಯ್ಯಾ ? ಕಡವರವ ನುಂಗಿದ ಪೊಡವಿಯಂತೆ,
ರತ್ನವ ನುಂಗಿದ ರತ್ನಾಕರನಂತೆ,
ಬೆಳಗ ನುಂಗಿದ ಬಯಲಿನಂತೆ, ಬಣ್ಣವ ನುಂಗಿದ ಚಿನ್ನದಂತೆ,
ತೈಲವ ನುಂಗಿದ ತಿಲದಂತೆ, ಪ್ರಭೆಯ ನುಂಗಿದ ಪಾಷಾಣದಂತೆ,
ವೃಕ್ಷವ ನುಂಗಿದ ಬೀಜದಂತೆ, ಪ್ರತಿಬಿಂಬವನುಂಗಿದ ದರ್ಪಣದಂತೆ
ಇಪ್ಪರಯ್ಯಾ ! ಸೌರಾಷ್ಟ್ರ ಸೋಮೇಶ್ವರಾ. ನಿಮ್ಮ ಶರಣರಲ್ಲಿ
ನೀವಿಹ ಭೇದವ ನೀವೇ ಬಲ್ಲಿರಿ; ಆನೆತ್ತ ಬಲ್ಲೆನಯ್ಯಾ?”

ಶಿವಶರಣನ ಚಿತ್ಪಿಂಡ ಚಿನ್ಮಯ ಪ್ರಸಾದಲಿಂಗವನ್ನು ನುಂಗಿರುತ್ತದೆ. ಆ ಶರಣನ ಆ ಚಿತ್ಪಿಂಡದಲ್ಲಿ ರಾಗ ದ್ವೇಷ ಶೋಕ ಮೋಹ ಭಯ ಭ್ರಾಂತಿಗಳಿರುವುದಿಲ್ಲ. ಇವನ್ನು ಬಿಡುವುದು ಸಾಮಾನ್ಯರಿಗೆ ಸಾಧ್ಯವಿಲ್ಲ.

“ ಆತ್ಮತೇಜ, ದೇಹದ ಹಮ್ಮು, ಮನದ ಬಿಮ್ಮು,
ತಥ್ಯ ಮಿಥ್ಯ ರಾಗ ದ್ವೇಷ ಸುಖ ದುಃಖ ಮೋಹಂಗಳಡಗ
ವಯ್ಯಾ ! ಇಂತಿವಳಿದಾತನ ನೀನೆಂಬೆನಯ್ಯಾ
ಸೌರಾಷ್ಟ್ರಸೋಮೇಶ್ವರಾ !”

“ಹೊಂಬಣ್ಣವ ಹಿಮ್ಮೆಟ್ಟದೆ ಕಂಡು, ಮುಂಬಣ್ಣವ ಮಾಬರಿದು ಕಂಡು, ನಿಂದ ಬಣ್ಣವ ನಿಂದುದಿಗೆ ಕಂಡು, ಹಲವು ಬಣ್ಣದ ಬಯಕೆಯ ಹೊಲಬುದಪ್ಪಿ ಸಂದ ಬಣ್ಣದಲ್ಲಿ ಸಂದಿಲ್ಲದೆ ನಿಂದ ನಿರಾಳ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು.”

“ ಹಲವು ಕರಣಂಗಳೆಂಬ ಹಲವು ಬಣ್ಣದ ಚಿನ್ನವ,
ಗುರು ಮುಖಾಗ್ನಿಯಿಂದ ಒಮ್ಮುಖಕ್ಕೆ ತಂದು,
ಜ್ಞಾನಾಗ್ನಿಯಿಂ ಪುಟವಿಟ್ಟು, [illegible] ಕಾಳೆಯಂ ಕಳೆದು

ವೃತ್ತಿ ಬಗೆಗಳೆಂಬ ಅವಲೋಹಮಂ ಬಿಟ್ಟು,
ಅಹಂಕಾರ ಮಮಕಾರಂಗಳೆಂಬ ತೂಕಗುಂದಿ,
ಅರಿವೆಂಬ ಮೂಸೆಯೊಳಿಟ್ಟು, ಪರಮಜ್ಞಾನದಿಂ ಕರಗಿಸಿ,
ಸುಮನವೆಂಬ ನಿರ್ಮಲೋದಕದಲ್ಲಿ ಥಾಳಿಸಿದ ಶುದ್ಧ ಸುವರ್ಣ
ಸ್ವಯಂಪ್ರಕಾಶ ನಿರಾಳದ ಬೆಳಗು ಸೌರಾಷ್ಟ್ರ ಸೋಮೇಶ್ವರನ
ಶರಣರಲ್ಲಿ ಸ್ವಯವಾಯಿತ್ತು."

'ಪಿಂಡಾಕಾಶ' ಸ್ವರೂಪವನ್ನು ನಿರೂಪಿಸುವ ವಚನಗಳಲ್ಲಿ ಇದು ತುಂಬಾ ತೇಜೋವಂತ ವಚನ; ಔಚಿತ್ಯಪೂರ್ಣವಾದ ಪೂರ್ಣೋಪಮೆಯು ವಚನ. ಶರಣನ ಪಿಂಡಾಕಾಶಸ್ಥಳ ಅದೊಂದು ಪುಟವಿಟ್ಟ ಅಪರಂಜಿ. ಅದೊಂದು ನಿರಾಳದ ಬೆಳಗು. ಅದು ತಪ್ತಾಯಃಪಿಂಡವಲ್ಲ; ಸ್ವಯಂಪ್ರಕಾಶಪಿಂಡ. ಅದು ಶರಣನಲ್ಲಿ ಸ್ವಯವಾಗಿದೆ. ಎಂತಹ ಸುಂದರವಾದ ಹೃದಯಂಗಮವಾದ ಹೋಲಿಕೆ ! ಯಾವ ಮಾತಿನಲ್ಲಿಯೂ ತೂಕತಪ್ಪದ ಹೋಲಿಕೆ ತಪ್ಪದ ಹೇಳಿಕೆ!! "ಯಥಾ ಲಿಂಗಸ್ತಥಾ ಶರಣಃ" ಎಂಬ ಮಾತು ಪಿಂಡಾಕಾಶಸ್ವರೂಪನಾದ ಶರಣನಿಗೆ ಸರ್ವಾತ್ಮಭಾವದಿಂದ ಸಲ್ಲುತ್ತದೆ. ಪರುಷ ಮುಟ್ಟಿದ ಕನಕದಲ್ಲಿ ಕಬ್ಬುನಕ್ಕೆ ಅದೆಷ್ಟು ಇಂಬಲ್ಲದಿರುವಂತೆ, ಲಿಂಗ ಸೋಂಕಿದ ಶರಣನ ಪಿಂಡದಲ್ಲಿ ಪ್ರಾಕೃತಿಕ ಭಾವಕ್ಕೆಂಬಿರುವುದಿಲ್ಲ.

" ಅಂತಸ್ಥಿತಂ ಪರಾಕಾಶಂ ಶಿವಮದ್ವೈತಲಕ್ಷಣಂ ।
ಭಾವಯೇದ್ಯಸ್ಸು ಮನಸಾ ಪಿಂಡಾಕಾಶಃ ಸ ಉಚ್ಯತೇ ॥೩॥
ಶಿವಾಗಾರಮಿದಂ ಪ್ರೋಕ್ತಂ ಶರೀರಂ ಬೋಧದೀಪಿತಂ ।
ಷಟ್‌ತ್ರಿಂಶತ್ತತ್ತ್ವಘಟಿತಂ ಸುಮನಃ ಪದ್ಮಪೀಠಕಂ ॥೪॥ "

ಹೃದಯಾಕಾಶದಲ್ಲಿ ಪರಾಕಾಶಸ್ವರೂಪನಾಗಿರುವನು. ಶಿವಾದ್ವೈತ ಲಕ್ಷಣ ಲಕ್ಷಿತನಾಗಿರುವನು. ಅಂತಹ ಆ ಪ್ರಸಾದಲಿಂಗವನ್ನು ಪ್ರಸನ್ನ ಮನಸ್ಸಿನಿಂದ ಮನನಮಾಡಿದಲ್ಲಿ ಪಿಂಡಾಕಾಶ ಸಂಪನ್ನತೆ ಯುಂಟಾಗುತ್ತದೆ.

ಮನನದಿಂದುಂಟಾಗುತ್ತದೆ ಜ್ಞಾನ, ಆ ಸಮ್ಯಗ್ಜ್ಞಾನ ಒಳಹೊರಗೂ ಬೆಳಗುತ್ತದೆ. ಆಗ ಆ ಶರಣನ ಶರೀರ ಬಿಂಬ ಶಿವಬಿಂಬವಾಗುತ್ತದೆ.

ಆದರಲ್ಲಿ ಮೂವತ್ತಾರು ತತ್ತ್ವಗಳು ಪೂರ್ಣ ವಿಶುದ್ಧವಾಗಿ ಬೆಳಗುತ್ತವೆ. ಹೃದಯ ಪದ್ಮ ಅರಳುತ್ತದೆ, ಮನಘನವಾಗುತ್ತದೆ, ಚಿತ್ಕಳೆಯೇ ಪರಶಿವ ಬ್ರಹ್ಮವಾಗಿರುತ್ತದೆ,

"ಶಿವಮದ್ವೈತಂ ಚತುರ್ಥಂ ಮನ್ಯಂತೇ ಸ ಆತ್ಮಾ ಸ ವಿಜ್ಞೇಯಃ!" ಎಂಬ ಶ್ರುತಿವಚನವನ್ನು ಸ್ಮೃತಿಗೆ ತರುತ್ತದೆ ಮೂರನೆಯ ಮಂತ್ರಶ್ಲೋಕ.

"ಅಖಂಡಿತನಾದ ಬ್ರಹ್ಮ, ಸೂಕ್ಷ್ಮಸುನಾದದ ಬೆಳಗು,
ಸುಜ್ಞಾನ ಪ್ರಭೆಯನೊಡಗೂಡಿ ಅತರ್ಕ್ಯವಾಯಿತ್ತು;
ಕಡೆ ಮೊದಲಿಲ್ಲದ ಅರಿವು ಸೌರಾಷ್ಟ್ರ ಸೋಮೇಶ್ವರ ಲಿಂಗವ
ತೋರಿ ಜನನ ಮರಣವ ಬಿಡಿಸಿತ್ತು."

ತಾನೇ ಆಗಿ ಶಿವಾದ್ವೈತತತ್ವ ಸಿದ್ಧಿಸಿದ ಬಳಿಕ ಹುಟ್ಟು ಸಾವುಗಳೆಂಬ ಭಿನ್ನ ಧರ್ಮಗಳಿರಲು ಸಾಧ್ಯವಿಲ್ಲ. ಇದ್ದರೆ ಅದು ಪಿಂಡಾಕಾಶವೆನಿಸದು. ಶರಣನ ಭಾವಭರಿತವಾದ ಆ ವಸ್ತು ಅದು ಪರಾಕಾಶ; ಅದು ಶಿವಾದ್ವೈತ; ಅದು ಅಖಂಡಿತ ಬ್ರಹ್ಮ. ಅದಕ್ಕೆ ಕಡೆಮೊದಲಿಲ್ಲ. ಅದು ಒಳಗೊಂಡ ಪಿಂಡ ಅದೇ ಆಗುವಲ್ಲಿ ಸಂದೇಹವಿಲ್ಲ.

ಆದಿರುವ ಈ ಪಿಂಡಗತ ಸಾಹಿತ್ಯವೆಲ್ಲ ಅದೇ ಆಗಿರುತ್ತದೆ. "ಇಹ ಲೋಕ ಪರಲೋಕ ತಾನಿದ್ದಲ್ಲಿ. ಗಗನ ಮೇರು ಮಂದಿರ ತಾನಿದ್ದಲ್ಲಿ. ಸಕಲ ಭುವನ ಸತ್ಯಲೋಕ ತಾನಿದ್ದಲ್ಲಿ ನಿತ್ಯ ನಿರಂಜನ ಪರತತ್ತ್ವ ತಾನಿದ್ದಲ್ಲಿ. ಉತ್ತರೋತ್ತರ ಚತುರ್ವಳಯ ತಾನಿದ್ದಲ್ಲಿ. ಚಂದ್ರಸೂರ್ಯ ತಾರಾಮಂಡಲ ತಾನಿದ್ದಲ್ಲಿ ಅಂತರ ಮಹದಂತರ ತಾನಿದ್ದಲ್ಲಿ. ಸ್ವತಂತ್ರ ಗುಹೇಶ್ವರ ತಾನಿದ್ದಲ್ಲಿ."

ಆ ಶಿವಾದ್ವೈತದಲ್ಲಿ ಇವೆಲ್ಲವೂ ಅಖಂಡವಾಗಿರುತ್ತವೆ. ಅಂತೆಯೇ ಶರಣನ ಪಿಂಡಾಕಾಶದಲ್ಲಿರುವ ಮೂವತ್ತಾರು ತತ್ತ್ವಗಳು ತಂತಮ್ಮ ಪೂರ್ವಾಶ್ರಯವನ್ನು ಪರಿಹರಿಸಿ ಕೇವಲ ಶಿವಸ್ವರೂಪವಾಗಿರುತ್ತವೆ. ಶಿವಾಶ್ರಯವಾಗಿರುತ್ತವೆ. ಶಿವಾಗಾರವೆನಿಸುತ್ತವೆ.

“ ದೇಹಃ ಶಿವಾಲಯಃ ಸಾಕ್ಷಾತ್ತತ್ರಾಸ್ತೇ ಪರಮಃ ಶಿವಃ ।
ಇತಿ ನಿಶ್ಚಯ ಸದ್ಭಾವಃ ಪಿಂಡಜ್ಞಂ ಲಿಂಗಮುಚ್ಯತೇ ॥ ”

ಎಂದು ಶಿವಾಗಮ ನಿರೂಪಣೆ ನೆನವಿಗೆ ಬರುತ್ತದೆ.

“ಪರಾಕಾಶಃ ಸ್ವರೂಪೇಣ ಪ್ರಕಾಶಃ ಪರಮೇಶ್ವರಃ ।
ಹೃದಾಕಾಶಗುಹಾಲೀನೋ ದೃಶ್ಯತೇಽಂತಃ ಶರೀರಿಣಾಂ ॥ ೫ ॥
ಏತಚ್ಛಿವಪುರಂ ಪ್ರೋಕ್ತಂ ಸಪ್ತಧಾತು ಸಮಾವೃತಂ ।
ಅತ್ರ ಹೃತ್ಪಂಕಜಂ ವೇಶ್ಮ ಸೂಕ್ಷ್ಮಾಂಬರ ಮನೋಹರಂ ॥ ೬ ॥
ತತ್ರ ಸನ್ನಿಹಿತಂ ಸಾಕ್ಷಾತ್ ಸಚ್ಚಿದಾನಂದ ಲಕ್ಷಣಂ ।
ನಿತ್ಯಸಿದ್ಧಃ ಪ್ರಕಾಶಾತ್ಮಾ ಜಲಸ್ಥಾಕಾಶವಚ್ಛಿವಃ ॥ ೭ ॥”

ನಿಜ ಶರಣನ ಹೃದಯಾಕಾಶವೇ ಒಂದು ಚೇತನ ಗುಹೆ. ಅಲ್ಲಿ ಪ್ರಕಾಶಮಯನಾದ ಪರಮೇಶ್ವರನು ಪರಾಕಾಶಸ್ವರೂಪನಾಗಿರುತ್ತಾನೆ. ಅವನು ಅಂತರ್ಮುಖಿಗಳಿಗೆ ಕಾಣುತ್ತಾನೆ.

ಸಪ್ತ ಧಾತುಗಳಿಂದ ನೆಯ್ದ ಶರೀರವೇ ಶಿವಪುರ. ಅಲ್ಲಿರುವ ಹೃದಯಾರವಿಂದವೇ ಶಿವನ ಅರಮನೆ. ಆ ಅರಮನೆಯೊಳಗಿರುವ ಸೂಕ್ಷ್ಮಾಕಾಶವೇ ಸುಂದರವಾದ ಅಂತಃಪುರ. ಅದರಲ್ಲಿ ಸಚ್ಚಿದಾನಂದ ಸ್ವರೂಪನಾದ ಶಿವನು ಸಾಕ್ಷಾತ್ತಾಗಿ ಸನ್ನಿಹಿತನಾಗಿದ್ದಾನೆ. ನಿತ್ಯ ಸಿದ್ಧನಾಗಿದ್ದಾನೆ. ನಿರ್ಮಲಜಲದಲ್ಲಿಸುವ ಆಕಾಶದಂತೆ ಪ್ರಕಾಶಸ್ವರೂಪನಾಗಿ ಒಪ್ಪುತ್ತಿರುತ್ತಾನೆ.

“ ಉದಕಮೂರ್ತಿಯಾಗಿ ಉದಕವಾಯಿತ್ತು.
ಪಿಂಡಿಗೆಯಲ್ಲಿಯೇ ಮೂಲಸ್ಥಾನ ಸ್ಥಾಪ್ಯವಾಯಿತ್ತು.
ಸ್ವದೇಹ ಶಿವಪುರದಲ್ಲಿ ವಾಯುಪೂಜೆ.
ಗುಹೇಶ್ವರ ಗುಹೇಶ್ವರನೆಂಬುದು ಅಲ್ಲಿಯೇ ನಿಂದುದುವೋ !”

ಮೂಲದಲ್ಲಿರುವ ಜಲದೊಳಗಿನ ಆಕಾಶದಂತೆ ಶಿವನು ಹೃದಯಾಕಾಶ ಗುಹೆಯಲ್ಲಿ ಶಿವಪುರದಲ್ಲಿ ಸನ್ನಿಹಿತನಾಗಿ ಪ್ರಾಣಪೂಜೆಗೊಳ್ಳುತ್ತಿರುವುದನ್ನು ಈ ವಚನ ಯಥಾವತ್ತಾಗಿ ಅನುವಾದಿಸಿದಂತಿದೆ.

೧. ಪರಮೇಶ್ವರನು ಪರಾಕಾಶಸ್ವರೂಪನು. ಆಕಾಶ ಪದವು ಆ ಪರಮೇಶ್ವರನನ್ನೇ ಬೋಧಿಸುತ್ತದೆಂದು ಶ್ರುತಿಗಳು ಬ್ರಹ್ಮಸೂತ್ರವು ಪ್ರತಿಪಾದಿಸಿವೆ. ಹೀಗಿರುವಾಗ ಪರಾಕಾಶವು ಪರಮೇಶ್ವರಸ್ವರೂಪವಾಗದೆ ? ಆಕಾಶ ಪರ; ಪರವೇ ಆಕಾಶ. "ಆಕಾಶೋ ಹ್ಯೇವೇಭ್ಯೋಜ್ಯಾಯಾನ್" 'ಆಕಾಶೋ ವೈಬ್ರಹ್ಮ.' 'ಅಕಾಶಸ್ತಲ್ಲಿಂಗಾತ್' ಹೀಗೆ ಶ್ರುತಿ ಸೂತ್ರಗಳು ಸೊಲ್ಲಿವೆ.

೨. ಪರಾಕಾಶಸ್ವರೂಪನಾದ ಪ್ರರಮೇಶ್ವರನೆ ಪ್ರಕಾಶಸ್ವರೂಪನು. ಆಕಾಶ–ಪ್ರಕಾಶ ಪದಗಳೆರಡು ಪರ್ಯಾಯ ಪದಗಳು; ಒಂದೇ ಅರ್ಥದವುಗಳು ಒಂದು 'ಆ' ಉಪಸರ್ಗ ಕಾಶಶಬ್ದವಾದರೆ ಇನ್ನೊಂದು 'ಪ್ರ' ಉಪಸರ್ಗ ಕಾಶ ಶಬ್ದವು. ಆಕಾಶ ಶಬ್ದಕ್ಕೆ ಆದಿತ್ಯ, ಶೂನ್ಯ, ಪ್ರಕಾಶ, ವ್ಯೋಮ ಎಂದರ್ಥಗಳಿವೆ. ಪ್ರಕಾಶ ಶಬ್ದಕ್ಕೆ ಪ್ರಕಾಶನ, ಬೆಳಕು, ಬಿಸಿಲು ಎಂದರ್ಥಗಳಿವೆ. ಪರಮೇಶ್ವರನು ಆಕಾಶನೂ ಅಹುದು; ಪ್ರಕಾಶನೂ ಅಹದು. ಸ್ಥೂಲಾಂಬರನೂ ಸೂಕ್ಷ್ಮಾಂಬರನೂ ಆಗಿದ್ದಾನೆ, ಅಪರ ಪ್ರಕಾಶನೂ ಪರಪ್ರಕಾಶನೂ ಆಗಿದ್ದಾನೆ. ಪಿಂಡಾಕಾಶನೂ ಬ್ರಹ್ಮಾಂಡಾಕಾಶನೂ ಪರಮಾಕಾಶನೂ ಆಗಿದ್ದಾನೆ.

೩. ನಿತ್ಯಸಿದ್ಧನು. ತ್ರಿಕಾಲಾಬಾಧಿತನು. ಸದಾಸಿದ್ಧನಾಗಿಯೆ ಇರುತ್ತಾನೆ. ಆತನು ಅದೆಂದಿಗೂ ತಯಾರಾಗಬೇಕಿಲ್ಲ. ಆತನಿಗೆ ತೆರವಿಲ್ಲ.

> " ನಾದ ಬಿಂದು ಕಳೆಯ ಸಂದನರಿತು ಪಿಂಡಜ್ಞಾನಿಯಾಗಿ
> ಸ್ವನುಭಾವ ಉದಯಿಸಿ ಅನಾದಿ ಸಿದ್ಧನಾದ,
> ತನ್ನ ತಾನೇ ಕಂಡು ಚಿದ್ವಪುರ್ಲಿಂಗ,
> ಆದಿ ಬಿಂದುವಿನೊಳು ನಿಂದು ಮೆರೆದ ಮಹಿಮನಲ್ಲಿ
> ಭೇದವಿಲ್ಲದ ಪ್ರತಿಮರು ಸೌರಾಷ್ಟ್ರಸೋಮೇಶ್ವರಾ ನಿಮ್ಮ
> ಶರಣರು."

ಶರಣನ ಹೃದಯದಲ್ಲಿ ಶಿವನು ನಿತ್ಯಸಿದ್ಧನಾಗಿರುತ್ತಾನೆ; ಸಾಕ್ಷಾತ್ ಸನ್ನಿಹಿತನಾಗಿರುತ್ತಾನೆ. ಜಲದೊಳಗಿನ ಆಕಾಶದಂತೆ ಪ್ರಕಾಶಮಾನನಾಗಿರು

ತ್ತಾನೆ. ಆದರಿಂದಾಗಿ ಸರಣನದು ಪಿಂಡಾಕಾಶಸ್ಥಲವಾಗಿರುವುದಲ್ಲದೆ ಪ್ರಾಕೃತಾಕಾಶಸ್ಥಲವಾಗಿರದು. ಪ್ರಕಾಶಹೀನವಾಗಿರದು.

“ ಮುತ್ತು ನೀರೊಳಗೆ ಹುಟ್ಟಿ ಮರಳಿ ನೀರಾಗದಂತೆ,
ತಿಳಿಯು ಕಾಸಿದ ತುಪ್ಪ ಮರಳಿ ಕ್ಷೀರವಾಗದಂತೆ,
ತೊಟ್ಟು ಬಿಟ್ಟ ಹಣ್ಣು ಹೂ ಮಿಡಿಯಾಗದಂತೆ
ಸಂಸಾರದಲ್ಲಿ ಹುಟ್ಟಿ, ಅದ ಹೊದ್ದದೆ.
ಸ್ವಯಂ ಪ್ರಕಾಶಲಿಂಗದ ಬೆಳಗಿನಲ್ಲಿ ಬೆಳೆದು
ತಲ್ಲೀಯುವಾಗಿದ್ದರಯ್ಯಾ,
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣರು !”

ಶರಣನ ಹೃದಯದಲ್ಲಿ ಶಿವನು ಸಾಕ್ಷಾತ್ತಾಗಿ ಇರುವುದರಿಂದ ಶರಣ ಮರಳಿ ಮಾನವನಾಗಲಾರ. ಮರವೆಗೆ ಒಡಲೋಪಾಧಿಗೆ ಪದಾರ್ಥದಾಸೆಗೆ ಜನನ ಮರಣ ಸೂತಕಕ್ಕೆ ಜಾಗತಿಕ ಜಾಡ್ಯಕ್ಕೆ ಅಶುದ್ಧಿಗೆ ಪಕ್ಕಾಗಲಾರ. ಶಿವನೊಡನೆ ಬಿಚ್ಚಿ ಬೇರಿಲ್ಲದೆ ಬೆರಸಿರುವ ಭಾಗ್ಯವಂತ; ಅಚ್ಚಳಿಯದ ಸುಖವಂತ. ಪ್ರಾಣಭಾವ ಮುಕ್ತ, ಪ್ರಸಾದ ಭಾವಯುಕ್ತ.

ಶಿವನೇ ಆದ ಶರಣನು ನಿತ್ಯಸಿದ್ಧನು, ಸಚ್ಚಿದಾನಂದ ಸ್ವರೂಪನು, ಪರಪ್ರಕಾಶನು ಪರಾಕಾಶನು ಆಗಿರುತ್ತಾನೆ.

“ ಭಕ್ತಂಗೆ ಉತ್ಪತ್ತಿ ಇಲ್ಲ, ಸ್ಥಿತಿ ಇಲ್ಲ; ಸ್ಥಿತಿ ಇಲ್ಲಾಗಿ ಲಯವಿಲ್ಲ. ಮುನ್ನ ಎಲ್ಲಿಂದ ಬಾದನಲ್ಲಿಗೆ ಹೋಗಿ ನಿತ್ಯನಾಗಿಪ್ಪ ಗುಹೇಶ್ವರಾ.” ಶರಣ ಸ್ವಾನುಭಾವಿ ಸ್ವಸ್ವರೂಪಿ, ಶ್ರೀಗುರುದೇವನ ಹಸ್ತದಲ್ಲಿ ಭಕ್ತನಾಗಿ ಜನಿಸಿ ಆತನಿಗೆ ಹುಟ್ಟಿಲ್ಲ; ಲಿಂಗಭೋಗೋಪಭೋಗಿಯಾಗಿ ಸ್ಥಿತಿಯಿಲ್ಲ. ಪರಮ ಚೇತನ ಸ್ವರೂಪವೂ ಅಮೃತಮಯವೂ ಆದ ಜಂಗಮ ಪ್ರಾಣಿಯಾಗಿ ಲಯವಿಲ್ಲ ತಾನು ಮೊದಲು ಬಂದ ಆ ಪರವಸ್ತುವಿನಲ್ಲಿ ಪರವಶನಾಗಿ ನಿಷ್ಪತ್ತಿಗೊಂಡಿರುತ್ತಾನೆ; ನಿತ್ಯನಾಗಿರುತ್ತಾನೆ.

“ ತಾನೇ ಶಿವನೆಂದು ಕುರುಹ ತೋರುವ ಹಾಗೆ,
ಮರ್ತ್ಯದಲ್ಲಿ ಸುಳಿದನಲ್ಲದೆ [illegible] [illegible]?

ಮತ್ತೊಮ್ಮೆ ಅರಿವು ಮರಹುಂಟೆ ?
ಬಿಚ್ಚಿ ಬೇರಿಲ್ಲದೆ ಬೆರಸಿ ಒಂದಲ್ಲದ
ದ್ವಂದ್ವರಹಿತ ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ;"

ಸಾಕ್ಷಾತ್ತಾದ ಸನ್ನಿಹಿತತ್ವವಿದು; ಹೃದಾಕಾಶಗುಹಾಲೀನತೆಯ ದಿವ್ಯ ದರ್ಶನವಿದು.

" ಅಂತರಾಕಾಶ ಮಧ್ಯಸ್ತಮಶೇಷೋಪಾಧಿವರ್ಜಿತಂ ।
ಘಟಾಕಾಶಮಿವಾಚ್ಛಿನ್ನಂ ಭಾವಯೇಚ್ಚಿನ್ಮಯಂ ಶಿವಂ ॥ ೮ ॥"

ಶರಣನ ಅಂತರಾಕಾಶದಲ್ಲಿರುವನು. ಎಲ್ಲ ಉಪಾಧಿಗಳಿಂದ ಬಿಡಲ್ಪಟ್ಟವನು. ಘಟಾಕಾಶದಂತಿದ್ದರೂ ಪರಿಚ್ಛಿನ್ನನಲ್ಲ. ಏಕೆಂದರೆ ಶರಣನ ಅಂಗವು ಉಪಾಧಿಯಾಗಿರುವುದಿಲ್ಲ; ಅದು ಆಗ ಸ್ಥೂಲವಲ್ಲ. ಶಿವಸ್ವರೂಪವೇ ಆದ ಶರಣಾಂಗದಲ್ಲಿ ಚಿನ್ಮಯನಾದ ಶಿವನಿರುವನು. ಶರಣಾಂಗವೂ ಚಿನ್ಮಯ ಶಿವವಾಗಿರುತ್ತದೆ. ಹೀಗೆ ಹೇಳದಿದ್ದರೆ ಶಿವನ ವಿಭುತಕ್ಕೆ ಭಂಗ; ಶರಣನ ಹೃದಯಾಕಾಶದ ವಿಭುತ್ವಕ್ಕೂ ಭಂಗ. ಶರಣನ ವಿಭುತ್ವಕ್ಕೂ ಹಾನಿ. ಕಾರಣ ಎಲ್ಲ ಉಪಾಧಿರಹಿತನೆಂಬ ವಿಶೇಷಣ ಸಾರ್ಥಕವಾಗಬೇಕಾದರೆ ಶರಣಸ್ವರೂಪನಾದ ಚಿನ್ಮಯ ಶಿವನಿಗೆ ಅಪರಿಚ್ಛಿನ್ನತೆಯು ಸ್ವಾಭಾವಿಕವಾಗಿ ಸಿದ್ಧವಾಗುತ್ತದೆ. ಶರಣನ ಅಂತರಂಗದ ಚಿದಾತ್ಮಜ್ಯೋತಿಯು ಬಹಿರಂಗವನ್ನೂ ಬಳಸಿಗೊಂಡು ಬೆಳಗಿಸುತ್ತದೆ. ಸ್ಪಟಿಕ ಘಟಜ್ಯೋತಿಯಂತಿರುತ್ತದೆ. ಅಖಂಡಿತವಾಗಿರುತ್ತದೆ, ಅಗಲು ಅನುಕೂಲವಿದೆ ಶಿವಾದ್ವೈತ ಸಿದ್ಧಾಂತದಲ್ಲಿ.

"ಅಂಗದ ಮೇಲಣ ಲಿಂಗ ಅಂಗದಲ್ಲಿ ಪೂರ್ಣವಾಗಿ ತನುಗುಣವಳಿಯಿತ್ತು ಮನದ ಮೇಲಣ ಲಿಂಗ ಮನದಲ್ಲಿ ಪೂರ್ಣವಾಗಿ ನೆನಹಿನ ಸಂಕಲ್ಪ ಕೆಟ್ಟಿತ್ತು; ಪ್ರಾಣದ ಮೇಲಣ ಲಿಂಗ ಪ್ರಾಣದಲ್ಲಿ ಪೂರ್ಣವಾಗಿ ಪ್ರಾಣಪ್ರಕೃತಿ ನಷ್ಟವಾಯಿತ್ತು.

ಭಕ್ತಿ ಜ್ಞಾನ ಲಿಂಗ ಸನ್ನಿಹಿತವಾಗಿರ ಬಲ್ಲರಾಗಿ

ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು ಸ್ವತಂತ್ರರು.

ಶರಣನ ತ್ಯಾಗಾಂಗದಲ್ಲಿ ಲಿಂಗಗುಣವಳವಟ್ಟಕಾರಣ ತನುಗುಣಗಳಿಗಿಂಬಿಲ್ಲ. ಆದ್ದರಿಂದ ಆತನ ತನು ತನುವಲ್ಲ. ಲಿಂಗಕಾಯವಾಗಿ ಲಿಂಗಪೂರ್ಣತೆಯನ್ನು ಸಾರ್ಥಕಪಡಿಸಿರುತ್ತಧೆ ಶರಣನ ತ್ರಿವಿಧ ತನುಗಳೂ ತಂತಮ್ಮ ತನುತ್ವವನ್ನು ತ್ಯಾಗಮಾಡಿ ಕ್ರಿಯಾ ಜ್ಞಾನಾನುಭವ ಸ್ವರೂಪವಾಗಿರುತ್ತವೆ. ಆದರಿಂದ ಶರಣನು ಸರ್ವಸ್ವವಾಗಿ 'ಪಿಂಡಾಕಾಶ' ಸ್ವರೂಪನಾಗಿರುತ್ತಾನೆ. ಚಿತ್ಕಾಯನಾಗಿ ಚಿತ್ಪ್ರಾಣನಾಗಿ ಚಿದ್ಭಾವನಾಗಿ ಚಿತ್ಪಿಂಡ ಸ್ವರೂಪನಾಗಿರುತ್ತಾನೆ.

——

೮. ಬಿಂದ್ವಾಕಾಶ ಸ್ಥಳಂ

ಬಿಂದು ಪದಕ್ಕೆ ಹನಿ, ವೀರ್ಯ, ಶೂನ್ಯ, ಗುರುತು ಮುಂತಾದ ಅರ್ಥಗಳಿವೆ. ಚಿತ್ತಗತ ಪವಿತ್ರ ಚಿದ್ರಸವೂ ಬಿಂದುವೆಂದೆನಿಸುತ್ತದೆ. ಈ ಅರ್ಥವೇ ಶಿವಾದ್ವೈತ ಸಿದ್ಧಾಂತದಲ್ಲಿ ಮುಖ್ಯವಾದುದು.

ಪಿಂಡ ಅಂದರೆ ಶುದ್ಧ ಚೈತನ್ಯದಲ್ಲಿ ಆಕಾಶದಂತೆ ನಿರವಯುವಾಗಿ ನಿಜ ಜ್ಯೋತಿಯಾಗಿ ಇರುವ ಲಿಂಗವು ಪಿಂಡದೊಳಗೆ ಅಂದಗೆ ಪರಕಾಯದೊಳಗೆ ಇರುವ ಚಿತ್ತಿನ ಸ್ವರೂಪ ಬಿಂದುವಿನಲ್ಲಿಯೂ ಆಕಾಶವಾಗಿ ವ್ಯಾಪಿಸಿಕೊಂಡಿರುತ್ತದೆ. ಇದರಿಂದಾಗಿ ಬಿಂದ್ವಾಕಾಶಸ್ಥಳವೆಂಬ ನಾಮ ನಿರ್ದೇಶವಾಗುತ್ತದೆ.

ಬಾಹ್ಯಪಿಂಡದಲ್ಲಿ ಕ್ರಿಯಾಕಾಶವಾಗಿ ಅಂತಃಪಿಂಡದಲ್ಲಿ ಚಿದ್ಬಿಂದ್ವಾಕಾಶವಾಗಿರುತ್ತದೆ. ಚಿದ್ಬಿಂದು ಚಿಕ್ಕದು ಮಾತ್ರವಲ್ಲ. ಪಿಂಡಾಂತರ್ಗತವಾಗಿ ಆಕಾರದಲ್ಲಿ ಚಿಕ್ಕದಾಗಿ ತೋರಿದರೂ ಆಕಾಶ ಮತ್ತು ಪ್ರಕಾಶ ಭಾವದಲ್ಲಿ ಮಹತ್ತಿಗೆ ಮಹತ್ತಾಗಿರುತ್ತದೆ. ಬಿಂದು ಬೀಜದಂತಿದ್ದು ಬೀಜದಲ್ಲಿ ಹೆಮ್ಮರ ಹುದಿಗಿರುವಂತೆ ಬಿಂದುಮಾತ್ರದಲ್ಲಿ ವಿಶಾಲಾಕಾಶವಿರುತ್ತದೆ; ಪರಾತ್ಪರ ಪ್ರಕಾಶ

ವಿರುತ್ತದೆ. ಅದು ಜೀವನದ ಸಾರಸತ್ತ್ವವಾಗಿರುತ್ತದೆ, ಅದು ಸತ್ ಚಿತ್ ಸುಖಗಳಿಂದ ಕೂಡಿರುತ್ತದೆ. ಅದಿಲ್ಲದೆ ಬಾಳಿಗೆ ಬೀಡಿಲ್ಲ. ಬದುಕಿಗೆ ಬೆಲೆಯಿಲ್ಲ. ಅದಿದ್ದರೆ ಎಲ್ಲ. ಅದಿಲ್ಲದ ಅಣುವಿಲ್ಲ. ಮಹತ್ತಿಲ್ಲ.

ಬಿಂದು ಬಿನ್ನಾಣ

ಬಿಂದು ವಿಜ್ಞಾನ ಬೃಹತ್ತಾದುದು. ವೀರಶೈವ ಸಿದ್ಧಾಂತದಲ್ಲಿ ಬಿಂದು ಹನಿಯಲ್ಲ, ಒಂದು ಕೊರತೆಯುಳ್ಳ ವಸ್ತುವಲ್ಲ. ಕೇವಲ ಕುರುಹಲ್ಲ. ಬಿಂದು ಒಂದು ಬೃಹದ್ವಸ್ತು. ಪರಿಪೂರ್ಣವಸ್ತು. ಏನೆಲ್ಲವನ್ನೂ ಒಳಗೊಂಡ ವಸ್ತು. ಅದರ ಗರ್ಭದಲ್ಲಿ ಅದೆಲ್ಲ ಸಾಹಿತ್ಯವೂ ಇರುತ್ತದೆ. ಬಿಂದು ಸಾಕಾರ–ನಿರಾಕಾರಗಳೆರಡರ ಸಾರ. ಅದು ಸ್ವಯವೂ ಅಹುದು; ಪರವೂ ಅಹುದು. ಅದು ಜೀವದೇವರಿಬ್ಬರ ಸಾರಸರ್ವಸ್ವ. ಅದರಿಂದ ಅಂದವಿಟ್ಟಿಹ ಕಳೋದಯವಾಗುತ್ತದೆ.

“ ಪಂಚವರ್ಣ ಬಿಂದು ಪ್ರಪಂಚವನಳಿದುಳಿದಿರಲು,
ಸಂಚರಿಸುವಡೆ ಆ ಎಡೆಯು ಇಲ್ಲ.
ನಿಂದ ಪ್ರಭೆಯುಂಗವ ನೆರೆ ನುಂಗಿ.
ಹಿಂದು–ಮುಂದು, ಎಡ-ಬಲ ಎಂಬುದಿಲ್ಲ.
ಕೆಳಗೆ ನಿಲ್ಲಲು ಆಧಾರ ಮೊದಲಿಂಗಿಲ್ಲ. ಹೆಸರಿಲ್ಲ;
ಕಡೆಗೆ ನಿಲುವೆನೆನಲು ವ್ಯರ್ಥ
ಎಲ್ಲ ನಡುವೆ ನಾನೇನಾಗಿದ್ದೆನೆಂದಡೆ

ತನ್ನೊಡಲೊಳಗೆ ಒಡೆದು ಮೂಡಿತ್ತು; ತನ್ನಂತೆ ಬಯಲು.
ಈ ಬೆಡಗು ಬಿನ್ನಾಣವ ಜಡರರಿವರೆ?
ಇದನರಿದು ನುಡಿದು ತೋರಿದನು,
ಗುಹೇಶ್ವರನ ಶರಣ ಚನ್ನಬಸವಣ್ಣನು."

ಆ ಪರಶಿವತತ್ತ್ವದಲ್ಲಿ ಚಿತ್ತೆಂಬ ಒಂದು ಬಿಂದು ಉದಯಿಸುತ್ತದೆ. ಅದೇ ಊರ್ಧ್ವರೇತಸ್ಸು; ಉನ್ನತ ತೇಜಸ್ಸು. ಅದು ರಸಸ್ವರೂಪ. ಅದು ಪಂಚವರ್ಣಾತ್ಮಕವಾಗಿ ಸಕಲತತ್ತ್ವಾತ್ಮಕವಾಗಿ ಸರ್ವ ಪ್ರಪಂಚವನ್ನು ತನ್ನೊಳಗಿರಿಸಿಕೊಂಡಿರುತ್ತದೆ. ಸಕಲ ತತ್ತ್ವವಾದರೂ ಸರ್ವಾತ್ಮಕವಾಗಿರುತ್ತದೆ; ಸರ್ವವ್ಯಾಪಕದಾಗಿರುತ್ತದೆ. ಅದು ಪರಿಪೂರ್ಣವಾದ ಕಾರಣ ಅದರ ಸಂಚಾರಕ್ಕೆ ಎಡೆಯಿರದು. ಸ್ವಾಭಾವಿಕವಾಗಿ ಅದರ ಚಿತ್ಕಳೆ ಅದರೊಳಗೆ ಅವ್ಯಕ್ತವಾಗಿರುತ್ತದೆ. ಅದು ತೆರವಿಲ್ಲದ ವಸ್ತುವಾಗಿ ಅದಕ್ಕೆ ದೇಶಭೇದವಿಲ್ಲ; ನಾಮಭೇದವಿಲ್ಲ. ವಸ್ತುಭೇದವಿಲ್ಲ. ಅಗಲಕ್ಕೆ ಅಗಲಾದ ಆ ವಸ್ತು ತನ್ನೊಳಗೆ ಬೆಡಗಿನ ಬಿಂದುವಾಗಿ ಒಡಮೂಡುತ್ತದೆ. ಬಯಲಿಗೆ ಬಣ್ಣವೇರುತ್ತದ. ಬಣ್ಣವೇರಿ ಬೆಡಗಂಗೊಳ್ಳುತ್ತದೆ. ಅದು ದಿಟವಾದ ಒಳ್ಬೆಡಗು. ಅದನರಿಯಲು ಜಡರಿಗೆ ಅಳವಲ್ಲ. ಅರಿಯಂದ ಬಳಿಕ ಆಡಲು ಸಾಧ್ಯವಿಲ್ಲ. ಅಂದು ನುಡಿದು ತೋರುವ ಶಕ್ತಿ ಸ್ವಾನುಭವವುಳ್ಳ ಶರಣನೆಂದರೆ ಚನ್ನಬಸವಣ್ಣನೊಬ್ಬ ಮಾತ್ರ; ಅವನೇ ಚಿನ್ಮಯ ಚನ್ನಿಗ! ಅವನೇ ಸಕಲರ ಚನ್ನ!

ಬಿಂದು ರಸಾತ್ಮಕ. ತೇಜೋಜನ್ಯ. ಪರಂಜ್ಯೋತಿ ಪರಿಣಾಮ. ನಾದಾತ್ಮಕವೂ ಆಗಿದೆ. ನಾದವೇ ಶಿವ; ಬಿಂದುವೇ ಶಕ್ತಿ, ಕಳೆಯೇ ನಾದ-ಬಿಂದುಗಳ ಸಾಮರಸ್ಯ. ಅಥವಾ ಶಿವ-ಶಕ್ತಿಗಳ ಸಮರಸಭಾವ, ನಾದ-ಬಿಂದು ಕೂಡಿ ಪಿಂಡವಾಗುತ್ತದೆ. ಪಿಂಡದೊಳಗೆ ನಾದಬಿಂದುಗಳಿರುತ್ತವೆ ಪಿಂಡವೆ ಅಂದವಾದ ಕಲೆ. ಪಿಂಡಕಲೆಯೊಳಗೆ ಬಿಂದು, ಬಿಂದು ಕಳೆಯೊಳಗೆ ಪಿಂಡ-ಸಮರಸವಾಗಿರುತ್ತವೆ, ಕಲೆಸತ್, ಬಿಂದು ಚಿತ್, ನಾದ ಆನಂದಸ್ವರೂಪವಾಗಿವೆ.

ಬಿಂದು ಅದೊಂದು ಚಿತ್‌ಬ್ರಹ್ಮಾಂಡ, ಅದೇ ಚಿತ್ಪಿಂಡ. ಸಾಮಾನ್ಯರ ಪಿಂಡದಂತೆ [illegible] ಪಿಂಡ [illegible] ಅದು ಪರಮ ಸತ್ಪಿಂಡ.

ಅದರಲ್ಲಿರುತ್ತದೆ ಚಿದ್ಬಿಂದು   ಆ ಸತ್ಪಿಂಡದೊಳಗೆ ಚಿದ್ಬಿಂದು ಉದಯುವಾಗಿ ವಿಭುವಾಗಿರುತ್ತದೆ.   ಅದ್ದರಿಂದ ಅದು ಬಿಂದ್ವಾಕಾಶವೆನಿಸುತ್ತದೆ.   ಪಿಂಡದೊಳಗೆ ಬ್ರಹ್ಮಾಂಡವಿರುವಾಗ ಪಿಂಡಕ್ಕೆ ಕಾರಣವಾದ ಬಿಂದುವಿನೊಳಗೆ ಅನಂತಾನಂತ ಬ್ರಹ್ಮಾಂಡಗಳಿರವೇನು ? ಇದ್ದೇ ಇರುತ್ತವೆ.   ಈ ಕಾರಣದಿಂದ ಬಿಂದು ವಿಭು.

“ ಪಿಂಡವುಕ್ತನ, ಪದ ಮುಕ್ತನ, ರೂಪವುಕ್ತನ
ತಿಳಿದು ನೋಡಾ! ಪಿಂಡವೇ ಕುಂಡಲಿ ಶಕ್ತಿ;
ಪದವೇ ಆ ಹಂಸನ ಚರಿತ್ರ;
ಬಿಂದು ಅನಾಹತವೆಂದರಿದು.
ಗುಹೇಶ್ವರಲಿಂಗವ ಕೂಡಿದೆನು.”

ಪಿಂಡ ಸತಿ, ಬಿಂದು ಪತಿ; ಪಿಂಡಕ್ರಿಯೆ, ಬಿಂದು ಜ್ಞಾನ.   ಪದವೆ ನಾಮ, ಕಲೆಯೇ ರೂಪ.   ಪಿಂಡವೆಂಬ ಆಧಾರಶಕ್ತಿ ಬಿಂದುವೆಂಬ ಮಹಾಧಿಷ್ಠಾನ ಪತಿಯಲ್ಲಿ ಬೆರೆದೇಕವಾಗಲು ಪಿಂಡಾಶ್ರಯ ನಾಮ ರೂಪುಗಳಿರುವುದಿಲ್ಲ.   ನಾಮ ರೂಪುಗಳಿಗೆ ಆಧಾರಶಕ್ತಿಯಾದ ಪಿಂಡವೇ ಮಹಾಜ್ಞಾನರೂಪ ಬಿಂದುವಿನಲ್ಲಿ ಬೆರೆದಿರುವಾಗ ಇವುಗಳ ಅಭಿವ್ಯಕ್ತಿಯೆಂದರೇನು ? ಕ್ರಿಯೆ ನಾಮರೂಪಗಳೆಲ್ಲವೂ ನಿಷ್ಪತ್ತಿಗೊಳ್ಳುವವು-ಬಿಂದ್ವಾಕಾಶದಲ್ಲಿ !   ಆದ್ದರಿಂದ ಅದು ವಿಭುವೆನಿಸುತ್ತದೆ ಆಕಾಶಸ್ಥಳಕ್ಕೆ ಆಶ್ರಯವಾಗುತ್ತದೆ.   ಆಕಾಶದಂತೆ ಯಾವ ದೋಷಗಳನ್ನು ಸೋಂಕದೆ ನಿರ್ಮಲವಾಗಿರುತ್ತದೆ

“ ಒಂದು ಇಲ್ಲದ ಬಿಂದುವ, ತಂದೆಯಿಲ್ಲದ ಕಂದನ,
ಮಾತೆಯಿಲ್ಲದ ಜಾತನ, ಗಮನವಿಲ್ಲದ ಗಮ್ಯನ,
ಮೂವರರಿಯದ ಮುಗ್ಧನ-ಠಾವ ತೋರಿಸಾ ಗುಹೇಶ್ವರ !”

ಪ್ರಾಪಂಚಿಕ ಯಾವ ಕೋಳೆಯಿಲ್ಲದ ಚಿತ್ತವೇ ಬಿಂದು ; ಆ ಬಿಂದುವೆ ಶಿವಶರಣ,   ಆ ಶರಣನ ಉದಯುಕೆ ಜಡ ಬುದ್ಧಿಯುಳ್ಳ ತಂದೆಯು ಸಂಬಂಧವಿಲ್ಲ,   ಭಕ್ತಿಯಿಲ್ಲದ ತಾಯಿಯು ಒಡಲಿಗೆ ಬಂದವನಲ್ಲ.   ರಾಗದ್ವೇಷಾದಿಗಳಲ್ಲಿ

ಆ ಶರಣನಿಗೆ ಗಮನವಿಲ್ಲ. ವಿಶ್ವ ತೈಜಸ ಪ್ರಾಜ್ಞರೆಂಬ ಜೀವರು ಶರಣನನ್ನು ಅರಿಯರು. ಶರಣ ಅವರೊಡನೆ ಮಾತಾಡನು. ಆತ ಚಿದ್ಬಿಂದು ಸ್ವರೂಪನು. ಊರ್ಧ್ವರೇತಸ್ಕನು. ವಿಶುದ್ಧಿಗೇರಿ ವಿಯದ್ರೂಪವಾಗಿ ವಿಶಿಷ್ಟ ಚೇತನವಾಗುತ್ತದೆ.

"ಯಥಾಕಾಶೋ ವಿಭುರ್ಜ್ಞೇಯಃ ಸರ್ವಪ್ರಾಣ್ಯುಪರಿಸ್ಥಿತಃ ।
ತಥ್ಯಾತ್ಮೇತ್ಯುಪಮಾನಾರ್ಥಂ ಬಿಂದ್ವಾಕಾಶಸ್ಥಳಂ ವಿದುಃ ॥೧॥"

ಎಲ್ಲ ಪ್ರಾಣಿಗಳ ಮೇಲೆಯೂ ಹಬ್ಬಿ ಹೊದಿಕೆಯಾಗಿರುವ ಆಕಾಶವು ಸರ್ವವ್ಯಾಪಕವಾಗಿರುವಂತೆ, ಪಿಂಡಾಕಾಶಸ್ಥಳ ಸಂಪನ್ನನಾದ ಶರಣನ ಚೈತನ್ಯವು ವಿಶಿಷ್ಟವೂ ವಿಶ್ವವ್ಯಾಪಕವೂ ಆಗಿರುತ್ತದೆ. ಈ ಹೋಲಿಕೆಯಿಂದ ಈ ವಿಭುತ್ವ ವಿಶಿಷ್ಟತ್ವಗಳಿಂದ 'ಬಿಂದ್ವಾಕಾಶಸ್ಥಳ' ಎಂದು ಶಿವಾನುಭಾವಿಗಳಾದ ಶಿವಾಚಾರ್ಯರು ತಿಳಿಯುವರು.

"ಸದಾಶಿವಾದಿ ತತ್ತ್ವಾನಾಂ ಕಾರಣಂ ವ್ಯಾಪಕಃ ಪರಃ ।
ಬಿಂದುರೂಪಃ ಶಿವೋಧ್ಯೇಯೋ ಬಿಂದ್ವಾಕಾಶ ಇತೀರಿತಃ ॥
—ಕಿರಣಾಗಮ

ಬ್ರಹ್ಮಾಂಡದಲ್ಲಿರುವಂತೆ ಪಿಂಡಾಂಡದಲ್ಲಿಯೂ ಎಲ್ಲ ತತ್ತ್ವಗಳು ಸೂಕ್ಷ್ಮವಾಗಿರುತ್ತವೆ. ಶಿವಾದ್ವೈತ ಸಿದ್ಧಾಂತದಂತೆ ಮೂವತ್ತಾರು ತತ್ತ್ವಗಳಿವೆ. ಇವುಗಳಲ್ಲಿ ಪ್ರಥಿವ್ಯಾದಿ ಸದಾಶಿವಾಂತ್ಯವಾದ ತತ್ತ್ವಗಳು ಮೂವತ್ತುನಾಲ್ಕು. ಇವುಗಳ ಮೇಲೆ ಶಕ್ತಿವಿಶಿಷ್ಟ ಶಿವನಿರುವನು. ಶಕ್ತಿ ಸದಾಶಿವಾದಿ ತತ್ತ್ವಜನನಿ; ಶಿವ ಜನಕ. ಅಲ್ಲದೆ ಸದಾಶಿವಾದಿ ಸರ್ವತತ್ತ್ವಗಳಲ್ಲಿ ವ್ಯಾಪಿಸಿಕೊಂಡಿರುವರು, ಪರವಾಗಿರುವರು. ನಾದರೂಪನಾದ ಶಿವನು ಬಿಂದು (ಶಕ್ತಿ)ರೂಪಾಗಿಯೂ ಇರುವನು ಶಿವಶಕ್ತಿ ಅಭಿನ್ನರು. ಆದ್ದರಿಂದ ಬಿಂದುವೆಂದರೂ ಶಿವನೆಂದೇ ಅರ್ಥ. ಆತನೇ ಶರಣನಿಗೆ ಧ್ಯೇಯನು ಆ ಶಕ್ತಿವಿಶಿಷ್ಟ ಶಿವನನ್ನೇ 'ಬಿಂದ್ವಾಕಾಶ' ಎಂದು ಹೇಳುತ್ತಾರೆ.

ವಿಶುದ್ಧನಾದಾತ್ಮನು ವ್ಯಾಪಕನಾಗಿ ಪರಾತ್ಮನೆನಿಸುತ್ತಾನೆ. ಜಗನ್ನಿಯಾಮಕನು ಜಗದಾಧಾರನು ಆಗುತ್ತಾನೆ. ಎಲ್ಲೆಲ್ಲಿಯೂ ಎಲ್ಲ ಅವಸ್ಥೆಗಳಲ್ಲಿಯೂ ವ್ಯಾಪಿಸಿರುತ್ತಾನೆ. ತ್ರಿಕಾಲಾತೀತನಾಗಿರುತ್ತಾನೆ. ನಿತ್ಯ ಸಿದ್ಧನಾಗಿರುತ್ತಾನೆ. ಆತನ ಆ ದಿವ್ಯಶಕ್ತಿಯಿಂದ ಪಿಂಡಾಂಡ ಬ್ರಹ್ಮಾಂಡಗಳೆರಡರ ಚಕ್ರಕ್ಕೆ ಚಾಲನೆಯುಂಟಾಗಿರುತ್ತದೆ. ಆತನ ಆ ಬಿಂದು ಶಕ್ತಿಯಿಲ್ಲದೆ ಯಾವುದೂ ಆಗುವುದಿಲ್ಲ. ಆಕಾಶದಂತೆ ಅದು ಎಲ್ಲೆಲ್ಲಿಯೂ ವ್ಯಾಪಿಸಿ ಎಲ್ಲದಕ್ಕೂ ಅವಕಾಶವನ್ನೀಯುತ್ತದೆ.

" ಯೇನಾವೃತಂ ನಿತ್ಯಮಿದಂ ಹಿ ಸರ್ವಂ
ಜ್ಞಃ ಕಾಲಕಾಲೋಗುಣೀ ಸರ್ವವಿದ್ಯಃ ।
ತೇನೇಶಿತಂ ಕರ್ಮ ವಿವರ್ತತೇ ಹ
ಪೃಥ್ವ್ಯಪ್ತೇಜೋಽನಿಲಖಾನಿ ಚಿಂತ್ಯಮ್ ॥ ೨ ॥

—ಶ್ವೇತಾಶ್ವತರಶ್ರುತಿ, ಅ-೬.

ಆ ಶಕ್ತಿವಿಶಿಷ್ಟ ಶಿವನು ಈ ಜಗತ್ತಿನಲ್ಲಿ ಯಾವಾಗಲೂ ವ್ಯಾಪಿಸಿದ್ದಾನೆ. ಜ್ಞಾನಸ್ವರೂಪನು, ನಿಶ್ಚಯನು, ಕಾಲಕಾಲನು, ಸರ್ವಗುಣಸಂಪನ್ನನು, ಸರ್ವಜ್ಞನು, ಸರ್ವಶಾಸಕನು, ಪ್ರೇರಕನು, ಪಂಚಭೂತಾಧಿಷ್ಠಾನನು ಆಗಿರುವನೆಂದು ಅರಿಯಬೇಕು. ಇದಲ್ಲದೆ ಅದೇ ಶ್ರುತಿಯು ಅಧ್ಯಾಯ ಅಯ್ದರಲ್ಲಿ ಮತ್ತೆ ಹೀಗೆ ಹೇಳಿದೆ:

" ಅನಾದ್ಯನಂತಂ ಕಲಿಲಸ್ಯ ಮಧ್ಯೇ
ವಿಶ್ವಸ್ಯ ಸ್ರಷ್ಟಾರಮನೇಕರೂಪಮ್ ।
ವಿಶಸ್ಯೈಕಂ ಪರಿವೇಷ್ಟಿತಾರಂ
ಜ್ಞಾತ್ವಾದೇವಂ ಮುಚ್ಯತೇ ಸರ್ವಪಾಶೈಃ ॥ ೧೩ ॥

ದುರ್ಗಮವಾವ ಈ ಸಂಸಾರ ಮಧ್ಯದಲ್ಲಿ ಕಡೆಮೊದಲಿಲ್ಲದೆ ತುಂಬಿದ್ದಾನೆ. ವಿಶ್ವದ ಸೃಷ್ಟಿಕರ್ತನಾಗಿದ್ದಾನೆ. ಅನೇಕ ರೂಪುಳ್ಳವನಾಗಿದ್ದಾನೆ. ಒಬ್ಬನೇ ಎಲ್ಲವನ್ನು ಬಳಸಿಕೊಂಡಿದ್ದಾನೆ. ಹೀಗಿದ್ದರೂ ಆತನೊಬ್ಬನೇ ಆಗಿದ್ದಾನೆ; ಎಂಬುದನ್ನು ಮನವರಿಕೆ ಮಾಡಿಕೊಂಡರೆ ಎಲ್ಲ ಬಂಧನಗಳು ಬಿಟ್ಟೋಡುತ್ತವೆ. ಬಿಂದು ಸ್ವರೂಪನಾಗಿ ಬೆಳಗುತ್ತಿದ್ದಾನೆ.

"ಯಥೈಕೋ ವಾಯುರಾಖ್ಯಾತಃ ಸರ್ವಪ್ರಾಣಿಗತೋ ವಿಭುಃ ।
ತಥಾತ್ಮಾ ವ್ಯಾಪಕಃ ಸಾಕ್ಷಾತ್ಸರ್ವ ಪ್ರಾಣಿಗತಃ ಸ್ವಯಂ ॥ ೨ ॥"

ಒಂದೇ ಒಂದಾದ ವಾಯು ಎಲ್ಲ ಪ್ರಾಣಿಗಳಲ್ಲಿ ಪ್ರಾಣವಾಗಿ ಹಬ್ಬುಗೆಯಾಗಿರುವಂತೆ ಆತ್ಮವು ಪ್ರಾಣಕ್ಕೆ ಪ್ರಾಣವಾಗಿ ಎಲ್ಲ ಪ್ರಾಣಿಗಳಲ್ಲಿ ಸಾಕ್ಷಾತ್ತಾಗಿ ತಾನೇ ಹಬ್ಬುಗೆಯಾಗಿದೆ.

'ವಾಯುರನಿಲಮಮೃತಮಥೇದಂ' ಎಂದು ಈಶಾವಾಸ್ಯೋಪನಿಷತ್ ನಿರೂಪಿಸಿದೆ. ವಾಯು ವಿಯತ್ತುಗಳು ಅಮೃತಗಳೆಂದು ಬೃಹದಾರಣ್ಯಕ ಶ್ರುತಿಯೂ ಸಾರಿದೆ. ಇವೆರಡಕ್ಕೂ ನಾಶವಿಲ್ಲ.

" ವಾಯುರ್ಯಥೈಕೋ ಭುವನಂ ಪ್ರವಿಷ್ಟೋ
ರೂಪಂ ರೂಪಂ ಪ್ರತಿರೂಪೋ ಬಭೂವ ।
ಏಕಸ್ತಥಾ ಸರ್ವಭೂತಾಂತರಾತ್ಮಾ
ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥ ೧೦ ॥

— ಕಠೋಪನಿಷತ್, ಅ-೨, ವಲ್ಲಿ-೨.

ಭುವನಗಳಲ್ಲೆಲ್ಲ ಭರಿತವಾದ ಗಾಳಿ ಪ್ರಾಣಗಳ ಪ್ರಾಣಾಧಾರವಾಗಿ ಪ್ರತಿರೂಪದಲ್ಲಿರುವಂತೆ, ಎಲ್ಲ ಜೀವಿಗಳ ಅಂತರಾತ್ಮನೂ ಸಹ ತಾನೊಬ್ಬನೇ ನಾನಾರೂಪಗಳನ್ನು ಧರಿಸಿ ಪ್ರತಿ ಪ್ರಾಣಿಯ ಒಳಹೊರಗಿರುತ್ತಾನೆ. ಪ್ರಾಣಕ್ಕೆ ಪ್ರಾಣಾಗಿ ಸರ್ವಾಧಾರನಾಗಿದ್ದಾನೆ. ಅವ್ಯಕ್ತನಾಗಿ ಅದ್ವಿತೀಯನಾಗಿದ್ದರೂ ವ್ಯಕ್ತಿ ವ್ಯಕ್ತಿಗಳಲ್ಲಿ ಭಿನ್ನ ಭಿನ್ನರೂಪನಾಗಿ ಅವರವರಿಗೆ ಅನುರೂಪವಾದ ಜೀವನವನ್ನುಂಟು ಮಾಡುತ್ತಾನೆ; ಗತಿಯನ್ನುಂಟು ಮಾಡುತ್ತಾನೆ. ಪರಮಾಶ್ಚರ್ಯಕರವಾದ ಪ್ರಾಣಶಕ್ತಿಯಾಗಿರುತ್ತಾನೆ. ಪರಮಪ್ರಾಣನಾಗಿದ್ದಾನೆ. ವಾಯುವಲಯಕ್ಕೆ ಆಶ್ರಯವಾಗಿದ್ದಾನೆ. ವಾಯುವಿನೊಳಗಿನ ಗಂಧ ವಾಯುವಿನಲ್ಲಿಯೇ ಲಯವಾಗುವಂತೆ ವಾಯು ಆ ಮಹಾವಾಯುವಿನಲ್ಲಿ ವಿಲಯವಾಗುತ್ತದೆ. ಇದರಿಂದಾಗಿ ಆತ್ಮವು ಮಹಾವಾಯುವಾಗಿ ಲೋಕಾದಿ ಲೋಕಗಳನ್ನೆಲ್ಲ ವ್ಯಾಪಿಸಿದೆ. ಮಹಾಪ್ರಾಣವಾಗಿ ಜೀವಕೋಟಿಯನ್ನೆಲ್ಲ ಜೀವನ ಗತಿಗೊಳಗಾಗಿಸಿದೆ.

ಆದರಲ್ಲಿಯೂ ಶರಣನು ಶ್ರೀಗುರುದೇವನ ಕರುಣಾಮೃತ ಹಸ್ತಸ್ಪರ್ಶವನ್ನು ಪಡೆದು ದಿವ್ಯಸ್ಪರ್ಶವುಳ್ಳವನಾಗಿರುತ್ತಾನೆ. ದಿವ್ಯರಸಾನುಭೂತಿಯುಳ್ಳವನಾಗಿರುತ್ತಾನೆ. ಇದರಿಂದಾಗಿ ಬಿಂದ್ವಾಕಾಶಸ್ಥಲ ಸಂಪನ್ನನಾಗುತ್ತಾನೆ. 'ವಾಯುಪ್ರಾಣಿಯು ಕಳೆದು, ಗುರುಸ್ವಾಮಿ ಲಿಂಗಪ್ರಾಣಿಯ ಮಾಡಿದನು.' ಎಂದು ಚನ್ನಬಸವಣ್ಣನು ಸ್ವಾನುಭೂತಿಯಿಂದ ಉಸುರಿರುವನು.

" ವಾಯುವಂಶದಿಂದ ತರುಗಳಲ್ಲಾಡುವವು;
ಭರತ ವಶದಿಂದ ಮೃದಂಗಾದಿಯಾದ ಪಟಹ ನುಡಿವವು.
ಕೂಡಲ ಚನ್ನಸಂಗಯ್ಯ.
ಲಿಂಗವಶದಿಂದ ನಿಮ್ಮ ಶರಣ ನಂಡಿವನು."

ಪ್ರಾಣಕ್ಕೆ ಪ್ರಾಣವಾಗಿದೆ ಪ್ರಾಣಲಿಂಗ. ಪ್ರಾಣವು ಅಸ್ತಮಿಸಿದರೂ ಲಿಂಗವು ಅಸ್ತಮಿಸುವುದಿಲ್ಲ. ನಿತ್ಯಗತಿಯುಳ್ಳುದು; ಸರ್ವತ್ರಗತಿಯುಳ್ಳುದು.

" ಯಥಾ ವಹ್ನಿರಮೇಯಾತ್ಮಾ ಸರ್ವತ್ರೈಕೋಽಪಿ ಭಾಸತೇ ।
ತಥಾ ಶಂಭುಸ್ಸಮಸ್ತಾತ್ಮಾ ಪರಿಚ್ಛೇದ ವಿವರ್ಜಿತಃ ॥ ೩ ॥"

ಅಪ್ರಮೇಯವಾದುದು ತೇಜಸ್ಸು. ಅದು ಎಲ್ಲೆಲ್ಲಿಯೂ ಬೆಳಗುತ್ತಿದೆ. ಅದು ಜಠರಾಗ್ನಿ ಬಡಬಾಗ್ನಿ ದವಾಗ್ನಿ ತಟಿದಗ್ನಿ ಕಾಲಾಗ್ನಿ ಎಂದು ಅನೇಕ ಭೇದಗಳಿಂದಿದ್ದರೂ ಅವುಗಳಲ್ಲೆಲ್ಲಾ ಇರುವ ತೇಜಸ್ಸು ಒಂದೇ ಆಗಿ ತೊಳಗುತ್ತಿದೆ. ಆದರಂತೆ ಆತ್ಮರು ಅನೇಕರಾಗಿದ್ದರೂ ಅನೇಕಾತ್ಮರಲ್ಲಿ ಏಕೈಕನಾದ ಪರಮಾತ್ಮನು ಸರ್ವಾತ್ಮನಾಗಿ ಸಮಷ್ಟಿಯಾಗಿ ಪರಿಚ್ಛೇದವಿಲ್ಲದೆ ಪ್ರಕಾಶಿಸುತ್ತಾನೆ.

"ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ
ರೂಪಂ ರೂಪಂ ಪ್ರತಿರೂಪೋ ಬಭೂವ ।
ಏಕಸ್ತಥಾ ಸರ್ವಭೂತಾಂತರಾತ್ಮಾ
ರೂಪಂ ರೂಪಂ ಪ್ರತಿರೂಪೋ ಬಹಿಶ್ಚ ॥ ೯ ॥
—ಕಠೋಪನಿಷತ್, ಅ-೨, ವಲ್ಲಿ-೨

ಅಗ್ನಿ ಆಕಾರ, ನಿರಾಕಾರ ಎಂದು ಎರಡು ಬಗೆ. ನಿರಾಕಾರಾಗ್ನಿಯು ವಿಶ್ವವನ್ನೆಲ್ಲ ಅವ್ಯಕ್ತವಾಗಿ ವ್ಯಾಪಿಸಿದೆ; ವಿರಾಜಿಸಿದೆ. ಅಗ್ನಿಗೆ ಆಧಾರವಾಗಿದೆ. ಸಾಕಾರಾಗ್ನಿಯು ದೃಷ್ಟಿಗೋಚರವಾಗುತ್ತದೆ. ಸ್ಪರ್ಶವೇದ್ಯವೂ ಆಗುತ್ತದೆ. ವಾಸ್ತವಿಕವಾಗಿ ಇವಕ್ಕೆ ಭೇದವಿಲ್ಲ. ಸಾಕಾರ ತೇಜದಂತೆ ನಿರಾಕಾರ ತೇಜಸ್ಸು ಸರ್ವಭೂತಗಳಲ್ಲಿ ವ್ಯಾಪಿಸಿರುತ್ತದೆ. ನಾನಾ ರೂಪಾಶ್ರಯವಾಗಿರುತ್ತದೆ. ಎಲ್ಲಾ ರೂಪಗಳು ತಾನಾಗಿದ್ದರೂ ತನಗೊಂದು ರೂಪವಿಲ್ಲ.

"ರೂಪಿಲ್ಲದ ರೂಪು, ನಿರ್ಣಯವಿಲ್ಲದ ನಿಷ್ಪತ್ತಿ,
ಸೀಮೆಯ ಮೀರಿದ ನಿಸ್ಸೀಮ, ಗಮನವಿಲ್ಲದ ಗಮ್ಯ,
ನುಡಿಯುಡಿಗಿದ ನಿಃಶಬ್ದ, ಪರವನರಿಯದ ಪರಿಣಾಮ,
ಕೂಡಲ ಚೆನ್ನಸಂಗನ ಶರಣ ಪ್ರಭುದೇವರಿಗೆ
ನಮೋ ನಮೋ ಎನುತಿದ್ದೆನು."

ಈ ಕಣ್ಣಿನ ನೋಟಕ್ಕೆ ಕಾಣದ ಚಲುವದು. ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚಲುವದು. ಅದಕ್ಕೆ ಶರಣನು ಒಲಿದು ತಿಳಿಗಣ್ಣಿನಲ್ಲಿ ತಳೆದು ಓಲಾಡುತ್ತಾನೆ.

ಶರಣ ಭಿನ್ನಸ್ಪರ್ಶಕ್ಕೆ ಭಿನ್ನರೂಪಕ್ಕೆ ಮೈಯಾನನು; ಕಣ್ಣಿಡನು. ಆ ಸತ್ಯ ಶಿವಸೌಂದರ್ಯದ ಅನುಭವದಲ್ಲಿ ಅವಿರಳನಾಗಿರುತ್ತಾನೆ. ನುಡಿಯಂದೆ ನಡೆಯುತ್ತಾನೆ. ಮತ್ತೊಂದನ್ನು ಮನದಲ್ಲಿ ಬಯಸದೆ ಪರಮ ಪ್ರಸಾದದಲ್ಲಿ ಪರಿಣಮಿಸುತ್ತಾನೆ.

" ರೂಹಿಲ್ಲದ ನೆಳಲಿಂಗೆ ಬಯಲ ಬೊಂಬೆಯ ಮಾಡಿ
ನಾದ ಬಿಂದುವಿನಲ್ಲಿ ಹುಟ್ಟಿಸಿ ಆರಿಗೆಯೂ ಮೈದೋರದೆ
ಏಡಿಸಿ ಕಾಡಿತ್ತು ಶಿವನ ಮಾಯೆ!..."

ಕಾಣುವ ಕೆಡುವ ಕೆಡಿಸುವ ರೂಪಕ್ಕೆ ಮರುಳಾಗುವವನಲ್ಲ ಶಿವಶರಣ. ರೂಪುವಿಕಾರಿಗಳಿಗೆ ರುಚಿವಿಕಾರಿಗಳಿಗೆ ಪರಮ ಪ್ರಸಾದ ಘಟಿಸದು. ರೂಪಿಗೆ ರೂಪಾಗಿರುವ ವಿಶ್ವವನ್ನು ವ್ಯಾಪಿಸಿರುವ ಸಹಜ ಸೌಂದರ್ಯೋಪಾಸಕನಾಗಿರುತ್ತಾನೆ ಶರಣನು.

" ಸರ್ವೇಷಾಂ ದೇಹಿನಾಮಂತಶ್ಚಿತ್ತ ತೋಯಂ ಪ್ರಕಾಶತೇ ।
ತಸ್ಮಿನ್ ಪ್ರತಿಫಲತ್ಯಾತ್ಮಾ ಶಿವೋ ದರ್ಪಣವದ್ವಿಭುಃ ॥ ೪ ॥"

ದೇಹಿಗಳೆಲ್ಲರ ಅಂತರಂಗದೊಳಗೆ ಸ್ವಾಭಾವಿಕವಾಗಿ ನಿರ್ಮಲವಾದ ಚಿತ್ತ ಜಲವಿರುತ್ತದೆ, ಆ ಚಿತ್ತದರ್ಪಣದಲ್ಲಿ ವಿಭುವಾದ ಶಿವನು ಆತ್ಮನಾಗಿ ಪ್ರತಿಪಲಿಸುವನು.

" ಯೋದೇವೋ ಅಗ್ನೌಯೋ ಅಪ್ಸುಯೋ ವಿಶ್ವಂ
ಭುವನಮಾವಿವೇಶ ।
ಯ ಓಷಧೀಷು ಯೋ ವನಸ್ಪತಿಷು ತಸ್ಮೈ ದೇವಾಯ
ನಮೋ ನಮಃ ।

—ಶ್ವೇತಾಶ್ವತರ, ಅಧ್ಯಾಯ–೨.೧೭

ಸರ್ವಶಕ್ತನೂ ಪರಿಪೂರ್ಣನೂ ಆದ ಆ ಪರಮೇಶ್ವರನು ಬೆಂಕಿ ನೀರಗಳಲ್ಲಿ ಭುವನದಲ್ಲಿ ಔಷಧಿಗಳಲ್ಲಿ ವನಸ್ಪತಿಗಳಲ್ಲಿ ಅಂತರ್ಯಾಮಿಯಾಗಿ ಅಂಗವಿಸಿದ್ದಾನೆ. ಹೀಗೆ ಎಲ್ಲೆಲ್ಲಿಯೂ ಸಾಮಾನ್ಯವಾಗಿರುವ ಶಿವನು ಶರಣನ ಶುಭ್ರ ಚಿತ್ತದಲ್ಲಿ ಭಕ್ತಿರಸಭರಿತಚಿತ್ತದಲ್ಲಿ ವಿಶೇಷಸ್ವರೂಪದಲ್ಲಿ ಪ್ರಕಾಶಿಸುತ್ತಾನೆ, ರಸಸ್ವರೂಪನಾಗಿ ಸುಖಸ್ವರೂಪನಾಗಿ ಶರಣನ ಅಂತರಂಗವನ್ನೆಲ್ಲ ವ್ಯಾಪಿಸಿರುತ್ತಾನೆ. ಆದರಿಂದ ಬಿಂದ್ವಾಕಾಶಸ್ಥಳ ಸಂಪನ್ನನೆನಿಸುತ್ತಾನೆ. ಅಮೃತಮಯನಾಗಿರುತ್ತಾನೆ.

" ತದೇವ ಶುಕ್ರಂ ತದ್ಬ್ರಹ್ಮ ತದೇವಾಮೃತ ಮುಚ್ಯತೇ ।
ತಸ್ಮಿನ್ ಲೋಕಾಃ ಶ್ರಿತಾಃ ಸರ್ವೇ ತದು ನಾತ್ಯೇತಿ ಕಶ್ಚನ ।
ಏತದ್ವೈತತ್ ॥"

—ಕಠೋಪನಿಷತ್, ಅ. ೨, ವ-೨.

ಶರಣನ ಮನಸ್ಸು ವಿಶುದ್ಧ; ರಸಾವಿದ್ಧ ಆದರಿಂದ ಆತ ಪರಮಾನಂದ ಭರಿತ. ಆತನು ಯಾವಾಗಲೂ ಅಂತರ್ಮುಖಿಯಾಗಿರುತ್ತಾನೆ. ಆದರಿಂದ ಆತನಿಗೆ ಎಲ್ಲ ಲೋಕಗಳು ಆತನ ಚಿತ್ತದಲ್ಲಿರುತ್ತವೆ ಆತನ ಚಿಚ್ಚೈತನ್ಯದಲ್ಲಿ

ರುತ್ತವೆ. ಆತನಿಗೆ ಅದಕ್ಕಿಂತ ಅಧಿಕವಾದ ವಸ್ತು ಬೇರೊಂದಿರುವುದಿಲ್ಲ. ಅದುವೇ ಆತನ ಪರಮವಸ್ತು. ಲೋಕಗಳೆಲ್ಲವೂ ಶರಣನ ಹಂಗಿನಲ್ಲಿರುತ್ತವೆ; ಆಶ್ರಯದಲ್ಲಿರುತ್ತವೆ. ಶರಣನು ಚಿದಮೃತಸ್ವರೂಪ; ಚಿಲ್ಲಿಂಗ ಭರಿತ.

" ಜಲಮಣಿಯ ಬೆಡಗನಿಕ್ಕಬಹುದೆ ?
ಬಯಲ ಬಂಧಿಸಬಹುದೆ ?
ಒಲುಮೆಯ ರಸಿಕಕ್ಕೆ ಸಲೆ ನಿಲಯ ಉಂಟೆ ?
ಇದು ಸಲ್ಲಲಿತ. ಇದರ ಬಲುಮೆಯ ಹೇಳಾ
ನಿಃಕಳಂಕ ಮಲ್ಲಿಕಾರ್ಜುನಾ !"

ಶರಣನ ಚಿತ್ತಜಲ ಚಿನ್ಮಯನಸಂಗದಿಂದ ರತ್ನವಾಗಿರುತ್ತದೆ. ಮರಳಿ ಅದಕ್ಕೆ ಉದಕವಿಕಾರವಿರದು. ಜಲದ ಜಡತೆಯಿರದು. ಚಿತ್ತ ಚಿನ್ಮಯ ರತ್ನವಾಗಿ ಕಣ್ಣಿಗೆ ಮೀರಿದ ಚಲುವುಳ್ಳದಾಗುತ್ತದೆ. ಅದು ರೂಹಿಲ್ಲದ ರೂಹಾದ್ದರಿಂದ ಅದು ಬಯಲು. ಅದನ್ನು ಬಂಧಿಸಲಾಗುವುದಿಲ್ಲ. ಶರಣನ ಚಿತ್ತರಸ ಚಿನ್ಮಯರಸದಲ್ಲಿ ಸಮರಸವಾಗಲು ಬೇರೊಂದರ ಆಶ್ರಯ ಅದಕ್ಕೆ ಬೇಕಿಲ್ಲ. ಅದು ಸಲ್ಲಲಿತ; ಅದಕ್ಕಿಂತ ಬಲುಹಾದುದು ಬೇರಿಲ್ಲ. ಅದು ಭವ್ಯ ಬಿಂದು.

" ಏಕೋ ವಶೀಕೃತಃ ಸಂವಿತ್ಪ್ರಕಾಶಾತ್ಮಾ ಪರಾತ್ಪರಃ ।
ಸರ್ವಪ್ರಾಣಿಗತೋ ಭಾತಿ ತಥಾಪಿ ವಿಭುರುಚ್ಯತೇ ॥ ೫ ॥
ಏಕಏವ ಯಥಾ ಸೂರ್ಯಸ್ತೇಜಸಾ ಭಾತಿ ಸರ್ವಗಃ ।
ತಥಾತ್ಮಾ ಶಕ್ತಿಭೇದೇನ ಶಿವಃ ಸರ್ವಗತೋ ಭವೇತ್ ॥ ೬ ॥"

ಪರಶಿವನೊಬ್ಬ. ಸಂವಿತ್ಪ್ರಕಾಶಸ್ವರೂಪ. ಪರಾಶಕ್ತಿಗಿಂತ ಉತ್ಕೃಷ್ಟ. ಆದರೂ ಶರಣನ ಭಕ್ತಿಗೆ ವಶವಾಗಿದ್ದಾನೆ. ಸರ್ವಪ್ರಾಣಿಗಳಲ್ಲಿ ಬೆಳಗುತ್ತಿದ್ದಾನೆ. ಆದರೂ ವಿಭುವಾಗಿದ್ದಾನೆ.

ಸೂರ್ಯನೊಬ್ಬ. ಆತನ ಕಿರಣ ಹಲವು. ತನ್ನ ತೇಜಸ್ಸಿನಿಂದ ತೆರೆಯನ್ನೆಲ್ಲ ತೊಳಗಿಸುತ್ತಾನೆ; ತೆರೆಯಲ್ಲೆಲ್ಲ ತೊಳಗುತ್ತಾನೆ. ಅದರಂತೆ ಪರಶಿವನು ಕ್ರಿಯಾಜ್ಞಾನ ಇಚ್ಛಾದಿ ಶಕ್ತಿಭೇದದಿಂದ ಅನೇಕಾತ್ಮನಾಗಿ ಸರ್ವಗತನಾಗಿದ್ದಾನೆ; ಸ್ವಯಂಜ್ಯೋತಿಯಾಗಿದ್ದಾನೆ.

"ಏಕೋ ವಶೀ ಸರ್ವಭೂತಾಂತರಾತ್ಮಾ
ಏಕಂ ರೂಪಂ ಬಹುಧಾ ಯಃ ಕರೋತಿ ।
ತಮಾತ್ಮಸ್ಥಂ ಯೇಽನುಪಶ್ಯಂತಿ ಧೀರಾಃ
ತೇಷಾಂ ಸುಖಂ ಶಾಶ್ವತಂ ನೇತರೇಷಾಮ್ ॥ ೧೨ ॥

—ಕಠೋಪನಿಷತ್, ಅ-೨, ವಲ್ಲಿ-೨.

ಪರಶಿವನು ಎಲ್ಲರ ಅಂತರಾತ್ಮನಾಗಿದ್ದಾನೆ. ಚಿತ್ತಶುದ್ಧರಾದ ಶರಣರಿಗೆ ವಶವಾತ್ತಾನೆ. ಆತನು ಅದ್ವಯನಾಗಿ ಸರ್ವ ಸ್ವತಂತ್ರನಾಗಿದ್ದಾನೆ. ಆದರೂ ಬಹುರೂಪಗಳನ್ನು ಧರಿಸಿದ್ದಾನೆ–ಲೀಲೆಗಾಗಿ! ಅವನನ್ನು ತಮ್ಮೊಳಗೆ ಕಂಡುಕೊಂಡವರು ನಿರ್ಭಯರಾಗಿ ನಿಜಸುಖಿಗಳಾಗಿ ನಿಡುಗಾಲ ಬಾಳುತ್ತಾರೆ. ಉಳಿದವರು ಭಯಾನ್ವಿತರಾಗಿ ದುಃಖಿಗಳಾಗಿ ದುರ್ಮರಣಕ್ಕೆ ಈಡಾಗುತ್ತಾರೆ.

ಎಲ್ಲರೊಳಗಿದ್ದು ಬೆಳಗುವ ಆ ಪರಶಿವನಿಗೆ ಎಲ್ಲರ ದೋಷ ದುರಿತಗಳು ಸೋಂಕುವುದಿಲ್ಲ.

" ಸೂರ್ಯೋಯಥಾ ಸರ್ವಲೋಕಸ್ಯ ಚಕ್ಷು-
ರ್ನ ಲಿಪ್ಯತೇ ಚಾಕ್ಷುಷೈರ್ಬಾಹ್ಯದೋಷೈಃ ।
ಏಕಸ್ತಥಾ ಸರ್ವಭೂತಾಂತರಾತ್ಮಾ
ನ ಲಿಪ್ಯತೇ ಲೋಕದುಃಖೇನ ಬಾಹ್ಯಃ ॥ ೧೧ ॥

—ಕಠೋಪನಿಷತ್, ಅ-೨, ವಲ್ಲೀ-೨.

"ತೋರದೆ ತೋರಿದ. ನೆಳಲಿನ ಬಿಂದುವ ನುಂಗಿ
ಬಾರದ ಬಯಲು ಕೂಡಿದ ಕಾರಣವೇನು ?
ಬಿಂದುವರಳಿದುದರಂದವ ತಾನರಿಯದು.
ಅದು ಭೂತಪ್ರಭೆಯಲ್ಲಿ ನಿಷ್ಪತ್ತಿ ಎಂಬುದನರಿಯ ಬಂದುದು.
ಆಶ್ರಯವಿಲ್ಲದೆ ನಿಂದುದು,
ನಿರವಯವು ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ."

—

೯. ಮಹಾಕಾಶ ಸ್ಥಳಂ

ಅದು ಹೆಬ್ಬಯಲು. ಬಯಲಿಗೆ ಬಯಲು; ಬಚ್ಚ ಬರಿಯ ಬಯಲು. ಅರುಹು ಕುರುಹು ಸುಳುಹುಗಳಿಲ್ಲದ ಹಿರಿಬಯಲು. ಪಿಂಡಾಕಾಶ ಬಿಂದ್ವಾಕಾಶಗಳನ್ನು ಒಳಗೊಂಡ ಒಗುಮಿಗೆಯ ಬಯಲು. ಹೊಯ್‌ಕಯ್ ಇಲ್ಲದ ಬಯಲು. ಬಿಂದು ನಾದಗಳನ್ನು ಮೀರಿದ ಬಯಲು. ಬಾಯ್‌ಕಯ್‌ಗಳಿಗೆ ನಿಲುಕದ ಬಯಲು. ಅಂತೆಯೇ ಅದನ್ನು ದೇವರ ದಾಸಮಯ್ಯನು ಹೀಗೆ ಬಗೆದುಂಬಿ ಬಣ್ಣಿಸಿದನು ;

ಆಡಬಾರದ ಬಯಲು, ನೋಡಬಾರದ ಬಯಲು;
ನುಡಿಯಬಾರದ ಬಯಲು, ಹಿಡಿಯಬಾರದ ಬಯಲು;
ಈ ಒಡಲಿಲ್ಲದ ಬಯಲೊಳಗಡಗಿಪ್ಪ ಭೇದವ
ಈ ಲೋಕದ ಜಡರೆತ್ತ ಬಲ್ಲರೈ ರಾಮನಾಥ."

ಅದು ಹೀಗಿದ್ದರೂ ಎಲ್ಲವನ್ನೂ ಒಳಗೊಂಡಿದೆ. ಎಲ್ಲದರೊಳ ಹೊರಗೆ ವ್ಯಾಪಿಸಿಕೊಂಡಿದೆ. ಅದು ಮಹಾಪ್ರಭೆ, ಪರಾತ್ಪರ. ಅದಕ್ಕೆ ಎಲ್ಲೆಲ್ಲಿಯೂ

ಕೈ, ಎಲ್ಲೆಲ್ಲಿಯೂ ಕಣ್ಣು ಕಾಲುಗಳಿವೆ. ಅದಕ್ಕೆ ಎಲ್ಲೆಲ್ಲಿಯೂ ಕಿವಿ ಮುಖಗಳು ತಲೆಗಳಿವೆ. ಅದು ಎಲ್ಲವನ್ನೂ ಮುಟ್ಟಬಲ್ಲುದು, ಮುಟ್ಟದಿರಬಲ್ಲುದು; ಅದು ಎಲ್ಲವನ್ನೂ ಕಾಣಬಲ್ಲುದು; ಅದು ಯಾರಿಗೂ ಕಾಣದು. ಅದು ಎಲ್ಲವನ್ನೂ ಕೇಳಬಲ್ಲುದು; ತಿಳಿಯಬಲ್ಲುದು, ಅದಕ್ಕೆ ಅಡೆ ತಡೆಗಳಿಲ್ಲ. ಕಡೆ ಮೊದಲಿಲ್ಲ. ಅದನ್ನು ಶ್ರುತಿಗಳು ಹೀಗೆ ಬಣ್ಣಿಸಿವೆ:

" ಸರ್ವತಃ ಪಾಣಿಪಾದಂ ತತ್ ಸರ್ವತೋಽಕ್ಷಿಶಿರೋಮುಖಂ ।
ಸರ್ವತ; ಶ್ರುತಿಮಲ್ಲೋಕೇ ಸರ್ವಮಾವೃತ್ಯ ತಿಷ್ಠತಿ ॥ ೧೬ ॥

ಅಪಾಣಿಪಾದೋ ಜವನೋ ಗೃಹೀತಾ
ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ।
ನ ವೇತ್ತಿ ವೇದ್ಯಂ ನ ಚ ತಸ್ಯಾಸ್ತಿ ವೇತ್ತಾ
ತಮಾಹುರಗ್ರ್ಯಂ ಪುರುಷಂ ಮಹಾಂತಮ್ ॥ ೧೯ ॥

" ಸರ್ವೇಂದ್ರಿಯಗುಣಾಭಾಸಂ ಸರ್ವೇಂದ್ರಿಯ ವಿವರ್ಜಿತಮ್ ।
ಸರ್ವಸ್ಯ ಪ್ರಭುಮೀಶಾನಂ ಸರ್ವಸ್ಯ ಶರಣಂ ಬೃಹತ್ ॥೧೭

ಅದಕ್ಕೊಂದೂ ಇಂದ್ರಿಯವಿಲ್ಲ. ಅದು ಎಲ್ಲ ಇಂದ್ರಿಯಗಳನ್ನು ಇಂದ್ರಿಯ ಗುಣಗಳನ್ನು. ಇಂದ್ರಿಯಾರ್ಥಗಳನ್ನು ತಿಳಿಯುತ್ತದೆ; ತೋಳಗಿಸುತ್ತದೆ. ಅದು ಎಲ್ಲಕ್ಕೂ ಒಡೆಯು; ಆಣತಿ ಮಾಡುವ ಮಹಾಶಕ್ತಿ. ಅದು ಎಲ್ಲಕ್ಕೂ ಹಿರಿಯದು. ಅದು ಎಲ್ಲರನ್ನೂ ಹೊರೆವುದು. ಅದನ್ನು ಮೊರೆಹೊಕ್ಕವನು ಮಹಾ ಶರಣ. ಮಹಾಕಾಶಸ್ಥಳ ಸಂಪನ್ನ.

ಅದು ಹಿರಿದಕ್ಕೆ ಹಿರಿದಾಗಿ ವಿಶ್ವವನ್ನು ವ್ಯಾಪಿಸಿದೆ, ಅದು ಕಿರಿದಕ್ಕೆ ಕಿರಿದಾಗಿ ಎಲ್ಲರ ಎದೆಗಳನ್ನು ತುಂಬಿದೆ. ಅದನ್ನು ಮೊರೆಹೊಕ್ಕರೆ ಅದರ ಕರುಣೆಯಿಂದ ಪರಮಾನಂದ ಲಭಿಸುತ್ತದೆ.

" ಪಿಂಡಾಂಡಸ್ಥಂ ಯಾಥಾಕಾಶಂ ನ ಭಿನ್ನಂ ತದ್ವದಾತ್ಮನಃ ।
ಅಭಿನ್ನಃ ಪರಮಾತ್ಮೇತಿ ಮಹಾಕಾಶಸ್ಥಳಂ ವಿದುಃ ॥ ೧೪ ॥"

ಪಿಂಡಾಂಡ-ಬ್ರಹ್ಮಾಂಡಗಳಲ್ಲಿರುವ ಆಕಾಶ ಬೇರಲ್ಲ; ಒಂದೇ ! ಅದರಂತೆ ಆಕಾಶಕ್ಕೂ ಅಧಿಕವಾದ ಆ ಪರಮಾತ್ಮನು ಒಳಗೂ ಹೊರಗೂ ಅಭಿನ್ನನಾಗಿದ್ದಾನೆ. ಅದರಿಂದ ಆತನು ಪರಮ-ಆತ್ಮನು; ಹೆಚ್ಚು ಹರವಾದವನು. ಅವನನ್ನೇ ಮಹಾಕಾಶಸ್ಥಲವೆಂದು ಶಿವಾಚಾರ್ಯರು ಸೊಲ್ಲುವರು.

> " ಬ್ರಹ್ಮಜ್ಞಾನದಿಂದ ಬ್ರಹ್ಮವನರಿತರಿವು
> ಆ ಪರಬ್ರಹ್ಮದೊಡವೆರಸಿ ನಿಂದಿತ್ತು. ಅದೆಂತೆಂದಡೆ,
> ಬ್ರಹ್ಮ ಬ್ರಹ್ಮಾಂಡ ಬೇರಿಲ್ಲದಿಪ್ಪಂತೆ,
> ಆಕಾಶ ನೀಲ ಬೇರಿಲ್ಲದಿಪ್ಪಂತೆ, ಹಣ್ಣು ರುಚಿ ಬೇರಿಲ್ಲದಿಪ್ಪಂತೆ,
> ದ್ವೈತವೇ ಅದ್ವೈತವಾದ ಬಳಿಕ ದ್ವೈತವೆಂದೆನಲುಂಟೆ ?
> ಇಲ್ಲವಾಗಿ,
> ಅರಿವು ಮರವೆಗೆ ತೆರಹಿಲ್ಲದೆ ಕರಿಗೊಂಡರಿವು ತಾನಾಗಿರಲು,
> ನಾನಾ ಪರಿಯ ವಿಚಿತ್ರ ಚಿತ್ರಂಗಳತ್ಯಾಶ್ಚರ್ಯವಪ್ಪಂತೆ
> ತೋರುತ್ತಿರಲು ಅದು ವಿಪರೀತವೆಂದೆನಲುಂಟೆ ?
> ಮುನ್ನ ತಾನಾಗಿದ್ದು ಇನ್ನು ಬೇರೆನಲುಂಟೆ ? ಇಲ್ಲವಾಗಿ,
> ಆದಿ ಮಧ್ಯಾಂತ ವಿರಹಿತವಾದ ಮಹಾ ಘನವೆ,
> ಊಹಿಸಲಿಲ್ಲದ ಉಪಮೆ, ಭಾವಿಸಲಿಲ್ಲದ ಭಾವ,
> ಅರಿಯಲಿಲ್ಲದ ಅರಿವು ತಾನಾಗಿ, ಸೌರಾಷ್ಟ್ರ ಸೋಮೇಶ್ವರನೆಂಬ
> ನುಡಿಯನೊಳಕೊಂಡು ನಿಂದ ಸಹಜ,
> ಭರಿತವಾಗಿದ್ದು ಇಲ್ಲದಂತಿಪ್ಪ ಭೇದವನೇನೆಂಬೆನಯ್ಯಾ ..? "

ಮಹಾಕಾಶದ ಸಹಜ ಸ್ವರೂಪವಿದು. ಇದ್ದು ಇಲ್ಲದಂತೆ ಹೊದ್ದಿಯೂ ಹೊದ್ದಂತೆ ಇದೆ, ಛಿನ್ನದಲ್ಲಿ ಅಭಿನ್ನವಾಗಿದೆ. ನೀಲಾಕಾಶಗಳಂತೆ ಬ್ರಹ್ಮ ಬ್ರಹ್ಮಾಂಡಗಳು ಒಂದಾಗಿವೆ ಚಿನ್ನ ಬಣ್ಣಗಳಂತೆ ಹಣ್ಣು ರುಚಿಗಳಂತೆ ಅರಿವು ಮರೆವುಗಳು ಕರಿಗೊಂಡಿವೆ; ತೆರವಿಲ್ಲದಿವೆ. ತುದಿಮೊದಲಿಲ್ಲವಾಗಿ ಅದು ಮಹಾಘನವೆನಿಸಿದೆ. ಅದು ಸರ್ವದರಲ್ಲಿ ಸಹಜವಾಗಿದೆ. ಅದರದು ವಿಗಡ ಚಾರಿತ್ರ. ಊಹಿಸದ ಉಪಮೆ, ಭಾವಿಸದ ಭಾವ, ಅರಿಯದ ಅರಿವು ಆದ

ಅದರ ಚರಿತ್ರ ಚಿತ್ರವಿಚಿತ್ರವಲ್ಲದೆ ಮತ್ತೇನು ? ಅದು ಶಬ್ದವನೊಳಕೊಂಡು ನಿಶ್ಯಬ್ದವಾಗಿದೆ. ಅದಕ್ಕೆ ಹೆಸರಿಲ್ಲದ ಹೆಸರು.

ಹೀಗೆ ಹೇಳಿದ ಮಾತ್ರಕ್ಕೆ ಅದು ವಿಕಲ್ಪವಲ್ಲ. ಅದರ ಅರಿವಿಗೆ ಅರ್ಥವಿದೆ. ಅದರ ಭಾವದಲ್ಲಿ ಅನುಭಾವವಿದೆ. ಅದರ ನಿರ್ದೇಶಕ್ಕೆ ಆಕಾಶವಿದೆ. ಆಕಾಶಕುಸುಮದಂತೆ ಅದು ಶೂನ್ಯವಲ್ಲ. ಅದು ನಿರಾಲಂಬ ಶೂನ್ಯ. ಸರ್ವಭರಿತ ಶೂನ್ಯ. ಅದು ಸ್ವತಃಸಿದ್ಧವಾದ ಶೂನ್ಯ.

" ಯಥಾ ನ ಭಿನ್ನಮಾಕಾಶಂ ಘಟೇಷು ಚ ಮಠೇಷು ಚ ।
ತಥಾಂಡೇಷು ಚ ಪಿಂಡೇಷು ಸ್ಥಿತೋ ಹ್ಯಾತ್ಮಾನಭಿದ್ಯತೇ ॥೨॥"

ಮುಗಿಲು ಕೊಡಗಳಲ್ಲಿ ಮನೆಗಳಲ್ಲಿ ಇದ್ದರೂ ಬೇರಲ್ಲವೋ ಹಾಗೆ ಆ ಪರಮಾತ್ಮನು ಬ್ರಹ್ಮಾಂಡ ಪಿಂಡಾಂಡಗಳಲ್ಲಿದ್ದು ಅಭಿನ್ನನಾಗಿದ್ದಾನೆ. ಅವನು ಎಲ್ಲೆಲ್ಲಿಯೂ ಅಭಿನ್ನನಾಗಿದ್ದಾನೆ.

"ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವು ನಾಸ್ತಿಯಾಯಿತ್ತು··"

ತಾನಲ್ಲದನ್ಯ ವಾಸನೆ ಇಲ್ಲಾಗಿ ಅಲ್ಲಿಯೂ ಮಹತ್ತಪ್ಪ ಪೃಥ್ವಿಯಡಗಿತ್ತು. ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ಜಿಹ್ವೆಯಾಯಿತ್ತು; ತಾನಲ್ಲದನ್ಯ ರುಚಿ ಇಲ್ಲವಾಗಿ ಅಲ್ಲಿಯೇ ಮಹತ್ತಪ್ಪ ಅಪ್ಪುವಡಗಿತ್ತು. ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ಜಿಹ್ವೆಯಾಯಿತ್ತು; ತಾನಲ್ಲದನ್ಯ ರುಚಿ ಇಲ್ಲವಾಗಿ ಅಲ್ಲಿಯೇ ಮಹತ್ತಪ್ಪ ಅಪ್ಪುವಡಗಿತ್ತು. ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ನೇತ್ರವಾಯಿತ್ತು; ತಾನಲ್ಲದನ್ಯರೂಪಿಲ್ಲವಾಗಿ ಅಲ್ಲಿಯೇ ಮಹತ್ತಪ್ಪ ಅಗ್ನಿಯಡಗಿತ್ತು. ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ತ್ವಕ್ಕಾಗಿತ್ತು; ತಾನಲ್ಲದನ್ಯ ಸೋಂಕಿಲ್ಲವಾಗಿ ಅಲ್ಲಿಯೇ ಮಹತ್ತಪ್ಪ ವಾಯುವಡಗಿತ್ತು. ಖಂಡಿತವಿಲ್ಲಾಗಿ ಸರ್ವಾಂಗವೆಲ್ಲವೂ ಶ್ರೋತ್ರವಾಯಿತ್ತು; ತಾನಲ್ಲದನ್ಯ ಶಬ್ದವಿಲ್ಲಾಗಿ ಅಲ್ಲಿಯೇ ಮಹತ್ತಪ್ಪ ಆಕಾಶವಡಗಿತ್ತು. ಇಂತು ಪಂಚ ಭೌತಿಕಂಗಳಡಗಿದರೆ ಪಂಚಬ್ರಹ್ಮ ಮಯವಾಯಿತ್ತು. ಅದರೊಳಗೆ ಜಗತ್ತಡಗಿದ ಭೇದವ ಅದೇ ಪಂಚವರ್ಣಾತೀತವಾಗಿ ಮಹತ್ತು ಮಹತ್ತನೊಳಕೊಂಡ ಶರಣನ ಭೇದವನೇನೆಂದುಪಮಿಸುವೆನಯ್ಯಾ ಗುಹೇಶ್ವರಾ ?

ಈ ವಚನದಿಂದ ಪಿಂಡಾಂಡ ಬ್ರಹ್ಮಾಂಡಗಳೆರಡು ಅದರಲ್ಲಿ ಅಡಗಿರುವ ಅಡಗುವ ಬೆಡಗು ಬಗೆಗೊಳ್ಳುತ್ತವೆ. ಅಲ್ಲದೆ ಇವುಗಳಲ್ಲಿ ಅದು ತುಂಬಿಕೊಂಡಿರುವ ದಿವ್ಯಧ್ವನಿಯೂ ಅಭಿವ್ಯಕ್ತವಾಗುತ್ತದೆ

ಅಂಗವು ಲಿಂಗದಲ್ಲಿ ಸಂಗವಾಗಿ ಅಖಂಡವಾಗಿರುತ್ತದೆ. ಅಖಂಡಲಿಂಗಸ್ವರೂಪವಾದ ಶರಣನ ಪಂಚಜ್ಞಾನೇಂದ್ರಿಯಗಳು ಅವುಗಳ ವಿಷಯಗಳು ತಂತಮ್ಮ ಇಂದ್ರಿಯಭಾವವಿಷಯಭಾವಗಳನ್ನು ವಿಸರ್ಜಿಸಿ ಮಹಾಲಿಂಗಸ್ವರೂಪವಾಗಿರುತ್ತವೆ. ಜತೆಗೆ ಶರಣನೂ ಮಹಾಲಿಂಗಸ್ವರೂಪ ಮಹಾಕಾಶಸ್ಥಳಸಂಪನ್ನನಾಗುತ್ತಾನೆ. ಹಾಗೆಯೇ ಆತನ ಸಮಷ್ಟ್ಯಂಗಗಳಾದ ಪಂಚಮಹಾಭೂತಗಳೂ ಆ ಮಹಾಕಾಶದಲ್ಲಿ ಅಡಗುತ್ತವೆ. ಇದರಿಂದ ಅಂಡ-ಪಿಂಡಗಳೆರಡರಲ್ಲಿಯೂ ಆ ಮಹಾಕಾಶ ಅಭಿನ್ನವಾಗಿರುವುದು ಸಹಜವೆನಿಸುತ್ತದೆಯಲ್ಲದೆ ಸಾಂಸ್ಕಾರಿಕವೂ ಆಗಿರುತ್ತದೆ ಶರಣನಲ್ಲಿ. ಇದರಿಂವ ಮಹಾಕಾಶತ್ವವೂ ಸಿದ್ಧವಾಗಿರುವುದು ಮನದಟ್ಟಾಗುತ್ತದೆ. ಆ ಅಭೇದದಲ್ಲಿ ಭೇದ ಪ್ರತೀತಿಯೂ ಆಗುತ್ತದೆ. ಇದಕ್ಕೆ ಅಂಡ-ಪಿಂಡ ಪದ ಪ್ರಯೋಗಗಳು ಸಾಂಕೇತಿಕಗಳಾಗಿವೆ. ಆದರೆ ಅವು ಮಯೂರಾಂಡ ರಸದೊಳಗಿನ ಚಿತ್ರವಿಚಿತ್ರಗಳಂತಿರುತ್ತವೆ.

“ ಅನಿರ್ದೇಶ್ಯಮನೌಪಮ್ಯಮವಾಙ್ಮನಸಗೋಚರಂ |
ಸರ್ವತೋಮುಖ ಸಂಪನ್ನಂ ಸತ್ತಾನಂದ ಚಿದಾತ್ಮಕಂ ॥ ೩ ॥
ಕಾಲಾತೀತಂ ಕಲಾತೀತಂ ಕ್ರಮಯೋಗಾದಿವರ್ಜಿತಂ |
ಸ್ವಾನುಭೂತಿ ಪ್ರಮಾಣಸ್ಥಂ ಜ್ಯೋತಿಷಾಮುದಯಸ್ಥಲಂ ॥ ೪ ॥
ಶಿವಾಖ್ಯಂ ಪರಮಂ ಬ್ರಹ್ಮ ಪರಮಾಕಾಶಲಕ್ಷಣಂ।
ಲಿಂಗಮಿತ್ಯುಚ್ಯತೇ ಸದ್ಭಿಃ ಯದ್ವಿನಾ ನ ಜಗತ್‌ಸ್ಥಿತಿಃ॥ ೫ ॥”

ಈ ಮೂರು ಮಂತ್ರಶ್ಲೋಕಗಳಿಂದ ಮಹಾಕಾಶವೇ ಮಹಾಲಿಂಗವೆಂಬುದನ್ನು ನಿರೂಪಿಸಲಾಗಿದೆ.

ಅದು ತೋರಿಕೆ ಕಾಣಿಕೆಗಳಿಲ್ಲದುದು. ಮಾತು ಮನಗಳಿಗೆ ನಿಲುಕದುದು. ಎಲ್ಲೆಡೆಯಲ್ಲಿ ಮೊಗವುಳ್ಳುದು. ಇರುವು ಅರಿವು ನಲಿವುಗಳುಳ್ಳುದು

ಕಾಲ-ಕಲೆಗಳನ್ನು ಮೀರಿದುದು. ಹುಟ್ಟು ಹೊಂದುಗಳ ಪರಿವಿಡಿಯಿಲ್ಲದುದು. ಅನುಭವ ಪ್ರಮಾಣವುಳ್ಳುದು. ಬೆಳಗುಗಳಿಗೆಲ್ಲಕ್ಕೆ ಮೊದಲ್ನೆಲೆಯಾದುದು, ಪರಶಿವ ಪರಬ್ರಹ್ಮ ಎಂಬ ಹೆಸರುಳ್ಳುದು. ಪರಮಾಕಾಶಲಕ್ಷಣವುಳ್ಳ ಅದನ್ನೆ ಮಹಾಲಿಂಗವೆಂದು ಸತ್ಪುರುಷರು ಹೇಳುತ್ತಾರೆ. ಅದಿಲ್ಲದಿದ್ದಗೆ ಈ ಜಗತ್ತಿರದು. ಅದು ಈ ಜಗತ್ತಿಗೆ ಮಹಾಕಾರಣವಾಗಿದೆ.

೧ ಅಪಂ ಅನಿರ್ದೇಶ್ಯ : ದಿಟ; ಅದು ದೃಶ್ಯವಲ್ಲ. ದೃಶ್ಯ ನಿರ್ದೇಶ್ಯ. ಅದೃಶ್ಯ ಅನಿರ್ದೇಶ್ಯ,

"ಯತ್ತದದ್ರೇಶ್ಯಮಗ್ರಾಹ್ಯಮಗೋತ್ರ ಮವರ್ಣಮಚಕ್ಷುಃ ಸ್ರೋತ್ರಂ ತದಪಾಣಿಪಾದಂ । ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ತದವ್ಯಯಂ ಯಂದ್ಭೂತಯೋನಿಂ ಪರಿಪಶ್ಯಂತಿ ಧೀರಾ: ॥ ೬ ॥

—ಮುಂಡಕ; ೧.೧

ನಿರಾಕಾರವಾದ ಆ ಪರಮಾಕಾಶವು ಜ್ಞಾನೇಂದ್ರಿಯ ವಿಷಯವಲ್ಲ. ಅಗ್ರಾಹ್ಯವೆಂದರೆ ಕರ್ಮೇಂದ್ರಿಯ ಗ್ರಾಹ್ಯವಲ್ಲ. ಅದಕ್ಕೆ ಗೋತ್ರ ಸೂತ್ರವಿಲ್ಲ, ವರ್ಣಭೇದವಿಲ್ಲ. ಅದಕ್ಕೆ ಕಣ್ಣು ಕಿವಿಗಳಿಲ್ಲ, ಕೈಕಾಲುಗಳಿಲ್ಲ. ಅದು ಅವಿನಾಶಿ. ಅದು ವ್ಯಾಪಕ. ಅದು ಸರ್ವಗತ, ಅದು ಸೂಕ್ಷ್ಮಕ್ಕೆ ಸೂಕ್ಷ್ಮ. ಅದು ನಿತ್ಯ. ಅದನ್ನು ಎಲ್ಲ ಭೂತಗಳ ಉತ್ಪತ್ತಿಗೆ ಮಹಾಕಾರಣವನ್ನಾಗಿ ಶಿವಜ್ಞಾನಿಗಳು ತಿಳಿಯುತ್ತಾರೆ. ಅದು ಪರಿಪೂರ್ಣ.

"ಬ್ರಹ್ಮಸ್ಥಾನದಲ್ಲಿ ಜ್ಯೋತಿರ್ಲಿಂಗವಿಪ್ಪುದನರಿತು
ಕ್ರಿಯೆಂವೆರಸಿ ನಿಃಕ್ರಿಯೆಯಲ್ಲಿ ನಿಂದು,
ಕ್ರಮದಿಂದೂರ್ಧ್ವಕ್ಕೈದಲು ಮಹಾಲಿಂಗದ ಬೆಳಗು;
ಆ ಬೆಳಗು ಪೃಥ್ವಿಯಂ ಮುಸುಕಿ, ಅಪ್ಪುವನ್ನೀಂಟಿ,
ಅಗ್ನಿಯಂ ದಹಿಸಿ, ವಾಯುವಂ ನುಂಗಿ, ಆಕಾಶಕ್ಕಳವಲ್ಲದ
ಸ್ಥಲ ನಿಃಸ್ಥಲವನೆಯ್ದಿ ಶೂನ್ಯಾವಸ್ಥೆಯಲ್ಲಿ ನಿಂದ ನಿಲವ,
ಸೌರಾಷ್ಟ್ರ ಸೋಮೇಶ್ವರಾ,
ನಿಮ್ಮ ಶರಣರಲ್ಲದೆ, ಅರಿವು ಮರಹನೊಳಕೊಂಡಿಪ್ಪ
ಅಜ್ಞಾನಿಗಳೆತ್ತ ಬಲ್ಲರಯ್ಯಾ?"

ಅಶಯು. ಪರಮಾನಂದ ಸ್ವರೂಪವನ್ನು ಮಾತಿನಿಂದ ಹೇಳಿ ಮುಗಿಸಲು ಮನಸ್ಸಿನಿಂದ ಅಳೆಯಲು ಸಾಧ್ಯವಿಲ್ಲ. ಮಾತು ಮನಗಳು ಅಪೂರ್ಣವಾದವುಗಳು. ಇದೇ ಅಭಿಪ್ರಾಯಂವನ್ನು ತೈತ್ತಿರೀಯೋಪನಿಷತ್ತು ಹೀಗೆ ಹೇಳಿದೆ;

“ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾಸಹ ।”

ಮನಸ್ಸೇ ಮೊದಲಾದ ಎಲ್ಲ ಇಂದ್ರಿಯಗಳಿಗೆ ಆ ಶಕ್ತಿಯಿಲ್ಲ. ಅಲ್ಪಶಕ್ತಿಯುಳ್ಳವಾಗಿವೆ. ಅನುಭವದ ನೆರವಿಲ್ಲದೆ ಇವು ಅದನ್ನು ಅಳವಡಿಸಿಕೊಳ್ಳವು.

“ ನ ತತ್ರ ಚಕ್ಷುರ್ಗಚ್ಛತಿ, ನ ವಾಗ್ಗಚ್ಛತಿ
ನ ಮನೋ ನ ವಿದ್ಮೋ ನ ವಿಜಾನೀಮೋ-
ಯಥೈತದನುಶಿಷ್ಯಾತ್ ।”

—ಕೇನೋಪನಿಷತ್

ಆ ಮಹಾಕಾಶಸ್ವರೂಪವಾದ ಪರವಸ್ತುವಿನ ಪರಮಾರ್ಥ ಸ್ವರೂಪದನ್ನು ಸಂಪೂರ್ಣವಾಗಿ ಚಕ್ಷುರಾದಿ ಜ್ಞಾನೇಂದ್ರಿಯಗಳು, ವಾಗಾದಿ ಕರ್ಮೇಂದ್ರಿಯಗಳು ಮನಸಾದಿ ಅಂತಃಕರಣಗಳು ಸಂಸ್ಕಾರವಿಲ್ಲದೆ ಪ್ರಾಕೃತಭಾವದಲ್ಲಿದ್ದು ಅರಿಯಲಾರವು; ಅದನ್ನು ಆಯತ ಸ್ವಾಯತಗೊಳಿಸಿಕೊಳ್ಳಲಾರವು ; ಸನ್ನಿಹಿತತ್ವದ ಮಾತಂತೂ ದೂರ ಉಳಿಯಿತು. ಶ್ರೀಗುರುದೇವನ ಕಾರುಣ್ಯದಿಂದ ತಂತಮ್ಮ ಪೂರ್ವಾಶ್ರಯ ಪ್ರಾಕೃತಿಕ ಐಂದ್ರಿಕಭಾವವನ್ನು ನಿರಸನ ಮಾಡಿಕೊಂಡು ಪ್ರಸಾದ ಸ್ವರೂಪವಾದರೆ ಆಗ ಆ ವಸ್ತುವಿನ ಆಯತ್ತತೆ ಸ್ವಾಯತ್ತತೆ ಸನ್ನಿಹಿತತ್ವಗಳು ಸಮನಿಸುತ್ತವೆ. ಈ ಅಭಿಪ್ರಾಯವನ್ನು ಪೋಷಿಸುತ್ತದೆ ಆ ಉಪನಿಷನ್ಮಂತ್ರದ ‘ಯಥೈತದನುಶಿಷ್ಯಾತ್’ ಎಂಬ ವಾಕ್ಯ; ಗುರೂಪದೇಶವಾಗದೆ ತಿಳಿಯದು, ತಿಳಿಯಲು ಶಕ್ತಿಯುಂಟಾಗದು. ನಾವೇ ನಮ್ಮ ಬುದ್ಧಿಯಿಂದ ತಿಳಿಯುವಷ್ಟು ಯಾರೋ ಹೇಳಿದ್ದನ್ನು ಕೇಳಿ ತಿಳಿಯುವಷ್ಟು ಅದು ಸುಲಭವಲ್ಲ. ಶ್ರೋತ್ರೀಯನೂ ಜತೆಗೆ ಬ್ರಹ್ಮನಿಷ್ಠನೂ ಆದ ಶ್ರೀಗುರುದೇವನ ಉಪದೇಶದಿಂದ ಮಾತ್ರ ಅದು ಲಭ್ಯ. ಅದನ್ನು ತಿಳಿಯಲು ವಾಙ್ಮನಗಳಿಗೆ ಶಕ್ಯ. ಆಗ ಇದು ವಾಕ್ಕಲ್ಲ, ಅದು ಮನವಲ್ಲ.

ನಿಷ್ಕಲಸ್ವರೂಪವು ನಿರ್ದೇಶಕ್ಕೆ ಬಾರದು. ನಿರವಯವವಸ್ತು ಸಾವಯವದ ನಿರ್ದೇಶಕ್ಕೆ ನಿಲುಕದು.

೨. ಅದು ಅನೌಪಮ್ಯ: ಅದು ಅದ್ವಯ. ಅಪ್ರತಿಮ. ಅದಕೊಂದು ಪ್ರತಿಯಿಲ್ಲ. ಅದರಿಂದ ಅದಕ್ಕೆ ಉಪಮೆಯಿಲ್ಲ. ನಿರ್ದೇಶವಿಲ್ಲದ ಬಳಿಕ ನಿದರ್ಶನವೂ ಇರದು; ಇಲ್ಲ. ಅದಕ್ಕಿನ್ನೊಂದು ಸಾಮ್ಯವಸ್ತುವಿಲ್ಲ. ಅದರಿಂದ ಉಪಮೆಗೆ ಅದರಲ್ಲಿ ಪ್ರವೃತ್ತಿಯುಂಟಾಗುವುದಿಲ್ಲ. 'ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್' ಎಂದು ಛಾಂದೋಗ್ಯಶ್ರುತಿಯೂ 'ಆತ್ಮಾವಾ ಇದಮೇಕ ಏವಾಗ್ರ ಆಸೀತ್' ಎಂದು ಐತರೇಯ ಶ್ರುತಿಯೂ ನಿರೂಪಿಸಿವೆ. ಸೃಷ್ಟಿಗೆ ಮೊದಲು ಈ ಜಗತ್ತೂ ಸಹ ಒಂದೇ ಆಗಿ ತನಗೆ ಬೇರೊಂದಿಲ್ಲವಾಗಿ ಸತ್ಸ್ವರೂಪವಾಗಿತ್ತು. ಈ ಆತ್ಮನು ಮುಂಮೊದಲು ಒಂದೇ ಇತ್ತು. ಹೀಗೆ ಬೇರೊಂದು ವಸ್ತುವೇ ಇಲ್ಲದ ಬಳಿಕ ಹೋಲಿಸಿ ಹೇಳುವುದು ಹೇಗೆ ? ಆದರಿಂದ ಅದು ಅನೌಪಮ್ಯವಸ್ತು; ಅಪ್ರತಿಮ ವಸ್ತು. ಅದ್ವಯ ವಸ್ತು, ಆದರಂತೆ ಅದಿತ್ತು, ಅದಿದೆ; ಅದಿರುತ್ತದೆ.

ಉಪಮಾನ ಪ್ರಾಮಾಣ್ಯತೆಯನ್ನು ಅಂಗೀಕರಿಸಿದರೆ ಅನಿರ್ದೇಶತ್ವ ಸಿದ್ಧಿಸದು, ನಿರ್ದೇಶವುಳ್ಳುದೇ ನಿದರ್ಶನಕ್ಕೆ ಬರುತ್ತದೆ; ನಿದರ್ಶನಕ್ಕೆ ಬಂದುದು ನಿರ್ದೇಶಕ್ಕೆ ಒಳಗಾಗುತ್ತದೆ. ಅನಿರ್ದೇಶ್ಯ ಸಿದ್ಧಿಸಬೇಕಾದರೆ ಅನೌಪಮ್ಯ ಅಗತ್ಯ; ಅನಿವಾರ್ಯ.

೩. ಅದು ಅವಾಙ್ಮನಸಗೋಚರ: ಅದು ಮಾತು ಮನಗಳಿಗೆ ನಿಲುಕದದು. ದಿಟ; ಮಾತು ಮಾತಾಗಿಯೆ, ಮನ ಮನವಾಗಿಯೆ ಇದ್ದರೆ ಆದು ಇವುಗಳಿಗೆ ಅಗೋಚರ. ಮಾತು ಮಂತ್ರವಾದರೆ ಮನ ಘನವಾದರೆ ಮಾತ್ರ ಅದು ಇವುಗಳಿಗೆ ಗೋಚರವಾಗುತ್ತದೆ. ಹಾಗಾಗಬೇಕಾದರೆ ಗುರುದೇವನ ಕರುಣೆ ಬೇಕು; ಗುರುದೇವನು ಅನುಗ್ರಹಿಸುವ ಸತ್ಸಂಸ್ಕಾರಬೇಕು. ಸಂಸ್ಕಾರದಿಂದ ಮಾತಿನ ಮೊದಲನರಿಯಬೇಕು. ಮನದ ಗುಣಗಳಳಿಯಬೇಕು.

'ಅವಾಙ್ಮನಸಗೋಚರಂ' ಎಂದು ಹೇಳುವಲ್ಲಿ ಮಾತು ಮನಗಳು ಆ ಪರಶಿವಬ್ರಹ್ಮವಸ್ತುವಿಗೆ ಹೊರಗಾದವೆಂದು ಅರ್ಥವಲ್ಲ. ಮಾತು ಮನಗಳು ಆ ವಸ್ತುವನ್ನು ಪೂರ್ಣಪ್ರತಿನಿಧಿಸುವುದಿಲ್ಲವೆಂಬುದೆ ಹಾಗೆ ಹೇಳುವುದರ

ಅಶಯು. ಪರಮಾನಂದ ಸ್ವರೂಪವನ್ನು ಮಾತಿನಿಂದ ಹೇಳಿ ಮುಗಿಸಲು ಮನಸ್ಸಿನಿಂದ ಅಳೆಯಲು ಸಾಧ್ಯವಿಲ್ಲ. ಮಾತು ಮನಗಳು ಅಪೂರ್ಣವಾದವುಗಳು. ಇದೇ ಅಭಿಪ್ರಾಯವನ್ನು ತೈತ್ತಿರೀಯೋಪನಿಷತ್ತು ಹೀಗೆ ಹೇಳಿದೆ;

"ಯತೋ ವಾಚೋ ನಿವರ್ತಂತೇ ಅಪ್ರಾಪ್ಯ ಮನಸಾಸಹ ।"

ಮನಸ್ಸೇ ಮೊದಲಾದ ಎಲ್ಲ ಇಂದ್ರಿಯಗಳಿಗೆ ಆ ಶಕ್ತಿಯಿಲ್ಲ. ಅಲ್ಪಶಕ್ತಿಯುಳ್ಳವಾಗಿವೆ. ಅನುಭವದ ನೆರವಿಲ್ಲದೆ ಇವು ಅದನ್ನು ಅಳವಡಿಸಿಕೊಳ್ಳವು.

" ನ ತತ್ರ ಚಕ್ಷುರ್ಗಚ್ಛತಿ, ನ ವಾಗ್ಗಚ್ಛತಿ
ನ ಮನೋ ನ ವಿದ್ಮೋ ನ ವಿಜಾನೀಮೋ-
ಯಥೈತದನುಶಿಷ್ಯಾತ್ ।"

—ಕೇನೋಪನಿಷತ್

ಆ ಮಹಾಕಾಶಸ್ವರೂಪವಾದ ಪರವಸ್ತುವಿನ ಪರಮಾರ್ಥ ಸ್ವರೂಪದನ್ನು ಸಂಪೂರ್ಣವಾಗಿ ಚಕ್ಷುರಾದಿ ಜ್ಞಾನೇಂದ್ರಿಯಗಳು, ವಾಗಾದಿ ಕರ್ಮೇಂದ್ರಿಯಗಳು ಮನಸಾದಿ ಅಂತಃಕರಣಗಳು ಸಂಸ್ಕಾರವಿಲ್ಲದೆ ಪ್ರಾಕೃತಭಾವದಲ್ಲಿದ್ದು ಅರಿಯಲಾರವು; ಅದನ್ನು ಆಯತ ಸ್ವಾಯತಗೊಳಿಸಿಕೊಳ್ಳಲಾರವು ; ಸನ್ನಿಹಿತತ್ವದ ಮಾತಂತೂ ದೂರ ಉಳಿಯಿತು. ಶ್ರೀಗುರುದೇವನ ಕಾರುಣ್ಯದಿಂದ ತಂತಮ್ಮ ಪೂರ್ವಾಶ್ರಯ ಪ್ರಾಕೃತಿಕ ಐಂದ್ರಿಕಭಾವವನ್ನು ನಿರಸನ ಮಾಡಿಕೊಂಡು ಪ್ರಸಾದ ಸ್ವರೂಪವಾದರೆ ಆಗ ಆ ವಸ್ತುವಿನ ಆಯತ್ತತೆ ಸ್ವಾಯತ್ತತೆ ಸನ್ನಿಹಿತತ್ವಗಳು ಸಮನಿಸುತ್ತವೆ. ಈ ಅಭಿಪ್ರಾಯವನ್ನು ಪೋಷಿಸುತ್ತದೆ ಆ ಉಪನಿಷನ್ಮಂತ್ರದ 'ಯಥೈತದನುಶಿಷ್ಯಾತ್' ಎಂಬ ವಾಕ್ಯ; ಗುರೂಪದೇಶವಾಗದೆ ತಿಳಿಯದು, ತಿಳಿಯಲು ಶಕ್ತಿಯುಂಟಾಗದು. ನಾವೇ ನಮ್ಮ ಬುದ್ಧಿಯಿಂದ ತಿಳಿಯುವಷ್ಟು ಯಾರೋ ಹೇಳಿದ್ದನ್ನು ಕೇಳಿ ತಿಳಿಯುವಷ್ಟು ಅದು ಸುಲಭವಲ್ಲ. ಶ್ರೋತ್ರಿಯನೂ ಜತೆಗೆ ಬ್ರಹ್ಮನಿಷ್ಠನೂ ಆದ ಶ್ರೀಗುರುದೇವನ ಉಪದೇಶದಿಂದ ಮಾತ್ರ ಅದು ಲಭ್ಯ. ಅದನ್ನು ತಿಳಿಯಲು ವಾಙ್ಮನಗಳಿಗೆ ಶಕ್ಯ. ಆಗ ಇದು ವಾಕ್ಕಲ್ಲ, ಅದು ಮನವಲ್ಲ.

ವಾಙ್ಮನಗಳಿಗೆ ಗೋಚರವಾದುದು ಉಪಮಾನಕ್ಕೆ ಯೋಗ್ಯವಾಗುತ್ತದೆ. ನಿರ್ದೇಶಕ್ಕೆ ಯೋಗ್ಯವಾಗುತ್ತದೆ. ಕಾರಣ ಆ ಮಹಾಕಾಶ ಅವಾಙ್ಮನಸಗೋಚರ ಎಂದೇ ಹೇಳಬೇಕು.

೪. ಅದು ಸರ್ವತೋಮುಖಸಂಪನ್ನವಸ್ತು ; ಮುಖವೆರಡುಂಟು. ಒಂದು ಬಹಿರ್ಮುಖ; ಇನ್ನೊಂದು ಅಂತರ್ಮುಖವುಂಟು.

ಬಾಹ್ಯ ಮುಖ ಒಂದೇ ಒಂದು ; ಅಂತರ್ಮುಖ ಅನಂತ. ಮುಗಿಲಿಗೆ ಮೈಯೆಲ್ಲ ಮುಖ; ಅಂತೆಯೇ ಮಹಾಕಾಶಕ್ಕೆ!

ಎರಡನೆಯದಾಗಿ ಎಲ್ಲ ಪ್ರಾಣಿಗಳಲ್ಲಿಯೂ ಅದಿದೆ. ಅದರಿಂದ ಎಲ್ಲ ಪ್ರಾಣಿಗಳ ಮುಖಗಳೂ ಅದರವೆ ಆಗಿರುತ್ತವೆ. ಬಾಹ್ಯಮುಖ ಆಹತನಾದವುಳ್ಳುದು; ದೃಶ್ಯವನ್ನು ಕಾಣಬಲ್ಲುದು, ಮೂರ್ತಿಮತ್ತವಸ್ತುವನ್ನು ಗ್ರಹಿಸಬಲ್ಲುದು. ವೈಖರಿ ಶಬ್ದವನ್ನು ಕೇಳಬಲ್ಲುದು. ಸ್ಥೂಲ ಪರಿಮಳವನ್ನು ಮೂಸಬಲ್ಲುದು. ಅಲ್ಲದೆ ಬಾಹ್ಯಮುಖ ಒಂದೊಂದನ್ನು ಗ್ರಹಿಸಿದರೆ ಅಂತರ್ಮುಖ ಎಲ್ಲವನ್ನೂ ಗ್ರಹಿಸಬಲ್ಲುದು, ಆ ಮಹಾಕಾಶವು ಎಲ್ಲವನ್ನೂ ಒಳಕೊಳ್ಳಬಲ್ಲುದಾಗಿ ಎಲ್ಲೆಲ್ಲಿಯೂ ಇರುವುದಾಗಿ ಅದು ಸರ್ವತೋಮುಖ ಸಂಪನ್ನ.

ಏಕತ್ರ ಮತ್ತು ಏಕೈಕ ಮುಖವುಳ್ಳುದು ವಾಙ್ಮನಗಳಿಗೆ ಗೋಚರವಾಗುತ್ತದೆ. ಸರ್ವತೋಮುಖವುಳ್ಳುದು ವಾಙ್ಮನಗಳಿಗೆ ಗೋಚರವಾಗದು.

೫. ಅದು ಸತ್ತಾನಂದ ಚಿದಾತ್ಮಕ: ಅದು ಅನಿರ್ದೇಶ್ಯವೆಂದು ಹೇಳುವುದರಿಂದ ಅಸತ್‌ವಸ್ತು ಎಂದು ಊಹಿಸಬಹುದು; ಅದನ್ನು ನಿವಾರಿಸಲು ಸತ್ ವಸ್ತು ಎಂದು ನಿರೂಪಿಸಲಾಗಿದೆ. ಬರೀ ಸದ್ವಸ್ತು ಎಂದು ಹೇಳಿದರೆ ಅನಿರ್ದೇಶ್ಯತ್ವ ನಿರೂಪಣೆ ಪೂರೈಸದು. ವಸ್ತು ಇದ್ದರೂ ಕತ್ತಲಲ್ಲಿ ಇದ್ದರೆ ಅನಿರ್ದೇಶ್ಯವಾಗಬಹುದು; ಆಗುತ್ತದೆ. ಆದರೆ ಅದು ಅಜ್ಞಾನಾಂಧಕಾರದಲ್ಲಿಲ್ಲ, ಅಜ್ಞಾನಾಂಧಕಾರವೂ ಅಲ್ಲ ಎಂಬುದನ್ನು ಚಿಲ್ಲಕ್ಷಣ ನಿವಾರಿಸುತ್ತದೆ. ಸಚ್ಚಿತ್ತಾಗಿದ್ದರೂ ಸುಖಸ್ವರೂಪವಾಗದಿದ್ದರೆ ಅನಿರ್ದೇಶ್ಯವಾಗುವುದುಂಟು. ಅಸುಖವಸ್ತುವಾಗಿ ಅನಿರ್ದೇಶ್ಯವಾದರೆ ಪ್ರಯೋಜನವಿಲ್ಲ. ಅದು ಸುಖಸ್ವರೂಪವೇ ಆಗಿದೆ. ತನಗಾದ ಸಾಮಾನ್ಯ ಸುಖವನ್ನು ನಿರ್ದೇಶಿಸಲು ಸಾಧ್ಯವಿಲ್ಲ. ಆ

ಮಹಾಕಾಶವು ಮಹಾನಂದಸ್ವರೂಪವಾಗಿದೆ. ಅದನ್ನು ಅಳವಡಿಸಿಕೊಂಡವರು ಉಳಿದವರಿಗೆ ನಿರ್ದೇಶಿಸಲಾರರು. ಒಟ್ಟಿನಲ್ಲಿ ಅಸತ್ತಾಗಿ ಅಚಿತ್ತಾಗಿ ಅಸುಖವಾಗಿ ಅನಿರ್ದೇಶ್ಯವಾಗುವುದೊಂದು ಬಗೆ; ಸತ್ತಾಗಿ ಚಿತ್ತಾಗಿ ಸುಖಸ್ವರೂಪವಾಗಿ ಅನಿರ್ದೇಶ್ಯವಾಗುವುದು ಇನ್ನೊಂದು ಬಗೆ. ಮೊದಲಿನದು ವ್ಯರ್ಥ; ಎರಡನೆಯದು ಸಾರ್ಥ. ಮಹಾಕಾಶವು ಸಾರ್ಥಕವಾದ ವಸ್ತು. ಸತ್ತಾನಂದ ಚಿದಾತ್ಮಕವಾದುದು. 'ಐತದಾತ್ಮ್ಯಮಿದಂ ಸರ್ವಂ ತತ್ಸತ್ಯಂ ಸ ಆತ್ಮಾ' 'ಸತ್ಯಂ ಬ್ರಹ್ಮ' 'ವಿಜ್ಞಾನಂ ಬ್ರಹ್ಮ' 'ಆನಂದಂ ಬ್ರಹ್ಮ' ಈ ಎಲ್ಲ ಶ್ರುತಿ ಮಾತುಗಳು ಸ್ಮೃತಿಗೆ ತಕ್ಕವುಗಳಾಗಿವೆ.

> " ಸತ್ಯಂ ಜ್ಞಾನಮನಂತಂ ಬ್ರಹ್ಮ ।
> ಯೋವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ।
> ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತೇತಿ"
>
> —ತೈತ್ತಿರೀಯೋಪನಿಷತ್,

ಸಚ್ಚಿದಾನಂದ ಸ್ವರೂಪವಾದ ಆ ವಸ್ತು ಪರಮಾಕಾಶ ಸ್ವರೂಪವಾದರೂ ಅದು ದೂರದ ವಸ್ತುವಲ್ಲ, ನಿಲುಕದವಸ್ತುವಲ್ಲ. ಅದು ಎಲ್ಲ ಪ್ರಾಣಿಗಳ ಮಿಗಿಲಾಗಿ ಮಾನವರ ಹೃದಯ ಗುಹೆಯಲ್ಲಿಯೂ ಇದೆ. ಅದನ್ನು ಅರಿತು ಅಳವಡಿಸಿಕೊಂಡವನು ವಿಜ್ಞಾನಿಯೆನಿಸುತ್ತಾನೆ; ವಿಶಿಷ್ಟನೆನಿಸುತ್ತಾನೆ. ಆ ಪರಬ್ರಹ್ಮದೊಡನೆ ಎಲ್ಲ ಭೋಗಗಳನ್ನು ಅನುಭವಿಸುತ್ತಾನೆ. ಇದರಿಂದಾಗಿ ಅದಿದೆ ಅದು ಬೆಳಗುತ್ತದೆ; ಪ್ರಿಯವಾಗಿದೆ.

೬. ಆರನೆಯದಾಗಿ ಅದು ಕಾಲಾತೀತವಸ್ತು, ಅದು ಅಂದಿತು ಇಂದಿಲ್ಲ ಮುಂದಿನ ಮಾತು ಹೇಗೋ ಎಂದೆನ್ನುವಂತಿಲ್ಲ. ಅದು ತ್ರಿಕಾಲಗಳಿಂದ ಅಬಾಧಿತವಸ್ತು. ಅಂದಿತ್ತು, ಇಂದಿದೆ; ಮುಂದೆಯೂ ಇರುತ್ತದೆ. ಪ್ರಾಗಭಾವ ಪ್ರಧ್ವಂಸಾಭಾವ ಅನ್ಯೋನ್ಯಾಭಾವ ಅತ್ಯಂತಾಭಾವಗಳಿಂದ ವಿರಹಿತವಾದ ವಸ್ತುವದು. ಅದು ಕಾಲಕ್ಕೆ ಕಾಲವಾಗಿದೆ. ಅದರ ಈಕ್ಷಣದಿಂದ ಕಾಲ ಉತ್ಪತ್ತಿಯಾಗಿದೆ. [illegible] ಮಹಾಕಾಶ. ಇದರಿಂದ ಅದು ಕಾಲಕ್ಕೆ ಮಹಾಕಾರಣ,

೭. ಆದು ಕಲಾತೀತ: ಅದು ಕೇವಲ ನಿಷ್ಕಲ. ನಿಷ್ಕಲವೆಂದರೆ ಪರಿಪೂರ್ಣಾಖಂಡಸ್ವರೂಪ; ಅವಿಭಕ್ತ ವಸ್ತು.

ಕಲೆಯೆಂದರ ಖಂಡ, ವಿದ್ಯೆ, ಕಪ್ಪು ಎಂದು ಮುಂತಾದ ಅರ್ಥಗಳಿವೆ. ಕಳೆಯೆಂದೂ ಅರ್ಥವಿದೆ.

ಆರು, ಹದಿನಾರು, ಮೂವತ್ತೆರಡು, ಮೂದತ್ತೆಂಟು ಕಲೆಗಳನ್ನು ನಿರೂಪಿಸುವುದುಂಟು. ಇವೆಲ್ಲವನ್ನೊಳಗೊಂಡು ಮೀರಿರುವುದು ಮಹಾಕಾಶ.

೮. ಅದು ಕ್ರಮಯೋಗಾದಿ [illegible]ತಂ: ಕಲೆಯುರುವಲ್ಲಿ ಕ್ರಮವಿದೆ ಕಾಲವಿರುವಲ್ಲಿ ಕ್ರಮವಿದೆ. ಕಲೆ ಕಾಲಗಳನ್ನು ಮೀರಿದ ಆ ಮಹಾವಸ್ತುವಿನಲ್ಲಿ ಯಾವ ಕ್ರಮಕ್ಕೂ ಎಡೆಯಿರುವುದಿಲ್ಲ. ಕಾಲ ಕಟ್ಟಳೆ ಕಲಾಕಟ್ಟಳೆಗಳಿರುವುದಿಲ್ಲ. ಮೂರ್ತಿರೂಪವಿಲ್ಲವಾಗಿ ಯಾವ ನೀತಿ ರೀತಿಗಳಾಗಲಿ ಉತ್ಪತ್ತಿ ಸ್ಥಿತಿ ಲಯಗಳಾಗಲಿ ಬಾಲ್ಯ ಕೌಮಾರ ಯೌವನ ವಾರ್ಧಿಕ್ಯಗಳಾಗಲಿ ಜಾಗ್ರತ್ ಸ್ವಪ್ನ ಸುಷುಪ್ತಿಗಳೇಗಲಿ ಅದಕ್ಕಿರುವುದಿಲ್ಲ. ನಡೆನುಡಿಗಳ ಕ್ರಮವೂ ಇರುವುದಿಲ್ಲ.

ಕ್ರಮ ಒಂದು ಯೋಗ. ಕ್ರಮದಿಂದಿರುವುದಕ್ಕಿಂತ ಬೇರೆ ಯೋಗವಿಲ್ಲ; ಬೇರೆ ಭಾಗ್ಯವಿಲ್ಲ. ಅಕ್ರಮದಿಂದಿರುವುದಕ್ಕಿಂತ ಕಷ್ಟ ಬೇರಿಲ್ಲ. 'ಕ್ರಮ ತಪ್ಪಿ ನಡೆಯುವದರಿಂದಿನ್ನು ಕಷ್ಟಮುಂಟೆ?' ಎಂದು ನಿಜಗುಣರು ಹಾಡಿದ್ದಾರೆ.

ಕ್ರಮಯೋಗ ಅಂಗನಿಗೆ ಮಾತ್ರ; ಅಂಗ ಸತ್ಯ ಸಾಧಕ. ಸತ್ಯ ಸಿದ್ಧಿಯಾಗಬೇಕಾದರೆ ಕ್ರಮ ಮಾರ್ಗವಿಡಿದು ಮುಂದುವರಿಯಬೇಕು. ಅಣು ಮಹತ್ತಾಗಬೇಕಾದರೆ ಅಲ್ಪ ಅನಲ್ಪವಾಗಬೇಕಾದರೆ ಕ್ರಮ ಕ್ರಮಣ ಅತ್ಯಗತ್ಯ. ಕಟ್ಟು ಕಟ್ಟಳೆ, ನೀತಿ ನಿಯಮ, ಅಚ್ಚುಕಟ್ಟುತನ, ಪ್ರಗತಿ ಮನೋಭಾವ, ಸುವ್ಯವಸ್ಥೆ, ಒಳ್ಳೆಯ ಪದ್ಧತಿ ಇವೆಲ್ಲ ಮಹಾಜೀವನಕ್ಕೆ ಬೇಕಾಗುವ ಕ್ರಮಗಳು, ಇವೆಲ್ಲ ಇದ್ದರೆ ಅದನ್ನು ಸಮನ್ವಯಿಸಿ ಕ್ರಮಯೋಗವೆಂದು ಹೇಳುವರು. ಈ ಕ್ರಮಯೋಗ ಆ ಅಖಂಡವಾದ ಮಹಾಕಾಶಕ್ಕೆ ಮಾತ್ರ ಅಗತ್ಯವಿಲ್ಲ. ಆ ಮಹಾವಸ್ತುವಿನ ಸಾಕ್ಷಾತ್ಕಾರವನ್ನು ಪಡೆದ ಮಹಾನುಭಾವಿಗಳಿಗೂ ಅಗತ್ಯವಿಲ್ಲ.

೯. ಸ್ವಾನುಭೂತಿ ಪ್ರಮಾಣ: ಪ್ರತ್ಯಕ್ಷ ಅನುಮಾನ ಆಗಮ ಪ್ರಮಾಣ

ಅಪ್ರಮಾಣವಾದ ಆ ವಸ್ತುವನ್ನು ಶ್ರೀಗುರುದೇವನು ತನ್ನ ಕರುಣೆಯಿಂದ ಸ್ವಾನುಭವ ಪ್ರಮಾಣಕ್ಕೆ ತಂದು ಅಳವಡಿಸುತ್ತಾನೆ. ಬಳಿಕ ಆಗಮ ಪ್ರಮಾಣಕ್ಕೆ ಅನಂತರ ಪ್ರತ್ಯಕ್ಷ ಪ್ರಮಾಣಕ್ಕೆ ತಂದು ಪ್ರಾಣಲಿಂಗ–ಕ್ರಿಯಾಲಿಂಗಗಳನ್ನಾಗಿಸಿ ಕರುಣಿಸುತ್ತಾನೆ.

ಸಕಲವಸ್ತು ಪ್ರತ್ಯಕ್ಷ ಪ್ರಮಾಣಗೋಚರ. ಸಕಲ-ನಿಷ್ಕಲವಸ್ತು ಆಗಮ ಪ್ರಮಾಣ ಗೋಚರ. ನಿಷ್ಕಲವಸ್ತು ಅನುಮಾನ ಪ್ರಮಾಣಗೋಚರ. ನಿಷ್ಕಲಾತೀತ ಮಹಾಕಾಶ ಅನುಭವೈಕ ಪ್ರಮಾಣ ಗೋಚರ.

ಪ್ರತ್ಯಾಕ್ಷಾದಿ ಪ್ರಮಾಣಗಳು ನಿರೋಧಯೋಗ್ಯಗಳು. ಸ್ವಾನುಭವವು ಸ್ವತಂತ್ರವೂ ಅನಿರೋಧವೂ ಆಗಿದೆ. ಪ್ರತ್ಯಕ್ಷಾದಿ ಪ್ರಮಾಣಗಳು ವೃತ್ತಿಗಳು. ನೇತ್ರಮನ ಭಾವಗಳಲ್ಲಿರುವ ಅಜ್ಞಾನವನ್ನು ಕಳೆಯಲು ಕ್ರಮವಾಗಿ ಪ್ರತ್ಯಕ್ಷ ಆಗಮ ಅನುಮಾನ ಪ್ರಮಾಣಗಳು ಸಾಧನವಾಗಿವೆ. ನೇತ್ರಮನ ಭಾವಗಳಿಗೆ ಅರಿವುಂಟಾದರೆ ಇವುಗಳ ಕೆಲಸವಿಲ್ಲ. ಇವು ಪರಿಮಿತವಸ್ತು ಜ್ಞಾನವನ್ನುಂಟು ಮಾಡುತ್ತವೆ. ವಿಪರ್ಯಯ ವಿಕಲ್ಪ ನಿದ್ರಾದಿಗಳನ್ನು ಕಳೆಯುತ್ತವೆ.

ಕ್ರಿಯಾಲಿಂಗ ಪ್ರತ್ಯಕ್ಷವಾಗಿ ನೇತ್ರದೋಷವನ್ನು, ಜ್ಞಾನ ಅಥವಾ ಪ್ರಾಣಲಿಂಗ ಆಗಮಸಿದ್ಧವಾಗಿ ಮನದ ದೋಷವನ್ನು. ಭಾವಲಿಂಗ ಅನುಮಾನ ಸಿದ್ಧವಾಗಿ ಭಾವದೋಷವನ್ನು ಪರಿಹರಿಸುತ್ತವೆ. ಸ್ವಾನುಭವ ಪ್ರಮಾಣವು ಜೀವಭಾವವನ್ನು ತೊಲಗಿಸಿ ಪರಮಾಕಾಶ ಸ್ವರೂಪದ ಪರಮಾನುಭವವನ್ನುಂಟು ಮಾಡುತ್ತದೆ, ಶಿವಾದ್ವೈತಸಿದ್ಧಾಂತದಲ್ಲಿ ಸ್ವಾನುಭವ ಪ್ರಮಾಣವೇ ಚರಮ ಪ್ರಮಾಣ. ಮೀರಿದ ಕ್ರಿಯೆಯಲ್ಲಿ ಇರುವ ಪರಮ ಪ್ರಮಾಣ. ಸತ್ಕ್ರಿಯೆ ಸಮ್ಯಗ್ಜ್ಞಾನಗಳೆರಡೂ ಸಮರಸವಾಗಿ ಕರಿಗೊಂಡುದರ ಪರಿಣಾಮವೇ ಸ್ವಾನುಭವ.

ಕಾಣದ್ದನ್ನು ಕಾಣಿಸುವುದು ಪ್ರತ್ಯಕ್ಷ. ಅರಿಯದ್ದನ್ನು ಅರಿಯಿಸುವುದು ಆಗಮ. ಸಂಶಯವನ್ನು ಕಳೆದು ನಿರ್ಣಯವನ್ನುಂಟುಮಾಡುವುದು ಅನುಮಾನ. ಆ ನಿಶ್ಚಿತವಸ್ತು ಸುಖದಲ್ಲಿರುವುದು ಅನುಭವ. ಈ ಅನುಭವ ತನ್ನದೇ ಹೊರತು ಬೇರೆಯಲ್ಲ. ಸುಖಾನುಭವ ಸ್ವೀಕರಿಸುವವನೇ ಪರಕೀಯವಲ್ಲ. ಇದೊಂದು ಸಾಮಾನ್ಯವಾದ ಸ್ಥಲವಿವರಣೆ, ಸಂಕ್ಷಿಪ್ತ ವಿವರಣೆ

ಪ್ರತ್ಯಕ್ಷ ಪ್ರಮಾಣ ಕೇವಲ ಕಣ್ಣಿನಲ್ಲಿಯೇ ನಿಲ್ಲುವುದಿಲ್ಲ. ಕಣ್ಣಿನಿಂದ ಕಾಣುವಿಕೆಯ ಮೊದಲ್ಗೊಂಡು ಬಳಿಕ ಮನ ಭಾವಗಳನ್ನೂ ಅರಿವು ನಿರ್ಣಯಗಳ ಮುಖಾಂತರ ಬಳಸಿಕೊಳ್ಳುತ್ತದೆ. ಅಂತೆಯೇ ಆಗಮಾನುಮಾನಗಳೂ ಮೂರನ್ನೂ (ನೇತ್ರಮನಭಾವಗಳನ್ನೂ) ಬಳಸಿಕೊಳ್ಳುತ್ತವೆ. ಗಂಧ ರಸ ರೂಪ ಸ್ಪರ್ಶ ಶಬ್ದಗಳು ಕ್ರಮವಾಗಿ ಮೂಗು ನಾಲಗೆ ಕಣ್ಣು ತೊವಲು ಕಿವಿಗಳಿಗೆ ಪ್ರತ್ಯಕ್ಷವಾಗುತ್ತವೆ. ಇವೆಲ್ಲವುಗಳ ತೃಪ್ತಿ ಮನಕ್ಕೆ ಗೋಚರವಾಗುತ್ತದೆ. ಮನದ ಆತೃಪ್ತಿಯ ಅರಿವೇ ಅನುಭವವಲ್ಲ. ಮನವರಿತದನ್ನು ಆತ್ಮವು ಭೋಗಿಸಿದಾಗ ಅದು ಅನುಭವ ಅಥವಾ ಸ್ವಾನುಭವವೆನಿಸುತ್ತದೆ. ಸ್ವಾನುಭವ ಪದದೊಳಗಿನ 'ಸ್ವ' ಪದ ಈ ದೃಷ್ಟಿಯಲ್ಲಿ ಗಮನೀಯ. ಗಮನಿಸಿದರೆ ಹೊಳೆವುದು ಈ ಇನ್ನೊಂದು ಮುಖ್ಯವಾದ ಅರ್ಥ, ಅದಿದು; ಸ್ವಾನುಭವವೆಂದರೆ ಆತ್ಮಾನಂದದ ಅನುಭವ, ಅಥವಾ ಆತ್ಮಾನುಭವ. ಗಂಧಾದಿಗಳ ಅನುಭವವು ಸಂಬಂಧಾನುಭವ. ಆತ್ಮಾನುಭವ ಸಹಜಾನುಭವ. ಸಂಬಂಧಾನುಭವ ಸ್ವಲ್ಪ ಹೊತ್ತಿನಲ್ಲಿ ವಿನಾಭಾವವನ್ನು ಪಡೆಯುತ್ತದೆ, ಅಂದರೆ ಅಗಲುತ್ತದೆ ಅಥವಾ ಅಣಗುತ್ತದೆ. ಸಹಜಾನುಭವವು ಅವಿನಾಭಾವ ಸಂಬಂಧವುಳ್ಳುದು. ಅದು ಚೈತನ್ಯ ಪ್ರತಿಬಿಂಬದಿಂದಾಗುವುದಲ್ಲ, ಚೈತನ್ಯ ಬಿಂಬವೇ ಅದಾಗಿರುತ್ತದೆ. ಸ್ವಾನುಭವ ಪ್ರಮಾಣ ತ್ರಿಪುಟಿರಹಿತವಾದುದು. ಪ್ರಮಾಣ–ಪ್ರಮಾತೃ–ಪ್ರಮೇಯ ಬೇರೆ ಬೇರೆ ಇರುವುದಿಲ್ಲ. ತನಗೆ ತಾನೇ ಪ್ರಮಾಣ, ತನಗೆ ತಾನೇ ಪ್ರಮಾತೃ; ತನಗೆ ತಾನೇ ಪ್ರಮೇಯ. ಅರ್ಥಾತ್ ತ್ರಿಪುಟಿತ್ವ ಶೂನ್ಯ. ಅದು ಪೂರ್ಣ, ಅದು ಅಖಂಡ.

ಅದಕ್ಕೆ ಮೂರ್ತ ರೂಪವಿಲ್ಲವಾಗಿ ಅದು ಇಂದ್ರಿಯ ಪ್ರತ್ಯಕ್ಷವಲ್ಲ, ಅದು ಅನೌಪಮ್ಯವಾಗಿ ಅದಕೊಂದು ಕಾರಣವಿಲ್ಲಾಗಿ, ಅನುಮಾನ ಪ್ರಮಾಣಾರ್ಹವಲ್ಲ. ಅದು ಶಬ್ದ ಮುಗ್ಧ ಸ್ವರೂಪವಾಗಿ ಆಗಮ ಪ್ರಮಾಣಾರ್ಹವಲ್ಲ. ಪರಾವಾಣಿಸ್ವರೂಪದಲ್ಲಿ ವೈಖರಿವಾಣಿ ಸ್ಥೂಲವಾಗಿ ಈಚೆಗಿರಬಲ್ಲುದು. ವೈಖರೀ ಶಬ್ದಾಕಾರವಾಗಿರಬಲ್ಲುದು. ಅದು ಆ ಪರಾಶಕ್ತಿ ಶಬ್ದಾಕಾರವಲ್ಲ. ಅದು ಶಬ್ದಾತೀತ.

ಇವೆಲ್ಲ ಕಾರಣಗಳಿಂದ ಅದಂ ಅಪ್ರಮಾಣ. ಸ್ವಾನುಭವೈಕಗಮ್ಯ. ಅಲ್ಲಿ ಪ್ರಮಾಣ ಪ್ರಮೇಯ ಪ್ರಮಾತೃ ಪ್ರಮೇಗಳ ವ್ಯವಹಾರವಿರುವುದಿಲ್ಲ. ಭಿನ್ನವ್ಯವಹಾರವಿರುವುದಿಲ್ಲ. ಅದೊಂದೇ ಆಗಿರುತ್ತದೆ. ಅದರಿಂದಾಗಿ 'ಸ್ವಾನುಭವೈಕ' ಎಂದು ಹೇಳುವುದು. ಇದು ಸ್ವಾತ್ಮೈಕ ನಿರ್ಣಯಂ.

೧೦. ಅದು ಉಳಿದೆಲ್ಲ ಜ್ಯೋತಿಗಳ ಉದಯ ಸ್ಥಲ: ಅದು ನಿತ್ಯಕ್ಕೆ ನಿತ್ಯ ಚೇತನಕ್ಕೆ ಚೇತನವಾಗಿರುವಂತೆ ಜ್ಯೋತಿಗಳಿಗೆ ಜ್ಯೋತಿಯಾಗಿ ಪರಂಜ್ಯೋತಿಯೆನಿಸಿದೆ. ಈ ಅಪರ ಜ್ಯೋತಿಗಳೆಲ್ಲ ಅದರ ಬೆಳಗಿನಿಂದ ಬೆಳಗುತ್ತಿವೆ.

" ನ ತತ್ರಸೂರ್ಯೋ ಭಾತಿ ಸ ಚಂದ್ರ ತಾರಕಂ
ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿ; ।
ತಮೇವ ಭಾಂತಮನುಭಾತಿ ಸರ್ವಂ
ತಸ್ಯ ಭಾಸಾ ಸರ್ವಮಿದಂ ವಿಭಾತಿ ॥ ೧೪ ॥

—ಕಠೋಪನಿಷತ್, ಅ-೨, ವಲ್ಲೀ-೨.

" ಯದ್ಭಾಸಾ ಭಾಸತೇ ವಿಶ್ವಂ ಯತ್ಸುಖೇನಾನುಮೋದತೇ ।
ನಮಸ್ತಸ್ಮೈ ಗುಣಾತೀತ ವಿಭವಾಯ ಪರಾತ್ಮನೇ ॥ ೪ ॥

— ಶಿವಯೋಗಿ ಶಿವಾಚಾರ್ಯ

೧೧. ಅದು ಪರಶಿವ; ಪರಬ್ರಹ್ಮ; ಪರಾಕಾಶ. ಆ ಪರಂಜ್ಯೋತಿಯೇ ಪರಶಿವನೆಂದು ಪರಬ್ರಹ್ಮನೆಂದು ಹೆಸರಾಗಿದೆ. ಪರಮಾಕಾಶ ಲಕ್ಷಣವುಳ್ಳುದಾಗಿದೆ. ಅದೇ ಪೂರ್ಣವಸ್ತು. ಶ್ರೇಷ್ಠವಸ್ತು. ಪ್ರಮುಖವಸ್ತು. ಪರಮಾರ್ಥವಸ್ತು. ಅದಕ್ಕಿಂತ ಅಧಿಕವಾದುದಿಲ್ಲ. ಅದೇ ಪರಮಾವಧಿ; ಪರಮನಿಧಿ.

" ಪರಮೇವಾಕ್ಷರಂ ಪ್ರತಿಪದ್ಯತೇ ಸ ಯೋ ಹ ವೈ
ತದಚ್ಛಾಯಮ ಶರೀರ ಮಲೋಹಿತಂ ಶುಭ್ರಮಕ್ಷರಂ
ವೇದಯತೇ ಯಸ್ತು ಸೋಮ್ಯ, ಸ ಸರ್ವಜ್ಞಃ ಸರ್ವೋಭವತಿ ।"

— ಪ್ರಶ್ನೋಪನಿಷತ್

ಆ ಪರಮಾಕಾಶಕ್ಕೆ ನೆರಳಿಲ್ಲ, ಮೈಯಿಲ್ಲ; ಕೆಂಪು ಕಪ್ಪು ಬಣ್ಣಗಳಿಲ್ಲ. ಅದು ವಿಶುದ್ಧವಾಗಿದೆ. ವಿನಾಶರಹಿತವಾಗಿದೆ. ಅದನ್ನು ಅರಿತವನು ಸರ್ವಜ್ಞನಾಗುತ್ತಾನೆ; ಸರ್ವಸ್ವರೂಪನಾಗುತ್ತಾನೆ.

೧೨. ಲಿಂಗಮಿತ್ಯುಚ್ಯತೇ : ಅದೇ ಲಿಂಗ. ಅದೇ ಮಹಾಲಿಂಗ. ಆ ಮಹಾಲಿಂಗವನ್ನೆ ಪರಶಿವನೆಂದು ಪರಬ್ರಹ್ಮವೆಂದು ಪರಮಾಕಾಶಲಕ್ಷಣವುಳ್ಳದೆಂದು ಸ್ವಾನುಭವವುಳ್ಳ ಶಿವಯೋಗಿ ಶಿವಾಚಾರ್ಯನು ನಿರೂಪಿಸಿದ್ದಾನೆ. ಉಳಿದ ಸತ್ಪುರುಷರೂ ಹಾಗೆಯೇ ಹೇಳಿದ್ದಾರೆ; ಹೇಳುತ್ತಾರೆ. ಅದು ಏನೆಲ್ಲವನ್ನೂ ಒಳಗೊಂಡಿರುತ್ತದೆ ಅದುವೇ ಸರ್ವಾಧಾರ. ಅದಿಲ್ಲದೆ ಈ ಜಗತ್ತಿನ ಸ್ಥಿತಿಯಿಲ್ಲ. ಅದು ಜಗತ್ತಿಗೆ ಅಭಿನ್ನನಿಮಿತ್ತೋಪಾದಾನ ಕಾರಣವಾಗಿದೆ. ಅಲ್ಲದೆ,

" ಪರಮಾಕಾಶಮವ್ಯಕ್ತಂ ಪ್ರಬೋಧಾನಂದ ಲಕ್ಷಣಂ ।
ಲಿಂಗಂ ಜ್ಯೋತಿರ್ಮಯಂ ಪ್ರಾಹುರ್ಲೀಯಂತೇ
ಯತ್ರಯೋಗಿನಃ ॥ ೬ ॥

ಸಂವಿದೇವ ಪರಾಕಾಷ್ಠಾ ಪರಮಾನಂದ ರೂಪಿಣೀ
ತಮಾಹುಃ ಪರಮಾಕಾಶಂ ಮುನಯೋ
ಮುಕ್ತ ಸಂಶಯಾಃ ॥ ೭ ॥"

ಅದು ಸಚ್ಚಿದಾನಂದ ಸ್ವರೂಪ ಲಕ್ಷಣವುಳ್ಳುದು. ಅದು ಜ್ಯೋತಿರ್ಮಯಲಿಂಗ. ಅದು ಅವ್ಯಕ್ತವಾಗಿದೆ; ಮಹಾಕಾಶವಾಗಿದೆ, ಆ ಮಹಾಲಿಂಗದಲ್ಲಿ ಯೋಗಿಗಳು ಐಕ್ಯರಾಗುತ್ತಾರೆ ಶರಣರು ಸಮರಸವಾಗುತ್ತಾರೆ.

ಅದು ಸಂವಿತ್ಸ್ವರೂಪವೆಂದು ಪರಾಕಾಷ್ಠವೆಂದು ಪರಮಾನಂದ ಸ್ವರೂಪವೆಂದು ಪರಮಾಕಾಶವೆಂದು ನಿಶ್ಚಯಾತ್ಮರಾದ ಮುನಿಗಳು ಹೇಳುತ್ತಾರೆ.

ಹೃದಯಾರವಿಂದದೊಳಗಿನ ಚಿದ್ಘನವೇ ಪರಮಾಕಾಶ. ಅದುವೇ ಜ್ಯೋತಿರ್ಮಯಲಿಂಗ ಅದು ಸದಾನಂದ ಸ್ವರೂಪವಾಗಿದೆ. ಸರ್ವಾಧಾರವಾಗಿದೆ,

" ಪ್ರಕಾಶಾಕಾಶವಲ್ಲಿಂಗಮವಕಾಶಂ ದದಾತಿ ಯತ್ ।
ಚಿದ್ರೂಪಾಕಾಶಮೇವೋಕ್ತಂ ಜ್ಞಾನಾಕಾಶಂ ಮಹತ್ತಮಂ ॥

—ಚಂದ್ರಜ್ಞಾನಾಗಮ

" ಅಚಿಂತ್ಯ ಚಿದ್ರೂಪಮಯಂ ಪರಮಾನಂದ ಸಂಜ್ಞಿತಂ ।
ವಿಚಾರ ಶಿಖರಸ್ಥಾನಂ ಪರಮಾಕಾಶ ಮುಚ್ಯತೇ ॥"

—ಸಿದ್ಧಾಂತ ಶೇಖರ

" ಸರ್ವಸ್ಯಾಧಾರಮವ್ಯಕ್ತಮಾನಂದಂ ಜ್ಯೋತಿರವ್ಯಯಂ ।
ಪ್ರಧಾನ ಪುರುಷಾತೀತ ಮಾಕಾಶಂ ದಹರಂ ಸ್ಥಿತಂ ॥"

ಯೋಗವಾಸಿಷ್ಠ

ಇವೆಲ್ಲವೂ ಮುನಿಗಳ ಹೇಳಿಕೆಗಳು. ಮೂಲಮಂತ್ರ ಶ್ಲೋಕದಲ್ಲಿ ಇದೇ ಅಭಿಪ್ರಾಯ ನಿರೂಪಿತವಾಗಿದೆ. ಇವರೆಲ್ಲರು ಮುಕ್ತ ಸಂಶಯದ ಮುನಿಗಳು; ಲಿಂಗಾನುಭಾವಿಗಳು.

"ಲಿಂಗವೆಂಬುದು ಸರ್ವಕಾರಣ ನಿರ್ಮಲ;
ಲಿಂಗವೆಂಬುದು ಸಚ್ಚಿದಾನಂದ ನಿತ್ಯ ಪರಿಪೂರ್ಣ.
ಲಿಂಗವೆಂಬುದು ಸರ್ವ ಲೋಕೋತ್ಪತ್ತಿಗೆ ಕಾರಣ;
ಲಿಂಗವೆಂಬುದು ಸರ್ವತತ್ತ್ವಪೂರಣ ನಿಜಚೈತನ್ಯ.
ಲಿಂಗವೆಂಬುದು ಜನ್ಮವಾರಿಧಿಯ ದಾಂಟಿಸುವ ಛತ್ರ.
ಲಿಂಗವೆಂಬುದು ಶರಣರ ಹೃದಯದಲ್ಲಿ ಬೆಳಗುವ
ಜ್ಯೋತಿರ್ಮಯ ರೂಪು.
ಇಂತೀ ಲಿಂಗದ ಮರ್ಮವನರಿದವನೆ ಅರಿದವನು;
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರಾ."

ಇದೇ ಮುಂತಾದ ವಚನಗಳಲ್ಲಿ ಶಿವಶರಣರು ಸಿದ್ಧಾಂತ ಶಿಖಾಮಣಿಯ ಅಭಿಪ್ರಾಯವನ್ನು ಎತ್ತಿ ಹಿಡಿದು ಲಿಂಗಲಕ್ಷಣವನ್ನು ನಿರೂಪಿಸಿದ್ದಾರೆ. ಒಟ್ಟಿನಲ್ಲಿ ಮಹಾಕಾಶವೇ ಮಹಾಲಿಂಗ, ಅದು ಜ್ಯೋತಿರ್ಲಿಂಗವಾಗಿ ಶರಣನ

ಹೃದಯದಲ್ಲಿ ಚಿದ್ರೂಪವಾಗಿ ಆನಂದರೂಪಾಗಿ ಪರಮೋತ್ಕೃಷ್ಟವಾಗಿ ಇರುತ್ತದೆ.

"ತರಂಗಾದಿ ಯಥಾ ಸಿಂಧೋಸ್ಸ್ವರೂಪಾನ್ನಾತಿರಿಚ್ಯತೇ ।
ತಥಾ ಶಿವಾಚ್ಚಿದಾಕಾಶಾದ್ವಿಶ್ವಮೇತನ್ನ ಭಿದ್ಯತೇ ॥ ೮ ॥

ಯಥಾ ಪುಷ್ಪ ಪಲಾಶಾದಿ ವೃಕ್ಷರೂಪಾನ್ನ ಭಿದ್ಯತೇ ।
ತಥಾ ಶಿವಾತ್ಪರಾಕಾಶಾಜ್ಜಗತೋ ನಾಸ್ತಿ ಭಿನ್ನತಾ ॥ ೯ ॥

ಯಥಾ ಜ್ಯೋತೀಂಷಿ ಭಾಸಂತೇ ಭೂತಾಕಾಶೇ ಪೃಥಕ್ ಪೃಥಕ್ ।
ತಥಾ ಭಾಂತಿ ಪರಾಕಾಶೇ ಬ್ರಹ್ಮಾಂಡಾನಿ ವಿಶೇಷತಃ ॥ ೧೦ ॥

ನಿರಸ್ತೋಪಾಧಿಸಂಬಂಧಂ ನಿರ್ಮಲಂ ಸಂವಿದಾತ್ಮಕಂ ।
ಪರಾಕಾಶಂ ಜಗಚ್ಚಿತ್ರವಿಲಾಸಾಲಂಬ ಭಿತ್ತಿಕಂ ॥ ೧೧ ॥"

ಆ ಮಹಾಕಾಶ ಸ್ವರೂಪವಾದ ಪರಬ್ರಹ್ಮಕ್ಕೂ ಬ್ರಹ್ಮಾಂಡಗಳಿಗೂ ವಾಸ್ತವಿಕವಾಗಿ ಭೇದವಿಲ್ಲೆಂದು ನಾಲ್ಕು ದೃಷ್ಟಾಂತಗಳಿಂದ ನಾಲ್ಕು ಮಂತ್ರ ಶ್ಲೋಕಗಳಲ್ಲಿ ಮನಂಬುಗುವಂತೆ ನಿಚ್ಚಳವಾಗಿ ಅಚ್ಚೊತ್ತುವಂತೆ ನಿರೂಪಿಸಲಾಗಿದೆ. ಬ್ರಹ್ಮಾಂಡವೂ ಪರಬ್ರಹ್ಮದಂತೆ ಸತ್ಯವೆಂಬುದನ್ನು ಸ್ಫುಟವಾಗಿ ಸಾಟಲಾಗಿದೆ. ಮತ್ತು ಜಗತ್ತು ಸ್ವರೂಪಲಕ್ಷಣವಲ್ಲದೆ ತಟಸ್ಥ ಲಕ್ಷಣವಲ್ಲೆಂಬುದನ್ನು ಎಂಟನೆಯ ಮಂತ್ರಶ್ಲೋಕದಲ್ಲಿ 'ಸ್ವರೂಪಾನ್ನಾತಿರಿಚ್ಯತೇ' ಎಂಬ ಪದದಿಂದ ನಿರ್ಣಯಿಸಲಾಗಿದೆ. ಮಂತ್ರಶ್ಲೋಕಾರ್ಥಗಳು ಮುಂದಿನಂತಿವೆ. ಶಿವಾದ್ವೈತ ಸಿದ್ಧಾಂತದ ಸಾರಸರ್ವಸ್ವವಾಗಿವೆ. ಜಾಗತಿಕ ಸದ್ಭಾವಕ್ಕೆ ಸತ್ಯಸಾಕ್ಷಿಯಾಗಿವೆ.

ತೆರೆನೊರೆ ಗುರುಳೆ ಗೊರಚೆಗಳು ಮುನ್ನೀರಿಗೆ ಬೇರಲ್ಲ. ವಿವಿಧ ವಿಶ್ವವು ಚಿದಾಕಾಶನಾದ ಶಿವನಿಗೆ ಬೇರಲ್ಲ.

ಎಲೆ ಹೂವು ಹಣ್ಣುಗಳು ಮರದಿಂದ ಬೇರಲ್ಲ, ಅಂತೆಯೇ ಪರಾಕಾಶ

ಈ ಭೂತಾಕಾಶದಲ್ಲಿ ರವಿ ಶಶಿ ತಾರೆಗಳು ಬೇರೆ ಬೇರೆಯಾಗಿ ಬೆಳಗುತ್ತವೆ. ಅಂತೆಯೇ ಆ ಪರಾಕಾಶದಲ್ಲಿ ಬ್ರಹ್ಮಾಂಡಗಳು ವಿಶೇಷವಾಗಿ ಬೆಳಗುತ್ತವೆ,

ಈ ಸುಂದರವಾದ ಜಾಗತಿಕ ಚಿತ್ರವನ್ನು ಬರೆಯಲು ಭಿತ್ತಿಯಾಗಿದೆ ಆ ಪರಾಕಾಶ. ಅದು ಸಂವಿತ್ ಸ್ವರೂಪವಾಗಿದೆ, ನಿರ್ಮಳವಾಗಿದೆ; ನಿರುಪಾಧಿಕವಾಗಿದೆ.

“ ಬ್ರಹ್ಮೈವೇದಮಮೃತಂ ಪುರಸ್ತಾಬ್ಬ್ರಹ್ಮ
ಪಶ್ಚಾದ್ಬ್ರಹ್ಮ ದಕ್ಷಿಣತಶ್ಚೋತ್ತರೇಣ ।
ಅಧಶ್ಚೋರ್ಧ್ವಂ ಚ ಪ್ರಸೃತಂ ಬ್ರಹ್ಮೈವೇದಂ
ವಿಶ್ವಮಿದಂ ವರಿಷ್ಟಮ್ ॥ ೧೧ ॥
—ಮುಂಡಕ ೨, ಖಂಡ-೨.

ಈ ಜಗತ್ತು ಅಮೃತಸ್ವರೂಪ ಬ್ರಹ್ಮವೇ ಆಗಿದೆ, ವಿಶ್ವದ ಮುಂದೆ - ಹಿಂದೆ, ಅಕ್ಕಪಕ್ಕಗಳಿಗೆ ಅಥವಾ ತೆಂಕಣ ಬಡಗಣಗಳಿಗೆ ಕೆಳಗೆ-ಮೇಲೆ ಬ್ರಹ್ಮವೇ ಇದೆ. ವಿಶ್ವದಾದ್ಯಂತ ಹಬ್ಬಿದೆ. ಈ ವಿಶ್ವವೆಲ್ಲವೂ ಸರ್ವಶ್ರೇಷ್ಠವಾದ ಪರಬ್ರಹ್ಮವೇ ಆಗಿದೆ.

ಪ್ರಸಾದಲಿಂಗದ ಚಿತ್ಕಳೆಗೆ ಪಿಂಡದಲ್ಲಿ ಅವಕಾಶವಾದಾಗ ಪಿಂಡಾಕಾಶ, ಬಿಂದುವಿನಲ್ಲಿ ಅವಕಾಶವಾದರೆ ಬಿಂದ್ವಾಕಾಶ, ಮಹತ್ತತ್ತ್ವದಲ್ಲಿ ಅವಕಾಶವಾದರೆ ಮಹಾಕಾಶವಾದರೆ ಮಹಾಕಾಶವೆಂದೆನಿಸುತ್ತವೆ.

ತೆರೆಗಳಿಗೆ ಮೂಲಕಾರಣ ನೀರು, ಎಲೆ ಹೂವುಗಳಿಗೆ ಮೂಲಕಾರಣ ಮರ. ನೇಸರ ತಂಗದಿರಗಳಿಗೆ ಆಧಾರ ಆಕಾಶ, ಇವುಗಳಂತೆ ವಿವಿಧ ವಿಶ್ವಕ್ಕೆ ಆಧಾರ ಮತ್ತು ಉತ್ಪತ್ತಿ ಕಾರಣ ಆ ಮಹಾಕಾಶಸ್ವರೂಪ ಪರಶಿವ ಬ್ರಹ್ಮ. ಅಭಿನ್ನ ನಿಮಿತ್ತೋಪಾದನ ಕಾರಣ.

ನೀರಿನಿಂದಾದ ತೆರೆಗಳು ನೀರಿನಲ್ಲಿ: ಮರದಿಂದಾದ ಎಲೆ ಹೂವುಗಳು ಮರದಲ್ಲಿ ಲೀನವಾಗುತ್ತವೆ; ನೀರು ಮರಗಳೇ ಆಗಿರುತ್ತವೆ. ಅಂತೆಯೆ ಪರಶಿವಬ್ರಹ್ಮದಿಂದಾದ ಬ್ರಹ್ಮಾಂಡ ಪರಾಕಾಶಸ್ವರೂಪವೇ ಆಗಿದೆ. ಇದರಿಂದಾಗಿ

ಹೈೀಯವಲ್ಲ; ಮಿಥ್ಯವಲ್ಲ. ಮಹಾಕಾಶದ ಸ್ವರೂಪವೇ ಸರ್ವವು ಅದಕ್ಕೆ ಅನ್ಯ ಇನ್ನೊಂದಿಲ್ಲ ಅದೇ ಎಲ್ಲ.

“ ಕಾಮರಾಶಿಗೆ ಮಾಯದ ಕೊಳಗ ಅಳೆವುದು.
ನೆಳಲು ಹೋಹುದು. ಬಯಲು ತುಂಬಿಹೆನೆಂದಡೆ
ತುಂಬಲು ಬಾರದು. ತುಂಬಿದ ರಾಶಿಯ ಕಾಣಲು ಬಾರದು.
ಅಳತೆಗೆ ಬಾರದು. ಹೊಲೆಗೊಳಗಾಗದು-ನೋಡಾ !
ಚಿಕ್ಕಯ್ಯ ಪ್ರಿಯ ಸಿದ್ಧಲಿಂಗ ಇಲ್ಲ, ಇಲ್ಲ; ಮಿಗೆ ಬಯಲು ”
ಏನೆಂದು ಎನಲಿಲ್ಲ ; ನುಡಿದು ಹೇಳಲಿಕ್ಕಿಲ್ಲ.
ನಿಜದಲ್ಲಿ ನಿಂದ ಬೆರಗು ಕುರುಹರಿವುದೆ ?
ಮರಣ ಹರಿದು ಹತ್ತುವುದೇ ಬಯಲು ?
ಅದು ತನ್ನಲ್ಲಿ ತಾನಾದ ಬಯಲು ತಾನಾದ ಘನವು,
ಇನ್ನೇನನರಸಲಿಲ್ಲ; ಅದು ಮುನ್ನವೇ ತಾನಿಲ್ಲ.
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ, ಇಲ್ಲ.”

೧೦. ಕ್ರಿಯಾ ಪ್ರಕಾಶನ ಸ್ಥಳಂ

ಪ್ರಸಾದಲಿಂಗದೊಳಗಿನ ನಾಲ್ಕನೆಯ ಪ್ರಕಾಶಲಿಂಗ. ಪ್ರಕಾಶಲಿಂಗದಲ್ಲಿ ಕ್ರಿಯಾ ಪ್ರಕಾಶ, ಭಾವಪ್ರಕಾಶ, ಜ್ಞಾನಪ್ರಕಾಶ ಎಂದು ಮೂರುಲಿಂಗಗಳಿವೆ. ಇವುಗಳಲ್ಲಿ ಇದೀಗ ಕ್ರಿಯಾಪ್ರಕಾಶ ಸ್ಥಳದ ವಿಚಾರ ಸನ್ನಿಹಿತವಾಗಿದೆ

ಆಕಾಶಲಿಂಗದ ಬೆಂಬಳಿವಿಡಿದು ಬಂದಿದೆ ಪ್ರಕಾಶಲಿಂಗ, ಆಕಾಶಕ್ಕೂ ಪ್ರಕಾಶಕ್ಕೂ ಸನ್ನಿಹಿತ ಸಂಬಂಧ. ಅಂದರೆ ಅವಿನಾಭಾವ ಸಂಬಂಧ. ಭೂತಾಕಾಶವಿಡಿದು [illegible] ಪರಾಕಾಶವಿಡಿದು ಕ್ರಿಯೆ ಭಾವ ಜ್ಞಾನಗಳು ಪ್ರಕಾಶಿಸುತ್ತವೆ.

ಬಯಲ ಲಿಂಗದಲ್ಲಿ ಬೆಳಗುಲಿಂಗಗಳ ಬೆಳವಣಿಗೆ; ಬೆಳಗುವಿಕೆ. ಬಯಲು ಬೆಳಗುಗಳು ಬೇರಲ್ಲ. ಆ ಮಹಾಘನ ಚೈತನ್ಯವೇ ಹಾಲು–ಹಾಲ ಬಿಳುಪುಗಳಂತೆ ಬಯಲು–ಬೆಳಗುಗಳಾಗಿ ಬೆಡಗು ಬಿನ್ನಾಣವಾಗಿರುತ್ತದೆ. ಆ ಮಹಾಘನ ಚೈತನ್ಯವೇ ಪ್ರಸಾದಲಿಂಗ.

ಪ್ರಸಾದ ಲಿಂಗದಲ್ಲಿ ಮುಮ್ಮೊದಲು ಪಾದೋದಕಲಿಂಗ, ಪಾದೋದಕ ಲಿಂಗದಲ್ಲಿ ನಿಷ್ಪತ್ತಿಲಿಂಗ, ನಿಷ್ಪತ್ತಿಲಿಂಗದಲ್ಲಿ ಆಕಾಶಲಿಂಗ, ಆಕಾಶಲಿಂಗದಲ್ಲಿ ಪ್ರಕಾಶಲಿಂಗ ತೋರಿ ತೊಳಗುತ್ತವೆ; ಸನ್ನಿಹಿತ ಸಂಬಂಧ ಸಕೀಲವುಳ್ಳವಾಗಿರುತ್ತವೆ. ಪ್ರಸಾದದ ರಸವು ಅಂತಃಕ್ರಿಯೆಯಲ್ಲಿ ನಿಷ್ಪತ್ತಿಯಯಗಿ ಆಕಾಶ ಪ್ರಕಾಶವಾಗಿ ಪರಿಣಮಿಸುತ್ತದೆ, ಅಂದರೆ ಪಿಂಡಾಕಾಶವಾಗಿ ಕ್ರಿಯಾಪ್ರಕಾಶವಾಗಿ ಕಂಗೊಳಿಸುತ್ತದೆ.

ದೀಕ್ಷಾ ಪಾದೋದಕದಿಂದ ಕ್ರಿಯಾ ನಿಷ್ಪನ್ನವಾಗುತ್ತದೆ. ಕ್ರಿಯಾನಿಷ್ಪತ್ತಿಯಿಂದ ಪಿಂಡ ಆಕಾಶಸ್ವರೂಪವಾಗುತ್ತದೆ. ಆ ಪಿಂಡಾಕಾಶದಲ್ಲಿ ಕ್ರಿಯಾ ಪ್ರಕಾಶವಾಗುತ್ತದೆ; ಸಚ್ಚೈತನ್ಯದಲ್ಲಿ ಪರಿಪಕ್ವ ಕ್ರಿಯೆ ಕಳಾಪ್ರಪೂರ್ಣವಾಗುತ್ತದೆ. ಅಥವಾ ಆ ಸದ್ರೂಪ ಚೈತನ್ಯವೇ ಕ್ರಿಯಾ ಸ್ವರೂಪ ಪ್ರಕಾಶವಾಗಿ ಪರಿಣಮಿಸುತ್ತದೆ. ಅರ್ಥಾತ್ ಸತ್ಕ್ರಿಯೆಗಳಲ್ಲಿ ಸತ್ಪ್ರಕಾಶ ತೋರುವುದೆ ಕ್ರಿಯಾಪ್ರಕಾಶನಸ್ಥಳವೆನಿಸುತ್ತದೆ.

ಶರಣನ ಪಿಂಡಾಕಾಶದಲ್ಲಿ ನಿಷ್ಪತ್ತಿಗೊಂಡ ಸರ್ವಕ್ರಿಯೆಗಳು ಸದಾ ಪ್ರಕಾಶನ ಶೀಲವಾಗಿರುತ್ತವೆ.

> “ಕಾಲ ಸಡಗರ ಕೈಯಲಿದೆ.
> ಕೈಯ ಸಡಗರ ಕಂಗಳಲಿದೆ.
> ಅದೇನು ಕಾರಣವೆಂದಡೆ : ಕಂಗಳೇ ಕಾರಣವಾಗಿವೆ !
> ಒಂದು ಮಾತಿನೊಳಗೆ ವಿಚಾರವಿದೆ.
> ಕನ್ನಡಿಯೊಳಗೆ ಕಾರ್ಯವಿದೆ.
> ಇದೇನು ಕಾರಣ ತಿಳಿಯದು ಹೇಳಾ ಗುಹೇಶ್ವರಾ ?”

ಗುರುದೀಕ್ಷೆ ಸ್ವಾಯತವಾದ ಶರಣನಿಗೆ ಸತ್ಕ್ರಿಯಾಚಾರದ ಚರ್ಯೆಯೇ ಚರಣ. ಆ ಕ್ರಿಯಾಚರಣೆಯನ್ನು ಕೈಕೊಳ್ಳುವುದೇ ಕೈಯ ಸಡಗರ. ಅಂದರೆ ಗುರುಕೃಪೆಯಿಂದ ಆ ಕ್ರಿಯೆಯೇ ಲಿಂಗವಾಗಿ ಇಷ್ಟವಾಗಿ ಕರಸ್ಥಲಕ್ಕೆ ಬರುತ್ತದೆ. ಕರದಲ್ಲಿ ಕ್ರಿಯಾರೂಪದಿಂದ ಕರಿಗೊಳ್ಳುತ್ತದೆ. ಆ ಕರಸ್ಥಲದ ಕ್ರಿಯಾಲಿಂಗಕ್ಕೆ ನೋಟವೇ ಆಶ್ರಯ. ನೋಡಿ ಮಾಡುವುದು, ಅರಿದು ಆಚರಿಸುವುದು ಕಣ್ಣಿನ ಸಡಗರ; ಕಣ್ಣಿದ್ದುದಕ್ಕೆ ಸಾರ್ಥಕ. ಕಣ್ಣಿದ್ದಂತಾಗಿ ಚಲುವುಂಟಾಗುತ್ತದೆ. ಕಣ್ಣಿಲ್ಲದ ಮೊಗ ಮೊಗವಲ್ಲ. ಕಣ್ಣಿಲ್ಲದ ಕೈ ಏನನ್ನೂ ಮಾಡಲರಿಯದು. ಕ್ರಿಯೆಗೆ ಕಣ್ಣು ಕಾರಣ; ಸಂಜೀವನ. ಅಂತೆಯೇ ಕಣ್ಣಿಗೆ ಕ್ರಿಯೆ ಜೀವಾಳ. ಕಣ್ಣಿದ್ದು ಕ್ರಿಯೆಯಿಲ್ಲದಿದ್ದರೆ ಫಲವಿಲ್ಲ, ಇದೇ ಈ ಮಾತಿನ ವಿಚಾರ; ಇದೇ ಕನ್ನಡಿಯೊಳಗಿನ ಕಾರ್ಯ.

ಅರಿದು ಮಾಡಬೇಕು; ಅರಿದು ಆಡಬೇಕು. ನೋಡಿ ನಡೆ; ನೋಡಿ ನುಡಿ; ನೋಡಿ ಮಾಡು ಮುಂತಾಗಿ ಹೇಳುವುದರ ಹೊಲಬರಿಯಬೇಕು. ಹೀಗೆ ಆಚರಿಸುವುದರಿಂದ ಕರಣೇಂದ್ರಿಯಗಳಲ್ಲಿ ಐಕ್ಯತೆಯುಂಟಾಗುವುದಲ್ಲದೆ ಕ್ರಿಯೆ ಪ್ರಕಾಶನಕ್ಕೆ ಬರುತ್ತದೆ; ಪ್ರತಿಷ್ಠೆಗೊಳ್ಳುತ್ತದೆ. ಕನ್ನಡಿಯೊಳಗಿನ ಕಾರ್ಯ ಅಂದರೆ ಪ್ರತಿಬಿಂಬ ತನಗೆ ಭಿನ್ನವಲ್ಲ. ಅಂತೆಯೇ ಅರಿವಿನೊಳಗಿನ ಆಚಾರ ತನಗ ಭಿನ್ನವಲ್ಲ. ಅಲ್ಲಿ ಅಂದರೆ ಹೊರಗೆ ದೃಷ್ಟಾಂತದಲ್ಲಿ ಕನ್ನಡಿ ಭಿನ್ನವಾಗಿದೆ. ದ್ರಾಷ್ಟಾಂತದಲ್ಲಿ ಚಿನ್ಮುಕುರವೂ ತನಗೆ ಅಭಿನ್ನವಾಗಿರುತ್ತದೆ. ಆದ್ದರಿಂದ ತನ್ನ ಸತ್ಕ್ರಿಯೆ ಅಚ್ಚಳಿಯದೆ ಬೆಳಗುತ್ತದೆ.

“ ಶಿವಸ್ಯ ಪರಿಪೂರ್ಣಸ್ಯ ಪರಾಕಾಶಸ್ವರೂಪಿಣಃ ।
ಆತ್ಮತ್ವೇನಾನು ಸಂಧಾನಾತ್ ಕ್ರಿಯಾದ್ಯೋತನವಾನ್ ಯಮೀ
॥ ೧ ॥”

ಪರಿಪೂರ್ಣನೂ ಪರಾಕಾಶಸ್ವರೂಪನೂ ಆದ ಶಿವನನ್ನು ಶರಣನು ಮಹಾಕಾಶಸ್ಥಲ ಸಂಪನ್ನನಾಗಿ ತನ್ನ ಆತ್ಮ ಸ್ವರೂಪದಿಂದ ಅನುಸಂಧಾನ ಮಾಡುತ್ತಾನೆ. ಅನುಸಂಧಾನ ಕ್ರಿಯೆ ಆತನಲ್ಲಿ ಪ್ರಕಾಶಿಸುತ್ತದೆ. ಅದರಿಂದಾಗಿ ಆತನು ಕ್ರಿಯಾ ಪ್ರಕಾಶಸ್ಥಲ ಸಂಪನ್ನನೆನಿಸುತ್ತಾನೆ.

ಆತ್ಮಾನುಸಂಧಾನ ವಿಧಾನವನ್ನು ಅಲ್ಲಮಪ್ರಭುದೇವನು ತನ್ನ ಈ ವಚನದಲ್ಲಿ ವಿಶದಗೊಳಿಸಿದ್ದಾನೆ:

“ ಪದ್ಮಾಸನದಲ್ಲಿ ಕುಳ್ಳಿದ್ದು ಕುಂಡಲಿಯ ಜ್ಞಾನವರಿದು,
ಅಂಡಲೆದು ಅಧೋವಾಯುವನೂರ್ಧ್ವ ಮುಖವ ಮಾಡಿ,
ಷಡಂಗುಲವನೆತ್ತಿ ಊರ್ಧ್ವವಾಯುವನು ಅಧೋಮುಖಕ್ಕೆ ತಂದು,
ಉತ್ತರ ಪೂರ್ವ ದಕ್ಷಿಣಮಂ ನೇತಿಗಳೆದು,
ಪಶ್ಚಿಮ ಸುಷುಮ್ನೆಯಲ್ಲಿ ಮನ ಶಕ್ತಿ ಸಂಧಾನ ಸಂಯೋಗದಿಂದ
ಸಹಸ್ರದಳ ಕಮಲದಲ್ಲಿ ನಾದಭ್ರಮರನೆರಗಿ,
ಮಹಾ ವಾಸನಾಮೃತವ ದಣಿಯುಂಡು,
ತ್ರಿಸಂಧಾನ ಒಂದಾವ ಬಳಿಕ, ಆತ್ಮ ಪರಮಾತ್ಮ ಒಂದಾಗಿ,
ಮರಳಿ ಅಂತರಾತ್ಮ ವಿಚಾರಕ್ಕೆ ಇಳಿದಲ್ಲಿ ಅಭ್ಯಾಸಕ್ಕೆ ಬರಲಾಗದು.
ಅದೆಂತೆಂದೊಡೆ : ದೇವಲೋಕಕ್ಕೆ ಸಂದು ಮರಳಿ
ಮಾನವನಪ್ಪಡೆ ಅದೇ ಪಾತಕ.
ಹಸಿದವನಮೃತವ ದಣಿಯಉಂಡು,
ತ್ರಿಸಂಧಾನ ಒಂದಾದ ಬಳಿಕ ಮರಳಿ
ಹಸಿದುಂಡಿಹೆನೆಂದಡೆ ಅದೇ ಪ್ರಕೃತಿ ಗುಣ.
ಇದು ಕಾರಣ, ಪರಮಾತ್ಮ ತಾನಾದಾತನು ಪರಮಾತ್ಮನಾಗಿ
ತನ್ನಲ್ಲಿ ತಾನೇ ಭವಿಸಿ ಬೆಳಗಿರಬೇಕು ಗುಹೇಶ್ವರಾ.”

ಈ ಅನುಸಂಧಾನದ ಕ್ರಿಯಾನುಭವ ಕ್ರಿಯಚರಣೆ ಕ್ರಿಯಾಪ್ರಕಾಶ ಬೇಕಲ್ಲದೆ ಬರೀ ಜ್ಞಾನದಿಂದ ಆತ್ಮತ್ವಾನುಸಂಧಾನ ಸಂಭವಿಸದು.

“ ಆತ್ಮೋಽಹಂ ಎಂಬರು ತಾವಾತ್ಮವಿತ್ತುಗಳೆಲ್ಲ.
ಆತ್ಮನಂತಹನಿಂತಹನೆಂದು ಕಂಡವರುಂಟೇ ಅಯ್ಯಾ ?
ಆತ್ಮಜ್ಞಾತೋಽಹಂ ಎಂಬುದಕ್ಕೆ ಶ್ರುತಿ ಪ್ರಮಾಣವುಂಟು;
ಸ್ವಾನುಭೂತಿ ಪ್ರಮಾಣವಿಲ್ಲ.

ಗುರುದೀಕ್ಷೆ ಸ್ವಾಯತವಾದ ಶರಣನಿಗೆ ಸತ್ಕ್ರಿಯಾಚಾರದ ಚರ್ಯವೇ ಚರಣ. ಆ ಕ್ರಿಯಾಚರಣೆಯನ್ನು ಕೈಕೊಳ್ಳುವುದೇ ಕೈಯ ಸಡಗರ. ಅಂದರೆ ಗುರುಕೃಪೆಯಿಂದ ಆ ಕ್ರಿಯೆಯೇ ಲಿಂಗವಾಗಿ ಇಷ್ಟವಾಗಿ ಕರಸ್ಥಲಕ್ಕೆ ಬರುತ್ತದೆ. ಕರದಲ್ಲಿ ಕ್ರಿಯಾರೂಪದಿಂದ ಕರಿಗೊಳ್ಳುತ್ತದೆ. ಆ ಕರಸ್ಥಲದ ಕ್ರಿಯಾಲಿಂಗಕ್ಕೆ ನೋಟವೇ ಆಶ್ರಯ. ನೋಡಿ ಮಾಡುವುದು, ಅರಿದು ಆಚರಿಸುವುದು ಕಣ್ಣಿನ ಸಡಗರ; ಕಣ್ಣಿದ್ದುದಕ್ಕೆ ಸಾರ್ಥಕ. ಕಣ್ಣಿದ್ದಂತಾಗಿ ಚಲುವುಂಟಾಗುತ್ತದೆ. ಕಣ್ಣಿಲ್ಲದ ಮೊಗ ಮೊಗವಲ್ಲ. ಕಣ್ಣಿಲ್ಲದ ಕೈ ಏನನ್ನೂ ಮಾಡಲರಿಯದು. ಕ್ರಿಯೆಗೆ ಕಣ್ಣು ಕಾರಣ; ಸಂಜೀವನ. ಅಂತೆಯೇ ಕಣ್ಣಿಗೆ ಕ್ರಿಯೆ ಜೀವಾಳ. ಕಣ್ಣಿದ್ದು ಕ್ರಿಯೆಯಿಲ್ಲದಿದ್ದರೆ ಫಲವಿಲ್ಲ, ಇದೇ ಈ ಮಾತಿನ ವಿಚಾರ; ಇದೇ ಕನ್ನಡಿಯೊಳಗಿನ ಕಾರ್ಯ.

ಅರಿದು ಮಾಡಬೇಕು; ಅರಿದು ಆಡಬೇಕು. ನೋಡಿ ನಡೆ; ನೋಡಿ ನುಡಿ; ನೋಡಿ ಮಾಡು ಮುಂತಾಗಿ ಹೇಳುವುದರ ಹೊಲಬರಿಯಬೇಕು. ಹೀಗೆ ಆಚರಿಸುವುದರಿಂದ ಕರಣೇಂದ್ರಿಯಗಳಲ್ಲಿ ಐಕ್ಯತೆಯುಂಟಾಗುವುದಲ್ಲದೆ ಕ್ರಿಯೆ ಪ್ರಕಾಶನಕ್ಕೆ ಬರುತ್ತದೆ; ಪ್ರತಿಷ್ಠೆಗೊಳ್ಳುತ್ತದೆ. ಕನ್ನಡಿಯೊಳಗಿನ ಕಾರ್ಯ ಅಂದರೆ ಪ್ರತಿಬಿಂಬ ತನಗೆ ಭಿನ್ನವಲ್ಲ. ಅಂತೆಯೇ ಅರಿವಿನೊಳಗಿನ ಆಚಾರ ತನಗ ಭಿನ್ನವಲ್ಲ. ಅಲ್ಲಿ ಅಂದರೆ ಹೊರಗೆ ದೃಷ್ಟಾಂತದಲ್ಲಿ ಕನ್ನಡಿ ಭಿನ್ನವಾಗಿದೆ. ದ್ರಾಷ್ಟಾಂತದಲ್ಲಿ ಚಿನ್ಮುಕುರವೂ ತನಗೆ ಅಭಿನ್ನವಾಗಿರುತ್ತದೆ. ಆದ್ದರಿಂದ ತನ್ನ ಸತ್ಕ್ರಿಯೆ ಅಚ್ಚಳಿಯದೆ ಬೆಳಗುತ್ತದೆ.

“ ಶಿವಸ್ಯ ಪರಿಪೂರ್ಣಸ್ಯ ಪರಾಕಾಶಸ್ವರೂಪಿಣಃ ।
ಆತ್ಮತ್ವೇನಾನುಸಂಧಾನಾತ್ ಕ್ರಿಯಾದ್ಯೋತನವಾನ್ ಯಮೀ
॥ ೧ ॥”

ಪರಿಪೂರ್ಣನೂ ಪರಾಕಾಶಸ್ವರೂಪನೂ ಆದ ಶಿವನನ್ನು ಶರಣನು ಮಹಾಕಾಶಸ್ಥಲ ಸಂಪನ್ನನಾಗಿ ತನ ಆತ್ಮಸ್ವರೂಪದಿಂದ ಅನುಸಂಧಾನ ಮಾಡುತ್ತಾನೆ. ಅನುಸಂಧಾನ ಕ್ರಿಯೆ ಆತನಲ್ಲಿ ಪ್ರಕಾಶಿಸುತ್ತದೆ. ಆದರಿಂದಾಗಿ ಆತನು ಕ್ರಿಯಾ ಪ್ರಕಾಶಸ್ಥಲ ಸಂಪನ್ನನೆನಿಸುತ್ತಾನೆ.

ಆತ್ಮಾನುಸಂಧಾನ ವಿಧಾನವನ್ನು ಅಲ್ಲಮಪ್ರಭುದೇವನು ತನ್ನ ಈ ವಚನದಲ್ಲಿ ವಿಶದಗೊಳಿಸಿದ್ದಾನೆ:

"ಪದ್ಮಾಸನದಲ್ಲಿ ಕುಳ್ಳಿದ್ದು ಕುಂಡಲಿಯ ಜ್ಞಾನವರಿದು,
ಅಂಡಲೆದು ಅಧೋವಾಯುವನೂರ್ಧ್ವ ಮುಖವ ಮಾಡಿ,
ಷಡಂಗುಲವನೆತ್ತಿ ಊರ್ಧ್ವವಾಯುವನು ಅಧೋಮುಖಕ್ಕೆ ತಂದು,
ಉತ್ತರ ಪೂರ್ವ ದಕ್ಷಿಣಮಂ ನೇತಿಗಳೆದು,
ಪಶ್ಚಿಮ ಸುಷುಮ್ನೆಯಲ್ಲಿ ಮನ ಶಕ್ತಿ ಸಂಧಾನ ಸಂಯೋಗದಿಂದ
ಸಹಸ್ರದಳ ಕಮಲದಲ್ಲಿ ನಾದಭ್ರಮರನೆರಗಿ,
ಮಹಾ ವಾಸನಾಮೃತವ ದಣಿಯುಂಡು,
ತ್ರಿಸಂಧಾನ ಒಂದಾವ ಬಳಿಕ, ಆತ್ಮ ಪರಮಾತ್ಮ ಒಂದಾಗಿ,
ಮರಳಿ ಅಂತರಾತ್ಮ ವಿಚಾರಕ್ಕೆ ಇಳಿದಲ್ಲಿ ಅಭ್ಯಾಸಕ್ಕೆ ಬರಲಾಗದು:
ಅದೆಂತೆಂದೊಡೆ : ದೇವಲೋಕಕ್ಕೆ ಸಂದು ಮರಳಿ
ಮಾನವನಪ್ಪಡೆ ಅದೇ ಪಾತಕ.
ಹಸಿದವನಮೃತವ ದಣಿಯುಂಡು,
ತ್ರಿಸಂಧಾನ ಒಂದಾದ ಬಳಿಕ ಮರಳಿ
ಹಸಿದುಂಡಿಹೆನೆಂದಡೆ ಅದೇ ಪ್ರಕೃತಿ ಗುಣ.
ಇದು ಕಾರಣ, ಪರಮಾತ್ಮ ತಾನಾದಾತನು ಪರಮಾತ್ಮನಾಗಿ
ತನ್ನಲ್ಲಿ ತಾನೇ ಭವಿಸಿ ಬೆಳಗಿರಬೇಕು ಗುಹೇಶ್ವರಾ."

ಈ ಅನುಸಂಧಾನದ ಕ್ರಿಯಾನುಭವ ಕ್ರಿಯಚರಣೆ ಕ್ರಿಯಾಪ್ರಕಾಶ ಬೇಕಲ್ಲದೆ ಬರೀ ಜ್ಞಾನದಿಂದ ಆತ್ಮತ್ವಾನುಸಂಧಾನ ಸಂಭವಿಸದು.

"ಆತ್ಮೋಽಹಂ ಎಂಬರು ತಾವಾತ್ಮವಿತ್ತುಗಳಿಲ್ಲ.
ಆತ್ಮನಂತಹನಿಂತಹನೆಂದು ಕಂಡವರುಂಟೇ ಅಯ್ಯಾ ?
ಆತ್ಮಜ್ಞಾತೋಽಹಂ ಎಂಬುದಕ್ಕೆ ಶ್ರುತಿ ಪ್ರಮಾಣವುಂಟು;
ಸ್ವಾನುಭೂತಿ ಪ್ರಮಾಣವಿಲ್ಲ.

ಆತ್ಮನು ವಾಙ್ಮನಕ್ಕಗೋಚರನಯ್ಯಾ.
ಆತ್ಮನು ತತ್ತ್ವಮಸಿ ವಾಕ್ಯದಿಂದತ್ತತ್ತ !
ಆತ್ಮನನರಿದಿಹೆನೆಂಬವರೆಲ್ಲ ಅರಿಮರುಳುಗಳಲ್ಲವೇ ಅಯ್ಯಾ ?
ಆತ್ಮ ತಾನಾದವಸ್ಥೆ ನೀಶು ನೀರು ಕೂಡಿದಂತೆ.
ಆತ್ಮನ ಕಾಂಬಡೆ ಕಾಯವಿಡಿದು ಕಾಣಬಹುದೇ ಅಯ್ಯಾ ?
ಆತ್ಮ ಪ್ರಾಣೇಶಲಿಂಗ; ಕಾಯ ಪ್ರಸಾದ ಕಾಯ,
ಕ್ರಿಯಾಪ್ರಕಾಶವೇ ಆತ್ಮನೆಂಬಾತ ನಮ್ಮ
ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರಾ !"

ಪರಶಿವನು ಪರಿಪೂರ್ಣನು ಪರಾಕಾಶಸ್ವರೂಪನು. ಆತನು ಪಿಂಡಾಕಾಶದಲ್ಲಿಯೂ ಕ್ರಿಯಾಸ್ವರೂಪದಲ್ಲಿಯೂ ಪ್ರಕಾಶಗೊಂಡಾಗ ಆತನ ಆ ಪರಿಪೂರ್ಣತ್ವಕ್ಕೆ ಅರ್ಥವಿರುತ್ತದೆ; ಸಾರ್ಥಕ್ಯವಿರುತ್ತದೆ. ಇಲ್ಲವಾದರೆ ಪಿಂಡಾಕಾಶದಲ್ಲಿ ಆತನ ಕ್ರಿಯಾ ಪ್ರಕಾಶವಿಲ್ಲದಂತಾಗಿ ಛಿನ್ನತೆಯುಂಟಾಗುತ್ತದೆ. ಅಪೂರ್ಣತೆ ಅಳವಡುತ್ತದೆ.

ಶರಣನ ಪಿಂಡಾಕಾಶವು ಕ್ರಿಯಾಪ್ರಕಾಶದ ಪೂರ್ಣಮಂಡಲವಾಗಿ ಪರಿಣಮಿಸುವಿಕೆಯೆ ಆತ್ಮತ್ವಾನುಸಂಧಾನ. ಶಿವನೇ ಪರಿಪೂರ್ಣ ಪ್ರಕಾಶಸ್ವರೂಪ. ಆದರಿಂದ ಆ ಶಿವಕ್ರಿಯೆಗಳಲ್ಲಿ ಶರಣ ಪೂರ್ಣಗೊಳ್ಳಬೇಕು; ತನ್ನ ಪಿಂಡಾಕಾಶವನ್ನು ಆ ಕ್ರಿಯಾಪ್ರಕಾಶದಿಂದ ಪ್ರತಿಭಾನ್ವಿತವನ್ನಾಗಿಸಬೇಕು. ಎಲ್ಲ ಶಿವಕ್ರಿಯೆಗಳಿಂದ ಶರಣನ ಪಿಂಡ ಪರಿಪಕ್ವಗೊಳ್ಳಬೇಕು; ಪರಿಶುಭ್ರವಾಗಬೇಕು. ಶರಣನು ಶಿವಕ್ರಿಯಾ ಪ್ರಕಾಶಮೂರ್ತಿಯಾಗಿ ಪರಿಶೋಭಿಸಬೇಕು.

" ನಿಷ್ಕಳಂಕ ಚಿದಾನಂದ ಗಗನೋಪಮ ರೂಪಿಣಃ ।
ಶಿವಸ್ಯ ಪರಿಪೂರ್ಣಸ್ಯ ವೃತ್ತಿಶ್ಚೈತನ್ಯರೂಪಿಣೀ ॥ ೨ ॥"

ನಿರ್ಮಲವಾದ ಜ್ಞಾನಾನಂದಾಕಾಶ ಸ್ವರೂಪನೂ ಪರಿಪೂರ್ಣನೂ ಆಗಿರುವವನು ಶಿವನು. ಆ ಶೈವೀವೃತ್ತಿಯೇ ಚೈತನ್ಯರೂಪಿಯು.

ಶಿವಸ್ವರೂಪವೇ ನಾನೆಂಬುದು ಅನುಸಂಧಾನ ಕ್ರಿಯೆ. ಆ ಅನುಸಂಧಾನ ಕ್ರಿಯೆಯು ಚಿದಾನಂದಸ್ವರೂಪವೂ ಚೇತನಸ್ವರೂಪವೂ ನಿರ್ಮಲಾಕಾಶ

ಸ್ವರೂಪವೂ ಆಗಿರುತ್ತದೆ; ಪರಿಪೂರ್ಣವಾಗಿರುತ್ತದೆ. ಶಿವನ ಗುಣಧರ್ಮಗಳೆಲ್ಲವೂ ವೃತ್ತಿ ಚೈತನ್ಯದಲ್ಲಿ ಉಂಟಾಗುತ್ತವೆ. ಅರ್ಥಾತ್ ಶರಣನ ಕ್ರಿಯಾ ಪ್ರಕಾಶವು ಪರಶಿವಸ್ವರೂಪವಾಗಿರುತ್ತದೆ. ಪರಶಿವನ ಲಕ್ಷಣಗಳೆಲ್ಲವೂ ಕ್ರಿಯಾ ಶಕ್ತಿಯಲ್ಲಿರುತ್ತವೆ.

"ಜ್ಞಾನಕ್ರಿಯಾತ್ಮಿಕಾ ಸ್ಯಾಪಿ ಸತ್ಯಾ ನಿತ್ಯೋದಿತಪ್ರಭಾ ।
ಅನನ್ಯಾ ಸ್ಯಾಚ್ಛಿವಾತ್ ಸೈವ ವಸ್ತುತೋ ಮೂರ್ತಿರೈಶ್ವರೀ ॥"
—ಪೌಷ್ಕರಾಗಮ

ಜ್ಞಾನ ವಿಶಿಷ್ಟವಾದ ಕ್ರಿಯಾಶಕ್ತಿಯು ಸತ್ಯಶಾಲಿನಿ, ನಿತ್ಯ ಪ್ರಭಾನ್ವಿತೆ; ಶಿವಾಭಿನ್ನೆ; ವಾಸ್ತವವಾಗಿ ಈಶ್ವರಸ್ವರೂಪಿಣಿ.

'ವೃತ್ತಿಶ್ಚೈತನ್ಯರೂಪಿಣೀ' ಎಂದು ಜಗದ್ಗುರು ರೇಣುಕರು ನಿರೂಪಿಸಿ ವೃತ್ತಿ ಪ್ರಪತ್ತಿಯನ್ನು ನಿಷ್ಪತ್ತಿಯನ್ನು ನಿದರ್ಶಿಸಿದ್ದಾರೆ.

ಪರಿಪೂರ್ಣಶಿವನೊಡನೆ ಚಿದಾನಂದಗಗನದೊಡನೆ ವೃತ್ತಿಸಾರೂಪ್ಯವನ್ನು ಗಂಭೀರವಾಣಿಯಲ್ಲಿ ಇಲ್ಲಿ ನಿರ್ದೇಶಿಸಲಾಗಿದೆ. ವೃತ್ತಿಗೂ ಅಂದರೆ ಕ್ರಿಯೆಗೂ ತನಗೂ ಭೇದವಿರುವುದಿಲ್ಲ ಮಹಾಕಾಶಸ್ವರೂಪನಾದ ಶರಣನಿಗೆ ! ಶರಣನ ಸದ್ವೃತ್ತಿ ಕ್ಷೀಣಿಸುವುದಿಲ್ಲ; ಜಡವಾಗಿರುವುದಿಲ್ಲ. ಚೈತನ್ಯಾತ್ಮಕವಾಗಿ ಚಿದಾನಂದಾತ್ಮಕವಾಗಿ ನಿರ್ಮಲವಾಗಿ ಪರಿಪೂರ್ಣಗೊಂಡಿರುತ್ತದೆ; ಪ್ರಕಾಶಗೊಂಡಿರುತ್ತದೆ. ವೃತ್ತ್ಯೈಕಾಗ್ರತೆ ಶರಣಯೋಗದ ಮುಖ್ಯಗುರಿ. ವೃತ್ತಿ ನಿರೋಧವಲ್ಲ. ವೃತ್ತಿಯನ್ನು ಶಿವಚೈತನ್ಯಸ್ವರೂಪವಾಗಿಸುವುದು ಶಿವಯೋಗ. ಇದು ಇದರ ವಿಶಿಷ್ಟತೆ. ಪಾತಂಜಲಯೋಗ ವೃತ್ತಿನಿರೋಧ. ರೇಣುಕ ಜಗದ್ಗುರು ನಿರೂಪಿಸಿದ ಶಿವಯೋಗ ವೃತ್ತಿಸ್ವರೂಪ. ಕ್ರಿಯಾಪ್ರಕಾಶ ಸ್ವಸ್ವರೂಪಲಕ್ಷಣ ಲಕ್ಷಿತ.

ಇಲ್ಲಿ ಕ್ರಿಯೆಗೂ ಕರ್ತೃವಿಗೂ ಅಭಿನ್ನತೆ. ಕರ್ತೃ ಅಲ್ಪಕರ್ತೃವಲ್ಲ. ಸರ್ವಕರ್ತೃ. ಪರಿಪೂರ್ಣ ಶಿವಸ್ವರೂಪಕರ್ತೃವಾಗಿ ಪರಿಣಮಿಸಿರುತ್ತಾನೆ. ಕ್ರಿಯೆಗೂ ತನಗೂ ಶಿವನಿಗೂ ಪೂರ್ಣ ಸಾಮರಸ್ಯತೆ ಯುಂಟಾಗಿರುತ್ತದೆ.

ಸಚ್ಚಿದಾನಂದ ನಿತ್ಯ ಪರಿಪೂರ್ಣ ಶಿವಸ್ವರೂಪವಾಗಿರುತ್ತದೆ. ಆಗ ಶರಣನು ಶಿವೇತರ ವೃತ್ತಿ ರಹಿತನಾಗಿರುತ್ತಾನೆ. ಪೂರ್ಣಚಿದ್ರೂಪನೂ ಪೂರ್ಣ ಆನಂದಸ್ವರೂಪನೂ ಪೂರ್ಣ ಚೈತನ್ಯನೂ ಆಗುತ್ತಾನೆ.

"ಲಿಂಗ ಜಂಗಮದನುಮತವಾದ ಕ್ರಿಯ ಅಹುದಾಗದೆಂಬ
ಸಂದೇಹ ಬೇಡ. ಕ್ರಿವಿಡಿದು ತನುವ ಗಮಿಸುವುದು.
ಅರಿವಿಡಿದು ಮನ ಗಮಿಸುವುದು.
ಕ್ರಿಯಾನುಭವದಿಂದ ಸಕಲೇಂದ್ರಿಯಂಗಳು
ಕೂಡಲಚನ್ನ ಸಂಗಯ್ಯನಲ್ಲಿ ತಲ್ಲೀಯ ತದ್ರೂಪ."

ವೃತ್ತಿಚೈತನ್ಯರೂಪತ್ವದ ವಿವರಣೆ ಈ ವಚನದಲ್ಲಿ ತುಂಬಾ ಚೆನ್ನಾಗಿ ಚಿತ್ರಿತವಾಗಿದೆ. ಗುರುಲಿಂಗ ಜಂಗಮರು ಶಿವಸ್ವರೂಪರು. ಇವರಿಗೆ ಒಪ್ಪಿತವಾದ ಕ್ರಿಯೆ ಶಿವನಿಗೆ ಒಪ್ಪಿತ. ಇದರಲ್ಲಿ ಅದೇನಿತೂ ಸಂದೇವಿಲ್ಲ. ಅಂತಹ ಅಚ್ಚಕ್ರಿಯೆಯು ಹೇಗೆ ಚೈತನ್ಯಸ್ವರೂಪವಾಗುವುದೆಂಬುದನ್ನು ಹೇಗೆ ತ್ರಿಕರಣವನ್ನು ತಂಬಿ ತ್ರಿಕರಣವನ್ನು ತನ್ಮಯವಾಗಿಸುವುದೊಬುದನ್ನು ಹೇಗೆ ಅರಿವು ಆನಂದಾನುಭವಸ್ವರೂಪವಾಗುವುದೆಂಬುದನ್ನು ಹೇಗೆ ಅಖಂಡ ಸ್ವರೂಪವಾಗುವುದೆಂಬುದನ್ನು 'ಕ್ರಿವಿಡಿದು ತನುವ ಗಮಿಸುವುದು' ಎಂಬಲ್ಲಿಂದ ಮುಂದೆ ಪೂರ್ತಿವಚನದಲ್ಲಿ ಪರಿಣಾಮಕಾರಿ ನಿರೂಪಿತವಾಗಿದೆ. ಆ ಶಿವಾಚಾರ್ಯವಾಣಿಗೆ ಸ್ವಾನುಭಾವ ಭಾಷ್ಯ ಬರದಂತಿದೆ. ತನುಮನ ಸಕಲೇಂದ್ರಿಯುಗಳು ಕ್ರಿಯೆ ವಿಡಿದು ಕೂಡಲಚನ್ನ ಸಂಗಯ್ಯನಲ್ಲಿ ತಲ್ಲೀನವಾಗುವ ತದ್ರೂಪವಾಗುವ ಸಂವಿಧಾನ ಪೂರ್ಣಜ್ಞಾನಾನುಭವಾನಂದಕ್ಕೆ ಕಾರಣವಾಗಿದೆ. 'ಗಮುಸುವುದು' ಪದಪ್ರಯೋಗ ಗಮನೀಯ. ಇದು ಚೈತನ್ಯಸೂಚಕವೂ ಪ್ರಕಾಶಸೂಚಕವೂ ಆಗಿದೆ. ಚಿತ್ಕ್ರಿಯೆಯು ತನು ಮನಗಳನ್ನು ಚೈತನ್ಯಸ್ವರೂಪವನ್ನಾಗಿಸುತ್ತದೆ ಚಿದಾನಂದಶಿವಸ್ವರೂಪವನ್ನಾಗಿಸುತ್ತದೆ. ಕ್ರಿಯಾನುಭವವು ಸಕಲೇಂದ್ರಿಯಗಳನ್ನು ಶಿವಾದ್ವಯವನ್ನಾಗಿಸುತ್ತದೆ. ಸಂಪೂರ್ಣ ಚೈತನ್ಯಮಯವಾಗಿಸುತ್ತದೆ.

ತನು ವೃತ್ತಿ, ಮನೋವೃತ್ತಿ, ಇಂದ್ರಿಯ ವೃತ್ತಿಗಳು ಹೊರಗೆ ಹರಿಯದೆ ಗುರುಲಿಂಗ ಜಂಗಮಸ್ವರೂಪ ಶಿವನಲ್ಲಿಯೇ ಸಾಯುಜ್ಯಸ್ವರೂಪವನ್ನು ಪಡೆಯುತ್ತವೆ. ತನು ವೃತ್ತಿ ಗುರುವಿನಲ್ಲಿ ಮನೋವೃತ್ತಿ ಲಿಂಗದಲ್ಲಿ ಇಂದ್ರಿಯ

ಮನ ಚಿತ್ತಾಗಿ ಸಕಲೇಂದ್ರಿಯ ಆನಂದಾಗಿ ಪರಿಣಮಿಸುತ್ತವೆ. ಅರ್ಥಾತ್ ಸಕ್ಕ್ರಿಯೆ ಚಿತ್ಕ್ರಿಯೆ ಆನಂದಾನುಭವ ಕ್ರಿಯೆ ತನ್ನಲ್ಲಿ ನಿಸ್ಸಂದೇಹವಾಗಿ ನಿಶ್ಶೇಷವಾಗಿ ಅಳವಡುತ್ತವೆ. ನಡೆಯಲ್ಲಿ ಸದಾಚಾರದಲ್ಲಿ ಗೋಚರಿಸುತ್ತವೆ; ಬೆಳಗುತ್ತವೆ. ಆಕಾಶಾಂಗನಾದ ಶರಣನು ಚಿದಾನಂದಾಖಂಡ ಕ್ರಿಯೆಯಿಂದ ಶಿವಾಕಾರನಾಗಿರುತ್ತಾನೆ; ಶಿವಕ್ರಿಯೆಯಲ್ಲಿ ಸಮರಸನಾಗಿರುತ್ತಾನೆ. ಕ್ರಿಯಾಪ್ರಕಾಶಸ್ವರೂಪನಾಗಿರುತ್ತಾನೆ.

ಶರಣನ ಸತ್ವಪೂರ್ಣ ಜೀವಂತಕ್ರಿಯೆ ನಿಷ್ಕಳಂಕ. ಅದು ಚಿತ್ಸ್ವರೂಪವಾಗಿರುವುದರಿಂದ ಆತನಲ್ಲಿ ಕ್ರಿಯಾವಿಸ್ಮೃತಿಯಿರುವುದಿಲ್ಲ. ಆನಂದಾತ್ಮಕವಾಗಿರುವುದರಿಂದ ಆತನಲ್ಲಿ ಕರ್ತೃತ್ವ ಭೋಕ್ತೃತ್ವ ಭಾವಗಳಿಗೆಡೆಯಿರುವುದಿಲ್ಲ. ಗಗನೋಪವಾಗಿರುವುದರಿಂದ ಅಲ್ಪತೆ ಸ್ವಾರ್ಥತೆಗಳಿರುವುದಿಲ್ಲ ; ಸಂಪೂರ್ಣ ನಿಸ್ವಾರ್ಥವಾಗಿರುತ್ತದೆ; ವಿಶಾಲವಾಗಿರುತ್ತದೆ. ಅದು ಅಶಿವವಲ್ಲ, ಅಪೂರ್ಣವಲ್ಲ; ಜಡವಲ್ಲ.

“ ನಿಷ್ಕಳಂಕೇ ನಿರಾಕಾರೇ ನಿತ್ಯೇ ಪರಮತೇಜಸಿ ।
ವಿಲೀನಚಿತ್ತವೃತ್ತಸ್ಯ ತಥಾ ಶಕ್ತಿಃ ಕ್ರಿಯೋಚ್ಯತೇ ॥ ೩ ॥
ಸರ್ವಜ್ಞಃ ಸರ್ವಕರ್ತಾ ಚ ಸರ್ವಗಃ ಪರಮೇಶ್ವರಃ ।
ತದೈಕ್ಯ ಚಿಂತಯಾ ಯೋಗೀ ತಾದೃಶಾತ್ಮಾ ಪ್ರಕಾಶತೇ ॥ ೪ ॥”

ಈ ಎರಡು ಮಂತ್ರಶ್ಲೋಕಗಳಲ್ಲಿ ಶರಣನ ಕ್ರಿಯೆ ಪ್ರಕಾಶಸ್ವರೂಪವೆಂಬುದನ್ನು ಪ್ರತಿಪಾದಿಸಲಾಗಿದೆ.

ಆ ಪರಶಿವನ ಪರಮತೇಜಸ್ಸು ನಿಷ್ಕಳಂಕ-ನಿರಾಕಾರ-ನಿತ್ಯ, ಅಂತಹ ಆತೇಜದಲ್ಲಿ ತಲ್ಲೀನ ಚಿತ್ತನಾದ ಶರಣನ ಕ್ರಿಯಾಶಕ್ತಿಯು ಸ್ವಾಭಾವಿಕವಾಗಿ ಪರಮತೇಜೋರೂಪವಾಗಿರುತ್ತದೆ.

ಪರಮೇಶ್ವರನು ಎಲ್ಲ ಬಲ್ಲಿದ, ಎಲ್ಲವನ್ನು ಮಾಡಬಲ್ಲ; ಎಲ್ಲೆಲ್ಲಿಯೂ ಇರಬಲ್ಲ ಎಂದು ಎದೆಯಾರೆ ನಂಬಿ ಅಂತಹ ಸರ್ವಾಂತರ್ಯಾಮಿಯಲ್ಲಿ ತಲ್ಲೀನನಾದ ಶರಣನು ಪರಮ ತೇಜಸ್ವಿಯಾಗಿ ಪ್ರಕಾಶಿಸುತ್ತಾನೆ.

" ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯಂತೇ
ಸ್ವಾಭಾವಿಕೀ ಜ್ಞಾನ ಬಲಕ್ರಿಯಾ ಚ ॥ ೮ ॥"

—ಶ್ವೇತಾಶ್ವತರ, ಅಧ್ಯಾಯ-೬

ಎಂಬಂತೆ ವಿಲೀನ ಚಿತ್ತನ ಕ್ರಿಯೆ ಸಾಪೇಕ್ಷಕವಾಗಿರದೆ ಸ್ವಾಭಾವಿಕವಾಗಿರುತ್ತದೆ; ನಿತ್ಯಸತ್ಯವಾಗಿರುತ್ತದೆ. ನಿರಾಕಾರವಾಗಿ ನಿರತಿಶಯ ತೇಜಸ್ಸುಳ್ಳುದಾಗಿರುತ್ತದೆ.

" ಪೃಥ್ವ್ಯಪ್ತೇಜೋಽನಿಲಖೇ ಸಮುಸ್ಥಿತೇ
ಪಂಚಾತ್ಮಕೇ ಯೋಗಗುಣೇ ಪ್ರವೃತ್ತೇ ।
ನ ತಸ್ಯ ರೋಗೋ ನ ಜರಾ ನ ಮೃತ್ಯುಃ
ಪ್ರಾಪ್ತಸ್ಯ ಯೋಗಾಗ್ನಿಮಯಂ ಶರೀರಂ ॥ ೧೨ ॥"

—ಶ್ವೇತಾಶ್ವತರ, ಅ-೨.

ಪೃಥಿವ್ಯಾದಿ ಪಂಚಭೂತಗಳಲ್ಲಿ ಶರಣನಿಗೆ ಸಹಜವಾದ ಸಿದ್ಧಿ ಸಮನಿಸಿರುತ್ತದೆ; ಸಮುಚಿತ ಉತ್ಥಾನಸಿದ್ಧಿಯಾಗಿರುತ್ತದೆ. ಜಡಭಾವ ಅಳಿದಿರುತ್ತದೆ. ಅಂತೆಯೇ ಲಯ, ಮಂತ್ರ, ಹಠ, ರಾಜ, ಶಿವಯೋಗಗಳ ಸಿದ್ಧಿಯೂ ಸಂಭವಿಸಿರುತ್ತದೆ. ಇದರಿಂದಾಗಿ ಶರಣನಿಗೆ ಬೇನೆ ಮುಪ್ಪು ಮರಣಗಳಿರುವುದಿಲ್ಲ. ಶರಣನ ಶರೀರವು ಶಿವಕ್ರಿಯಾಯೋಗದ ತೇಜಸ್ಸಿನಿಂದ ತೊಳಗುತ್ತಿರುತ್ತದೆ.

ಸದಾಶಿವಧ್ಯಾನದಲ್ಲಿ ನಿರತನಾದ ಶರಣನಿಗೆ ಪ್ರಾಕೃತಿಕ ಜಡಭಾವವಿರುವುದಿಲ್ಲ. ಜ್ಯೋತಿರ್ಮಯನಾಗಿ ಜ್ವಲಿಸುತ್ತಾನೆ. ಶರಣನ ಸರ್ವಾತ್ಮವೂ ಸದಾ ಪ್ರಸನ್ನವಾಗಿರುತ್ತಿದೆ.

" ಸರ್ವೇಂದ್ರಿಯಾಣಾಂ ವ್ಯಾಪಾರೇ ವಿದ್ಯಮಾನೇಽಪಿ ಸಂಯಮೀ ।
ಪ್ರತ್ಯಙ್ಮುಖೇನ ಮನಸಾ ಶಿವಂ ಪಶ್ಯನ್ ಪ್ರಮೋದತೇ ॥ ೫ ॥
ಕೂಟಸ್ಥಮಚಲಂ ಪ್ರಾಜ್ಞಂ ಗುಣಾತೀತಂ ಗುಣೋತ್ತರಂ ।
ಶಿವತತ್ತ್ವಂ ಸ್ವರೂಪೇಣ ಪಶ್ಯನ್ ಯೋಗೀ ಪ್ರಮೋದತೇ ॥೬॥"

ಕ್ರಿಯಾಪ್ರಕಾಶಸ್ವರೂಪ ನಿರೂಪಣವಾದ ಬಳಿಕ ಈಗ ಕ್ರಿಯಾಪ್ರಮೋದ ಸ್ವರೂಪವನ್ನು ನಿರೂಪಿಸಲಾಗುತ್ತಿದೆ.

ಸಂಯಮಶೀಲನಾದ ಶರಣನ ಸರ್ವೇಂದ್ರಿಯಗಳು ತಮ್ಮ ತಮ್ಮ ವ್ಯಾಪಾರದಲ್ಲಿದ್ದರೂ ಊರ್ಧ್ವಮನಸ್ಸಿನಿಂದ ಶಿವಸಂದರ್ಶನವನ್ನು ಪಡೆದು ಶರಣನು ಸಂತೋಷಿಸುತ್ತಾನೆ.

ಶರಣನು ಸಾಕ್ಷಾತ್ಕರಿಸಿದ ಶಿವನು ಕೂಟಸ್ಥನು, ಅಚಲನು, ಪ್ರಜ್ಞಾನಘನನು; ತ್ರಿಗುಣಾತೀತನು, ಸರ್ವಜ್ಞಾದಿ ಷಡ್ಗುಣಸಂಪನ್ನನು, ಸರ್ವೋತ್ತಮನು, ಪ್ರತ್ಯಗಾತ್ಮನು ಅಂತಹ ಶಿವತತ್ತ್ವವನ್ನು ಸ್ವಸ್ವರೂಪದಿಂದ ಸಂದರ್ಶಿಸಿ ಸಂತೋಷಿಸುತ್ತಾನೆ ಶರಣನು.

ನಡೆವ ನುಡಿವ ಚೈತನ್ಯದ ಒಡಲ ಗುಣವುಳ್ಳನ್ನಕ್ಕರ ಅರಿಗೆಯು ಕಾಣಬಾರದು. ಕೇಳುವ ಸ್ರೋತ್ರ, ನೋಡುವ ನಯನ, ವಾಸಿಸುವ ಘ್ರಾಣ, ರುಚಿಸುವ ಜಿಹ್ವೆ, ಸೋಂಕುವ ತ್ವಕ್ಕು ಇದಕ್ಕೆ ಸಂಶಯವನರಿದು, ನಾ ಕೇಳಿದೆ, ನಾ ನೋಡಿದೆ, ನಾ ವಾಸಿಸಿದೆ, ನಾ ರುಚಿಸಿದೆ ನಾ ಮುಟ್ಟಿದೆನೆಂಬುದನಳಿದು ಕೇಳುತ್ತ ನೋಡುತ್ತ ವಾಸಿಸುತ್ತ ರುಚಿಸುತ್ತ ಸೋಂಕಿಸುತ್ತ ಲಿಂಗಾರ್ಪಿತವ ಮಾಡಿ ಲಿಂಗಭೋಗೋಪಭೋಗಿಯಾದ ಪರಮ ಪ್ರಸಾದಿಗೆ ಸರ್ವಾಂಗವು ಶುದ್ಧವಾಯಿತ್ತಯ್ಯ, ಕಾಯತ್ರಯಂಗಳ ಜೀವತ್ರಯಂಗಳ ಭಾವತ್ರಯಂಗಳನೊಂದು ಮಾಡಿ ಸುಖ ದುಃಖವ ಸಗುಣ ನಿರ್ಗುಣಂಗಳೆಂಬ ಭಯವ ಲಿಂಗದಲ್ಲೇಕವ ಮಾಡಿ, ಅಹುದಲ್ಲ ಬೇಕು ಬೇಡೆಂಬ ಸಂಶಯಮಂ ಕಳೆದು ನಮ್ಮ ಕೂಡಲಚೆನ್ನ ಸಂಗಯ್ಯನಲ್ಲಿ ಆದಿ ಪುರಾತರೊಳಗಾಗಿ ಈ ಲಿಂಗಾಂಗ ಸಂಗ ಸಮರಸವೆಂಬ ಸಕೀಲದೊಳೊಡಗೂಡಿದ ಮಹಾಪ್ರಸಾದಿಯ ಪಥವಿದು."

ಇಂದ್ರಿಯದ ಬಾಗಿಲಲ್ಲಿ ಮನವಿಪ್ಪುದು.
ಮನದ ಮುಂಬಾಗಿಲಲ್ಲಿ ಭೋಗಲಿಂಗವಿದ್ದು.
ಸಕಲ ಭೋಗಂಗಳ ಭೋಗಿಸಿ, ಪ್ರಸಾದವ ಕರಣಂಗಳಿಗೆ ಕೊಟ್ಟು,
ಎನ್ನ ಮನವ ತನ್ನತ್ತ ಸೆಳೆದು ಮರಹ ಮಾಣಿಸಿ
ಕುರುಹಳಿದ ತೆರಹುಗೊಂಡ ಸೌರಾಷ್ಟ್ರ ಸೋಮೇಶ್ವರ
ಲಿಂಗವ ಬಲ್ಲರೆ ಬಲ್ಲ."

" ಪರಾತ್ಮನಿ ಕ್ರಿಯಾ ಸರ್ವಾ ನಕ್ಷತ್ರನಗರೀವ ಖೇ ।
ಪ್ರಕಾಶತ ಇತಿ ಪ್ರೋಕ್ತಂ ಕ್ರಿಯಾಯಾಸ್ತು ಪ್ರಕಾಶನಂ ॥"

ಶಿವಸಾಕ್ಷಾತ್ಕಾರದಿಂದ ಪ್ರಕಾಶ ಪ್ರಮೋದಗಳನ್ನು ಪಡೆದ ಶರಣನ ಎಲ್ಲ ಕ್ರಿಯೆಗಳು ಆ ಪರಾತ್ಮನಲ್ಲಿ ಅಂತರಿಕ್ಷದಲ್ಲಿ ನಕ್ಷತ್ರ ರಾಶಿಯು ಪ್ರಕಾಶಿಸುವಂತೆ ಪ್ರಕಾಶಿಸುತ್ತವೆ. ಹಾಗೆ ಪ್ರಕಾಶಿಸುವಿಕೆಯನ್ನೆ ಕ್ರಿಯಾ ಪ್ರಕಾಶನ ಸ್ಥಳವೆಂದು ನಿರೂಪಿಸಲಾಗುತ್ತದೆ.

ಶರಣನ ಸರ್ವಕ್ರಿಯೆಗಳು ಪರಶಿವ ಜ್ಯೋತಿಯಿಂದ ಬೆಳಗುಂತ್ತಿರುತ್ತವೆ. ಆತನ ಎಲ್ಲ ಕ್ರಿಯೆಗಳಿಗೆ ಪರಶಿವನೇ ಆಶ್ರಯನಾಗಿರುತ್ತಾನೆ. ಪರಾಕಾಶ ಸ್ವರೂಪನಾಗಿರುತ್ತಾನೆ; ಆ ಪರಾಕಾಶದಲ್ಲಿ ಶರಣನ ಕ್ರಿಯೆಂಗಳೆಂಬ ನಕ್ಷತ್ರಗಳು ತೊಳಗಿ ಬೆಳಗುಂತ್ತವೆ.

" ಅಯ್ಯಾ, ನೀನು ತತ್ತ್ವಂಗಳ ಮರೆಗೊಂಡಿಪ್ಪನ್ನಕ್ಕರ
ನಾನು ಕಾಯುವ ಮರೆಗೊಂಡಿದ್ದೆನಯ್ಯಾ !
ನಿನ್ನ ಬೆಡಗಿನ ಬಿನ್ನಾಣವ ನಾ ಬಲ್ಲೆ;
ಎನ್ನ ಬೆಡಗು ಬಿನ್ನಾಣವ ನೀ ಬಲ್ಲೆ.
ಮರೆಗೆ ಮರೆಯನೊಡ್ಡಿ ಜಾರಿ ಹೋದೆಯಲ್ಲಾ ।
ಈ ಬಿನ್ನಾಣದ ಮರೆಯನು ದರುಶನವ ಮಾಡಿಸಿ
ನಿಮ್ಮೊಳಗೆನ್ನ ನಿರಿಸಿ, ಎನ್ನೊಳಗೆ ನಿನ್ನ ನಿರಿಸಿ
ಪ್ರಾಣ ಪ್ರಾಣವ ಸಂಯೋಗವ ಮಾಡಿ ಬೆಳಗಿಸಿದ-
ಶ್ರೀಗುರು ಉರಿಲಿಂಗ ಪೆದ್ದಿಪ್ರಿಯ ವಿಶ್ವೇಶ್ವರ !"

ಶರಣನ ಕ್ರಿಯಾ ಪ್ರಕಾಶನ ಅದೊಂದು ಬೆಡಗಿನ ಬಿನ್ನಾಣ. ಕಾಯವಿದ್ದೂ ಕಾಯಭಾವವಿರುವುದಿಲ್ಲ. ಕ್ರಿಯಾನಿರತನಾಗಿದ್ದರೂ ಕ್ರಿಯಾಫಲವಾಗಲಿ, ಕ್ರಿಯಾಭಿಮಾನವಾಗಲಿ ಇರುವುದಿಲ್ಲ. ಆತನ ಕ್ರಿಯಿಗಳ ಪ್ರಕಾಶ ಮಾತ್ರ ಉಳಿದವರಿಗೆ ಉತ್ತಮ ಆಕರ್ಷಕಗಳಾಗಿರುತ್ತವೆ; ಉತ್ಸಾಹ ಜನಕಗಳಾಗಿರುತ್ತವೆ.

೧೧. ಭಾವ ಪ್ರಕಾಶನ ಸ್ಥಳಂ

ಪ್ರಕಾಶಲಿಂಗದ ಎರಡನೆಯ ಕಿರಣ ಭಾವ ಪ್ರಕಾಶನ ಸ್ಥಲ. ಶಿಕ್ಷಾಪಾದೋದಕದಿಂದ ಭಾವ ನಿಷ್ಪತ್ತಿಗೊಳ್ಳುತ್ತದೆ. ಭಾವ ನಿಷ್ಪತ್ತಿಯಿಂದ ಬಿಂದ್ವಾಕಾಶ ರೂಪಿತವಾಗುತ್ತದೆ, ಆ ಬಿಂದ್ವಾಕಾಶದಲ್ಲಿ ಅದೇ ಭಾವವು ಪ್ರಕಾಶನಗೊಳ್ಳುತ್ತದೆ, ಚಿಚ್ಚೈತನ್ಯದಲ್ಲಿ ಪರಿಪಕ್ವವಾದ ಭಾವವು ಪ್ರತಿಭಾನ್ವಿತವಾಗುತ್ತದೆ. ಅಥವಾ ಆ ಚಿಚ್ಚೈತನ್ಯವೇ ಭಾವಸ್ವರೂಪ ಪ್ರಕಾಶವಾಗಿ ತನ್ನಲ್ಲಿ ತಾನೇ ಬೆಳಗುತ್ತದೆ. ಅರ್ಥಾತ್ ಚಿತ್ಕ್ರಿಯೆಗಳಲ್ಲಿ ಚಿತ್ಪ್ರಕಾಶ ತೋರುವುದೇ ಭಾವ ಪ್ರಕಾಶನ ಸ್ಥಳ.

ಚಿದ್ರುಪವೆ ಬಿಂದ್ವಾಕಾಶ. ಚಿತ್ಪ್ರಕಾಶವೇ ಭಾವ ಪ್ರಕಾಶ. ಅಂದರೆ ಸತ್ತಾತ್ಮಕ ಸಮ್ಯಕ್ ಜ್ಯೋತಿ. ಶಿಕ್ಷಾಗುರುದೇವನ ಮಂತ್ರ ಶಿಕ್ಷಣ ಸಂಸ್ಕಾರದಿಂದ ಸದ್ಭಾವ ಸಮನಿಸುತ್ತದೆ. ಆ ಸದ್ಭಾವವು ಪ್ರಾಣಲಿಂಗದ ಚಿತ್ಕಳೆಯನ್ನು ಪಡೆದು ಒಳಗೆ ಪ್ರಕಾಶಿಸುತ್ತದೆ. ಮಾತೆಂಬ ಜ್ಯೋತಿರ್ಲಿಂಗವಾಗಿ ಅಥವಾ ಶಬ್ದಜ್ಯೋತಿಯಾಗಿ, ಸಾಹಿತ್ಯಸಂವಿತ್ತಿಯಾಗಿ, ಕಾವ್ಯಕಲೆಯಾಗಿ ಹೊರಗೆ ಕಂಗೊಳಿಸುತ್ತದೆ. ಹೀಗೆ ಭಾವಪ್ರಕಾಶ ಉಭಯಾತ್ಮಕವಾಗಿರುತ್ತದೆ.

ಕ್ರಿಯೆಗಳು ಸದಾಕಾಶದಲ್ಲಿ ನಕ್ಷತ್ರಗಳಂತೆ ತೊಳಗಿದರೆ ಭಾವಗಳು ಚಿದಾಕಾಶದಲ್ಲಿ ಚಂದ್ರನಂತೆ ತಂಬೆಳಗುತ್ತವೆ. ಪೂರ್ಣ ಕಳೆಯಿಂದ ಅಂದರೆ ಷೋಡಶ ಕಳೆಯಿಂದ ಭಾವಚಂದ್ರನು ಬೆಳಗುತ್ತಾನೆ.

‘ಭಾವಪ್ರಕಾಶ’ ಇದೊಂದು ಸರ್ವೋತ್ತಮ ಭಾಗ್ಯ. ಅದರಲ್ಲಿಯೂ ಭಾವುಕನಾಗಿ ಭಾವಜ್ಞನಾಗಿ ಭಾವಪ್ರಕಾಶ ಮಾಡುವ ಸಿದ್ಧಿ ಸಂಭವಿಸಿದರೆ ರಸದಾಳಿಯ ಮೇಲೆ ಹೆಜ್ಜೇನವಿಟ್ಟಂತೆ ! ನೊರೆವಾಲೊಳಗೆ ತನಿಜೇನ ಬೆರಸಿದಂತೆ !!

ಭಾವಪ್ರಕಾಶ ಇದೊಂದು ಗಂಭೀರವಾದ ಪದ, ಅರ್ಥಗರ್ಭಿತ ಪದ; ಇಮ್ಮಿಗಿಲಾದ ಇಮ್ಮಾದ ಇಂಗಿತವುಳ್ಳ ಕೂಡುನುಡಿ; ಒಳ್ನುಡಿ.

ಭಾವ ಪ್ರಕಾಶನ ಸ್ಥಳದ ಶರಣನು ಮೃದುಹೃದಯವುಳ್ಳವನು; ದೈವೀ ಭಾವನಾವಶನಾದವನು. ಭಾವುಕನು. ಸ್ವಾನುಭವವುಳ್ಳವನು. ಪರೇಂಗಿತಜ್ಞನು. ಇಂಗದಿರನಂತೆ ತಂಬೆಳಗವುಳ್ಳವನು. ಇಂಗೋಲಿನಂತೆ ಮಧುರಭಾಷಿಯು.

ಭಾವ ಪ್ರಕಾಶನ ಶಕ್ತಿ ಪ್ರತಿಭಾನ್ವಿತನಿಗೆ ಮಾತ್ರಸಾಧ್ಯ. ಎಲ್ಲರಿಗೂ ಅದು ಇರಲು ಸಾಧ್ಯವಿಲ್ಲ. ಭಾವಪ್ರಕಾಶನಕ್ಕೆ ಮುಖ್ಯವಾಗಿ ಎರಡು ಮುಖಗಳುಂಟು. ಒಂದು ಭಾಷೆ; ಇನ್ನೊಂದು ಭಕ್ತಿ. ಭಾಷೆಗಿಂತಲೂ ಭಕ್ತಿ ಹೆಚ್ಚಿನದು ಭಾಕ್ತಿಕ ಹೃದಯದಿಂದ ಭಾವ ಪ್ರಕಾಶನವನ್ನು ಭಾಷೆಯಂಗಿಂತ ಮಿಗಿಲಾಗಿಯೂ ಮನಾಕರ್ಷಕವಾಗಿಯೂ ಮಾಡಲು ಸಾಧ್ಯ. ಭಾವಪ್ರಕಾಶನವಿಲ್ಲದ ಭಾಷೆ ಸಪ್ಪೆ, ಭಕ್ತಿ ನೀರಸ.

“ಕಂಗಳ ಮುಂದೆ ತೋರಿದ ಮಚ್ಚು ಮನದ ಮೇಲೆ
ತಿಳಿಯುತ್ತಿದೇನೋ ?
ಕಳೆಯುಬಾರದು, ಕೇಳಬಾರದು;
ಕಂಗಳ ಕತ್ತಲೆಯ ವನದ ಮಿಂಚು
ಇದ ಬಲ್ಲವರನಲ್ಲೆ ನಿಸಿತ್ತು;
ಸಿಮ್ಮಲಿಗೆಯ ಚನ್ನರಾಮನೆಂಬ ನಾಮದೊಡಕು.”

ಬಗೆದುಂಬಿದ ಬೊಗಸೆಗಣ್ಣಿನಲ್ಲಿ ತನಿರಸ ತುಂಬಿರುತ್ತದೆ, ತಂಬೆಳಗು ತುಂಬಿರುತ್ತದೆ. ಹೊಮ್ಮಿಂಚು ಹೊಳಪೇರಿರುತ್ತದೆ. ಹೃದಯವೆಲ್ಲ ಕಣ್ಣಿನಲ್ಲಿ ಕುಳಿತಿರುತ್ತದೆ. ಮನದುಂಬಿದ ಆ ನೋಟವನ್ನು ಅಲ್ಲಗಳೆಯಲು ಆದಾರಿಂದಲೂ ಸಾಧ್ಯವಾಗದು. ಆ ನೋಟದ ಮುಂದೆ ಕೇಳಿ ತಿಳಿವ ಚಪಲವೇ ಇರದು. ಮಾತಾಡಿ ತಿಳಿಸುವುದಕ್ಕಿಂತಲೂ ಮಿಗಿಲಾದ ಭಾವಪ್ರದರ್ಶನ ಆ ತುಂಬುನೋಟದಲ್ಲಿರುತ್ತದೆ. ಅದು ಭಕ್ತಿಭರಿತವಾಗಿದ್ದರೆ ಆ ನೋಟವನ್ನು ದೇವರೂ ತಪ್ಪಿಸಿಕೊಳ್ಳಲಾರ. ಆ ಭಾವ ಪ್ರದರ್ಶನಕ್ಕೆ ನುಡಿಗಿಂತ ನೋಟ ಮಿಗಿಲೆಂದು ಬೇರೆ ಹೇಳಬೇಕಿಲ್ಲ.

"ಉಗುಳನುಹಸಿವ ಕಳೆದು ನಿದ್ದೆಗೈದು
ನೋಡಿ ನೋಡಿ ಸುಖಂಬಡೆದೆನಯ್ಯ. ಗುಹೇಶ್ವರಾ,
ನಿಮ್ಮ ವಿರಹದಲ್ಲಿ ಕಂಗಳೇ ಕರುವಾಗಿದ್ದೆನಯ್ಯಾ."

ಈ ಭಾವ ಪ್ರಕಾಶನದಲ್ಲಿ ಅದೆಂತಹ ಆಸಕ್ತಿಯಿದೆ! ತ್ರೀವ್ರಾಸಕ್ತಿ ತುಂಬಿದೆ.

" ಕೈಗಳ ಬಿಚ್ಚಿದಡದೆ, ಮೈಗಳ ಹರಹಿದಡೆ,
ನಿಮ್ಮ ಬೆನ್ನ ಬಿಡೆ; ತನುವಡೆದು ಜ್ಞಾನತನುವಿಂದೆ
ಕೂಡುವೆ ಕಪಿಲಸಿದ್ಧ ಮಲ್ಲಿನಾಥಯ್ಯ."
" ಆಲಿಕಲ್ಲ ಹರಳಿನಂತೆ, ಅರಗಿನ ಪುತ್ತಳಿಯಂತೆ,
ತನು ಕರಗಿ ನೆರೆವ ಸುಖವ ನಾನೇನೆಂಬೆ ?
ಕಡೆಗೋಡಿವರಿದವೆನಗಯ್ಯ ನಯನದಶ್ರು ಜಲಂಗಳು.
ನಮ್ಮ ಕೂಡಲ ಸಂಗಮದೇವರ ಮನಮುಟ್ಟಿ
ನೆರೆವ ಸುಖವ ನಾನಾರಿಗೆ ಉಸುರುವೆನು ?"

ಸ್ವಸ್ಥಾನ ಸುಸ್ಥಿರ ಸುಮನ ಮಂಟಪದೊಳಗೆ
ನಿತ್ಯ ನಿರಂಜನದ ಪ್ರಭೆಯ ಬೆಳಗು—
ಶಿವಯೋಗದನುಭಾವವು ಏಕಾರ್ಥವಾಗಿ,
ಗುಹೇಶ್ವರಾ, ನಿಮ್ಮ ಶರಣನು ಅನುಪಮ ಸುಖಿಯಾಗಿರ್ಪ !"

ಈ ಎಲ್ಲ ವಚನಗಳಲ್ಲಿ ಭಾವಪ್ರಕಾಶನ ಅಂದರೆ ಭಾವ ಪ್ರದರ್ಶನ ಬಗೆಗಳನ್ನು ಕಾಣಬೇಕು. ಭಾವಾವೇಶದ ತರಂಗಗಳನ್ನು ಕಾಣಬೇಕು. ಮಾತು ಮಾತಿನಲ್ಲಿ ಭಾವ ತುಂಬಿದೆ; ಹೃದಯ ಭರ ತೊರೆಯಾಗಿ ಹರಿದಿದೆ.

" ತರಂಗಾದ್ಯಾ ಯಥಾ ಸಿಂಧೋರ್ನ ಭಿದ್ಯಂತೇ ತಥಾತ್ಮನಃ ।
ಭಾವಾ ಬಂದ್ಧ್ಯದಯಃ ಸರ್ವೇಯುತ್ತದ್ಭಾವ
ಪ್ರಕಾಶನಂ ॥ ೨ ॥"

ತೆರೆಗಳು ಹೇಗೆ ನೀರಿಗೆ ಬೇರಲ್ಲವೋ ಹಾಗೆ ಶರಣನ ಬುದ್ಧಿ ಭಾವಾದಿಗಳೂ ಶಿವಸಂಸ್ಕಾರಕ್ಕೆ ಭಿನ್ನವಾಗಿರುವುದಿಲ್ಲ. ಶರಣನು ಯಾವಾಗಲೂ ಶಿವಭಾವಗಳನ್ನೆ ಪ್ರಕಾಶಪಡಿಸುತ್ತಾನೆ. ನೀರ ತೆರೆಗಳೆಲ್ಲ ನೀರೇ ಆಗಿರುವಂತೆ ಶರಣನ ಭಾವಗಳೆಲ್ಲ ಶಿವವಾಗಿಯೇ ಇರುತ್ತದೆ. ಭಾವ ಬುದ್ಧಿ ಮನ ಚಿತ್ತಾಹಂಕಾರಗಳಲ್ಲಿ ಸುಖ ದುಃಖ ಮಾನ ಅಪಮಾನ ಲಾಭ ನಷ್ಟಗಳಲ್ಲಿ ಶಿವಭಾವವನ್ನೇ ತೋರುತ್ತಾನೆ ಶರಣನು. ಶರಣನ ಅಂತರಂಗಿಕ ಹಾಗು ಬಾಹಿರಂಗಿಕ ವ್ಯಾಪಾರ ವ್ಯವಹಾರಗಳಲ್ಲೆಲ್ಲಾ ಶಿವ ಭಾವವೇ ಪ್ರದರ್ಶಿತವಾಗುತ್ತದೆ. ನೀರಿಂದೇಳುವುದು ನೀರ್ತೆರೆ; ಶರಣನಿಂದ ಹೊರಹೊಮ್ಮಿ ಬರುವುದು-ತೋರುವುದು ಶಿವ ಭಾವ ಅದು ಆತನ ಒಳಹೊರಗೆಲ್ಲ ತೆರಹಿಲ್ಲದೆ ತುಂಬಿರುತ್ತದೆ; ಬಿಡುವಿಲ್ಲದೆ ಬೆಸುಗೆಯಾಗಿರುತ್ತದೆ. ಆತನು ಹಗಲಿರುಳು ಶಿವಭಾವದಲ್ಲಿರುತ್ತಾನೆ. ಆತನ ಕನಸು ಮನಸೆಲ್ಲ ಅದೇ ಆಗಿರುತ್ತದೆ. ಆತನ ಆ ಭಾವಸಿಂಹಾಸನದಲ್ಲಿ ಸದಾ ಶಿವದೇವನು ಮುಹೂರ್ತಮಾಡಿರುತ್ತಾನೆ. ಶರಣನ ಶಿವವೆಚ್ಚು ಅಚ್ಚು ಹೊಯ್ದಂತಿರುತ್ತದೆ. ಆ ಭಾವದಲ್ಲಿ ಆತನು ತನ್ನನ್ನೇ ಮರೆತಿರುತ್ತಾನೆ. ಆತನ ನೋಟದಲ್ಲಿ ಅದೇ ಭಾವ; ಆತನ ಮಾಟದಲ್ಲಿ ಅದೇ ಶೈವೀಭಾವ. ಆತನಕ್ರಿಯೆ, ಆತನ ಜ್ಞಾನ, ಆತನ ಇಚ್ಚೆ ಎಲ್ಲವೂ ಅದೇ ಆಗಿರುತ್ತದೆ. ಆತನು ಆ ಭಾವ ಭಾಗ್ಯದಿಂದ ಬಾಹ್ಯಲೋಕಕ್ಕೆ ಅದೆಂದಿಗೂ ಬಾರನು. ಭಿನ್ನಯೋಚನೆಯನ್ನು ಅದೆಂದಿಗೂ ಮಾಡನು.

“ ಹಗಲು ಮನಸಿಂಗಂಜಿ, ಇರುಳು ಕನಸಿಂಗಂಜಿ,
ಧ್ಯಾನ ಮೌನಿಯಾಗಿರ್ದಳವ್ವೆ !
ಸಖಿ ಬಂದು ಬೆಸಗೊಂಡಡೆ, ಏನೆಂದು ಹೇಳುವೆನವ್ವೆ !
ಏನೆಂದು ನುಡಿವೆನವ್ವೆ !!
ಸಾಕಾರದಲ್ಲಿ ಸವೆದು, ನಿರಾಕಾರದಲ್ಲಿ ಅರ್ಪಿಸಿದಡೆ
ಮಹಾಲಿಂಗ ಗಜೇಶ್ವರದೇವನು ಮೋಶ್ವರನಾಗಿದ್ದನವ್ವೆ !”

ಶರಣನ ನೆನಹಿನಲ್ಲಿ ನೋಟದಲ್ಲಿ ನಡೆಯಲ್ಲಿ ನುಡಿಯಲ್ಲಿ ಶಿವಭಾವವೇ ಇರುತ್ತದೆ.

" ಶಿವ ಏವ ಜಗತ್ಸರ್ವಂ ಶಿವ ಏವಾಹಮಿತ್ಯಪಿ ।
ಭಾವಯನ್ ಪರಮೋ ಯೋಗೀ ಭವದೋಷೈರ್ನ
ಬಾಧ್ಯತೇ ॥ ೨ ॥

ಶಿವಭಾವೇ ಸ್ಥಿರೇ ಜಾತೇ ನಿರ್ಲೇಪಸ್ಯ ಮಹಾತ್ಮನಃ ।
ಯೋ ಯೇ ಭಾವಾಃ ಸಮುತ್ಪನ್ನಾಸ್ತೇತೇ ಶಿವಮಯಾಃ
ಸ್ಮೃತಾಃ ॥ ೩ ॥

ಕಾಣುವ ಈ ಜಗತ್ತೆಲ್ಲ ಶಿವಸ್ವರೂಪ; ಜಗತ್ತಿನಲ್ಲಿ ಇರುವ ತಾನೂ ಶಿವಸ್ವರೂಪ; ಎಂದು ಭಾವಿಸುವ ಶರಣನು ಭವದೋಷ ಭವದುಃಖಗಳಿಗೆ ಒಳಗಾಗನು. ಆತನೇ ಶಿವಯೋಗಿಯಾಗಿರುವನು.

ಹೀಗೆ ಶಿವಭಾವಸ್ಥಿರವಾಗಲು ಆತನಿಗೆ ಯಾವುದರ ಲೇಪವೂ ಆಗುವುದಿಲ್ಲ. ನಿರ್ಲಿಪ್ತನಾದ ಶರಣನೇ ಮಹಾತ್ಮನು. ಆತನ ಭಾವಗಳೆಲ್ಲಾ ಶಿವಮಯವಾಗಿರುತ್ತವೆ

ಭಾವಪ್ರಕಾಶಕ್ಕೆ ವಿರೋಧವಾದ ಭಾವವಿಕಾರಗಳೆಲ್ಲ ಅಳಿದಿರಬೇಕು. ಈ ದಿಸೆಯಲ್ಲಿ ಮುಖ್ಯವಾಗಿ ಷಡ್ಭಾವವಿಕಾರಗಳು ಮುತ್ತಿ ಬರುವುದುಂಟು. ಅಸ್ತಿತೆ, ಜಾಯತೆ, ವಿಪರಿಣತೆ, ವಿವರ್ಧತೆ, ಅಪಕ್ಷಯತೆ, ವಿನಶ್ಯತೆ ಎಂದಿವು. ಇವನ್ನು ಕಳೆದು ಕೊಳ್ಳುವ ವಿಧಾನವನ್ನು ಕೆಳಗಿನ ವಚನದಲ್ಲಿ ಕಾಣಬಹುದು :

" ಶ್ರೀಗುರುವಿನ ಕೃಪಾಗರ್ಭ ಮಧ್ಯದಲ್ಲಿ ಇದ್ದವ ನಾನಹುದು–
ಎಂದರಿದಾಗಳೆ ಅಸ್ತಿತೇ ಎಂಬ ವಿಕಾರ ಕೆಟ್ಟಿತ್ತು.
ಗುರುಕರುಣದಲ್ಲಿ ಜನಿಸಿದನಾಗಿ ನಾಹು ಯೋನಿಜನೆಂದು–
ಅರಿದಾಗಳ ಜಾಯತೇ ಎಂಬ ವಿಕಾರ ಕೆಟ್ಟಿತ್ತು.
ಗುರುವಿನ ಸದ್ಭಾವಜಾತಲಿಂಗವನಂಗದಲ್ಲಿ ಧರಿಸಿ,
ಪರಮ ಪರಿಣಾಮದಲ್ಲಿ ಪರಿಣಾಮಿಸುತ್ತಿದ್ದ ಕಾರಣ
ವಿಪರಿಣತೆ ಎಂಬ ವಿಕಾರ ಕೆಟ್ಟಿತ್ತು.
ದೇಹೇಂದ್ರಿಯಾದಿಗಳೆಲ್ಲ ಲಿಂಗದಲ್ಲಿ ಅಡಗಿ

ಸ್ಥಿರಮಯವಾಗಲು ವಿವರ್ಧತೆ–ಅಪಕ್ಷಯತ್
ಎಂಬೆರಡು ವಿಕಾರಂಗಳು ಕೆಟ್ಟಿದ್ದವು.
ಲಿಂಗಾಂಗದ ಐಕ್ಯವನರಿದು ಲಿಂಗದಲ್ಲಿ
ಲೀಯವಾಗಲು ವಿನಶ್ಯತೇ ಎಂಬ ವಿಕಾರ ಕೆಟ್ಟಿತ್ತು.
ಇಂತೀ ಲಿಂಗಸಂಗದಿಂದ ಷಡ್ಭಾವವಿಕಾರವಳಿದು
ನಿಮ್ಮ ವಿಕಾರವೆಡೆಗೊಂಡಿತ್ತು ನಿಜಗುರುಸ್ವತಂತ್ರ
ಸಿದ್ಧಬಂಗೇಶ್ವರಾ, ನಿಮ್ಮ ಶರಣಂಗೆ;"

ಜಗತ್ತನ್ನು ಶಿವಸ್ವರೂಪವನ್ನಾಗಿ ಕಾಣಬೇಕಾದರೆ ಶ್ರೀಗುರುಕೃಪೆ, ಶಿವಲಿಂಗನಿಷ್ಠೆ, ಶಿವಾತ್ಮಭಾವ, ಶಿವಾದ್ವೈತ ಸಿದ್ಧಿ ಸಮನಿಸಬೇಕು. ಭವಭಾವ ಹಿಂಗಿರಬೇಕು.

" ಅದ್ವಿತೀಯ ಶಿವಾಕಾರಭಾವನಾ ಧ್ವಸ್ತಕರ್ಮಣಾ
ನ ಕಿಂಚಿದ್ಭಾವ್ಯತೇ ಸಾಕ್ಷಾತ್ ಶಿವಾದನ್ಯನ್ಮಹಾತ್ಮನಾ ॥ ೪ ॥
ಗಳಿತಾಜ್ಞಾನ ಬಂಧಸ್ಯ ಕೇವಲಾತ್ಮಾನು ಭಾವಿನಃ ।
ಯತ್ರ ಯತ್ರೇಂದ್ರಿಯಾಸಕ್ತಿ ಸ್ತತ್ರ ತತ್ರ ಶಿವಾತ್ಮತಾ ॥ ೫ ॥"

ಜಡತ್ವ ಮತ್ತು ಅಜ್ಞಾನ ಇವೆರಡು ಭಾವಪ್ರಕಾಶಕ್ಕೆ ವಿರೋಧಕಗಳು. ಆದ್ದರಿಂದ ಇವೆರಡನ್ನು ತ್ಯಜಿಸಬೇಕೆಂದು ಈ ಎರಡು ಮಂತ್ರಶ್ಲೋಕಗಳಲ್ಲಿ ನಿರೂಪಿಸಲಾಗಿದೆ.

ಜಡಕರ್ಮಗಳನ್ನು ಜಯಿಸಬೇಕಾದರೆ ಅನನ್ಯ ಶಿವ ಭಾವ ಮಾತ್ರದಿಂದ ಸಾಧ್ಯ. ಶಿವನಿಗೆ ಅನ್ಯವಾದುದನ್ನು ತೃಣವನ್ನಾದರೂ ಶರಣನು ನೆನೆಯಬಾರದು.

ಅಂತಹ ಆ ಕೇವಲ ಶಿವಾತ್ಮಭಾವದಿಂದ ಅಜ್ಞಾನ ಬಂಧನ ಬಿಟ್ಟೋಡುತ್ತದೆ. ಆ ಶಿವಜ್ಞಾನವುಳ್ಳ ಶರಣನಿಗೆ ಎಲ್ಲಿ ಎಲ್ಲಿ ಇಂದ್ರಿಯಾಸಕ್ತಿಯೊದರೆ ಅಲ್ಲಲ್ಲಿ ಶಿವಾತ್ಮಭಾವ ಸಂಭವಿಸುತ್ತದೆ.

ಏನೆಲ್ಲವೂ ಬೆನ್ನು ಬಿಟ್ಟು ಓಡುತ್ತವೆ. ಕರ್ಮವಾತ್ರ ಬೆನ್ನು ಬಿಡದು. ಆದು

ಎಂಥವರನ್ನೂ ಕಾಡಿಕೊಲ್ಲುತ್ತದೆ. ಕೇಡಿಗೆಳಸುತ್ತದೆ. ಕಡುನೋವಿಗೀಡು ಮಾಡುತ್ತದೆ.

" ಮನೋವಾಕ್ಕಾಯದಿಂದ ಹುಟ್ಟಿದ ಕರ್ಮ ತೊಟ್ಟನೆ
ತೊಳಲಿಸಿ ಬಳಲಿಸದಲ್ಲದೆ ಬಿಡದು.
ಕರ್ಮವ ಮೀರಿ ನಡೆವ ಬಲ್ಲಿದರನಾರನೂ ಕಾಣೆ,
ಬೊಮ್ಮಾದಿಗಳೆಲ್ಲ ಕರ್ಮಕ್ಕೀಡಾದರು.
ಕರ್ಮ ಅಜಹರಿಗಳ ಬಾರದ ಭವದಲ್ಲಿ ಬರಿಸಿತ್ತು.
ಕಾಣದ ದುಃಖವ ಕಾಣಿಸಿತ್ತು: ಇನ್ನುಳಿದವರ
ಪೇಳಲೇನುಂಟು ?
ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಅಧೀನವಿಡಿದು
ಕಾಣುವ ಕರ್ಮದ ಬಲುಹ ನೋಡಾ."

ಶಿವಾತ್ಮಭಾವಿಯಾದವನಿಗೊಬ್ಬನಿಗೆ ಮಾತ್ರ ಕರ್ಮವನ್ನು ಜಯಿಸುವ ಶಕ್ತಿ ಸಂಭವಿಸುವುದಲ್ಲದೆ ಉಳಿದವಂಗೆ ಸಾಧ್ಯವಿಲ್ಲ.

" ಕರ್ಮರಹಿತನಾದ ನಿರ್ಮಲಾತ್ಮಂಗೆ ಮಾಯಾಭ್ರಮೆ ಇಲ್ಲ;
ಮಾಯಾಭ್ರಮೆ ಇಲ್ಲವಾಗಿ ಮನದ ಸಂಕಲ್ಪ ವಿಕಲ್ಪವಿಲ್ಲ.
ಮನದ ಸಂಕಲ್ಪ ವಿಕಲ್ಪವಿಲ್ಲವಾಗಿ ವಿಷಯಾಭಿಮಾನವಿಲ್ಲ.
ವಿಷಯಾಭಿಮಾನವಿಲ್ಲವಾಗಿ ಪಂಚೇಂದ್ರಿಯಂಗಳ ವ್ಯಾಪಾರವಿಲ್ಲ.
ಇವಿಲ್ಲವಾಗಿ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರನ ಶರಣ
ನಿರ್ದೇಹಿ."

ಶರಣನ ತನುಮನ ಭಾವವೆಲ್ಲ ಶಿವಸ್ವರೂಪವಾಗಿರುವುದರಿಂದ ಆತನಿಗೆ ಮಾಯಾಭ್ರಮೆ, ಸಂಕಲ್ಪವಿಕಲ್ಪ; ವಿಷಯಾಭಿಮಾನ, ಇಂದ್ರಿಯ ವ್ಯಾಪಾರ ಯಾವುದೂ ಇರುವುದಿಲ್ಲ. ಆತನು ಕೇವಲ ಶಿವಭಾವಿಯಾಗಿರುತ್ತಾನೆ. ಆತನ ಎಲ್ಲ ಇಂದ್ರಿಯ ವ್ಯಾಪಾರಗಳು ಸಹ ಶಿವಭಾವಾತ್ಮಕವಾಗಿರುತ್ತವೆ. "ಯದ್ಯತ್ಕರ್ಮಕರೋಮಿ ತತ್ತದಖಿಲಂ ಶಂಭೋ ತವಾರಾಧನಂ" ಎಂಬ ಶಂಕರಾಚಾರ್ಯರ ಉಕ್ತಿಯಂತಿರುತ್ತಾನೆ ಶರಣನು. ಶಿವೈಕಜ್ಞಾನದಿಂದ ಅಜ್ಞಾನವನ್ನೂ

ತೊಲಗಿಸಿರುತ್ತಾನೆ. ಮಾನವಿಲ್ಲದ ಭೋಜನ, ಜ್ಞಾನವಿಲ್ಲದ ಕ್ರಿಯೆ, ಧ್ಯಾನವಿಲ್ಲದ ಪೂಜೆ ವ್ಯರ್ಥ. ಶಿವಜ್ಞಾನ ಶರಣನಿಗೆ ಇದ್ದಾಗಬೇಕು. ಆದರಿಂದ ಅಜ್ಞಾನೇಂದ್ರಿಯವಶವಾಗದಂತಿರಲು ಸಾಧ್ಯವಾಗುತ್ತದೆ.

" ರಾಗದ್ವೇಷಾದಯೋ ಭಾವಾಃ ಸಂಸಾರಕ್ಲೇಶಕಾರಣಂ ।
ತೇಷಾಮುಪರಮೋ ಯತ್ರ ತತ್ರಭಾವಃ ಶಿವಾತ್ಮಕಃ ॥ ೬ ॥
ಯಥಾ ಸೂರ್ಯಸಮಾಕ್ರಾಂತೌ ನ ಶಕ್ನೋತಿ ತಮಃಸದಾ ।
ತಥಾ ಪ್ರಕಾಶಮಾತ್ಮಾನಂ ನಾಽವಿದ್ಯಾಽಕ್ರಮತಿ ಸ್ವಯಂ ॥ ೭ ॥"

ಸಾಂಸಾರಿಕ ದುಃಖಕ್ಕೆ ಕಾರಣಗಳು ರಾಗಭಾವ ದ್ವೇಷಭಾವಗಳು; ಮತ್ತು ಅವಿದ್ಯಾಸ್ಮಿತಾಭಿನಿವೇಶಭಾವಗಳು. ಇವೆಲ್ಲ ಇಲ್ಲದಲ್ಲಿ ಶಿವಾತ್ಮಕ ಭಾವವು ತಾನೇ ತಾನಾಗಿರುತ್ತದೆ.

ನೇಸರನಿರುವಲ್ಲಿ ನಿಶೆಯಿರದು. ಶೈವೀಭಾವವು ಪ್ರಕಾಶಿಸುವಲ್ಲಿ ಅವಿದ್ಯಾತಮಸ್ಸಿರದು. ಪಂಚಕ್ಲೇಶಪಾದಪಕ್ಕೆ ಮೂಲವಾದ ಅವಿದ್ಯೆಯಿಲ್ಲದಂತಾದ ಬಳಿಕ ಆಸ್ಮಿತ ರಾಗದ್ವೇಷಾದಿಗಳಿರವು.

ಭಾವಪ್ರಕಾಶಸ ಸಮರ್ಥನಾದ ಶರಣನಿಗೆ ಕಾಲಕಟ್ಟಳೆಯಿಲ್ಲ, ಆತನಿಗೂ ಇಲ್ಲ, ಆತನ ಆರಾಧನೆಗೂ ಇರುವುದಿಲ್ಲ. ಆತನು ಯಾವ ವೇಳೆಯಲ್ಲಿಯೋ ಮಾಡಲಿ ಅದು ಭಾವಭರಿತವಾದುದರಿಂದ ಶಿವನಿಗೆ ಪ್ರಿಯವಾಗುತ್ತದೆ.

" ಉದಯ ಮಧ್ಯಾಹ್ನ ಸಂಧ್ಯಾಕಾಲವ ನೋಡಿ ಮಾಡುವ
ಕರ್ಮಿ ನೀಕೇಳಾ ! ಉದಯವೆಂದೇನೋ ಶರಣಂಗೆ ?
ಮಧ್ಯಾಹ್ನವೆಂದೇನೋ ಶರಣಂಗೆ ?
ಅಸ್ತಮಾನವೆಂದೇನೋ ಶರಣಂಗೆ ?
ಮಹಾಮೇರುವಿನ ಮರೆಯಲ್ಲಿರ್ದು ತನ್ನ
ನೆಳಲದರಸುವ ಭಾವಭ್ರಮಿತರ ಮೆಚ್ಚನಮ್ಮ
ಕೂಡಲಚೆನ್ನ ಸಂಗಮದೇವ."

ಕಾಲಾತೀತನಾದ ಪರಶಿವನಿಗೆ ಕಾಲ ಮುಖ್ಯವಲ; ಕಾಲವನ್ನು ಆತನು ನೋಡುವುದಿಲ್ಲ. ಕಾಲಸಂಬಂಧ ಆತನಿಗಿಲ್ಲ ಆತನಿಗೆ ಬೇಕಾದುದು ಭಾವ.

ಭಾವಪ್ರಕಾಶಕ್ಕೆ ಕಾಲಕ್ರಮಗಳ ವಿಧಿ ವಿಧಾನಗಳ ಆಗತ್ಯವಿಲ್ಲ. ಕಾಲವಿದ್ದಲ್ಲಿ ಕಾಮವಿರುತ್ತದೆ; ಕಾಮವಿರುವಲ್ಲಿ ಮಾಯೆಯಿರುತ್ತದೆ. ಮಾಯೆ (ಅಜ್ಞಾನ) ಇರುವಲ್ಲಿ ತನಗೆಂಬ ಅಥವಾ ಅಂಗಕ್ಕೆಂಬ ಭಾವವಿರುತ್ತದೆ. ಈ ಭಾವವೇ ಭ್ರಮೆ. ಇದಿರುವಲ್ಲಿ ಶಿವಾನುಭವಸ್ವರೂಪ ಪ್ರಕಾಶವಿರದು; ಶಿವಭಾವವಿರದು ಶಿವಭಾವವಿಲ್ಲದಲ್ಲಿ ಶಿವಕರುಣೆಯಿರದು.

ಸ್ವಾರ್ಥಭಾವವೇ ತಮಸ್ಸು; ಶಿವಭಾವವೇ ತೇಜಸ್ಸು. ಶಿವಮಯವಾದ. ಈ ವಿಶ್ವಭಾವವೇ ಪ್ರಕಾಶ. ಶರಣನಿಗೆ ಈ ಬಗೆಯ ಭಾವ ಪ್ರಕಾಶವಿದ್ದಾಗ ಬೇಕು.

ಕ್ರಿಯಾಪ್ರಕಾಶ ಪಿಂಡಾಕಾಶದ ತಾರಾಮಂಡಲ; ಭಾವಪ್ರಕಾಶ ಬಿಂದಾಕಾಶದ ಚಂದ್ರಮಂಡಲ.

೨೨. ಜ್ಞಾನ ಪ್ರಕಾಶನ ಸ್ಥಳಂ

ಶರಣನ ಪ್ರಸಾದಲಿಂಗದೊಳಗಿನ ಪ್ರಕಾಶಲಿಂಗದ ಕೊನೆಯ ಕಿರಣ ಜ್ಞಾನ ಪ್ರಕಾಶನಸ್ಥಲ. ಇದು ಭಾವಪ್ರಕಾಶನದ ಬೆಂಬಳಿವಿಡಿದು ಬರುತ್ತದೆ ಅಂದರೆ ಭಾವಪ್ರಕಾಶವಿರುವಲ್ಲಿ ಜ್ಞಾನಪ್ರಕಾಶವಿರುತ್ತದೆ.

ಜ್ಞಾನ ಗುರುದೇವನ ಜ್ಞಾನಪಾದೋದಕದಿಂದ ಶರಣನ ಜ್ಞಾನನಿಷ್ಪತ್ತಿಗೊಂಡು ಮಹಾಕಾಶವುಂಟಾಗುತ್ತದೆ. ಆ ಮಹಾಕಾಶದಲ್ಲಿ ಅದುವೇ ಜ್ಞಾನಪ್ರಕಾಶನವಾಗಿ ಪರಿಣಮಿಸುತ್ತದೆ. ಅಂದರೆ ಮಹಾಕಾಶದಲ್ಲಿ ಶರಣನ ಜ್ಞಾನವು ಪ್ರದರ್ಶಿತವಾಗುತ್ತದೆ, ಆನಂದ ಚೈತನ್ಯದಲ್ಲಿ ಪರಿಪಕ್ವಗೊಂಡು ಪರಿಪೂರ್ಣಾಖಂಡವಾದ ಶರಣನ ಶಿವಜ್ಞಾನವು ಪ್ರತಿಭಾನ್ವಿತವಾಗುತ್ತಗೆ. ಅಥವಾ ಆ ಆನಂದ ಚೈತನ್ಯವೇ ಜ್ಞಾನಸ್ವರೂಪ ಪ್ರಕಾಶವಾಗಿ ಪರಾವಾಣಿಯ ಪರಿಣಾಮ

ವಾಗಿ ಮುಂದೋರುವ ವಾಣಿಗಳಲ್ಲಿ ತಾನೇ ತಾನಾಗಿ ಬೆಳಗುತ್ತದೆ. ಸಾಹಿತ್ಯ ಕಾರ್ಯದಲ್ಲಿ ಶಿವಭಾವ-ಶಿವಜ್ಞಾನಗಳೆನ್ನು ಹೊರಹೊಮ್ಮಿಸಿ ಬೆಳಗಿಸುವುದೇ ನಿಜ ವಾದ ಶರಣನ ಜ್ಞಾನಪ್ರಕಾಶಸ್ಥಳದ ಧ್ಯೇಯ. ಅದುವೇ ಶಿವಸಾಹಿತ್ಯ; ಶಿವ ಕಾವ್ಯ. ಅದರಲ್ಲಿ ಶರಣನ ಪರಮಾನುಭವವು ನವನವೋನ್ಮೇಷಿಯಾಗಿ ಕಾಲ ಕಟ್ಟಳೆಯಿಲ್ಲದೆ ಕಳಾಮಯವಾಗಿರುತ್ತದೆ. ಅದರಲ್ಲಿ ಯಾವ ಕಾಳಿಕೆಗಿಂಬಿರುವುದಿಲ್ಲ; ವಿಕಾರಕ್ಕೆಡೆಯಿರುವುದಿಲ್ಲ. ಅದು ಸಚ್ಚಿದಾನಂದಮಯ ಸಾಹಿತ್ಯವಾಗಿ ನಿತ್ಯ ಪರಿಪೂರ್ಣಾಖಂಡವಾಗಿ ಪ್ರಕಾಶಿಸುತ್ತದೆ. ಅಂತಹ ಸಾಹಿತ್ಯ ಅದೆಂದಿಗೂ ಕಾಲಗರ್ಭದಲ್ಲಿ ಮರೆಯಾಗದು; ಪ್ರಾಂತ ಪಂಥಗಳ ಎಲ್ಲೆಗಳಿಂದ ಸಂಕುಚಿತಗೊಳ್ಳದು. ಅದು ಎಲ್ಲೆಲ್ಲಿಯೂ ಹಬ್ಬಿ ಹೊಳೆಯುತ್ತಿರುತ್ತದೆ. ಅದರ ಆ ಚಿತ್ತಕಾಶದಲ್ಲಿ ಅನೇಕರು ಬಾಳದಾರಿಯನ್ನು ಕಂಡುಕೊಂಡು ಮುಂಬರುತ್ತಾರೆ; ಹೊಂಬೆಳಗುತ್ತಾರೆ.

ಮಹಾಕಾಶದ ಮಹಾಭಿತ್ತಿಯಲ್ಲಿ ಮಹಾಜ್ಞಾನಾನುಭವಗಳಿಂದ ಬೆಳ್ಳನೇ ಬೆಳಗುವ ಆ ದೈವೀ ಸಾಹಿತ್ಯಕ್ಕೆ ಕಳಂಕದೆಂದರೇನು; ಕೊರತೆಯೆಂದರೇನು ? ಆ ಮಹಾಸಂಪತ್ತನ್ನು ಬಯಸದವರಾರು ? ಅದಕ್ಕೆ ದೇಶ ಕಾಲಗಳ ವ್ಯಕ್ತಿತ್ವದ ಪರಿಧಿಯಿರಲು ಹೇಗೆ ಸಾಧ್ಯ? ಅದು ಸೂರ್ಯಪ್ರಕಾಶಕಿಂತಲೂ ಶ್ರೆಷ್ಠವಾದುದು. ಅದು ಅಮೃತಕ್ಕೆ ಅಮೃತವಾದುದು. ಅದು ಪರಿಪೂರ್ಣಪ್ರಸಾದಲಿಂಗ. ಕ್ರಿಯೆ-ಭಾವ-ಜ್ಞಾನ ಪ್ರಕಾಶದಿಂದ ಪ್ರಸನ್ನವಾದುದು. ಅದೇಆದ ಶರಣನಿಗೆ ಶರಣ ಭಾವವಿರದು. ಭಾವಕ ಭಾವಿತೃ ಭಾವವಾಗಲಿ ಜ್ಞಾತೃ ಜ್ಞೇಯ ಭಾವವಾಗಲಿ ನಿಸ್ಸಂದೇಹವಾಗಿ ಇರದು. ಆ ಮಹಾಜ್ಞಾನ ಪ್ರಕಾಶಸ್ವರೂಪವೇ ತಾನಾಗಿರುತ್ತಾನೆ. ಇದ್ದು ಆ ಮಹಾಜ್ಞಾನವನ್ನು ಎಂದೆಂದಿಗೂ ಪ್ರಕಾಶನಗೊಳಿಸುತ್ತಾನೆ. ಪರಾ ವಿದ್ಯೆಯಲ್ಲಿ ಪ್ರವೀಣನೆನಿಸುತ್ತಾನೆ. ಪರಾವಿದ್ಯೆಯೇ ಶರಣನಿಗೆ ಪರಮ ಪ್ರಸಾದವಾಗಿರುತ್ತದೆ.

" ಮುಖ್ಯಾರ್ಥೇಽಸಂಭವೇ ಜಾತೇ ಲಕ್ಷಣಾಯೋಗ ಸಂಶ್ರಯಾತ್
ತದ್‌ಜ್ಞಾನಯೋಜನಂ ಯತ್ತದುಕ್ತಂ ಜ್ಞಾನಪ್ರಕಾಶನಂ ॥೧॥"

ಅಂಗ-ಲಿಂಗ ಸಾಮರಸ್ಯದಲ್ಲಿ ಸರಿಯಾದ ಅರ್ಥವಾಗದಾಗ ಅಂದರೆ ವಾಚ್ಯಾರ್ಥವು ಸಮರಸಕ್ಕೆ ಸರಿಹೋಗದಾಗ ಲಕ್ಷಣಾರ್ಥವನ್ನು ಆಶ್ರಯಿಸಬೇಕು [illegible] ಜ್ಞಾನವೇ ಜ್ಞಾನಪ್ರಕಾಶನವೆನಿಸುತ್ತದೆ.

ಅಂಗವೆಂದರೆ ಶರೀರದೊಂದಲ್ಲ. ಲಿಂಗವೆಂದರೆ ಕುರುಹಲ್ಲ. ಅಂಗ-ಲಿಂಗಗಳಿಗೆ ಅತ್ಯಂತ ಭೇದವಾಗಲಿ, ಅತ್ಯಂತ ಅಭೇದವಾಗಲಿ ಇರುವುದಿಲ್ಲ. ಅವು ಒಂದಲ್ಲ, ಎರಡಲ್ಲ. ಒಂದೆರಡಾಗಿದೆ; ಎರಡೊಂದಾಗಿದೆ. ಸಕ್ಕರೆ ಸವಿಗಳಂತಿವೆ. ಚಿನ್ನ ಬಣ್ಣಗಳಂತಿವೆ. ಆದ್ದರಿಂದ ಅಂಗ-ಲಿಂಗಗಳೆರಡರ ಮುಖ್ಯಾರ್ಥ ಶರಣನ ಈ ಜ್ಞಾನಪ್ರಕಾಶಸ್ಥಲದಲ್ಲಿ ಸಂಭವಿಸದು. ಅಂಗವೇ ಲಿಂಗವಾಗಿ ಲಿಂಗವೆ ಅಂಗವಾಗಿ ಸಮರಸಕ್ಕೆ ಸನ್ನದ್ಧವಾಗಿವೆ. ಸನ್ನದ್ಧತೆಯೇನು ? ಸನ್ನಿಹಿತವಾಗಿವೆ. ಹಾಲು ಹಾಲಿನ ಬಿಳುಪಿನಂತೆ ಬೇರ್ಪಡಿಸಲು ಬಾರದಂತಿವೆ. ತಾವೇ ತಾವಾಗಿ ಬೆಳಗುವಾಗ ತಿಳಿಯಬೇಕಾದುದೆಲ್ಲಿ ? ತಿಳಿವೆಲ್ಲಿ ? ತಿಳಿಯುವವನೆಲ್ಲಿ ? ಎಲ್ಲವೂ ಬೆಳಗೇ ಆಗಿ ಒಳಹೊರಗೂ ತೊಳಗಾಗಿರುವುದು. ಅದುವೇ ಜ್ಞಾನಪ್ರಕಾಶ.

ಶರಣನ ಅಂಗದಲ್ಲಿ ಅಂಗಲಕ್ಷಣಗಳು ಅವಿರಳವಾಗಿ ಅಳವಟ್ಟಿರುವವು. ಇದರಿಂದ ಅಂಗ ಪದದ ಮುಖ್ಯಾರ್ಥ ಸಂಭವಿಸದು. ಮಹಾಕಾಶಸ್ಥಲದಲ್ಲಿರುವ ಅಂಗನು ಅಂಶನೂ ಅಹುದು; ಪೂರ್ಣನೂ ಅಹುದು. ಆತನ ಕಾಯ ಪರಕಾಯವಾಗಿ ಪರಿಣಮಿಸಿರುತ್ತದೆ. ಅವಯವಗಳಿದ್ದರೂ ನಿರವಯತೆ ರೂಪಿತವಾಗಿರುತ್ತದೆ.

"ದೇಹ ನಿರ್ದೇಹಿಗೊಪ್ಪಿಸಿದಲ್ಲಿ ದೇಹ ನಿರ್ದೇಹವಾಯಿತ್ತು,
ಮನ ಲಿಂಗಕ್ಕರ್ಪಿಸಿದಲ್ಲಿ ಮನಲಿಂಗವಾಗಿ ಮನಲಯವಾಯಿತ್ತು.
ಭಾವ ತೃಪ್ತಿಗರ್ಪಿಸಿ ಭಾವ ಬಯಲಾಯಿತ್ತು.
ದೇಹ ಮನ ಭಾವವಳಿದಲ್ಲಿ ಕಾರಣಕಾಯ ಅಕಾಯವಾಯಿತ್ತು.
ಎನ್ನ ದೇಹದ ಸುಖವ ಲಿಂಗ ಭೋಗಿಸುವುದಾಗಿ
ಶರಣ ಸತಿ ಲಿಂಗಪತಿ ಎಂಬ ಭಾವ ಅಳವಟ್ಟಿತ್ತಯ್ಯ
ಎಲೆ ಕಪಿಲಸಿದ್ಧ ಮಲ್ಲಿಕಾರ್ಜುನಾ."

"ಅಂಗದಂತೆ ಲಿಂಗ, ಲಿಂಗದಂತೆ ಅಂಗವಾದ ಬಳಿಕ
ಅಂಗದಂತೆ ಲಿಂಗೈಕ್ಯ; ಲಿಂಗದಂತೆ ಅಂಗೈಕ್ಯ.
ಮನವೇ ಲಿಂಗ, ಲಿಂಗವೇ ಮನವಾದ ಬಳಿಕ

ಮಾತು ಮಾತುಗಳೆಲ್ಲ ಹೊಳ್ಳಾದ ಕಾರಣ ಮೇಲೆ ಲಿಂಗೈಕ್ಯ,
ಲಿಂಗೈಕ್ಯವೇ ಸ್ವರಶಬ್ದ. ಸಂದಣಿಗೆ ಇನ್ನು ತೆರಹುಂಟೇ
ಕಪಿಲಸಿದ್ಧ ಮಲ್ಲಿಕಾರ್ಜುನಾ !"

"ನಿರಾಕಾರ ಪರವಸ್ತು ತನ್ನ ವಿನೋದಾರ್ಥ ಕಾರಣ,
ನಿಜಜ್ಞಾನವಾಗಿ ತೋರಿತ್ತು ನೋಡಾ !
ಆ ಮಹಾಜ್ಞಾನಚಿತ್ತೇ ಅಂಗಸ್ಥಲ ಲಿಂಗಸ್ಥಲವೆಂದಾಯಿತು
ನೋಡಾ !

ಅಂಗವೇ ಶರಣ, ಲಿಂಗವೇ ಶಿವ;
ಅಂಗಲಿಂಗದ ಸಂಗಸಮರಸ ತಾನೆಂಬಾತ ಮಹಾಲಿಂಗಗುರು
ಶಿವಸಿದ್ಧೇಶ್ವರ ಪ್ರಭುವೇ !"

" ಮುಕ್ತಸ್ಯ ಜ್ಞಾನಸಂಬಂಧೋ ಜ್ಞೇಯಾಭಾವಃ ಸ್ವಭಾವತಃ ।
ಉಪಾಧಿಸಹಿತಂ ಜ್ಞಾನಂ ನ ಭೇದಮತಿವರ್ತತೇ ॥ ೨ ॥
ಜ್ಞಾನಮಿತ್ಯುಚ್ಯತೇ ಸದ್ಭಿಃ ಪರಿಚ್ಛೇದೋ ಹಿ ವಸ್ತುನಃ !
ಪರಾರ್ಥಸ್ಯಪರಿಚ್ಛೇದೇ ಕುತೋ ಜ್ಞಾನಸ್ಯ ಸಂಭವಃ ॥ ೩ ॥"

ಜೀವನ್ಮುಕ್ತನಾದ ಶರಣನ ಜ್ಞಾನಸಂಬಂಧವಾದ ಜ್ಞೇಯರಾಹಿತ್ಯವು ಸ್ವಾಭಾವಿಕವಾದುದು. ಅದಕ್ಕೆ ಅರಿಯತಕ್ಕ ಬೇರೊಂದು ವಸ್ತು ಇರುವುದಿಲ್ಲ; ತ್ರಿಪುಟಿ ಅಂದರೆ ಜ್ಞಾತೃ ಜ್ಞಾನ ಜ್ಞೇಯ ಸಮರಸವಾಗಿ ಪ್ರಕಾಶ ಮಾತ್ರವಾಗಿರುತ್ತದೆ. ಅದು ನಿರುಪಾಧಿಕ ಜ್ಞಾನವು. ಸ್ವಪ್ರಕಾಶಸ್ವರೂಪವಾದುದು. ಇನ್ನು ಉಪಾಧಿಸಹಿತವಾದ ಜ್ಞಾನವು ಭೇದವನ್ನು ಮೀರಿರದು.

ಉಪಾಸ್ಯ ಉಪಾಸಕ ಭಾವವನ್ನು ತಳೆದು ಲಿಂಗಾಂಗವಾಗುವುದು. ಅದು ಲಿಂಗ, ಇದು ಅಂಗವೆಂದು ಅರಿವುದು ದ್ವೈತಜ್ಞಾನ; ಅಥವಾ ಭೇದಜ್ಞಾನ. ಲಿಂಗದಲ್ಲಿ ಅಂಗ ಅವಿರಳವಾದಲ್ಲಿ ಅದೇ ಅದ್ವೈತ ಜ್ಞಾನ; ಅಥವಾ ಅಭೇದ ಜ್ಞಾನ.

ಈ ಭೇದಾಭೇದಗಳು ಪರಸ್ಪರ ಪೂರಕವಾಗಿವೆ. ಆ ಮಹಾಕಾಶದಲ್ಲಿ ಸಮಸಂಬಂಧವುಳ್ಳವಾಗಿವೆ. ಬೀಜಾಂಕುರ ನ್ಯಾಯದಂತಿವೆ. ಒಂದರೊಳಗೊಂದು ಹಾಸು ಹೊಕ್ಕಾಗಿವೆ.

"ಕಾಯ ಮುನ್ನವೋ, ಕಾಯದಲ್ಲಿಪ್ಪ ಮನ ಮುನ್ನವೋ ?
ಮನ ಮುನ್ನವೋ, ಮನದಲ್ಲಿಪ್ಪ ಚೈತನ್ಯ ಮುನ್ನವೋ ?
ಚೈತನ್ಯ ಮುನ್ನವೋ, ಚೈತನ್ಯಾತ್ಮಕ ಮಾಯೆ ಮುನ್ನವೋ ?
ಅವು ಮುನ್ನವಲ್ಲ, ಮುನ್ನವಲ್ಲ. ನಿನ್ನ ನಿರಾಳ ನಿಜದ
ನಿರ್ವಯಲಿನ ಶೂನ್ಯಾಶೂನ್ಯವೇ ಮುನ್ನ ನೋಡಾ —
ಕಪಿಲಸಿದ್ಧ ಮಲ್ಲಿಕಾರ್ಜುನಾ."

ಅದು ನಿರಾಳದಿಂದ ಸುರಾಳಕ್ಕೆ ಬಂದಿದೆ. ನಿಜ, ಸುರಾಳ ಮರಳಿ ನಿರಾಳವಾಗುತ್ತದೆ. ನಿರ್ವಯಲು ಬಯಲಾಗಿದೆ. ಅಂತೆಯೇ ಶೂನ್ಯವು ನಿಶ್ಶೂನ್ಯವಾಗುತ್ತದೆ. ಧರ್ಮಿಗೆ ಧರ್ಮ ಹೇಗೆ ಆಶ್ರಯವೋ ಹಾಗೆ ಧರ್ಮಕ್ಕೆ ಧರ್ಮಿ ಆಶ್ರಯ. ಇವುಗಳಂತೆ ಭೇದಾಭೇದ ಜ್ಞಾನಗಳೆರಡೂ ಪರಸ್ಪರವಾಗಿವೆಳ ಅಂತೆಯೇ ಜ್ಞಾನ ಜ್ಞೇಯಗಳೆರಡೂ ಹಾಸುಹೊಕ್ಕಾಗಿವೆ. ಜೀವನ್ಮುಕ್ತನ ಜ್ಞಾನದಲ್ಲಿಯೇ ಜ್ಞೇಯ, ಜ್ಞೇಯದಲ್ಲಿಯೇ ಜ್ಞಾನ ಅನ್ಯೋನ್ಯವಾಗಿರುತ್ತವೆ ಜ್ಞಾನದ ಪ್ರಕಾಶವಾಗಿ ಜ್ಞೇಯವಿರುತ್ತದೆ. ಜ್ಞೇಯಾಂಗವಾಗಿ ಜ್ಞಾನವಿರುತ್ತದೆ. ರಸರುಚಿಗಳಂತೆ ರವಿರಶ್ಮಿಗಳಂತೆ ಜ್ಞಾನ-ಜ್ಞೇಯಗಳಿರುತ್ತವೆ ಅವು ಭೇದಾಽಭೇದವಾಗಿರುತ್ತವೆ.

"ಜ್ಞಾನಸ್ಯ ವಿಷಯೋ ತತ್ತ್ವೇ ಶಿವಾಖ್ಯೇ ಚಿತ್ಸುಖಾತ್ಮನಿ ।
ಆತ್ಮೈಕತ್ವಾನು ಸಂಧಾನಂ ಜ್ಞಾನಮಿತ್ಯುಚ್ಯತೇ ಬುಧೈಃ ॥ ೪ ॥
ಅಪರಿಚ್ಛಿನ್ನಮಾನಂದಂ ಸತ್ತಾಕಾರಂ ಜಗನ್ಮಯಂ ।
ಬ್ರಹ್ಮೇತಿಲಕ್ಷಣಂ ಜ್ಞಾನಂ ಬ್ರಹ್ಮಜ್ಞಾನಮಿಹೋಚ್ಯತೇ ॥ ೫ ॥"

ಜ್ಞಾನಕ್ಕೆ ವಿಷಯವಾಗಿದೆ ಆ ಶಿವತತ್ತ್ವ. ಅದು ಚಿತ್ಸುಖಾತ್ಮಕವಾಗಿದೆ. ಶಿವದರೊಡನೆ ಆತ್ಮಸಾಮರಸ್ಯದ ಸಂಧಾನ ಮಾಡುವುದೇ ಜ್ಞಾನವೆಂದು ಜ್ಞಾನಿಗಳಾದ ಶಿವಾಚಾರ್ಯರು ನಿರೂಪಿಸುತ್ತಾರೆ. ಅರ್ಥಾತ್ ಶಿವಾತ್ಮವಿದ್ಯೆಯೆ ಜ್ಞಾನವೆಂದು ಅಭಿಪ್ರಾಯ

ಸತ್ತೆಯ ಸ್ವರೂಪವಾಗಿ ಈ ಜಗತ್ತು. ಈಜಗನ್ಮಯ ವಾಗುವುದು ಆ ಪರಶಿವಬ್ರಹ್ಮ ಮತ್ತು ಅಖಂಡಾನಂದ ಸ್ವರೂಪವೂ ಆಗಿದೆ. ಅಂದ

ಆನಂದವಾಗಿ ಅಖಂಡವಾದ ಆ ವಸ್ತು ಸತ್ತಾಗಿ ಜಗದಾಕಾರವೂ ಆಗಿದೆ. ಹೀಗೆ ಭೇದಾಭೇದ ಸ್ವರೂಪವಾಗಿರುವುದೆ ಪರಬ್ರಹ್ಮ ಲಕ್ಷಣ; ಅದನ್ನು ಅರಿವುದೇ ಬ್ರಹ್ಮಜ್ಞಾನ.

ಸತ್ ಚಿತ್ ಆನಂದ ಈ ಮೂರಕ್ಕೂ ಇರುವ ನಿಕಟ ಸಂಬಂಧ ಈ ಎರಡು ಮಂತ್ರಶ್ಲೋಕಗಳಲ್ಲಿ ಸೊಗಸಾಗಿ ನಿರೂಪಿತವಾಗಿವೆ. ಸದ್ರೂಪ ಬ್ರಹ್ಮಾಂಡ ಹಾಗು ಪಿಂಡಾಂಡ; ಆನಂದಸ್ವರೂಪ ಪರಬ್ರಹ್ಮ. ಸದಾನಂದಗಳ ಅಥವಾ ಸತ್ತಾನಂದಗಳ ಅಂದರೆ ಬ್ರಹ್ಮಾಂಡ–ಬ್ರಹ್ಮಗಳ ಸಮ್ಯಗ್ ಜ್ಞಾನವೇ ಚಿತ್. ಇವುಗಳ ಏಕತ್ವಾನುಸಂಧಾನವೇ ಜ್ಞಾನಪ್ರಕಾಶ.

ಸಚ್ಚಿತ್ಸುಖವೇ ಬ್ರಹ್ಮಲಕ್ಷಣ. ಆ ಜ್ಞಾನವೇ ಬ್ರಹ್ಮಜ್ಞಾನ. ಇದು ಶಿವಾಚಾರ್ಯರು ನಿರೂಪಿಸುವ ವಿಜ್ಞಾನ. ವಿಶ್ವವನ್ನು ವಿಶ್ವನಾಥನನ್ನು ಚೆನ್ನಾಗಿ ಅರಿಯುವುದೇ ಜ್ಞಾನದ ಮುಖ್ಯ ಲಕ್ಷಣ, ಪೂರ್ಣಲಕ್ಷಣ ಎರಡೂ ಸತ್ತಾನಂದ ಮಯವಾಗಿವೆ; ಅಂತೆಯೇ ಚಿನ್ಮಯವೂ ಆಗಿವೆ; ಎಂದರಿದು ಮರವೆಗೆ ಒಳಗಾಗದಿರುವುದೇ ಜ್ಞಾನಪ್ರಕಾಶ.

"ಅರಿವೆನೆಂದರೆ 'ಸತ್ಯ ಜ್ಞಾನ ಮನಂತಂ ಬ್ರಹ್ಮ' ಎಂದು ಶ್ರುತಿ ಸಾರುತಿದೆ. ಮರೆದೆನೆಂದರೆ 'ಸಾಕ್ಷಾತ್ಸಚ್ಚಿದಾನಂದಂ ಭವಂ' ಎಂದು ಕೈವಲ್ಯೋಪನಿಷತ್ತು ಘೋಷಿಸುತ್ತವೆ. ಅರಿವು ವಸ್ತುಸ್ವರೂಪ; ಮರಹು ಮಾಯಾಸ್ವರೂಪವೆಂದರಿನು ನಿರ್ವಯಲ ಸ್ವರೂಪನಾದೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ."

"ಆಕಾಶದಲ್ಲಿಯ ಮೇಘದಂತೆ, ಜಲದಲ್ಲಿಯ ತೆರೆಯಂತೆ, ಬರುತ್ತಿದೆ ನೋಡಾ. ಈ ಘಟ ಬಂದದ್ದರಿಯೆ, ಹೋದದ್ದರಿಯೆ; ನಿಂದವಸ್ತುವದು ನಿಜವೆಂದರಿದೆ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನ."

ಮೊದಲ ವಚನದಲ್ಲಿ ಅರಿವು–ಮರವುಗಳ ವಿಶ್ಲೇಷಣವಿದೆ. ಅವೆರಡೂ ಇಲ್ಲದಾಗ ಆಗುವ ನಿರವಯಲ ಸ್ವರೂಪ ನಿರೂಪವಿದೆ. ಅರಿಯುವಾಗ ಪರಬ್ರಹ್ಮ ವಿಷಯವಾಗುತ್ತದೆ. ಅರಿದ ಬಳಿಕ ಅದೇ ನಿರ್ವಿಷಯವಾಗುತ್ತದೆ. ಸಾಕ್ಷಾತ್ತಾಗಿ ಸತ್ಸ್ವರೂಪಾದ ಜಗತ್ತು ಮಿಥ್ಯೆಯೆಂದರೆ ಅದೇ ಮರವು. ಅದಕ್ಕಿಂತ ಬೇರಿಲ್ಲ ಅಜ್ಞಾನ ಸ್ಥೌಲ್ಯ. ಮರವೇ ಮಾಯೆ. ಮಾಯೆ ಬೇರಿಲ್ಲ.

ಜಗತ್ತು ಮಾಯೆಯಲ್ಲ. ತನ್ನ ಮನದ ಮರವೆ ಮಾಯೆ, ಮರವೆಯಲ್ಲಿ ಜಗದ ಸತ್ಯಸ್ವರೂಪ ಜ್ಞಾನವಾಗುವುದಾದರೂ ಹೇಗೆ ? ಮಿಥ್ಯಾವಾದದಲ್ಲಿ ಆನಂದಕ್ಕೆ ಅರಿವಿಗೆ ಇಂಬಿಲ್ಲ, ನಿಜರಿವಿನಲ್ಲಿ ದುಃಖ ಅಜ್ಞಾನಗಳಿಗೆ ಇಂಬಿಲ್ಲ ಅರಿದರಿವೇ ತಾನಾದ ಬಳಿಕ ಶಬ್ದ ಮುಗ್ಧತೆಸಮನಿಸುತ್ತದೆ. ಅಂತಾದಾಗ ಮಿಥ್ಯಾವಾದಕೆ ಮುಖವೆಲ್ಲಿ ? ತನಗೆದುರಿಟ್ಟು ಅರಿವ ವಸ್ತುವೇ ಇರುವುದಿಲ್ಲಾಗಿ, ಅರಿವ ವಿಷಯಂವಾಗಲಿ ಅನುಭೋಗಿಸುವ ಪ್ರಸಂಗ ವಾಗಲೀಇಲ್ಲಾಗಿ ಮಿಥ್ಯಾಪ್ರಲಾಪಕ್ಕೆ ಕಾರಣವೇ ಇರುವುದಿಲ್ಲ.

ಆ ಪರಶಿವನು ಜಗನ್ಮಯನಾಗಿ ಸತ್ತಾಕಾರನಾಗಿದ್ದಾನೆ ಜಗತ್ತು ಸತ್ಯವಲ್ಲೆಂದರೆ ಜಗನ್ಮಯ ಬ್ರಹ್ಮನೂ ಸತ್ಯವಲ್ಲೆಂದು ಸಲ್ಲಾಪಿಸಿದಂತಾಗುತ್ತದೆ. ಆಗ ಆ ಪರಬ್ರಹ್ಮನ ತ್ರಿವಿಧ ಸ್ವರೂಪಲಕ್ಷಣಗಳಲ್ಲಿ ಮೊದಲಿನದಾದ ಸದ್ರೂಪಲಕ್ಷಣವೇ ಇಲ್ಲದಂತಾಗುತ್ತದೆ. ಅನಿತ್ಯತ್ವ ಅಪೂರ್ಣತ್ವಗಳು ಅ ಪರಬ್ರಹ್ಮಕ್ಕೆ ಉಂಟಾಗಬೇಕಾಗುತ್ತದೆ. ಆದ್ದರಿಂದ ಜಗತ್ತು ಸತ್ಯವೆಂಬ ಜ್ಞಾನವೂ ಸಹ ಬ್ರಾಹ್ಮಜ್ಞಾನವೇ ಆಗಿದೆ.

ವಿಷಯಭಿನ್ನವಾದರೂ ಆನಂದಭಿನ್ನವಲ್ಲ. ವಿಷಯಗಳಲ್ಲಿ ವಾಸ್ತವಿಕವಾಗಿ ದುಃಖವಿಲ್ಲ. ದುರ್ವಿಷಯಗಳಲ್ಲಿ ದುಃಖವಿದೆ. ಸುಖಸ್ವರೂಪವಾದ್ದರಿಂದ ವಿಷಯಂ ಪ್ರಸಾದವಾಗಬಲ್ಲುದು; ಪ್ರಸಾದಲಿಂಗವಾಗಬಲ್ಲುದು. ಇದನರಿತು ಶರಣನಾಗಬೇಕು. ಇದನಳವಡಿಸಿಕೊಂಡು ಸ್ವಪ್ರಕಾಶನಾಗಬೇಕು.

“ ಬ್ರಹ್ಮಜ್ಞಾನೇ ಸಮುತ್ಪನ್ನೇ ವಿಶ್ವೋಪಾಧಿವಿವರ್ಜಿತೇ ।
ಸರ್ವಂ ಸಂವಿನ್ಮಯಂ ಭಾತಿ ತದನ್ಯನ್ನೈವ ದೃಶ್ಯತೇ ॥ ೬ ॥
ತಸ್ಮಾದದ್ವೈತ ವಿಜ್ಞಾನ ಮಪವರ್ಗಸ್ಯ ಕಾರಣಂ ।
ಭಾವಯನ್ ಸತತಂ ಯೋಗೀ ಸಂಸಾರೇಣ ನ ಲಿಪ್ಯತೇ ॥ ೭ ॥”

ವಿಶ್ವವು ಜಡ ಮಿಥ್ಯೆ ಎಂಬ ಉಪಾಧಿಯನ್ನು ಇಟ್ಟುಕೊಳ್ಳದೆ (ಇಲ್ಲಿ ಮಿಥ್ಯಾಜ್ಞಾನವೇ ಉಪಾಧಿ) ಎಲ್ಲವೂ ಸತ್ಯವೆಂಬ ಬ್ರಹ್ಮಜ್ಞಾನವು ಉಂಟಾದರೆ ಆಗ ಎಲ್ಲವೂ ಸಂವಿನ್ಮಯವಾಗಿ ಬೆಳಗುತ್ತದೆ. ಆ ಪ್ರಕಾಶಕ್ಕೆ ಹೊರಗಾದುದು ಬೇರೊಂದಿರದು: ಇಲ್ಲ.

ಜಗತ್ತು ಪರಶಿವಬ್ರಹ್ಮನಿಗೆ ಕೇವಲ ಭಿನ್ನವಲ್ಲ. ಭಿನ್ನವೆಂದರೆ ಅದೇ ಭೇದ ಭ್ರಾಂತಿ. ಅದಿದ್ದರೆ ಪೂರ್ಣಜ್ಞಾನವಾಗದು. ಪೂರ್ಣ ಸತ್ತತ್ವಕ್ಕೆ ಕೊರತೆಯುಂಟಾಗುತ್ತದೆ. ಶಿವಶಕ್ತ್ಯಾತ್ಮಕವಾದ ಜಗತ್ತು ಮಿಥ್ಯೆಯಲ್ಲ. ಶಿವಶಕ್ತಿಗೆ ಹೊರತಾದುದು ಗೋಚರಿಸದು. 'ಸರ್ವಂ ಶಿವಮಯಂ ಜಗತ್' ಎಂಬ ಮಾತು ಮನನೀಯ.

ವಿಶ್ವಬೇರೆ, ಬ್ರಹ್ಮ ಬೇರೆ; ವಿಶ್ವ ಜಡ, ಬ್ರಹ್ಮ ಅಜಡ; ಎಂಬೀ ಭೇದವಾದಕ್ಕೆ ಬಿದ್ದರೆ ಅದ್ವೈತಜ್ಞಾನ ಅಳವಡದು. ಭೇದ ಬಂಧನ ಬಿಡದು. ಭೇದ ಜ್ಞಾನ ಬಂಧನಕ್ಕೆ ಕಾರಣ. ಅಭೇದ ಜ್ಞಾನ ಅಪವರ್ಗಕ್ಕೆ ಕಾರಣ. ಇದನ್ನು ತಿಳಿದ ಶರಣ ಅಥವಾ ಶಿವಯೋಗಿ ಜಡ-ಮಿಥ್ಯಗಳ, ಜನ್ಮ ಮೃತ್ಯುಗಳ ಸಂಸಾರ ಲೇಪನಕ್ಕೆ ಒಳಗಾಗನು.

" ಎತ್ತ ನೋಡಿದಡತ್ತತ್ತ ನೀನೇ ದೇವ !
ಸಕಲ ವಿಸ್ತಾರದ ರೂಹು ನೀನೇ ದೇವ !...
ಸಕಲ ನಿಷ್ಕಲವ ಕೂಡಿಕೊಂಡಿಪ್ಪೆಯಾಗಿ
ಸಕಲ ನೀನೇ ದೇವಾ; ನಿಷ್ಕಲ ನೀನೇ ದೇವಾ !
'ಅಣೋರಣೀಯಾನ್ ಮಹತೋಮಹೀಯಾನ್'
'ಏಕೋ ಹಿ ರುದ್ರೋ ನದ್ವಿತೀಯಾಯ ತಸ್ಥು:'
'ಚಕಿತಮಭಿಧತ್ತೇ ಶ್ರುತಿರಪಿ' ಇಂತೆಂದುದಾಗಿ
ಜಗದ ಕರ್ತ ಕೂಡಲಸಂಗಮದೇವನೊಬ್ಬನೇ ಕಾಣಿರಣ್ಣಾ !"

ಎಂಬೀ ಮಾತುಗಳು ಪೂರ್ಣಜ್ಞಾನಪ್ರಕಾಶಕ್ಕೆ ಪ್ರಮಾಣಗಳಾಗಿವೆ. ಶರಣನ ಜ್ಞಾನ ಕೇವಲ ದ್ವೈತವಲ್ಲ; ಕೇವಲಾದ್ವೈತವಲ್ಲ. ಅದು ಉಭಯಾತ್ಮಕ.

"ತಾನೆ ಬ್ರಹ್ಮವೆಂದು ಕರ್ತೃಹೀನವಾದ ವಾಗದ್ವೈತಿಯಲ್ಲ. ಅನಾದಿ ಭಿನ್ನವಾಗಿ ದ್ವೈತಿಯಲ್ಲ ನೋಡಾ ಶರಣನು. ಅದೇನು ಕಾರಣವೆಂದರೆ, ಮಹಾಘನ ಪರಶಿವ ತತ್ತ್ವದಲ್ಲಿ ಚಿತ್ತು ಉದಯಿಸಿತ್ತು. ಆ ಚಿಚ್ಛಕ್ತಿಯಿಂದ ಶಿವಶರಣನುದಯಿಸಿದನು. ಅಂತು ಉದಯಿಸಿದ ಚಿದ್ರೂಪನೇ ಶರಣನ

ಸದ್ರೂಪವೇ ಲಿಂಗವು. ಈ ಶರಣ-ಲಿಂಗವೆರಡರ ಸಂಬಂಧವ ದ್ವೈತವೆನಲಿಲ್ಲ; ಅದ್ವೈತವೆನಲಿಲ್ಲ ಕಾಣಾ ಮಹಾಲಿಂಗ ಗುರುಶಿವ ಸಿದ್ಧೇಶ್ವರ ಪ್ರಭುವೇ !"

ಅಂತೆಯೇ ಶ್ರೀ ಜಗದ್ಗುರು ರೇಣುಕ ಶಿವಾಚಾರ್ಯರು ಹೀಗೆ ನಿರೂಪಿಸಿ ನಿಜಜ್ಞಾನ ಪ್ರಕಾಶನ ಮಾಡಿದ್ದಾರೆ :

" ನಿತ್ಯೇ ನಿರ್ಮಲಯೋಗಿನಿ ಪರೇ ನಿರ್ವಾಸನೇ ನಿಷ್ಕಳೇ
ಸರ್ವಾತೀತಪದೇ ಚರಾಚರಮಯೇ ಸತ್ತಾತ್ಮನಿ ಜ್ಯೋತಿಷಿ ।
ಸಂವಿದ್ವ್ಯೋಮ್ನಿ ಶಿವೇ ವಿಲೀನ ಹೃದಯಸ್ತದ್ಭೇದ ವೈಮುಖ್ಯತ
ಸಾಕ್ಷಾತ್ಸರ್ವಗತೋ ವಿಭಾತಿ ವಿಗಳದ್ವಿಶ್ವಃ ಸ್ವಯಂ
ಸಂಯಮೀ ॥ ೮ ॥"

ನಿರ್ಮಲವಾದ ಯೋಗಿಯ ಹೃದಯದಲ್ಲಿ ನಿತ್ಯಬೆಳಗುತ್ತಿರುವವನು; ಪರಸ್ವರೂಪನು, ವಾಸನಾರಹಿತನು, ನಿಷ್ಕಳನು, ಎಲ್ಲವನ್ನೂ ಬಳಸಿ ಆಚೆ ಇರುವವನು, ಜಡ ಜಂಗಮಾತ್ಮಕನು, ಸತ್ತಾತ್ಮನು, ಜ್ಯೋತಿರ್ಮಯನು, ಸಂವಿದಾಕಾಶಸ್ವರೂಪನು ಶಿವನು. ಅಂತಹ ಆ ಪರಶಿವನಲ್ಲಿ ವಿಲೀಸ ಹೃದಯವುಳ್ಳವನೂ ಸಂಯಮಿಯೂ ಸ್ವತಂತ್ರನೂ ಆದ ಶರಣನು ವಿಶ್ವಕ್ಕೂ ವಿಶ್ವೇಶ್ವರನಿಗೂ ಯಾವ ಭೇದವನ್ನು ಎಣಿಸದೆ ಸಾಕ್ಷಾತ್ತಾಗಿ ಸರ್ವದರಲ್ಲಿ ಶಿವವನ್ನೇ ಕಾಣುವನಾಗಿ ವಿಶೇಷವಾಗಿ ಬೆಳಗುತ್ತಾನೆ. ಅಂದರೆ ಎಲ್ಲವೂ ಶಿವಾದ್ವೈತವಾದ ಕಾರಣ ಶಿವನಿಗೆ ಬೇರೊಂದು ವಸ್ತುವಿಲ್ಲೆಂಬ ಮಹಾಜ್ಞಾನ ಪ್ರಕಾಶದಿಂದ ಬೆಳಗುತ್ತಿರುತ್ತಾನೆ. ಅಂತಹ ಆ ಮಹಾಜ್ಞಾನವನ್ನು ಪ್ರಕಾಶನ ಪಡಿಸುತ್ತಾನೆ. ಮಹಾಕಾಶದಲ್ಲಿ ಮಹಾಜ್ಞಾನ ಪ್ರಕಾಶವೆಂಬ ಸೂರ್ಯಮಂಡಲ ಮುಳುಗದೆ ಬೆಳಗುತ್ತದೆ.

" ಅರಸಿದ ಬಳ್ಳಿ ಕಾಲ ಸುತ್ತಿತ್ತೆಂಬಂತೆ,
ಬಯಸುವ ಬಯಕೆ ಕೈ ಸಾರುವಂತೆ,
ಬಡವ ನಿಧಾನವನೆಡಹಿ ಕಂಡಂತೆ,
ನಾನದ ಸುತ್ತಲರಸುತ್ತ ಸರ್ವವ್ಯಾಪ್ತನ ಕಂಡೆನಯ್ಯ.
ಎನ್ನರಿವಿನ ಪರಿಯ ಕಂಡೆನಯ್ಯ.

ಎನ್ನೊಳ ಹೊರಗೆ ಸರ್ವಾಂಗ ಪರಮ ಪ್ರಕಾಶದೊಳು
ಬೆಳಗುವ ಜ್ಯೋತಿಯ ಕಂಡೆ ನಾನು—ನೋಡಾ !
ಕುರುಹಳಿದ ಕರಸ್ಥಲದ ನಿಬ್ಬೆರಗಿನ ನೋಟ
ಎನ್ನ ಪರಮಗುರುವ ಕಂಡು ಬದುಕಿದೆನು ಕಾಣಾ ಗುಹೇಶ್ವರಾ;”

ಬ್ರಹ್ಮಾಂಡ-ಪಿಂಡಾಂಡಗಳೆರಡರಲ್ಲಿಯೂ ಬೆಳಗುವ ಜ್ಞಾನ ಪ್ರಕಾಶವೇ ಪರಂಜ್ಯೋತಿ ಪ್ರಕಾಶದೆಂಬುದು ಈ ವಚನದಲ್ಲಿ ವಿಸ್ಫುಟವಾಗಿ ನಿರೂಪಿತವಾಗಿದೆ. ಬ್ರಹ್ಮಾಂಡದಲ್ಲಿದ್ದುದೆ ತನ್ನಲ್ಲಿದೆಯೆಂದು, ತನ್ನಲ್ಲಿದ್ದುದೆ ಬ್ರಹ್ಮಾಂಡದಲ್ಲಿದೆಯೆಂದು ಅದೇ ಪರಮಗುರುವಾಗಿ ಕರಸ್ಥಳದ ಕುರುಹಾಗಿ ಮನಸ್ಥಲದ ಅರುಹಾಗಿ ನಿಂತು ಬೆಳಗುತ್ತಿದೆಯೆಂದು ಅದನ್ನು ಅಳವಡಿಸಿಕೊಂಡು ಬದುಕಿದೆನೆಂದು ಪ್ರಭುದೇವರು ಪೂರ್ಣಪ್ರಜ್ಞೆಯ ಪ್ರಭೆಯನ್ನು ಸ್ವಾನುಭವದಿಂದ ನಿರೂಪಿಸಿದ್ದಾರೆ. ಅದನ್ನೇ ಮಹಾದೇವಿಯಕ್ಕಗಳು ಹೀಗೆ ಹೇಳಿದ್ದಾರೆ:

“ ಹೊಳೆವ ಕೆಂಜೆಡೆಗಳು: ಮಣಿಮಕುಟ,
ಒಪ್ಪುವ ಸುಲಿಪಲ್ಲ- ನಗೆಮೊಗ, ಕಂಗಳ ಕಾಂತಿಯಿಂ
ಈರೇಳು ಭುವನಮಂ ಬೆಳಗುವ ದಿವ್ಯ ಸ್ವರೂಪನ ಕಂಡೆ.
ನಾನು ಕಂಡೆನ್ನ ಕಂಗಳ ಬರಹಿಂಗಿತ್ತಿಂದು;
ಕಂಡ ಕಂಡರೆಲ್ಲರ ಹೆಂಡಿರಾಗಿ ಆಳುವ ಗರುವನ ಕಂಡೆ.
ನಾನು ಜಗದಾದಿ ಶಕ್ತಿಯೊಳು ಬೆರಸಿ,
ಪರಮಗುರು ಚನ್ನಮಲ್ಲಿಕಾರ್ಜುನನ ನಿಲವ
ಕಂಡು ಬದುಕಿದೆನು ”

ಶರಣಸತಿಗೆ ಆ ಪರಮಜ್ಞಾನ ಪ್ರಕಾಶವೇ ಪತಿ, ಆ ಮಹಾಜ್ಞಾನ ಪ್ರಕಾಶ ಸಾಕ್ಷಾತ್ಕಾರವೇ ಸಮರಸಾನಂದಗತಿ; ಆ ಮಹಾಜ್ಞಾನ ಪ್ರಕಾಶವನ್ನೆ ಮೂರ್ತಿಸ್ವರೂಪವಾಗಿ ಬಣ್ಣಿಸಿದ ಬೆಡಗು ಈ ವಚನದಲ್ಲಿದೆ. ಈ ಶಬ್ದ ಜ್ಯೋತಿಯನ್ನು ಕಂಡು ಬದುಕುವ ಭಾಗ್ಯ ನಮ್ಮದಾಗಿದೆ.

ಶರಣಸ್ಥಲದಲ್ಲಿ ಆ ಬೆಳಗಿನ ಎಚ್ಚರವಿದೆ. ಅಂತೆಯೇ ಬಯಲ ಬೆಳಗನ್ನು ಕಂಡ ಉಂಡ ಸಿಹಿನೆನಹು ಈ ಶಬ್ದ ಬ್ರಹ್ಮದಲ್ಲಿ ಬರಲು ಸಾಧ್ಯವಾಗಿದೆ. ಅದೇ ಮುಂದಿನ ಐಕ್ಯಸ್ಥಲದಲ್ಲಿ ಆ ಬಚ್ಚಬರಿಯ ಬಯಲ ಬೆಳಗಿನ ಎಚ್ಚರವೂ ಇದರು,

ಅಂದರೆ ಜ್ಞಾನ ಜ್ಞೇಯಗಳೆರಡುಒಂದಾಗುವುದು ಶರಣಸ್ಥಲ; ಜ್ಞಾನ ಜ್ಞಾತ ಜ್ಞೇಯ ಮೂರೂ ಒಂದಾಗುವುದು ಐಕ್ಯಸ್ಥಲ. ಆಗ ಶಬ್ದ ಮುಗ್ಧತೆ ಸಮನಿಸುತ್ತದೆ.

ಈಗ ಬಯಲು ತಾನಾಗುವುದು ಶರಣನ ಕೆಲಸ; ಬಯಲೊಳಗೆ ಬಯಲಾಗುವುದು ಐಕ್ಯನ ಮಣಿಹ.

ಬಯಲು ಬಣ್ಣವಾಗಿರುತ್ತದೆ. ನಿರವಯಲು ಬಣ್ಣಗೆಟ್ಟಿರುತ್ತದೆ. ಇಲ್ಲಿ ಬಣ್ಣವೆಂದರೆ ಸ್ಥೂಲರೂಪವಲ್ಲ. ತಿಳಿಗಣ್ಣಿಗೆ ತೋರುವ ಬಣ್ಣ.

“ ಅರಿದೆನೆಂಬುದು ತಾ ಬಯಲು,
ಅರಿಯೆನೆಂಬುದು ತಾ ಬಯಲು;
ಮರೆದೆನೆಂಬುದು ತಾ ಬಯಲು,
ಮರೆಯೆನೆಂಬುದು ತಾ ಬಯಲು;
ಅರಿವಿನ ಕುರುಹಿನ ಮರವಿನೊಳಗೆ
ಗುಹೇಶ್ವರನೆಂಬುದು ತಾ ಬಯಲು.”

ಶರಣನ ಬಯಲು ಬಣ್ಣದ ಬಿನ್ನಾಣವಿದು; ಬೆಡಗವಿದು ಆ ಮಹಾಜ್ಞಾನ ಪ್ರಕಾಶ ಆತನ ಅರುಹು ಕುರುಹು ಮರಹುಗಳಲ್ಲಿ ತೆರಹಿಲ್ಲದೆ ತುಂಬಿ ತೊಳಗುತ್ತಿರುತ್ತದೆ.

ಶರಣನ ಬಯಲ ಬಿನ್ನಾಣದಿಂದ ಹೊಸದನಿ, ಹೊಸರಸ, ಹೊಸಕಳೆ ಬಾಳಿಗೆ ಬಂದೊದಗುತ್ತದೆ. ಹೊಸ ಪ್ರಜ್ಞೆಯ ಹೊಸ ಪ್ರತಿಭೆ ಹೊಮ್ಮಿ ಹೊಂಪುಳಿಗೊಳ್ಳುತ್ತದೆ. ಹೊಸ ಅನುಭವದ ಹೊಸ ಸಂಸ್ಕಾರದ ಹೃದಯ ರೂಪಿತವಾಗುತ್ತದೆ.

ಆ ಬಯಲ ಬಿನ್ನಾಣವೇ ಮಹಜ್ಞಾನ ಪ್ರಕಾಶ. ಅದರಲ್ಲಿ ಆ ಸತ್ಯಶಿವ ಸೌಂದರ್ಯ ಕಾಣುತ್ತದೆ. ಆ ಹೆಬ್ಬೆಳಗಿನಲ್ಲಿ ಪರಮ ಸತ್ಯವನ್ನು ಕಂಡ ಶರಣ ನಿರಹಂಕಾರಿಯಾಗಿ ನಿಜಜ್ಞಾನಿಯಾಗಿ ನಿಜಾನುಭಾವಿಯಾಗಿ ಬಾಳಿ ಬೆಳಗುತ್ತಾನೆ. ಆತನ [illegible] ಬೆಳಗುತ್ತದೆ. ಅದೇ ನಿಜ ಶರಣರಾಗದವರ ದುಸ್ಥಿತಿಯನ್ನು ಪ್ರಭುದೇವರು ಹೀಗೆ ಹೇಳಿದ್ದಾರೆ;

" ನಾನೆಂಬಹಂಕಾರ ತಲೆದೋರಿದಲ್ಲಿ
ಅಟಮಟ ಕುಟಿಲ ಕುಹಕವೆಂಬ ಬಿರುಗಾಳಿ ಹುಟ್ಟಿತ್ತು,
ಆ ಬಿರುಗಾಳಿ ಹುಟ್ಟಲೊಡನೆ ಜ್ಞಾನಜ್ಯೋತಿ ಕೆಟ್ಟಿತ್ತು.
ಜ್ಞಾನ ಜ್ಯೋತಿ ಕೆಡಲೊಡನೆ ಬಲ್ಲೆ ಬಲ್ಲಿದರೆಂಬ
ಅರುಹಿರಿಯರೆಲ್ಲರೂ ತಾಮಸಕ್ಕೊಳಗಾಗಿ
ಸೀಮೆದಪ್ಪಿ ಕೆಟ್ಟರು ಕಾಣಾ ಗುಹೇಶ್ವರಾ !"

ಪ್ರಸಾದ ಲಿಂಗ ಸಾಹಿತ್ಯ

" ಆಕಾಶದ ಪೂರ್ವಾಶ್ರಯವನಳಿದ ಶರಣಂಗೆ
ಪ್ರಸಾದಲಿಂಗ ಸಾಹಿತ್ಯ."

ಆತ್ಮಜ್ಞಾನಿಯಾದ ಆದಯ್ಯ ಶಿವಶರಣನ ವಾಣಿಯಿದು. ದಿಟ; ಪ್ರಸಾದಲಿಂಗಸಾಹಿತ್ಯಸಂಪತ್ತಿ ಶರಣನಲ್ಲದವನಿಗೆ ಸಾಧ್ಯವಾಗದು. ಆಕಾಶದ ಪೂರ್ವಾಶ್ರಯವನ್ನು ನಿವಾರಿಸದೆ ಸರಣನಾಗಲು ಸಾಧ್ಯವಾಗದು. ಆಕಾಶ ಪೂರ್ವಾಶ್ರಯ ನಿರಸನ ಸುಲಭ ಸಾಧ್ಯವಲ್ಲ. ಪ್ರಸಾದಲಿಂಗಸಾಹಿತ್ಯವನ್ನು ಸಂಪಾದಿಸಿದರೆ ಅದು ಸಾಧ್ಯ.

ಶರಣನಿಗೆ ಪ್ರಸಾದಲಿಂಗವೆ ಸಾಹಿತ್ಯ. ಪ್ರಸಾದಲಿಂಗಕ್ಕೆ ಶರಣನೆ ಆಶ್ರಯಾಂಗ; ಪರಾಶಕ್ತಿ, ಶಾಂತ್ಯತೀತ ಕಳೆ. ಶ್ರೋತ್ರಮುಖ, ಸುಶಬ್ದ ಪ್ರಸಾದ; ಸುಶಬ್ದವೇ ತೃಪ್ತಿ. ಪೂರ್ಣತ್ವವೆ ನಿಲವು. ಯ-ಕಾರ ಪ್ರಣವ. ಶಿವ ಸಾದಾಖ್ಯ. ಅಜಪವೇದ. ಅನಾದಿವಸ್ತು ಸುಜ್ಞ. ಮೇಘನಾದ. ದರ್ಪಣಾಕೃತಿ. ವಿಶುದ್ಧಿ ನೆಲೆ. ಕೇಳಿ ಸುಖಿಸುವುದೆ ವಿಷಯ. ಈಳನವೆ ಉಪಚಾರ. ಪ್ರಸಾದಲಿಂಗವು ಹದಿನಾರು ದಳದ ಸುಜ್ಞಾನ ಹಸ್ತದಲ್ಲಿ ಮಂಡಿಸಿರುತ್ತದೆ.

“ ಕಂಠಸ್ಥಾನದಲ್ಲಿ ವಿಶುದ್ಧಿ ಚಕ್ರ, ಆಕಾಶ ಮಹಾಭೂತ. ಕೃಷ್ಣವರ್ಣ. ವರ್ತುಳಾಕಾರ, ಷೋಡಶದಳ ಪದ್ಮ, ಶ್ವೇತವರ್ಣ, ಆ ದಳಗಳಲ್ಲಿ ಅಕಾರಾದಿ ಹದಿನಾರು ಸ್ವರಾಕ್ಷರ, ಆ ಕರ್ಣಿಕಾ ಮಧ್ಯದಲ್ಲಿ ಯ-ಕಾರ ಬೀಜಾಕ್ಷರ, ಆ ಯ-ಕಾರ ಸ್ಫಟಿಕವರ್ಣ. ಅದು ಮೇಘಧ್ವನಿ, ಅಲ್ಲಿ ಪರಿಪೂರ್ಣರೂಪ ಪ್ರಸಾದಲಿಂಗ ಅದಕ್ಕೆ ಸ್ಫಟಿಕವರ್ಣ, ಈಶಾನ ಮುಖ, ಶಾಂತ್ಯತೀತಕಲಾ ಪರಿಯಾಯ ನಾಮವುಳ್ಳ ಪರಾಶಕ್ತಿ, ಆ ಶಕ್ತಿ ಕಪೋತವರ್ಣ, ಶಿವಸಾದಾಖ್ಯ, ಪರಸಂಜ್ಞೆ ಊರ್ಧ್ವದಿಕ್ಕು, ಅಲ್ಲಿ ಗಾಯತ್ರೀ ವೇದವನುಚ್ಚರಿಸುತ್ತ ಸುಜ್ಞಾನ ಹಸ್ತದಿಂದ ಸುಶಬ್ದ ದ್ರವ್ಯವನ್ನು ಶ್ರೋತ್ರಮುಖಕ್ಕೆ ಆನಂದಭಕ್ತಿಯಿಂದರ್ಪಿಸುವಳಾ ಶಕ್ತಿ! ಸದಾಶಿವ ಪೂಜಾರಿ, ಶಕ್ತಿ ಶಾಕಿನಿ, ಮಹಾದೇವನಧಿದೇವತೆ, ಇಂತಿವೆಲ್ಲಕ್ಕೂ ಮಾತೃ ಸ್ಥಾನವಾಗಿಹುದು ಯಂ-ಕಾರವೆಂಬ ಬೀಜಾಕ್ಷರ. ಆ ಪ್ರಣವದ ದರ್ಪಣಾಕೃತಿಯಲ್ಲಿಹುದು ಓಂ ಓಂ ಓಂ ಯಂ ಯಾ ಯಂ ಎಂಬ ಬ್ರಹ್ಮನಾದ ಮಂತ್ರಮೂರ್ತಿ ಪ್ರಣವಕ್ಕೆ ನಮಸ್ಕಾರವು; ಇದು ಶರಣಸ್ಥಲ.”

ಈ ಸಾಹಿತ್ಯ ಸಹಿತವಾದ ಪ್ರಸಾದಲಿಂಗಾರ್ಚನೆಯಿಂತಿದೆ;

“ ವಿಶುದ್ಧಿ ಚಕ್ರವೆಂಬ ರಂಗಮಂಟಪದಲ್ಲಿ ಮೂರ್ತಿಗೊಂಡಿರ್ಪ ಪ್ರಸಾವಲಿಂಗಕ್ಕೆ ಕ್ಷಮೆಯೆಂಬ ಜಲದಿಂದ ಮಜ್ಜನಕ್ಕೆರೆದು, ಗಗನ ನಿವೃತ್ತಿಯಾದ ಗಂಧವ ಧರಿಸಿ, ಜ್ಞಾನ-ಸುಜ್ಞಾನವಾದ ಅಕ್ಷತೆಯನಿಟ್ಟು, ಅಲ್ಲಿಹ ಷೋಡಶ ದಳಂಗಳೆಂಬ ಪುಷ್ಪಮಾಲೆಯ ಧರಿಸಿ, ಆ ಕಮಲ ಸದ್ವಾಸನೆಯ ದೂವಪ ಬೀಸಿ, ಅಲ್ಲಿಹ ಕೃಷ್ಣವರ್ಣವೆಂಬ ಕರ್ಪೂರ ಜ್ಯೋತಿಯಂ ಬೆಳಗಿ, ಅಲ್ಲಿಹ ತುರೀಯಾತೀತವೆಂಬ ನವೀನ ವಸ್ತ್ರವ ಧರಿಸಿ, ನಿರ್ಮದವೆಂಬ ಆಭರಣವನಿಟ್ಟು, ಸುಶಬ್ದವೆಂಬ ನೈವೇದ್ಯವನರ್ಪಿಸಿ, ಆನಂದವೆಂಬ ತಾಂಬೂಲನಿತ್ತು, ಇಂತು ಪ್ರಸಾದಲಿಂಗಾಷ್ಟವಿಧಾರ್ಚನೆಯಂ ಮಾಡಿಕೊಂಡು ಕೋಟಿಸೂರ್ಯಪ್ರಭಾಮಯ ಪ್ರಸಾದಲಿಂಗವನ್ನು ಕಂಗಳು ತುಂಬಿ ನೋಡಿ, ಮನ ಸಂತೋಷಗೊಂಡು ಆ ಪ್ರಸಾದಲಿಂಗಪೂಜೆಯಂ ನಿರ್ಮಾಲ್ಯವ ಮಾಡದೆ ಓಂ ಯಾಂ ಯಾಂ ಯೊವ ಎಂಬ ಯಂ-ಕಾರ ಷಡ್ವಿಧದಿಂದ ಮಂತ್ರವ ಸ್ಮರಿಸಿ ಆ ಪ್ರಸಾದಲಿಂಗವ ನೊಡಗೂಡುವುದು.”

ಶಬ್ದಾವಚ್ಛಿನ್ನ ಚೈತನ್ಯ ಪ್ರಸಾದಲಿಂಗ; ಅಂದರೆ ಶ್ರೋತ್ರ ದೊಳಗಿರುವ ಶಾಬ್ದ ಶಕ್ತಿಯೇ ಪ್ರಸಾದಲಿಂಗ, ಶಬ್ದವೇ ಪರಾಶಕ್ತಿ ಶ್ರೋತ್ರದೊಡನೆ ಶಬ್ದವ ಗ್ರಹಿಸುವ ಕಾರಣ ಶ್ರೋತ್ರಮುಖ, ನಾದಪ್ರಸಾದವೆ ಲಿಂಗಚೈತನ್ಯವಾಗಿ ಪ್ರಸಾದಲಿಂಗವೆನಿಸುತ್ತದೆ. "ನಾದ ಸುನಾದ ಮಹಾನಾದವೇ ಪ್ರಸಾದವಾದ ಕಾರಣ ಪ್ರಸಾದವಪ್ಪ ಶಬ್ದ ಶ್ರೋತ್ರಮುಖಕ್ಕೆ ಸಲುವ ದೆಸೆಯಿಂ ಶ್ರೊತ್ರಕ್ಕೆ ಪ್ರಸಾದಲಿಂಗವಾಗಬೇಕಾಯಿತ್ತು." ಎಂದು ಆದಯ್ಯ ಶರಣನು ಹೇಳಿದ್ದಾನೆ. ಪ್ರಸಾದಲಿಂಗ ಪರಮಜ್ಞಾನಗಮ್ಯ. ನಾದಮಯಿ. ಅದರಿಂದಾಗಿ ಶಬ್ದಾಶಬ್ದ ರೂಪದಲ್ಲಿ ಸುಳಿಯುಬಲ್ಲುದು; ಸಂತಸವೀಯುಬಲ್ಲುದು. ಪರಾಶಕ್ತಿ ಆನಂದ್ದ ಭಕ್ತಿ ಶಾಂತ್ಯತೀತ ಕಳೆಗಳಿಂದ ಕೂಡಿ ಸುಜ್ಞಾನದಲ್ಲಿ ಸುಳಿದು ಚಿದಾನಂದವನ್ನುಂಟುಮಾಡಬಲ್ಲುದು; ಮಾಡುತ್ತದೆ, ಮಹಾಕಾಶಾಂಗವಾಗಿರುತ್ತದೆ. ಸದಾಶಿವನು ಪ್ರಸಾದಲಿಂಗಾರ್ಚಕನಾಗಿರುತ್ತಾನೆ

ಪೂಜಾರಿ:—"ಅನಾದಿ ಸದಾಶಿವನು ಪೂಜೆಗೆ ಅಧಿಕಾರಿಯಾಗಿ ಇರುಹೆ ಮೊದಲು ಆನೆ ಕಡೆಯಾದ ಎಂಬತ್ತು ನಾಲ್ಕು ಲಕ್ಷ ಜೀವರಾಶಿಗಳೊಳಗೆ ಸಂಸಾರಕ್ಕೆ ಹೇವರಿಸಿ, ಶಿವಸ್ಮರಣೆಯ ಮಾಡುವಂತಹ ಕಥಾ ಪ್ರಸಂಗವ ಪಾಲಿಸುವಂತಹ ಅನುಗ್ರಹ ಕೃತ್ಯಕ್ಕೆ ಕರ್ತನೆಂಬುದೀಗ ಸದಾಶಿವನೆಂಬ ಶಬ್ದಕ್ಕರ್ಥ."

ಆಕಾಶಾಂಗ:—"ಭೂಮಿ ಜಲ ಅಗ್ನಿ ಮರುದಂಗಗಳಿಂದ ಮರದ ಹೊಗೆ ದೂಮಂಗಳನೊಳಕೊಂಡು ಶಶಿ ರವಿ ನಕ್ಷತ್ರ ಗುಡುಗು ಮಿಂಚು ಮೊದಲಾದವಯುವಂಗಳಂ ತನ್ನೊಳಗಿಂಬಿಟ್ಟುಕೊಂಡು ಪರೋಪಕಾರ ಶರೀರಿಯಾಗಿ ತನ್ನ ಜನ್ಮಸ್ಥಾನದಲ್ಲಿ ಎಚ್ಚರಗೊಂಡಿರುವಂತೆಹದ್ದೇ ಆಕಾಶಾಂಗದ ಶಬ್ದಕ್ಕರ್ಥ."

ಆನಂದತನು:—"ಅಕಾಶ ತನ್ನ ಅಯ್ದು ತತ್ತ್ವಗಳಿಂದ ಅರವತ್ತು ಪಾಲು ದುಃಖ, ನೂರು ಪಾಲು ಸುಖಂಗಳಿಂದ ಶೋಭಿಸುವಂತಿಹದೆಂಬುದೀಗ ಆನಂದ ತನುವಿನ ವಿವರವು."

ಸುಜ್ಞಾನಹಸ್ತ :—"ಅಂಗವಿಷಯಂಗಳ ಇಷ್ಟಲಿಂಗಕ್ಕೆ ಭೃತ್ಯರೆನಿಸಿ, ಪ್ರಾಣಾದಿವಾಯುಂಗಳ ಭಾವಲಿಂಗಕ್ಕೆ ದಾಸರೆನಿಸಿ ಸರ್ವಾವಸ್ಥೆಗಳನ್ನೆಲ್ಲ ಮಹಾಲಿಂಗದ ಕಿರಣಗಳಾಗಿ ಭದ್ರಗಜದಂತೆ ವೀರಶೈವ ಮತದಲ್ಲಿ ವ್ಯವಹರಿಸಿ, ಬಳಲಿಸುವ ಪರವಾದಿಗಳಿಗೆ ಅಂಕುಶನಾಗಿರುವಂತಹದೆ ಸುಜ್ಞಾನ ಹಸ್ತ ಶಬ್ದಕ್ಕರ್ಥ."

ಕಪೋತವರ್ಣ:—"ಪ್ರವೃತ್ತಿ ಮಾರ್ಗದ ಶೈವ ಭಿನ್ನಯೋಗಿಯ ವಿಶುದ್ಧಿಚಕ್ರ ಪರಮಾನ್ನ ಪಂಚಕಜ್ಜಾಯ ಫಲಾರಂಗಳಿಗೆ ಮುಖವಾಗಿ ಅರಳಿರ್ಪುದಂ, ನಿವೃತ್ತಿ ನಿಜವೀರಶೈವ ಸಹಜ ಸದ್ಭಕ್ತನ ವಿಶುದ್ಧಿಚಕ್ರ ಶ್ರೀಗುರುಲಿಂಗ ಜಂಗಮದ ಪರಿಪೂರ್ಣ ಚಿದ್ಘನಪ್ರಸಾದದ ಮೇಲೆ ನೈಷ್ಠಿಕಾ ಭಕ್ತಿಗೆ ಮುಖವಾಗಿ ಅರಳಿರ್ಪುದು. ಆ ಚಕ್ರಂಗಳ ರೂಪು ಹಿರೇ ಮುತ್ತುಕದ ಪುಷ್ಪದೋಪಾದಿಯಲ್ಲಿ ಪ್ರಕಾಶಿಸುತ್ತಿರ್ಪುದೀಗ ಕಪೋತ ವರ್ಣ ಶಬ್ದಕ್ಕರ್ಥ."

ಅಧಿದೇವತೆ :—"ಶಿವಶರಣಗಣಂಗಳ ಮನೆಯ ಭೃತ್ಯರಾಗಿ ಅವರ ಪರಿಪೂರ್ಣ ಆನಂದ ಕೃತ್ಯಗಳಿಗೆ ಕಂಕಾಳಿ ಎಂಬ ಶಕ್ತಿಯೊಡಗೂಡಿ ಆ ಸೇವೆಗೆ ಅಧಿಕಾರಿಗಳಾಗಿರ್ಪರೆಂಬುದೀಗ ಸದಾಶಿವನಧಿದೇದತೆ ಎಂಬ ಶಬ್ದಕ್ಕರ್ಥ.

ಶಿವಸಾವಾಖ್ಯ:—"ಕುಲಛಲವೆಂಬ ನಾಮ ರೂಪು ಕ್ರಿಯೆಗಳಿಂದ ಮತಿಗೆಟ್ಟು, ಅಜ್ಞಾನ ಪಾಶಬದ್ಧತ್ವದಿಂದ ಶಿವಾಚಾರ ಮಾರ್ಗವನರಿಯದೆ ವೀರಶೈವದ ಗೊತ್ತು ತಿಳಿಯದೆ ಶಿವಭಕ್ತರೆಂದು ವಾಗ್ಜಾಲದಿಂದೆ ನುಡಿವ ಜಾಣರಿಗೆ ಅತ್ಯತಿಷ್ಠದ್ದಶಾಂಗುಲದಿಂದ ಸಾಧ್ಯವಾಗಿ ಶ್ರೀಗುರು ಕರುಣಿಸಿಕೊಟ್ಟ ಲಿಂಗಾಂಗ ವಿಚಾರವ ನಿಜ ಜಂಗಮದಿಂತೆ ಬೆಸಗೊಂಡು ಶರಣ ಸತಿ ಲಿಂಗಪತಿಭಾವದಿಂದ ನಡೆದಂತೆ ನುಡಿದು, ನುಡಿದಂತೆ ನಡೆದು ಲಿಂಗಾಚಾರದಲ್ಲಿ ಎವೆಹಳಚದೆ ಪರತತ್ತ್ವ ಜ್ಯೋತಿರ್ಮಯ ಜಂಗಮದ ಕರುಣಾಜಲ ಕೃಪಾಪ್ರಸಾದದಲ್ಲಿ ಮುಳುಗಿರುವುದು ಎಂಬುದೀಗ ಶಿವಸಾದಾಖ್ಯ ಶಬ್ದಕ್ಕರ್ಥ."

ಯಕಾರಪ್ರಣಾವ:—"ಶರಣಸ್ಥಲವೆಂಬ ವೃಕ್ಷಕ್ಕೆ ಚಿದ್ಭೂಮಿಯಾಗಿ ಆರುಸಾವಿರದ ಒಂಭೈನೂರು ಹನ್ನೆರಡು ಲಿಂಗಪ್ರಣಮ ಮಂತ್ರಂಗಳ ಗರ್ಭೀಕರಿಸಿಕೊಂಡು ನೂರು ಕೋಟಿ ಸೂರ್ಯಚಂದ್ರಾಗ್ನಿ ಪ್ರಕಾಶಕ್ಕೆ ಮಿಗಿಲಾಗಿ ಚಿದ್ಘನ ಇಷ್ಟ ಮಹಾಜ್ಯೋತಿರ್ಲಿಂಗದ ನಾಳವಲ್ಲಿ ನೆಲಸಿರ್ಪುದೆಂಬಂದೀಗ ಯ-ಕಾರ ಪ್ರಣಮ ಶಬ್ದಕ್ಕರ್ಥ."

ದರ್ಪಣಾಕೃತಿ;—"ಆ ದಸ್ತುವಿನ ವಿಶುದ್ಧಿ ಚಕ್ರ ಪದ್ಮವ ಬಳಿಸಿಕೊಂಡಿರ್ಪ ಷೋಡಶದಳ ಕಮಲಂಗಳು ಕಂಚಿನ ಕನ್ನಡಿಯಂತೆ ಬೆಟ್ಟದಾವರೆ ಕಮಲದೋಪಾದಿಯಲ್ಲಿರ್ಪವು. ಆ ಕಮಲದಲ್ಲಿರ್ಪ ಷೋಡಶಲಿಂಗಂಗಳೆಲ್ಲ ಪರಿಣಾಮೋದಕ ಸುಶಬ ಪ್ರಸಾದ ಮಂತ್ರವ ಭೋಗಿಸಿ, ಸಂಪಿಗೆ ಪುಷ್ಪದ ಹಾಗೆ

ಎಸಳುಂಗಳೆಲ್ಲ ಹಿರಿಯ ಮಲ್ಲಿಗೆಯ ಪುಷ್ಪದೋಪಾದಿಯಲ್ಲಿರ್ಪವೆಂಬುದೀಗ ದರ್ಪಣಾಕೃತಿ ಶಬ್ದಕ್ಕರ್ಥ."

ಊರ್ಧ್ವದಿಕ್ಕು :—"ಮೂವತ್ತೆಂಟು ಕಳೆಯುಳ್ಳ ಸೂರ್ಯ ಚಂದ್ರಾಗ್ನಿಗಳ ವಸತಿಗಳಿಗೆ ಮಂದಿರವಾಗಿ ನಕ್ಷತ್ರಂಗಳಿಗೆ ಜನನಸ್ಥಾನ ವಾಗಿರ್ಪುದೆಂಬುದೀಗ ಊರ್ಧ್ವದಿಕ್ಕು ಎಂಬ ಶಬ್ದಕ್ಕರ್ಥ,"

ಅಜಪವೇದ :—"ಸರಸ್ವತೀ ರಮಣನಾದ ಬ್ರಹ್ಮನ ಸದ್ಯೋಘೋಷ ದಿಕ್ಕಿನ ಮುಖದಲ್ಲಿ ಸದಾಶಿವಲಿಂಗದ ಸ್ಥಾಪ್ಯವ ಮಾಡಿ ಆ ಲಿಂಗಕ್ಕೆ ಆಜ್ಞೆಯ ಮಾಡಿದಂತಹದ್ದು ಪರಶಿವನು ಎಂಬುದೀಗ ಅಜಪವೇದ ಶಬ್ದಕ್ಕರ್ಥ."

ಶ್ರೋತ್ರಮುಖ :—"ಪ್ರವೃತ್ತಿ ಶೈವಾಚಾರ ಮಾರ್ಗದ ಯಕ್ಷ ರಕ್ಷ ಮೊದಲಾದ ಭಿನ್ನಯೋಗಿಗಳಲ್ಲಿ ಮಿಶ್ರಂಗಳೊಡನೆ ಶಬ್ದ ಮೊದಲಾದ ಭೌಕ್ತಿಕ ಜಡಪದಾರ್ಥಕ್ಕೆ ಯೋಗ್ಯಮಾಗಿರ್ಪುದು. ನಿವೃತ್ತಿ ವೀರಶೈವಾಚಾರ ಮಾರ್ಗದ ಈಳನ ಮೂರ್ತಿ ಪ್ರಸಾದಲಿಂಗವೆ ಪ್ರಾಣವಾಗಿ ಶರಣಸ್ಥಲಕ್ಕೆ ಕರ್ತೃ ಚನ್ನಬಸವ ಮೊದಲಾದ ಸಮಸ್ತ ಗಣಂಗಳಲ್ಲಿ ಲಿಂಗ ಮಂತ್ರ ಮಿಶ್ರಂಗಳೊಡನೆ ಸುಶಬ್ದ ಮೊದಲಾದ ಪವಿತ್ರ ಅಜಡ ಪ್ರಸಾದಕ್ಕೆ ಯೋಗ್ಯವಾಗಿ ಉಭಯ ವರ್ತನರೂಪದಿಂದಿರ್ಪುದೀಗ ಶ್ರೋತ್ರಮುಖವೆಂಬ ಶಬ್ದಕ್ಕರ್ಥ."

ಶಬ್ದಪದಾರ್ಥ:—"ಆಕಾಶದ ಬೆಮರು ಬಿಂದುಗಳಿಂದ ಜನಿತವಾಗಿ ಉಭಯ ರಂದ್ರರಿಗೆ ಸ್ವೈವೇದ್ಯವಾಗಿರುವಂತಹದು ಎಂಬುದೀಗ ಶಬ್ದ ಪದಾರ್ಥ ಶಬ್ದಕ್ಕರ್ಥ."

ಸುಶಬ್ದ ಪ್ರಸಾದ :—"ಚಿದಾಕಾಶದ ಸುಜ್ಞಾನದ ಬೆಮರು ಬಿಂದುಗಳಿಂದ ಜನಿತವಾಗಿ ಪ್ರಸಾದಲಿಂಗ ಮಂತ್ರದಿಂದ ಪಾವನವೆನಿಸಿ ಶರಣನ ವಿಶುದ್ಧಿಚಕ್ರದಲ್ಲಿ ನೆಲಸಿರ್ಪ ಷೋಡಶಕಲಾಲಿಂಗಗಳಿಗೆ ಅರ್ಪಿತವಾಗಿರುವಂತಹದೆಂಬುದೀಗ ಸುಶಬ್ದಪ್ರಸಾದ ಶಬ್ದಕ್ಕರ್ಥ."

ಮೇಘನಾದ :—"ಷಡ್ರುತುಗಳೊಳಗೆ ಶರದ್ರುತು ಕಾಲದಲ್ಲಿ ವಿಶೇಷರವದಿಂದ ಆಕಾಶದೊಳಗೆ ಗುಡುಗು ಸಿಡಿಲು ಮಾರುತಂಗಳಿಂದ-ಆರ್ಭಟದಿಂದ ಕೆಲವು, ಮಧ್ಯಸ್ತವಾಗಿ ಕೆಲವು, ಮೃದುತರವಾಗಿ ಕೆಲವು ಧ್ವನಿಗಳ ನಿಜಶರಣಂಗೆ ಕೊಡುತಿರ್ಪುವೆಂಬುದೀಗ ಮೇಘನಾದವೆಂಬ ಶಬ್ದಕ್ಕರ್ಥ."

ಪರಿಪೂರ್ಣ ಲಕ್ಷಣ :—"ಮಾರ್ಗಾಚಾರ ಕ್ರಿಯೆಯಿಂದ ಪಾಣಿ ಮೊದಲಾದ ಇಂದ್ರಿಯಂಗಳೆಲ್ಲ ನಿರ್ವಾಣೆ ಲಿಂಗೇಂದ್ರಿಯಂಗಳಾಗಿ ಲಿಂಗಜಂಗಮದ ಪಾದೋದಕ ಪ್ರಸಾದ ಮಂತ್ರದಲ್ಲಿ ತರಹರವಾಗಿ ನಿಂದು ಮೀರಿದಾಚಾರ ಜ್ಞಾನದಿಂದ ಮನ ಮೊದಲಾದ ಕರಣಂಗಳೆಲ್ಲ ಉನ್ಮನಿ ಮಹಾಲಿಂಗ ಕಿರಣಂಗಳಾಗಿ ಜಂಗಮಲಿಂಗ ಪಾದೋದಕ ಪ್ರಸಾದ ಮಂತ್ರದಲ್ಲಿ ತರಹರವಾಗಿ ನಿಂದೂ ಅಂತರಂಗದ ಜ್ಞಾನ, ಬಹಿರಂಗದ ಜ್ಞಾನ ಉಭಯವು ಮಹದರುವಿನಲ್ಲಿ ಸಂಮಿಶ್ರವಾಗಿ ಮೌಕ್ತಿಕದಂತೆ ನೀರಾಗದೆ ಭೂತ ಸೋಂಕಿನ ಮನುಜನೋಪಾದಿಯಲ್ಲಿ ನಿಜನಿರ್ವಾಣಪದ ವೀರಶೈವತ್ವ ತಲೆಗೇರಿ ನಿರ್ಮಲದಿಂದ ಈಳನ ಸ್ವರೂಪ ಪ್ರಸಾದಲಿಂಗದೇವನ ಸಂಗಸಂಯೋಗ ಸಮರತಿಯಿಂದ ನಿರ್ವಂಚಕನಾಗಿ ನಿರ್ಮದನಾಗಿ ಅಂಬುಧಿಯೊಳ್ಮುಳುಗಿದ ಮನುಜನೋಪಾದಿಯಲ್ಲಿ ಕೂಡಿ ಏಕವಾದ ನಿಜಶರಣನೆಂಬುದೀಗ ಪರಿಪೂರ್ಣ ಲಕ್ಷಣವೆಂಬ ಶಬ್ದಕ್ಕರ್ಥ."

ಅನಾದಿ ವಸ್ತು ಸಂಜ್ಞೆ :—"ಗುರು ಶಿಷ್ಯರೆಂಬುಭಯ ವರ್ತನೆಯಳಿದು ಏಕರೂಪಾಗಿ ಅಂತರಂಗದಲ್ಲಿ ಕರಣಕರ್ಕಶವಿಲ್ಲದೆ ಕರಣಂಗಳೆಲ್ಲ ಶ್ರೀಗುರು ಲಿಂಗಜಂಗಮದ ಚಿತ್ತ್ರಕಾಶ ಚಿದ್ವಿಭೂತಿ ರುದ್ರಾಕ್ಷಿ ಮಂತ್ರಮಯವಾಗಿ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿಸ್ಥಲವ ತಿಳಿದು ಮಾರ್ಗಾಚರಣೆ ಮೀರಿದಾಚರಣೆಯ ಅರ್ಪಿತಾವಧಾನದ ನಿಲುಕಡೆಯಲ್ಲಿ ವಿಶ್ವಾಸದೆಚ್ಚರದಳಿದು ಇರ್ಪ ಶಿವಶರಣನೆಂಬುದೀಗ ಅನಾದಿವಸ್ತು ಸಂಜ್ಞೆ ಎಂಬ ಶಬ್ದಕ್ಕರ್ಥ."

ವಿಶುದ್ಧಿ ಚಕ್ರದ ಹದಿನಾರೆಸಳ ಕಂಜದ ನಡುವೆ ಶರಣನೆಂಬ ಅಂಗ, ಪ್ರಸಾದವೆಂಬ ಲಿಂಗ, ಪರವೆಂಬ ಶಕ್ತಿ, ಆನಂದವೆಂಬ ಭಕ್ತಿ, ಸುಜ್ಞಾನವೆಂಬ ಹಸ್ತ, ಶ್ರವಣೇಂದ್ರಿಯವೆಂಬ ಮುಖ, ಸುಶಬ್ದವೆಂಬ ಪದಾರ್ಥ, ಪ್ರಸನ್ನ ಪ್ರಸಾದ ಸ್ವರೂಪಿನಿಂದ ನೆಲೆಗೊಂಡಿಪ್ಪುದು, ಇವು ಶರಣನ ಎಂಟು ಸಕೀಲಗಳು.

ದರ್ಪಣಾಕೃತಿ, ಯಕಾರ ಪ್ರಣವ, ವಿಶುದ್ಧಿ ಚಕ್ರ, ಕಪೋತವರ್ಣ; ಆಕಾಶ ತತ್ತ್ವ, ಶರಣಾಂಗ, ಸುಜ್ಞಾನ ಹಸ್ತ, ಪ್ರಸಾದಲಿಂಗ, ಶ್ರೋತ್ರಮುಖ, ಶಬ್ದ ಪದಾರ್ಥ, ಸುಶಬ್ದ ಪ್ರಸಾದ, ಪರಾಶಕ್ತಿ, ಆನಂದಭಕ್ತಿ, ಶಾಂತ್ಯತೀತಕಲೆ, ಶಿವ ಸಾದಾಖ್ಯ, ಪರಿಪೂರ್ಣಲಕ್ಷಣ, ಅನಾದಿ ಸಂಜ್ಞೆ, ಅಜಪವೇದ ಇವು ಶರಣಸ್ಥಲದ

ಎಸಳುಂಗಳೆಲ್ಲ ಹಿರಿಯ ಮಲ್ಲಿಗೆಯ ಪುಷ್ಪದೋಪಾದಿಯಲ್ಲಿರ್ಪವೆಂಬುದೀಗ ದರ್ಪಣಾಕೃತಿ ಶಬ್ದಕ್ಕರ್ಥ.”

ಊರ್ಧ್ವದಿಕ್ಕು :—“ಮೂವತ್ತೆಂಟುಂ ಕಳೆಯುಳ್ಳ ಸೂರ್ಯ ಚಂದ್ರಾಗ್ನಿಗಳ ವಸತಿಗಳಿಗೆ ಮಂದಿರವಾಗಿ ನಕ್ಷತ್ರಂಗಳಿಗೆ ಜನನಸ್ಥಾನ ಮಾಗಿರ್ಪುದೆಂಬುದೀಗ ಊರ್ಧ್ವದಿಕ್ಕು ಎಂಬ ಶಬ್ದಕ್ಕರ್ಥ,”

ಅಜಪವೇದ :—“ಸರಸ್ವತೀ ರಮಣನಾದ ಬ್ರಹ್ಮನ ಸದ್ಯೋಘೀಷ ದಿಕ್ಕಿನ ಮುಖದಲ್ಲಿ ಸದಾಶಿವಲಿಂಗದ ಸ್ಥಾಪ್ಯವ ಮಾಡಿ ಆ ಲಿಂಗಕ್ಕೆ ಆಜ್ಞೆಯ ಮಾಡಿದಂತಹದ್ದು ಪರಶಿವನು ಎಂಬುದೀಗ ಅಜಪವೇದ ಶಬ್ದಕ್ಕರ್ಥ.”

ಶ್ರೋತ್ರಮುಖ :—“ಪ್ರವೃತ್ತಿ ಶೈವಾಚಾರ ಮಾರ್ಗದ ಯಕ್ಷ ರಕ್ಷ ಮೊದಲಾದ ಭಿನ್ನಯೋಗಿಗಳಲ್ಲಿ ಮಿಶ್ರಂಗಳೊಡನೆ ಶಬ್ದ ಮೊದಲಾದ ಭೌಕ್ತಿಕ ಜಡಪದಾರ್ಥಕ್ಕೆ ಯೋಗ್ಯಮಾಗಿರ್ಪುದು. ನಿವೃತ್ತಿ ವೀರಶೈವಾಚಾರ ಮಾರ್ಗದ ಈಳನ ಮೂರ್ತಿ ಪ್ರಸಾದಲಿಂಗವೆ ಪ್ರಾಣವಾಗಿ ಶರಣಸ್ಥಲಕ್ಕೆ ಕರ್ತೃ ಚನ್ನಬಸವ ಮೊದಲಾದ ಸಮಸ್ತ ಗಣಂಗಳಲ್ಲಿ ಲಿಂಗ ಮಂತ್ರ ಮಿಶ್ರಂಗಳೊಡನೆ ಸುಶಬ್ದ ಮೊದಲಾದ ಪವಿತ್ರ ಅಜಡ ಪ್ರಸಾದಕ್ಕೆ ಯೋಗ್ಯವಾಗಿ ಉಭಯ ವರ್ತನರೂಪದಿಂದಿರ್ಪುದೀಗ ಶ್ರೋತ್ರಮುಖವೆಂಬ ಶಬ್ದಕ್ಕರ್ಥ.”

ಶಬ್ದಪದಾರ್ಥ:—“ಆಕಾಶದ ಬೆಮರು ಬಿಂದುಗಳಿಂದ ಜನಿತವಾಗಿ ಉಭಯ ರುದ್ರರಿಗೆ ಸ್ವವೇದ್ಯವಾಗಿರುವಂತಹದು ಎಂಬುದೀಗ ಶಬ್ದ ಪದಾರ್ಥ ಶಬ್ದಕ್ಕರ್ಥ.”

ಸುಶಬ್ದ ಪ್ರಸಾದ :—“ಚಿದಾಕಾಶದ ಸುಜ್ಞಾನದ ಬೆಮರು ಬಿಂದುಗಳಿಂದ ಜನಿತವಾಗಿ ಪ್ರಸಾದಲಿಂಗ ಮಂತ್ರದಿಂದ ಪಾವನವೆನಿಸಿ ಶರಣನ ವಿಶುದ್ಧಿಚಕ್ರದಲ್ಲಿ ನೆಲಸಿರ್ಪ ಷೋಡಶಕಲಾಲಿಂಗಗಳಿಗೆ ಅರ್ಪಿತವಾಗಿರುವಂತಹದೆಂಬುದೀಗ ಸುಶಬ್ದಪ್ರಸಾದ ಶಬ್ದಕ್ಕರ್ಥ.”

ಮೇಘನಾದ :—“ಷಡ್ರುತುಗಳೊಳಗೆ ಶರದ್ರುತು ಕಾಲದಲ್ಲಿ ವಿಶೇಷ ರವದಿಂದ ಆಕಾಶದೊಳಗೆ ಗುಡುಗು ಸಿಡಿಲು ಮಾರುತಂಗಳಿಂದ-ಆರ್ಭಟದಿಂದ ಕೆಲವು ಮಧ್ಯಸ್ಥವಾಗಿ ಕೆಲವು ಪ್ಲುದುತರವಾಗಿ ಕೆಲವು ಧ್ವನಿಗಳ ನಿಜಶರಣಂಗೆ ಕೊಡುತಿರ್ಪುವೆಂಬುದೀಗ ಮೇಘನಾದವೆಂಬ ಶಬ್ದಕ್ಕರ್ಥ.

ಪರಿಪೂರ್ಣ ಲಕ್ಷಣ :—"ಮಾರ್ಗಾಚಾರ ಕ್ರಿಯೆಯಿಂದ ಪಾಣಿ ಮೊದಲಾದ ಇಂದ್ರಿಯಂಗಳೆಲ್ಲ ನಿರ್ವಾಣಿ ಲಿಂಗೇಂದ್ರಿಯಂಗಳಾಗಿ ಲಿಂಗಜಂಗಮದ ಪಾದೋದಕ ಪ್ರಸಾದ ಮಂತ್ರದಲ್ಲಿ ತರಹರವಾಗಿ ನಿಂದು ಮೀರಿದಾಚಾರ ಜ್ಞಾನದಿಂದ ಮನ ಮೊದಲಾದ ಕರಣಂಗಳೆಲ್ಲ ಉನ್ಮನಿ ಮಹಾಲಿಂಗ ಕಿರಣಂಗಳಾಗಿ ಜಂಗಮಲಿಂಗ ಪಾದೋದಕ ಪ್ರಸಾದ ಮಂತ್ರದಲ್ಲಿ ತರಹರವಾಗಿ ನಿಂದು ಅಂತರಂಗದ ಜ್ಞಾನ, ಬಹಿರಂಗದ ಜ್ಞಾನ ಉಭಯವು ಮಹದರುವಿನಲ್ಲಿ ಸಂಮಿಶ್ರವಾಗಿ ಮೌಕ್ತಿಕದಂತೆ ನೀರಾಗದೆ ಭೂತ ಸೋಂಕಿನ ಮನುಜನೋಪಾದಿಯಲ್ಲಿ ನಿಜನಿರ್ವಾಣಪದ ವೀರಶೈವತ್ವ ತಲೆಗೇರಿ ನಿರ್ಮಲದಿಂದ ಈಳನ ಸ್ವರೂಪ ಪ್ರಸಾದಲಿಂಗದೇವನ ಸಂಗಸಂಯೋಗ ಸಮರತಿಯಿಂದ ನಿರ್ವಂಚಕನಾಗಿ ನಿರ್ಮದನಾಗಿ ಅಂಬುಧಿಯೊಳ್ಮುಳುಗಿದ ಮನುಜನೋಪಾದಿಯಲ್ಲಿ ಕೂಡಿ ಏಕವಾದ ನಿಜಶರಣನೆಂಬುದೀಗ ಪರಿಪೂರ್ಣ ಲಕ್ಷಣವೆಂಬ ಶಬ್ದಕ್ಕರ್ಥ."

ಅನಾದಿ ವಸ್ತು ಸಂಜ್ಞೆ :—"ಗುರು ಶಿಷ್ಯರೆಂಬುಭಯ ವರ್ತನೆಯಳಿದು ಏಕರೂಪಾಗಿ ಅಂತರಂಗದಲ್ಲಿ ಕರಣಕರ್ಕಶವಿಲ್ಲದೆ ಕರಣಂಗಳೆಲ್ಲ ಶ್ರೀಗುರು ಲಿಂಗಜಂಗಮದ ಚಿತ್ಪ್ರಕಾಶ ಚಿದ್ವಿಭೂತಿ ರುದ್ರಾಕ್ಷಿ ಮಂತ್ರಮಯವಾಗಿ ಭಕ್ತ ಮಾಹೇಶ್ವರ ಪ್ರಸಾದಿ ಪ್ರಾಣಲಿಂಗಿಸ್ಥಲವ ತಿಳಿದು ಮಾರ್ಗಾಚರಣೆ ಮೀರಿದಾಚರಣೆಯ ಅರ್ಪಿತಾವಧಾನದ ನಿಲುಕಡೆಯಲ್ಲಿ ವಿಶ್ವಾಸದೆಚ್ಚರದಳಿದು ಇರ್ಪ ಶಿವಶರಣನೆಂಬುದೀಗ ಅನಾದಿವಸ್ತು ಸಂಜ್ಞೆ ಎಂಬ ಶಬ್ದಕ್ಕರ್ಥ."

ವಿಶುದ್ಧಿ ಚಕ್ರದ ಹದಿನಾರೆಸಳ ಕಂಜದ ನಡುವೆ ಶರಣನೆಂಬ ಅಂಗ, ಪ್ರಸಾದವೆಂಬ ಲಿಂಗ, ಪರವೆಂಬ ಶಕ್ತಿ, ಆನಂದವೆಂಬ ಭಕ್ತಿ, ಸುಜ್ಞಾನವೆಂಬ ಹಸ್ತ, ಶ್ರವಣೇಂದ್ರಿಯವೆಂಬ ಮುಖ, ಸುಶಬ್ದವೆಂಬ ಪದಾರ್ಥ, ಪ್ರಸನ್ನ ಪ್ರಸಾದ ಸ್ವರೂಪಿನಿಂದ ನೆಲೆಗೊಂಡಿಪ್ಪುದು, ಇವು ಶರಣನ ಎಂಟು ಸಕೀಲಗಳು.

ದರ್ಪಣಾಕೃತಿ, ಯಕಾರ ಪ್ರಣವ, ವಿಶುದ್ಧಿ ಚಕ್ರ, ಕಪೋತವರ್ಣ; ಆಕಾಶತತ್ತ್ವ, ಶರಣಾಂಗ, ಸುಜ್ಞಾನ ಹಸ್ತ, ಪ್ರಸಾದಲಿಂಗ, ಶ್ರೋತ್ರಮುಖ, ಶಬ್ದಪದಾರ್ಥ, ಸುಶಬ್ದಪ್ರಸಾದ, ಪರಾಶಕ್ತಿ, ಆನಂದಭಕ್ತಿ, ಶಾಂತ್ಯತೀತಕಲೆ, ಶಿವಸಾದಾಖ್ಯ, ಪರಿಪೂರ್ಣಲಕ್ಷಣ, ಅನಾದಿ ಸಂಜ್ಞೆ, ಅಜಪವೇದ ಇವು ಶರಣಸ್ಥಲದ

ಹದಿನೆಂಟು ಸಕೀಲಗಳು. ಇವು ಇಷ್ಟಲಿಂಗದ ನಾಳದಲ್ಲಿ ಸಂಬಂಧವಾಗುವವು. ಇದರಂತೆ ಒಂಬತ್ತು ಲಿಂಗಗಳಿಗೆ ಹಂಚಿದರೆ ನೂರೆಂಟು ಸಕೀಲಗಳಾಗುವವು. ಈ ಸಕೀಲಗಳ ಪರಸ್ಪರ ಸಂಬಂಧ ಸಮನ್ವಯಂಗಳನ್ನು ಕೆಳಗಿನ ವಚನ ನಿರೂಪಿಸಿದೆ:

“ ಸುಜ್ಞಾನ ಬ್ರಹ್ಮಕ್ಕೆ ಆಕಾಶತತ್ತ್ವ ಹುಟ್ಟಿತ್ತು,
ಆಕಾಶ ತತ್ತ್ವಕ್ಕೆ ದರ್ಪಣಾಕೃತಿಯಾಯಿತ್ತು.
ಆ ದರ್ಪಣಾಕೃತಿಗೆ ಯಕಾರ ಪ್ರಣಮವಾಯಿತ್ತು.
ಆ ಯಕಾರ ಪ್ರಣಮಕ್ಕೆ ವಿಶುದ್ಧಿ ಚಕ್ರವಾಯಿತ್ತು.
ಆ ವಿಶುದ್ಧಿ ಚಕ್ರಕ್ಕೆ ಶರಣನೆಂಬ ಅಂಗವಾಯಿತ್ತು.
ಆ ಶರಣನೆಂಬ ಅಂಗಕ್ಕೆ ಸುಜ್ಞಾನ ಹಸ್ತವಾಯಿತ್ತು.
ಆ ಸುಜ್ಞಾನ ಹಸ್ತಕ್ಕೆ ಪ್ರಸಾದಲಿಂಗವಾಯಿತ್ತು.
ಆ ಪ್ರಸಾದಲಿಂಗಕ್ಕೆ ಶ್ರೋತ್ರವೆಂಬ ಮುಖವಾಯಿತ್ತು.
ಆ ಶ್ರೋತ್ರವೆಂಬ ಮುಖಕ್ಕೆ ಪರಾಶಕ್ತಿಯಾದಳು.
ಆ ಪರಾಶಕ್ತಿಗೆ ಆನಂದಭಕ್ತಿಯಾಯಿತ್ತು,
ಆ ಆನಂದ ಭಕ್ತಿಗೆ ಶಬ್ದ ಪದಾರ್ಥವಾಯಿತ್ತು.
ಆ ಶಬ್ದ ಪದಾರ್ಥಕ್ಕೆ ಸುಶಬ್ದ ಪ್ರಸಾದವಾಯಿತ್ತು.
ಇಂತೀ ಹದಿಮೂರು ಸಕೀಲಂಗಳು ಮನದಲ್ಲಿ ಸೋಂಕಿದರೆ
ಅರಿವುದೇ ಶಾಂತ್ಯತೀತವೆಂಬ ಕಲೆಯಾಯಿತ್ತು.
ವಿಚಾರಿಸಿದಲ್ಲಿಗೆ ಶಿವಸಾದಾಖ್ಯವಾಯಿತ್ತು.
ನಿಶ್ಚಯಿಸಿದಲ್ಲಿಗೆ ಪರಿಪೂರ್ಣವೆಂಬ ಲಕ್ಷಣವಾಯಿತ್ತು.
ದೃಢೀಕರಿಸಿದಲ್ಲಿಗೆ ಅನಾದಿವತ್ ಎಂಬ ಸಂಜ್ಞೆಯಾಯಿತ್ತು.
ಶಬ್ದವಿಟ್ಟು ನುಡಿವುದೇ ಅಜಪವೇದವಾಯಿತ್ತು,
ಇಂತೀ ಹದಿನೆಂಟು ತೆರದ ಸಕೀಲಂಗಳ ಬಲ್ಲ
ಮಹಾತ್ಮಂಗೆ ನಮೋ ನಮೋ ಎನಂತಿರ್ಪೆ ಕಾಣಾ
ಮಹಾಸತ್ಯ ಜಗತ್ತ್ರಯ ಸಂಗನ ಬಸವೇಶ್ವರ ಪ್ರಭುವೇ.”

ಇನ್ನು ಮೂವತ್ತಾರು ಸಕೀಲ ಸಾಹಿತ್ಯ ಹೀಗಿದೆ :

ಆಕಾಶವೆಂಬ ಭೂತ, ಪರಾಶಕ್ತಿ ಸಮವಾಯು, ತುರೀಯಾತೀತಾವಸ್ಥೆ, ಸದಾಶಿವ ಅಧಿದೇವತೆ, ನಾಳಸ್ಥಾನ, ಶರಣಾಂಗ, ವಿಶುದ್ಧಿ ಚಕ್ರ, ಹದಿನಾರುದಳ, ಕಪ್ಪು ಬಣ್ಣ, ಹದಿನಾರು ಸ್ವರಾಕ್ಷರಗಳು, ದರ್ಪಣಾಕೃತಿ, ಯಕಾರ ಪ್ರಣವ, ಪ್ರಸಾದಲಿಂಗ, ಶುಕ್ತಿವರ್ಣದ ಪ್ರಭೆ, ಉಕಾರ ಮಂತ್ರ, ಶ್ರೋತ್ರ ಮುಖ, ಸುಜ್ಞಾನ ಹಸ್ತ, ಆನಂದ ಭಕ್ತಿ, ಶಬ್ದ ಪದಾರ್ಥ, ಹ್ರೌಂಕಾರ ಪ್ರಸಾದ ಮಂತ್ರ, ಲೇಹ್ಯವೆ ಅರ್ಪಣ, ಪ್ರಸಿದ್ಧ ಪ್ರಸಾದ, ಗಣಾಚಾರ, ಪರಿಪೂರ್ಣ ಲಕ್ಷಣ, ಶಿವಸಾದಾಖ್ಯ, ಶಾಂತ್ಯತೀತ ಕಲೆ, ಅನಾದಿ ಸಂಜ್ಞೆ, ಊರ್ಧ್ವದಿಕ್ಕು, ಈಶಾಖ್ಯಮುಖ, ಗಾಯತ್ರೀವೇದ, ವಿಜ್ಞಾನಬ್ರಹ್ಮ, ಸಂಗದ ಕೂಟ, ಕಾರಣ ದಾಟ, ಮುಕ್ತಿಯೆ ಗೊತ್ತು, ಕರ್ತೃಲಿಂಗವೆ ದ್ರವ್ಯ ಇಂತೀ ಮೂವತ್ತಾರು ಸಶೀಲವು ಇಷ್ಟಲಿಂಗದ ನಾಳದಲ್ಲಿ ಸಂಬಂಧವು. ಇವು ಶರಣನ ಪ್ರಸಾದಲಿಂಗ ಸಶೀಲ ಸಾಹಿತ್ಯ. ಪ್ರಸಾದಲಿಂಗದ ಅನುಭವಕ್ಕೆ ಆರಾಧನೆಗೆ ಇವೆಲ್ಲವೂ ಸಹಾಯಕಗಳು; ಸಂಬಂಧಗಳು. ಇವುಗಳಲ್ಲಿ ಸ್ಥಳ ಕುಳಗಳೆರಡೂ ಇವೆ.

ಪ್ರಸಾದ ಲಿಂಗದಲ್ಲಿ ಷಡ್ಲಿಂಗ

ಯೋಗಾಂಗದ ಒಂದಂಶ ಆಕಾಶಾಂಗ, ಭಾವಲಿಂಗದ ಒಂದು ಕಿರಣ ಪ್ರಸಾದಲಿಂಗ, ಯೋಗಾಂಗವನ್ನು ಭಾವಲಿಂಗ ಬೆಳಗಿದರೆ, ಆಕಾಶಾಂಗವನ್ನು ಪ್ರಸಾದಲಿಂಗ ಬೆಳಗುತ್ತದೆ. ಪರಾಶಕ್ತಿಯು ಶ್ಯಾಂತ್ಯತೀತ ಕಲೆಯೇ ಪ್ರಸಾದ ಲಿಂಗ ಮೂವಚೈತನ್ಯ ಶ್ರೋತ್ರಾಂಗದೊಳಗಿನ ವಿಶುದ್ಧಿಯಲ್ಲಿ ನೆಲಸಿ ಶಾಂತ್ಯತೀತಕಲೆಯ ಮೇಲಿನ ಒಲವಿನಿಂದ ಪರಾಶಕ್ತಿಯೊಡಗೂಡಿ ಪರಾವಾಣಿಯಾಗಿ ಪ್ರಸಾದಲಿಂಗವೆನಿಸುವುದು. ತನ್ನ ಆ ಅವ್ಯಕ್ತ ನಾದಸ್ಪಂದನದಿಂದ ಸರ್ವಾಂಗವನ್ನು ಪ್ರಸನ್ನಗೊಳಿಸಿ ಪ್ರಸಾದಲಿಂಗವೆಂದು ಸಾರ್ಥಕ ಹೆಸರುಳ್ಳುದಾಗಿದೆ.

ಒಂದೇ ಒಂದಾದ ಪ್ರಸಾದಲಿಂಗ ಸ್ಥಳಕುಳಭೇದದಿಂದ ಮತ್ತು ದೃಕ್ಕ್ರಿಯಾಭೇದದಿಂದ ಆರಗೆಯಾಗುತ್ತದೆ. ಆ ಆರೂ ಬೇರಲ್ಲ. ಅರಿವಿಗಾಗಿ ಹೇಳುವುದಾದರೂ ಅನುಭವದಲ್ಲಿ ಒಂದೇ! ಪ್ರಸಾದಲಿಂಗಾಭಿನ್ನಲಿಂಗಗಳು.

ಆರುಲಿಂಗ, ಹೆಸರುಗಳಿವು: ಪ್ರಸಾದಲಿಂಗದೊಳಗಿನ ಆಚಾರಲಿಂಗ, ಪ್ರಸಾದಲಿಂಗದೊಳಗಿನ ಗುರುಲಿಂಗ, ಪ್ರಸಾದಲಿಂಗದೊಳಗಿನ ಶಿವಲಿಂಗ, ಪ್ರಸಾದಲಿಂಗದೊಳಗಿನ ಜಂಗಮಲಿಂಗ, ಪ್ರಸಾದಲಿಂಗದೊಳಗಿನ ಪ್ರಸಾದಲಿಂಗ ಪ್ರಸಾದಲಿಂಗದೊಳಗಿನ ಮಹಾಲಿಂಗ.

ಪ್ರಸಾದಲಿಂಗದೊಳಗಿನಾಚಾರಲಿಂಗವು ಶಿವಸ್ತುತಿರೂಪದಲ್ಲಿ, ಗುರು ಲಿಂಗವು ಕಾರುಣ್ಯರೂಪದಲ್ಲಿ, ಶಿವಲಿಂಗವು ಸಾರೂಪ್ಯ ಸ್ವರೂಪದಲ್ಲಿ, ಜಂಗಮ, ಲಿಂಗವು ಸಮಾಧಾನ ಸ್ವರೂಪದಲ್ಲಿ, ಪ್ರಸಾದಲಿಂಗವು ಆನಂದಸ್ವರೂಪದಲ್ಲಿ, ಮಹಾಲಿಂಗವು ಸಮರಸ ರೂಪದಲ್ಲಿ ಇರುತ್ತವೆ. ಇಂದ್ರಿಯ, ಪ್ರಾಣ, ಜ್ಞಾನ ಭಾವ, ತುರೀಯ, ಮಹಾಸ್ಥಲಗಳಲ್ಲಿ ಆನಂದಸ್ವರೂಪವಾಗಿ ಮೂಲ ಪ್ರಸಾದ ಲಿಂಗವಿರುವುದು ಅಲ್ಲದೆ ಕ್ರಿಯೆಯಲ್ಲಿ ಪ್ರಸನ್ನತೆ, ಭಾವದಲ್ಲಿ ಪ್ರಸನ್ನತೆ, ಜ್ಞಾನದಲ್ಲಿ ಪ್ರಸನ್ನತೆಗಳನ್ನು ಅಳವಡಿಸಿಕೊಳ್ಳುವುದೇ ಪ್ರಸಾದಲಿಂಗ ಸ್ವರೂಪ ಸಾಕ್ಷಾತ್ಕಾರ. ಕ್ರಿಯೆಯಲ್ಲಿ ಶುದ್ಧರೂಪಾಗಿ, ಭಾವದಲ್ಲಿ ಸಿದ್ಧರೂಪಾಗಿ. ಜ್ಞಾನದಲ್ಲಿ ಪ್ರಸಿದ್ಧರೂಪಾಗಿ ಪ್ರಸನ್ನತೆಯಿರುತ್ತದೆ ಇವೂ ಸಹ ಬಾಹಾ ಭ್ಯಂತರ ಭೇದದಿಂದ ಷಡ್ವಿಧವಾಗುತ್ತವೆ.

ಈ ಲಿಂಗ ಷಟ್ಕವನ್ನು ಚಿನ್ಮಯಮೂರ್ತಿ ಚನ್ನಬಸವಣ್ಣನವರು ಬೇರೊಂದು ಬಗೆಯಲ್ಲಿ ತಮ್ಮ ವಚನದಲ್ಲಿ ಬಿತ್ತರಿಸಿದ್ದಾರೆ. ಅವು ಹೀಗಿವೆ: ಶರಣನ ಆಚಾರಲಿಂಗ, ಶರಣನ ಗುರುಲಿಂಗ, ಶರಣನ ಶಿವಲಿಂಗ, ಶರಣನ ಜಂಗಮ ಲಿಂಗ, ಶರಣನ ಪ್ರಸಾದಲಿಂಗ, ಶರಣನ ಮಹಾಲಿಂಗ. ಈ ಉಭಯ ದೃಷ್ಟಿಯಲ್ಲಿ ಮುಂದೆ ವಿವರಿಸಲಾಗಿದೆ.

೧. ಪ್ರಸಾದಲಿಂಗದ ಆಚಾರಲಿಂಗ :

ಶರಣನ ಭಕ್ತನಿರುವುದನ್ನು ಈ ಮೊದಲು ಮನವರಿಕೆ ಮಾಡಿದ್ದಾಗಿದೆ. ಅದರಂತೆ ಪ್ರಸಾದಲಿಂಗದೊಳಗೆ ಆಚಾರಲಿಂಗವಿದೆ, ಇದಕ್ಕೆ ಕಾರಣವಿದು : ಆಕಾಶದಲ್ಲಿ ಪೃಥ್ವಿಯ ಅಂಶವಿದೆ. ಅಂತೆಯೆ ಶ್ರೋತ್ರದಲ್ಲಿ ನಾಸಿಕತ್ವವಿದೆ; ಅಂಶೀಭೂತವಾಗಿದೆ. ಶಬ್ದದಲ್ಲಿ ಗಂಧಾಂಶವಿದೆ. ಇಲ್ಲಿ ಗಂಧವೆಂದರೆ ಸಂಸ್ಕಾರ.

ಇದರಂತೆ ಶ್ರೋತ್ರಾವಚ್ಛಿನ್ನ ಪ್ರಸಾದಲಿಂಗದೊಳಗೆ ಘ್ರಾಣಾಂಶಾವಚ್ಛಿನ್ನ ಆಚಾರಲಿಂಗವಿರುತ್ತದೆ. ಶಬ್ದಗತ ಸಂಸ್ಕಾರರೂಪ ಗಂಧಾಂಶ ಪ್ರಸಾದಲಿಂಗದೊಳಗಿನ ಆಚಾರಲಿಂಗಕ್ಕೆ ಅರ್ಪಣವಾಗುತ್ತದೆ. ಆಗಿ ಸುಶಬ್ದದೊಳಗಿನ ಸುಗಂಧ ಪ್ರಸಾದವಾಗುತ್ತದೆ.

ಪ್ರಸಾದಲಿಂಗ ಜನ್ಯ ಸುಶಬ್ದ ಪ್ರಸಾದದೊಳಗಿನ ಸಂಸ್ಕಾರರೂಪ ಸುಗಂದ ಪ್ರಸಾದಪನ್ನು ಸ್ವೀಕರಿಸುವುದೆ ಪ್ರಸಾದಲಿಂಗದೊಳಗಿನ ಆಚಾರಲಿಂಗ, ಇದರಲ್ಲಿ ಕ್ರಿಯಾಪರಾಶಕ್ತಿಯು ಸಂಬಂಧವಿರುತ್ತದೆ. ಪ್ರಸಾದಲಿಂಗಾಂತರ್ಗತ ಆಚಾರಲಿಂಗಕ್ಕೆ ಶರಣಭಕ್ತನಾಗಿ ಸಮರ್ಪಿಸುತ್ತಾನೆ. ಆನಂದ ಯುಕ್ತ ಶ್ರದ್ಧಾಭಕ್ತಿಯನ್ನು ತೋರುತ್ತಾನೆ. ಇದರಿಂದಾಗಿ ಸುಶಬ್ದ ಪ್ರಸಾದಗತ ಗಂಧಪದಾರ್ಥ ಪ್ರಸಾದವಾಗಲು ಸಾಧ್ಯವಾಗುತ್ತದೆ ಹೀಗಾಗಲು ಆ ಮೂಲ ಆಚಾರಲಿಂಗದ ಅರ್ಧದೊಳಗಿನ ಆರರ ಒಂದಂಶವು ಪ್ರಸಾದಲಿಂಗದೊಳಗೆ ಸಮರಸವಾಗುತ್ತದೆ, ಅದೇ ಪ್ರಸಾದಲಿಂಗದೊಳಗಿನ ಆಚಾರಲಿಂಗ.

ಭಯ ಆಕಾಶದೊಳಗಿನ ಭೂಮ್ಯಂಶ. ಭಯವನ್ನು ನಿವೃತ್ತಿ ಗೊಳಿಸುವುದೇ ಶರಣನ ಆಚಾರ. ಇದಕ್ಕೆ ಸಹಾಯಕವಾಗುವ ಚೈತನ್ಯ ಶಕ್ತಿಯೇ ಪ್ರಸಾದಲಿಂಗದೊಳಗಿನ ಆಚಾರಲಿಂಗ.

೨. ಪ್ರಸಾದಲಿಂಗದ ಗುರುಲಿಂಗ :

ನೀಲಾಕಾಶದಲ್ಲಿ ನೀರಿನಂಶವಿದೆ. ಅಂತೆಯೇ ಮೇಘೋತ್ಪತ್ತಿ ಶ್ರೋತ್ರದಲ್ಲಿ ಜಿಹ್ವಾಂಶವಿದೆ. ಶ್ರೋತ್ರಗತ ಪ್ರಸಾದ ಲಿಂಗದೊಳಗೆ ಜಿಹ್ವಾವಚ್ಛಿನ್ನ ಗುರು ಲಿಂಗವಿರುತ್ತದೆ. ಶಬ್ದ ಶ್ರವಣದಿಂದುಂಟಾಗುವ ರಸ ರುಚಿಯನ್ನು ಪ್ರಸಾದಲಿಂಗದೊಳಗಿನ ಗುರು ಲಿಂಗಕ್ಕೆ ಸಮರ್ಪಿಸಲಾಗುತ್ತದೆ. ಆದರಿಂದ ಶಬ್ದಾಂತರ್ಗತ ರಸಾಂಶ ಪ್ರಸಾದವಾಗುತ್ತದೆ. ಶ್ರವಣ ಸುಖ ಸಂಪ್ರಾಪ್ತವಾಗುತ್ತದೆ.

ಶಬ್ದ ಪ್ರಾಸಾಡಿಕಸ್ವರೂಪವುಳ್ಳುದಾಗಬೇಕು. ಆಗ ಅದು ಸತ್ವಶಾಲಿಯಾಗುತ್ತದೆ; ಸತ್ಯಸಂಪನ್ನವಾಗುತ್ತದೆ. ಅದನ್ನು ಕೇಳುವುದರಿಂದ ಪ್ರಸನ ಭಾವವುಂಟಾಗುತ್ತದೆ. ದ್ವೇಷಭಾವ ಉಂಟಾಗದು. ವ್ಯೋಮದೊಳಗಿನ ತೇಜದಿಂದುಂಟಾಗುವ ದ್ವೇಷವು ಪ್ರಾಸಾದಿಕ ಸಬ್ದಪ್ರತಿಭೆಯಿಂದ ತೊಲಗುತ್ತದೆ.

೩. ಪ್ರಸಾದ ಲಿಂಗದ ಶಿವಲಿಂಗ

ವ್ಯೋಮಾಂಗದಲ್ಲಿ ತೇಜಾಂಶವಿದೆ. ಶಬ್ದದಿಂದ ತೇಜೋತ್ಪತ್ತಿಯಾಗುತ್ತದ, ಶ್ರೋತ್ರದಲ್ಲಿ ನೇತ್ರಾಂಶವಿದೆ. ಆದರಿಂದಾಗಿ ಪ್ರಸಾದಲಿಂಗದೊಳಗೆ ಶಿವಲಿಂಗವಿರುತ್ತದೆ. ಶಬ್ದದಲ್ಲಿ ಇರುವ ಸೂಕ್ಷ್ಮತೇಜಾಂಶ ಆ ಲಿಂಗಕ್ಕೆ ಅರ್ಪಣವಾಗುತ್ತದೆ. ಆ ಶಬ್ದಾಂತರ್ಗತ ರೂಪಾಂಶ ಪ್ರಸಾದವಾಗುತ್ತದೆ. ಅದನ್ನು ಅನುಗ್ರಹಿಸುವುದೇ ಪ್ರಸಾದಲಿಂಗದ ಶಿವಲಿಂಗ.ಅದರೊಳಗೆ ಪರಾಶಕ್ತಿಯೊಳಗಿನ ಇಚ್ಛಾಶಕ್ತಿಯ ಪ್ರತಿಭಾಂಶವಿದೆ. ಆದನ್ನು ಶರಣನ ಪ್ರಸಾದಿಯು ತನ್ನ ಆನಂದದೊಳಗಿನ ಅವಧಾನದೀದ ಆರಾಧಿಸುತ್ತಾನೆ. ನಿರಹಂಕಾರದಿಂದ ನಿಜಜ್ಞಾನದಿಂದ ಸುಶಬ್ದಗತ ಸುರೂಪದಲ್ಲಿ ಸುಪ್ರಭೆಯಲ್ಲಿ ಅಭಿರುಚಿಯನ್ನು ತೋರುವುದೇ ಆನಂದದ ಅವಧಾನ. ಆದರಿಂದಾಗಿ ಅದು ಪ್ರಸಾದವಾಗುತ್ತದೆ. ಅಂತಾಗಲು ಆ ಮೂಲ ಶಿವಲಿಂಗದ ಅರ್ಧದೊಳಗಿನ ಆರನೆಯ ಒಂದಂಶ ಪ್ರಸಾದಲಿಂಗದೊಳಗೆ ಸಮರಸವಾಗಿರುತ್ತದೆ, ಅದುವೇ ಪ್ರಸಾದಲಿಂಗದೊಳಗಿನ ಶಿವಲಿಂಗ.

ಶಬ್ದ ಪ್ರಾಸಾದಿಕ ಸ್ವರೂಪವುಳ್ಳುವದಾಗಬೇಕು. ಆಗ ಅದು ಸತ್ವಶಾಲಿಯಾಗುತ್ತದೆ. ಸತ್ಯಸಂಪನ್ನವಾಗುತ್ತದೆ. ಅದನ್ನು ಕೇಳುವುದರಿಂದ ಪ್ರಸನ್ನ ಭಾವವುಂಟಾಗುತ್ತದೆ. ದ್ವೇಷಭಾವವುಂಟಾಗದು. ವ್ಯೋಮದೊಳಗಿನ ತೇಜದಿಂದುಂಟಾಗುವ ದ್ವೇಷ ಪ್ರಾಸಾದಿಕ ಶಬ್ದ ಪ್ರತಿಭೆಯಿಂದ ತೊಲಗುತ್ತದೆ.

೪. ಪ್ರಸಾದಲಿಂಗದ ಜಂಗಮ ಲಿಂಗ:

ವ್ಯೋಮಾಂಗದಲ್ಲಿ ವಾಯ್ವಂಶವಿದೆ. ವ್ಯೋಮ ಜನ್ಯವಾಯು ಶಬ್ದದಲ್ಲಿ ಸ್ಪರ್ಶಗುಣವಿದೆ. ಶ್ರೋತ್ರದಲ್ಲಿ ತ್ವಚಾಂಶವಿದೆ. ಕಾರಣ ಪ್ರಸಾದಲಿಂಗದೊಳಗೆ ಜಂಗಮಲಿಂಗವಿದೆ. ಶಬ್ದಾಂತರ್ಗತ ಸ್ಪರ್ಶಾಂಶ ಆದಕ್ಕೆ ಅರ್ಪಣವಾಗುತ್ತದೆ.

ಆಗಿ ಪ್ರಸಾದವಾಗುತ್ತದೆ. ಅದನ್ನು ಸ್ವೀಕರಿಸುವುದೇ ಪ್ರಸಾದಲಿಂಗದ ಜಂಗಮಲಿಂಗ. ಆ ಲಿಂಗದ ಪರಾಶಕ್ತಿಯೊಳಗಿನ ಆದಿಶಕ್ತಿಯ ಶಾಂತಿಕಳೆಯನ್ನು ಶರಣನ ಪ್ರಾಣಲಿಂಗಿಯು ತನ್ನ ಆನಂದದೊಳಗಿನ ಅನುಭವದಿಂದ ಆರಾಧಿಸುತ್ತಾನೆ. ಸುಜ್ಞಾನದೊಳಗಿನ ಸುಮನದಿಂದ ಸುಶಬ್ದದೊಳಗಿರುವ ಸುಸ್ಪರ್ಶವನ್ನು ಸ್ವೀಕರಿಸುತ್ತಾನೆ. ಅದೇ ಆನಂದಾನುಭವ, ಅದರಿಂದ ಅದು ಪ್ರಸಾದವಾಗುತ್ತದೆ. ಅವನ್ನು ನೆರವೇರಿಸಲು ಆ ಮೂಲ ಜಂಗಮಲಿಂಗದ ಅರ್ಧದೊಳಗಿನ ಆರನೆಯ ಒಂದಂಶ ಪ್ರಸಾದಲಿಂಗದೊಳಗೆ ಸಮಾವೇಶವಾಗಿರುತ್ತದೆ. ಅದೇ ಪ್ರಸಾದ ಲಿಂಗದ ಜಂಗಮಲಿಂಗ.

ಶಬ್ದ ಸ್ಪರ್ಶ ಶಿವವಾಗಬೇಕು. ಆಗ ಶ್ರವಣ ಶಿವವಾಗುತ್ತದೆ. ರಾಗೋತ್ಪತ್ತಿಗೆ ಅವಕಾಶವಿಲ್ಲದಂತಾಗುತ್ತದೆ. ಗಗನದೊಳಗಿನ ಅನಿಲದಿಂದ ರಾಗೋತ್ಪತ್ತಿ. ಇದರ ನಿವಾರಣೆಗಾಗಿ ಪ್ರಸಾದಲಿಂಗದೊಳಗಿನ ಜಂಗಮಲಿಂಗ ಪ್ರತಿಷ್ಠಿತವಾಗಿರುತ್ತದೆ. ಇದರಿಂದಾಗಿ ಶರಣನು ಶಿವಸ್ಪರ್ಶದ ಶಬ್ದಗಳನ್ನೇ ಬಳಸುತ್ತಾನೆ. ಲಿಂಗಸಾಹಿತ್ಯವನ್ನೇ ಸೃಷ್ಟಿಸುತ್ತಾನೆ. ಶಿವಾನುಭವ ಪ್ರವಚನ-ಶ್ರವಣಗಳನ್ನು ನೆರವೇರಿಸುತ್ತಾನೆ.

ಸೂಕ್ಷ್ಮವೂ ಗೌಣವೂ ಆದ ಸುಶಬ್ದದೊಳಗಿನ ಸುರಸ ಪ್ರಸಾದವನ್ನು ಆರೋಗಿಸುವುದೇ ಪ್ರಸಾದಲಿಂಗಗತ ಗುರುಲಿಂಗ. ಅದರೊಳಗೆ ಪರಾಶಕ್ತಿಯೊಳಗಿನ ಜ್ಞಾನಶಕ್ತಿಯ ಕಳಾಂಶವಿರುತ್ತದೆ. ಅದನ್ನು ಶರಣನೊಳಗಿನ ಮಾಹೇಶ್ವರನು ತನ್ನ ಆನಂದದೊಳಗಿನ ನಿಷ್ಠೆಯಿಂದ ಆರಾಧಿಸುತ್ತಾನೆ. ಶುದ್ಧ ಬುದ್ಧಿಯಿಂದ ಶಬ್ದದಲ್ಲಿ ಶ್ರವಣದಲ್ಲಿ ಶೈವೀ ಅಭಿರುಚಿಯನ್ನು ತೋರುವುದೇ ಆನಂದ ನಿಷ್ಠೆ. ಅದರಿಂದ ಸುಶಬ್ದ ಪ್ರಸಾದಾಂತರ್ಗತ ರಸಪದಾರ್ಥ ಸುರಸಪ್ರಸಾದವಾಗುತ್ತದೆ. ಹಾಗಾಗಲು ಆ ಮೂಲಗುರುಲಿಂಗದ ಅರ್ಧದೊಳಗಿನ ಆರನೆಯ ಒಂದಂಶ ತ್ರಸಾದಲಿಂಗದೊಳಗೆ ಸಮನ್ವಯವಾಗುತ್ತದೆ. ಅದೇ ಪ್ರಸಾದಲಿಂಗಾಂತರ್ಗತ ಗುರುಲಿಂಗ.

ಶರಣನ ಮೋಹ ಸಲಿಲಾಂಶದಿಂದಾದುದು. ಅದು ಪ್ರಸಾದ ಲಿಂಗದೊಳಗಿನ ಗುರುಲಿಂಗಕ್ಕೆ ಸಮರ್ಪಿತವಾಗಿ ಶಿವಮೋಹವೆನಿಸುತ್ತದೆ. ಶಿವಭಕ್ತಿಎನಿಸುತ್ತದೆ. ಶರಣಸತಿತ್ವಕ್ಕೆ ಸಾಫಲ್ಯವನ್ನು ತರುತ್ತದೆ.

೫: ಪ್ರಸಾದಲಿಂಗದ ಪ್ರಸಾದಲಿಂಗ:

ನೇತ್ರಕ್ಕೆ ನೇತ್ರ, ಶ್ರೋತ್ರಕ್ಕೆ ಶ್ರೋತ್ರ ಇರುವಂತೆ ಶರಣನಿಗೆ ಶರಣ ಇದ್ದಾನೆ. ಅಂತೆಯೇ ಪ್ರಸಾದಲಿಂಗದ ಪ್ರಸಾದಲಿಂಗ ಸಿದ್ಧವಾಗುತ್ತದೆ.

ಯೋಗಾಂಗದೊಳಗಿನ ಗಗನಾಂಗದಲ್ಲಿ ಪ್ರಸಾದಲಿಂಗವಿದೆ. ಗಗನದೊಳಗಿನ ಗಗನದಲ್ಲಿ ಪ್ರಸಾದಲಿಂಗದೊಳಗಿನ ಪ್ರಸಾದಲಿಂಗವಿದೆ. ಅಂತೆಯೇ ಶ್ರೋತ್ರದೊಳಗಿನ ಶ್ರೋತ್ರದೊಳಗೆ ಪ್ರಸಾದಲಿಂಗದೊಳಗಿನ ಪ್ರಸಾದಲಿಂಗವಿದೆ. ಅಂತೆಯೇ ಶ್ರೋತ್ರದೊಳಗಿನ ಶ್ರೋತ್ರದೊಳಗೆ ಪ್ರಸಾದಲಿಂಗದೊಳಗಿನ ಪ್ರಸಾದಲಿಂಗವಿದೆ. ಗಗನದೊಳಗಿನ ಶ್ರೋತ್ರದೊಳಗಿನ ಪ್ರಸಾದಲಿಂಗ ಅಸಾಧಾರಣ ಗುಣಧರ್ಮವುಳ್ಳದು. ಪ್ರಸಾದ ಲಿಂಗದೊಳಗಿನ ಪ್ರಸಾದಲಿಂಗ ಸಾಧಾರಣ ಗುಣಧರ್ಮವುಳ್ಳದು. ಪ್ರಸಾದಲಿಂಗ ಆಹತಶಬ್ದವನ್ನು ಮಾತ್ರ ಗ್ರಹಿಸುತ್ತದೆ. ಪ್ರಸಾದಲಿಂಗದ ಪ್ರಸಾದಲಿಂಗ ಆಹತಶಬ್ದ ಅನಾಹತನಾದಗಳೆರಡನ್ನೂ ಗ್ರಹಿಸುತ್ತದೆ. ಪ್ರಸಾದಲಿಂಗ ಭೂತಾಕಾಶಜನ್ಯ ಸ್ಥೂಲಶಬ್ದವನ್ನು ಆಕರ್ಷಿಸುತ್ತದೆ. ಪ್ರಸಾದಲಿಂಗದೊಳಗಿನ ಪ್ರಸಾದಲಿಂಗ ಆಕಾಶದೊಳಗಿನ ಆಕಾಶದ ಸೂಕ್ಷ್ಮ ನಾದವನ್ನು ಆಕರ್ಷಿಸುತ್ತದೆ. ಅದು ಅನಾಹತನಾದ. ಅದರೊಡನೆ ಆಹತ್ಯ ನಾದವನ್ನೂ ಅದು ಆಕರ್ಷಿಸುತ್ತದೆ.

ಆಕಾಶಾಂಗದ ಗುಣಧರ್ಮ ನಾಚಿಕೆ ಮತ್ತು ಶೋಕ ಪ್ರಸಾದಲಿಂಗದ ಪ್ರಸಾದಲಿಂಗ ಪ್ರಸನ್ನತೆಯಿಂದ ಆಕಾಶಾಂಗದ ಪೂರ್ವಾಶ್ರಯ ನಿರಸನವಾಗಿ ಶೋಕ ನಾಚಿಕೆಗಳು ನಿವೃತ್ತಿಯಾಗುತ್ತವೆ,

೬. ಪ್ರಸಾದಲಿಂಗದ ಮಹಾಲಿಂಗ

ಆಕಾಶದಲ್ಲಿ ಆತ್ಮಾಂಶವಿದೆ, ಆತ್ಮಜನ್ಯ ಆಕಾಶ. ಶಬ್ದದಲ್ಲಿ ಚೇತನಾಂಶವಿದೆ. ಶ್ರೋತ್ರದಲ್ಲಿ ಹೃದಯಾಂಶವಿದೆ. ಶಬ್ದದಲ್ಲಿ ತೃಪ್ತಿಯಿದೆ. ಆ ತೃಪ್ತಿಯನ್ನು ತಳೆದು ಪ್ರಸಾದವಾಗಿಸಲು ಶ್ರೋತ್ರಾವಚ್ಛಿನ್ನ ಪ್ರಸಾದಲಿಂಗದೊಳಗೆ ಹೃದಯಾವಚ್ಛಿನ್ನ ಮಹಾಲಿಂಗವಿರುತ್ತದೆ.

ಶ್ರವಣ ಪ್ರಾಪ್ತ ಶಬ್ಧದೊಳಗಿನ ತೃಪ್ತಿಯನ್ನು ಪ್ರಸಾದಲಿಂಗದೊಳಗಿನ ಮಹಾಲಿಂಗಕ್ಕೆ ಸಮರ್ಪಣ ಮಾಡಬೇಕು. ಆಗ ಅದು ಸುತೃಪ್ತಿ ಪ್ರಸಾದವಾಗುತ್ತದೆ. ಪ್ರಸಾದಲಿಂಗದ ಮಹಾಲಿಂಗದಲ್ಲಿ ಪರಾಶಕ್ತಿಯೊಳಗಿನ ಚಿಚ್ಛಕ್ತಿಯಿರುತ್ತದೆ; ಶಾಂತ್ಯತೀತ ಕಲೆಯೊಳಗಿನ ಶಾಂತ್ಯತೀತೋತ್ತರ ಕಲೆಯಿರುತ್ತದೆ. ಆ ಪ್ರಸಾದಲಿಂಗದ ಮಹಾಲಿಂಗವನ್ನು ಶರಣನ ಐಕ್ಯನು ತನ್ನ ಆನಂದದೊಳಗಿನ ಸಮರಸಭಕ್ತಿಯಿಂದ ಸುಜ್ಞಾನದೊಳಗಿನ ಸದ್ಭಾವ ಹಸ್ತದಿಂದ ಆರಾಧಿಸುತ್ತಾನೆ. ಮೂಲ ಮಹಾಲಿಂಗದ ಅರ್ಧದೊಳಗಿನ ಆರರ ಒಂದಂಶ ಪ್ರಸಾದ ಲಿಂಗದೊಳಗಿರುತ್ತದೆ. ಅದೇ ಪ್ರಸಾದಲಿಂಗದ ಮಹಾಲಿಂಗ.

ಇನ್ನು ಮುಂದೆ ಈ ಮೊದಲು ತಿಳಿಸಿದಂತೆ ಚನ್ನಬಸವಣ್ಣನವರ ವಚನಾಭಿಪ್ರಾಯವಂತೆ ಶರಣನ ಪ್ರಸಾದಲಿಂಗದೊಳಗಿನ ಆರುಲಿಂಗಸ್ಥಲಗಳನ್ನು ವಿವರಿಸೋಣವಾಗುತ್ತದೆ.

೧. ಶರಣನ ಆಚಾರಲಿಂಗ

“ ದೇವ ದಾನವ ಮಾನವ ಮೊದಲಾದ ಎಲ್ಲ ಜೀವರಲ್ಲಿ
ಹಿರಿದು ಕಿರಿದೆನ್ನದೆ ನಿದ್ರೆಯೆಂಬ ಬಲೆ ಬೀಸಿ.
ಸರಿದು ತೆಗೆಯಲೊಡನೆ ಅರಿವು ಮರೆಯಿತ್ತು.
ನೋಟ ಜಾರಿತ್ತು, ಬುದ್ಧಿ ತೊಡೆಯಿತ್ತು;
ಜೀವ ಹಾರಿತ್ತು, ದೇಹ ಒರಗಿತ್ತು.
ಇದು ನಿಚ್ಚ ನಿಚ್ಚ ಬಹುದು-ಹೋಹುದರ
ಕೀಲನಾರೂ ಅರಿಯರು ಕೂಡಲಚನ್ನ ಸಂಗಮ ದೇವಾ;”

ಅರಿವಿಲ್ಲದ ಆಚಾರ ಅಳವಡದು. ಕಾಳಿರುಳಿನಲ್ಲಿ ಕಾಯಕ ನಡೆಯದು. ನಿತ್ಯ ಸೂರ್ಯನುದಯಿಸುವುದುಂಟು; ಕತ್ತಲೆಯು ಕಳೆಯುವುದುಂಟು, ಚಿತ್ಸೂರ್ಯನು ಉದಯಿಸುವುದು ದುರ್ಲಭ. ತಮೋಗುಣವನ್ನು ತೊಡೆಯುವವರು ವಿರಳ. ಮೂರುಲೋಕದವರು ತಾಮಸದ ತೆಕ್ಕೆಗೆ ಸಿಕ್ಕಿದ್ದಾರೆ. ತಾಮಸ ನಿರಸನವಾಗದೆ ಶರಣನಾಗಲು ಸಾಧ್ಯವಿಲ್ಲ. ಪ್ರಸಾದ ಲಿಂಗದೊಳಗಿನ ಆಚಾರ

ಲಿಂಗವನ್ನು ಆರಾಧಿಸಿ ಆಳವಡಿಸಿಕೊಳ್ಳಲು ಸಾಧ್ಯವಿಲ್ಲ. ಆಚರಣೆಗೆ ಕಣ್ಣು ಬೇಕು; ಬುದ್ಧಿಯಿರಬೇಕು. ಜೀವದೇಹಗಳು ಇದ್ದಾಗಬೇಕು. ತಾಮಸದ ತೆರೆಯಲ್ಲಿರುವವರಿಗೆ ಇವು ಯಾವೂ ಇರುವುದಿಲ್ಲ. ನಿದ್ದೆಹೋದವನಿಗೆ ಕಣ್ಣೆಲ್ಲಿ ? ಬುದ್ಧಿಯೆಲ್ಲಿ ? ದೇಹ ಜೀವಗಳ ಪರವೆಯೆಲ್ಲಿ ?

ಪ್ರಸಾದಲಿಂಗದ ಆಚಾರಲಿಂಗ ಅತ್ಯಂತ ಸೂಕ್ಷ್ಮ. ಅದು ಬರೀ ನೀರಿನಾಚಾರದಿಂದ ಲಭ್ಯವಾಗುವುದಲ್ಲ. ಅದಕ್ಕೆ ಅಂತರಂಗಿಕ ಅರಿವಿನಾಚಾರ ಬೇಕು.

> “ ಕಾಣಬಹಲಿಂಗವೆಂದು ಅಗ್ಘವಣಿಯನೆ ಕೊಟ್ಟು
> ವ್ಯಾಳಿಯಾದರಲ್ಲಾ ಲೋಕವೆಲ್ಲಾ !
> ನಿರಾಳಲಿಂಗಕ್ಕೆ ಕೊಡಲರಿಯರು;
> ಕಂಡವರ ಕಂಡು ಕಂಡೆವೆಂಬಂತೆ
> ಉಂಡವರ ಕಂಡು ಉಂಡೆವೆಂಬಂತೆ
> ಇದು ಕಾರಣ, ಕೂಡಲಚನ್ನಸಂಗಯ್ಯನಲ್ಲಿ
> ಇಂತಹರ ಕಂಡು ನಾಚಿತ್ತೆನ್ನ ಮನವು.”

ಇಷ್ಟಲಿಂಗದಂತೆ ಅದು ಸುರಾಳಲಿಂಗವಲ್ಲ; ಅಂದರೆ ಸಾಕಾರವಲ್ಲ. ಬರೀ ಬಾಹ್ಯದ ಮಡಿನೀರಿನಿಂದ ಮಜ್ಜನ ಮಾಡಿದರೆ ತೀರದು. ತಿಳಿನೀರಿನಿಂದ ತಾಮಸ ತೊಲಗುತ್ತದೆ.

ಕಾಣದೆ ಕಂಡೆವೆಂದು, ಉಣ್ಣದೆ ಉಂಡೆವೆಂದು ಹೇಳಿದರೆ ಆಗುವ ಫಲವೇನು ? ಹಸಿವು ಹೋಗುವುದೇನು ? ತಾ ಕಾಣದ್ದು ದಿಟವಲ್ಲ. ತಾನುಣ್ಣದೆ ತೃಪ್ತಿಯಿಲ್ಲ. ಅಂತೆಯೇ ತಿಳಿನೀರಿನಿಂದ ತಿಳಿವು ಇರುವುದಿಲ್ಲ. ತನ್ನೊಳಗೆ ತಾನು ತಿಳಿದಾಚರಿಸಬೇಕು. ತಿಳಿವೆಂಬ ತಿಳಿನೀರನ್ನು ಆ ನಿರಾಳಲಿಂಗಕ್ಕೆ ಮಜ್ಜನ ಮಾಡಬೇಕು. ಮಹಾಜ್ಞಾನದೊಡನೆ ವೀಸಲ ಮನಸಿನ ಮಜ್ಜನವಾಗದೆ ಆ ಪ್ರಸಾದಲಿಂಗದೊಳಗಿನ ಆಚಾರಲಿಂಗ ಆಳವಡದು. ಬರೀ ಹೊರಗಿನ ವ್ರತ ನೇಮ ಶೀಲಗಳಿಂದ ಪ್ರಯೋಜನವಿಲ್ಲ.

"ಪ್ರತಸ್ಥನರಿವು ಸಂದೇಹದಲ್ಲಿ ಹೋಯಿತ್ತು.
ಭಾಷೆವಂತನರಿವು ವಂಚನೆಯಲ್ಲಿ ಹೋಯಿತ್ತು.
ನೇಮಸ್ಥನರಿವು ಸಂಚಲದಲ್ಲಿ ಹೋಯಿತ್ತು.
ಶೀಲವಂತನರಿವು ಸೂತಕದಲ್ಲಿ ಹೋಯಿತ್ತು.
ಜಂಗಮದರಿವು ಬೇಡಿದಲ್ಲಿ ಹೋಯಿತ್ತು
ಭಕ್ತನರಿವು ಮಾಡಿಹೆನೆಂಬಲ್ಲಿ ಹೋಯಿತ್ತು.
ಪ್ರಸಾದಿಯರಿವು ರುಚಿಯಲ್ಲಿ ಹೋಯಿತ್ತು.
ಇಂತಿವು ಷಡುಸ್ಥಲ ನಿರ್ಣಯಕ್ಕೆ ಸಲ್ಲದೆ ಹೋದವು ;
ಕೂಡಲಚೆನ್ನಸಂಗಯ್ಯನಲ್ಲಿ ಶರಣನೆಂತಪ್ಪನು ?"

ಸಂದೇಹ, ವಂಚನೆ, ಸಂಚಲನ, ಸೂತಕ, ಬಯಕೆ, ಅಹಮಿಕೆ, ಸವಿಗಾರಿಕೆ, ಇವು ಶರಣನ ಆಚರಣೆಗೆ ಹೊರಗು. ಶರಣತ್ವ ಸಂಭವಿಸಬೇಕಾದರೆ ಇವಿರಬಾರದು. ಸಂದೇಹವಿದ್ದು ಪ್ರತಸ್ಥನಾದರೆ, ವಂಚನೆಯಿದ್ದು ಭಾಷೆವಂತನಾದರೆ, ಸಂಚಲನವಿದ್ದು ನೇಮಸ್ಥನಾದರೆ, ಸೂತಕವಿದ್ದು ಶೀಲವಂತನಾದರೆ, ಬಯಕೆಯಿದ್ದು ಜಂಗಮನಾದರೆ, ಹಮ್ಮಿದ್ದು ಭಕ್ತನಾದರೆ. ರುಚಿಯಾಸೆಯಿದ್ದು ಪ್ರಸಾದಿಯಾದರೆ ಫಲವಿಲ್ಲ; ಅವರಲ್ಲಿ ಅಚ್ಚ ಅರಿವಿರದು ಅಂಥವರು ಶರಣರಾಗಲು ಸರ್ವಥಾ ಸಮರ್ಥರಲ್ಲ; ಅವರು ಶರಣರಲ್ಲ. ಅವವರಲ್ಲಿ ಸಮ್ಯಗ್ ಜ್ಞಾನವಿರದು, ಸ್ವಾನುಭವವಿರದು ; ಸಹಜತೆಯಿರದು.

"ವಚನ ರಚನೆಯ ಅನುಭಾವವ ಬಲ್ಲೆವೆಂದೆಂಬರು;
ವಚನವಾವುದು, ರಚನೆಯಾವುದು, ಅನುಭಾವವಾವುದು ಹೇಳಿರಣ್ಣಾ!
ವಚನವೆಂಬೆ-ಆತ್ಮ ತೃಪ್ತಿಯನರಿಯಬಲ್ಲಡೆ ;
ರಚನೆಯೆಂಬೆ-ಸ್ಥಾವರ ಜಂಗಮದಲ್ಲಿ ದಯವಾಗಿರಬಲ್ಲಡೆ ;
ಅನುಭಾವವೆಂಬೆ-ಅರಿಷಡ್ವರ್ಗಂಗಳ ಇಚ್ಛೆಗೆ ಹರಿಯದಿರಬಲ್ಲಡೆ.
ಇಂತಲ್ಲದೆ ವೇದಶಾಸ್ತ್ರಾಗಮಂಗಳ ಬಲ್ಲೆನೆಂದು
ನುಡಿವಾತನನುಭಾವಿಯೇ ? ಅಲ್ಲ, ಅವು ಬ್ರಹ್ಮನೆಂಜಲು;
ಸತ್ವರಜ ತಮವನೊತ್ತಿ ನಿಂದಲ್ಲಿ ಸಹಜ ನೆಲೆಗೊಂಬುದು;
ಇದನರಿಯದೆ ವಿದ್ಯಾಭ್ಯಾಸವ ಬಲ್ಲೆನೆಂದು ನುಡಿವಾತನನುಭಾವಿಯೆ?
ಅಲ್ಲ, [illegible] ಉದರ ಪೋಷಕನವು,
ಕೂಡಲಚೆನ್ನಸಂಗಮದೇವಾ!"

ವೇದ ಶಾಸ್ತ್ರಾದಿಗಳ ಪಾಂಡಿತ್ಯ ಪ್ರಯೋಜನವಿಲ್ಲ; ಸ್ವಾನುಭವವಿದ್ದಾಗಬೇಕು. ಸ್ವಾನುಭವದಿಂದ ವಚನ ರಚನಾಶಕ್ತಿಯುಂಟಾಗಿರಬೇಕು. ಇವುಗಳಿಗೆ ಮೂಲಕಾರಣವಾದ ಆತ್ಮತೃಪ್ತಿ ಜೀವ ಕಾರುಣ್ಯ ನಿಶ್ಚಲಮನೋಭಾವ ತ್ರಿಗುಣ ವಿಜಯ ಇವು ಅಳವಟ್ಟಿರಬೇಕು. ಆಗ ಸಹಜತೆ ಸಂಪ್ರಾಪ್ತವಾಗುತ್ತದೆ. ವಚನ ರಚಾನಾನುಭವವಿರುವುದು ಅಗತ್ಯ; ಔಚಿತ್ಯ. ಅದೇ ಶರಣನಿಗೆ ಆಚಾರ ಪ್ರಸಾದ; ಪ್ರಸನ್ನ ಚೇತನ. ಆತನಿಗಿರುತ್ತದೆ ತತ್ತ್ವನಿರ್ಣಯ. ಅಂಗಭೋಗಕ್ಕಾಗಲಿ, ಅರ್ಥಪ್ರಾಣಾಭಿಮಾನಕ್ಕಾಗಲಿ ನಾಲಗೆಯ ಅಭಿರುಚಿಗಾಗಲಿ ಶರಣನೇ ಒಳಗಾಗುವುದಿಲ್ಲ. ಲಿಂಗಪ್ರಸಾದವೇ ಆತನ ಸರ್ವಸ್ವ. ಪ್ರಸಾದದಾಚಾರವೆ ಆತನ ಜೀವಾಳ.

"ಏಕೋವರ್ಣ ಷಡುಸ್ಥಳ ನಿರ್ಣಯವೆಂಬನೆ ?
ಪ್ರಣವದೃಷ್ಟಿ ಕಾಣದು;
ಅಂಗವನು-ಲಿಂಗವನು ಸಂಗವಮಾಡಿ ತೋರಿದಡೆ
ಕೂಡಲ ಚನ್ನಸಂಗಯ್ಯಾ ನೀನೆಂಬೆ."

ಪ್ರಸಾದಲಿಂಗ ನಿರ್ಣಯಕ್ಕೆ ಪ್ರಣವೋಪಾಸನೆ ಮೂಲಕಾರಣ. ಅಂಗಲಿಂಗಸಂಗಕ್ಕೂ ಪ್ರಣವ ಸಿದ್ಧಿ ಪ್ರಾಮುಖ್ಯ. ಪ್ರಣವೋಪಾಸನೆಯಿಂದ ಅಂಗ ತನ್ನ ಅಂಗತ್ವವನ್ನು ಕಳೆದುಕೊಳ್ಳುತ್ತದೆ. ಅಂತರಂಗದ ಭವಿತನವನ್ನು ನೀಗಿಸುತ್ತದೆ. ಆಚಾರದ ಗುರಿ ಇದೇ ಆಗಿರುತ್ತದೆ. ಬಹಿರಂಗದ ಭವಿಗಿಂತ ಅಂತರಂಗದ ಭವಿ ತುಂಬಾ ಕೇಡಾಳಿ. ಅಂತರಂಗದ ಭವಿ ಅರಿಷಡ್ವರ್ಗ. ನಿರಸನದಿಂದ ಅಂತರಂಗಶುದ್ಧಿಯುಂಟಾಗುತ್ತದೆ. ಆತ್ಮಸಂಸ್ಕಾರವುಂಟಾಗಿ ಭವ ಹರಿಯುತ್ತದೆ. ಅಂಗ-ಲಿಂಗಗಳ ಭವಿತನ ಹರಿದು ಸಮರಸ ಸಮನಿಸುತ್ತದೆ.

ಸಂಕಲ್ಪ ವಿಕಲ್ಪಗಳಿಗಿಂತ ಬೇರಿಲ್ಲ ದುಶ್ಶೀಲ. ಪ್ರಸನ್ನಭಾವಕ್ಕಿಂತ ಬೇರೆ ಸತ್ಯ ಶೀಲವಿಲ್ಲ. ಪ್ರಸಾದ ಪ್ರಾಪ್ತಿಯೇ ಪವಿತ್ರ ಶೀಲ. ಅದೇ ಶಿವಾಚಾರ. ಸಂಕಲ್ಪ-ವಿಕಲ್ಪಗಳಿಂದ ಚಿತ್ತದಲ್ಲಿ ಕಳವಳ ಹೆಚ್ಚುತ್ತದೆ. ನಿರ್ಮಳ ಮನೋಭಾವವಿರದು. ಮನ ಮೀಸಲಳಿವುದು; ಈಷಣತ್ರಯದಿಂದ ದೋಷ ದೂಷಿತ

ವಾಗುತ್ತದೆ ಮನ ಘನವಾಗದು; ಪರಮ ಪರಿಣಾಮ ನೆಲೆಗೊಳ್ಳದು. ತನು ಗುಣ ತೊಲಗದು. ಮನ ವ್ಯಸನದಲ್ಲಿ ತನು ಅಶನದಲ್ಲಿ ಮುಳುಗಿರುತ್ತವೆ. ಜಾತಿಭ್ರಾಂತಿಯಲ್ಲಿ ಬೀಳಾಗಿರುತ್ತವೆ, ಇವೆಲ್ಲ ಶರಣನೆನಿಸುವವನಿಗೆ ಸರಿಯಲ್ಲ.

ಶರಣನಿಗೆ ಜಾತಿ ಪಂಥಗಳ ಬಂಧವಿಲ್ಲ. ಸಂಕಲ್ಪ ವಿಕಲ್ಪಗಳ ಸಂಕಲೆಯಿಲ್ಲ. ಆತನು ಕೆಸರ್ಮಲ್ಲಿಗೆಯಂತಿರುತ್ತಾನೆ. ರವಿರಶ್ಮಿಯಂತೆ ಮುಟ್ಟಿಯೂ ಮೈಲಿಗೆಯಾಗದೆ ಮಡಿಯಾಗಿರುತ್ತಾನೆ. ಶರಣ ಸಂಸಾರಿಯಾದರೂ ಸಂಸಾರಿಯಲ್ಲ. ಮಾನವರಲ್ಲಿದ್ದರೂ ಮಾನವನಲ್ಲ. ಆತನು ಬಹಿರಂಗದಲ್ಲಿ ಕ್ರಿಯಾರಚನೆ, ಅಂತರಂಗದಲ್ಲಿ ಅರುಹಿನ ಸ್ವಾನುಭಾವ ಸಿದ್ಧಾಂತ ಪರಿಪೂರ್ಣ ಶರಣನು ಕ್ರಿಯಾಚರಣೆಯಿಲ್ಲದೆ ಅರುಹಿನ ನೆಲೆಯನರಿಯದೆ ಇರುವವರೆ ಅನಾಚಾರಿ ಮಾನವರು. ಇವರು ಶಿವನಿಗೆ ಶಿವಾಚಾರವೆಂಬ ಸುಂದರ ಸುಮವನ್ನು ಏರಿಸಲಾರರು. ಭಕ್ತಿ ಜಲದಿಂದ ಮಜ್ಜನಮಾಡರು. ಸಂಯಮ ಧೂಪವ ಹಾಕಲಾರರು ಶಿವಜ್ಞಾನದಾರತಿಯ ಬೆಳಗರು, ನಿರಹಂಕಾರದಕ್ಷತೆಯ ಧರಿಸರು. ಶಾಂತಿ ಸದ್ಭಾವ ಸತ್ಯಸ್ವರೂಪ ಪದಾರ್ಥಗಳನ್ನು ಅರ್ಪಿಸರು. ಅನುಭವಾನಂದ ಪರಿಣಾಮದಲ್ಲಿರರು.

ಶರಣ ಆಂತರಂಗಿಕ ಆಚಾರಿ; ಅವಿರಳ ಜ್ಞಾನವಿಹಾರಿ; ದೇಹವಿದ್ದು ನಿರ್ದೇಹಿ; ಪರಮ ದಾಸೋಹಿ. ನಿತ್ಯಲಿಂಗಸಂಗಿ. ನಿರಹಂಭಾವಿ. 'ಸರ್ವಾಂಗದಲ್ಲಿ ಸರ್ವಾಚಾರ ಸಂಪನ್ನ' ಶಿವನ ಶ್ರೀಪಾದದಲ್ಲಿ ಸದಾ ಇರಬಲ್ಲ. "ಸಜ್ಜನ ಸದ್ಭಾವಿ ಮತ್ತು ಮಹಾನುಭಾವಿಗಳ ಕಾಣಬಹುದು ಅವರ ಸಂಗದಿಂದ ಪ್ರಸಾದವ ಕಾಣಬಹುದು. ಪ್ರಸಾದದಿಂದ ಆಚಾರವ ಕಾಣಬಹುದು. ಆಚಾರದಿಂದ ತನ್ನ ಕಾಣಬಹುದು. ಇದು ಕಾರಣ, ಕೂಡಲ ಚೆನ್ನಸಂಗಮದೇವಾ ನಿಮ್ಮ ಸಜ್ಜನ ಸದ್ಭಾವಿಗಳ ಸಂಗವನೆ ಕರುಣಿಸಯ್ಯಾ ಎನಗೆ ನಿಮ್ಮ ಧರ್ಮ," ಈ ವಚನದಲ್ಲಿ ಸತ್ಸಂಗ ಸದಾಚಾರಗಳ ಪ್ರಯೋಜನ ಪ್ರಾಮುಖ್ಯತೆಗಳನ್ನು ಅರಿಯಬಹುದಾಗಿದೆ. ತನ್ನ ಕಾಣಲು ಆಚಾರವೇ ಆಧಾರ. ಆಚಾರದಿಂದ ತಾಮಸಗ್ರಂಥಿ ಬಿಚ್ಚುತ್ತದೆ. ಜ್ಞಾನದೀಪ್ತಿಯು ಬೆಳಗುತ್ತದೆ. ಆ ಬೆಳಗಿಗೆ ತೈಲವಾಗಿರುತ್ತದೆ. [illegible] ಕಳೆಯುತ್ತದೆ. ಭ್ರಾಂತಿಸೂತ್ರ

ವನ್ನು ತೊಳೆಯುತ್ತದೆ. ಲಿಂಗಪತಿಯ ಮಾಮನೆಯಲ್ಲಿರಿಸುತ್ತದೆ. ಬೇಕು-ಬೇಡೆಂಬೆರಡನ್ನು ಬೇರು ಸಹಿತ ಬಗೆದೆಸೆಯುತ್ತದೆ. ತಾನೇ ತಾನಾದ ಬಳಿಕ ನೋಡುವಾಸೆ ನಿಂತುಹೋಗುತ್ತದೆ, ನೋಡಿಸಿಕೊಂಬ ವಸ್ತು ಬೇರೊಂದಿರುವುದಿಲ್ಲ. ಕರ-ಮನ ಒಂದಾಗಿ ಆಚಾರ ವಿಚಾರ ಒಂದಾಗಿ ಎರಡೆಂಬುದಳಿದಿರುತ್ತದೆ. ದೃಷ್ಟ್ರ ದೃಷ್ಟಿ ದರ್ಶನವೆಂಬ ತ್ರಿಪುಟಿಯಿರದು. ಹುಟ್ಟು ಸಾವಿನ, ನೋವು ನಲವಿನ ಕೊಳೆಯ ತೊಳೆದ ಶರಣನಿಗೆ ಸಮಯಭೇದವಿಲ್ಲ; ತುದಿ ಮೊದಲೆಂಬ ಕವಲ ಬಗೆಯಿಲ್ಲ. ಪಾದಾರ್ಚನ-ಪಾದೋದಕಗಳ ಪೂರ್ಣ ಮರ್ಮವನ್ನು ಅರಿತು ಆಚರಿಸುವನು. ಗುರು–ಲಿಂಗ–ಜಂಗಮಕ್ಕೆ ತನು-ಮನಧನಗಳನ್ನು ಕೊಡುವುದೊಂದು ಹೆಚ್ಚಲ್ಲ. ಈ ತ್ರಿವಿಧದೊಡನೆ ಆತ್ಮವನ್ನೂ ನಿವೇದಿಸಬೇಕು. ನಿಜಶರಣ ನಿವೇದಿಸಬಲ್ಲ. ಅದುವೆ ಆಚಾರ ಸರ್ವಸ್ವ. ಅದುವೆ ಸ್ವಾನುಭಾವ ಸಂಬಂಧ. ಇಲ್ಲವಾದರೆ ಆಚಾರ ಒಂದು ಬಿಡಿಸಬಾರದ ಬಲೆಯಾದೀತು! ಆಗುತ್ತದೆ. ಆದರಲ್ಲಿ ಸಿಲುಕಿ ಅಳುಕಿ ಬಳುಕಿ ಸಾಯಬೇಕಾಗುತ್ತದೆ. ಯಾವುದಕ್ಕೂ ಅನುಭವಬೇಕು. ಅಂತೆಯೇ ಆಚಾರಕ್ಕೂ ಅನುಭವ ಬೇಕು. ಆತ್ಮನು ಪರಮಾತ್ಮನಲ್ಲಿಗೆ ಚರಿಸುವುದೇ ಆಚಾರವೆಂಬ ಅನುಭವ ಅಳವಡದೆ ಅದೆಷ್ಟು ಕಾಲ ಆಚಾರ ಮಾಡಿದರೂ ಫಲವಿಲ್ಲ

ತನಗೂ ಒಂದು ಪೂರ್ವಾಶ್ರಯವಿದೆ; ಅದನ್ನು ನಿರಸನಮಾಡಿ ಉತ್ತರಾಶ್ರಯಕ್ಕೆ ಉದ್ಗಮಿಸಬೇಕು. ಅದು ಪರಮಾಶ್ರಯ. ಕಾಲ ಕರ್ಮ ಮಾಯೆಗಳಿಗೆ ಒಳಗಾಗದಿರುವುದೇ ಉತ್ತರದ ಪರಮಾಶ್ರಯ. ಅಂತಾಗುವುದೇ ತಾನೇ ತಾನಾದಂತೆ! ಆಗ ಅಲ್ಪ-ಅನಲ್ಪವಾಗುವುದು; ಅಣು–ಮಹತ್ತಾಗುವುದು; ಅಪರ–ಪರವಾಗುವುದು. ಆಗ ಶರಣ ಎಲ್ಲ ಭಯದಿಂದ ಬಿಡುಗಡೆಯನ್ನು ಪಡೆಯುತ್ತಾನೆ. ಎಲ್ಲ ಅಂಜಿಕೆಗಳಿಗಿಂತ ಅಳಿವಿನ ಅಂಜಿಕೆ ಆಳವಾದುದು, ಅನಿವಾರ್ಯವಾದುದು. ಅದು "ಸಂಜೆ ಮಂಜಿನಗಪ್ಪು; ಅದಕ್ಕೆ ಅಂಜಿದಡೆ ಆ ಶಂಕೆ ಅಲ್ಲಿಯೇ ತದ್ರೂಪವಾಗಿ ನಿಂದಿತ್ತು. ಅದು ತನ್ನ ಭಾವದ ನಟನೆ ನಡೆವನ್ನಕ್ಕ ನಡೆಯಿತ್ತು. ಅದನರಿದಡೆ ಹಿಂದೆ ಹುಸಿ, ಮುಂದೆ ಕೂಡಲ ಚೆನ್ನಸಂಗಯ್ಯನ ನಿಲವು ತಾನೆ." ಆಗ ಶರಣನು 'ಮರಣವೆ ಮಹಾನವಮಿ' ಎನ್ನುತ್ತಾನೆ.

ಶರಣ ಪರಿಪೂರ್ಣಜೀವಿ. ಆತನು ಒಂದು ಹಿಡಿದು ಇನ್ನೊಂದನ್ನು ಬಿಡುವವನಲ್ಲ. ಎಲ್ಲವನ್ನು ಒಳಗೊಳ್ಳುವುದೇ ಅವನ ಕೇವಲತ್ವ.

"ವೇದಾಂತಿಗಳಂತೆ ಜ್ಞಾನಬದ್ಧರಲ್ಲ; ಮುನಿಗಳಂತೆ ಕ್ರಿಯಾಬದ್ಧರಲ್ಲ; ಸಾಧಕರಂತೆ ಕಾರ್ಯಬದ್ಧರಲ್ಲ; ಜ್ಞಾನ ಕ್ರಿಯಾಕಾರ್ಯಗಳಲ್ಲಿ ಕೂಡಲ ಚನ್ನಸಂಗನ ಶರಣರು ನಿರತರು ಕಾಣಾ, ಸಿದ್ಧರಾಮಯ್ಯ." ಶರಣನ ಆಚಾರ ಸರ್ವಸಮನ್ವಯ ಪ್ರಕ್ರಿಯೆ. ಅದು ಎಲ್ಲದರಲ್ಲಿಯೂ ಎಲ್ಲದರೊಡನೆಯೂ ಚರಿಸುತ್ತದೆ, ಇರುತ್ತದೆ. ಅಂದರೆ ಜ್ಞಾನಕ್ರಿಯಾನುಭವ ಮತ್ತು ಕಾಯಕ ಉಳ್ಳದ್ದೇ ಆಚಾರ. ಹೀಗೆ ಶಿವಾಚಾರಪಥ ಸೂಕ್ಷ್ಮವಾದುದು; ಸಮನ್ವಯ ಪ್ರಕ್ರಿಯೆಯುಳ್ಳುದು. ಅದನ್ನು ಶರಣನೇ ಬಲ್ಲ.

"ಪವನದ ಕಡೆಯಿಂದ ಪರಿಮಳ ಬೀಸರವಾಯಿತ್ತು.
ನುಡಿಯ ಗಡಣದಿಂದ ಅನುಭಾವ ಬೀಸರವಾಯಿತ್ತು.
ಮಾಟದ ಬೆರಕೆಯಿಂದ ಭಕ್ತಿ ಬೀಸರವಾಯಿತ್ತು.
ಕೂಟದ ಬೆರಕೆಯಿಂದ ಅರಿವು ಬೀಸರವಾಯಿತ್ತು.
ಸೂಕ್ಷ್ಮ ಶಿವಪಥವು ಸಾಮಾನ್ಯರಿಗಳವೆ ?
ಕೂಡಲ ಚನ್ನಸಂಗಯ್ಯನ ಶರಣರಿಗಲ್ಲದಿಲ್ಲ."

"ಭವಿಗೆ ಹುಟ್ಟಿದ ಭಕ್ತ, ಭಕ್ತಂಗೆ ಹುಟ್ಟಿದ ಪ್ರಸಾದ,
ಪ್ರಸಾದಕ್ಕೆ ಹುಟ್ಟಿದ ಅರ್ಪಿತ, ಅರ್ಪಿತಕ್ಕೆ ಹುಟ್ಟಿದ ಆರೂಢ;
ಆರೂಢಕ್ಕೆ ಹುಟ್ಟಿದ ಆಚಾರ.
ಆಚಾರಕ್ಕೆ ಹುಟ್ಟಿದ ಆಗಮಕ್ರಿಯಾ ಜ್ಞಾನಸಂಪಾದನೆಯ
ಕೂಡಲಚನ್ನಸಂಗಾ, ನಿಮ್ಮ ಶರಣ ಬಲ್ಲ."

ಈ ದಿಸೆಯಲ್ಲಿ ಈ ಮುತ್ತಿನಂತಹ ಮಾತುಗಳು ಮನನೀಯವಾಗಿವೆ. ಶಿವಾಚಾರದ ಶಿವಶರಣನ ನೀಳಾದ ನಿಲವು ನೋಟಕ್ಕೆ ನಿಲುಕುತ್ತದೆ. ಅಂತಹ ಆ ಆಚಾರವುಳ್ಳ ಶರಣ, ಆಚಾರಲಿಂಗನು ಗ್ರಹವುಳ್ಳ ಶರಣ ಬರೀ ಭಕ್ತನಲ್ಲ, ಯುಕ್ತನಲ್ಲ, ಮುಕ್ತನಲ್ಲ; ಇವೆಲ್ಲವನ್ನು ಮೀರಿ ಮುಂದುವರಿದ ಶರಣ ಮಹಾ

ಮಹಿಮ, ನಿಸ್ಸೀಮ; ನಿರುಪಮ. “ಭಕ್ತನೆಂದೆಂಬೆನೆ ಅಯ್ಯಾ, ಭಕ್ತಸ್ಥಲವು ಮುನ್ನಿಲ್ಲ. ಯುಕ್ತನೆಂದೆಂಬೆನೆ ಅಯ್ಯಾ, ಯುಕ್ತ ಸ್ಥಲವು ಮುನ್ನಿಲ್ಲ. ಮುಕ್ತನೆಂದೆಂಬೆನೆ ಅಯ್ಯಾ, ಮುಕ್ತಸ್ಥಲವು ಮುನ್ನಿಲ್ಲ. ಇದು ಕಾರಣ, ಕೂಡಲಚೆನ್ನಸಂಗನ ಶರಣರಿಗೆ ನಮೋ ನಮೋ ಎಂದು ಬದುಕುವೆ.”

— —

೧. ಶರಣನ ಗುರುಲಿಂಗ

ಚಕ್ರದಲ್ಲಿ ಸಿಕ್ಕು ಚೂರು ಚೂರಾದವನಿಗೆ ಚಿದ್ಗುರುವಿನ ಅನುಗ್ರಹ ಆಳವಡದು. ಚಕ್ರವೆಂದರೆ ಇಲ್ಲಿ ಚಕ್ಕಡಿಯ ಗಾಲಿಯಲ್ಲ. ಕಾಲ ಕರ್ಮಾದಿಗಳಿಂದ ಬರುವ ಘಟನೆಗಳು. ಇವು ಚಕ್ರವ್ಯೂಹದಂತೆ ವೃತ್ತಾಕಾರವಾಗಿ ಮಾನವನ ಬಾಳನ್ನು ಸುತ್ತಿ ಮುತ್ತಿಕೊಳ್ಳುತ್ತವೆ. ಈ ಚಕ್ರ ತನ್ನ ಕೈವಶವಾಗಿರಬೇಕಲ್ಲದೆ ಇದರ ವಶ ತಾನಾಗಿರಬಾರದು, ಆದರೆ ಆತ್ಮಜ್ಞಾನ ಅಳವಡದು; ಅಚ್ಚ ಆಚರಣೆ ಅಳವಡದು. ಅಳವಡದ ಬಳಿಕ ಜನ್ಮ ಚಕ್ರ ತಪ್ಪದು. ವ್ಯಸನ ವಾಸನಾ ಚಕ್ರ ತಪ್ಪದು. ಮೃತ್ಯುಚಕ್ರ ತಪ್ಪದು. ಜನ್ಮ ಚಕ್ರವೆಂದರೆ ಬಿಂದು ಚಕ್ರ. ವ್ಯಸನ ಚಕ್ರವೆಂದರೆ ಕರ್ಮಚಕ್ರ. ವಾಸನಾ ಚಕ್ರವೆಂದರೆ ನಾದ ಚಕ್ರ. ಮೃತ್ಯು ಚಕ್ರವೆಂದರೆ ಕಾಲಚಕ್ರ.

“ ಕಾಲಚಕ್ರ ಕರ್ಮ ಚಕ್ರ ನಾದಚಕ್ರ ಬಿಂದು ಚಕ್ರದೊಳಗೆ
ಹುಟ್ಟದ ಯೋನಿಯಿಲ್ಲ, ಮುಟ್ಟದ ನೆಲವಿಲ್ಲ;
ಉಣ್ಣದ ಆಹಾರವಿಲ್ಲ, ಕಾಣದ ದುಃಖವಿಲ್ಲ;
ಇಂತು ನಾನಾಜನ್ಮದಲ್ಲಿ ನುಗ್ಗು ನುರಿಯಾಗಿ ಬಂದವಂಗೆ
ಗುರುವ ಮುಟ್ಟಬಹುದೆ ? ಲಿಂಗವನರ್ಚಿಸಬಹುದೆ ?
ಪ್ರಸಾದವ ಕೊಳಬಹುದೆ ? ಕೂಡಲಚೆನ್ನ ಸಂಗಯ್ಯಾ,
ತ್ರಿಕರಣ ಶುದ್ಧವಿಲ್ಲದವಂಗೆ ಉಪದೇಶವ ಕೊಟ್ಟಡೆ ನಾಯಕನರಕ.”

ಗುರು–ಗುರುಲಿಂಗ ಮೀಮಾಂಸೆಯನ್ನು ಹಿಂದೆ ಸಾಕಷ್ಟು ಮಾಡಲಾಗಿದೆ. ಗುರು ಬೇರಲ್ಲ, ಗುರುಲಿಂಗ ಬೇರಲ್ಲ ಎಂದು ಹೇಳಲಾಗಿದೆ. ಗುರುಲಿಂಗವು ಸಾಕ್ಷಾತ್ ಸಂವಿಜ್ಜ್ಯೋತಿಯು. ಅದನ್ನು ಆರಾಧಿಸಿ ಅದಾಗಬೇಕೆಂಬುವವನು ಕಾಲ-ಕರ್ಮ-ನಾದ-ಬಿಂದು ಚಕ್ರಗಳಿಗೆ ಸಿಲುಕದಂತಿರಬೇಕು, ಗುರು-ಶಿಷ್ಯ ಸಂಬಂಧ ಅಥವಾ ಗುರುಲಿಂಗ-ಶರಣಾಂಗ ಸಂಬಂಧ ಅಸಾಧಾರಣವಾದುದು; ಅನುಪಮವಾದುದು.

" ಗುರುಶಿಷ್ಯ ಸಂಬಂಧವನೇನೆಂದುಪಮಿಸುವೆನಯ್ಯಾ ?
ಜ್ಯೋತಿಯಲೊದಗಿದ ಜ್ಯೋತಿಯಂತಿರಬೇಕು.
ಸ್ಪಟಿಕದ ಘಟದೊಳಗಿರಿಸಿದ ರತ್ನದಂತಿರಬೇಕು.
ರೂಪಿನ ನೆಳಲಿನ ಅಂತರಂಗದಂತಿರಬೇಕು.
ಇದುಕಾರಣ, ಕೂಡಲ ಚೆನ್ನಸಂಗಯ್ಯಾ,
ದರ್ಪಣವ ದರ್ಪಣಕ್ಕೆ ತೋರಿದಂತಿರಬೇಕು."

ಅವರದು ಅದೆಂತಹ ಅವಿನಾಭಾವ ಸಂಬಂಧ ! ಅದೇನು ಸನ್ನಿಹಿತಾನುಬಂಧ ! ಸಮಭಾವದಿಂದ ಮೊದಲಾಗಿ ಸಮರಸದಲ್ಲಿ ನಿಲ್ಲುವ ನಿಲುಕಡೆ ಈ ವಚನದಲ್ಲಿ ಚೇತೋಹಾರಿಯಾಗಿ ಚೆನ್ನಾಗಿ ಚಿತ್ರಿತವಾಗಿದೆ. ಜ್ಯೋತಿಯಿಂದಾದ ಜ್ಯೋತಿಯಂತಿರಬೇಕಂತೆ! ಇವೆರಡು ಸಮಸಮವಾಗಿದ್ದರೂ ಬೇರೆಬೇರೆ ಇರಬಹುದು; ಇರಬಲ್ಲವು. ಇದನ್ನು ನಿವಾರಿಸಲು ಸ್ಪಟಿಕ ಘಟದೊಳಗಿನ ರತ್ನದಂತಿರಬೇಕಂತೆ ! ಇವೆರಡೂ ಸ್ವಾಯತ್ತವಾಗಿದ್ದರೂ ಸನ್ನಿಹಿತವಾಗಿಲ್ಲ. ಸನ್ನಿಹಿತತ್ವವನ್ನು 'ರೂಪಿನ ನೆಳಲಿನ ಅಂತರಂಗ' ಸೂಚಿಸುವ ಉತ್ತಮ ಉಪಮೆ. ಆದರೂ ಅದು ಅವಿನಾಭಾವ ಸಂಬಂಧವನ್ನು ಸೂಚಿಸದು. ಅಂತೆಯೇ ಕೊನೆಯದಾಗಿ 'ದರ್ಪಣವ ದರ್ಪಣಕ್ಕೆ ತೋರಿದಂತಿರಬೇಕು.' ಎಂದು ಹೇಳಿ ಗುರು ಶಿಷ್ಯರಿಬ್ಬರ ಶುಭ್ರಚಾರಿತ್ರವನ್ನು ಅವಿನಾಭಾವ ಸಂಬಂಧವನ್ನು ಸೂಚಿಸುವ ಸಮರ್ಪಕ ಸುಂದರ ಸಾದೃಶ್ಯ. ಎರಡಕ್ಕೂ ನೆಳಲಿಲ್ಲ. ಅಂದರೆ ಪ್ರತಿಬಿಂಬವಿಲ್ಲ. ಎರಡಾಗಿಯೂ ಒಂದಾಗಿವೆ. ಎರಡೂ ಸಮಶುಭ್ರವಾಗಿವೆ. ದರ್ಪಣ ಎರಡಾದರೂ ದರ್ಪಣತ್ವ ಒಂದೇ ಆಗಿದೆ. ಗುರು-ಶಿಷ್ಯರ ಕಾಯವೆರಡಾದರೂ ಆತ್ಮವೊಂದು. ಆಚಾರ-ವಿಚಾರಗಳೊಂದು. ಆಚಾರವೆ ಶಿಷ್ಯ; ವಿಚಾರವೆ

ಗುರು. ಆಚಾರ ಶಿಷ್ಯನಲ್ಲಿ ವಿಚಾರಗುರು, ವಿಚಾರಗುರುವಿನಲ್ಲಿ ಆಚಾರ ಶಿಷ್ಯರಿದ್ದಾರೆ. ಆಚಾರ ಅಂಗ; ವಿಚಾರ ಆತ್ಮಲಿಂಗ.

"ಅರಿವ ಅರಿಯ ಹೇಳಿ ಸದ್ಗುರುನಾಥ ಕುರುಹ ಕೈಯಲ್ಲಿ ಕೊಟ್ಟನಲ್ಲದೆ, ತನ್ನ ಅರುಹನೆ ಮರೆದು ಕುರುಹನೆ ಪೂಜಿಸುವ ನರಕುರಿಗಳ ನೋಡಾ ಕೂಡಲ ಚನ್ನ ಸಂಗಮದೇವಾ।"

ಕರಸ್ಥಲದ ಕ್ರಿಯಾಚಾರಸ್ವರೂಪ ಕುರುಹು, ಮನಸ್ಥಲದ ಮಂತ್ರವಿಚಾರ ಸ್ವರೂಪ ಅರುಹು-ಎರಡೂ ಸಮಸಮವಾಗಿ ಶರಣನಲ್ಲಿ ಸಮವೇಧಿಸಬೇಕು ಕ್ರಿಯೆಯೇ ಶಿಷ್ಯ, ಜ್ಞಾನವೇ ಶ್ರೀಗುರು; ಒಂದಾದಾಗ ಅನುಭವ ಆಳವಡುತ್ತದೆ; ಆನಂದ ಅಂಗವಿಸುತ್ತದೆ.

ಸಮ್ಯಗ್ ಜ್ಞಾನಿಯಾದ ಗುರುವಿಗೆ ಯಾವ ನೇಮವಿಲ್ಲ; ಲಿಂಗಕ್ಕೆ ನಾಮವಿಲ್ಲ, ಅಂತೆಯೇ ಗುರುಲಿಂಗಕ್ಕೆ ನಾಮನೇಮಗಳಿಲ್ಲ. ಗುರುಲಿಂಗವನ್ನಾರಾಧಿಸುವ-ಆಳವಡಿಸಿಕೊಳ್ಳುವ ಶಿಷ್ಯನಿಗೆ ಅಥವಾ ಶರಣನಿಗೆ ಪೂರ್ವಾಶ್ರಯವಿಲ್ಲ. "ಗುರುವ ನರನೆಂದು ಭಾವಿಸಿ ಗುರುವಿನ ಹೆಸರಿಟ್ಟು ಕರೆವ ಗುರುದ್ರೋಹಿಗಳ ಮಾತ ಕೇಳಲಾಗದು. ಹೆಸರಿಲ್ಲದ ಅಪ್ರಮಾಣ ಮಹಿಮನನು ಹೆಸರಿಟ್ಟು ಕರೆವ ಲಿಂಗದ್ರೋಹಿಗಳ ಮಾತ ಕೇಳಲಾಗದು. ಪೂರ್ವವಿಲ್ಲದ ಶಿಷ್ಯ, ನೇಮವಿಲ್ಲದ ಗುರು, ನಾಮವಿಲ್ಲದ ಲಿಂಗ ಈ ತ್ರಿವಿಧವನರಿಯದೆ ಕೆಟ್ಟರು, ಕೂಡಲ ಚನ್ನ ಸಂಗಮದೇವಾ." ಗುರು ಶಿಷ್ಯರಿಬ್ಬರಿಗೂ ಪೂರ್ವಾಶ್ರಯವಿರದು. ಗುರುವಿನಿಂದ ಶಿಷ್ಯ, ಶಿಷ್ಯನಿಂದ ಗುರು. ಗುರುವಿನಿಂದ ಲಿಂಗ, ಲಿಂಗದಿಂದ ಗುರು; ಹೀಗಾಗಿ ಗುರುಲಿಂಗಗಳಲ್ಲಿ-ಗುರು ಶಿಷ್ಯರಲ್ಲಿ ಭೇದಾಭೇದಗಳು ಸ್ವಾಯತ ಸನ್ನಿಹಿತಗಳಾಗಿರುತ್ತವೆ. ಮಾಡುವವನು ಶಿಷ್ಯ, ಮಾಡಿಸಿಕೊಂಬುವವನು ಗುರು ಎಂಬ ಭಿನ್ನ ಭಾವ ಇರಬಾರದು. ನೀಡುವೆನೆಂಬ ಹಮ್ಮು ಶಿಷ್ಯನಲ್ಲಿರಬಾರದು. ಗುರು ಕರುಣೆಯನ್ನು ಪಡೆದ ಶಿಷ್ಯನಿಗೆ ಗುರುಧರ್ಮವಲ್ಲದೆ ಪೂರ್ವಾಶ್ರಯ ಧರ್ಮವಿರದು. ಪರುಷ ಸೋಂಕಿದ ಕಬ್ಬುನ ಕನಕವಾಗುವುದಲ್ಲದೆ ಕಬ್ಬುನವಾಗಿರದು. ಗುರು ಕರುಣ ಪ್ರಸಾದದಲ್ಲಿ ಪರಿಣಾಮಗೊಳ್ಳುವನು ಶಿಷ್ಯ. ಆಗಿನ ಆತನ ಪರಿ ಬೇರಾಗಿರುತ್ತದೆ. ನೀರಳಿದು ಮುತ್ತಾದಂತೆ, ಹೂವಳಿದು ಹಣ್ಣಾದಂತೆ ಆತನ ಪರಿ. ನಿಜ ಸುಖಿ ನಿತ್ಯನಾಗಿರುತ್ತಾನೆ. ನಿತ್ಯದ ನಿಲವುಳ್ಳ ಆತನಿಗೆ

ಕಲ್ಪನದ ಬಂಧನವಿರದು, ಗಮನದ ಶಂಕೆಯಿರದು. ಅರ್ಪಣ-ಅವಧಾನಗಳ ಭಾವವಿರದು. ಫಲಾಪೇಕ್ಷೆಯ ಪೂಜೋಪಚಾರಗಳಿರವು. ದೇಹೇಂದ್ರಿಯಗಳ ಬೆಂಬಳಿ ಹಿಡಿದಿರನು ಗುರುಲಿಂಗದ ಚಾರಿತ್ರವನ್ನು ಚಿತ್ತದಿಂದ ಅಗಲಿಸನು. ಕವಲುಗಣ್ಣಿನ ನೋಟವಿರದು.

ಮನವೆಂಬುದು ಇಲಿ; ಜೀವನೆಂಬುವವನು ಗಣಪತಿ. ವಿಷಯಂಗಳೆ ಕಡುಬು ಉಂಡೆಗಳು. ಆಸೆಯೆ ಹೊಟ್ಟೆಗಟ್ಟಿದ ಹಾವು. ಇವಿದ್ದು ಶಾಂತಿಯು ಬಯಸಿದರೆ ಆ ಶಾಂತಿ ಬಾನ ಚಂದಿರನಾಗುತ್ತಾನೆ. ಈ ಇಲಿ ಗಣಪರ ಆಟ ನೋಡಿ ಸನಿಹಕ್ಕೆ ಬಾರದೆ ಬಹು ದೂರ ನಿಂತು ನಗುತ್ತಾನೆ ಶಾಂತಿಚಂದ್ರ. ಗುರುಲಿಂಗೋಪಾಸಕನು ಈ ಇಲಿ ಗಣಪರನ್ನು ಲೆಕ್ಕಿಸನು, ಲೆಂಕಿಗನಾಗನು.

ಮನ ಮನವಾಗಿ ಜೀವ ಜೀವವಾಗಿದ್ದರೆ ಶಿಷ್ಯನು ಶರಣನಾಗನು, ಶಾಂತಿಯನ್ನು ಸಂಪಾದಿಸನು. ಪೂರ್ಣನೆನಿಸನು, ಮನ ಸಂಕಲ್ಪ ವಿಕಲ್ಪಗಳಿಗೆ ವಿಷಯಾಶೆಗೆ ಒಳಗಾಗುತ್ತದೆ. ಜೀವ ಭವಭವದಲ್ಲಿ ಕಳವಳಿಸುತ್ತದೆ. ಅಚ್ಚಶೀಲ ಅಳವಡದು. ಲಿಖಿತ ಲಿಪಿ ಅಳಿಯದು. ಲೇಸಿಗನೆನಿಸನು. ಗುರುಲಿಂಗವು ಕುರುಹಾಗಿ ತನುಭಾವವನ್ನು, ಅರುಹಾಗಿ ಮನೋಭಾವವನ್ನು, ಸುಳುಹಾಗಿ ಜೀವಭಾವವನ್ನು ಹಿಂಗಿಸುತ್ತದೆ. ಪರಿವಿಡಿದು ಪರ-ಘನ-ಪರಾತ್ಪರವೆನಿಸುತ್ತದೆ.

ಅದೇ ಗುರುಲಿಂಗದೇವನ ಕೈವಿಡಿಯದ "ಕಾಯ ಸಮ್ಮೋಹಿಯನು ಲಾಂಛನಧಾರಿ ಎಂಬೆನು. ಮನದದ್ವೈತಃಹಂಕಾರವಳಿಯದನ್ನಕ್ಕ ಸದ್ಭಕ್ತನೆಂತೆಂಬೆನು ? ಜೀವ ಸಂಮೋಹಿಯನು ಸಂಸಾರಿ ಎಂಬೆನು. ಇದು ಕಾರಣ, ಮಿಗೆ ಮಿಗೆ ಮೀಸಲು ಸತಿ ಸಹಜ ಕೂಡಲಚನ್ನಸಂಗನೆಂಬೆನು,"

ಗುರುಲಿಂಗಕ್ಕೆ ಶರಣಾಗದೆ ಕಾಷಾಯವಸ್ತ್ರಧರಿಸಿ, ಗಿರಿಯೊಳಿದ್ದು ತಪ ಜಪ ಮಾಡಿ, ತರಗೆಲೆ ತಿಂದು, ಇಂದ್ರಿಯಗಳ ಕಟ್ಟಿ ಏನೂ ಪ್ರಯೋಜನವಿಲ್ಲ. ಗುರುಲಿಂಗಕ್ಕೆ ಶರಣಾದರೆ ಶಾಂತಿ, ಮುಕ್ತಿ. ಗುರುಲಿಂಗವೆಂದರೆ ಜ್ಞಾನಕ್ರಿಯೆ. ಶರಣಾಗುವುದೆಂದರೆ ಜ್ಞಾನ-ಕ್ರಿಯೆಗಳೆರಡನ್ನು ಅಳವಡಿಸಿಕೊಳ್ಳುವಿಕೆ. ಇವು ಅಳವಟ್ಟ ಶರಣನಿಗೆ ಅಂತರಂಗ-ಬಹಿರಂಗವೆಂಬುದಿಲ್ಲ. ಶರಣ ವ್ಯಷ್ಟಿ ಭಾವವಳಿದು ಸಮಷ್ಟಿ ಸ್ವಭಾವದಲ್ಲಿರುತ್ತಾನೆ. ಆತನಿಗೆ ಸಂಕುಚಿತ ಜಾತಿ ಸೀಮೆಗಳಿಲ್ಲ.

“ಧರೆಗೆ ಸೂತಕವುಂಟೆ ? ವಾರಿಧಿಗೆ ಹೊಲೆಯುಂಟೆ ? ಉರಿವ ಅನಲಂಗೆ ಜಾತಿ ಭೇದವುಂಟೆ ? ಹರಿದು ಚರಿಸುವ ಅನಿಲಂಗೆ ಸೀಮೆಯುಂಟೆ ? ಆಕಾಶಕ್ಕೆ ದಾರಿಬೇರೆಯುಂಟೆ ? ಇನಿತರಿಂದೊದಗಿದ ಘಟವನಾರು ಹೊಲ್ಲೆಂಬರು ? ಸಾರ ಸರ್ವವು ಕೂಡಲ ಚೆನ್ನ ಸಂಗಮದೇವಾ, ನಿಮ್ಮ ಶರಣಂಗೆ !” ಈ ವೈಶಾಲ್ಯ ಈ ನೈರ್ಮಲ್ಯ ಗುರುದೇವನ ಕೃಪೆಯಿಲ್ಲದೆ ಬಾರವು. ಗುರುಕೃಪೆಯಿಂದೈತಂದ ಗುರುಲಿಂಗಕ್ಕೂ ಶರಣಾಂಗಕ್ಕೂ ಇರುವ ಭೇದಾಭೇದ ಸಿದ್ಧಾಂತ ಸಾರವನ್ನು ಸಮ್ಯಜ್ಞಾನಿ ಚೆನ್ನಬಸವಣ್ಣನು ಕೆಳಗೆ ಕಾಣಿಸಿದ ತನ್ನ ಎರಡು ವಚನಗಳಲ್ಲಿ ಸಾರಭೂತವಾಗಿ ಸುಂದರವಾಗಿ ನಿರ್ವಚಿಸಿದ್ದಾನೆ :

“ಪರಬೊಮ್ಮವೆ ಶರಣನ ಶಿರದರಮನೆಯಿಂದ ಕರದರಮನೆಗೆ ಗುರುಕೃಪೆಯಿಂದ ಲಿಂಗಮೂರ್ತಿಯಾಗಿ ಬಿಜಯಂಗೈದಿರ್ಪುದು ನೋಡಾ ! ಅದು ಕಾರಣ, ಶರಣಂಗೆಯೂ ಲಿಂಗಕ್ಕೆಯೂ ಭೇದಾಭೇದ ಸಂಬಂಧವಿರ್ಪುದು ಕಂಡಾ ! ಈ ಗೊತ್ತನರಿಯದೆ, ಯುಕ್ತಿಗೆಟ್ಟ ಮನುಜರು–ಲಿಂಗವು ಕೈಲಾಸದ ಶಿವನ ಕುರುಹಾದುದರಿಂದ ಪೂಜ್ಯವೆಂಬರು ; ಶರಣನು ಮನುಜನಾದುದರಿಂದ ಪೂಜಕನೆಂಬರು. ಇಂತೀ ಕೇವಲ ಭೇದ ಸಂಬಂಧವ ಕಲ್ಪಿಸುವ ಭವಭಾರಿಗಳು ಶಿವಾದ್ವೈತಕ್ಕೆ ದೂರವಾಗಿಪ್ಪರು ಕಂಡಾ ! ಅರೆಯರುವಿನ ನರಜೀವಿಗಳು ಶರಣರ ಸಾಮರಸ್ಯಕ್ಕೆ ಹೊರಗಾಗಿರ್ಪರು ಕಂಡಾ, ಕೂಡಲಚೆನ್ನಸಂಗಮದೇವಾ!”

“ನಮ್ಮ ಶರಣ ಅಂತರಂಗದ ಅಷ್ಟವಿಧಾರ್ಚನೆಯ ಮಾಡಿ, ಸುಜ್ಞಾನ ದೃಷ್ಟಿಯಿಂದ ನೋಡಲು. ಆ ಜ್ಯೋತಿರ್ಲಿಂಗ ಒಂದೆರಡಾಯಿತ್ತು, ಎರಡು ಮೂರಾಯಿತ್ತು; ಮೂರಾರಾಯಿತ್ತು, ಆರೊಂಬತ್ತಾಯಿತ್ತು; ಒಂಬತ್ತು ಹದಿನೆಂಟಾಯಿತ್ತು, ಹದಿನೆಂಟು ಮೂವತ್ತಾರಾಯಿತ್ತು; ಆ ಮೂವತ್ತಾರು ಇನ್ನೂರ ಹದಿನಾರಾಯಿತ್ತು, ಇನ್ನೂರ ಹದಿನಾರು ಸಾವಿರದೇಳುನೂರೆಪ್ಪತ್ತೆಂಟಾಯಿತ್ತು; ಆ ಲಿಂಗಗಳೆ ಶರಣನ ರೋಮದ ಕುಳಿಯಲ್ಲಿ ನಿಂದು ಸರ್ವಾಂಗಲಿಂಗವಾಯಿತ್ತು; ಆ ಲಿಂಗ ಶರಣಂಗೆ ಚೈತನ್ಯವಾಯಿತ್ತು. ಆ ಶರಣನೆ ಲಿಂಗಕ್ಕೆ ಚೈತನ್ಯವಾಗಲು ಶರಣ ಸತಿ ಲಿಂಗಪತಿಯೆಂಬೆರಡಳಿದು ಒಂದಾಯಿತ್ತು. ಲಿಂಗ ಹಿರಿದು ಆಗ

ಕಿರಿದು ಎಂಬ ನ್ಯಾಯ ಇಲ್ಲದೆ ಹೋಯಿತ್ತು. ಅದೆಂತೆಂದಡೆ: ದೀಪದಿಂದ ದೀಪ ಹುಟ್ಟಿದಲ್ಲಿ ಆವ ಆವ ದೀಪ ಮೊದಲೆಂಬುದು ಕಾಣದಂತೆ, ಲಿಂಗಪ್ರಾಣನಾದ ಶರಣಂಗೆ ಶರಣ ಪ್ರಾಣವಾದ ಲಿಂಗಕ್ಕೆ ಭೇದವಿಲ್ಲ. ಹರಗುರು ವಾಕ್ಯದಲ್ಲಿ ಶರಣ-ಲಿಂಗದಾಚರಣೆ ಇಂತಿಹುದು; ಕೂಡಲ ಚನ್ನ ಸಂಗಮದೇವಾ!"

೩. ಶರಣನ ಶಿವಲಿಂಗ

ಒಡಲ ಕವಲ ಬಗೆಯ ನಡೆಗೆ ಕಣ್ಣೆಂಜಲ ನೋಟವೇ ಕಾರಣ. ನೋಟ ಭೇದದಿಂದ ಒಡಲು ಸುಳುಹುಗಳ ಭೇದವುಂಟಾಗಿದೆ, ಕಾಲ ಕರ್ಮಗಳು ಕಲ್ಪಿತವಾಗಿವೆ. 'ಎಡೆವರಿಯದ ಪೂಜೆ'ಗೆ ಎಡೆಯಿಲ್ಲದಾಗಿದೆ. ಬೆಳಗಿನ ಪೂಜೆ ಬೈಗಿಗೆ ಎಂಜಲೆನಿಸಿದೆ. ಜಠರಾಗ್ನಿಯ ಹಂಗಿಗೊಳಗಾಗಿ ಜ್ಯೋತಿರ್ಲಿಂಗದ ಸ್ವಯವರಿಯದಂತಾಗಿದೆ. ನಿಜನಿಷ್ಠೆ, ನಿಜಸತ್ವ, ನಿಜದರಿವು, ಶುದ್ಧ ಮನ-ಶುದ್ಧ ಭಾವಗಳು ಇಲ್ಲದಾಗಿವೆ. ಸಹಜ ಸಂಬಂಧ ದನುವು ಹುಟ್ಟದಾಗಿದೆ. "ಪೂಜಿಸುವನ್ನಕ್ಕ ಫಲದಾಯಕ ಕಂಡಯ್ಯಾ. ಸಹಜ ಸಂಬಂಧವನುವು ಹುಟ್ಟದನ್ನಕ್ಕ ಎರವೆಂದೆನಿಸುವುದು ಗಮನ ನಿರ್ಗಮನವಾಗದನ್ನಕ್ಕ ಆಶೆಯಾಮಿಷವಳಿಯದನಕ್ಕ ಲಿಂಗಪೂಜೆಯಲ್ಲಿಯದೊ ? ಘಟದೊಳಗೆ ದಿಟವಾಗಿದ್ದ ಪಂಚಭೂತ ಭಾವವಳಿಯದೆ ಕೂಡಲ ಚನ್ನಸಂಗಯ್ಯನ ಮುಟ್ಟಲಾಗದು." ಹೊರಗಿನ ವಾಸನೆಯಂತೆ ಒಳಗಿನ ವಾಸನೆಯೂ ಒಳಿತಾದುದಾಗಬೇಕೆಂಬುದೇ ಆಚಾರ ಲಿಂಗದ ಆರಾಧನೆಯ ಗುರಿ; ಆಹಾರದ ಅಭಿರುಚಿಯಂತೆ ಅರಿವಿನ ಅಭಿರುಚಿಯನ್ನು ಹೆಚ್ಚಿಸಿಕೊಳ್ಳುವುದೆ ಗುರುಲಿಂಗಾರಾಧನೆಯ ಗುರಿ. ಬಾಹ್ಯ ಸೌಂದರ್ಯದ ನಿರೀಕ್ಷಣಾಪೇಕ್ಷೆಯಂತೆ ಆತ್ಮಸೌಂದರ್ಯ ನಿರೀಕ್ಷಣಾಪೇಕ್ಷೆಯುಂಟಾಗುವುದೆ ಶಿವಲಿಂಗ ಸಮಾರಾಧನೆಯ ಸದುದ್ದೇಶ. ಈ ಮೂರರ ಕುಳವನರಿತರೆ ಮಾರ್ಗಕ್ರಿಯೆ ಮೈಗೂಡಿದಂತಾಗುತ್ತದೆ ಮೀರಿದ ಕ್ರಿಯೆಗೆ ಮುಂದುವರಿಯಲು

ಅಳಿವುಂಟಾಗುತ್ತದೆ. ಹೃದಯಕಮಲ ಅರಳುತ್ತದೆ. ಅಂಗ–ಲಿಂಗಗಳೆರಡರ ಏಕಾರ್ಥದ ಏಕಾರತಿ ಬೆಳ್ಳನೆ ಬೆಳಗುತ್ತದೆ. "ತಿಳಿದುಪ್ಪ ಘಟ್ಟಿದುಪ್ಪಕ್ಕೆ ಭೇದವುಂಟೆ ? ದೀಪಕ್ಕೆ ದೀಪ್ತಿಗೆ ಭಿನ್ನವುಂಟೆ ? ಆತ್ಮಕ್ಕೆಯೂ ದೇಹಕ್ಕೆಯೂ ಸಂದುಂಟೆ ? ಕ್ಷೀರಕ್ಕೆಯೂ ಸ್ವಾದಕ್ಕೆಯೂ ಭೇದವುಂಟೆ ? ಇದು ಕಾರಣ, ಸಾಕಾರವೆ ನಿರಾಕಾರವೆಂದರಿಬು, ಅಂಗಲಿಂಗ ಸಂಬಂಧವಿಲ್ಲದವರ ಸಂಗ ಭಂಗವೆಂದು ಕೂಡಲಚೆನ್ನಸಂಗಯ್ಯನ ಶರಣರು ಮೆಚ್ಚರು." "ಅಂಗದ ಮೇಲೆ ಆಚಾರಲಿಂಗ, ಪ್ರಾಣದ ಮೇಲೆ ಜಂಗಮಲಿಂಗ, ಆತ್ಮನ ಮೇಲೆ ಸಮ್ಯಗ್ ಜ್ಞಾನಲಿಂಗ ಸ್ವಾಯತವಾಯಿತ್ತು. ಇಂತೀ ತ್ರಿವಿಧಕ್ಕೆ ತ್ರಿವಿಧಸ್ವಾಯತವಾಗಿಪ್ಪ ನಮ್ಮ ಕೂಡಲ ಚೆನ್ನಸಂಗನ ಶರಣಂಗೆ ನಮೋ ಸಮೋ ಎನುತಿದ್ದೆನು."

ಹೊರಗೆ ಹಸು ಕಟ್ಟಿ ಹಾಲಕುಡಿಯುವವರು ಹಲವರು. ಆದರೆ ಚಲುವೆಂಬ ಹಸುಕಟ್ಟಿ ಆತ್ಮಸೌಂದರ್ಯಾಮೃತವ ಕುಡಿದವರು ವಿರಳ. ಕಣ್ಣು ಕಟ್ಟಿದರೆ ಕಣ್ಣೇ ಕಾಮಧೇನು. ಆಲಿ ನಿಂತರೆ ಬಿಂದು ನಿಲ್ಲುವುದು ಊರ್ಧ್ವಬಿಂದುವಾಗುವುದು. ಭಕ್ತಿ ಬಿಂದುವಾಗುವುದು. ಚಿನ್ನಾದಾನುಸಂಧಾನದ ಸದಿಚ್ಛೆ ಉದಿಸುವುದು. ಚಿತ್ಕಳೆಯ ದರ್ಶನ ದೀಪ್ತಿ ಉಂಟಾಗುವುದು ಅಂತಾದಾಗ ಕಾಯ ಗುರುವಾಗಿ ಪ್ರಾಣಲಿಂಗವಾಗಿ ಜ್ಞಾನ ಜಂಗಮವಾಗಿ ಕ್ರಮವಾಗಿ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಗಳ ಪ್ರಾಪ್ತಿಯಾಗುತ್ತದೆ ಶರಣನಿಗೆ ! ಪರಮ ಪರಿಣಾಮವುಂಟಾಗೇತ್ತದೆ ಶರಣನಿಗೆ ! ರೂಪ ಪ್ರಸಾದವಾಗಿ ಸ್ವರೂಪ ಸಿದ್ಧಿಯಾಗುತ್ತದೆ. ಭೂತಗುಣಗಳು ಹೋಗಿ ಆತ್ಮಗುಣವುಂಟಾಗಿ ಕಾಯ ಪ್ರಸಾದಕಾಯವಾಗಂತ್ತದೆ. ರೂಪು ರುಚಿ ತೃಪ್ತಿಗಳು ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಗಳಾಗುತ್ತವೆ. ಶಿವಲಿಂಗಾರಾಧನೆಯಿಂದ ಶರಣ ತ್ರಿವಿಧ ಪ್ರಸಾದಿಯಾಗುತ್ತಾನೆ. ಪ್ರಸಾದ ಲಿಂಗಾನುಭವವನ್ನು ಅಳವಡಿಸಿಕೊಳ್ಳುತ್ತಾನೆ. ಪ್ರಕೃತಿಗುಣಗಳನ್ನು ಪಲ್ಲಟಗೊಳಿಸುತ್ತಾನೆ. ಕಾಯ ಪ್ರಾಣ ಜೀವಗಳನ್ನೇ ಪ್ರಸಾದವನ್ನಾಗಿಸುತ್ತಾನೆ.

ಅರ್ಪಣ ವಿಧಾನದಲ್ಲಿ ಪ್ರಸಾದಿ ಪ್ರಥಮಿಗನು. ಏಕೆಂದರೆ ಮೊದಲು ರೂಪಾರ್ಪಣವಾಗಬೇಕು. "ರೂಪನರ್ಪಿತವ ಮಾಡಿದ ಬಳಿಕ, ರುಚಿಯ

ನರ್ಪಿತವ ಮಾಡಬೇಕು. ರುಚಿಯನರ್ಪಿತವ ಮಾಡಿದ ಬಳಿಕ, ಮುಟ್ಟಿದ ಕೈ ವ್ರತಗೇಡಿಯಾಗಲೇ ಬೇಕು. ಕೂಡಲ ಚನ್ನಸಂಗಯ್ಯಾ, ನಿಮ್ಮ ಪ್ರಸಾದಿಗೆ ನಮೋ ನಮೋ ಎಂಬೆ." ಅರ್ಪಣದ ಅವಧಾನ ಅವಶ್ಯ. ಅದಿಲ್ಲದೆ ಪದಾರ್ಥ ಪ್ರಸಾದವಾಗದು. ಪ್ರಪಂಚ ಪರಮಾರ್ಥವಾಗದು. ಮಾನವ ಶರಣನಾಗನು. ಅಂಗಲಿಂಗವಾಗದು. "ಸಾವಧಾನಿ ಸರ್ವಸಂಸಾರಿಯಲ್ಲ, ಸಂದೇಹಿಯಲ್ಲ, ಪ್ರಪಂಚಿಯಲ್ಲ; ಅರ್ಪಿತಕೆ ಅರಿವುಳ್ಳನ್ನಕ್ಕ ಶರಣನಲ್ಲ, ಪ್ರಸಾದಿಯಲ್ಲ, ಲಿಂಗೈಕ್ಯನಲ್ಲ, ಇಂತೆಂದುದು ಕೂಡಲ ಚನ್ನಸಂಗಯ್ಯನ ವಚನ."ಅರ್ಪಣದಲ್ಲಿ ಅವಧಾನ-ಅರಿವುಗಳಿರಬೇಕು. ಅನುಭವ ಆನಂದಗಳಲ್ಲಿ ಅವು ವಿಶ್ರಾಂತಿಗೊಳ್ಳಬೇಕು. ಲಿಂಗೈಕ್ಯನಾಗುವ ನಿಜದ ಹೊಲಬಿದು. "ಸ್ಥಲದಿಂದ ಸ್ಥಲವನರ್ಪಿಸುವುದು ಒಡಲಗುಣ; ನಿಃಸ್ಥಲದಿಂದ ನಿಃಸ್ಥಲವನರ್ಪಿಸುವುದು ಪ್ರಾಣನ ಗುಣ; ನೋಡಿ ಆರೈವುದೆ ಅರ್ಪಿತದ ಗುಣ. ಸ್ಥಲವೆನ್ನದೆ ನಿಃಸ್ಥಲವೆನ್ನದೆ ನೋಡದೆ ಆರಯ್ಯದೆ ಅರ್ಪಿಸುವುದು ನಿರ್ಗುಣ. ಇಂತಹ ಮಹಂತರ ತೋರಿ ಬದುಕಿಸಯ್ಯಾ ಕೂಡಲ ಚನ್ನಸಂಗಮದೇವಾ." "ಗುರುವಿಂಗೆ ಗುರುವಾಗಿ ಗುರುಪ್ರಸಾದವ ಕೊಂಬುದು. ಲಿಂಗಕ್ಕೆ ಲಿಂಗವಾಗಿ ಲಿಂಗಪ್ರಸಾದವ ಕೊಂಬುದು. ಪ್ರಸಾದಕ್ಕೆ ಪ್ರಸಾದವಾಗಿ ಪ್ರಸಾದವ ಕೊಂಬುದು. ಇಂತೀ ಚತುರ್ವಿಧ ಸ್ಥಲಕ್ಕೆ ಚತುರ್ವಿಧವಾಗಬಲ್ಲಡೆ ಕೂಡಲ ಚನ್ನ ಸಂಗಯ್ಯನಲ್ಲಿ ಲಿಂಗೈಕ್ಯವು." ಅಂದರೆ ರೂಪಿಗೆ ರೂಪಾಗಿ ರೂಪಿಲ್ಲದ ಚಲುವನ್ನು, ರುಚಿಗೆ ರುಚಿಯಾಗಿ ರುಚಿಯಿಲ್ಲದ ಸ್ವಾದವನ್ನು, ತೃಪ್ತಿಗೆ ತೃಪ್ತಿಯಾಗಿ ತೃಪ್ತಿಯಿಲ್ಲದಿರುವಿಕೆಯನ್ನು ಪ್ರಸಾದಕ್ಕೆ ಪ್ರಸಾದವಾಗಿ ಪ್ರಸಾದ ಪರಿಣಾಮವನ್ನು ಬೆರೆದೇಕವಾಗುವಿಕೆಯೆ ಲಿಂಗೈಕ್ಯ.

ಭವಿಭಕ್ತನಾಗುವುದು ಮಾರ್ಗಕ್ರಿಯೆ. ಭಕ್ತ ಭವಿಯಾಗುವುದು ಮೀರಿದ ಕ್ರಿಯೆ. ಆ ಭವಿತನ ಬೇರೆ. ಅದು ಪ್ರವೃತ್ತಿಯ ಭವಿತನವಲ್ಲ; ಅದು ನಿವೃತ್ತಿಯ ನಿಷ್ಪತ್ತಿ ತನದ ಭವಿತ್ವ. ಅದರಿಂದ ಭವ ನಾಸ್ತಿಯಾಗುತ್ತದೆ. ಅದು ಮೀರಿದ ಕ್ರಿಯೆ; ಮಹಾ ಪ್ರಕ್ರಿಯೆ.

"ಭವಿಯು ತಂದು ಭಕ್ತನ ಮಾಡುವುದನಾಚಾರ; ಭಕ್ತನ ತಂದು ಭವಿಯ ಮಾಡುವುದಾಚಾರ. ಭವಿ ಮುಟ್ಟಿ ಪ್ರಸಾದವಾಯಿತ್ತು; ಭಕ್ತ ಮುಟ್ಟಿ ಓಗರವಾಯಿತ್ತು. ಇದು ಕಾರಣ ಕೂಡಲ ಚೆನ್ನಸಂಗಮನಲ್ಲಿ ಭವಿಯೆ

ಪ್ರಸಾದವ ಕೊಂಡೆನ್ನ ಭವಂ ನಾಸ್ತಿಯಾಯಿತ್ತು." ಜನ್ಮ ಕರ್ಮ ಭವಿತನ ಬೀಳಾದುದು. ಜನ್ಮಕರ್ಮಗಳ ಸೋಂಕಿಲ್ಲದಿರುವುದೂ ಭವಿತನವೆ! ಆದರೆ ಅದು ಸಹಜ ವಿಕಾರರಹಿತ. ಮೂಲ ಚೈತನ್ಯಕ್ಕೆ ಸರ್ವಶೂನ್ಯನಿರಾಲಂಬಕ್ಕೆ ಸಾಂಸ್ಕಾರಿಕ ಭಕ್ತತ್ವವನ್ನು ಕೊಡಲು ಸಾಧ್ಯವಿಲ್ಲ. ಸಾಂಸ್ಕಾರಿಕ ಭಕ್ತತ್ವದಿಂದ ಸಹಜ ಸ್ವಾಭಾವಿಕ ಭವಿತನಕ್ಕೇರುವುದೆ ನಿಜವಾದ ಆಚಾರ. ಭಕ್ತತ್ವ ಮಧ್ಯಂತರದ್ದು ಭವಿತ್ವ ಆದ್ಯಂತಗಳಲ್ಲಿ ಇರುವಂತಹದ್ದು. ಮೂಲ ಭವಿಗೆ ಕರಣೇಂದ್ರಿಯಗಳ ಸಂಪರ್ಕವಿಲ್ಲ. ಅದರಿಂದಾಗಿ ಆ ಭವಿ ಮುಟ್ಟಿದ್ದು ಪ್ರಸಾದ. ಆದರಿಂದ ಭವವಿಲ್ಲದಂತಾಗುತ್ತದೆ. ಆ ಪರಂಜ್ಯೋತಿ ಸ್ವರೂಪನಾದವನಿಗೆ ಹುಟ್ಟು ಸಾವುಗಳೆಂದರೇನು ? ಅಂತಹ ಆ ಪರವಸ್ತುವಿನ ಪ್ರಸಾದ ಪಡೆದ ಶರಣನಿಗೂ ಕರಣೇಂದ್ರಿಯವೃತ್ತಿಗಳಿರುವುದಿಲ್ಲ. ಇದರಿಂದಾಗಿ ಈತನಿಗೆ ಭವಭಯವಿಲ್ಲ. ಅವಧಾನ ಸುಯಿಧಾನಗಳಿರುವುದಿಲ್ಲ. ಸಂದೇಹ ಬಂಧನವಿರುವುದಿಲ್ಲ. ಶರಣನು ಶಿವಸುಖದ ಪರಿಣಾಮದಲ್ಲಿ ಪರವಶನಾಗಿರುತ್ತಾನೆ. ಅರ್ಚನಾರ್ಪಣಗಳ ಕ್ರಮಕ್ಕೆ ಒಳಗಾಗನು. 'ಅಹುದೆಂಬುದ ನುಡಿಯ, ಅಲ್ಲವೆಂಬುದ ನುಡಿಯ; ಬೇಕು ಬೇಡೆಂಬುದಿಲ್ಲ. ಸಾವಯವೆಂಬುದಿಲ್ಲ; ನಿರವಯದಲ್ಲಿ ಸಕಲಭೋಗಂಗಳ ಭೋಗಿಸುವನು; ಕೂಡಲಚೆನ್ನಸಂಗಾ ನಿಮ್ಮ ಪ್ರಸಾದಿ."

ಪ್ರಸಾದಲಿಂಗದ ಶಿವಲಿಂಗವನ್ನೊಲಿಸಿದಾತನು ಶರಣಪ್ರಸಾದಿ. ಆತ ಮಹಾಪ್ರಸಾದಿ, ಅಚ್ಚಪ್ರಸಾದಿ; ನಿಚ್ಚಪ್ರಸಾದಿ. ಆತನಿಗೆ ಬೇರೊಂದರ ಹಂಗಿರುವುದಿಲ್ಲ; ಆಲಂಬನವಿರುವುದಿಲ್ಲ. ಆತನು "ಆಲಂಬಿತವೆನ್ನದೆ, ಆಲಂಬದೊಳಡಗದೆ, ಆಲಂಬವ ಬಯಸದೆ, ಸೂಕ್ಷ್ಮ ಶಿವಪಥಿಕ ಪ್ರಸಾದಿ. ಸೂಕ್ಷ್ಮವೆನ್ನದೆ, ಸೂಕ್ಷ್ಮವ ಬಯಸದೆ, ಸೂಕ್ಷ್ಮನಿರಾಕರಣೆ ಪರಿಕರಣೆಯೆನ್ನದೆ ನಿತ್ಯನಿಜವಾದ ಪ್ರಸಾದಿ. ಇದು ಕಾರಣ ಕೂಡಲಚೆನ್ನಸಂಗಯ್ಯ, ಸುಯಿಧಾನಕ್ಕೆಡೆಗುಡದ ಪ್ರಸಾದಿ." "ಸ್ಥೂಲ ಸೂಕ್ಷ್ಮವೆಂಬ ಶಬ್ದ ಪರಿಭಾವ ತೋರದೆ, ಸಂಗ ಮಹಾಸಂಗದ ಮರ್ಮ ದಾಸೋಹ ಹೃದಯಕ್ಕೆ ಸಾಹಿತ್ಯವಾದ ಭಕ್ತಂಗೆ ಅರ್ಪಿತ ಅನರ್ಪಿತವೆಂಬ ಸಂಕಲ್ಪವಿಕಲ್ಪರಹಿತ....ಕೂಡಲಚೆನ್ನಸಂಗಯ್ಯಾ, ನಿಮ್ಮ ಶರಣ ಮಹಾಪ್ರಸಾದಿ." "ಕಾಯಕ್ಕೆ ಸಾಹಿತ್ಯವೆಲ್ಲಿಯಾದಡೆಯೂ ಉಂಟು; ಆತ್ಮಸಾಹಿತ್ಯವಪೂರ್ವ." ಶರಣನದು ಆತ್ಮಸಾಹಿತ್ಯ. ಅದು ಚಿರಂತನ

ಸತ್ಯ. ಪರಮ ಪ್ರಾಸಾದಿಕ ಸಾಹಿತ್ಯ. ಪರಮ ಪರಿಣಾಮಂಕಾರಕ ಶಿವ ಸಾಹಿತ್ಯ. ಆ ಸ್ವಾನುಭವ ಶಿವಸಾಹಿತ್ಯದ ‘ಪ್ರಸಾದ ಭೋಗೋಪಭೋಗದಲ್ಲಿ ಆಪ್ಯಾಯನ ಪ್ರಸಾದಿ; ಕೊಡದ ಕೊಳದ ಉಭಯರಹಿತನು; ಕ್ರೀಹಿಂದಾಗಿ ಲಿಂಗ ಮುಂದಾದ ಪ್ರಸಾದಿ. ತನಗೆ ತಾನೇ ಪ್ರಸಾದ, ತನಗೆ ತಾನೇ ಪ್ರಸಾದಗ್ರಾಹಕನು. ಇದು ಕಾರಣ, ಕೂಡಲ ಚನ್ನಸಂಗಯ್ಯಾ, ನಿಮ್ಮ ಪ್ರಸಾದಿಗೆ ನಮೋ ನಮೋ ಎಂಬೆ.”

——

೪. ಶರಣನ ಜಂಗಮಲಿಂಗ

ಭೂತಾಕಾಶವಿಡಿದು ಸುಳಿವ ಗಾಳಿ ಸಮಷ್ಟಿ ಜಂಗಮ. ಹೃದಯಾಕಾಶವಿಡಿದು ಸುಳಿವ ಉಸಿರು ವ್ಯಷ್ಟಿ ಜಂಗಮ. ಇವೆರಡೂ ಸಾಮಾನ್ಯ ಜಂಗಮ. ಶರಣನ ಜಂಗಮಲಿಂಗ ಅಸಾಮಾನ್ಯ ಜಂಗಮ. ಅದು ಗಮನವಿಲ್ಲದ ಜಂಗಮ ಲಿಂಗ. ಗಮನ ಪದ ಗಮನೀಯ; ಧ್ವನಿಪೂರ್ಣ. ಅದು ಸುಳಿದಾಟ ಸೂಚಕ ಮಾತ್ರವಲ್ಲ. ವಾಸನೆಯನ್ನು ಲಕ್ಷ್ಯವನ್ನು ದೃಷ್ಟಿಯನ್ನು ಸೂಚಿಸುವ ಸಾಂಕೇತಿಕ ಶಬ್ದ. ಗಾಳಿಯಲ್ಲಿ ಸುಳಿಯುವಿಕೆಯೊಡನೆ ಸೋಂಕುವ ಗುಣವೂ ಇದೆ. ವಾಸನೆಯ ಹೊತ್ತು ತರುವ ಗುಣವೂ ಇದೆ. ಇವೆಲ್ಲವನ್ನು ಸಂಯಮಿಸಿದ, ಉಸುರಿಗೆ ಉಸುರಾದ ಚೈತನ್ಯವೆ ಶರಣನ ಜಂಗಮಲಿಂಗ. ಶರಣ ಸಂಯಮಿ. ಕಾಯ ವಿಷಯಗಳ ವಾಸನೆಗೆ ಒಳಗಾಗುವವನಲ್ಲ. ಅಂತರ್ಲಕ್ಷ್ಯ, ಅಂತರ್ದೃಷ್ಟಿಗಳುಳ್ಳವನು. “ತಾಳು ಬೋಳು ಕಪ್ಪರವೆಂದೆಂಬರು: ತಾಳಾವುದು ಬೋಳಾವುದು; ಕಪ್ಪರವಾವುದೆಂದರಿಯರು. ಕಾಯದ ಕಳವಳದವಗುಣವ ತಾಳಬಲ್ಲಡೆ ತಾಳು; ಸಂಸಾರ ವಿಷಯವ ಬೋಳಯಿಸಬಲ್ಲಡೆ ಬೋಳು; ಪರದಲ್ಲಿ ಪರಿಣಾಮಿಸಬಲ್ಲಡೆ ಕಪ್ಪರ. ಅಂತಲ್ಲದಿದ್ದಡೆ, ಕೂಡಲ ಚನ್ನಸಂಗಮದೇವರಲ್ಲಿ ಢೊಂಬಳ ಬೋಳು.”

ಶರಣ ಕಾಯಕಷ್ಟಗಳನ್ನು ತಾಳಬಲ್ಲ. ಸಾಂಸಾರಿಕ ವಿಷಯಗಳನ್ನು ಬೋಳಿಸಬಲ್ಲ. ಹೊರಗಿನ ವೇಷಕ್ಕೆ ಮೋಸಕ್ಕೆ ಮನಸ್ಸನ್ನು ಮಾಡುವವನಲ್ಲ. ಆ ಪರಮ ಪರಿಣಾಮವೇ ಆತನ ಕಪ್ಪರ; ಅಂದರೆ ಅದೇ ಆತನ ನಿಜಾಂಬರ. ಡೊಂಬರ ಡೋಲಿನಂತೆ ಆತನು ಜಳ್ಳು ಮಾತಾಡುವವನಲ್ಲ. ಆತನ ಪ್ರತಿ ಮಾತಿನಲ್ಲಿ ಕೃತಿಯಲ್ಲಿ ಚೈತನ್ಯವಿರುತ್ತದೆ: ಚಿಜ್ಜ್ಯೋತಿಯಿರುತ್ತದೆ. ಇವಿಲ್ಲದ ಜಂಗಮ ಅದು ಜಂಗಮವಲ್ಲ; ಅದು ಲಿಂಗವಲ್ಲ. ಸಾಮಾನ್ಯರಂತೆ ಉಸಿರೆತ್ತಿ ಇರುವವನು ಶರಣನಲ್ಲ: ಶರಣನ ಪ್ರಾಣಲಿಂಗಿ ಮೊದಲೇ ಅಲ್ಲ. ಜಂಗಮಲಿಂಗ ಜ್ಯೋತಿಯಿರುವುದಿಲ್ಲ.

ಶರಣನಿಗೆ ಆಚಾರ ಒಂದು ಕಪ್ಪರ; ವಿಚಾರ ಇನ್ನೊಂದು ಕಪ್ಪರ. ಬೇರೆ ಪ್ರಾಕೃತಿಕ ಕಪ್ಪರಗಳ ಉಪಾಧಿ ಶರಣನಿಗಿರುವುದಿಲ್ಲ. ನಿಜವಾದ ಜಂಗಮ ಲಿಂಗತನ ಅರಿವು ಆಚಾರ ಅನುಭವಗಳಲ್ಲಿರುತ್ತದೆ. ಇವಿರುವಲ್ಲಿ ಪ್ರಾಸಾದಿಕ ಜಂಗಮ ಲಿಂಗತನ ಪ್ರತಿಷ್ಠಿತವಾಗಿರುತ್ತದೆ; ಪ್ರತಿಭಾನ್ವಿತವಾಗಿರುತ್ತದೆ. "ಬರಿಯ ಬೋಳುಗಳೆಲ್ಲಾ ಜಂಗಮವೆ? ಜಡಜೀವಿಗಳೆಲ್ಲಾ ಜಂಗಮವೆ? ವೇಷಧಾರಿಗಳೆಲ್ಲಾ ಜಂಗಮವೆ? ಇನ್ನಾವುದು ಜಂಗಮವೆಂದಡೆ: ನಿರ್ಗಮನವೆ ಜಂಗಮ; ನಿಸ್ಸೀಮವೆ ಜಂಗಮ; ನಿರ್ದೇಹಿಯೆ ಜಂಗಮ; ನಿಜೈಕ್ಯವೆ ಜಂಗಮ. ಇಂಥ ಜಂಗಮದ ಸುಳುಹ ಕಾಣದೆ ಕೂಡಲ ಚನ್ನಸಂಗಮದೇವ ತಾನೆ ಜಂಗಮವಾದ." "ಮಾಯೆವಿಡಿದು ಜೀವಿಸುವ ಜೀವಕವಲ್ಲ: ಅದೇನು ಕಾರಣವೆಂದಡೆ, ಆತ ಘನಲಿಂಗವಿಡಿದು ಜೀವಿಸುವ ಜೀವಕನಾಗಿ! ವಿಷಯವಿಡಿದು ಭುಂಜಿಸುವ ಭುಂಜಕನಲ್ಲ; ಅದೇನು ಕಾರಣವೆಂದಡೆ, ಆತ ಮಹಾ ಪ್ರಸಾದವಿಡಿದು ಭುಂಜಿಸುವ ಭುಂಜಕನಾಗಿ! ವೇಷವಿಡಿದು ರಂಜಿಸುವ ರಂಜಕನಲ್ಲ; ಅದೇನು ಕಾರಣವೆಂದಡೆ, ಆತ ಸಹಜವಿಡಿದು ರಂಜಿಸುವ ರಂಜಕನಾಗಿ! ಇಂತೀ ತ್ರಿವಿಧವಿಡಿದು ಪರಮಾರ್ಥದಲ್ಲಿ ಆಚರಿಸುವ ಶರಣಂಗೆ ಶರಣೆಂಬೆನು ಕೂಡಲ ಚನ್ನಸಂಗಮದೇವಾ." ಇಂತಹ ಶರಣನಲ್ಲಿ ಪ್ರಾಸಾದಿಕ ಜಂಗಮಲಿಂಗ ಜ್ಯೋತಿರ್ಮಯವಾಗಿರುತ್ತವೆ. ಶರಣನ ಗಮನ ಉತ್ತಮವಾದುದರಲ್ಲಿರುತ್ತದೆ.

"ಉನ್ಮನಿಜ್ಞಾನದ ಗಮನದುದ್ಭವ, ಲೌಕಿಕದ ನಿಷ್ಠೆಯ ದೃಷ್ಟಿ, ಶಾಂಭವ ಜ್ಞಾನದ ಭಾವದ ಗಮನದ ಪ್ರಾಣದ ಪರಿಣಾಮದ ನಿಲವು, ಸುಜ್ಞಾನದ

ಗಮನದ ಭಾವವು ಉಪದೇಶ, ಪ್ರಸೂತದ ಭಾವ ಭೇದ. ಈ ತ್ರಿವಿಧದ ಸಾಭಾಷಣೆಯ ಕೂಡಲ ಚನ್ನಸಾಗನ ಶರಣ ಬಲ್ಲ.” “ಕಾಯವಿಲ್ಲದ ಸಂಸಾರ ಚೋದ್ಯ, ಸಾಸಾರವಿಲ್ಲದ ಕಾಯ ಚೋದ್ಯ, ಕಾಯದೊಳಗೊಂದು ನಿರಾಳ ಚೋದ್ಯ: ನಿರಾಳದೊಳಗೊಂದು ಕೂಡಲ ಚನ್ನಸಂಗಯ್ಯನೆಂಬ ಶರಣ ಸಮ್ಯಕ್ ಚೋದ್ಯ, ಮಹಾಚೋದ್ಯ!” ಶರಣನ ಸುರಾಳ ಕಾಯದಲ್ಲಿ ನಿರಾಳ ಜಂಗಮ ಲಿಂಗವಿರುವುದು ಮಹಾಚೋದ್ಯ.

---

೫. ಶರಣನ ಪ್ರಸಾದಲಿಂಗ

“ಅರ್ಪಿತವಿಲ್ಲದ ಆಪ್ಯಾಯನಿ, ಪ್ರಸಾದವಿಲ್ಲದ ಪರಿಣಾಮಿ” ಶರಣ. ಶರೀರವಿಲ್ಲದ ಸಂಬಂಧಿ ಶರಣ, ಮತ್ಸರವಿಲ್ಲದ ಮಹಿಮ. ಕರ್ಮವಿಲ್ಲದ ಕಾರಣಿಕ. ಶರಣ ವ್ಯೋಮಕಾಯ. ಆತನಿಗೆ ಪಾರ್ಥಿವಾಹಾರಕ್ಕಿಂತ ಆಕಾಶೀಯಾಹಾರ ಅಪೇಕ್ಷಣೀಯ. ಅನ್ನ ರಸಕ್ಕಿಂತ ಶಬ್ದರಸದ ಮೇಲೆ ಹೆಚ್ಚು ಪ್ರೇಮ. ಆದರಲ್ಲಿಯೂ ಲಿಂಗಸಾಹಿತ್ಯದ ಅಭಿಲಾಷೆ ಅತ್ಯಧಿಕ. ಆತನ ಆ ಸೊಳ್ನುಡಿ ಪರಮಾಕಾಶ ಜನ್ಯ; ಪರಮ ಪುಣ್ಯ. ಅದು ಲಿಂಗಕ್ಕೆ ಮೆಚ್ಚು; ಆದರಿಂದ ಲಿಂಗದ ಮೆಚ್ಚು. ಅದೇ ಜ್ಯೋತಿರ್ಲಿಂಗವಾಗಿ ಆದರಿಂದ ಶರಣ ಪರಿಣಾಮಿಸುತ್ತಾನೆ. ಆತನಿಗೆ ಮನವಿಲ್ಲವಾಗಿ ಮತ್ಸರವಿಲ್ಲ; ಕಾಯವಿಲ್ಲವಾಗಿ ಕರ್ಮವಿಲ್ಲ. ಆತ ಅಸಾಧಾರಣ ಕಾಯಕ ನಿರತ; ಸತ್ಯ ಶುದ್ಧ; ನಿತ್ಯಸಿದ್ಧ. ಆದರಿಂದ ಆತ ಕಾರಣಿಕ; ಕಾರಣ ಪುರುಷ. ಆತನಿಗೆ ಅರ್ಪಿತದ ಆಸೆಯಿಲ್ಲ. ಅಭಿಲಾಷೆಯಿಲ್ಲ. ಆದರೂ ಆತನು ಆಪ್ಯಾಯನಿ; ಸುಯಿದಾನಿ. ನಿರ್ಗುಣಿ. ನಿಜಸಂಧಾನಿ. ಪ್ರಸಾದಲಿಂಗದೊಳಗಿನ ಪ್ರಸಾದಲಿಂಗ ಪ್ರಸಾದಿ, ಆತನು ಪ್ರಸನ್ನಾತ್ಮನು. ‘ಪ್ರಸಾದವನೆ ಬಿತ್ತಿ ಪ್ರಸಾದವನೆ ಬೆಳದ. ಫಲದ ಪದಿಯ ಬೆಸಗೊಳಲಿಲ್ಲ. ಪದಾರ್ಥ ಕಾಯಪ್ರಸಾದಕ್ಕೆ ಭೇದವಿಲ್ಲ ; ಕೂಡಲ ಚನ್ನಸಂಗಾ ನಿಮ್ಮ ಶರಣಂಗೆ !” ಆತನಲ್ಲಿ ಭಾವ ಭೇದವಿಲ್ಲ. ಚಿತ್ತವಿಕಾರವಿಲ್ಲ, ಪ್ರಕೃತಿ

ಯಲ್ಲಿ ಪಾರ್ಥಿವಾಕಾರವಿಲ್ಲ. ಆತ ನಿರಂತರಲಿಂಗ ಸಂಗಿ; ನಿಜಾನಂದಾನುಂಪಗಿ ಆತ ಪ್ರಸಾದಿಯು ಪ್ರಸಾದಿ; ಸತ್ಯ ಸನ್ಮತ ಪ್ರಸಾದಿ. 'ಮನ ಬುದ್ಧಿ ಚಿತ್ತ ಅಹಂಕಾರ ಸನ್ಮತವಾದ ಪ್ರಸಾದಿ.' ಆತನಲ್ಲಿ ರೂಪುರುಚಿ ರಚನಗಳ ವಿಕಾರ ವಿರುವುದಿಲ್ಲ. ಆತ ಉಂಡು ಉಪವಾಸಿ; ಬಳಸಿ ಬ್ರಹ್ಮಚಾರಿ. ಬೇಕು ಬೇಡ ನ್ನದ ಸಹಜಿಗ. ಆತನು ಲಿಂಗಪ್ರಾಣಿಯಾಗಿ ಕಾಲದಿಂದ ಸವೆಯುವವನಲ್ಲ. ಜಂಗಮ ಪ್ರೇಮಿಯಾಗಿ ಕಲ್ಪಿತಕ್ಕೆ ಕೆಡುವವನಲ್ಲ. ಪ್ರಸಾದಸಂಬಂಧಿಯಾಗಿ ಪ್ರಪಂಚಕ್ಕೆ ಸವೆಯುವವನಲ್ಲ. ಲಿಂಗಾನುಭಾವಿಯಾಗಿ ಅರಿವು ಮರವೆಗಳಿಗೆ ಒಳಗಾಗುವವನಲ್ಲ, ಲಿಂಗದಲ್ಲಿ ಆತನ ಪ್ರಾಣ; ಪ್ರಾಣದಲ್ಲಿ ಪ್ರಸಾದ. ಪ್ರಸಾದವೆ ಆತನ ಚೇತನ. ಪ್ರಸಾದದಲ್ಲಿ ಕಾಯಾಶ್ರಿತ; ಪ್ರಾಣಸಂಚಿತ. ಶರಣನ ಕಾಯ ಲಿಂಗಕ್ಕೋಗರ; ಪ್ರಾಣ ಲಿಂಗಕ್ಕೋಗರ. ಸರ್ವಸೂತಕ ಸಂಹಾರ, ಅವನಿಗಿಲ್ಲ ಲೋಕ-ಲೌಕಿಕ ಪ್ರಕಾರ. ಶರಣನ ಅರಿವೆಲ್ಲ ಮಾಗಿರುತ್ತದೆ. ಆತನು ಅರಿಯಬೇಕಾದುದಿರುವುದಿಲ್ಲ. ಆಚರಿಸಬೇಕಾದುದಿರುವುದಿಲ್ಲ. ಆತನಿಗೆ ಯಾವ ಸಂಕಲ್ಪ, ಯಾವ ವಿಕಲ್ಪ, ಯಾವ ಸಂದೇಹ ಇರುವುದಿಲ್ಲ. ಅವನು ಸದಾ ಪ್ರಸಾದಿ, ಸದಾ ಪ್ರಮೋದಿ:

"ಶರಣಂಗಾಕಾಶವೆ ಅಂಗ; ಆ ಅಂಗಕ್ಕೆ ಸುಜ್ಞಾನವೆ ಹಸ್ತ,
ಆ ಹಸ್ತಕ್ಕೆ ಶಿವಸಾದಾಖ್ಯ, ಆ ಸಾದಾಖ್ಯಕ್ಕೆ ಪರಾಶಕ್ತಿ,
ಆ ಶಕ್ತಿಗೆ ಪ್ರಸಾದಲಿಂಗ, ಆ ಲಿಂಗಕ್ಕೆ ಶಾಂತ್ಯತೀತ ಕಳೆ,
ಆ ಕಳೆಗೆ ಶ್ರೋತ್ರೇಂದ್ರಿಯವೆ ಮುಖ, ಆ ಮುಖಕ್ಕೆ
ಶಬ್ದದ್ರವ್ಯಂಗಳನು ರೂಪುರುಚಿ ತೃಪ್ತಿಯನರಿದು
ಆನಂದ ಭಕ್ತಿಯಿಂದರ್ಪಿಸಿ, ಆ ಸುಶಬ್ದ ಪ್ರಸಾದವ ಭೋಗಿಸಿ
ಸುಖಿಸುತ್ತಿಹನು, ಕೂಡಲಚೆನ್ನಸಂಗಾ, ನಿಮ್ಮ ಶರಣ."

ಶರಣ ಸಮ್ಯಕ್ ಪ್ರಸಾದಿ, ಲಿಂಗಸಾಹಿತ್ಯ ಪ್ರಮೋದಿ: ಅದಕ್ಕೆ ತಕ್ಕ ಪರಿಕರ ಆತನಿಗಿದೆ, ಆತ ಶ್ರೋತ್ರಮುಖಿ, ಸುಶಬ್ದ ಪ್ರಸಾದ ಭೋಗದಲ್ಲಿ ಸುಖಿ. ಪ್ರಸಾದಲಿಂಗಕ್ಕೆ ಆತನ ತನುವೇ ಸೆಜ್ಜೆ, ಅದರಿಂದಾಗಿ ಆತನಿಗೆ ಅರ್ಪಿತವಿಲ್ಲ. ಆತನ ಚಿತ್ಪ್ರಾಣವೆ ಸಿಂಹಾಸನ, ಅದು ಕಾರಣ ಆತನಿಗೆ ಸುಳಿದಾಟವಿಲ್ಲ. ಆತನ

ನುಡಿಯೋ ಲಿಂಗ, ಆತನಿಗೆ ಬೇರೆ ಪದಾರ್ಥದ ಹಂಗಿಲ್ಲ. 'ಬಾಹ್ಯ ಪದಾರ್ಥದ ಲಾಭದವನಲ್ಲ, ಹೋಹ ಪದಾರ್ಥದ ಚೇಗೆಯವನಲ್ಲ, ಪ್ರಪಂಚವ ಹೊತ್ತುಕೊಂಡು ಭಾರದವನಲ್ಲ.'

ಶರಣನ ಸುಶಬ್ದ ಪ್ರಸಾದ ಯಾವಾಗಲೂ ಲಿಂಗಕ್ಕೆ ಮೀಸಲು. ಅದು ಸುಜ್ಞಾನಹಸ್ತದಲ್ಲಿ ಸದಾ ಸಜ್ಜಿತ. ಪರಿಪೂರ್ಣ ಪ್ರಸಾದಲಿಂಗಕ್ಕೆ ಸದಾ ಅರ್ಪಿತ. ಆತ ಸದಾ ಆನಂದಿತ, ಅವಿರಳಿತ. "ಎಲೆ ಶಿವನೆ, ನಿಮ್ಮಲ್ಲಿ ಸಾಲವಕೊಂಡು, ನಿಮ್ಮ ಶಿವಪುರವ ಹೊಗುವವನಲ್ಲಾ! ಪೃಥ್ವಿಯ ಸಾಲಕ್ಕೆ ಪೃಥ್ವಿಯನೆ ಕೊಟ್ಟು, ಅಪ್ಪುವಿನ ಸಾಲಕ್ಕೆ ಅಪ್ಪುವನೆ ಕೊಟ್ಟು, ತೇಜದ ಸಾಲಕ್ಕೆ ತೇಜವನೆ ಕೊಟ್ಟು, ವಾಯುವಿನ ಸಾಲಕ್ಕೆ ವಾಯುವನೆ ಕೊಟ್ಟು, ಆಕಾಶದ ಸಾಲಕ್ಕೆ ಅಕಾಶವನೆ ಕೊಟ್ಟು, ಇನ್ನಾರಿಗೂ ಪ್ರಸಾದವ ಕೊಡಲಿಲ್ಲವೆಂದು ಕೂಡಲಚನ್ನಸಂಗಮದೇವರಲ್ಲಿ ಹೊಳಹೊಕ್ಕ ಶರಣಂಗೆ ನಮೋ ನಮೋ ಎಂಬೆ."

ಗಂಧ ರಸರೂಪ ಸ್ಪರ್ಶ ಶಬ್ದಗಳನ್ನು ಸರ್ವಸ್ವವಾಗಿ ಸಮರ್ಪಿಸಿಬಿಟ್ಟರೆ ಪಂಚಭೂತಗಳನ್ನು ಕೊಟ್ಟಂತೆ! ಶರಣನ ಮನವಾಗಿ ಬಯಕೆ ಬೋಳಾಗಿ ಭ್ರಾಂತಿ ಬಯಲಾಗಿ ನಿಜಲಿಂಗ ನೆಲೆಗೊಂಡಿರುವುದರಿಂದ ಆನಂದ ಅಚ್ಚೊತ್ತಿರುವುದರಿಂದ ನಿಖಿಲ ಪ್ರಪಂಚವನ್ನು ನಿವೇದಿಸಲು ಸಮರ್ಥನಾಗಿರುತ್ತಾನೆ. ಸುಶಬ್ದ ಪ್ರಸಾದದ ಅನುಭವ ಆನಂದಗಳೇ ಶರಣನಿಗೆ ಸರ್ವಸ್ವವಾಗಿರುತ್ತವೆ. ಆತನ ಪ್ರಾಣ ಪ್ರಣವಾನುಸಂಧಾನದ ಮುಖಾಂತರ ಪರಮನಲ್ಲಿ ಒಂದುಗೂಡಿ ಆರೂಢ ನಿರ್ವಾಣದಲ್ಲಿರುತ್ತದೆ. ಆತನು ಮರ್ತ್ಯದಲ್ಲಿ ಇದ್ದ ಇರುವು ನಿಂತ ನಿಲವು ಮರ್ತ್ಯಕ್ಕೆ ಅಚ್ಚರಿ! ಏನೇ ಬರಲಿ, ಏನೇ ಹೋಗಲಿ ಅವನು ಅವನಾಗಿರುತ್ತಾನೆ. "ನೆಯ್ ಹತ್ತದ ನಾಲಗೆಯಂತೆ, ಕಾಡಿಗೆ ಹತ್ತದ ಕಣ್ಣನಂತೆ, ಧೂಳಂ ಹತ್ತದ ಗಾಳಿಯಂತೆ, ಜಲ ಹತ್ತದ ಜಲಜದಂತೆ, ಉಷ್ಣ ಹತ್ತದ ಅಗಿಯಂತಿರ್ಪ, ಕೂಡಲ ಚನ್ನಸಂಗಾ, ನಿಮ್ಮ ಶರಣ."

ಶರಣ ಲಿಂಗದೊಳಗಿದ್ದು ಜಗದೊಳಗಿರುವನು. ಜಗದೊಳಗಿದ್ದು ಲಿಂಗದೊಳಗಿರುವನು. ಲಿಂಗಮಧ್ಯದಲ್ಲಿ ಜಗವಿದೆ. ಜಗದ ಒಳ ಹೊರಗೆ ಲಿಂಗವಿದೆ. ಜಗಭರಿತಲಿಂಗ, ಲಿಂಗಭರಿತ ಶರಣ. "ಲಿಂಗಸಂಬಂಧ ಸೀಮೆ ನೋಡಾ

ಶರಣ ಸಂಬಂಧ ನಿಸ್ಸೀಮ ನೋಡಾ. ಲಿಂಗವೆ ಗಮ್ಯ, ಶರಣನೆ ಅಗಮ.
ನೋಡಾ. 'ಯದ್ಭಾವಂ ತದ್ಭವತಿ' ಎಂಬುದಿಲ್ಲವಾಗಿ, ಆದಿಲಿಂಗ, ಅನಾದಿ
ಶರಣ ಕೂಡಲ ಚನ್ನಸಂಗಯ್ಯಾ."

'ಪೂರ್ವಲಿಂಗ, ಅಪೂರ್ವಶರಣ, ಸಾಧ್ಯಲಿಂಗ, ಅಸಾಧ್ಯ ಶರಣ' ಎನ್ನುತ್ತಾನೆ ಚನ್ನಬಸವಣ್ಣ.

ಶರಣನಿಗೆ ನಾನೆಂಬ ಮಾತಿಲ್ಲ. ತಾನೆಂಬ ತೋರಿಕೆಯಿಲ್ಲ. ಆತನು
ಆಳಿಯನು, ಉಳಿಯನು, ಅತನೊಂದು ಮಿಂಚಿನಗೊಂಚಲು. ಆತನ ತನು
ಮನ ಬಯಲು. ಆತನದಂ ಒಡಲಿಲ್ಲದ ಒಡಲು. ಆತನಿಗೆ ಪ್ರಕೃತಿಗುಣವಿಲ್ಲ:
ಭಿನ್ನಭಾವವಿಲ್ಲ. ಆತನು ದೃಷ್ಟವನರಿಯ; ಅದೃಷ್ಟವನರಿಯ. ಆತನಂ
ಸಾವಯ ನಿರವಯಗಳನ್ನು ವಿವರಿಸನು, ಬೇರೆಂದೆಣಿಸನು. ವಿಕೃತಿ ಸಂಕೃತಿಗಳ
ನರಿಯನು. ಪ್ರಕೃತಿವಿಡಿಯನು. ಅವನು ಆಗಿನ ಆಗು, ಅರಿವಿನ ಅರಿವು.
ಆತನದು ಮೀರಿದ ಆಚಾರ; ತೋರದ ಆಗಮ. ಆತನು ಅಹುದಾಗದೆನ್ನ;
ಬಂದೆ ಬಾರೆನೆನ್ನ, ಅದು ಇದು ಎನ್ನ. "ಅನಾಯಾಸದಿಂದ ಮನೆಯ ಮಾಡಿ
ನಿರಾಯಾಸದಿಂದ ಪರಮ ಸುಖಿ. ರೂಹಿಸುವಲ್ಲಿ ರೂಪ ಅಧಿಕ; ನೋಡುವಲ್ಲಿ
ನೋಟ ಘನ. ಇಂತಂ ಸಹಜಸಂಗಿಯ ನಿಲವಿನ ಪರಿ; ಉದಕದೊಳಗಣ ಬಿಂದು
ವಿನ ಉದಯರತ್ನದಂತೆ ಕೂಡಲ ಚನ್ನಸಂಗಾ, ನಿಮ್ಮ ಶರಣನ ನಿಲವು ಬೇರೆ."

" ಹುಟ್ಟಿದ ಕುಳಸ್ಥಳವನರಿದು ಕಾಮಾದಿಗಳನಳಿದು,
ಸತ್ವ ರಜತಮವನೊತ್ತಿ ನಿಲಿಸಿದಲ್ಲಿ ಸಹಜ ನೆಲೆಗೊಂಬುದು
ಮನದಂತುವನರಿತು ಜೀವದ ಹೋಹ ನೆಲೆಯ ಬಲ್ಲಡೆ
ಕೂಡಲ ಚನ್ನಸಂಗಯ್ಯನಲ್ಲಿ ಮಹಂತರೆಂದೆನಿಸುವರು."

ಶರಣ ದಿಟಕ್ಕೂ ಮಹಂತ; ಮಹಾಪ್ರಸಾದವಂತ. ಹುಟ್ಟನರಿತವ.
ಕಾಮಾದಿಗಳ ನಳಿದವ. ತ್ರಿಗುಣಗಳನ್ನು ತೊಡೆದು ಸಹಜದ ನೆಲೆಗಂಡವ.
ಮನದ ಅಂತುವನರಿದವ. ಜೀವ ಹೋಗುವ ನೆಲೆಯ ಬಲ್ಲವ. ಅಸತ್ಯ ಮಿಥ್ಯ
ಗಳ ಮಾತರಿಯದವ. "ಸಮಯದಲ್ಲಿ ಸಮ್ಮತನು ಆಚಾರದ ನೆಲೆಯನರಿದಂ,
ಹೃದಯದ ಕತ್ತಲೆಯ [illegible] ಮುಟ್ಟುವುದ ಮುಟ್ಟದೆ

ಕಳೆದ, ಮುಟ್ಟಿದುದ ಮುನ್ನವೆ ಕಳೆದ. ಅಯ್ಯಾ ಅಯ್ಯಾ ಎಂದಲ್ಲಿಯೆ ಕಲಿಯಾದ. ಕೇಸರಿ ಸಮಯೋಗ; ಐದರ ಮದಸೇನೆ ಮುರಿಯಿತ್ತು; ಎನ್ನೊಡೆಯ ಕೂಡಲ ಚನ್ನಸಂಗಯ್ಯ ಹಿಡಿವಡೆದ." "ಹಲವು ಪರಿಯ ಅಪರಿಮಳದ ಪುಷ್ಪದಲ್ಲಿ ಪರಿಮಳವನರಸುವರೆ ? ಪಿರಿದು ರಸದಾಳಿಯ ಕಬ್ಬಿನಲ್ಲಿ ಹಣ್ಣನರಸುವರೆ ? ಸುರಭಿಗೆ ತನು ಕತ್ತಲೆಯೆಂದು ಬೆಳಗನರಸುವರೆ ? ಪರಶಿವಮೂರ್ತಿ ಸಂಗನ ಶರಣರಲ್ಲಿ ಕ್ರಿಯೆ ನಿಷ್ಕ್ರಿಯೆ ಅರಸುವರೆ ? ಅವರಿದ್ದರವೆ ಮುಕ್ತಿ ಕೂಡಲ ಚನ್ನಸಂಗಮದೇವಾ." ಪ್ರಸಾದಲಿಂಗಡೊಳಗಿನ ಪ್ರಸಾದಲಿಂಗಾನುಗ್ರಹವನ್ನು ಪಡೆದ ಶರಣನ ಪ್ರಸಾದಿಯ ಪ್ರಸಾದಿ ಅವನೊಬ್ಬ ರಸದಾಳಿ ಕಬ್ಬು. ಅದಕ್ಕೆ ಬೇರೊಂದು ಫಲವಿಲ್ಲ; ಫಲ ಬೇಕಿಲ್ಲ.

೬. ಶರಣನ ಮಹಾಲಿಂಗ :

ಅಚ್ಚ ಶರಣನು ಆಕಾಶಾಂಗಕ್ಕೆ ಸೀಮಿತನಲ್ಲ ಆತ್ಮಾಂಗಕ್ಕುಂಟು ಆತನಿಗ್ಕೆ ಪ್ರವೇಶ. ಪ್ರಸಾದದ ಪರಿಣಾಮದಲ್ಲಿ ಬಯಲಿಗೆ ಬಯಲಾಗಿ ಮಹಾ ಚೈತನ್ಯಮಯನಾಗಿರುತ್ತಾನೆ. ನಾದದ ಮೋದಗಳನ್ನು ಮೀರಿರುತ್ತಾನೆ. ದ್ವಂದಾತೀತನಾಗಿರುತ್ತಾನೆ:

“ ಸಮತೆ ಸಯವಾದ ಶರಣಂಗೆ ಅರಿವು—ಮರೆವುಗಳುಂಟೆ ?
ಉಪಮೆ ನಿಃಸ್ಥಲವಾದ ಶರಣಂಗೆ ಶಬ್ದಸಂದಣಿಯುಂಟೆ ?
ಅಖಂಡಿತ ಲಿಂಗಕ್ಕೆ ಅಪ್ರಮಾಣ ಶರಣಂಗೆ
ಸೀಮೆ ಸಂಬಾಧವೆಂಬ ಸಂಕಲ್ಪವುಂಟೆ ?
ಇದು ಕಾರಣ, ಕೂಡಲಚನ್ನಸಂಗಯ್ಯಾ,
ನಿಮ್ಮ ಶರಣಂಗೆ ಭವವಿಲ್ಲ, ಬಂಧನವಿಲ್ಲ,”

ಮಹಾಲಿಂಗಕ್ಕೆ ಮೊರೆಹೋದ ಶರಣನಿಗೆ ಸಮತೆ ಸಯವಾಗಿರುತ್ತದೆ. ಸಮತೆ ಸಯವಾಗುವುದೆ ಸಮರಸ. ಆಗ ಆತನಿಗೆ ಅರಿವು ಮರೆವು ಎರಡೂ ಇರುವುದಿಲ್ಲ. ಅದು ಅಖಂಡಲಿಂಗ, ಆತ ಅಪ್ರಮಾಣ ಶರಣ. ಶಬ್ದ ಸಂದಣಿಗೆ ಸಿಲುಕುವವನಲ್ಲ. ಸೀಮೆ ಸಂಬಂಧಕ್ಕೆ ಒಳಗಾಗುವವನಲ್ಲ. ಸಂಕಲ್ಪ ವಿಕಲ್ಪಗಳ ಮಾತೇಕೆ ? ಆತ ಭವಕ್ಕೆ ದೂರ, ಬಂಧನಕ್ಕೆ ಸಿಲುಕ. ಆತ ದ್ವಂದ್ವಾತೀತನಾದಂತೆ ತ್ರಿಪುಟಿರಹಿತನೂ ಆಗಿರುತ್ತಾನೆ. ತ್ರಿವಿಧ ನಿರ್ಣಯದಲ್ಲಿ ನಿಷ್ಪತ್ತಿಗೊಳಗಾಗಿರುತ್ತಾನೆ. ಯಾವ ಲೋಕದ ಹಂಗಿರುವುದಿಲ್ಲ. ನಿರ್ಲೇಪನಾಗಿ ಲಿಂಗ ಸಾರಾಯ ಸುಖಿಯಾಗಿರುತ್ತಾನೆ. ಎಲ್ಲ ತತ್ತ್ವಗಳನ್ನು ಸಮುಗಂಡಿರುತ್ತಾನೆ. ಆ ಮಹದ ಅನುಭಾವದಲ್ಲಿ ಮೈಮರೆತಿರುತ್ತಾನೆ. ಸತಿ ಪತಿ ನಿಃಪತಿ ಈ ತ್ರಿವಿಧ ಏಕಾರ್ಥವಾಗಿರುತ್ತಾನೆ. ಯಾವ ರಚನ-ರಂಜನಗಳ ಮಾತಿಲ್ಲ. "ಅಕ್ಷರ ಪಂಚಕದ ನಿಕ್ಷೇಪವನರಿದಡೆ ಬೋಳು; ಕುಕ್ಷಿಯೊಳಗೈವತ್ತೆರಡಕ್ಷರದ ಲಕ್ಷಣವನರಿದಡೆ ಬೋಳು; ಅಕ್ಷಯ ನಿಧಿ ಕೂಡಲ ಚನ್ನಸಂಗಯ್ಯಾ, ಭವಕ್ಕೆ ಬಾರದುದೆ ಬೋಳು.'

ನಿರ್ಲೇಪದರ್ಥವೆ ಬೋಳವೆಂದಿದ್ದರೂ ಬೋಳು ಪದದರ್ಥ ಅದಕ್ಕಿಂತಲೂ ಹೆಚ್ಚಿನ ಧ್ವನಿಯಿಂದ ಪೂರ್ಣವಾಗಿದೆ; ಪರಮಾರ್ಥ ಭರಿತವಾಗಿದೆ. ಪರಮ ಪಂಚಾಕ್ಷರಿಯೆ ಒಂದು ಮಹಾ ನಿಕ್ಷೇಪ. ಅದು ನೆಲದ ಮರೆಯ ನಿಧಾನದಂತಿದೆ. ಅದರ ನೆಲೆಯನ್ನು ಅದರ ಕಳೆಯನ್ನು ಅರಿತಿದ್ದರೆ ಬೋಳು. ಏಕೆಂದರೆ ಅದರ ಅರಿವು ಆಳವಟ್ಟರೆ ಅದರ ಆ ರಸಾಸ್ವಾದದಲ್ಲಿ ಆ ಸಾರಾಯ ಸಂಪತ್ತಿನಲ್ಲಿ ಇನ್ನಾವ ಸ್ವಾದವಾಗಲಿ ಇನ್ನಾವ ನಿಧಿಯಾಗಲಿ ಬೇಕೆನಿಸುವುದಿಲ್ಲ. ಅದು ಆ ಪರಶಿವನ ನಾಮಾಮೃತ; ನಿರತಿಶಯ ನಿಕ್ಷೇಪ. ಅಂತೆಯೆ ಎಲ್ಲ ಅಕ್ಷರಗಳ ಲಕ್ಷಣವನ್ನೂ ಅರಿತಿರಬೇಕು. ಏಕೆಂದರೆ ಮಂತ್ರವಲ್ಲದ ಅಕ್ಷರವಿಲ್ಲ. ಅಯ್ದು ಅಯ್ವತ್ತೆರಡು ಅಕ್ಷರಗಳ ಸ್ವರೂಪನಾದ ಪರಶಿವನೇ ಶರಣನಿಗೆ ಅಕ್ಷಯ ನಿಧಿ. ಅದುಳ್ಳ ಶರಣನಿಗೆ ಭವವೆಂಬ ಬರಗಾಲವಿರದು; ಬಾರದು. ಶರಣ ಸಚ್ಚಿದಾನಂದ ಶ್ರೀಮಂತ; ನಿತ್ಯ ಪರಿಪೂರ್ಣ ಮಹಂತ.

“ಮಾತು ಮಾಣಿಕ್ಯವ ನುಂಗಿ, ಜ್ಯೋತಿ ಕತ್ತಲೆಯ ನುಂಗಿ,
ಆಳು ಆಳ್ದನ ನುಂಗಿ ಉಗುಳಲಿನ್ನೆಂತೊ ?
ಮಥನವಿಲ್ಲದ ಸಂಗ, ಮರಣವಿಲ್ಲದ ಉದಯ;
ಅಳಲಿಲ್ಲದ ಶೋಕ ಸಮರಸದಲ್ಲಿ ಉದಯಿಂದ ಬೆಳಗನು
ಮದಗಜ ಒಳಕೊಂಡು ಮಾವತಿಗನ ನುಂಗಿ ಉಗುಳದಲ್ಲಾ !
ಸದಮದ ಬರಿಕೈಯೊಳಗೆ ಈರೇಳು ಭುವನವನು
ಒದರಿ ಹಾಯ್ಕಿ ತಾನೆ ನಿಂದುದಲ್ಲಾ ! ಸದಮಲಜ್ಞಾನ ಸಂಪನ್ನ
ಕೂಡಲ ಚನ್ನಸಂಗಯ್ಯನಲ್ಲಿ ಶರಣಂಗೆ ಸ್ವಯವಾಯಿತ್ತು.”

“ ಶರಣ ನಿರ್ಣಯವೆಂತೆಂದಡೆ : ಕರನೆ ಕಪ್ಪರ,
ಒಡಲೆ ಜೋಳಿಗೆ, ಆಕಾಶವೆ ಹೊದಿಕೆ, ಭೂಮಿಯೆ ಖಟ್ವಾಂಗ.
ಸರ್ವಸಂಗ ನಿವೃತ್ತಿಯ ಮಾಡಿ ಶರಣ ಹೋದುದನು ಕಂಡೆ,
ಕೂಡಲ ಚನ್ನ ಸಂಗಮದೇವಾ.”
ತನಗೆಲಿಂಗವಾಗಿ, ಲಿಂಗಕ್ಕೆ ತಾನಾಗಿಬೆಚ್ಚು ಬೇರಿಲ್ಲದಿರ್ದಡೆ ಶರಣ;
ಸದಾಚಾರ ಸಂಪತ್ತಿನಲ್ಲಿ ಬಂದ ಅನುಭಾವವನು ಮೀರಿ
ಹೆಸರಡಗಿದ ಸುಖವದು ಲಿಂಗೈಕ್ಯ.”

“ಆತ್ಮನ ನಿಜವನರಿದು, ಪರಮಾತ್ಮಲಿಂಗ ತಾನೆಂದರಿದ ಶರಣಂಗೆ ಎಂತಿರ್ದ
ಡಂತೆ ಪೂಜೆ ನೋಡಾ. ಆ ಶರಣ ಭೋಗಿಸಿತ್ತೆಲ್ಲ ಶಿವಾರ್ಪಿತ;
ಆ ಶರಣ ರುಂಚಿಸಿತ್ತೆಲ್ಲ ಪ್ರಸಾದ; ಆ ಶರಣನರಿದುದೆಲ್ಲ ಪರಬ್ರಹ್ಮ
ಆ ಶರಣ ನುಡಿದುದೆಲ್ಲ ಪರತತ್ತ್ವ; ಆ ಶರಣ ತಾನೆ ಕೂಡಲ
ಚನ್ನಸಂಗಯ್ಯನು.”

ಶರಣನ ಮಾತು ಮಾತಲ್ಲ. ಅದು ಇಂದ್ರಿಯಜನ್ಯವಲ್ಲ; ಬುದ್ಧಿಯ ಕಾರ್ಯವಲ್ಲ. ಬರಿಯ ಭಾವದ ಪರಿಣಾಮವಲ್ಲ. ಅದು ಆತ್ಮಾನುಭವದ ಮಾಣಿಕ್ಯ. ಅದಕ್ಕೆ ಬೆಲೆ ಕಟ್ಟುವುದು ಅಶಕ್ಯ. ಆತನ ಮಾತು ಅದೊಂದು ಅಚ್ಚಳಿಯದ ಆತ್ಮಜ್ಯೋತಿ. ಅದರ [illegible] ಪ್ರಜ್ಞಾನ ಮಾತ್ರ.

ಅಂತಹ ಆ ಮಾಣಿಕ್ಯಮಯ ಜ್ಯೋತಿರ್ಲಿಂಗ ಸ್ವರೂಪ ಮಾತುಳ್ಳ ಶರಣ ಕಿಂಕರನಾಗಿದ್ದು ಶಂಕರನನ್ನು ಒಲಿಸಿಕೊಂಡಿರುತ್ತಾನೆ; ಅಂದರೆ ಆಳಾಗಿ ಆಳ್ದನೆನಿಸಿರುತ್ತಾನೆ. ಆತನ ಆ ಶಂಕರತ್ವದ ಸಂಗದಲ್ಲಿ ಮಥನವಿಲ್ಲ ಆತನೊಂದು ಮಹಾಜ್ಯೋತಿಯಾಗಿ ಉದಯಿಸಿದ್ದಾನೆ. ಅದಕ್ಕೆ ಮರಣವಿಲ್ಲ. ಮಹಾಜ್ಯೋತಿಯಾಗಿ ಉದಯವಾದ ಶರಣನಿಗೆ ಮರಣವಿಲ್ಲವಾದರೂ ಶೋಕವಿಲ್ಲದಿಲ್ಲ. ಶೋಕವಿದೆಯಾದರೂ ಅಳಲಿಲ್ಲ. ಇದೊಂದು ವಿಚಿತ್ರ ಚಿತ್ರ; ಚರಿತ್ರ. ಜನತಾ ಜಗದೀಶನಿಗಾಗಿ ಆತನು ಶೋಕಿಸುತ್ತಾನೆ; ಆದರೆ ತನಗಾಗಿ ತಾನೆಂದಿಗೂ ಅಳಲಿ ಬಳಲುವವನಲ್ಲ. ಜಗದ ಜನದ ಬಾಳು ಬದುಕು ಹಸನಾಗಬೇಕೆಂಬುದೇ ಆತನ ಶೋಕಕಾರಣ. ಪರಹಿತಕ್ಕಾಗಿ ಪರಮ ಹಿತಕ್ಕಾಗಿ ಶೋಕಿಸುವ ಶರಣ ಮದವೆಂಬ ಗಜಕ್ಕೆ ಮಾವತಿಗ. ಮಾವತಿಗನು ಸಾಮಾನ್ಯನಲ್ಲ; ಗಜವನ್ನೇ ನುಂಗಿ ಜೀರ್ಣಿಸಿಕೊಳ್ಳಬಲ್ಲ ಶಕ್ತ; ಮದವಿಮುಕ್ತ. ಆತನದು ವಿನಯ ಪೂರ್ಣ ಅಭಯ ಹಸ್ತ, ಆ ಹಸ್ತದಲ್ಲಿ ಯಾವ ಭೌತಿಕ ಆಸ್ತಿಯಿಲ್ಲ; ಬರಿಗೈ, ಆದರದು ಈರೇಳು ಲೋಕಗಳನ್ನು ಒದರಿ ಹಾಕುವ ಅಳವುಳ್ಳುದಾಗಿದೆ. ಅಂತಹ ಆ ಶರಣನ ಕೈಯೆ ಒಂದು ಭಿಕ್ಷಾಪಾತ್ರೆ; ಒಡಲೇ ಜೋಳಿಗೆ; ಆಕಾಶವೇ ಹೊದ್ದುಕೊಳ್ಳುವ ವಸ್ತ್ರ; ಭೂಮಂಡಲವೆ ಆತನಿಗೆ ಒಂದು ಅಸ್ತ್ರ; ಶರಣನಿಗೆ ಬೇರಾವ ಸಂಗವಿಲ್ಲ. ಬೇರಾರ ಹಂಗಿಲ್ಲ. ಆತನಿಗೆ ಲಿಂಗ, ಲಿಂಗಕ್ಕೆ ಆತ. ಆತ ಸದಾಚಾರದಿಂದ ಬಂದ ಅನುಭವವನ್ನೂ ಮೀರಿದಾತ. ಮಾತಿಗೆ ನಿಲುಕದ ಸುಖಸ್ವರೂಪಿ. ನಾಮವಿಲ್ಲದಾತನಿಗೆ ನೇಮವೂ ನಿರ್ದಿಷ್ಟವಾಗಿರುವುದಿಲ್ಲ. ಆತನು ಹೇಗಿದ್ದರೆ ಅದೇ ಪೂಜೆ. ಆತನು ಭೋಗಿಸಿದ್ದೆಲ್ಲ ಶಿವಾರ್ಪಿತ. ಆತನು ಸವಿದದ್ದೆಲ್ಲ ಪ್ರಸಾದ. ಆತನು ಅರಿತದೆಲ್ಲ ಪರಬ್ರಹ್ಮ. ಆತನು ಮಾತಾಡಿದೆಲ್ಲ ಪರತತ್ತ್ವ. ಆತನೆ ಪರಶಿವಸ್ವರೂಪ.

"ಹೃದಯದೊಳಿಪ್ಪ ಮಹಾಲಿಂಗ ಜ್ಯೋತಿಯ ಬೆಳಗು,
ಪಂಚೇಂದ್ರಿಯಂಗಳಲ್ಲಿ ಪ್ರಭಾವಿಸಿ ತೋರುವ ಬೆಳಗು ಒಂದೇ
ಕಾಣಿ ಭೋ !
ಒಂದು ಮೂರಾಗಿ, ಮೂರು ತಾನಾರಾಗಿ, ಆರು
ಮೂವತ್ತಾರಾಗಿ,

ಮೂವತ್ತಾರು ಇನ್ನೂರು ಹದಿನಾರಾಗಿ ಬೇರುವರಿದು ವಿಸ್ತಾರವ
ಪಡೆದವಲ್ಲಾ !
ವಿಶ್ವಾಸದಿ ಬೆಳಗುವ ಬ್ರಹ್ಮಕ್ಕೂ ಗಣಿತವುಂಟೆ ?
ಅಗಣಿತವೆಂದು ಅಗೋಚರವೆಂದು ಹೇಳುವರಲ್ಲದೆ;
ದೃಶ್ಯವಾಗಿ ಕಾಬುವರುಂಟೆ ? ದೃಗಂದೃಶ್ಯವಲ್ಲ ;
ಮಹಾದಾನಿ ಕೂಡಲ ಚನ್ನಸಂಗಮದೇವಾ.”

ಶರಣ ಸರ್ವಸಕೀಲ ಸಾಧಿಸಿ ಮುಂದುವರಿದು ನಿಷ್ಕಲನಾಗುತ್ತಾನೆ. ಒಳ ಹೊರಗೆ ಮಹಾ ಬೆಳಗಾಗಿ ಬೆಳಗುತ್ತಾನೆ. ಆತ ಗಣನೆಗೆ ಸಿಕ್ಕುವನಲ್ಲ, ಗೋಚರವಾಗುವವನಲ್ಲ. ಆತನು ದೃಶ್ಯಾದೃಶ್ಯ ವಿಲಕ್ಷಣ.

“ ಇಡುವ ಕೊಡುವ ಬಿಡುವ ಕಟ್ಟುವ ಗೊಡವೆಗಾರನಯ್ಯಾ !
ಶರಣನು ಗಾಳಿಯು ಮರೆಯ ಜ್ಯೋತಿಯಂತೆ ಸುಖಸೂಸದೆ
ಇಪ್ಪನು ;
ತನ್ನರಿವು ಮರವೆಗಳೆಲ್ಲಾ ಪ್ರಾಣಲಿಂಗಾಧೀನವಲ್ಲದೆ
ಮತ್ತೊಂದನರಿಯನು.
ಆಸರುವನಲ್ಲ ಬೇಸರುವನಲ್ಲ; ಜಗದ ಕಳಕಳಕ್ಕೆ ಎದ್ದು
ಹರಿದಾಡು
ವವನಲ್ಲ. ಸುಖಮುದ್ರಿತನು, ಕೂಡಲಚನ್ನಸಂಗಾ,
ಲಿಂಗೈಕ್ಯನು.”

“ ಭಿನ್ನ ಪ್ರಾಣವಳಿದು, ನಿರ್ಮಳ ಚಿತ್ತವಮಾಡಿ, ಕಣ್ಣಾಲಿ
ಉರಿನಟ್ಟು,
ಹೊರಸೂಸದೆ, ಕಣ್ಣ ಬಣ್ಣವ ಕಳೆದು, ಉಣ್ಣನು, ಉಣ್ಣದೆ
ಇರನು;
ತನ್ನ ನಿಲವನರಿತು ತಾನೊಬ್ಬನೆ ಇರನು. ಜನ್ನ ಮುತ್ತುಗಳಲ್ಲಿ
ಕಾಳು ಬೆಳುದಿಂಗಳಲ್ಲಿ ತನ್ನ ಪ್ರಾಣ ತನಗೆ ಪ್ರಕಾಶವು.
ತನ್ನೊಳಗೆ

ಹೂಣೆ ಹೊಕ್ಕು, ಕುಂಬಳದ ಸೂಚಿಯ ಸುಮ್ಮನಿ ಶರಣನ
ನಿಲವ ನೋಡಾ !
ಅಳಲಲಿಲ್ಲ, ಬಳಲಲಿಲ್ಲ: ಅಳಿಯಲಿಲ್ಲ, ಉಳಿಯಲಿಲ್ಲ;
ಎರಡಳಿಯದ ನಿಲವು,
ಉಭಯ ಮಧ್ಯದ ಕೊರಡಿಂಗೆ ಕುಂಟಿಯನಿಕ್ಕಿ ಕೆಡಿಸುವನು ತಾನಲ್ಲ
ಹೊರಳಲರಿಯನು ಕೊಳಚಿಯ ಉದಕದೊಳಗೆ.
ಕಳಾಕಳಾಭೇದದಿಂದ ತೊಳತೊಳಗುವನು. ದಳಭ್ರೂಮಧ್ಯದ
ಧ್ರುವಮಂಡಲವ ಮೀರಿ ಕಳೆದು ದಾಂಟಿ ಕೂಡಲ
ಚೆನ್ನಸಂಗಯ್ಯನೊಳಗೆ
ಶರಣ ಕಾಂತಿಯ ನಿಲವಿಂಗೆ ಶರಣು ಶರಣು!”

“ ಕಂಗಳ ತುರೀಯವ ಕರಸ್ಥಲ ನುಂಗಿ,
ಕರಸ್ಥಲದ ದೃಷ್ಟವ ಕಂಗಳು ನುಂಗಿ,
ಇಂತೀ ಉಭಯ ಕುಳವಳಿದು ಅದ್ವೈತವಾದ ಶರಣಂಗೆ
ಆಹ್ವಾನವಿಲ್ಲ, ವಿಸರ್ಜನವಿಲ್ಲ; ಹಿಂದೆಂಬುದಿಲ್ಲ, ಮುಂದೆಂಬುದಿಲ್ಲ;
ಒಳಗೆಂಬುದಿಲ್ಲ, ಹೊರಗೆಂಬುದಿಲ್ಲ: ಕೀಳೆಂಬುದಿಲ್ಲ,
ಮೇಲೆಂಬುದಿಲ್ಲ,
ಕೂಡಲ ಚೆನ್ನಸಂಗಮದೇವಾ, ನಿಮ್ಮ ಶರಣನೆತ್ತೆತ್ತ
ನೋಡಿದಡತ್ತತ್ತ ನೀವೇ ಕಂಡಯ್ಯಾ !”

“ ಕಂಗಳ ನೋಟ, ಹೃದಯದ ಜ್ಞಾನ:
ಮನದೊಳಗೆ ಮಾತನಾಡುತಿರ್ದೆನಯ್ಯಾ !
ಜೇನ ಮಳೆಗಳು ಕರದವು; ಅಮೃತದ ಕಳೆಗಳು ಸುರಿದವು:
ಕೂಡಲ ಚೆನ್ನಸಂಗನೆಂಬ ರಸಸಾಗರದೊಳಗೋಲಾಡು
ತಿರ್ದೆನಯ್ಯಾ !”

“ ಸ್ಥಲವಿಡಿದು ಸರ್ವದಲಾಯತವಾಗಿ ಸಹ ಉದಯವಿದೆಂದು
[illegible] ಎಂದೆನಲುಂಟೆ ?

ಭಾವವಳಿದು ನಿರ್ಭಾವವುಳಿದಲ್ಲಿ ಅದು ಇದು ಎಂದೆನಲುಂಟೆ ?
ಅದು ಕದಂಬ ಕಳಶ ಕೂಡಲ ಚನ್ನಸಂಗ ಸರ್ವಾಂಗಮಯ
ವಾಗಿರ್ದಲ್ಲಿ."

"ಸ್ಥಲವೆಂದೆನ್ನೆ, ನಿಃಸ್ಥಲವೆಂದೆನ್ನೆ; ನಿರ್ಣಯವೆನಗಾದ ಬಳಿಕ ಏನೆಂದರಿಯೆನಯ್ಯಾ. ಇದು ಕಾರಣ ಕೂಡಲ ಚನ್ನಸಂಗಯ್ಯಾ ಲಿಂಗೈಕ್ಯವೆಂದೆನ್ನೆ."

"ತಾನೆ ಜಗ, ಜಗವೆಲ್ಲ ತಾನೆಂದರಿದ ಘನವೇದ್ಯನ ಭೇದರೂಪನಾಗಿ ಅನ್ಯವಿಲ್ಲದನ್ಯವನರಿಯಲೆಲ್ಲಿಯದೊ ? ನಿರಂಜನ ನಿಜ ಚಿದ್ರೂಪು ತಾನಾಗಿ ಅರಿವು ತಾನೆಂಬ ಮಮತೆಗೆಡೆಯಲ್ಲಿಯದೊ ? ಅನ್ಯವೆನ್ನದ ತಾನೆನ್ನದಳಿದುಳಿಮೆಯನು ಪಮಿಸಬಹುದೆ ? ಅನುಪಮ ಸುಖಸಾರಾಯ ಕೂಡಲಚೆನ್ನ ಸಂಗಾ, ನಿಮ್ಮ ಶರಣ:"

" ಸತ್ವ ರಜತಮವೆಂಬವು ಪ್ರಪಂಚವೆಂದೆಂಬಿರಿ;
ಸತ್ವವೆ ಪರತತ್ತ್ವ ಕಾರಣ. ಒಂದೆರಡೆಣಿಕೆಯ
ಉದಯಾಸ್ತಮಾನವುಂಟೆ
ಆತ್ಮವಿತ್ತುವಿಂಗೆ ? ಉದಕವನುಂಡ ಲೋಹದ ಪರಿಯಂತೆ
ಇರಬೇಕು,
ಮೂಗಕಂಡ ಕನಸ ನೀವು ಬಲ್ಲರೆ ಹೇಳಿರೇ !
ಉಪಾಧಿಯಿಲ್ಲದುಪಮೆ,
ಭಾವವಿಲ್ಲದ ಭರಿತ, ಇಂದ್ರಿಯವರತ ಪ್ರಕಾಶ ನೋಡಿರೇ !
ಕಾರಣವಿಲ್ಲದ ಕಾರ್ಯ, ಕೇಳಲಿಲ್ಲದ ಉಲುಹು, ಬೇಡಲಿಲ್ಲದ
ಪದವಿದು.
ತೋರಿ ಆದಿ ಅಂತ್ಯವಿಲ್ಲದ ತೃಪ್ತಿಯಡಗಿದ ನಿಜಕ್ಕೆ ನಾನು
ನೀನೆಂಬೊಂದು ಪ್ರತಿಯುಂಟೆ ?
ನಿಜಭಾವವಳಿಬಾತ್ಮ ನಿತ್ಯವೆಂಬುದನು ಎಲ್ಲ ಶ್ರುತಿಗಳಲ್ಲಿ ಕೇಳಿಕೊಳ್ಳಿ
ಸುಖದ ಸೋಂಕಿನ ಪರಿಣಾಮದ ಪದವನು ಕೂಡಲಚನ್ನ
ಸಂಗಯ್ಯನಲ್ಲಿ ಪ್ರಭುವೆ ಬಲ್ಲ."

ಲಿ [illegible] ಶರಣನ ಸಹಜ

ಸ್ವರೂಪವನ್ನು ಈ ಎಲ್ಲ ವಚನಗಳು ಹೃದಯಂಗಮವಾಗಿ ಬಣ್ಣಿಸಿವೆ; ಚಲುವಾಗಿ ಚಿತ್ರಿಸಿವೆ. ಮಾತುಮಾತಿನಲ್ಲಿ ಮಿಂಚಿದೆ. ಶರಣಜೀವನಾನುಭವ ಸೂರೆಗೊಂಡಿದೆ. ಪ್ರಾಸಾದಿಕ ಶೈಲಿಯಲ್ಲಿ ಪರಿಣಾಮಕಾರಿಯಾಗಿ ಪ್ರಕಟವಾಗಿದೆ. ಆ ಮಹಾಲಿಂಗವು ಮೈಗೊಂಡರೆ ಏನಾಗಬಹುದು, ಎಂತಹ ಸೊಗಸೊದಗಬಹುದೆಂಬುದು ಕಣ್ಮುಂದೆ ಕಾಣುವಂತಿದೆ; ಮನದ ಮುಂದೆ ಮೈಯೆತ್ತು ನಿಲ್ಲುವಂತಿವೆ. ಆ ಸುಖ ಸೋಂಕಿದ ಪರಿಣಾಮವನ್ನು ಸೂಲ್ಲದಂತಿದೆ. ಆ ಶರಣನ ಅಂತಃಕರಣಗಳೆಲ್ಲ ಆ ಅಂತರಾತ್ಮನಲ್ಲಿ ಅವಿರಳವಾಗಿ ಅಗಲದಂತಿರುತ್ತವೆ. ಆ ಶರಣನಿಗೆ ಅದೆಂದಿಗೂ ಮರಣವಿಲ್ಲ. ಮರ್ತ್ಯರ ಗುಣವಿಲ್ಲ. "ಕರ್ತೃವಿಲ್ಲಾಗಿ ಕರ್ಮವಿಲ್ಲ; ಕರ್ಮವಿಲ್ಲಾಗಿ ಜನನವಿಲ್ಲ; ಜನನವಿಲ್ಲಾಗಿ ಮರಣವಿಲ್ಲ; ಮರಣವಿಲ್ಲಾಗಿ ಭೂತಾತ್ಮ ಪ್ರಕೃತಿಕರಣಾದಿಗುಣಂಗಳು ಮುನ್ನವೆ ಇಲ್ಲ. ಹಿಂದಣ ಸ್ಥಿತಿಯಿಲ್ಲ ; ಮುಂದಣ ಲಯವಿಲ್ಲ; ಆದಿ ಮಧ್ಯಾವಸಾನವಿಲ್ಲ; ಬಿಚ್ಚಿ ಬೇರಿಲ್ಲ; ಬೆರಸಿ ಒಂದಲ್ಲ; ಉಪಮಾತೀತ ಕೂಡಲ ಚೆನ್ನ ಸಂಗಾ, ನಿಮ್ಮ ಶರಣನು."

ಪ್ರಸಾದ ಲಿಂಗ ಮಿಶ್ರಾರ್ಪಣ

ಪ್ರಸಾದಲಿಂಗ ಪ್ರಸರಣಶೀಲವಾದುದು. ಆಕಾಶವನ್ನು ಪ್ರಕಾಶಿಸುವ ಅದು ಪ್ರಸರಿಸದ ಪ್ರದೇಶವಿಲ್ಲ. ಬ್ರಹ್ಮಾಂಡವನ್ನೆ ಬಳಸಿ ಕೊಂಡ ಅದು ಪಿಂಡಾಂಡದಲ್ಲಿ ತುಂಬಿರುವುದು ಒಂದು ಹೆಚ್ಚಲ್ಲ; ಅಚ್ಚರಿಯೇನಲ್ಲ. ನಾದಮಯವಾಗಿ ಅದು ವಿಶುದ್ಧಿ ಶ್ರೋತ್ರವಾಕ್ಕುಗಳಲ್ಲಿ ವಿಶೇಷವಾಗಿ ನೆಲಸಿದೆ, ಅಸಾಮಾನ್ಯವಾಗಿ ಅಳವಟ್ಟಿದೆ. ಅಲ್ಲಿರುವ ಅದಕ್ಕೆ ಶಬ್ದ ಪದಾರ್ಥವೆ ವಿಷಯ ಅದೇ ಅದಕ್ಕೆ ನೈವೇದ್ಯ. ಶ್ರವಣೇಂದ್ರಿಯವೆ ಮುಖ. ಯ-ಕಾರ ಮಂತ್ರದಿಂದ ಆನಂದ ಭಕ್ತಿಯಿಂದ ಶಬ್ದ ಪದಾರ್ಥವನ್ನು ಸುಜ್ಞಾನ ಹಸ್ತದಲ್ಲಿ ಪ್ರಸಾದ ಲಿಂಗಕ್ಕೆ ಸಮರ್ಪಿಸಬೇಕು.

ಪ್ರಸಾದಲಿಂಗವೊಂದಾದರೂ ಅರ್ಪಣಭೇದದಿಂದ ಆರು ಬಗೆಯಾಗುವುದು; ಆರು ಲಿಂಗಗಳಿಗೆ ಆರು ತೆರನಾದ ಶಬ್ದ ಪದಾರ್ಥಗಳಾಗುವವು; ಆರು ಭಕ್ತಿಗಳುಂಟಾಗುವವು. ಶರಣಾಂಗನೊಳಗಿನ ಷಡ್ವಿಧಾಂಗರು ಷಡ್ವಿಧ ಶಬ್ದಗಳನ್ನು ಸಮರ್ಪಿಸುವರು, "ಗಂಟೆ, ಜಯಗಂಟೆ, ತಾಳ, ಕಂಸಾಳ ಮೊದಲಾದ ವಾದ್ಯವನರಿವುದು ಪ್ರಸಾದಲಿಂಗದಲ್ಲಿಯ ಆಚಾರಲಿಂಗ; ವೀಣೆ, ರುದ್ರವೀಣೆ, ತುಂಬುರವೀಣೆ, ಕಿನ್ನರ ವೀಣೆ, ಕೈಲಾಸವೀಣೆ ಮೊದಲಾದ ತಂತಿಕಟ್ಟಿ ನುಡಿವ ವಾದ್ಯವನರಿವುದು ಪ್ರಸಾದಲಿಂಗದಲ್ಲಿಯ ಗುರುಲಿಂಗ; ಪಟಹ, ಪಡ, ಡಕ್ಕೆ, ಡಮರುಗ, ಡಿಂಡಿಮ, ಆವುಜ; ಪಟಾವುಜ, ಮೃದಂಗ, ಮುರಜ, ಭೇರಿ ಮೊದಲಾದ ವಾದ್ಯವನರಿವುದು ಪ್ರಸಾದಲಿಂಗದಲ್ಲಿಯ ಶಿವಲಿಂಗ; ಕಹಳೆ, ಹೆಗ್ಗಹಳೆ, ಶಂಖ, ವಾಸ, ನಾಗಸ್ವರ, ಉಪಾಂಗ ಮೊದಲಾದ ವಾಧ್ಯವನರಿವುದು ಪ್ರಸಾದಲಿಂಗದಲ್ಲಿಯ ಜಂಗಮಲಿಂಗ; ಸಂಗೀತ, ಸಾಹಿತ್ಯ, ಶಬ್ದಾರ್ಥ ಮೊದಲಾದ ಶಬ್ಧವನರಿವುದು ಪ್ರಸಾದಲಿಂಗದಲ್ಲಿಯ ಪ್ರಸಾದಲಿಂಗ; ಪಂಚಮಹಾವಾದ್ಯಂಗಳ ತೃಪ್ತಿಯನರಿವುದು ಪ್ರಸಾದಲಿಂಗದಲ್ಲಿಯ ಮಹಾಲಿಂಗ." ಹೀಗೆಂದು ಶಿವಶರಣ ಆದಯ್ಯನವರು ಮಿಶ್ರಾರ್ಪಣ ನಿರೂಪಣ ಮಾಡಿದ್ದಾರೆ. ಇದರ ವಿವರಣೆಯನ್ನು ಈ ಕೆಳಗಿನ ಪುರಾತನೋಕ್ತಿಯಿಂದ ಕೊರತೆಯಿಲ್ಲದಂತೆ ಅರಿಯಬಹುದಾಗಿದೆ. ಅದಿದು :

ಶರಣನೊಳಗಣ ಭಕ್ತ: ತಾಳ ಮೊಟ್ಟಿತಾಳ ಮೊದಲಾದ ಸಪ್ತ ತಾಳಂಗಳ ಗತಿಯಿಂದ ತಾಂಡವ ಸ್ಥಾನಂಗಳಲ್ಲಿ ನುಡಿಸುವ ವಾದ್ಯವೆ ತಾಳ, ಇಂತಪ್ಪ ನಾದ ಘೋಷವೆಂಬ ಪದಾರ್ಥವನು ಅರಿವುದಾ ಪ್ರಸಾದಲಿಂಗದೊಳಗಣ ಆಚಾರಲಿಂಗದಲ್ಲಿ ಎಂದು ತಿಳಿದರ್ಪಿತವ ಮಾಡುವುದು. ಅದರ ಸಕೀಲವೆಂತೆಂದು ಬೆಸಗೊಂಡಡೆ, ಅದು ಆಕಾಶತತ್ವದೊಳಗಣ ಪೃಥ್ವೀ ತತ್ತ್ವ ಸಂಬಂಧವಾದ ಪದಾರ್ಥವೆಂದರಿದು ಆ ಪದಾರ್ಥವನ್ನು ಪ್ರಸಾದಲಿಂಗದೊಳಗಣ ಆಚಾರಲಿಂಗದಲ್ಲಿ ಎಂದು ತಿಳಿದರ್ಪಿತವ ಮಾಡುವುದು.

ಶರಣನೊಳಗಣ ಮಾಹೇಶ: ತಂತಿ ಪಟ್ಟುದಾರ ಪಂಚಲೋಹದ ತಂತಿಗಳಂ ಬಂಧಿಸಿ ನಖಾಗ್ರದಿಂ ಮಿಡಿದು ನುಡಿಸುವ ಕಿನ್ನರವೀಣೆ ಮೊದಲಾದ ಇಪ್ಪತ್ತೆಂಟು ತರದ ವೀಣಾವಾದ್ಯಂಗಳಲ್ಲಿ ದೃಢವಿಡಿದು ಹುಟ್ಟಿದ ಶಬ್ಧವಂ

ನಾದ ಘೋಷವೆಂಬ ಪದಾರ್ಥವನ್ನು ಗುರುಲಿಂಗದಲ್ಲಿ ಅರಿವುದು; ಪ್ರಸಾದಲಿಂಗದೊಳಗಣ ಗುರುಲಿಂಗದೊಳಗೆಂದು ತಿಳಿದರ್ಪಿತವ ಮಾಡುವುದು.

ಶರಣನೊಳಗಣ ಪ್ರಸಾದಿ: ಕಂಡುಹು ದಾರು ಘಟಕ್ಕೆ ಚರ್ಮ ತಂತಿಗಳಂ ಬಂಧಿಸಿ ಕಾಷ್ಠಾಂಗುಳಿಗಳಿಂ ಒಡಿದು ನುಡಿಸುವಂತೆ ಭೇರಿ, ಢಕ್ಕೆ, ಡೊಳ್ಳು, ಕರಡೆ ಮೊದಲಾದುವನ್ನು ದೃಢವಿಡಿದು ಹುಟ್ಟಿದ ಶಬ್ದವಂ ನಾದದ ಘೋಷವೆಂಬ ಪದಾರ್ಥವನ್ನು ಶಿವಲಿಂಗದಲ್ಲಿ ಅರಿವುದಂ; ಪ್ರಸಾದಲಿಂಗದೊಳಗಣ ಶಿವಲಿಂಗದೊಳಗೆಂದು ತಿಳಿದರ್ಪಿತವ ಮಾಡುವುದು.

ಶರಣನೊಳಗಣ ಪ್ರಾಣಲಿಂಗಿ: ಕೊಳಲು ಶಂಖದೊಳಗಾಗಿ ತಂಟಿಗಳಿಂದ ಕಚ್ಚಿ ಊದಿ ನುಡಿಸುವ ವೇಣು ಕೊಂಬು ವಾದ್ಯದೊಳಗಾಗಿ ಹುಟ್ಟಿದ ಶಬ್ದವಂ ಜಂಗಮಲಿಂಗದಲ್ಲಿ ಅರಿವುದು; ಪ್ರಸಾದಲಿಂಗದೊಳಗಣ ಜಂಗಮಲಿಂಗದೊಳಗೆಂದು ತಿಳಿದರ್ಪಿತವ ಮಾಡುವುದು.

ಶರಣನೊಳಗಣ ಶರಣ: ವಚನಗೀತಂಗಳೊಳಗಾಗಿ ತಾಲವ್ಯ ದಂತವ್ಯಗಳಿಂದ ಮೂವತ್ತೆರಡುರಾಗ, ಅರವತ್ತುನಾಲ್ಕು ಮಿಶ್ರಯುಕ್ತವಾಗಿ ಓದುವಂತಪ ಕುಸುಮ, ಭೋಗ, ಭಾಮಿನಿ, ಪರಿವರ್ಧಿನಿ, ವಾರ್ಧಿಕ ಉದ್ದಂಡಗಳೆಂಬ ಷಟ್ ಪದಂಗಳು ಕಂದ ವೃತ್ತಾದಿಗಳೊಳಗಾಗಿ ಹುಟ್ಟಿದ ಶಬ್ದವಂ ನಾದ ಘೋಷವೆಂಬ ಪದಾರ್ಥವನ್ನು ಪ್ರಸಾದಲಿಂಗದಲ್ಲಿ ಅರಿವುದು. ಪ್ರಸಾದಲಿಂಗದೊಳಗಣ ಪ್ರಸಾದಲಿಂಗದಲ್ಲಿ ಎಂದು ತಿಳಿದರ್ಪಿತವ ಮಾಡುವುದು.

ಶರಣನೊಳಗಣ ಐಕ್ಯ: ಇವೆಲ್ಲರಲ್ಲಿಯೂ ಹುಟ್ಟಿದ ಶಬ್ದವಂ ಹಿಂದೆ ಹೇಳಿದ ಪಂಚವಿಧ ಶಬ್ದ ಪದಾರ್ಥಂಗಳನ್ನು ಪ್ರಸಾದಲಿಂಗದೊಡನೆ ಕೂಡಿದ ಪಂಚವಿಧ ಲಿಂಗಮುಖದಿಂದ ಉಳುಮೆಯಾಗಿ ಬಂದ ಪಂಚವಿಧ ಪ್ರಸಾದವ ಪಡೆದನುಭವಿಸಿ ದಣ್ಣನೆ ದಣಿದು ಮನಸ್ಸೆಲ್ಲ ಹಿಂದಿರುಗಿದಂತಾದ್ದ ಇವೆಲ್ಲರಲ್ಲಿಯ ಹುಟ್ಟಿದ ಶಬ್ದ. ಇವೆಲ್ಲವು ಬೇರೆ ಬೇರೆ ತಟ್ಟಿದಲ್ಲಿ ಬೇರೆ ಬೇರೆ ಲಿಂಗಾರ್ಪಿತವ ಮಾಡಬಹುದು. ಇವೆಲ್ಲ ಶಬ್ದಂಗಳೊಂದೊಂದೆ ವೇಳೆ ಕದಂಬವಾಗಿ ಬಂದು ತಟ್ಟಿದಲ್ಲಿ ವಿಂಗಡಿಸಿ ಲಿಂಗಾರ್ಪಿತ ಮಾಡುವುದಕ್ಕೆ ಕೂಡದು. ಅವನ್ನು ಮಹಾಲಿಂಗದಲ್ಲಿ ಅರಿವುದು. ಪಂಚವಿಧ ಲಿಂಗವನೊಳಕೊಂಡು ತೋರುವ ಪ್ರಸಾದಲಿಂಗದೊಳಗಣ ಮಹಾಲಿಂಗದಲ್ಲಿ ಎಂದು ತಿಳಿದರ್ಪಿತವ ಮಾಡುವುದು, ಅದರ ಸಕೀಲವೆಂತೆಂದು ಬೆಸಗೊಂಡಡೆ, ಅದಂ ಆಕಾಶತತ್ತ್ವದೊಳಗಣ ಆತ್ಮತತ್ತ್ವ

ಸಂಬಂಧವಾದ ಪದಾರ್ಥವೆಂದರಿದು ಆ ಪದಾರ್ಥವನ್ನು ಸಂಜ್ಞಾನ ಹಸ್ತದೊಳಗಣ ಚಿಚ್ಛಕ್ತಿಯುಕ್ತನಾಗಿ ಆನಂದ ಭಕ್ತಿಯೊಳಗಣ ಸಮರಸಭಕ್ತಿಯಿಂದೆ ಪ್ರಸಾದಲಿಂಗದೊಳಗಣ ಮಹಾಲಿಂಗಕ್ಕೆಂದರಿದಾರೋಪಿಸಿ ಯ–ಕಾರಮಂತ್ರದೊಳಗಣ ಓಂಕಾರಮಂತ್ರ ಸ್ಮರಣೆಯೊಡನೆ ಕೂಡಿಕೊಂಡು ಶ್ರೋತ್ರೇಂದ್ರಿಯದೊಳಗಣ ಹೃದಯೇಂದ್ರಿಯ ಮುಖದಲ್ಲಿಯೇ ಸಮರ್ಪಿಸಿ ಆ ಲಿಂಗಮುಖದಿಂದು ಳುಮೆಯಾಗಿ ಬಂದ ಪ್ರಸನ್ನೇತಿ ಪ್ರಸಾದವ ಪಡೆದನಂಭವಿಸಿ ಪರಮ ಪರಿಣಾಮಿಯಾಗಿರುತ್ತಿಹನು ಶರಣನೊಳಗಣ ಶಿವೈಕ್ಯನು.

—

ಅನುಬಂಧ

ಸರ್ವಂ ಪೂರ್ಣಂ

ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ ಪೂರ್ಣಮುದಚ್ಯತೇ।
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವಶಿಷ್ಯತೇ ॥

—ಈಶಾವಾಸ್ಯೋಪನಿಷತ್

ಶರಣಸ್ಥಲ

ಪೂರ್ಣಪ್ರಭೆ

ಪರಿಪೂರ್ಣ ಪರಶಿವ. ಪರಿಪೂರ್ಣ ಶರಣ. ನಿತ್ಯಲಕ್ಷಣ ಲಕ್ಷಿತ ಪ್ರಾಣಲಿಂಗವನ್ನು ಅಳವಡಿಸಿಕೊಂಡು ಬಳಿಕ ಪರಿಪೂರ್ಣ ಲಕ್ಷಣ ಲಕ್ಷಿತ ಪ್ರಸಾದಲಿಂಗದ ಪ್ರಸನ್ನತೆಯನ್ನು ಪಡೆದಾತನು ಶರಣನು.

ಪರಶಿವ, ಪ್ರಸಾದಲಿಂಗ, ಪೂರ್ಣಾನಂದ ಈ ಮೂರು ಪದಗಳು ಪರ್ಯಾಯ ಪದಗಳು; ಒಂದೇ ಅರ್ಥವುಳ್ಳವುಗಳು. ಪ್ರಸಾದಲಿಂಗದ ಸಾಕ್ಷಾತ್ಕಾರವೆಂದರೆ ಪರಶಿವನ ಸಾಕ್ಷಾತ್ಕಾರ, ಮತ್ತು ಪೂರ್ಣಾನಂದದ ಪೂರ್ಣಾನುಭವ.

ಶರಣನಲ್ಲಿ ಪ್ರಸಾದಲಿಂಗದ ಪರಿಪೂರ್ಣ ಪ್ರಭೆ, ಪರಮಾನಂದಾನುಭವ, ಪರಾಶಕ್ತಿಯ ಪ್ರಾದುರ್ಭಾವ ಉಂಟಾಗಿರುತ್ತವೆ, ಶರಣನು ಶ್ರದ್ಧೆ ನಿಷ್ಠೆ ಅವಧಾನ ಅನುಭವ ಆನಂದ ಭಕ್ತಿಗಳಿಂದ ಪರಿವಿಡಿದು ಚಿತ್ತ ಬುದ್ಧಿ ಅಹಂಕಾರ ಮನ ಜ್ಞಾನಗಳನ್ನು ಪವಿತ್ರಗೊಳಿಸಿ ಪರಿಪಕ್ವವಾಗಿಸಿ ಪರಿಪೂರ್ಣಸ್ಥಿತಿಗೆ ತಂದಿರುತ್ತಾನೆ. ಗಂಧ ರಸರೂಪ ಸ್ಪರ್ಶ ಶಬ್ದಗಳನ್ನು ಪ್ರಸಾದವನ್ನಾಗಿಸಿಕೊಂಡಿರುತ್ತಾನೆ. ಆತನ ಕ್ರಿಯೆ ಆತನ ಜ್ಞಾನ ಆತನ ಇಚ್ಛೆಗಳು ಶಿವವಾಗಿರುತ್ತವೆ; ಪರಾತ್ಪರವಾಗಿರುತ್ತವೆ, ಸತ್ಕ್ರಿಯೆ ಸಂಜ್ಞಾನ ಸದಿಚ್ಛೆಗಳಿಂದ ಶರಣನು ಪರಾವಾಕ್ ಶಕ್ತಿಯನ್ನು ಪಡೆದಿರುತ್ತಾನೆ. ಪರಿಪೂರ್ಣ ಪ್ರಾಸಾದಿಕತೆಯನ್ನು ತಳೆದಿರುತ್ತಾನೆ. ಪಂಚಭೂತಗಳ ಪೂರ್ವಾಶ್ರಯವನ್ನು ನಿರಸನಮಾಡಿ ಅವುಗಳ ಉತ್ತಮ ಸತ್ವವನ್ನು ಮೈಗೂಡಿಸಿಕೊಂಡಿರುತ್ತಾನೆ. ಸದ್ವಾಸನೆಯಲ್ಲಿ ಸದಭಿರುಚಿಯಲ್ಲಿ ಶಿವರೂಪದಲ್ಲಿ ಶಿವಕಳೆಯಲ್ಲಿ ಅಂತಃಸ್ಪರ್ಶದಲ್ಲಿ ಚಿನ್ನಾದದಲ್ಲಿ ಶರಣನು ಯಾವಾಗಲೂ ನಿರತನಾಗಿರುತ್ತಾನೆ; ಭರಿತನಾಗಿರುತ್ತಾನೆ, ಸತ್‌ಚಿತ್ ಆನಂದ ನಿತ್ಯ ಪರಿಪೂರ್ಣ ಲಕ್ಷಣಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಭಕ್ತ ಮಾಹೇಶ ಪ್ರಸಾದಿ ಪ್ರಾಣಲಿಂಗಿ ಮತ್ತು ಶರಣನಾಗಿ ಪೂರ್ಣನೆನಿಸಿರುತ್ತಾನೆ.

ಪೂರ್ಣ ಪ್ರಭೆಯನ್ನು ಪೂರ್ಣಾನಂದವನ್ನು ಪೂರ್ಣಪ್ರಜ್ಞೆಯನ್ನು ಪಡೆದು ಪೂರ್ಣಚೇತನನಾಗಿರುತ್ತಾನೆ. ಅಂತಾಗುವುದನ್ನೆ ದಿವ್ಯಸಾಕ್ಷಾತ್ಕಾರವೆಂದು ಹೇಳುತ್ತಾರೆ.

ಶರಣನಿಗೆ ಕ್ರಿಯಾಸಿದ್ಧಿ ಜ್ಞಾನಸಿದ್ಧಿ ಇಚ್ಛಾಸಿದ್ಧಿ ವಾಕ್ಸಿದ್ಧಿಗಳುಂಟಾಗಿರುತ್ತವೆ. ಪಾದ ಪರುಷ, ಹಸ್ತಪರುಷ, ವಾಕ್ಪರುಷ, ನೇತ್ರಪರುಷ, ಹೃದಯ ಪರುಷವಾಗಿ ಪಂಚಪರುಷವುಳ್ಳವನಾಗಿರುತ್ತಾನೆ. ಪಂಚಭೂತ ಪಂಚತನ್ಮಾತ್ರ ಪಂಚೇಂದ್ರಿಯ ಪಂಚಾಂತಃಕರಣಗಳ ಪೂರ್ಣಸತ್ವವನ್ನು ಪಡೆದಿರುತ್ತಾನೆ. ದಿವ್ಯದರ್ಶನ, ದಿವ್ಯಶ್ರವಣ, ದಿವ್ಯವಚನ, ದಿವ್ಯಾನುಭವ, ದಿವ್ಯಾನಂದಗಳನ್ನು ಪಡೆದಿರುತ್ತಾನೆ. ಸಕಲೇಂದ್ರಿಯಾತೀತ ಅನುಭವಾನಂದಗಳಲ್ಲಿ ಶರಣನಿರುತ್ತಾನೆ. ಶರಣನಲ್ಲಿ ಯಾವ ಇಂದ್ರಿಯ ವಾಸನೆಯಿರುವುದಿಲ್ಲ. ಕರಣ ತಾಳಿಕೆಯಿರುವುದಿಲ್ಲ.

" ಶಬ್ದವೆಂಬೆನೇ ?–ಶ್ರೋತ್ರದ ಎಂಜಲು.
ಸ್ಪರ್ಶವೆಂಬೆನೆ ?–ತ್ವಕ್ಕಿನ ಎಂಜಲು
ರೂಪವೆಂಬೆನೆ ?–ನೇತ್ರದ ಎಂಜಲು
ರುಚಿಯೆಂಬೆನೆ ?–ಜಿಹ್ವೆಯ ಎಂಜಲು
ಪರಿಮಳವೆಂಬೆನೆ ?–ಘ್ರಾಣದ ಎಂಜಲು
ನಾನೆಂಬೆನೇ ?–ಅರಿವಿನೆಂಜಲು
ಎಂಜಲೆಂಬ ಭಿನ್ನವಳಿದ ಬೆಳಗಿನೊಳಗಿನ ಬೆಳಗು
ಗುಹೇಶ್ವರ ಲಿಂಗವು.

ಶರಣ ಸಾಕ್ಷಾತ್ಕರಿಸಿಕೊಂಡ ಪ್ರಸಾದಲಿಂಗದ ಪರಿಯಿದು; ಪರಿಣಾಮವಿದು. ಪ್ರಕೃತಿಭಾವ ಪ್ರಪಂಚಭಾವ ಪದಾರ್ಥಭಾವಗಳನ್ನು ಪೂರ್ಣವಾಗಿ ಪರಿಹರಿಸಿ ಪೂರ್ಣಪ್ರಸನ್ನ ಚೇತನನಾಗಿರುತ್ತಾನೆ. ಪೂರ್ಣಕ್ರಿಯೆ ಪೂರ್ಣ ಪ್ರಜ್ಞೆ ಪೂರ್ಣೇಚ್ಛೆಗಳಿಂದ ಕೂಡಿದ ಶರಣ ಪರಿಚ್ಛಿನ್ನಭಾವ ಶೂನ್ಯನಾಗಿರುತ್ತಾನೆ. ಪ್ರಸನ್ನಾತ್ಮನಾದ ಆತನಿಗೆ ವಿಷಯಭಾವ ಇಂದ್ರಿಯ ಭಾವಗಳಿರುವುದಿಲ್ಲ. ಆತನು ಕೇಳುವುದು ಶಬ್ದವನ್ನಲ್ಲ; ಕೇಳಿದ್ದು ಶಬ್ದವಲ್ಲ; ಆತನು ಸೋಂಕುವುದು ಸ್ಪರ್ಶವನ್ನಲ್ಲ; ಸೋಂಕಿದ್ದು ಸ್ಪರ್ಶವಲ್ಲ. ಆತನು ಕಾಣುವುದು ರೂಪ

ವನ್ನಲ್ಲ; ಕಂಡದ್ದು ರೂಪವಲ್ಲ. ಆತನು ಸವಿಯುವುದು ರುಚಿಯನ್ನಲ್ಲ; ಸವಿದದ್ದು ರುಚಿಯಲ್ಲ. ಆತನು ಮೂಸುವುದು ಪರಿಮಳವನ್ನಲ್ಲ; ಮೂಸಿದ್ದು ಪರಿಮಳವಲ್ಲ. ಆತನು ಅರಿವುದು ಅಂಗನನ್ನಲ್ಲ; ಅರಿತದ್ದು ಅಂಗವಲ್ಲ. ಇಂದ್ರಿಯ ಕಾರ್ಯವಾಗಲಿ, ಅಂತಃಕರಣ ಕಾರ್ಯವಾಗಲಿ ಆತನಿಗಿಲ್ಲ. ಅವುಗಳ ಅಭಿಮಾನ ಅನುರಾಗಗಳೂ ಶರಣನಿಗಿರುವುದಿಲ್ಲ. ಅವೆಲ್ಲವೂ ಪ್ರಸಾದಲಿಂಗಕ್ಕೆ ಮೀಸಲು, ಹೀಗಿರುವಾಗ ಆತನಿಗೆ ಇನ್ನೆಲ್ಲಿಯದು ಎಂಜಲು ?

ಶರಣನದು ಬರಿ ಬುದ್ಧಿಯ ಬೆಳಗಲ್ಲ; ಭಾವಾನು ಭಾವದ ಬೆಳಗು; ಆತ್ಮಾನುಭವದ ಬೆಳಗು. ಅದು ಕರಣೇಂದ್ರಿಯಾತೀತವಾದ ಹೆಬ್ಬೆಳಗು. ಅದು ಪರಮಾಕಾಶದ ಪರಿಪೂರ್ಣ ಪರಂಜ್ಯೋತಿ, ಆ ಪ್ರಕಾಶ ಪರಮಾಕಾಶಸ್ವರೂಪ ಅದು ಶ್ರೋತ್ರ ವಿಶುದ್ಧಿಗಳೆರಡರ ಆಕಾಶಕ್ಕೆ ಆಕಾಶವಾಗಿ, ಪ್ರಕಾಶಕ್ಕೆ ಪ್ರಕಾಶವಾಗಿ ಪರಿಪೂರ್ಣವಾಗಿರುತ್ತದೆ. ಪರಿಪೂರ್ಣ ಪರಶಿವ ಬ್ರಹ್ಮವಾಗಿರುತ್ತದೆ ಅದರ ನೆಲೆ ನಿಲವುಗಳಿವು;

" ನೀ ನಾನೆಂಬುಭಯ ಸಂಗವಳಿದು,
ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ
ತುಟ್ಟತುದಿಯ ಮೆಟ್ಟಿನೋಡಲು
ಬಟ್ಟ ಬಯಲು ಕಾಣಬಹುದು ನೋಡಾ!
ಆ ಬಯಲ ಬೆರಸುವರೆ, ತ್ರಿಕೂಟ ಗಿರಿಯೊಳಗೊಂದು
ಕಾಣಬಾರದ ಕದಳಿಯುಂಟು ನೋಡಾ !
ಆ ಕದಳಿಯ ಕೊಳದಲ್ಲಿ ಒಳಹೊಕ್ಕು ನೋಡಲು,
ತೊಳಗಿ ಬೆಳಗುವ ಜ್ಯೋತಿಯುಂಟು ನೋಡಾ!
ನಡೆಯಲ್ಲಿಗೆ ತಾಯೆ! ಗುಹೇಶ್ವರಲಿಂಗದಲ್ಲಿ
ಪರಮ ಪದವಿ ನಿನಗೆ ಸ್ವಯವಹುದು ನೋಡಾ !"

ತನ್ನೊಳಗೆ ತೊಳಗಿ ಬೆಳಗುವ ತುಂಬು ಬೆಳಗದು. ಅಲ್ಲಿಗೆ ಹೋಗಲು ಅಲ್ಲಿ ನೆಲೆಸಲು ಶರಣ ಮಾತೆಗೆ ಮಾತ್ರ ಸಾಧ್ಯ. ಅದು ನಿಟಿಲ ಭ್ರೂಮಧ್ಯದ ಸ್ಪಟಿಕವರ್ಣದ ಜ್ಯೋತಿ ! ಅದು ತನಗೆ ಸ್ವಯವಾದರೆ ತನ್ನ ಕದಳಿ ರಸದಾಳಿಯಾಗುತ್ತದೆ. ಅದರ ಅಚ್ಚಳಿಯದ ದಿವ್ಯರಸಾನುಭೂತಿಯುಂಟಾಗುತ್ತದೆ.

" ಬೇರಿಲ್ಲದ ಗಿಡವಿಂಗೆ ಪರಿಮಳವಿಲ್ಲದ ಪುಷ್ಪ ಹುಟ್ಟಿ,
ರೂಹಿಲ್ಲದ ಅನಲನನು ಅವಗ್ರಹಿಸಿತ್ತು ನೋಡಾ !
ವೃಕ್ಷವಲ್ಲದ ದಳದಲ್ಲಿ ಒಂದು ಪಕ್ಷಿ ಹುಟ್ಟಿತ್ತು ನೋಡಾ !
ಅತ್ತಲಿತ್ತಲೂ ಕಾಣದೆ ನೆತ್ತಿಯ ನಯನದಲ್ಲಿ ನೋಡಿತ್ತಲ್ಲಾ !
ನಿತ್ಯಾನಂದ ಪರಿಪೂರ್ಣದ ನಿಲವಿನ–ಅಮೃತಬಿಂದುವಿನ
ರಸವ ದಣಿಯಲುಂಡು ಪಶ್ಚಿಮದಲ್ಲಿ
ಗುಹೇಶ್ವರಲಿಂಗವ ಸ್ವೀಕರಿಸಿತ್ತಲ್ಲಾ !"

ಅದು ಪರಮ ಪ್ರಕಾಶ ಸ್ವರೂಪ ಮಾತ್ರವಲ್ಲ ದಿವ್ಯರಸಸ್ವರೂಪವೂ ಆಗಿದೆ. ನಾದಾತ್ಮಕವೂ ಕಳಾತ್ಮಕವೂ ಆಗಿರುವಂತೆ ಬಿಂದ್ವಾತ್ಮಕವೂ ಆಗಿದೆ. ಅದು ನಿತ್ಯಾನಂದವನ್ನು ಕೊಡುವ ಅಮೃತಬಿಂದು. ಅದನ್ನು ಶರಣನು ದಣಿಯುಂಡು ನಿತ್ಯ ತೃಪ್ತನೂ ಪರಿಪೂರ್ಣನೂ ಆಗಿರುತ್ತಾನೆ. ಅದು ದಿವ್ಯಾನಂದ ರಸ. ಅದರ ಆಸ್ವಾದ ಶರಣನಿಗೆ ಅಚ್ಚಳಿಯದ ಸಂತಸ. ಅದು ಬೇರಿಲ್ಲದ ಗಿಡದಲ್ಲಿ ಪರಿಮಳವಿಲ್ಲದ ಪುಷ್ಪದಲ್ಲಿ ಅಂದರೆ ವಾಸನೆಯಿಲ್ಲದ ಹೃದಯ ಪುಷ್ಪದಲ್ಲಿ ನೆಲಸಿದ ದಿವ್ಯ ಮಕರಂದ. ಅದು ರೂಹುಳ್ಳ ತೇಜವಲ್ಲ. ಅದು ರೂಪಾತೀತ ತೇಜ; ಅದು ರುಚಿಯ ಮೀರಿದ ರಸ. ಅದನ್ನು ಆರೋಗಿಸುವ ಶರಣನೇ ಒಂದು ಹಕ್ಕಿ. ಮರವಿಲ್ಲದ ದಳದಲ್ಲಿ ವಿಶುದ್ಧ ಪದ್ಮದಲ್ಲಿ ಹುಟ್ಟಿ ಊರ್ಧ್ವಮುಖಿಯಾಗಿ ಚಿಚ್ಚಕ್ಷುವಾಗಿ ಸಹಸ್ರಾರಕ್ಕೆ ಏರಿ ಅಲ್ಲಿರುವ ಆ ಅಮೃತ ಬಿಂದುವನ್ನು ಆಸ್ವಾದಿಸಿ ಆಮೋದಿಸಿ ನಿತ್ಯಾನಂದದಿಂದ ಪರಿಪೂರ್ಣವಾಗಿ ಪಶ್ಚಿಮ ಪ್ರಭೆಯಲ್ಲಿ ಪರವಶವಾಗಿ ತಾನೆ ತಾನಾಗುವುದು. ಆ ದಿವ್ಯನಾದದಲ್ಲಿ ತಲೆದೂಗಿ ತನ್ಮಯವಾಗಿರುವುದು. ತುಯ್ದಾಟ ಹುಯ್ದಾಟಗಳಿಲ್ಲದಂತಿರುವುದು.

"ಉಲಿವ ಉಯ್ಯಲೆಯ ಹರಿದು ಬಂದೇರಲು
ತಾಗದೆ ತೂಗುವುದು ಭವಸಾಗರ,
ಮರಳಿ ಬಾರದಂತೆ ಹಂಸೆಯ ಮೇಲೆ ತುಂಬಿ ಕುಳ್ಳಿರ್ದು
ಸ್ವರಗೈವ ಘೋಷವದೇನೋ ?
ಆತನಿರ್ದು ಸರಹರಿಯದೆ ಇದ್ದಿತ್ತು.
ದೇಹಿಗಳೆಲ್ಲ ಅರಿವರೆ, ಗುಹೇಶ್ವರನ ಆ ಸ್ವರಮುಖವ ?"

ಆ ದಿವ್ಯನಾದ ಅಂತಹದು. ಅದರ ಆಮೋದ ಅನುಪಮವಾದುದು. ಅದು ಅಖಂಡನಾದ; ಅದರದು ಅಖಂಡ ಮೋದ. ಅದರಲ್ಲಿ ಅವಿರಳನಾದವನ ಶ್ವಾಸ ನಿಸ್ವಾಸಗಳು ನಿಂತುಹೋಗಿರುತ್ತವೆ. ಸಂಸಾರ ಸಸಾರವಾಗಿ ತಾಗದೆ ತೂಗುತ್ತಿರುತ್ತಿದೆ; ತೊಡಕಿಲ್ಲದೆ ತೊಳಲಿಲ್ಲದೆ ಸಾಗಿರುತ್ತದೆ. ಆಯುಷ್ಯದ ಆಳಕಿಲ್ಲದೆ ಬಾಳು ದೇರು ಆ ಭವ್ಯನಾದದಲ್ಲಿಗೆ ಸೇರಿರುತ್ತದೆ. ಕೊರತೆಯಿಲ್ಲದೆ ರಥಿಕನಿರುತ್ತಾನೆ. ತೆರಹಿಲ್ಲದೆ ತುಂಬಿಕೊಂಡಿರುತ್ತಾನೆ. ಮರಳಿ ಬರಲು ತೆರಹಿರುವುದಿಲ್ಲ. ಹಂಸೆಯೆಂಬ ಜೀವಾತ್ಮನ ಮೇಲೆ ತುಂಬಿಯೆಂಬ ಪರಮಾತ್ಮ ಕುಳಿತಿರುತ್ತಾನೆ. ಅಂದರೆ ಶರಣ–ಪೂರ್ಣನಾಗಿರುತ್ತಾನೆ. ಆ ಪರಾಸ್ವರ ಘೋಷವನ್ನು ತಾನೇ ಮಾಡಿ ತಾನೇ ಕಿವಿಯಿಲ್ಲದೆ ಕೇಳಿ ದಿಟಕ್ಕೂ ತುಂಬಿ ಆಗಿರುತ್ತಾನೆ.

" ತುಂಬಿ ಪರಿಮಳ ಉಂಡುದೋ,
ಪರಿಮಳ ತುಂಬಿಯನುಂಡುದೋ ?
ಲಿಂಗ ಪ್ರಾಣವಾಯಿತೋ, ಪ್ರಾಣಲಿಂಗವಾಯಿತೋ ?
ಗುಹೇಶ್ವರಾ, ಈ ಉಭಯದ ಭೇದವ ನೀನೇ ಬಲ್ಲೆ
ಗಿಡುವಿನ ಮೇಲೆ ತುಂಬಿ ಕೂಡೆ ವಿಕಸಿತವಾಯಿತ್ತು.
ತುಂಬಿ ನೋಡಾ ! ಆತುಮ ತುಂಬಿ ನೋಡಾ ! !
ಪರಮಾತುಮ ತುಂಬಿ ತುಂಬಿ ನೋಡಾ ! ! !
ಗುಹೇಶ್ವರ ಲಿಂಗಕ್ಕೆರಗಿ ನಿಬ್ಬೆರಗಾಯಿತ್ತು ತುಂಬಿನೋಡಾ !"

ಶರಣಾಂಗ ಪ್ರಸಾದಲಿಂಗ ಸಂಯೋಗ ಸಮರಸವಾದ ಪರಿಯಿದು; ಪರಿಪೂರ್ಣ ಸ್ವರೂಪವಿದು.

" ತೆರಹಿಲ್ಲದ ಘನವ ಮನ ಒಳಕೊಂಡು,
ತೆರಹಿಲ್ಲದ ಮನವ ಘನ ಒಳಕೊಂಡು
ತನಗೆ ತಾ ತರಹರವಾದ ಬಳಿಕ
ಮರಳಿ ಇನ್ನು ಇಂಬುಗೊಡಲುಂಟೆ ?
ಗುಹೇಶ್ವರನ ಲೀಲೆ ಮಾಬನ್ನಕ್ಕರ
ಉರಿಯೊಳಗಣ ಕರ್ಪುರದಂತೆ ಇರಬೇಕು."

ಅಹಂಕಾರವನೆ ಮರೆದು,
ದೇಹಗುಣಂಗಳನೆ ಜರಿದು,
ಇಹ ಪರವೆ ತಾನೆಂದರಿದ ಕಾರಣ
ಸೋಽಹಂಭಾವ ಸ್ಥಿರವಾಯಿತ್ತು.
ಸಹಜ ಉದಯದ ನಿಲುವಿಂಗೆ,
ಮಹಾಲಿಂಗದ ಬೆಳಗು ಸ್ವಾಯತವಾದ ಕಾರಣ
ಗುಹೇಶ್ವರಾ ನಿಮ್ಮ ಶರಣನುಪಮಾತೀತನು."

ಶರಣನ ಪೂರ್ಣವಾದ ಆತ್ಮವಿಕಾಸವಿದು. ಇದೊಂದು ವಿಲಕ್ಷಣವಾದ ಭೇದಾಭೇದ. ಉಸುರಬಾರದ ಪೂರ್ಣವಾದ. ಎರಡೊಂದಾಗಿ ಎಡೆದೆರಹಿಲ್ಲದಂತಾದ ಬಳಿಕ ಇದರೊಳಗೆ ಅದೋ, ಅದರೊಳಗೆ ಇದೋ–ವಿಂಗಡಿಸಿ ಹೇಳುವವರಾರು ? ಹೇಳುವುದೆಂತು ? ಅಂಗದಲ್ಲಿ ಲಿಂಗ, ಲಿಂಗದಲ್ಲಿ ಅಂಗ ಅವಿರಳವಾಗಿರುತ್ತವೆ. ಆತ್ಮನೇ ವಿಕಾಸಗೊಂಡು ಪರಮಾತ್ಮನೆನಿಸುತ್ತಾನೆ. ಚೂರ್ಣ (ಅಂಶ) ಭಾವವಳಿದು ಪೂರ್ಣಭಾವವುಳಿಯುತ್ತದೆ ಪೂರ್ಣಭಾವದಲ್ಲಿ ಹಿಂಚುಮುಂಚಿಲ್ಲ. ಅದಿದೆಂಬುದಿಲ್ಲ. ಕಾರ್ಯಕಾರಣ ಭಾವವಿಲ್ಲ. ಅಹಂಕಾರವಾಗಲಿ ಅಂಗಗುಣವಾಗಲಿ, ಇಹ-ಪರವೆಂಬ ಅರಿವಾಗಲಿ ಇರುವುದಿಲ್ಲ. 'ಸೋಽಹಂ' ಎಂಬ ಸಹಜಭಾವ ಮಾತ್ರ ಸ್ಥಿರಗೊಂಡಿರುತ್ತದೆ. ಅದೇ ಆ ಪೂರ್ಣಲಿಂಗದ ಪ್ರಭೆ. ಅದು ಸ್ವಾಯತವಾದ ಶರಣನಿಗೆ ಸಾದೃಶ್ಯ ಬೇರಿಲ್ಲ; ಇರುವುದಿಲ್ಲ. ಅವನೇ ಅವನು

"ನಿಜವನರಿದ ನಿಶ್ಚಿಂತನೆ, ಮರಣವ ಗೆಲಿದ ಮಹಂತನೆ ;
ಘನವನೊಳಕೊಂಡ ಮಹಿಮನೆ, ಪರವನೊಳಕೊಂಡ ಪರಿಣಾಮಿಯೆ ;
ಬಯಲಲ್ಲಾದ ಭರಿತನೆ, ಗುಹೇಶ್ವರಲಿಂಗ—
ನಿರಾಳವನೊಳಕೊಂಡ ಸಹಜನೆ—ಶರಣನು."

ಶರಣ ಬಯಲ ಭರಿತ; ಭವ್ಯ ಚರಿತ. ನಿರಾಳವನೊಳಕೊಂಡ ಸಹಜ; ಘನವನೊಳಕೊಂಡ ಮಹಿಮ;

ಶರಣನದು ಪರಾಪ್ರಕೃತಿ; ಪೂರ್ಣ ಪ್ರಗತಿ ಅವನಲ್ಲಿ ಇರುತ್ತದೆ ಅಕ್ಷಯವಾದ ಕ್ರಿಯಾಶಕ್ತಿ; ಅನುಪಮವಾದ ಜ್ಞಾನಶಕ್ತಿ. ಪರಾವಿದ್ಯೆಯಲ್ಲಿ ಆತ ಪ್ರವೀಣ. ಪರಾಶಕ್ತಿ ಸಂಪನ್ನ ಪರಾಶಕ್ತಿ ಶರಣನ ಅಂತಃಸತ್ವ. ಭಕ್ತಸ್ಥಲದಲ್ಲಿ ಬಾಹ್ಯಸತ್ವವನ್ನು ಸಂಗಳಿಸಿಕೊಂಡ ಶರಣ ಮುಂದಿನ ಮಾಹೇಶಾದಿಸ್ಥಲಗಳಲ್ಲಿ ಕ್ರಮ ಕ್ರಮವಾಗಿ ಅಂತಸ್ಸತ್ವವನ್ನು ಸಂಪಾದಿಸಿಕೊಳ್ಳುತ್ತ ಶರಣಸ್ಥಲದಲ್ಲಿ ಸಂಪೂರ್ಣ ಸತ್ವಶಾಲಿಯಾಗುತ್ತಾನೆ. ದೈಹಿಕ ಬೌದ್ಧಿಕ ಮಾನಸಿಕ ದುರ್ಬಲತೆಗಳನ್ನೆಲ್ಲ ದೂರಮಾಡಿರುತ್ತಾನೆ. ಅತೀಂದ್ರಿಯ ವಿಷಯವಿಚಾರ ಶರಣನಿಗೆ ಗೋಚರವಾಗುತ್ತದೆ. ಆ ಅರಿವಿನಲ್ಲಿ ಅನುಭೂತಿ ಕರಿಗೊಂಡು ಪರಿಣತನಾಗಿರುತ್ತಾನೆ.

ಆಗಸ ಮೀಮಾಂಸೆ

ಷಡ್ಭೂತಗಳಿಂದ ದೃಶ್ಯಪ್ರಪಂಚ ಹುಟ್ಟಿದೆ. ಪೃಥ್ವಿ ಆಪ್ ತೇಜ ವಾಯು ಆಕಾಶ ಮತ್ತು ಆತ್ಮ ಇವಾರು ಷಡ್ಭೂತಗಳು. ಇದು ಷಟ್‌ಸ್ಥಲ ಮೀಮಾಂಸೆ. ಇಷ್ಟೇ ಅಲ್ಲ ಇನ್ನೂ ಇದರ ವಿಲಕ್ಷಣ ಮೀಮಾಂಸೆ ಮುಂದುವರಿದಿದೆ. ಅದನ್ನು ಮನಗಾಣುವ ದೃಷ್ಟಿಯಿರಬೇಕು.

ಸೃಷ್ಟಿಯ ಘಟನೆಗಳು ಅನಂತ, ಅವುಗಳಿಗೆಲ್ಲ ಮೂರು ಮೂಲ ಕಾರಣಗಳು: ಒಂದು ಪರಮಪದಾರ್ಥ, ಇನ್ನೊಂದು ಪರಾಶಕ್ತಿ; ಮತ್ತೊಂದು ಆಗಸ.

ಪದಾರ್ಥಗಳಲ್ಲಿ ಮೂರು ಬಗೆ: ದೃಶ್ಯ ದೃಶ್ಯಾದೃಶ್ಯ ಅದೃಶ್ಯ ಎಂದು. ದೃಶ್ಯ ಪದಾರ್ಥಗಳು ಪೃಥ್ವಿ ಅಪ್ ತೇಜಗಳು. ದೃಶ್ಯಾದೃಶ್ಯಗಳು ವಾಯು ಆಗಸಗಳೆರಡು, ಅದೃಶ್ಯ ಶಕ್ತಿವಿಶಿಷ್ಟವಾದ ಆತ್ಮ. ದೃಶ್ಯ ಪದಾರ್ಥಗಳು ಕಠಿಣವಾಗಿ ತೇವವಾಗಿ ಬಿಸಿಯಾಗಿ ಅಥವಾ ಬೆಳಕಾಗಿ ಕಾಣುತ್ತವೆ. ವಾಯ್ವಾ

ಕಾಶಗಳೆರಡು ಸ್ಪರ್ಶಾವಕಾಶಗಳ ರೂಪದಲ್ಲಿ ಕಂಡೂ ಕಾಣದಂತಿರುತ್ತವೆ. ಆತ್ಮನು ಕಾಣದಂತಿರುತ್ತಾನೆ. ಇವನ್ನು ಕ್ರಮವಾಗಿ ಜಡ-ಜಡಾಜಡ-ಅಜಡ ಎಂದು ಹೇಳುವುದುಂಟು.

ಈ ಷಡ್ಭೂತಗಳಲ್ಲಿ ಆತ್ಮನನ್ನು ಬಿಟ್ಟರೆ ಆಕಾಶಸ್ಥಾನ ಸೃಷ್ಟಿಯ ಸಂವಿಧಾನದಲ್ಲಿ ತುಂಬ ದೊಡ್ಡದು. ಇಡೀ ವಿಶ್ವ ಆಗಸದ ಆಧಾರದಲ್ಲಿದೆ. ವಿಶ್ವಕ್ಕೆ ಆಗಸವೇ ತಂದೆ, ಈ ನೆಲವೆ ತಾಯಿ.

ಅನಂತ ವಿಶ್ವ ಆಗಸದ ಅವಕಾಶದಲ್ಲಿದೆ. ಅಂತರಾಳದಲ್ಲಿ ತೊಟ್ಟಿಲಂತೆ ತೂಗಾಡುತ್ತಿದೆ ಆ ಆದಿಶಕ್ತಿಯ ಬಲದಿಂದ ಅಸೀಮವಾದ ಆಗಸದಲ್ಲಿ ಈ ಜಗತ್ತು ಜನ್ಮವೆತ್ತಿ ಜೀವಿಸುತ್ತಿದೆ. ಕೊನೆಯಲ್ಲಿ ಆಗಸದಲ್ಲಿಯೇ ಅದೃಶ್ಯವಾಗುತ್ತದೆ.

ನೆಲ ನೀರು ಬೆಳಕು ಗಾಳಿಗಳಿಗೆ ಆಶ್ರಯಸ್ಥಾನವಾಗಿದೆ ಆಕಾಶ. ಅಂತಹ ಆ ಆಕಾಶಕ್ಕೆ ಆಶ್ರಯ ಆತ್ಮ. ಆತ್ಮನಿಗೆ ಆಕಾಶವೆಂದು ಮತ್ತೊಂದು ಹೆಸರು. ನಿರವಯಲೆಂದು ಶರಣರು ಹೇಳುತ್ತಾರೆ ಈ ದೃಷ್ಟಿಯಿಂದ ಆಕಾಶಾತ್ಮಗಳಲ್ಲಿ ಅಭಿನ್ನತೆ ಅಭಿವ್ಯಕ್ತವಾಗುತ್ತದೆ.

ಆತ್ಮನ ಆ ಪರಾಶಕ್ತಿಯ ಒಂದು ಬಿಂದು ಆಗಸ, ಈ ಜಗತ್ತಿಗೆ ಮಹತ್ತರ ಆ ಆಗಸ. ಆಗಸಾಂಗನಾದ ಶರಣನೂ ಅಷ್ಟೆ ! ಶಕ್ತಿ ವಿಶಿಷ್ಟ ಶಿವನಿಗೆ ಶರಣ; ಸಾಮಾನ್ಯರ ಜೀವನ ಭರಣ.

ಆ ಮಹಾಶಕ್ತಿಯ ಸ್ಪಂದನವೆ ಈ ಜಗತ್ತು.
ಆ ಮಹಾಶಕ್ತಿ ಸಾಗರದ ಅಲೆಗಳು ಈ ಜಗತ್ತುಗಳು.

ನೆಲ ನೀರು ಬೆಳಕುಗಳು ಕಣ್ಣಿಗೆ ಕಾಣುತ್ತವೆ, ಗಾಳಿ ತ್ವಕ್ಕಿಗೆ ಗೋಚರಿಸುತ್ತದೆ. ಆಗಸ ಕಿವಿಗೆ ಗೋಚರವಾಗುತ್ತದೆ. ಆತ್ಮಶಕ್ತಿ ಹೃದಯಕ್ಕೆ ಗೋಚರವಾಗುತ್ತದೆ,

ಆಗಸ ನಾದಮಯಿ. ಆತ್ಮಶಕ್ತಿ ನಾದಾತೀತ. ಜನಜೀವನದಲ್ಲಿ ನಾದಕ್ಕಿರುವ ಸ್ಥಾನ ಅತ್ಯಂತ ಹಿರಿಯದು. ಜಾಗತಿಕ ಜೀವನದಲ್ಲಿಯೂ ಅಷ್ಟೆ! ನಾದ ರಹಿತವಾಗಿದ್ದರೆ ಜೀವನ ಜಡವಾಗುತ್ತಿತ್ತು. ನಾದಾವಕಾಶಗಳಿಂದ ಜೀವನ ಸಚೇತನವೆನಿಸಿದೆ. ನಾದ ತರಂಗದಿಂದ ತುಂಬಿದೆ ಜಡಾಜಡ ಜಗತ್ತು.

ನಾದ ಕಾರ್ಯ ಶಬ್ದ. ಶಬ್ದವಾಹಿ ವಾಯು, ಒಂದಕ್ಕೊಂದು ಸಹಕಾರಿ. ನಾದ ಶ್ರಾವ್ಯ ಅಶ್ರಾವ್ಯವೆಂದು ಎರಡು ಬಗೆ! ಸ್ಥೂಲನಾದ ಕಿವಿಗೆ ಶ್ರಾವ್ಯವಾಗುತ್ತದೆ. ಅತ್ಯಂತ ಸೂಕ್ಷ್ಮವಾದ ಕಿವಿಗೆ ಶ್ರಾವ್ಯವಾಗುತ್ತದೆ. ಅತ್ಯಂತ ಸೂಕ್ಷ್ಮನಾದ ಕಿವಿಗೆ ಅಶ್ರಾವ್ಯವಾಗಿರುತ್ತದೆ. ಅದನ್ನು ಆತ್ಮನಾದವೆಂದು ಹೇಳುತ್ತೇವೆ. ಅದು ಶ್ರವಣಾತೀತ ನಾದ. ಅದು ಜ್ಞಾನಾನುಭವಕ್ಕೆ ಮಾತ್ರ ಗೋಚರ.

ಆಕಾಶದಿಂದ ಉತ್ಪನ್ನವಾದ ನಾದ ತರಂಗ ವಾಯುಗತವಾಗಿ ಕಿವಿಗೆ ಕೇಳುವಂತಾಗುತ್ತದೆ. ಅದೇ ಆಕಾಶದಿಂದ ಉತ್ಪನ್ನವಾದ ವಿದ್ಯುತ್ತರಂಗ ಅಗ್ನಿಗತವಾಗಿ ಕಣ್ಣಿಗೆ ಕಾಣುತ್ತದೆ. ಇದು ಸ್ಥೂಲಕ್ರಿಯೆ. ಇದರ ಹಿನ್ನೆಲೆಯ ಸೂಕ್ಷ್ಮಕ್ರಿಯೆ ಸೆಕೆಯಾಗಿ ತ್ವಕ್ಕಿಗೂ ಗೋಚರಿಸುವ ಅನುಭವವಿಲ್ಲದಿಲ್ಲ. ಒಟ್ಟಿನಲ್ಲಿ ವಿಯತ್ತಿನಿಂದ ಉಂಟಾದ ವಿದ್ಯುತ್ತರಂಗ ಜನ್ಯ ಬಿಸಿ ಅಥವಾ ಕಾವು ತ್ವಗಿಂದ್ರಿಯಕ್ಕೂ ಬೆಳಕು ಮಿಂಚುಗಳು ನೇತ್ರೇಂದ್ರಿಯಕ್ಕೂ ಗೋಚರವಾಗುತ್ತವೆ. ಅಂತೆಯೇ ನಾದಸ್ಪಂದನ ಮಾತ್ರ ಶ್ರವಣ ಗೋಚರವಾಗಿ ಇಗೋಚರವಾಗಿ ಇರುತ್ತದೆ.

ಆಕಾಶದ ನಾದ ಮತ್ತು ವಿದ್ಯುತ್ ತರಂಗಗಳೆರಡು ನೇತ್ರ ತ್ವಕ್ ಶ್ರೋತ್ರೇಂದ್ರಿಯಗಳನ್ನು ತಮ್ಮ ತಮ್ಮ ಸ್ಪಂದನಗಳಿಂದ ಉತ್ತೇಜನಗೊಳಿಸುತ್ತವೆ.

ಆಗಸದ ಮುಖ್ಯಗುಣ ನಾದ. ಇದಕ್ಕೆ ಮೂಲ ಆ ಪರಾಶಕ್ತಿ. ಅದು ಪರಾವಾಣಿಯಾಗಿ ಸ್ಪಂದನವಾದರೆ ಶ್ರವಣೇಂದ್ರಿಯಕ್ಕೆ ಅತೀತವಾಗಿರುತ್ತದೆ. ವೈಖರೀ ವಾಣಿಯಾದಾಗ ಶ್ರವಣವಿಷಯವಾಗುತ್ತದೆ. ಪಶ್ಯಂತಿಯಾದಾಗ ಜ್ಞಾನಗೋಚರವಾಗುತ್ತದೆ. ಮಧ್ಯಮೆಯಾದಾಗ ಹೃದಯ ವೇದ್ಯವಾಗುತ್ತದೆ.

ನಾದ ಬಿಂದು ಕಳೆಗಳಿಂದ ಕೂಡಿದುದು ಆಕಾಶ ನಾದ ಬಿಂದು ಕಳಾತೀತವಾದುದು ಆತ್ಮ. ನಾದಬಿಂದು ಕಳೆಗಳಿಂದ ಜೀವನ. ನಾದಬಿಂದು ಕಳೆಗಳಿಲ್ಲದಿರುವಿಕೆಯೆ ಜೀವನ್ಮುಕ್ತಿ. ಇಲ್ಲದಿರುವಿಕೆಯೆಂದರೆ ಅತೀತಾವಸ್ಥೆ. ಅದೇ ಶೂನ್ಯಸ್ಥಿತಿ. ಅದು ಎಲ್ಲವೂ ಉಳ್ಳ–ಅಲ್ಲಿ ಏನೂ ಗೋಚರವಾಗದ ಸ್ಥಿತಿ. ಅದೇ ಪರಿಪೂರ್ಣ; ಅದೇ ಶೂನ್ಯ.

ಆಕಾಶದ ನಾದಸ್ಪಂದನದಿಂದ ಸಕಲ ಶಬ್ದ ಪ್ರಪಂಚ ಉತ್ಪತ್ತಿಯಾಗಿದೆ; ಬಿಂದು ಸ್ಪಂದನದಿಂದ ಸಕಲ ರಸೋತ್ಪತ್ತಿಯಾಗಿದೆ ; ಕಳಾಸ್ಪಂದನದಿಂದ ಸಕಲ ರೂಪುಗಳುಂಟಾಗಿವೆ; ರವಿ ಶಶಿ ತಾರಕಾಗ್ನಿಗಳುಂಟಾಗಿವೆ. ಆ ಸೂರ್ಯ ಕಿರಣಗಳಿಂದ ಬೆಳೆಯುತ್ತವೆ ಸಸ್ಯಾದಿಗಳು ಬಿಂದು ವರ್ಷಣದಿಂದ ರಸ ದುಂಬುತ್ತವೆ. ಸಸ್ಯಾಹಾರದಿಂದ ಪ್ರಾಣಿಗಳು ಜೀವಿಸುತ್ತವೆ. ಆಕಾಶದ ನಾದ ಬಿಂದುಕಳಾತ್ಮಕ ತ್ರಿವಿಧ ಸ್ಪಂದನದಿಂದ ಜೀವಲೋಕ ಬಾಳಿದೆ. ಜೀವನ ಪ್ರವಾಹ ಅವಿಚ್ಛಿನ್ನವಾಗಿ ಸಾಗಿದೆ.

ಮಹಾ ಸಾಗರದಂತಿರುವ ಆ ಪರಾಶಕ್ತಿಯ ಒಂದು ಸುಳಿಯಾಗಿದೆ ಆಕಾಶ. ಆ ಪರಾಶಕ್ತಿಯ ಬಲದಿಂದ ಮುಗಿಲ ಸುಳಿಯಲ್ಲಿ ಪರಮಾಣುಗಳ ಸಂಬಾಘದಿಂದ ಬಿಂದು, ಬಿಂದುಗಳ ಸಂಬಂಧದಿಂದ ಜಗತ್ತು ಜನಿಸಿದೆ. ಅನೇಕ ಜಗತ್ತುಗಳು ಆಕಾಶಮಂಡಲದಲ್ಲಿ ಸುಳಿದಾಡುತ್ತಿವೆ, ಅನಾದಿಕಾಲದಿಂದ ರಾರಾಜಿಸುತ್ತಿವೆ. ಅನಂತಕಾಲ ಬಾಳಲಿವೆ. ಇತಿಹಾಸದಂತೆ ಭವಿಷ್ಯವನ್ನೂ ರೂಪಿಸಲಿವೆ. ಆ ಪರಾಪ್ರಕೃತಿಯ ಶಕ್ತಿಯೇ ಅಂತಹದು, ಅದನ್ನು ಆಳವಡಿಸಿಕೊಳ್ಳುತ್ತಾನೆ ಶರಣನು.

ಜೀವಿಗಳಲ್ಲಿ ಮಾನವ ಚರಮ ಜೀವಿ; ಮಾನವರಲ್ಲಿ ಶರಣ ಚರಮ ಜೀವಿ. ಉಳಿದ ಪ್ರಾಣಿಗಳಿಗಿಂತ ಮಾನವನು ಪೂರ್ಣಾಂಗನು; ಪೂರ್ಣಶಕ್ತನಲ್ಲ. ಪರಿಪೂರ್ಣ ಶಕ್ತನು ಶರಣನು.

ಮಾನವನು ಸಾಮಾನ್ಯ ನಾದಬಿಂದು ಕಳೆಗಳಿಂದ ಕೂಡಿದ್ದರೆ ಶರಣನು ಅಸಾಮಾನ್ಯವಾದ ಚಿನ್ನಾದ ಚಿದ್ಬಿಂದು ಚಿತ್ಕಳೆಗಳಿಂದ ಕೂಡಿರುತ್ತಾನೆ. ಜ್ಞಾನ ಕ್ರಿಯೇಚ್ಛೆಗಳಿಂದ ಪರಿಪೂರ್ಣನಾಗಿರುತ್ತಾನೆ. ಆಗಸಾಂಗನಾಗಿ ಉದಯವಾದ ಶರಣನು ತನ್ನ ಅಗಾಧ ಪ್ರಗತಿಯಿಂದ ಮರಳಿ ಆ ಆಗಸಾಂಗಕ್ಕೆ ಚೇತನವಾದ

ಪ್ರಸಾದಲಿಂಗವಾಗಿ ಪರಿಣಮಿಸುತ್ತಾನೆ. ಪರಾಶಕ್ತಿಯಾಗಿ ಸತ್ತೆಯನ್ನು ಪಡೆಯುತ್ತಾನೆ. ಪರಂಜ್ಯೋತಿಯಾಗಿ ಪ್ರಕಾಶಿಸುತ್ತಾನೆ. ಪರಮರಸವಾಗಿ ಪ್ರಮೋದಿಸುತ್ತಾನೆ. ಪರಮ ನಾದಾನುಸಂಧಾನಿಯಾಗಿ ಪೂರ್ಣಪ್ರಜ್ಞೆಯನ್ನು ಪಡೆಯುತ್ತಾನೆ. ಅಂತಹ ಆ ಸತ್ಯ ಶರಣಜೀವನ ಅದೊಂದು ಪೂರ್ಣಯೋಗ. ಅವನು ಪೂರ್ಣಯೋಗಿ. ಆಗಸಾಂಗನಾದ ಶರಣ ತನ್ನ ಬಾಳನ್ನು ಪೂರ್ಣಗೊಳಿಸಿಕೊಂಡಿರುತ್ತಾನೆ. ಆತನದು ತುಂಬ ಬಾಳು.

ಚಿತ್ತ ಬುದ್ಧಿಗಳ ಸಮುನ್ನತಿ ನಿರಹಂಕಾರವಂತಿ ಘನಮನ ಪೂರ್ಣಪ್ರಜ್ಞೆ ಆತ್ಮತೃಪ್ತಿ ಭಾವವಿಕಾಸ ಇವುಗಳನ್ನು ಶರಣನು ಅಳವಡಿಸಿಕೊಂಡಿರುತ್ತಾನೆ. ಕ್ರಿಯಾನಿಷ್ಪತ್ತಿ ಭಾವನಿಷ್ಪತ್ತಿ ಜ್ಞಾನನಿಷ್ಪತ್ತಿಗಳು ಶರಣನಿಗೆ ಮೈಗೂಡಿರುತ್ತವೆ. ತಾಮಸ ನಿರಸನವಾಗಿ ನಿಜ ನಿರ್ದೇಶನವಾಗಿ ಶೀಲ ಸಂಪಾದನವಾಗಿರುತ್ತದೆ. ಇವು ಜ್ಞಾನ ವಿಕಾಸದ ಕುರುಹುಗಳು. ಶೀಲ ಮಾನವನನ್ನು ಮೇಲಕ್ಕೆ ಒಯ್ಯುತ್ತದೆ. ಶೀಲಮತ್ತು ಸಂಸ್ಕೃತಿಗಳಿಂದ ಮಾನವ ಪೂರ್ಣತೆಗೇರುತ್ತಾನೆ.

ಮನೆಯನ್ನು ತುಂಬುವುದೆ ಮಾನವನ ಮುಖ್ಯಗುರಿಯಲ್ಲ; ಅದರಲ್ಲಿಯೂ ಆಕಾಶತತ್ತ್ವದ ಶರಣನದಂತೂ ಅಲ್ಲವೇ ಅಲ್ಲ. ಮನ ತುಂಬುವುದೇ ದಿಟವಾದ ತುಂಬುವಿಕೆ. ಜ್ಞಾನವನ್ನು ಆನಂದವನ್ನು ತುಂಬಿಕೊಳ್ಳುವುದೆ ಶರಣನ ಕರ್ತವ್ಯ. ಸತ್ಕ್ರಿಯೆಯಿಂದ ಸಂಜ್ಞಾನದಿಂದ ಸ್ವಾನುಭವದಿಂದ ಶೈವೀ ಸಾಹಿತ್ಯದಿಂದ ತುಂಬಿದ ಬಾಳೇ ಬಾಳು; ಬದುಕೇ ಬದುಕು. ಆಗ ಶರಣ ಘನಮನ ಸಂಪನ್ನನಾಗುತ್ತಾನೆ. ಕ್ರಿಯಾಪ್ರಕಾಶನವಾಗದೆ ಶರಣ ಪೂರ್ಣನಾಗನು. ಶರಣನ ಜೀವನಾಗಸದಲ್ಲಿ ಕ್ರಿಯಾಜ್ಞಾನ ಪ್ರಕಾಶವೇ ಚಂದ್ರಸೂರ್ಯರು.

ಶರಣನ ಪಿಂಡಾಕಾಶದಲ್ಲಿ ಕ್ರಿಯಾಪ್ರಕಾಶನ, ಬಿಂದ್ವಾಕಾಶದಲ್ಲಿ ಭಾವಪ್ರಕಾಶನ, ಮಹಾಕಾಶದಲ್ಲಿ ಜ್ಞಾನಪ್ರಕಾಶನವಾಗಬೇಕು. ಆಗ ಜೀವನ ಪೂರ್ಣವಾಗುತ್ತದೆ. ಶರಣತನ ಸಮನಿಸುತ್ತದೆ. ಆಗ ಶರಣನು ರವಿ ಶಶಿ ತಾರೆಗಳುಳ್ಳ ಆಗಸದಂತೆ ಶೋಭಿಸುತ್ತಾನೆ.

ಉಲುಹು ಆಗಸ ತಂದೆಯ ಒಡಲಸಿರಿ. ಆಗಸವಿರುವೆಲ್ಲೆಲ್ಲ ಉಲುಹು ಇರುತ್ತದೆ; ಉಲುಹು ಇರುವಲ್ಲೆಲ್ಲ ಆಗಸವಿರುತ್ತದೆ. ನಿಸರ್ಗದ ಉಲುಹಿಗಿಂತ

ಜಡದ್ರವ್ಯಗಳ ಉಲುಹು, ಜಡದ್ರವ್ಯಗಳ ಉಲುಹಿಗಿಂತ ಪ್ರಾಣಿಗಳ ಉಲುಹು, ಪ್ರಾಣಿಗಳ ಉಲುಹಿಗಿಂತ ಮಾನವರ ಉಲುಹು ಮಾನವರಉಲುಹಿಗಿಂತ ಮಹಾ ಶರಣರ ಉಲುಹು ಉತ್ತಮವಾಗಿರುತ್ತದೆ. ಶರಣನ ಅಮೃತವಾಣಿಯಿಂದ ಬಂದ ಉಲುಹಿನಲ್ಲಿ ಉಜ್ವಲತೇಜಸ್ಸು ಇರುತ್ತದೆ. ಅದನ್ನು ಆಲಿಸಿದವರಿಗೆ ಸರ್ವಶ್ರೇಯಸ್ಸು ಉಂಟಾಗುತ್ತದೆ. ಶರಣ ಸಾಹಿತ್ಯಮೇಘ ಸ್ವಾನುಭವವನ್ನು ವರ್ಷಿಸುತ್ತದೆ. ಸರ್ವೋದಯದ ಸಸಿಯನ್ನು ಸಮೃದ್ಧವಾಗಿ ಸುಳಿದೆಗೆದು ಬೆಳೆಯಿಸುತ್ತದೆ; ಅಮೃತಫಲಗಳನ್ನೀಯುತ್ತದೆ. ಶರಣವಾಣಿ ಅಮೃತವಾಣಿ ! ತಮಸ್ಸನ್ನು ತೊಡೆವ ತೇಜಶ್ಶ್ರೇಣಿ! ಅದು ವಿಶಾಲಭಾವ, ವಿಶುದ್ಧಭಾವ, ಉನ್ನತ ಆದರ್ಶಗಳನ್ನು ಉಂಟುಮಾಡುವ ಪ್ರಾಸಾದಿಕವಾಣಿ ! ಆಕಾಶದಿಂದ ನೀರು ಬೆಳಕುಗಳನ್ನು ಜಗತ್ತು ಪಡೆಯುತ್ತಿರುವಂತೆ ವಿಶಾಲವಾದ ಶರಣವಾಣಿಯಿಂದ ದಿವ್ಯರಸ ದಿವ್ಯಪ್ರಕಾಶಗಳನ್ನು ಪಡೆಯ ಬಹುದಾಗಿದೆ. ಶರಣವಾಣಿ ವಿನೂತನ ಕ್ರಾಂತಿಗೆ ಚಿರಂತನ ಶಾಂತಿಗೆ ಕಾರಣವಾಗಿ ಸ್ಫೂರ್ತಿಕಿರಣವಾಗಿ ಇರುತ್ತದೆ. ಸಕಲ ಜೀವರಾಶಿಗೆ ಲೇಸ ಬಯಸುವ ಸವಿಗಾರಿಕೆ ಅದರಲ್ಲಿರುತ್ತದೆ; ಹುಣ್ಣಿಮೆಯ ತುಂಬು ತಿಂಗಳಂತೆ ಅದು ಎಲ್ಲರ ಬಾಳಿಗೆ ತಂಪನ್ನೀಯುತ್ತದೆ · ಸೊಂಪನ್ನೀಯುತ್ತದೆ.

ಮದವಳಿಗೆ ಮದವಳಿಗ

“ ಗುರುವೇ ತೆತ್ತಿಗನಾದ
ಲಿಂಗವೇ ಮದುವಣಿಗನಾದ, ಆನು ಮದುವಳಿಗೆಯಾದೆ;
ವಸುಧೆಯ ಭಕ್ತರೆಲ್ಲರು ನಿಬ್ಬಣಿಗರಾದರು.
ಕೊಟ್ಟರು ಸಾದೃಶ್ಯವಪ್ಪ ಗಂಡನ ನೋಡಿ !
ಇದು ಕಾರಣ ಚನ್ನಮಲ್ಲಕಾರ್ಜುನಯ್ಯನೇ ಗಂಡನೆನಗೆ !”

ಮದವಳಿದು ಮದುವಣಿಗಿಯಾಗುವುದು ಅಷ್ಟೊಂದು ಸುಲಭವೇನಲ್ಲ; ಸಣ್ಣ ಸಾಧನೆಯೇನಲ್ಲ. ಹುಟ್ಟಿನಿಂದಲೂ ಸಾಧನೆ ಸಾಗಿಬಂದಿರಬೇಕು; ಹಂತ ಹಂತ ಹತ್ತಿ ಬಂದಿರಬೇಕು. ಹುಟ್ಟೆಂದರೆ ಇಲ್ಲಿ ತಾಯಿ-ತಂದೆಗಳಿಂದ ಮಾತ್ರವಲ್ಲ; ಶ್ರೀಗುರು ದೇವನ ಹಸ್ತದಲ್ಲಿ ಹುಟ್ಟಬೇಕು. ಶ್ರೀಗುರುದೇವನ ಕರುಣೆಯಲ್ಲಿ ಬೆಳದಿರಬೇಕು. ಆತನ ಅ ಸುಜ್ಞಾನಾಮೃತದಲ್ಲಿ ಸತ್ಕ್ರಿಯೆಯೆಂಬ ಸಕ್ಕರೆವೆರಸಿ ಕುಡಿದು ಬೆಳದಿರಬೇಕು. ಪರಮಾರ್ಥಾನುಭವವೆಂಬ ಹೊಸಜವ್ವನ ಹುರಿಗೂಡಿರಬೇಕು. ಇಂತಾದಾಗ ಮದುವಣಿಗಿಯಾಗುವ ಭಾಗ್ಯವೊದಗುತ್ತದೆ. ಭಕ್ತಾದಿಸ್ಥಲಗಳಲ್ಲಿ ಕ್ರಮವಾಗಿ ಕಾಮ ಕ್ರೋಧ ಲೋಭ ಮೋಹಗಳನ್ನು ಅಳಿದು ಇದೀಗ ಅಯ್ದನೆಯದಾದ ಶರಣಸ್ಥಲದಲ್ಲಿ ಆಯ್ದನೆಯದಾದ ಮದವನ್ನು ಅಳಿಯಲು ಸನ್ನದ್ಧವಾಗಿದ್ದರೆ ಅಥವಾ ಮದವನ್ನು ಅಳಿದಿದ್ದರೆ ಮದವಳಿಗೆಯಾಗುವ ಸೈಪು ಸಮನಿಸುತ್ತದೆ. ಮದುವಣಿಗಿ ಆಗುವ ಅಂದರೆ ಮದುವೆಯ ಮಗಳಾಗುವ ಯೋಗವೊದಗುತ್ತದೆ.

ಶರಣ ಎಂಬ ನಾಮಪದದರ್ಥ ಸಾರ್ಥಕವಾಗುತ್ತದೆ. ಮದವಳಿಯಂದೆ ಶರಣಾಗಲೂ ಸಾಧ್ಯವಿಲ್ಲ. ಶರಣಾಗದೆ ಮದುವಣಿಗಿಯಾಗಲು ಸಾಧ್ಯವಿಲ್ಲ. ಮದವಳಿಗೆ ಮದುವಣಿಗಿ ಎರಡೂ ಸಾರ್ಥಕವಾದ ಸಮರ್ಪಕವಾದ ಪದಗಳು ಶರಣತನವನ್ನು ಸೂಚಿಸುವ ಪದಗಳು.

ಅಂಗ ಮಾತ್ರ ಮದವಳಿಗೆಯಾದರೆ ಮದುವಣಿಗಿಯಾದರೆ ಸಾಲದು; ಲಿಂಗವೂ ಮದವಳಿಗನಾಗಬೇಕು; ಮದುವಣಿಗನಾಗಬೇಕು. ಲಿಂಗಯ್ಯನೂ ಶ್ರೀಗುರುದೇವನ ಹಸ್ತದಲ್ಲಿ ಹುಟ್ಟಿ ಬರಬೇಕು. ಜ್ಞಾನಕ್ರಿಯಾನುಭವಗಳಿಂದ ಬೆಳೆದು ಪ್ರೌಢನಾಗಬೇಕು. ಪ್ರಸನ್ನ ಹೃದಯವುಳ್ಳವನಾಗಿರಬೇಕು. ಅಂದರೆ ಶ್ರೀಗುರುವಿನ ಕರುಣೋಪದೇಶದಿಂದ ಕಾಯಮದ ಆತ್ಮಮದಗಳೆರಡನ್ನೂ ಬಿಟ್ಟಿರಬೇಕು. ಆಗ ಕಾಯಾತ್ಮರ ಬೆಸುಗೆಯಾಗುತ್ತದೆ. ಅಂಗ-ಲಿಂಗರಿಬ್ಬರ ಸಮರಸಕ್ಕೆ ಅರ್ಹತೆಯುಂಟಾಗುತ್ತದೆ. ಶರಣಾಂಗನು ಪ್ರಸಾದಲಿಂಗದ ಕೈವಿಡಿದು ಪ್ರಸನ್ನಾತ್ಮನಾಗಿ ಬಾಳುವ ಭಾಗ್ಯವುಂಟಾಗುತ್ತದೆ. ಈ ಸತ್ಯ ಸಂಗತಿ

ಯನ್ನು ಸಮುನ್ನತಿಯನ್ನು ಲೌಕಿಕಕ್ಕೆ ಹೋಲಿಸಿ, ಅಲ್ಲ-ಲೌಕಿಕವನ್ನೆ ಪರಮಾರ್ಥವನ್ನಾಗಿಸಿ ವಿವರಿಸುವುದೇ ಈ ಪ್ರಕರಣದ ಪರಮೋದ್ದೇಶ.

ಮದವಳಿಗೆ ಮದವಳಿಗರ ಮದುವೆಯ ಸಂಭ್ರಮ ವೈಭವಗಳ ಪರಮಾರ್ಥಚಿತ್ರವಿದು;

“ ಪಚ್ಚೆಯ ನೆಲಗಟ್ಟು, ಕನಕದ ತೋರಣ,
ಬಜ್ಜರದ ಕಂಬ, ಪವಳದ ಚಪ್ಪರವನಿಕ್ಕಿ
ಮುತ್ತು ಮಾಣಿಕ್ಯದ ಮೇಲುಕಟ್ಟು ಕಟ್ಟಿ
ಮದುವೆಯ ಮಾಡಿದರು;
ನಮ್ಮವರೆನ್ನ ಮದುವೆಯ ಮಾಡಿದರು.
ಕಂಕಣ ಕೈದಾರ ಸ್ಥಿರ ಸೇಸೆಯನಿಕ್ಕಿ
ಚನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು.
ಜಲದ ಮಂಟಪದ ಮೇಲೆ ಉರಿಯಚಪ್ಪರವನಿಕ್ಕಿ
ಆಲಿಕಲ್ಲ ಹಸೆಯ ಹಾಸಿ, ಕಾಲಿಲ್ಲದ ಹೆಂಡತಿಗೆ
ತಲೆಯಿಲ್ಲದ ಗಂಡ ಬಂದು ಮದುವೆಯಾದನು.
ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ...."

“ಮಂಗಳವೆ ಮಜ್ಜನವೆನಗೆ, ವಿಭೂತಿಯೆ ಒಳಗಂದದರಸಿನವೆನಗೆ, ದಿಗಂಬರವೆ ದಿವ್ಯಾಂಬರವೆನಗೆ, ಶಿವಪಾದ ರೇಣುವೆ ಅನುಲೇಪವೆನಗೆ, ರುದ್ರಾಕ್ಷಿಯೆ ಮೈದೊಡಿಗೆಯೆನಗೆ, ಶರಣರ ಪಾದಂಗಳೆ ತೊಂಡಿಲಬಾಸಿಗವೆನಗೆ, ಚನ್ನಮಲ್ಲಿಕಾರ್ಜುನನೆ ಗಂಡನೆನಗೆ, ಆನು ಚನ್ನಮಲ್ಲಿಕಾರ್ಜುನಂಗೆ ಮದುವಣಗಿ; ಎನಗೆ ಬೇರೆ ಶೃಂಗಾರವೇಕೆ ಹೇಳಿರವ್ವಾ!” ಇದು ಶರಣೆ ಮಹಾದೇವಿಯಕ್ಕನ ಮದುವೆಯ ಮನೋಹರ ನೋಟ. ಇನ್ನು ನಿಜಗುಣರ ಶಂಭುಲಿಂಗನೆಂಬ ಮದುವಣಿಗನ ಮದುವೆಯ ಸಂಭ್ರಮವನ್ನು ನೋಡಿ ನಲಿದಾಡಿ:

“ ಶರಣ ಸತಿಯೇ ಮದುವೆಯ ಸಂಭ್ರಮವನು ನೋಡಿರಮ್ಮಾ !
ಪರಮಾನಂದ ಪಯೋನಿಧಿಯೊಳಗೋಲಾಡಿರಮ್ಮಾ ॥ ಪ ॥

ಸಿಂಗರಿಸಿದ ಶುಭಮಂದಿರದಂದದ ಹಂದರವಮ್ಮಾ ।
ಮಂಗಳ ಚೌಕವ ಹಾಸಿದ ಜಗುಲಿ ಹಸನಾದುದಮ್ಮಾ ॥
ಕಂಗೊಳಿಸುವ ಕಳಶಂಗಳಿಂದೈರಣೆ ತುಂಬಿತಮ್ಮಾ ।
ಹಿಂಗದವರೊಳೊಪ್ಪುವ ತಳಿರೆಲೆ ಪಾರವೆ ನೀಗಿತಮ್ಮಾ ॥ ೧ ॥
ಕೆಳಶೋದಕದೊಳು ಮಿಂದು ಶುಚಿತೆಯುಳವಟ್ಟುದಮ್ಮಾ
ತಿಳುವಿನ ಬೆಳುಪಟ್ಟೆಯನೊಲಿದುಡೆ ಚಲುವೆತ್ತುದಮ್ಮಾ ।
ತಿಲಕ ವಿಭೂತಿ ರುದ್ರಾಕ್ಷಿಯ ಮಣಿದೊಡವಾದುದಮ್ಮಾ
ವಿಲಸಿತ ಶಿವಹಸ್ತಾಬ್ಜದ ತೊಂಡಿಲುಗಟ್ಟಿತಮ್ಮಾ ॥ ೨ ॥
ನೆರೆದ ಗಣಂಗಳೊಸಗೆಯ ಸುವಾಸಿನಿಯರುಗಳಮ್ಮಾ
ಪರಿವಿಡಿದೊರೆವಾಗಮ ವಿಧಿವಾದ್ಯದ ರಭಸಟವಮ್ಮಾ ।
ವರ ಮಂತ್ರದ ಸೋಬಾನವಿಂಬಾಗಿರೆ ಪಾಡಿತಮ್ಮಾ
ಸರಿದುದು ಮಾಯಾ ಮಲಕರ್ಮದ ತೆರೆಯಾಗಳಮ್ಮಾ ॥ ೩ ॥
ಭಜನೆ ಭಕ್ತಿಗಳೆಂಬವೆ ಜೀರಿಗೆ ಬೆಲ್ಲವಾದುದಮ್ಮಾ
ನಿಜದೀಕ್ಷಾ ಸಮಯದ ಸುಮುಹೂರ್ತ ಸಮನಿಸಿತಮ್ಮಾ ।
ಸುಜನರ ಕೈವಾರವೆ ಮಂಗಳ ಪಾಠವಮ್ಮಾ
ತ್ರಿಜಗನ್ನುತ ಗುರುಕರುಣರಸದ ಕೈದಾರೆಯಮ್ಮಾ ॥ ೪ ॥
ಮೆರೆವ ಮಸ್ತಕದರಮನೆಯ ನಿಬ್ಬಣವೈತಂದುದಮ್ಮಾ
ಕೊರತೆಯೊಂದಿಲ್ಲದ ಶಂಭುಲಿಂಗವೆ ಮದುವಣಿಗನಮ್ಮಾ ।
ಮರೆದಿನಿಸಗಲದ ನೇಹವೆರಸಿ ಕೈವಿಡಿದನಮ್ಮಾ
ನೆರೆಮುತ್ತೈದೆ ಶರಣವಧುವಿದು ನಿಜಕಾಣೆರಮ್ಮಾ ॥ ೫ ॥”

ಮಹದೇವಿಯಕ್ಕ ನಿಜಗುಣರು ವ್ಯಷ್ಟಿ ಚಪ್ಪರದಲ್ಲಿ ಮದುವೆಯ ಮಾಡಿದರೆ ಬೋಳೇಶನು ಸಮಷ್ಟಿ ಸೃಷ್ಟಿಯಲ್ಲಿ ಅಂಬರಚಪ್ಪರದಲ್ಲಿ ಇನ್ನೂ ಸೊಗಸಾಗಿ ಮದುವೆಯ ಮಾಡಿ ತೋರುತ್ತಾನೆ. ನೋಡಿ ನಲಿಯ ಬನ್ನಿ:

“ ಅಂಬರ ಚಪ್ಪರದಡಿಯಲ್ಲಿ ಘನ
  ಕಂಭಿನಿಯನೆ ಹಸೆಯನು ಹಾಸಿ

ಇಂಬಪ್ಪ ಜೀವಾದಿ ಕರಣ ನಿಬ್ಬಣಿಗರಂ
ಸಂಭ್ರಮಂದೆ ಸಂಭ್ರಮಿಸಿದರು ನೋಡೆ !

ಇಹಪರವೆಂಬೆರಡೈರಣಿಗಳ ಹೂಡಿ ಶಿ-
ವೋಹ ಮೆಂಬಗ್ಗವಣೆಯ ತುಂಬಿ
ನಾಹಂ ಕೋಹಂ ಸೋಹಂ ಎನ್ನದ ಮುನ್ನ ದಾ-
ಸೋಹವಿಡಿದು ನಡವುತ ಬಂದರೋ !

ಇಪ್ಪತ್ತೈದು ಬಾಲೆಯರೆಲ್ಲರು ಕೂಡಿ
ತಪ್ಪದೆ ಕಳಸ ಕನ್ನಡಿವಿಡಿದು
ಒಪ್ಪವಿಡುತ ಶೃಂಗಾರದ ಗರಿಗಟ್ಟಿ
ಇಪ್ಪರು ಮದುವೆಯ ತಿಂಥಿಣಿಯ ನೋಡಿರೇ !

ಮುತ್ತೈದೆಯರೆಂಬ ತತ್ತ್ವವೆಣ್ಣುಗಳು
ಸತ್ಯ ಶೋಭಾನದೊಸಗೆಯ ಪಾಡುತಲಿ
ಸತ್ಯ ಸಹಜವೆಂಬ ಜೊತೆಯಾರತಿಗಳ
ನಿತ್ಯ ನಿರತಿಶಯಂದಲಿ ಪಿಡಿದರು ನೋಡಿರೇ

ಆದಿ ಮದುವಣಿಗಗೆ ಬ್ರಹ್ಮದ ಭಾಸಿಂಗ-ಅ
ನಾದಿ ಮದುವಳಿಗೆಗಾತ್ಮದೊಂಡಿಲಗಟ್ಟಿ
ವೇದ ಮರಿಯದಾದಿಯ ಸಾಕ್ಷಿಯನಿಟ್ಟು
ಸಾದರದಿಂ ಕೈಗೂಡಿಸಿದರೋ !

ಪರಕೆ ಪರಾನಂದ ಉಪಮೆಂಗೆ ಉಪಮಾತೀತ
ನಿರುತ ನಿರ್ವಾಣ ನಿಶ್ಚಿಂತಪದ
ಸ್ಥಿರ ಕಲ್ಯಾಣ ಬೋಳೇಶಲಿಂಗ ನಿ—
ಮ್ಮಿರವ ಬಣ್ಣಿಸ ಬಲ್ಲವರಾರೋ ?

ಎಂತಹ ಉದಾತ್ತ ಕಲ್ಪನೆ! ಏನು ವಿಶಾಲ ಭಾವನೆ !! ನಿಜಗುಣರ ವ್ಯಷ್ಟಿ ಚಿತ್ರಣಕ್ಕೂ ಬೋಳೇಶನ ಈ ಸಮಷ್ಟಿ ಚಿತ್ರಣಕ್ಕೂ ಅದೆಷ್ಟು ಅಂತರ ! ಆಕಾ

ಶಾಂಗನಾದ ನಿಜಶರಣ ಜೀವನಕ್ಕೆ ತಕ್ಕ ಬಣ್ಣನೆ ಬಗೆದುಂಬಿ ಬಾದಿದೆ. ಶರಣನ ಸರ್ವಾಂತರ್ಯಾಮಿತ್ವ ಚಿತ್ರ ಚೆಲುವಾಗಿ ಕಣ್ಮನಗಳ ಮುಂದೆ ನಿಂತಂತಿದೆ. ಬೋಳೇಶನ ಈ ಪದ್ಯವನ್ನು ಮತ್ತೆ ಮತ್ತೆ ಓದಿ, ಅದರ ಆ ಆಳವಾದ ಹರವಾದ ಅನುಭವಾಮೃತ ಪಾನಮಾಡಿ ಸಂತಸಗೊಳ್ಳಬೇಕು. ಹನಿ ಹೆಗ್ಗಡಲಾದ ವಿರಾಟ್‌ದರ್ಶನ ಇದರಲ್ಲಾದಗೆ, ಹೆಗ್ಗಡಲು ಹನಿಯಾಗಿ ಬರುವ ದರ್ಶನವನ್ನು ಪ್ರಭುದೇವರು ತಮ್ಮೀ ಪದ್ಯದಲ್ಲಿ ಪ್ರದರ್ಶಿಸಿದ್ದಾರೆ :

“ ನಿಬ್ಬಣವೇನಾಯಿತೀ ಜಗದೊಳಗೆ
ಮದುಮಕ್ಕಳ ಸುದ್ದಿಯಂ ಹೇಳಿರಮ್ಮ !

ಹೆಂಡತಿ ಗಂಡನ ಹಡೆದು ತೊಟ್ಟಿಲಗಟ್ಟಿ
ಹಾಡಿ ಹರಸಿ ಮೈ ಮರೆದಳು;
ಪರತತ್ತ್ವವೆಂಬ ಪುತ್ರ ಜನಿಗಾಗಿ
ಕಂಡವರೈವರು ಕಡು ಬೆರಗಾದರು.

ಪಟ್ಟಣದೊಳಗಣ ಪ್ರೌಢರೈವರು ಕಂಡು
ಇಟ್ಟ ಕಳಸ ಹೊತ್ತ ಮುತ್ತೈದೆಯರೈವರು
ಹೊಳೆವ ಬಾಸಿಂಗಕ್ಕೆ ಹದಿನಾರು ದಂಡೆ !

ಮದುಮಗನಿರೆ ಮದುವಳಗಿತ್ತಿ ರಂಡೆ
ಮದುಮಕ್ಕಳಿಗತಿ ಮದುವೆಯ ಮಾತಲ್ಲ
ಗುಹೇಶ್ವರನಲ್ಲಯ್ಯ ಬಲ್ಲ !”

“ ಆದಿಯ ಶರಣನ ಮದುವೆಯ ಮಾಡಲು
ಯುಗ ಜಂಗದವರೆಲ್ಲ ನಿಬ್ಬಣ ಹೋದರು.
ಹೋದ ನಿಬ್ಬಣಿಗರು ಮರುಳರು.
ಮದುವಣಿಗನ ಸುದ್ದಿಯನರಿಯಬಾರದು.
ಹಂದರವಳಿಯದು; ಹಸೆ ಮುನ್ನ ಉಡುಗದು.
ತಂದ ಬಂದವರೆಲ್ಲ ಮಿಂದುಂಡು ಹೋದರು,

ಇದರಂತವ ನರಿಯದೆ ಜಗವೆಲ್ಲ ಬರಿದಾಯಿತ್ತು.
ಗುಹೇಶ್ವರನೆಂಬ ಶಬ್ದವನೊಳಕೊಂಡ ಮಹಾಂತ ಬಯಲು."

ಸುಜ್ಞಾನೋದಯವಾಗುವುದರಿಂದ ಶರಣ ಆದಿಯವನೆನಿಸುತ್ತಾನೆ. ಸುಜ್ಞಾನಿಶರಣನಿಗೆ ಲಿಂಗಪ್ರಸನ್ನತೆಯುಂಟಾಗುವಿಕೆಯೇ ಮದುವೆ ಮಾದಲಾಗುವಿಕೆ. ಪ್ರಸಾದಲಿಂಗದೊಲುಮೆಗೆ ಸನ್ನದ್ಧನಾದ ಶರಣನೆ ಮದುವೆಗೆ ಪಿಂಡಾಂಡದವರ ಸಹಕಾರ ಬ್ರಹ್ಮಾಂಡದವರ ಸಹಕಾರ ಸಿಕ್ಕುತ್ತದೆ; ನೆಂಟರಾಗುತ್ತಾರೆ. ನಿಬ್ಬಣಿಗರಾಗುತ್ತಾರೆ. ಅವರೆಲ್ಲರೂ ಶರಣನಲ್ಲಿ ಸಮನ್ವಯಗೊಳ್ಳುತ್ತಾರೆ. ಮದುವಣಿಗನೂ ಶರಣಾಂಗಸ್ವರೂಪನೇ ಆಗುತ್ತಾನೆ. ಶರಣನ ಮದುವೆಯ ಹಂದರ ಆಗಸ; ಹಸೆ ಭೂಮಂಡಲ. ಇವೆರಡೂ ನಿತ್ಯ ಸತ್ಯವಾಗಿರುತ್ತವೆ ಸತ್ಕ್ರಿಯೆ ಸುಜ್ಞಾನಗಳನ್ನು ಹಿಡಿದು ಬಂದವರೆಲ್ಲರೂ ಆಚಾರದಲ್ಲಿ ಮಿಂದು ಅನುಭವಾಮೃತವನ್ನುಂಡು ತೃಪ್ತರಾಗುವರು. ಆ ಪೂರ್ಣಾಖಂಡದ ಅಂತವನರಿಯದೆ ನಿರವಯಲವಾಗುವುದು ಜಗವೆಲ್ಲ, ಜಗವೆಲ್ಲ ನಿರವಯಲಾಗಲು ನಿಶ್ಶಬ್ದತೆಯುಂಟಾಗುವುದು. ಆಗ ಲಿಂಗವೆಂಬ ಅಂಗವೆಂಬ ಶಬ್ದ ಬಯಲಲ್ಲಿ ಬಯಲಾಗುವುದು. ಹಾಗಾದವನೇ ಮಹಾಂತ ಶರಣನು ಆತನೇ ಪರಮಸುಖಿ; ಹಸನ್ಮುಖಿ.

" ಶ್ರೀಗುರುವಿನ ಕರಗರ್ಭದಲ್ಲಿ ಉದಯವಾದ ಶರಣಸತಿ ನಾನು
ಶ್ರೀಗುರುವಿನ ಹೃದಯಗರ್ಭದಲ್ಲಿ ಉದಯವಾದ ಲಿಂಗಪತಿಗೆ
ಎನ್ನ ಮದುವೆಯ ಮಾಡುವ ಕಾಲದಲ್ಲಿ ಸಹಸ್ರದಳ ಕಮಲವೆಂಬ
ಸಾವಿರ ಕಂಬದ ಮಂಟಪವ ರಚಿಸಿ ಆ ಮಂಟಪದ ಮಧ್ಯದಲ್ಲಿ
ಪಂಚಪಾತ್ತವೆಂಬ ಪಂಚೆಮುದ್ರೆಯ ರಂಗವಲ್ಲಿಯ ತುಂಬಿ
ಆ ಪಂಚಮುದ್ರೆಯಲ್ಲಿ ಪಂಚಪ್ರಣವವೆಂಬ ಪಂಚಕಲಶವ ಹೂಡಿ
ಆ ಪಂಚಕಲಶಂಗಳಿಗೆ ಸ್ವಾನುಭಾವಜ್ಞಾನವೆಂಬ ಸುರಗಿಯ ಸುತ್ತಿ
ಆ ಮಧ್ಯದಲ್ಲಿ ಎನಗೆ ಶೃಂಗಾರವ ಮಾಡಿದರೆಂತೆನಲು,
ಸರ್ವಾಚಾರ ಸಂಪತ್ತೆಂಬ ಸೀರೆಯನುಡಿಸಿ, ಸುಜ್ಞಾನವೆಂಬ ಕುಪ್ಪಸವ ತೊಡಿಸಿ,

ಸದ್ಭಕ್ತಿಯೆಂಬ ಬಳೆಯನಿಡಿಸಿ, ಏಕಭಾವದ ನಿಷ್ಠೆಯೆಂಬ ತಾಳಿಯ ಕಟ್ಟಿ,
ನಿಜಮುಕ್ತಿಯೆಂಬ ಮೂಗುತಿಯನಿಟ್ಟು, ಶಿವಮಂತ್ರವೆಂಬ ಕರ್ಣಾಭರಣವರಿಸಿ, ಸತ್ಕ್ರಿಯೆಯೆಂಬ ಪಾದಾಭರಣವ ಧರಿಸಿ,
ಪರಮೇಶ್ವರನ ಚಿತ್ಪ್ರಕಾಶವೆಂಬ ಚಿದ್ವಿಭೂತಿಯನೆ ತಂದು,
ಎನ್ನ ಲಲಾಟದಲ್ಲಿ ಪಟ್ಟವಕಟ್ಟಿ, ಸತಿ ಸಂಗವಗಲಬೇಡವೆಂದು
ಎನ್ನ ಪತಿಯು ಸೆರಗ ತಂದು ಸೆರಗಕೂಡಿಸಿ ಷಟ್‌ಸ್ಥಲ ಬ್ರಹ್ಮಗಂಟನಿಕ್ಕಿ
ಪತಿಭಕ್ತಿಯು ಗಲದಿರೆಂದು ಎನ್ನ ಮುಂಗೈಯಲ್ಲಿ ಸಕಲ ಗಣಂಗಳ
ಸಾಕ್ಷಿಯಾಗಿ ಬಿರುದಿನ ವೀರಕಂಕಣವ ಕಟ್ಟಿ, ಜಂಗಮ ಪಾದತೀರ್ಥ
ಪ್ರಸಾದವೆಂಬ ಭೂಮವನುಣಿಸಿ, ಮದುವೆಯ ಮಾಡಿದರೆಂದು
ಇಂದು ಎನಗೆ ಯವ್ವನವಾಯಿತ್ತು; ಏಳು ನೆಲೆಯ ಮೇಲುಪ್ಪರಿಗೆಯ
ಮೇಲೆ ಲೀಲೆಯಿಂದ ಕೂಡಿ ಸುಖಿಸಯ್ಯ ಅಖಂಡೇಶ್ವರಾ."

ಈ ವಚನದಲ್ಲಿ ಲೌಕಿಕ ಜೀವನದ ಚಿತ್ರದೊಂದಿಗೆ ಪರಮಾರ್ಥ ಜೀವನದ ಅರ್ಥಪೂರ್ಣ ಸಂಸ್ಕಾರ ಆವಿಷ್ಕಾರವೂ ಅಭಿವ್ಯಕ್ತವಾಗಿದೆ. ಪೂರ್ಣರೂಪಕ ಸೌಂದರ್ಯವನ್ನೂ ಸಂಯೋಜನ ಕೌಶಲ್ಯವನ್ನೂ ಇದರಲ್ಲಿ ನೋಡಬೇಕು. ವಚನಕಾರನ ಉಭಯಾನುಭವ ಇದರಲ್ಲಿ ಹದಗೊಂಡಿದೆ, ಹೃದಯಾಂತರಾಳದಿಂದ ಹೊರಹೊಮ್ಮಿದೆ.

ಹೊಸ ಹುಟ್ಟು, ಹೊಸ ಬೆಳವಣಿಗೆ, ಹೊಸಬಗೆಯ ಮದುವೆ. ಜೀವನಕ್ಕೊಂದು ಜ್ಯೋತಿಯ ಜತೆ. ಅದರಿಂದ ಮೂಮ್ಮೂಡಿದೆ ಹೊಸ ಬೆಳಕು. ಅದೇನು ಆ ಸೌಭಾಗ್ಯ! ಆ ಸಹಸ್ರಾರಕ್ಕೆ ಏರಿ, ಆ ದಿವ್ಯ ಲೋಕದಲ್ಲಿ ಸೇರಿ ತಾವರೆಯ ಎಸಳುಗಳೆಂಬ ಸಾಸಿರಗಂಬದ ಚೆಲುವ ಚಪ್ಪರದಲ್ಲಿ ಕುಳಿತು ಕಂಕಣ ಕಟ್ಟಿಕೊಳ್ಳುವ ಪುಣ್ಯಕ್ಕಿಂತ ಬೇರೆ ಪುಣ್ಯವುಂಟೆ? ಆಗ ಮಾಡಿದ ಸಿಂಗಾರ ಅದೆಷ್ಟು ಮನೋಹರ! ಅದೇನು ಮಹತ್ತರ!

ಪಂಚ ಪ್ರಣವಗಳೆ ಪಂಚಕಲಶಗಳಂತೆ! ಸ್ವಾನುಭವವೆ ಸುರಗಿಯಂತೆ! ಸರ್ವಾಚಾರ ಸಂಪತ್ತಿಯೆ ಸೀರೆಯಂತೆ! ಸುಜ್ಞಾನವೆ ಕುಪ್ಪಸವಂತೆ! ಭಕ್ತಿಯೆ ಬಳೆಯಂತೆ! ಏಕಭಾವವೆ ತಾಳಿಯಂತೆ! ನಿಜಮುಕ್ತಿಯೆ ಮೂಗುತಿಯಂತೆ!

ಶಿವಮಂತ್ರವೆ ಕರ್ಣಾಭರಣವಂತೆ ! ಸತ್ಕ್ರಿಯೆಯೆ ಚರಣಾಭರಣವಂತೆ! ಆ ಪರಮೇಶ್ವರನ ಚಿತ್ಪ್ರಕಾಶವೇ ಚಿದ್ವಿಭೂತಿಯಂತೆ ! ಷಟ್‌ಸ್ಥಲಗಳೆ ಬ್ರಹ್ಮಗಂಟವಂತೆ ಎಂತಹ ದಿವ್ಯ ಚಿತ್ರವಿದು ! ದೃಶ್ಯವಿದು ! ! ಲೌಕಿಕ ವಿವಾಹದ ಹೋಲಿಕೆಯಿಂದಾಗಿ ಆ ಅತೀಂದ್ರಿಯ ಸುಂದರ ಸನ್ನಿವೇಶ ಈ ಬಣ್ಣನೆಯಿಂದ ನಮ್ಮ ಕಣ್ಣು ಮುಂದೆ ಕಟ್ಟಿದಂತಿದೆ; ಎದುರಿನಲ್ಲಿ ತೋರಿದಂತಿದೆ. ಶರಣಸತಿಯ ವಿವಾಹ ಸಂಭ್ರಮ ! ಶಿವನೊಡಗೂಡುವ ಸುಖದ ಸಡಗರ ! ! ಓದುತ್ತಿರುವಂತೆ ಹರುಷ ತುಂಬಿ ತುಳುಕುತ್ತದೆ. ಆ ಶರಣೆವೆಣ್ಣನ ಆ ಬಿಡದ ಬಾಳಿಗೆ ಬದುಕಿಗೆ ಹೆಮ್ಮೆಯೆನಿಸುತ್ತದೆ. ಅಲ್ಲದೆ ವಚನಕಾರನ ಈ ರಸಮಯ ರಚನೆಗೆ ಮನದ ಮೆಚ್ಚುಗೆ ಮೂಡಿಬಾರದಿರದು. ವಿರಕ್ತ ಶರಣನಾದ ವಚನಕಾರನ ಲೋಕಾನುಭವಕ್ಕೆ ಅಚ್ಚರಿಯೂ ಉಂಟಾಗುತ್ತದೆ.

ಶರಣ ಸತಿ ಸಕಲಗಣಂಗಳ ಸಾಕ್ಷಿಯಾಗಿ ಕಟ್ಟಿದ ಕಂಕಣ ಬಿರುದಿನ ವೀರ ಕಂಕಣ. ಉಂಡ ಊಟ ಪರಮಪ್ರಸಾದ. ಹುಟ್ಟಿದ ದಿನವೆ ಮದುವೆ; ಮದುವೆಯ ದಿನವೆ ಯವ್ವನ. ಅಂದೆ ನಿಷೇಕ ಪ್ರಸ್ತ. ಅದು ಏಳು ನೆಲೆಯ ಮೇಲುಪ್ಪರಿಗೆಯ ಮೇಲೆ. ಅಲ್ಲಿ ಸಮರಸದ ಲೀಲೆ. ಅದೇ ಸತ್ಯಸುಖದ ನೆಲೆ, ಮದುವಣಿಗೆ ಮದುವಣಿಗನ ಕೂಡುವ ಕಲೆ.

"ಅವಿರಳ ವಿಟನ ಮದುವೆಗೆ ನಿಬ್ಬಣಗಿತ್ತಿಯರೆಲ್ಲ ಬಂದು ಬೆಂಡದಂಡೆಯನೆ ಮುಡಿಸಿ, ಅಂಡಜವೆಂಬ ಅರಿಷಣವ ಮಿಂದು, ಉರಿಯೆಂಬ ಹಚ್ಚಡದ ಹೊದಿಕೆಯಲ್ಲಿ ನಿಬ್ಬಣಗಿತ್ತಿಯರು ಬಪ್ಪ ಬರವ ಕಂಡು, ನೀರವಡಿಗೆಯಮಾಡಿ, ವಾಯದ ಕೂಸಿಂಗೆ ಮಾಯದ ಮದವಣಿಗ ಸಂಗಸಂಯೋಗವಿಲ್ಲದೆ ಬಸುರಾಯಿತ್ತು. ಕೂಸೆದ್ದು ಕುಣಿದಾಡಿ ಸೂಲಗಿತ್ತಿಯನವಗ್ರಹಿಸಿತ್ತು. ಗುಹೇಶ್ವರನ ಒಬ್ಬ ಇಬ್ಬ ಮೂವರು ತ್ರಿದೇವತೆಗಳು ಬಲ್ಲರೇ ಆ ಲಿಂಗದ ಘನವ ?"

ಸತ್ತಾತನೊಬ್ಬ, ಹೊತ್ತಾತನೊಬ್ಬ; ಇವರಿಬ್ಬರನು ಒಯ್ದು ಸುಟ್ಟಾತನೊಬ್ಬ; ಮದುವಣಿಗನಾರೊ ಮದವಳಿಗೆಯಾರೊ ? ಮದುವೆಯ ನಡುವೆ ಮರಣ ಅಡ್ಡ ಬಿದ್ದಿತ್ತು. ಹಸೆಯಳಿಯದ ಮುನ್ನ ಮದವಳಿಗನಳಿದ ಗುಹೇಶ್ವರಾ, ನಿಮ್ಮ ಶರಣನೆಂದೂ ಅಳಿಯ."

ಸತಿಪತಿ ಯೋಗ

ಇದೊಂದು ೫೫ರ ಯೋಗ; ಅಥವಾ ೮೮ರ ಯೋಗ; ಲೌಕಿಕ ಪರಮಾರ್ಥ ಇವೆರಡೊಂದಾದ ಸಮವೃತ್ತಿಯ ಯೋಗ. ಭೌತ್ತಿಕ ಲೌಕಿಕ ಸಮಾಹಿತಯೋಗ.

ಶರಣನಿಗೆ ಅಯ್ದಂಗಸಿದ್ಧಿ, ಅಯ್ದು ಲಿಂಗಸಿದ್ಧಿ. ಷಟ್‌ಸ್ಥಳದಲ್ಲಿ ಅಯ್ದು ಕುಳ ಅಯ್ದು ಸ್ಥಳಗಳ ಸಿದ್ಧಿ ಸಮನಿಸಿರುತ್ತದೆ. ಇದರಿಂದಾಗಿ ಶರಣನದು ೫೫ರ ಯೋಗವೆಂದು ಹೇಳಿದೆವು.

ಇನ್ನು ನೂರೊಂದು ಸ್ಥಲದ ದೃಷ್ಟಿಯಲ್ಲಿ ಶರಣನಿಗೆ ೮೮ ಸ್ಥಲಗಳು ವಶವಾಗಿರುತ್ತವೆ. ೪೦ ಅಂಗಸ್ಥಲಗಳು, ೪೮ ಲಿಂಗಸ್ಥಲಗಳ ಯೋಗ ಸಮನಿಸಿರುತ್ತದೆ. ಎಂಟು ಎಂಟರಲ್ಲಿ ಅಂದರೆ ಎರಡೆಂಟರಲ್ಲಿ ಹೇಗೆ ಸಮತ್ವವಿದೆಯೋ ಹಾಗೆ ಸತಿ-ಪತಿಗಳಲ್ಲಿ ಸಮತ್ವವುಂಟಾಗಿರುತ್ತದೆ. ಸತಿ ಸರ್ವಾತ್ಮಭಾವದಿಂದ ಪತಿಯ ಯೋಗವನ್ನು ಪಡೆದಿರುತ್ತಾಳೆ. ಐಕ್ಯಕ್ಕೆ ಅಣಿಯಾದ ಅಂಗ-ಲಿಂಗರಿಬ್ಬರ ಯೋಗವನ್ನು ಸತಿ ಪತಿ ಯೋಗಕ್ಕೆ ಹೋಲಿಸುವುದರಲ್ಲಿ ಭಾಕ್ತಿಕ ಲೌಕಿಕವಾದ ಒಂದು ಸುಂದರ ಸಮನ್ವಯ ದೃಶ್ಯ ಕಣ್ಣುಮುಂದೆ ಕಂಗೊಳಿಸುತ್ತದೆ. ಭಾಕ್ತಿಕ ಶರಣ ಜೀವನದ ಪೂರ್ಣಚಿತ್ರ ತೋರುತ್ತದೆ.

ಸತಿ ಪತಿ ಧರ್ಮ ಬಹಳ ಹತ್ತಿರದ ಧರ್ಮ. ಸತಿಭಾವದಲ್ಲಿ ದಾಸಭಾವದಷ್ಟು ಅಥವಾ ಭೃತ್ಯಭಾವದಷ್ಟು ಅಂತರವಿರದು. ಸತಿಯಲ್ಲಿ ಭೃತ್ಯತ್ವಭಾವವಿದ್ದರೂ ಅತ್ಯಂತ ಸನ್ನಿಹಿತವಾಗಿರುತ್ತದೆ.

"ಸತಿಶರಣಂ ತದೀಯ ಪತಿ ಲಿಂಗಮೆನುತ್ತಿಹ ಲಿಂಗಭಕ್ತರಾ
ಸತಿಪತಿಧರ್ಮಮಂ ತಿಳಿದು ನೋಡದೆ ದೂರದ ದಾಸಭಾವ ಸಂ-
ಸ್ಥಿತಿಯೊಳೆ ನಿಂದು ಸಂಶಯ ಜಡ ಪ್ರತಿಭಾ ಕ್ರಿಯೆಯಿಂ ಬಳಲ್ದು ನಿ-
ಶ್ಚಿತ ಪರಮೈಕ್ಯಮಂ ತಳೆಯುದಿರ್ಪರದೇಂ ಗುಣವಮೋ ಶಿವಾಳಿಧವಾ ||"

ಸತಿಯೆಂದೊಡನೆ ಪತಿಯು ತದೀಯಂತೆ, ಪತಿಯೆಂದೊಡನೆ ಸತಿಯು ತದೀಯಂತೆ, ತಟ್ಟನೆ ಹೊಳೆಯುತ್ತವೆ. ಸತಿಯೇ ಶರಣ, ಪತಿಯೇ ಲಿಂಗ; ಶರಣ ಲಿಂಗದಲ್ಲಿ ಭಕ್ತನಾಗಿರುತ್ತಾನೆ; ಸಂಸಕ್ತನಾಗಿರುತ್ತಾನೆ. ಶರಣಾಂಗದಲ್ಲಿ ಸತಿಧರ್ಮ ಪ್ರಸಾದಲಿಂಗದಲ್ಲಿ ಪತಿಧರ್ಮ ಅತ್ಯಂತ ಹತ್ತಿರದ ಅತ್ಯಂತ ಮಧುರ ಭಾವದ ಧರ್ಮ. ಪಶುಪತಿಯಾಗುವುದಕ್ಕಿಂತ ಪತ್ನಿಪತಿಯಾಗುವುದರಲ್ಲಿ ಅತಿಶಯಾನಂದವಿದೆ; ಅತ್ಯಂತಾತ್ಮೀಯತೆಯಿದೆ. ಅಭೇದಾಚರಣೆಯಿದೆ. "ಶರಣನೆ ಪತ್ನಿ ಕಂಡ ಶಿವಲಿಂಗವೆ ತತ್ಪತಿ ಕಂಡಭೋಗ-ಚ್ಚರಿಯೆನಬಾರದೇ ನುಡಿವ ರೀತಿಯೊಳಾನುಡಿಗಟ್ಟಿಯಾಗಿ ಬಿತ್ತರಿಸಿದ ತಾತ್ತ್ವಿಕಾಚರಣೆಯುಳ್ಳೊಡೆ ಮತ್ತದು ತಾನೆ ಮುಕ್ತಿ ಶಾಂಕರಿಯೆನಬಾರದೇ ಬಯಲ ಮಾತಿನ ಬಣ್ಣಮಂದೇಂ ಶಿವಾಧವಾ ॥

ಶರಣ ಸತಿಯ ಪತಿವ್ರತಧರ್ಮ ಲೌಕಿಕ ಹದಿಬದಿಯ ಧರ್ಮಕ್ಕಿಂತ ದಿವ್ಯವಾದುದು; ಅಂತೆಯೇ ಅದು ಜಗಕ್ಕೆ ಅಚ್ಚರಿಯದು, ಅದು ಭಿನ್ನಾಭಿನ್ನ ಸ್ವರೂಪದಲ್ಲಿ ಏಕೈಕ ನಿಷ್ಠವಾಗಿದೆ. ಶರಣನ ಸತಿತ್ವ ಲಿಂಗಯ್ಯನ ಪತಿತ್ವಗಳು ಬರಿ ಬಣ್ಣನೆಯವಲ್ಲ; ಬಾಯ್ಮಾತಿನಲ್ಲಿ ಮುಗಿಯುವವಲ್ಲ. ಮತ್ತು ಅಸಹಜವಲ್ಲ. ನುಡಿದಂತೆ ನಡೆಯಲ್ಲಿ ಗಟ್ಟಿಗೊಂಡು ವಾಸ್ತವಿಕವಾದವು, ವಿಸ್ತಾರವಾದವು. ತಾತ್ತ್ವಿಕಾಚರಣೆಯುಳ್ಳವು. ಅಂತಹ ಆ ಶರಣಸತಿ ಮುಕ್ತಿಶಂಕರಿಯಾಗಿ ಶೋಭಿಸುವಳು. ಈ ಭಾಕ್ತಿಕ ಸತಿಪತಿಯೋಗ ಬಯಲಮಾತಿನ ಬಣ್ಣವಲ್ಲ. ಶರಣ ಸತಿಯದು ಸಹಜಾಚರಣೆ. ಶರಣಸತಿಯ ಸರ್ವಾಂಗವು ಲಿಂಗಕಳಾ ಪ್ರಸಾದದಿಂದ ಪ್ರಪೂರ್ಣವಾದುದು; ಪುನೀತವಾದುದು. ಪರಮ ಚೆಲ್ಲಕ್ಷಣ ಲಕ್ಷಿತವಾದುದು. ಶರಣಾಂಗನೆಯು ಶಿವಲಿಂಗದಲ್ಲಿಯೇ ಸಮರ್ಪಿತ ಚಿತ್ತಳು; ಸಮರಸ ಚಿತ್ತಳು, ಆ ಸುಖದ ಸೂಕ್ಷ್ಮಕಳೆಯನ್ನು ಹೇಳಲಳವಲ್ಲ.

"ಅಂಗನೆ ತನ್ನ ಚಿತ್ತರಮಣಂಗೆ ಮಹಾರತಿಯಿಂ ಪ್ರಿಯಾಂಗದಾ
ಲಿಂಗನಮಂ ಸಮರ್ಪಿಸಿ ತದೀಯ ವಿಶಿಷ್ಟ ಸುಖ ಪ್ರಸಾದಮಂ ।
ಲಿಂಗದೆ ಭೋಗಿಸಲ್ಲಿಸು ಕಳಾ ವ್ಯವಧಾನದ ಹಾಂಗೆ ಲಿಂಗಸುಂ

ಗಾಂಗಸುಖೋಪಭೋಗವತಿ ಸೂಕ್ಷ್ಮತರಂ ಶುಭಮಂ ಶಿವಾಧವಾ ||
ಲೌಕಿಕ ವೃತ್ತಿಯೋ ಮರಳಿ ಭಾಕ್ತಿಕ ವರ್ತನಮಾಗಿ ಭಾಕ್ತಿಕಂ
ಲೌಕಿಕಮಾಗಿ ತನ್ನೊಳಗೆ ತಾನೆರಡಿಲ್ಲದೆ ಕೂಡಿ ಸಂಶಯಂ |
ಪೋಕೆಡೆಗೆಟ್ಟು ನಿಂದು ಬಯಲಾದ ಬಳಿಕ್ಕದನೇನನೆಂದೆಪಂ
ವ್ಯಾಕುಲಮಿಲ್ಲದಿರ್ಪ ಪರಮಾಚರಣ ಸ್ಥಿತಿಯಿಂ ಶಿವಾಧವಾ ||"

ಇಲ್ಲಿ ಉದ್ಧರಿಸಿದ ಮೊದಲ ಪದ್ಯದ ಪ್ರತಿಪದವೂ ಗಮನಾರ್ಹವಾಗಿವೆ. ಅಂಗನೆ ಎಂಬ ಪದದಲ್ಲಿ ಅಂಗ ಪದದರ್ಥದ ಧ್ವನಿಯಿದೆ. ತನ್ನ ಚಿತ್ತರಮಣಂಗೆ ಎನ್ನುವಲ್ಲಿ ಪತಿಗಿರಬೇಕಾದ ಧರ್ಮ ಸತೀವ್ರತವೆಂಬುದನ್ನು ಉದ್ಘೋಷಿಸುತ್ತದೆ. ಪತಿನಿಷ್ಠವಾದುದೆ ಮಹಾರತಿ. ಪತಿಗೆ ಸಲ್ಲಿಸುವ ಅಂಗ ಪ್ರಿಯವಾದುದಾಗಿರಬೇಕು. ಅದನ್ನು ಅರ್ಪಿಸಿ ಆಗುವ ಸುಖ ಅದು ವಿಶಿಷ್ಟಸುಖ, ಅದು ಬರಿ ಸುಖವಲ್ಲ, ಸುಖಪ್ರಸಾದ; ಅದನ್ನು ಭೋಗಿಸುವ ಆ ಕಳಾವಧಾನ ಅಂಗಲಿಂಗ ಸಂಗಸುಖೋಪ ಭೋಗವನ್ನು ನಿದರ್ಶಿಸಬಲ್ಲುದು. ಅದು ಸೂಕ್ಷ್ಮತರ, ಮಂಗಳಕರ. ಒಂದು ಲೌಕಿಕದ ಪವಿತ್ರ ಪರಿಣಾಮ; ಇನ್ನೊಂದು ಭಾಕ್ತಿಕದ ಪರಮ ಪರಿಣಾಮ. ರತಿಕಲೆ ಭಕ್ತಿಕಲೆಗಳೆರಡರ ರಹಸ್ಯವನ್ನು ಸ್ವಾರಸ್ಯವನ್ನು ವೆಗ್ಗಳಿಸಿದ ಅಗ್ಗಳಿಕೆ ಈ ಪದ್ಯದಲ್ಲಿದೆ. ಲೌಕಿಕಾಚರಣೆ ಭಾಕ್ತಿಕಾಚರಣಗಳ ಸಾಮ್ಯವನ್ನು ಸಮನ್ವಯಗೊಳಿಸಿದ ಜಾಣ್ಮೆ ಮೆಚ್ಚತಕ್ಕುದು ಇದನ್ನೇ ಇನ್ನೂ ಸ್ಫುಟವಾಗಿ ಎರಡನೆಯ ಪದ್ಯದಲ್ಲಿ ಪ್ರತಿಪಾದಿಸಿ ಎರಡೂ ಪರಮಾಚರಣಸ್ಥಿತಿಯೆಂದು ಉಗ್ಗಡಿಸಲಾಗಿದೆ.

" ಭೂಮಿ ಜಲಾಗ್ನಿ ಮಾರುತವಿಯತ್ತುಳ ಪಂಚಕ ಮುಖ್ಯ ಪಂಚಕ
ಸ್ತೋಮಂದ ಮಾತೃಗೇಹಮೆನಿಸಿರ್ಪ ಮಹಾಶಿವಮಂತ್ರ ಪಂಚವ
ರ್ಣಾಮಂಗಳ ದೀಕ್ಷೆಯಿಂ ಪರಮ ಮಂತ್ರಕಳಾತ್ಮಕಮಾದ ದೇಹವಿ
ಶ್ರಾಮಂ ಪದಪ್ರಸಿದ್ಧ ಶರಣಂಗಿಹಮೇಂ ಪರಮೇಂ ಶಿವಾಧವಾ ||"

ಶರಣನ ಸತಿ ಪತಿಯೋಗ ಶಿಶಿರ ಯೋಗವೆಂದು ನಾವು ಮುಮ್ಮೊದಲು ಹೇಳಿದುದನ್ನು ಈ ಪದ್ಯ ಪರ್ಯಾಯವಾಗಿ ಪ್ರತಿಪಾದಿಸಿದಂತಿದೆ. ಪಂಚಾಕ್ಷರ ಮಂತ್ರಕಳಾತ್ಮಕವಾದ ದೇಹಕ್ಕೆ ವಿಶ್ರಾಮ ಪದ ಶರಣ. ಅಯ್ದರ ಯೋಗ

ವುಳ್ಳ ಶರಣನಿಗೆ ಇಹ ಪರವೆಂಬ ಭೇದವಿಲ್ಲ. ಸತಿಪತಿಯೋಗವುಳ್ಳ ಶರಣನಿಗೆ ಇಹವೇ ಪರವಾಗಿ ಪರಿಣಮಿಸುತ್ತದೆ.

" ಸತಿಪತಿಗಳಿವರ ಸಮರತಿ ಸುಖದ ಬಾಳುವೆಗೆ ।
ಪ್ರತಿಯುಂಟೆ ಲೋಕದೊಳು ನೋಡೆ ಲಲಿತಾಂಗಿ ॥ ಪ ॥

ಕಂಗಳೂರಿನ ಸೋಮ ಸೂರ್ಯವೀಧಿಯ ನಡುವೆ
ಸಿಂಗರದ ನೀಲದರಮನೆಯ ಮಧ್ಯದೊಳು
ರಂಗುವೆಳಗೆಸೆವ ಸಜ್ಜೆಯ ಶಕುನವುಂಚದೆಡೆ-।
ಗಂಗವಿಸಿ ಬಂದು ಭರದೊಳು ಜವಳಿಗೊಂಡು ॥ ೧ ॥

ನಿರಿ ಸಡಿಲುತಿರೆ ತಾನೆ ತೊಟ್ಟ ಕಂಚುಕಿಗಳೆಯು ।
ನೆರೆ ತವಕವದರಿಂದೆ ಮುಂದುವರಿಯೆ ॥
ಮುರಿದೋಡೆ ಲಜ್ಜೆ ಗಾಢಾಲಿಂಗನದ ಸೊಗಸು ।
ತೊರೆಯೊಳಾಳುತ್ತೆ ಸವಿಗಲೆಯೊಳೇಳುತ್ತ ॥ ೨ ॥

ಬೆರಸಿ ಬೇರೆನಿಸದೆರಡಾಲೆ ವರಲುಗಳೇಕ ।
ಸುರಸವಾದಂತೆ ಪತಿಶಂಭುಲಿಂಗಾ ॥
ಶರಣಸತಿಯನು ಕೂಡಿ ಪರತರಾನಂದದೊಳು ।
ಪರಿಪೂರ್ಣವಾಗಿಹುದನುಪಮಿಸಲು ಬಹುದೆ ? ॥ ೩ ॥

ಶರಣನ ಪರಾಜ್ಞಾನಶಕ್ತಿಯೇ ಸತಿ. ಪ್ರಸನ್ನ ಚೇತನವೆ ಪತಿ. ಇವರಿಬ್ಬರ ಸಮರತಿ ಸಮಸುಖದ ಬಾಳಿಗೆ ಸರಿಮಿಗಿಲಾದುದು ಬೇರೊಂದಿಲ್ಲ ಜಗತ್ತಿನಲ್ಲಿ !

ಆ ಸತಿಪತಿಗಳೂರು ಕಣ್ಣುಗಳೆರಡು. ಆ ಊರಿನಲ್ಲಿ ಇಡಪಿಂಗಳ ಎಂಬೆರಡು ಹೆದ್ದಾರಿಗಳು. ಆ ಹೆದ್ದಾರಿಗಳ ನಟ್ಟನಡುವೆ ಸಿಂಗರದ ನೀಲದರಮನೆ; ಅದೇ ಕಣ್ಣ ಕಪ್ಪು; ಅದರ [illegible]ಯಿಂದ ಅಲಂಕೃತವಾಗಿದೆ. ಆ ಅರಮನೆಯ ನಡುವೆ ಮಲಗುವ ಮನೆ. ಆ ಮನೆ

ಯಲ್ಲಿ ರಂಗುವೆಳಗಿನ ಹಾಸಿಗೆಯುಳ್ಳ ಹಾಲುಹಕ್ಕಿಯಂತಹ ಸಿರಿಮಂಚ. ಆ ಮಂಚದ ಬಳಿಗೆ ಬಗೆದುಂಬಿ ಭರದಿಂದ ಬಂದು ಜತೆಗೂಡುವರು ಸತಿಪತಿಗಳು.

ಬಳಿಕ ನೀರೆ ಉಟ್ಟ ಸೀರೆಯ ನಿರಿಗೆ ಸಡಿಲುವುದುಂ; ಕುಪ್ಪಸ ಬಿಚ್ಚುವುದುಂ. ನೆರೆ ತವಕ ತುಂಬಿ ಬರುವುದುಂ. ಮುಂದುವರಿದು ಲಜ್ಜೆ ಓಡಿಹೋಗುವುದು. ಇಬ್ಬರೂ ಗಾಢಾಲಿಂಗನದ ಸೊಗಸೆಂಬ ಹೆದ್ದೊರೆಯಲ್ಲಿ ಮುಳುಗುತ್ತ ಸವಿಗಲೆಗಳಲ್ಲಿ ತೇಲುತ್ತ ಇರುವರು.

ಎರಡು ಆಲಿಕಲ್ಲುಗಳು ಬೇರೆನಿಸದಂತೆ ಬೆರಸಿ ಏಕರಸವಾಗುವವು; ಅದರಂತೆ ಪತಿಶಂಭುಲಿಂಗ-ಸತಿ ಶರಣಾಂಗ ಒಂದುಗೂಡಿ ಆ ಪರತರಾನಂದದಲ್ಲಿ ಪರಿಪೂರ್ಣವಾಗಿರುವರು. ಅದನ್ನು ಉಪಮಿಸಲು ಸಾಧ್ಯವಿಲ್ಲ. ಅದನ್ನು ಹೋಲುವುದು ಬೇರೊಂದಿಲ್ಲ.

ಅದು ತುರೀಯಾತೀತವಾದ ಅವಸ್ಥೆ. ಅಲ್ಲಿರುವಾಗ ಯಾವುದರ ಅಭಿಮಾನವಿರುವುದಿಲ್ಲ. ಯಾವ ಭಾವನೆಯಿರುವುದಿಲ್ಲ. ಸಂಪೂರ್ಣ ಸುಖಸ್ವರೂಪವೆ ತಾನಾಗಿರುವನು. ಅದು ಪಂಚಮಾವಸ್ಥೆ. ಅದು ನಿಚ್ಚಲವಾದ ನಿರ್ಮಳವಾದ ಉಳಿಮೆ. ಅದುಂ ಎರಡೊಂದಾದ ಒಲುಮೆ. ಅದೇ ಸತಿಪತಿಯೋಗ; ಅದೇ ಶಿವಯೋಗ.

ಪರಾಶಕ್ತಿ ಪರಮಾತ್ಮನನ್ನು ಕೂಡುವ ಕಲೆ. ಅದುಂ ಯಾವ ತಮಸ್ಸಿಲ್ಲದ ಯಾವ ಕಾಳಿಕೆಯಿಲ್ಲದ ಕಳೆ. ಅಲ್ಲಿ ಅರಿವಿಲ್ಲ, ಮರವೆಯಿಲ್ಲ; ಕರುಹಿದ್ದು ಕುರುಹಿಲ್ಲ; ಕೊರತೆಗಿಂಬಿಲ್ಲ. ಪರಮಾತುಮನಲ್ಲಿ ಮನ ಎರಕಾಗಿ ನೆಲೆನಿಂತು ಕರಿಗೊಂಡಿರುತ್ತದೆ. ಅದುವೇ ಮಹಾಯೋಗ. ಅದುವೇ ಆ ಪರಾಶಕುತಿ ಆ ಪರಮಾತುಮರೆಂಬ ದಿವ್ಯ ಸತಿಪತಿಗಳ ಸಮರಸ ಸುಖ.

ಚಿತ್ತ ಬುದ್ಧಿ ಅಹಂಕಾರ ಮನಸ್ಸುಗಳನ್ನು ಜ್ಞಾನದಲ್ಲಿ ತಲ್ಲೀನಗೊಳಿಸಿ ಆ ಜ್ಞಾನವನ್ನು ಶಿವರತಿಯಲ್ಲಿ ಸಮರಸಗೊಳಿಸುವುದೆ ಪತಿಯೋಗ; ಅದೇ ಪತಿಕ್ರಿಯೆ. ಆಗ ಆತ್ಮರಾಗ ಅತ್ಯಧಿಕವಾಗುತ್ತದೆ. ಆತ್ಮಶಕ್ತಿ ಅಪ್ರತಿಮವಾಗು

ತ್ತದೆ. ಅದು ವ್ಯಕ್ತಿ ವಿಕಾಸದ ಚರಮ ಘಟ್ಟ; ಪರಮ ಮಟ್ಟ. ಅಲ್ಲಿ ಸಣ್ಣಪುಟ್ಟ ಅನುರಾಗಗಳಿರುವುದಿಲ್ಲ, ಇದ್ದರೂ ಅವೆಲ್ಲ ಆ ಪರಮಾನುರಾಗದಲ್ಲಿ ಪ್ರಲೀನವಾಗಿರುತ್ತವೆ.

ಪರಾನುರಾಗ ಪರಮಾನುರಾಗ ಈ ಎರಡು ಪದಗಳನ್ನು ಮನಸಾರೆ ಮೆಲುಕುಹಾಕಬೇಕು. ಪರಾವಿದ್ಯೆಯೆ ಶಕ್ತಿ, ಪರಮಚೈತನ್ಯವೇ ಪರಮಾತ್ಮ. ಅವೆರಡನ್ನು ಒಂದಾಗಿಸುವ ಒತ್ತಾಸೆಯೇ ಪರಾನುರಾಗ ಅಥವಾ ಪರಮಾನುರಾಗ. ಶರಣನು ಸಂಪೂರ್ಣವಾಗಿ ಆ ಪರಾನುರಾಗಕ್ಕೆ ಶರಣಾಗಿರುತ್ತಾನೆ. ಸರ್ವಾತ್ಮರಾಗದಿಂದಿರುತ್ತಾನೆ. ಆತ್ಮಸಂಯಮನ ಆತ್ಮದರ್ಶನ ಆತ್ಮೋನ್ನತಿಗಳು ತಾವಾಗಿಯೇ ರೂಪುಗೊಳ್ಳುತ್ತವೆ. ಪರಾಪ್ರಕೃತಿ ಪ್ರಸನ್ನ ಮತಿ ಪೂರ್ಣ ಸಂವಿತ್ತಿ ಸಂಪ್ರಾಪ್ತವಾಗುತ್ತವೆ. ಅಂಥವನು ಸಮಾಜಕ್ಕೆ ಸಾಹಿತ್ಯಕ್ಕೆ ಉತ್ತಮ ಕೃತಿ ಕಾಣಿಕೆಯನ್ನು ಕೊಡಬಲ್ಲನು. ಆತ್ಮತೃಪ್ತಿಯನ್ನು ತಾನೂ ಪಡೆದು ಉಳಿದವರಿಗೂ ಕೊಡಬಲ್ಲನು. ಅಂತಹ ಅಪ್ರತಿಮ ಅಭಿರುಚಿ ಅನುರಾಗಗಳನ್ನು ತಳೆದಿರುತ್ತಾನೆ ಶರಣನು. ಅದನ್ನು ಪರಾನುರಾಗವೆಂದು ಪರಾಭಕ್ತಿಯೆಂದು ಪರಾನುರಕ್ತಿಯೆಂದು ಹೇಳುವುದುಂಟು.

ಆ ಪರಾನುರಕ್ತಿಯನ್ನು ಸತ್ಯಪ್ರೇಮವೆಂದು ಪವಿತ್ರಪ್ರೇಮವೆಂದು ಹೇಳಬಹುದು. ಶರಣ ಸತ್ಯಪ್ರೇಮಿ. ಸತ್ಯವನ್ನು ಸತ್ಯವಸ್ತುವನ್ನು ಪ್ರೇಮಿಸುವುದೇ ಆತನ ಸತೀಭಾವದ ಉದಾತ್ತ ಉದ್ದೇಶ; ಉನ್ನತಧ್ಯೇಯ. ಸಂಪೂರ್ಣ ಸತ್ಯಸ್ವರೂಪ ಆ ಪರಶಿವನೊಬ್ಬ. ಆ ಪರಶಿವನೇ ಶರಣನ ಪ್ರಾಣ, ಪ್ರಪತ್ತಿ. ಸತ್ಯವೇ ಪ್ರಸಾದ; ಪ್ರಸಾದವೇ ಸತ್ಯ. ಪ್ರಸಾದ ಪ್ರೇಮಿ ಶರಣ. ಶರಣನ ಪ್ರೇಮ ಸತ್ಯನಿಷ್ಠ; ಸಚ್ಚಿದಾನಂದ ನಿಷ್ಠ.

ಸತಿಪತಿಯೋಗ ಒಂದು ಉದಾತ್ತಯೋಗ. ಇಲ್ಲಿ ಸತಿಯೆಂದರೆ ಪರಾವಿಧ್ಯ–ಪರಾಜ್ಞಾನ, ಪರಾಶಕ್ತಿ. ಅಂಥವಳಿಗೆ ಪತಿಯಾಗುವ ಯೋಗ ಪ್ರಸನ್ನ ಚೇತನದ್ದು. ಇದೇನು ಸಣ್ಣ ಯೋಗವಲ್ಲ. 'ಪರಾಪತಿ' ಯಾಗುವುದು ಮಹಾಯೋಗ, ಪೂರ್ಣಯೋಗ. ಅದೇ ಮಹಾದೇವತ್ವ ಪ್ರಾಪ್ತಿ.

ಶಿವಶರಣೆ ಸತ್ಯಕ್ಕನ 'ಸತಿಪತಿಯೋಗ'ವನ್ನು ಅವಳವೇ ಆದ ವಚನಾಮೃತಗಳನ್ನು ಸವಿಯೋಣ. ಸತ್ಯಕ್ಕ ಸಾಮಾನ್ಯಳಲ್ಲ. ಒಂದೇ ಮಾತಿನಲ್ಲಿ ಹೇಳಿ ಅವಳ ನೀಳಾದ ಸಿಲವನ್ನು ತೋರಬೇಕೆಂದರೆ, ಮುಕ್ತಾಯಕ್ಕಗಳನ್ನೂ ಒಪ್ಪದೆ ಖಂಡಿಸಿದ ಧೀರಳು- ಸಂಪೂರ್ಣ ಸ್ಥಿತಪ್ರಜ್ಞಳು. ಶಿವಾತ್ಮಸ್ವರೂಪನಾದ ಅಜಗಣ್ಣನಿಗಾಗಿ ಅತ್ತುದು ಸತ್ಯಕ್ಕೆ ದೂರವೆನ್ನುತ್ತಾಳೆ. ಸತ್ತಾಸ್ವರೂಪಕ್ಕೆ ಸಾವುಂಟೆ ? ಶರಣನಿಗೆ ನೋವುಂಟೆ ?- ಎಂದು ಕೇಳುತ್ತಾಳೆ. ಅಂತಹ ಸತ್ಯಕ್ಕನ ಪತಿಯೋಗದ ಮಾತುಗಳಿವು :

“ಅಡಿಗಡಿಗೆ ನಿಮ್ಮ ಶರಣರಡಿಗೆರಗಿ ಶರಣೆಂಬೆ.
ನುಡಿಯ ಬಾಧೆಯ ಮಾತು ಅನ್ಯನುಡಿ ಸಮನಿಸದು.
ಒಡೆದೆಲು ಶಿರಬಿಗಿದು ಮಂಡುಗಟ್ಟಿ
ಕಂಬನಿಯ ಕಡಲೊಳಗೆ ತೇಂಕಾಡುತೆಂದಿಪ್ಪೆನೋ ”
ಮೃಡ ಶರಣು ಶರಣೆಂಬ ಶಬ್ದವೊಡಲುಗೊಂಡು,
ಶಂಭು ಜಕ್ಕೇಶ್ವರ ದೇವಂಗೆ ಶರಣೆನುತ ಮೈಮರೆದೆಂದಿಪ್ಪೆನೋ?
ಶಿವಶರಣೆಂದು ಪೂರ್ವಾರ್ಜಿತವನುಂಡಡೆ ಭಂಗ
ಹರಶರಣೆಂದು ಭವಮಾಲೆಗೊಳಗಾದರೆ ಭಂಗ.
ಹರವಶವೆನಿಸಿ ವಿಧಿವಶವೆಸಿಸಿದರೆ ಆದು ಭಂಗ ಕಾಣಾ-
ಶಂಭು ಜಕ್ಕೇಶ್ವರ ದೇವಾ !

ಗಂಡ ಗಂಡರ ಎಡೆಯ ಮೆಟ್ಟಿ ನಡೆದವರುಂಟೆ ?
ಗಂಡ ಗಂಡರ ಚಲ್ಲಣವ ಮಾಡಿ ಉಟ್ಟವರುಂಟೆ ?
ಗಂಡ ಗಂಡರ ಚರ್ಮವ ಹೊದ್ದವರುಂಟೆ ?
ಗಂಡ ಗಂಡರ ತೊಟ್ಟವರುಂಟೆ ? ಗಂಡ ಗಂಡರ ತುರುಬಿದವರುಂಟೆ?
ಗಂಡ ಗಂಡರ ಭಸ್ಮವ ಮಾಡಿ ಹೂಸಿದವರುಂಟೆ ?
ಗಂಡನೇ ಗಂಡರ ಕಣ್ಣು ಕಾಲಲ್ಲದೆ, ಗಂಡನೇ ಗಂಡರ ಶಿರಕರವಲ್ಲದೆ,
ಗಂಡು ವೇಷವೆಂಬುದು ನಿಮ್ಮ ಶಕ್ತಿರೂಪು.
ಗಂಡನಿಗೆ [illegible] ನಡೆಯುತ್ತೇ ಭಕ್ತಿ ಎಂಬುದು ನಿಮಗೆ ಸಂದಿತ್ತು;

ಶಂಭು ಜಕ್ಕೇಶ್ವರ ದೇವಾ ಶರಣು, ಜಗದೊಳಗೊಬ್ಬನೇ ಗಂಡನು,
ಗಂಡರಿಗೆ ಗಂಡನು.

“ ಜ್ಞಾನಾನುಭಾವಿ ಎಂಬ ಪಿನಾಕಿಯ ಮಾತಕೇಳ ಬಂದೆ.
ಹಿರಿದು ಆರತದಿಂದ ಕಾಣಿಸುವನ್ನಕ್ಕರ,
ತವಕ ನುಡಿಗೆಡೆಗೊಡನೆಲಗೆ !
ಪ್ರಾಣಕ್ಕಾಧಾರ ಶಿವ ಶಿವಾ ಎಂಬ ಶಬುದ.
ಆತನ ಕಂಡಡೆ ಕಡೆಯ ಕೀಲುಕಳೆದಂತೆ !
ಶಂಭು ಜಕ್ಕೇಶ್ವರನ ಬೆರಸಲೊಡನೆ ಬೆರಗಾವೆನು.”

ಸತ್ಯಕ್ಕ ಈ ನಾಲ್ಕು ವಚನಗಳಲ್ಲಿ ಪತಿಯೋಗದ ಪೂರ್ಣಗತಿಯನ್ನು ಸಾಧಿಸಿ ತೋರಿದ್ದಾಳೆ. ಶರಣನ-‘ಶರಣು ಯೋಗ’ ಶರಣರ ಅಡಿಗೆರಗುವಲ್ಲಿಂದ ಮೊದಲಾಗಿ ನುಡಿಯಲ್ಲಿ ಮೊಳೆದು ನಟ್ಟ ನೋಟದಲ್ಲಿ ಹೂವಾಗಿ ನಡೆ ನುಡಿ ನೋಟಗಳು ಮಾಗಿ ಆ ‘ಶರಣು ಯೋಗ’ ದಲ್ಲಿಯೇ ಮೈಮರೆಯುವಳು. ಆ ಯೋಗದಲ್ಲಿ ಪೂರ್ವಾರ್ಜಿತ, ಭವಮಾಲೆಗಳಿಗೆ ಒಳಗಾಗದೆ ವಿಧಿವಶವಾಗದೆ ಅದರಲ್ಲಿಯೇ ನೆಲೆ ನಿಲ್ಲುವ ನಿಶ್ಚಲಾತ್ಮಕ ಭಾವ ಮೈಗೂಡಿದೆ. ಆ ಯೋಗಕ್ಕೆ ಒಲಿದ ಆ ಶರಣ ಸತಿಯ ಪತಿ ಅಪ್ರತಿಮ, ಅದ್ವಯ, ಗಂಡರಿಗೆ ಗಂಡ, ಜ್ಞಾನಾನುಭಾವಿ; ಆದರಿಂದಾಗಿ ಆತ ಪ್ರಾಣಕ್ಕಾಧಾರ. ಆತನ ದರ್ಶನದಿಂದ ಕಡೆಯ ಕೀಲು ಅಂದರೆ ಭಿನ್ನಜ್ಞಾನ ಕಳಚಿ ಬೆರಸಿ ಬೆರಗಾಗುವ ಪತಿಯೋಗವನ್ನು ತೋರಿದ್ದಾಳೆ. ಅಗಾಧವಾದ ಆತ್ಮವಿಶ್ವಾಸ, ಅದ್ವಯಾದರಗಳನ್ನು ತೋರಿದ್ದಾಳೆ.

ಗಜೇಶ ಮಸಣಯ್ಯಗಳ ಪತಿಯೋಗದ ಪ್ರಮಾಣ ವಚನಗಳಿವು :

“ ಒಳಗೆ ಶೋಧಿಸಿ ಹೊರಗೆ ಧವಳಿಸಿ
ಭಾವದಿಂದ ಗುಡಿತೋರಣವ ಕಟ್ಟಿದೆನಯ್ಯಾ.
ಲಿಂಗ ಬಾರಯ್ಯಾ, ಎನ್ನ ದೇವ ಬಾರಯ್ಯಾ !
ಎನ್ನಂತರಂಗದ ಪರಂಜ್ಯೋತಿಯೇ ನಿಮ್ಮ

ನಾನಿದಿರಗೊಂಬೆ ನೀ ಬಾರಯ್ಯಾ !
ಎನ್ನ ಮಹಾಲಿಂಗ ಗಜೇಶ್ವರಾ ನೀ ಬಾರಯ್ಯಾ !

ಪೂರ್ಣ ಜ್ಞಾನಕ್ಕಾಗಿ ಪ್ರಸನ್ನ ಚೇತನಕ್ಕಾಗಿ ಶರಣನ ಹೃದಯ ತಲ್ಲಣಿಸಿದೆ. ತೀರದ ತವಕವನ್ನು ತೋರಿದೆ, ಅದಕ್ಕಾಗಿ ಸರ್ವಸಜ್ಜಿತವಾಗಿ ಆತನ ಮನ ಪ್ರಾಣಗಳು ಎದುರು ಕಾಯ್ದಿವೆ, ಕರೆದಿವೆ; ಕರುಳು ಕರಿಗೊಳ್ಳಲು ಕಕ್ಕುಲಗೊಂಡಿದೆ.

" ಮಾಘ ಮಾಸದ ನವಿಲಿನಂತೆ ಅದೆ ನೋಡಾ ಅವ್ವಾ !
ಇರುಳು ತೊಳಲುವ ಜಕ್ಕವಕ್ಕಿಯಂತೆ ಹಲುಬುತ್ತಿದ್ದೇನೆ ನೋಡಾ
ಅವ್ವಾ !
ಮಾಗಿಯ ಕೋಗಿಲೆಯಂತೆ ಮೂಗಿಯಾಗಿ ಇದೇನೆ
ನೋಡಾ ಅವ್ವಾ !
ಮಹಾಲಿಂಗ ಗಜೇಶ್ವರನ ಅನುಭಾವ ಸಂಬಂಧಿಗಳ ಬರವು
ಎನ್ನ ಪ್ರಾಣದ ಬರವು ನೋಡಾ ಅವ್ವಾ !"

ಮಹಾದೇವನ ಅನುಭಾವವುಳ್ಳವರ ಸಂಗವೆ ಮಹಾಯೋಗ. ಅಂಥವರ ಆಗಮನವೇ ಪ್ರಾಣದ ಬರವು. ಶರಣಸತಿ ಶಿವಾನಂಭಾವಿಗಳಿಗಾಗಿ ಹಾರೈಸಿರುತ್ತಾಳೆ. ಅವರಲ್ಲಿರುವ ಪೂರ್ಣ ಪ್ರಜ್ಞೆಯ ಪ್ರಭೆಗಾಗಿ ಕಣ್ಣೆಲ್ಲ ಪ್ರಾಣವಾಗಿ ಕಾಯ್ದಿರುತ್ತಾಳೆ.

" ಇರುಳಿನ ಜಕ್ಕವಕ್ಕಿಯಂತೆ ಅಗಲಿ ಹಲುಬುತ್ತಿರೆ.
ಇರುಳಿನ ತಾವರೆಯಂತೆ ಮುಖಬಾಡೆ.
ಇರುಳಿನ ನೈದಿಲಂತೆ ಕಣ್ಣ ಮುಚ್ಚದೆ
ಇರುಳಿನ ಸಮುದ್ರದಂತೆ ಘನವಾಗಿ ಸಲೆ ಉಮ್ಮಳಿಸಿ
ಸಂಜೆವರಿದು ಮಹಾಲಿಂಗ ಗಜೇಶ್ವರನ ಬರವಿಂಗೆ
ಬೆಳಗಾಯಿತ್ತು."

ಹೂವಿನ ತುಂಬಿಗೆ ಪರಿಮಳವೆತ್ತಿ [illegible]

ಅಂಗಸಂಗದಲ್ಲಿಕ್ಕಿ ಮುಚ್ಚುವೆನವ್ವಾ !
ಮನವ ಮರೆದ ಮಂದಾಳಿಯ ನೇಹದಂತಾದೆನವ್ವಾ !
ಮಹಾಲಿಂಗ ಗಜೇಶ್ವರನ ಅನುಭಾವಕ್ಕೆ ಸುಖಿಯಾಗಿ !"

ಇದು ಶರಣನ ಉಮ್ಮಳಿಕೆ, ಹಮ್ಮೈಸುವಿಕೆ. ಜಕ್ಕವಕ್ಕಿಯ ಹೋಲಿಕೆಯಲ್ಲಿ ಉದ್ದೇಶ ಉದ್ದೀಪಿತವಾಗಿದೆ. ಹಗಲಿನಲ್ಲಿ ಜತೆಗೂಡಿರುವುದೆ ಜಕ್ಕವಕ್ಕಿ ಇರುಳಿನಲ್ಲಿ ಅಗಲಿ ಹಲಬುತ್ತದೆ. ಶಿವಜ್ಞಾನವೆಂಬ ಹಗಲಿದ್ದರೆ ಶರಣ ಶಿವಲಿಂಗದೊಡನೆ ಸಮರಸದಲ್ಲಿರುತ್ತಾನೆ. ಅಜ್ಞಾನಾಂಧಕಾರದಲ್ಲಿ ಅಗಲಿರಬೇಕಾಗುತ್ತದೆ. ಆದರಿಂದಾಗಿ ಸದಾಶಿವಜ್ಞಾನದಲ್ಲಿರುವ ಭಾಗ್ಯವನ್ನೇ ಬೇಡುತ್ತಾನೆ ಶರಣ. ಇರುಳ ತಾಪವಗೆ, ಇರುಳ ನೈದಿಲೆಗಳೆರಡನ್ನೂ ತನಗಿರುವ ಅವಸ್ಥೆಗೆ ಹೋಲಿಸಿರುವ ಜಾಣ್ಮೆ ಮೆಚ್ಚತಕ್ಕುದು. ಜತೆಗೆ ಇರುಳು ತಿಂಗಳೋದಯಕ್ಕೆ ಉಕ್ಕಿದ ಕಡಲನ್ನು ಉಮ್ಮಳಕ್ಕೆ ಹೊಂದಿಸಿರುವುದೂ ಉಚಿತವಾಗಿದೆ. ಶರಣನಿಗೆ ಲಿಂಗದ ಬರುವಿಕೆಯೇ ಬೆಳಗು; ಬಾರದಿರುವಿಕೆಯೆ ಬೈಗು.

ಶರಣನ ಒಲವು ಅತ್ಯಂತ ಸೂಕ್ಷ್ಮವಾದುದು. ಅಂತೆಯೇ ಭಾವವೂ ಸೂಕ್ಷ್ಮವಾದುದು. ಭಾವತೀವ್ರತೆಯನ್ನು ಭಾವಸೂಕ್ಷ್ಮತೆಯೊಡನೆ ಎರಡನೆಯ ವಚನದಲ್ಲಿ ವೆಗ್ಗಳಿಸಲಾಗಿದೆ. ಲಿಂಗಾನುಭವದ ಸುಖವೇ ಸುಖ. ಅದೇ ಲಿಂಗಪತಿಯ ಯೋಗ. ಅದು ಬಾಳಿನಲ್ಲಿ ಅಂತಃಕರಣಗಳನ್ನೆಲ್ಲ ತೊಳೆದು ತೊಳಗಿಸುತ್ತದೆ, ತದೇಕತೆಯನ್ನು ತವಕಾತಿಶಯವನ್ನು ತುಂಬುತ್ತದೆ; ಶರಣನಲ್ಲಿ ತುಂಬಿದೆ. ಅಂತೆಯೇ ಲಿಂಗಪ್ರೇಮ ರಸವಾಗಿ ಚಿಮ್ಮಿದೆ. ಅಭಿಲಾಷೆ ಆಳವಾಗಿ ಹೊಮ್ಮಿದೆ. ತನ್ನ ಪತಿಗೆ ತಾನು ಮೆಚ್ಚಿದ ಲಿಂಗಯ್ಯನಿಗೆ ತನ್ನ ಮನವನ್ನು ತುಂಬಿರುವ ದುಂಬಿಗೆ ಪರಿಮಳವು ಒತ್ತುವುದಂತೆ! ಆದರಿಂದಾಗಿ ತನ್ನ ಮಿದುವಾದ ಅಂಗಸಂಗದಲ್ಲಿ ಇಕ್ಕಿ ಮುಚ್ಚಿರುವಳಂತೆ! ಆ ಅನುಭವಾನಂದದ ಭರದಲ್ಲಿ ಮನಮರೆದಳಂತೆ! ಮಂದಾಳಿಯ ನೇಹದಂತಾದಳಂತೆ! ಅದೆಂತಹ ಒಲವಿನ ಒತ್ತಾಸೆ; ಚಲುವಿನ ಅಭಿಲಾಷೆ! ಶರಣ ಸತಿಯ ಈ [illegible]ರತಿಭಾವ ಮಧುರಕ್ಕೆ ಮಧುರವಾಗಿದೆ. ಆ ಭಾವವಾಣಿ ಇಂಚರಕ್ಕೆ ಇಂಚರವಾಗಿದೆ.

ನೈದಿಲೆಯಂತೆ ಬರಿ ಕಣ್ಣರಳಿದರೆ ಕಣ್ಣ ಕಾತರಿಸಿದರೆ ಸಾಲದಂತೆ! ಹೃದಯ ತಾವರೆ ಅರಳಬೇಕಂತೆ! ಪ್ರಸನ್ನ ಲಿಂಗನೇಸರನು ಮೂಡಿ ಮುಂಬೆಳಗಬೇಕಂತೆ! ಹಗಲಿನ ಜಕ್ಕವಕ್ಕಿಯಾಗಿರಬೇಕಂತೆ! ಇರುಳು ಅಳಿದು ಬೆಳಗು ಬಾಳಿನಲ್ಲಿ ಒಮ್ಮೂಡಿ ಬರಬೇಕಂತೆ! ಬೈಗಿಲಿನ ಬಳಲಿಕೆ ನೀಗಬೇಕಂತೆ! ಅನುಭವಾನಂದ ತುಂಬಿರಬೇಕಂತೆ! ಅಂತಾಗುವುದೇ ಆವಳ ಹೃದಯ ಹಂಬಲದ ಪೂರೈಕೆ! ಅದೇ ಸತಿಪತಿಯ ಮಹಾಯೋಗದ ಹರಕೆ! "ಸತಿ ಭಕ್ತಿಯಾದಡೆ ಹೊಲೆಗಂಜಲಾಗದು. ಪತಿ ಭಕ್ತನಾದಡೆ ಕುಲಕ್ಕಂಜಲಾಗದು. ಸತಿ ಪತಿ ಎಂಬ ಅಂಗಸುಖ ಹಿಂಗಿ, ಲಿಂಗವೆ ಪತಿಯಾದ ಬಳಿಕ ಸತಿಗೆ ಪತಿಯುಂಟೆ? ಪತಿಗೆ ಸತಿಯುಂಟೆ? ಪಾಲುಂಡು ಮೇಲುಂಬರೇ ಗುಹೇಶ್ವರಾ?" ಇದುವೇ ತಾದಾತ್ಮ್ಯಯೋಗ. ಸತಿ ಪತಿಯಲ್ಲಿ, ಪತಿ ಸತಿಯಲ್ಲಿ ಪರಸ್ಪರ ತಾದಾತ್ಮ್ಯತೆಯನ್ನು ತಳೆದಿರುತ್ತಾರೆ. ವಾಗರ್ಥಗಳೆರಡು ನಾದದಲ್ಲಿ ಲೀನವಾಗಿರುವಂತೆ ಸತಿ ಪತಿಗಳಿಬ್ಬರೂ ಸುಖಪರಿಣಾಮದಲ್ಲಿ ಲೀನವಾಗಿರುತ್ತಾರೆ. ಸತಿಭಾವ, ಪತಿಭಾವ ಎರಡೂ ನಿರ್ಭಾವವಾಗಿರುತ್ತವೆ. ಸದ್ಭಾವವಿರುವಲ್ಲಿ ಭಕ್ತತ್ವ. ನಿರ್ಭಾವವಿರುವಲ್ಲಿ ಮುಕ್ತತ್ವ ಅಥವಾ ಐಕ್ಯತ್ವ. ಶಾಂತಿಯುತ ಸಹ ಜೀವನದ ಪ್ರತೀಕ ಸತಿಪತಿಯೋಗ.

ಶರಣ ಸತಿಯ ಬಲಗಣ್ಣ ಬೆಳಗೇ ಲಿಂಗಪತಿ. ಎಡಗಣ್ಣ ಜ್ಯೋತಿಯೇ ಸತಿ; ಅದೇ ಅಂಗ. ಇವೆರಡರ ಒಕ್ಕೂಟವೇ ಸತಿಪತಿಯೋಗ. 'ಕರಕವಾರಿಯೋಗದಂತೆ ಶರಣಸ್ಥಲ' ಎಂದು ಆದಯ್ಯ ಶರಣನು ಹೇಳಿದ್ದಾನೆ. ಆಲಿಕಲ್ಲಿಗೂ ನೀರಿಗೂ ಇರುವ ಸಂಬಂಧ ಶರಣಸತಿಗೂ ಲಿಂಗಪತಿಗೂ ಇರುತ್ತದೆ. ಕರಕ ವಾರಿಯಲ್ಲಿ ಕರಗಿ ಏಕವಾಗುವಂತೆ ಶರಣನು ಲಿಂಗದಲ್ಲಿ ಬೆರದೇಕವಾಗುತ್ತಾನೆ.

"ಸಮರಸದೊಳಗಣ ಸ್ನೇಹವು ಮತ್ಸ್ಯ, ಕೂರ್ಮ, ವಿಹಂಗಗಳಂತೆ ಕ್ರಮವಾಗಿ-ಸ್ನೇಹದ ನೋಟದಲ್ಲಿಯೇ ತೃಪ್ತಿ; ಸ್ನೇಹದ ನೆನಹಿನಲ್ಲಿಯೆ ತೃಪ್ತಿ; ಸ್ನೇಹದ ಸ್ಪರ್ಶನದಲ್ಲಿಯೆ ತೃಪ್ತಿ. ಈ ಪರಿಯಲ್ಲಿ ಎಲ್ಲ ಮಹಾಲಿಂಗ ಗಜೇಶ್ವರನಲ್ಲಿ ಲಿಂಗೈಕ್ಯವು; ವಾರಿಕಲ್ಲು ಪುತ್ಥಳಿಯು ಅಪ್ಪುವ ನೊಡಗೂಡಿದಂತಾಯಿತ್ತು."

ಪ್ರಾಣಲಿಂಗಿ, ಶರಣ

ಭೋಗಾಂಗದ ದ್ವಿತೀಯ ಸ್ಥಲ ಪ್ರಾಣಲಿಂಗಿ; ಯೋಗಾಂಗದ ಪ್ರಥಮ ಸ್ಥಲ ಶರಣ; ಪ್ರಥಮ ಪಾತ ಶರಣಸ್ಥಲ. ಮೀರಿದ ಕ್ರಿಯಾ ಪ್ರಕ್ರಿಯೆಯಲ್ಲಿ ಪ್ರಥಮ ಪಾತ ಪ್ರಾಣಲಿಂಗಿ; ದ್ವಿತೀಯ ಪಾತ ಶರಣ. ಮನಸ್ಸನ್ನು ತಿದ್ದುವವನು ಪ್ರಾಣಲಿಂಗಿ; ಜ್ಞಾನವನ್ನು ವೃದ್ಧಿಸುವವನು ಶರಣ. ಅನುಭವಿ ಪ್ರಾಣಲಿಂಗಿ; ಅನುಭವಾನಂದಿ ಶರಣ. ಸ್ಪರ್ಶಾನುಭಾವಿ ಪ್ರಾಣಲಿಂಗಿ; ಶಬ್ದಜ್ಞಾನಿ ಶಬ್ದಾನಂದಿ ಶರಣ. ಪ್ರಾಣಲಿಂಗಿ ಘನಮನದ ಅಭಿರುಚಿಯನ್ನು ಹೆಚ್ಚಿಸಿಕೊಂಡರೆ, ಶರಣ ಘನಜ್ಞಾನದ ಅಭಿರುಚಿಯನ್ನು ಹೆಚ್ಚಿಸಿಕೊಳ್ಳುತ್ತಾನೆ. ನಿತ್ಯನೆನಿಸಿದ ಪ್ರಾಣಲಿಂಗಿ ಪೂರ್ಣತ್ವಕ್ಕೆ ನಿಲುಕಿ ಶರಣನೆನಿಸುತ್ತಾನೆ. ಪೂರ್ಣಜೀವಿಯಾಗುತ್ತಾನೆ.

ನಯ-ವಿನಯ, ಶೀಲ-ಸದ್ಗುಣ. ಸ್ನೇಹ-ಸೌಂದರ್ಯಗಳ ಸಂಕೇತ ಶರಣ. ನಯ-ವಿನಯ ಶೀಲ-ಸದ್ಗುಣಗಳಿಲ್ಲದಿದ್ದರೆ ಶರಣನಾಗಲು ಸಾಧ್ಯವಿಲ್ಲ. ಶರಣಪದದಲ್ಲಿಯೆ ಇವೆಲ್ಲವೂ ಅಡಕವಾಗಿವೆ; ಅಭಿವ್ಯಕ್ತವಾಗುತ್ತವೆ. ಶರಣನಲ್ಲಿ ಸ್ನೇಹ ಭಾವ ಪ್ರಧಾನವಾಗಿರುತ್ತದೆ. ಶಿವಪ್ರೇಮ ಶರಣನ ಜೀವಾಳ. ಶಿವಪ್ರೇಮವೆಂದರೆ ಶಿವವಾಗಿರುವುದರಲ್ಲೆಲ್ಲಾ ಪ್ರೇಮವಿರುವುದೆಂದರ್ಥ. ಸತ್ಯ ಶಿವ ಸೌಂದರ್ಯದಲ್ಲಿ ಶರಣನ ಕಣ್ಣು..

ಪ್ರಾಣಲಿಂಗಿಗೆ ಮೈತುಂಬ ಕೈಯಿದ್ದರೆ ಶರಣನಿಗೆ ಮೈ ತುಂಬ ಕಿವಿ. ಹೀಗಿದ್ದರೂ ಮಂಗಳಕರವಾಗದ್ದನ್ನು ಶರಣನ ಕಿವಿ ಎಂದಿಗೂ ಕೇಳದು. ಅಂತಹದರಲ್ಲಿ ಅದು ಕಿವುಡಾಗಿರುತ್ತದೆ. ಶಿವಕಥನ ಶಿವವಿಷಯಗಳನ್ನಲ್ಲದೆ 'ಮತ್ತೊಂದನ್ನು ಕೇಳದಂತೆ ಕಿವುಡನ ಮಾಡಯ್ಯಾ ತಂದೆ.' ಎಂದು ಬೇಡುತ್ತಾನೆ. ಶಿವಶ್ರವಣ, ದಿವ್ಯಶ್ರವಣವೇ ಶರಣನ ಪ್ರಾಣ.

ಪ್ರಾಣಲಿಂಗಿ ಆತ್ಮಸೌರಭವನ್ನು ಹೊತ್ತು ತಂದರೆ, ಶರಣ ಆತ್ಮನಾದವನ್ನು ತರುತ್ತಾನೆ. ಆತ್ಮನಾದದಲ್ಲಿ ತಲ್ಲೀನನಾಗಿರುತ್ತಾನೆ. ಪ್ರಾಣಲಿಂಗಿಯದು ಮನೋಯೋಗ; ಶರಣನದು ಜ್ಞಾನಯೋಗ. ಆತನಿಗೆ ಮನಸ್ಸು ಪ್ರಸನ್ನವಾಗಿದ್ದರೆ ಆತನೇ ಮುಂದುವರಿದು ಜ್ಞಾನ ಪ್ರಸನ್ನತೆಯನ್ನು ಪಡೆದು ಶರಣನೆನಿಸುತ್ತಾನೆ. ಶಿವಾತ್ಮಸ್ವರೂಪನಾಗುತ್ತಾನೆ.

ಭೋಗಾಂಗದಲ್ಲಿ ಪ್ರಾಣಲಿಂಗಿಯ ಯೋಗವಿದೆ. ಯೋಗಾಂಗದಲ್ಲಿ ಶರಣಸತಿಯ ಲಿಂಗಪತಿಯ ಭೋಗವಿದೆ. ಭಾವತ್ಯಾಗವಿದೆ. ಅವಧಾನ-ಅನುಭವಗಳ ಸಾಮರಸ್ಯ ಪ್ರಾಣಲಿಂಗಿಯದು; ಅನುಭವ-ಆನಂದಗಳ ಸಾಮರಸ್ಯ ಶರಣನದು. ನಿರಹಂಕಾರದಿಂದ ಸುಮನಸ್ಕನು ಪ್ರಾಣಲಿಂಗಿಯಾದರೆ ಸುಮನದಿಂದ ಸುಜ್ಞಾನಿಯಾಗಿರುತ್ತಾನೆ ಶರಣನು. ಲಿಂಗ ಪ್ರಸಾದವನ್ನು ಸ್ಪರ್ಶಿಸುವಾಗ ಪ್ರಾಣಲಿಂಗಿಯೆನಿಸಿದರೆ ಅಸ್ಪರ್ಶಜನ್ಯ ಶಬ್ದವನ್ನು ಶ್ರವಣ ಮಾಡಿದಾಗ ಶರಣನೆನಿಸುತ್ತಾನೆ.

ಸಿದ್ಧ ಪ್ರಸಾದ (ರುಚಿ ಪ್ರಸಾದ) ಭೋಗಿ ಪ್ರಾಣಲಿಂಗಿ; ಪ್ರಸಿದ್ಧ ಪ್ರಸಾದ (ತೃಪ್ತಿ ಪ್ರಸಾದ) ಯೋಗಿ ಶರಣ. ಭೋಗ-ಯೋಗವಾಗುತ್ತದೆ ಪ್ರಾಣಲಿಂಗಿಯಲ್ಲಿ; ಯೋಗ-ಭೋಗವಾಗುತ್ತದೆ ಶರಣನಲ್ಲಿ. ಪ್ರಾಣವನ್ನು ಪ್ರಣವವನ್ನಾಗಿಸುತ್ತಾನೆ ಪ್ರಾಣಲಿಂಗಿ; ಪ್ರಣವವನ್ನೇ ಪ್ರಾಣವನ್ನಾಗಿಸುತ್ತಾನೆ ಶರಣ. ಪ್ರಾಣಲಿಂಗಿಗೆ ಪ್ರಾಣವೇ ಲಿಂಗ; ಶರಣನಿಗೆ ಜ್ಞಾನವೆ ಲಿಂಗ.

ಶರಣಾಂಗ ಪ್ರಸಾದಲಿಂಗ

ಶಬ್ದ-ಶರಣಾಂಗ; ಅರ್ಥ-ಪ್ರಸಾದಲಿಂಗ. ರಸಭಾವ ಶರಣಾಂಗ; ಆನಂದ ಭಾವ ಪ್ರಸಾದಲಿಂಗ. ತುರೀಯಾತೀತವೆ ಶರಣಾಂಗ; ಶಾಂತ್ಯತೀತವೆ ಪ್ರಸಾದ ಲಿಂಗ. ಪದಾರ್ಥವೆ ಶರಣಾಂಗ; ಪ್ರಸಾದವೆ ಪ್ರಸಾದಲಿಂಗ. ಉಭಯಾಂಡ ದೊಳಗಿರುವ ಅವಕಾಶವೆ ಶರಣಾಂಗ; ಆ ಅವಕಾಶದಲ್ಲಿರುವ ಚೇತನವೆ ಪ್ರಸಾದ ಲಿಂಗ. ಅವಕಾಶ ಅವಚ್ಛಿನ್ನವಾಗಿ ಅವಧಾರಣಕ್ಕಾಗಿ ಪಿಂಡಾಂಡದ ಮುಖ ಕರ್ಣಗಳಲ್ಲಿ ನೆಲಸಿದೆ. ಶಬ್ದೋಚ್ಚಾರಣಾಂಗ ಮುಖ; ಶಬ್ದ ಗ್ರಹಣಾಂಗ ಶ್ರೋತ್ರ, ಇವೆರಡೂ ಶರಣಾಂಗ; ಇವೆರಡರಲ್ಲಿರುವ ಚೈತನ್ಯ ಪ್ರಸಾದಲಿಂಗ. ನಾದಮಯವಾಗಿದೆ ಪ್ರಸಾದಲಿಂಗ. ನಾದದ ನೆಲೆ ಶಿರದರಮನೆ. ಅಲ್ಲಿ ನಡೆ ದಿರುತ್ತದೆ ನಿತ್ಯ ಚಿನ್ನಾದದ ಆರಾಧನೆ.

“ ಗಗನ ಮಂಟಪದಲ್ಲಿ ಅಘಹರನ ಪೂಜೆ,
ಒಗು ಮಿಗಿಲಾಗುತ್ತಿರ್ಪುದು ನೋಡಾ !
ಅಲ್ಲಿ ಧಿಗಿ ಭುಗಿಲೆಂಬ ಶಬ್ದದ ಸೊಗಸು ನೋಡಾ
ಅಖಂಡೇಶ್ವರಾ !”

ಇದು ಶರಣಾಂಗನ ಪ್ರಸಾದಲಿಂಗ ಪೂಜೆ. ಪ್ರಸಾದಲಿಂಗ ಪೂಜೆ ಯೆಂದರೆ ಲಿಂಗ ಸಾಹಿತ್ಯಸೃಷ್ಟಿ; ಲಿಂಗಾನುಭಾವ ಕಾವ್ಯ ಸೃಷ್ಟಿ. ವ್ಯಾಕರಣ ಛಂದಸ್ಸುಗಳ ತಾಕಲಾಟವಲ್ಲ; ಸ್ವಾನುಭಾವದ ಸೌಂದರ್ಯದ ನೋಟ; ಮಾಧು ರ್ಯದ ಊಟ. ಯಾವ ಸಾಹಿತ್ಯವನ್ನಾದರೂ ಸೃಷ್ಟಿಸಬಹುದು; ಲಿಂಗಸಾಹಿತ್ಯ ವನ್ನು ಸೃಷ್ಟಿಸಬೇಕಾದರೆ ಶರಣಾಂಗನಿಂದಲೇ ಸಾಧ್ಯ. ಸಾಮಾನ್ಯ ಸಾಹಿತ್ಯಕ್ಕೆ ಭೂತಾಕಾಶ ಆಧಾರವಾದರೆ, ಲಿಂಗಸಾಹಿತ್ಯಕ್ಕೆ ಆ ಪರಮಾಕಾಶ ಆಧಾರ. ಅದೇ [illegible] ಮಂಟಪ. ಅದರಲ್ಲಿ ಇರುವ ಆ ಪರಮನಾದವೇ ಅಘಹರ. ಅದು ಭವರೋಗಹರ. ಪಂಚಪಾತಕಹರ. ಅದರ ಆರಾಧನೆ ಅನುಪಮ.

ಅದಕ್ಕಿಂತ ಇನ್ನಿಲ್ಲ ಹೆಚ್ಚಳ. ಆ ಪರಮನಾದವನ್ನು ತುಂಬಿ ತಂದ ಶಬ್ದ ಅದೊಂದು ತೇಜೋಮಯಿ ! ಪ್ರಕಾಶಮಯಿ ! ದಿವ್ಯರಸಮಯಿ ! ಅದರಿಂದಾಗುವ ಸೊಗಸನ್ನು ಬಣ್ಣಿಸಲಾಗದು; ಒಕ್ಕಣಿಸಲಾಗದು. ಅದು ಜ್ಯೋತಿರ್ಲಿಂಗ ಸಾಹಿತ್ಯ. ಅದೇ ಅಚ್ಚ ಸತ್ವ. ಅದೇ ಪ್ರಕಾಶಮಯ ಪ್ರಸಾದಲಿಂಗ. ಅದೇ ಪ್ರಸನ್ನಮಯ ಪ್ರಭಾಪುಂಜ, ಅದರಿಂದ ಅಂತರಂಗದ ಚೈತನ್ಯ ಗೋಚರವಾಗುತ್ತದೆ; ಸತ್‌ಚಿತ್ ಆನಂದಗಳು ಸಮನಿಸುತ್ತವೆ. ಅದುವೇ ಓಂಕಾರ ! ಅದುವೇ ಜೀವನ ಮಂದಾರ ! ಅದು ಸರ್ವವಿದ್ಯೆಗಳ ಭಾಂಡಾರ ! ಅದು ಅಕ್ಷರ ಅದರಲ್ಲಿ ಏನೆಲ್ಲವೂ ಅಡಗಿದೆ. ಅದೇ ಒಂದು ಮಹಾವಿದ್ಯೆ. ಅದು ಶಿವಶಕ್ತಿ ಸಂಪುಟ. ಅದು ಚಿನ್ನಾದ ಚಿದ್ಬಿಂದು ಚಿತ್ಕಲೆಗಳ ಸಮರಸದ ಬೃಹತ್ತಟೆ. ಅಂತಹ ಲಿಂಗಸಾಹಿತ್ಯ ಸಾಮಾನ್ಯವಾಗಿ ಸೃಷ್ಟಿಯಾಗದು;

" ಭಕ್ತಿಯಾಚಾರದ ಪಥವಿಡಿದು ನಲಿನಲಿಮುಲಿದರೂ
ಲಿಂಗಸಾಹಿತ್ಯವಿಲ್ಲ. ಮನವ ಲಿಂಗದಲ್ಲಿ ನೆಲೆಗೊಳಿಸುವೆನೆಂದು
ಧ್ಯಾನ ಮೌನದಲ್ಲಿ ನಿಂದರೂ ಲಿಂಗಸಾಹಿತ್ಯವಿಲ್ಲ.
ಸರ್ವ ಪ್ರಪಂಚುಗಳ ವಾಯುವಿನಿಂದ ತೋರುತ್ತಿರಲು,
ಆ ಪ್ರಪಂಚವನಳಿದು ಲಿಂಗವನೊಡವೆರಸುವೆನೆಂದು
ಉಶ್ವಾಸ ನಿಶ್ವಾಸಂಗಳಂ ಪಿಡಿದು ನಿಲಿಸಿದರೂ ಲಿಂಗಸಾಹಿತ್ಯವಿಲ್ಲ.
ಸದ್ಭಕ್ತಿವೆತ್ತು ಭಾವಪ್ರಸನ್ನದಿಂ ಕಂಗಳಂ ಕಳೆದು
ಜಿಹ್ವೆಯಂ ಕೊಯ್ದು ಶಿರವನರಿದು,
ಹಸ್ತಮನತ್ತರಿಸಿದರೂ ಲಿಂಗಸಾಹಿತ್ಯವಿಲ್ಲ.
ಯಮ ನಿಯಮ ಆಸನ ಪ್ರಾಣಾಯಾಮ ಪ್ರತ್ಯಾಹಾರ
ಧ್ಯಾನ ಧಾರಣ ಸಮಾಧಿ ಎಂಬ ಅಷ್ಟಾಂಗಯೋಗಗಟ್ಟಿಗೊಂಡು
ಪ್ರಾಣ ಮನ ಪವನ ಹುರಿಗೂಡಿ;
ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ
ಆಜ್ಞೇಯವೆಂಬ
ಷಡಾಧಾರದ ಬಳಿವಿಡಿದು ನೆತ್ತಿಯಿಂದುತ್ತರಕ್ಕೆ
ಉಚ್ಚಳಿಸಿ ಹಾಯ್ದು ನಡುನೆತ್ತಿ ತೂತಾದರೂ ಲಿಂಗಸಾಹಿತ್ಯವಿಲ್ಲ.

ಸತ್ಯ ಸಮತೆ ಸಮಾಧಾನ ಸದ್ಭಾವ ಸದ್ವಿರಕ್ತಿಯಿಂದತ್ಮಾನಂದ
ತೋರುತ್ತಿರಲು, ಅದು ನೆಲೆಗೊಂಡು ನಿಲ್ಲದಾಗಿ
ಹೇಳದೆ ಬಂದು, ಕೇಳದೆ ಹೋಯಿತ್ತು.
ಸೌರಾಷ್ಟ್ರ ಸೋಮೇಶ್ವರನ ನಿಜವನರಿಯದೆ
ಅನುಭಾವ ಮಾಡಿ ಫಲವೇನಯ್ಯಾ ?"

ಲಿಂಗವನರಿಯದೆ ಲಿಂಗಾನಂಭಾವವಳವಡದೆ ಲಿಂಗ ಕರಿಗೊಳ್ಳದೆ ಲಿಂಗ ಸಾಹಿತ್ಯ ಸೃಷ್ಟಿಯಾಗದು. ನಿಜಾನುಭಾವ ನೆಲೆಗೊಳ್ಳಬೇಕು. ಬೇರೆ ಯಾವ ಬಗೆಯಿಂದಲೂ ಸಾಧ್ಯವಾಗದು. ಲಿಂಗವನರಿವುದೇ ನಿಜದರಿವು; ಅದೇ ಮಹಾ ಜ್ಞಾನರೂಪ ಮಹಾನು ಭಾವ. ಭೂತಾಕಾಶದಿಂದ ಶಬ್ದ ಜನಿಸಿದರೆ ಆತ್ಮಾಕಾಶದಿಂದ ನಿಜದರಿವಿನ ಚಿನ್ನಾದವುಂಟಾಗುತ್ತದೆ. ಆತ್ಮಾಕಾಶವೇ ಪ್ರಸಾದ ಲಿಂಗ ಅದು ಸತ್ಯ ಶುದ್ಧವಾದ ಶಿವಸುಂದರವಾದ ಶರಣಾಂಗದಲ್ಲಿ ಪ್ರತಿಷ್ಠಿತವಾಗಿ ಪಜ್ಜಳಿಸುತ್ತದೆ.

ಕಂಗಳ ಬೆಳಗು ದೃಕ್ಕಿಂಗೆ ದೃಷ್ಟವಾಗದೆ,
ಮನದ ಮಿಂಚು ಅರಿವಿಂಗೆ ವೇದ್ಯವಾಗದೆ,
ಆತ್ಮಜ್ಯೋತಿಯು ಭಾವಸ್ಫಟಿಕ ಘಟದೊಳಗೆ ಪ್ರಜ್ವಲಿಸಿ
ತೊಳಗಿ ತೊಳಗಿ ಬೆಳಗುತ್ತಿಪ್ಪುದನರಿಯದೆ
ಸೌರಾಷ್ಟ್ರ ಸೋಮೇಶ್ವರ ಲಿಂಗವ ಬಲ್ಲೆನೆಂಬುದು ಬರಿಯ
ಮಾತು."

ವಾಕ್‌ಶುದ್ಧಿ ಶಿವಾತ್ಮವಿದ್ಯಾಸಿದ್ಧಿ ಸಮನಿಸಿದ್ದಕ್ಕೆ ಕುರು ಹೆಂದರೆ ಭಾವವು ಸ್ಫಟಿಕದಂತೆ ಶುಭ್ರವಾಗಿ ಆತ್ಮಜ್ಯೋತಿ ಬೆಳ್ಳನೇ ಬೆಳಗುತ್ತಿರಬೇಕು-ಒಳ ಹೊರಗೊಂದಾಗಿ ! ಮನದ ಮಿಂಚು ಅರಿವನ್ನು ಕರಿಗೊಂಡು ಮೆರುಗಬೇಕು. ಕಣ್ಬೆಳಗು ಕಣ್ಣಿಗೆ ಕಾಣಿಸಬೇಕು. ಆಗ ಅಪರೋಕ್ಷಾನುಭವವುಂಟಾಗಿ ಆ ಅನುಭಾವಿಕ ಸಾಹಿತ್ಯಲಿಂಗ ಸಾಹಿತ್ಯವಾಗುತ್ತದೆ. ಭಾವಪೂರ್ಣ ಸಾಹಿತ್ಯ ಹೊರಹೊಮ್ಮಿ ಮಾನವ ತನುಗಳನ್ನು ಬೆಳಂಬೆಳಗಿಸುತ್ತದೆ. ಮನ ತಣಿಸುತ್ತದೆ, ಶರಣ

ಸಾಹಿತ್ಯದಲ್ಲಿ ಆ ದಿವ್ಯ ಶಕ್ತಿ ಆ ಆನುಭಾವಿಕ ಸಂಪತ್ತಿ ಆ ಪರಮಚೈತನ್ಯ ಪ್ರಪತ್ತಿ ಇರುತ್ತವೆ. ದಿವ್ಯರಸಪುಷ್ಟಿ ಓಜಸ್ಸುಗಳೊಡನೆ ದಿವ್ಯಧ್ವನಿ ದಿವ್ಯಾನುಭೂತಿಗಳಿರುತ್ತವೆ.

ಶರಣನ ಪ್ರಾಸಾದಿಕ ಸಾಹಿತ್ಯದಲ್ಲಿ ಪರಂಜ್ಯೋತಿಯು ಪ್ರಕಾಶವಿರುತ್ತದೆ. ಪರಮಾನಂದದ ಪರಿಣಾಮವಿರುತ್ತದೆ. ಭಾಕ್ತಿಕ ಲೌಕಿಕ ಸುಂದರ ಸಮನ್ವಯವಿರುತ್ತದೆ. ಸತ್ಯದ ಸುಖಾನುಭವವುಂಟಾಗುತ್ತದೆ. ಶರಣನದು ಆದೊಂದು ಪ್ರಾಸಾದಿಕ ಪರಾವಾಣಿ ! ಅದರಲ್ಲಿ ಶಿವಭಾವವನ್ನು ಶಿವಾನುಭವವನ್ನು ಹುಟ್ಟಿಸುವ ನಾದಾನುಸಂಧಾನವಿರುತ್ತದೆ

ಶೈವೀನಾದವೇ ಪ್ರಸಾದಲಿಂಗ; ಚಿದಾಕಾಶವೇ ಶರಣಾಂಗ ಆ ನಾದದಲ್ಲಿ ದಿವ್ಯಬಿಂದು–ದಿವ್ಯಕಳೆಗಳಿವೆ. ಆ ಕಳೆ ಈ ಕಣ್ಣಿಗೆ ಕಾಣದು; ಈ ಮನಕ್ಕೆ ವೇದ್ಯವಾಗದು. ಅಂತೆಯೆ ಆ ಬಿಂದು ಈ ರಸಸಿಗೆ ಈ ಮನಕ್ಕೆ ವೇದ್ಯವಾಗದು. ಆ ನಾದ ಈ ಕಿವಿಗೆ ಈ ಮನಕ್ಕೆ ವಿಷಯವಾಗದು. ಆಗಿಯೂ ಆಗದಂತೆ ಇರುತ್ತದೆ. ನಿಷ್ಪತ್ತಿಗೊಂಡಿರುತ್ತದೆ. ಕರಣೇಂದ್ರಿಯಗಳೆಲ್ಲವೂ ಜ್ಯೋತಿಯೊಳಗಿನ ಸ್ಫಟಿಕ ಘಟದಂತಿರುತ್ತವೆ. ತತ್ಸ್ವರೂಪವೇ ಆಗಿರುತ್ತವೆ. ತಾದಾತ್ಮ್ಯಗೊಂಡಾಗ ತ್ರಿಪುಟಿ ಭಾವವಿರದು. ತಿಳಿಯದೆ ತಿಳಿದೆನೆಂಬುದು ಬರಿಯ ಮಾತು. ತಿಳಿದು ತಿಳಿಯದಂತಿರುವುದು–ತಾದಾತ್ಮ್ಯಭಾವ.

ಶರಣಾಂಗ ಅದೊಂದು ಸ್ಪಟಿಕ ಘಟ. ಪ್ರಸಾದಲಿಂಗ ಅದೊಂದು ಪ್ರಸನ್ನಾತ್ಮ ಜ್ಯೋತಿ; ಪ್ರಜ್ವಲಿಸುವ ಜ್ಯೋತಿ. ಅದು ಒಮ್ಮೆ ಶರಣನಿಗೆ ಪ್ರಸನ್ನವಾಗಿ ಪ್ರಕಾಶಿಸಿದರೆ ಶರಣನಲ್ಲಿ ಆ ಬಳಿಕ ಅಜ್ಞಾನಕ್ಕೆ ಮರವೆಗೆ ಎಡೆಯಿರುವುದಿಲ್ಲ. ಧ್ಯಾನಕ್ಕೂ ಅಂದರೆ ನೆನಹಿಗೂ ಇಂಬಿರುವುದಿಲ್ಲ. ಶರಣ ಧ್ಯಾನಾತೀತನಾಗಿರುತ್ತಾನೆ. ನಿಜಕ್ಕೂ ನೆನಹು-ಮರುಹುಗಳು ಶರಣನ ಬಳಿ ಸುಳಿಯಲಾರವು. ಆತನ ಮೆದಳು ಯಾವಾಗಲೂ ಪ್ರಸನ್ನವಾಗಿರುತ್ತದೆ; ಶಿವವಾಗಿರುತ್ತದೆ. ಅಚ್ಚಳಿಯದ ಅರಿವೇ ಶರಣನಾಗಿರುವಾಗ ಆತನಿಗೆ ಮರಳಿ ಮರಹು-ನೆನಹುಗಳೆಂದರೇನು ? ಮರಹು. ನೆನಹುಗಳನ್ನು ಮೀರುವುದೇ ಶರಣನ

ಬದುಕು. ಮೀರಿ ಇರುವಿಕೆಯೆ ಪ್ರಸಾದಲಿಂಗ; ಅಚ್ಚಳಿಯದೆ ಅರಿದಿರುವಿಕೆ ಮತ್ತು ಆನಂದಿಸುವಿಕೆ ಪ್ರಸಾದಲಿಂಗದ ಪ್ರಸನ್ನತೆಗೆ ಕುರುಹು. ಅದೇ ಅದರ ನಿಲವು-ನಿಲುಕಡೆ. ಸಚ್ಚಿದಾನಂದ ಶಿವಪ್ರಕಾಶದ ನೆಲೆಯಾಗಿರುತ್ತಾನೆ ಶರಣ.

ಶರಣಸತಿ ಸವಿಮಾತಗಾತಿ

ರತಿವೆತ್ತ ಸತಿಯಲ್ಲಿ ಸವಿಮಾತಿರುವುದು ಸಹಜ. ಸತೀ ಭಾವಕ್ಕೆ ಅದು ಸ್ವಭಾವ. ಅಕ್ಕರೆಯ ಮಾತು ಸಕ್ಕರೆಗಿಂತ ಸವಿ. ಚನ್ನಿಗಳ ಮಾತು ಹೇಗಿದ್ದರೂ ಚನ್ನ. ಮಮತೆಯ ಮಾತು ಮನಕ್ಕೆ ಮುದ್ದು. ಇನಿಯಳ ನುಡಿ ಕಿವಿಗಿಂಪು; ಮನಕೆ ಸೊಂಪು. ಪ್ರಿಯಳ ಮಾತು ಪ್ರಿಯವಾಗಿಯೆ ಇರುತ್ತದೆ. ಅಂತೆಯೇ ಅವಳು 'ಪ್ರಿಯಂವಾದಿನಿ' ಎಂದು ಹೆಸರಾಗಿದ್ದಾಳೆ. ನಲ್ಲೆಯ ಸಲ್ಲಾಪದಲ್ಲಿ ಆ ಮೋಡಿಯಿರುತ್ತದೆ; ಆ ಗಾಡಿಯಿರುತ್ತದೆ. ಅದರಿಂದಾಗಿ ಮೆಚ್ಚಿನ ಮಡದಿ ಏನೇ ಆಡಲಿ ಅದು ಪತಿಗೆ ಹಿತವಾಗಿರುತ್ತದೆ. ಅದನ್ನು ಒಗೆದು ನೋಡುವ ಕಣ್ಣಿರುವುದಿಲ್ಲ. ಕರುಳಿಗೆ ಕಣ್ಣಿಲ್ಲ ತಾನೆ ?

ಆದರೆ ಅದೇ ಶರಣಸತಿಯ ಮಾತು ಹಾಗಲ್ಲ, ಅವಾಸ್ತವವಾದ ಸವಿಮಾತಲ್ಲ. ಅನಗತ್ಯವೂ ಅಲ್ಲ, ಪರಿಣಾಮದಲ್ಲಿ ಅಹಿತವೂ ಅಲ್ಲ ಅನುಚಿತವಾದ ಮಾತು ಮೊದಲೇ ಅಲ್ಲ. ಶರಣ ಸತಿಯದು ಲಿಂಗಪತಿ ಮೆಚ್ಚುವ ಸವಿಮಾತು, 'ನುಡಿದರೆ ಲಿಂಗಮೆಚ್ಚಿ ಅಹುದೆನುವ' ಸವಿನುಡಿ. ಮಹಾದೇವಿಯಕ್ಕ, ಸತ್ಯಕ್ಕ, ಮುಕ್ತಾಯಕ್ಕ, ಲಕ್ಕಮ್ಮ, ಕಾಳಮ್ಮ, ಲಿಂಗಮ್ಮ ಶಾಂಭವಿ ಸೌಂದರೀದೇವಿ ಮುಂತಾದ ಶರಣೆಯರ ಮಾತು ಅಧರಕ್ಕೂ ಸಿಹಿ, ಉದರಕ್ಕೂ ಸಿಹಿ.

ಶರಣ ಸತಿಯ ಮಾತಿನಲ್ಲಿ ಕಾಮಚಪಲವಿರುವುದಿಲ್ಲ; ಪ್ರೇಮ ನಿರ್ಮಲವಾಗಿರುತ್ತದೆ. ನೇಹ ನಿರ್ಹೇತುಕವಾಗಿರುತ್ತದೆ. ಕರಣೇಂದ್ರಿಯಂಗಳನ್ನು ಮೆಚ್ಚಿಸುವ ಮನೀಷೆಯಿರುವುದಿಲ್ಲ: ಅಂತರಾತ್ಮ ಮೆಚ್ಚುವ ಮನೀಷೆಯಿರುತ್ತದೆ. ಸ್ವಾನುಭವದ ಸುಧೆಯಿರುತ್ತದೆ; ದಿವ್ಯರಸನಿಧಿಯಿರುತ್ತದೆ. ಶರಣಸತಿಯ ನುಡಿಯ ಸವಿಯಲ್ಲಿ ನಡೆಯ ತೇವವಿರುತ್ತದೆ; ಚಿಚ್ಚೈತನ್ಯದ ಜ್ಯೋತಿಯಿರುತ್ತದೆ. ಶರಣನ ಸವಿನುಡಿಯೆಂಬ ಹಾಲ್ಗಡಲಲ್ಲಿ ಲಿಂಗಗಳೆಂಬ ಮುತ್ತುರತ್ನಗಳಿರುತ್ತವೆ.

"ಕೆರೆ ಹಳ್ಳ ಬಾವಿಗಳು ಮೈದೆಗೆದರೆ,
ಗೊಳ್ಳು ಗೋರಚೆ ಚಿಪ್ಪುಗಳ ಕಾಣಬಹುದು;
ಕೂಡಲ ಸಂಗನ ಶರಣರು ಮನದೆರೆದು ಮಾತನಾಡಿದರೆ
ಲಿಂಗಗಳ ಕಾಣಬಹುದು."

ಶರಣಸತಿಯ ಮಾತಿನ ಮಹತಿಯಿದು; ಸಂಪತ್ತಿಯಿದು. ಅಷ್ಟೇ ಅಲ್ಲ, ಚೇತನ ಭರಿತ ಮಾತುಗಾರಿಕೆಯ ಸುಳುಹಿದು; ನೀಳಾದ ನಿಲವಿದು. ನಿಡಿದಾದ ನೋಟವಿದು. ಶರಣನ ಮಾತಿನಲ್ಲಿ ಅರ್ಥದ ಗಭೀರತೆಯಿರುತ್ತದೆ. ಬೆಲೆಯಿರುತ್ತದೆ. ಲಿಂಗಾನುಭವದ ಲಿಂಗಸಾಕ್ಷಾತ್ಕಾರದ ಕಳೆಯಿರುತ್ತದೆ.

ಸತ್ಯವಂತ ಶರಣ. ವಾಕ್‌ಶುದ್ಧಿ ಸಿದ್ಧಿಗಳುಳ್ಳವ ಶರಣ. ಅದರಿಂದ ಆತನ ಮಾತುಗಳು-ಆ ಮಾತು, ಈ ಮಾತು, ಹೋ ಮಾತುಗಳಂಥವಲ್ಲ. ಅವು ಜ್ಯೋತಿರ್ಲಿಂಗವಾದ ಮಾತುಗಳು. ಮಂತ್ರಮುಖವಾದ ಮಾತುಗಳು. ಮಂಗಳಕರವಾದ ಮಾತುಗಳು. ಆದ್ದರಿಂದ ಅವನೊಡನಾಡುವುದು ಲೇಸು; ಅದೇ ಒಂದು ಸೊಗಸು ಆತನ ಮಾತಿನಿಂದ ಬಾಳಿಗೆ ಬೇಕಾದ ಬೆಳಕು ಬರುತ್ತದೆ; ಹೊಸ ಚೇತನ ಬರುತ್ತದೆ. ಹೊಸ ಸ್ಫೂರ್ತಿಯ ಸೆಲೆಯೊಡೆಯುತ್ತದೆ. ಶರಣನ ಹೃದಯಾಕಾಶವು ಆ ಮಹಾಪ್ರಕಾಶದಿಂದ ಪಜ್ಜಳಿಸಿ ಪರಶಿವನೆಂಬ ಮಹಾಪ್ರಕಾಶದಿಂದ ಪಜ್ಜಳಿಸಿ ಪರಶಿವನೆಂಬ ಮಹಾನಾದ ಸ್ವರೂಪವಾಗಿರುತ್ತದೆ: ಚಿದ್ರಸಗಂಗೆ ಹರಿದು ಅಮೃತದಂತೆ ಮಧುರವಾಗಿರುತ್ತದೆ. ಸತ್ಯಸುಂದರವಾಗಿರು

ತ್ತದೆ. ಅಂಥವರೊಡನೆ ಒಡನಾಡಿದರೆ ಒಳಿತಾಗುತ್ತದೆ. ಒಳಿತಿನ ಒಲವು ಒಡಮೂಡುತ್ತದೆ. ಒಳ್ಪಿನೊಡನೆ ಒರ್ಪು ಒಬ್ಬುಳಿಗೊಳುತ್ತದೆ. ಅದೇ ಸತ್ಯವಿಲ್ಲದವರೊಡನೆ ಮಾತಾಡಿ ಸುಖವಿಲ್ಲ.

"ಸತ್ಯವಿಲ್ಲದವರೊಡನೆ ಸಹಸ್ರಕ್ಕೊಮ್ಮೆ ನುಡಿಯಲಾಗದು.
ಲಕ್ಷಕ್ಕೊಮ್ಮೆ ನುಡಿಯಲಾಗದು, ಕೋಟಿಗೊಮ್ಮೆ ನುಡಿಯಲಾಗದು.
ನುಡಿಯಲವರೊಡನೆ ಮಾರಿಹೋರಲಿ ಗುಹೇಶ್ವರಾ,
ನಿಮ್ಮ ಶರಣರಲ್ಲದವರೊಡನೆ ಬಾಯಿದೆರೆಯಲಾಗದು"

ಮಾತಿಗೆ ಬೆಲೆಯಿದೆ. ಮಾತನ್ನು ನೋಡಿ ಬಳಸಬೇಕು. ಅದಶ್ಯವಿರುವಲ್ಲ ಮಾತಾಡಬೇಕು. ಆದರಲ್ಲಿ ಹುಸಿಯುವವರೊಡನೆ ಮಾತನ್ನೇ ಆಡಬಾರದು. ಆಡಿದರೆ ಅವರ ಮಾರಿ ಬಂದು ಸೇರುತ್ತದೆ. ಮಾತಿನ ಸೋಂಕು ಮುಟ್ಟುವುದಕ್ಕಿಂತ ತೀವ್ರವಾದುದು. ಹುಸಿಯುವವರೊಡನೆ ಮಾತಾಡಿದರೆ ಹುಸಿಯಾಡುವ ಸ್ವಭಾವವುಂಟಾಗುತ್ತದೆ. ಹುಸಿದರೆ ದೋಷ.

ಮಾತಾಡುವುದೂ ಒಂದು ನೋಂಪಿ, ಒಂದು ಬಗೆಯ ತಪಸ್ಸು. ತ್ರಿಕರಣಗಳಲ್ಲಿ ಒಂದು ಕರಣ ವಚನ. ತನು ಮನಗಳಂತೆ ಮಾತು ಶುದ್ಧವಾಗಿರಬೇಕು. ಆಗ ತ್ರಿಕರಣಶುದ್ಧತೆಯುಂಟಾಗುತ್ತದೆ. ಕ್ರೂರಕುಹಕ ಕುಭಾಷೆಗಳನ್ನು ಬಳಸಬಾರದು. ಮಿಥ್ಯವನಾಡಬಾರದು. 'ಸತ್ಯಪ್ರತಿಷ್ಠಾಯಾಂ ಸರ್ವಂತ್ರೋಪಸ್ಥಾನು ಎಂದು ಪತಂಜಲಿಯೂ ಹೇಳಿದಾನೆ. ಸತ್ಯವಂತರೇ ಶರಣರು. ದಿಟದ ಸವಿಯನ್ನು ಶರಣ ಕಂಡುಕೊಂಡಿರುತ್ತಾನೆ. ಮಾತಿನ ಮೂಲವನ್ನು ಮನವರಿಕೆ ಮಾಡಿಕೊಂಡಿರುತ್ತಾನೆ. ಪರಿಶುದ್ಧವಾ ಮಾತು ಪರಾಶಕ್ತಿಯ ಸ್ವರೂಪ ಎಂದು ತಿಳಿದಿರುತಾನೆ. ಪರಿಶುದ್ಧವಚನದಿಂದ ಪಸನ್ನಭಾವವುಂಟಾಗುತ್ತದೆಯೆಂಬುದನ್ನು ಶರಣನು ಅನುಭವಿಸಿರುತ್ತಾನೆ. ಆದರಿಂದಾಗಿ ಆ ಪ್ರಸನ್ನತೆ ಆತನ ಮಾತಿನಲ್ಲಿ ತುಂಬಿರುತ್ತದೆ ಆತನ ಮಾತನ್ನು ಕೇಳಿದವರಿಗೂ ಆತನೊಡನೆ ಮಾತನಾಡಿದವರಿಗೂ ಆದೇ ಪ್ರಸನ್ನತೆ ಪ್ರಾಪ್ತವಾಗುತ್ತದೆ.

“ ಕಂಗಳ ಕರುಳ ಕೊಯ್ದವರ
ಮನದ ತಿರುಳ ಹುರಿದವರ
ಮಾತಿನ ಮೊದಲ ಬಲ್ಲವರ
ಎನಗೊಮ್ಮೆ ತೋರಾ ಗುಹೇಶ್ವರಾ!”

“ ಕಂಗಳ ನೋಟ, ಹೃದಯದ ಜ್ಞಾನ,
ಮನದೊಳಗೆ ಮಾತಾಡುತಿದ್ದನಯ್ಯಾ !
ಜೇನ ಮಳೆಗಳ ಕರೆದವು; ಅಮೃತದ ಕಳೆಗಳು ಸುರಿದವು.
ಕೂಡಲ ಚನ್ನಸಂಗನೆಂಬ ರಸಸಾಗರದೊಳಗೆ
ಓಲಾಡುತಿದ್ದನಯ್ಯಾ!”

ಶರಣಸತಿಯು ಸವಿಮಾತುಗಾರಿಕೆ ಇಲ್ಲಿ ಇನಿದಾಗಿ ಇಮ್ಮಾಗಿ ನಿರೂಪಿತವಾಗಿದೆ. ಶರಣವಾಣಿ ಅದೊಂದು ರಸಸಾಗರ. ಸವಿದರೆ ಜೇನಮಳೆ, ಅಮೃತದ ಕಳೆ, ಆತನ ಅನುಭವವೇ ಅಮೃತವಾಗಿ ಮಾತಿನಲ್ಲಿ ಹರಿದು ಬರುತ್ತದೆ. ಅಷ್ಟೇ ಅಲ್ಲ ಆತನ ಮಾತೇ ಆ ಮಹಾದೇವನ ಸ್ವರೂಪವಾಗಿರುತ್ತದೆ.

ಸರ್ವಸಾಮಾನ್ಯರ ದೃಷ್ಟಿ ಎಲ್ಲಿಗೆ ನಿಲ್ಲುತ್ತದೆಯೋ ಅಲ್ಲಿಂದಾಚೆ ಶರಣದೃಷ್ಟಿ ಮುಂದುವರಿಯುತ್ತದೆ. ಮುಂದುವರಿದು ರೂಹಿಲ್ಲದ ಚಲುವನ್ನು ಕಾಣುತ್ತದೆ. ಕಂಡುದ್ದನ್ನು ಕಾಣಿಸಲು ತವಕಿಸುತ್ತದೆ. ಆ ತವಕ ರೂಪಿಸಲು ಅನುವಾಗುತ್ತದೆ. ಅದಕ್ಕೆ ಆತನ ಹಾರ್ದಿಕ ಪೂರ್ಣಪ್ರಜ್ಞೆ ನೆರವನ್ನು ಕೊಡುತ್ತದೆ. ಆತನ ಆ ಹೃದಯಾನುಭವವು ಮನದಲ್ಲಿಯೇ ಮೊಳೆಯುತ್ತದೆ. ಆ ಪರಾವಾಣಿ ಪಶ್ಯಂತಿಯಾಗಿ ಮನದೊಳಗೆ ಮಾತಾಡುತ್ತದೆ. ಆ ಮಾತಿನ ಮಾಧುರ್ಯ ಅವರ್ಣನೀಯ. ಆ ಆಂತರಂಗಿಕ ಸಾಹಿತ್ಯ ಸೌಂದರ್ಯ ಅನುಪಮೇಯ. ಆ ಆನಂದ ಅಸೀಮ. ಆ ರಸಸಾಗರ ಅಪಾರ ಅದು ಸುಳಿಯದ ಕಳೆ; ಅಲುಗದ ಬಿಂದು; ಉಲಿಯದ ನಾದ.

ಶರಣನು ತಾನು ಕಂಡ ಸಾವಿಲ್ಲದ ಕೇಡಿಲ್ಲದ ಆ ಚಲುವನ್ನು-ಆ ಬಟ್ಟಬಯಲಿನ ಬೆಳಗನ್ನು ತನ್ನ ಸೂಳ್ನುಡಿಯಲ್ಲಿ ತಂದಿರಿಸುತ್ತಾನೆ; ತಂದು ತೋರಿಸುತ್ತಾನೆ.

" ಹೊಳೆವ ಕೆಂಜೆಡೆಗಳುಂ, ಮಣಿಮುಕುಟ;
ಒಪ್ಪುವ ಸುಲಿಪಲ್ಲ, ನಗೆಮೊಗದ ಕಂಗಳ ಕಾಂತಿಯುಂ
ಈರೇಳುಂ ಭುವನವಂ ಬೆಳಗುವ ದಿವ್ಯಸ್ವರೂಪನ ಕಂಡೆ ನಾನು;
ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು.
ಗಂಡ ಗಂಡರೆಲ್ಲರ ಹೆಂಡ ಹೆಂಡಿರಾಗಿ ಆಳುವ
ಗುರುವನ ಕಂಡೆ ನಾನು,
ಜಗದಾದಿ ಶಕ್ತಿಯೊಳು ಬೆರಸಿಯೊಡನಾಡುವ
ಪರಮಗುರು ಚನ್ನಮಲ್ಲಿಕಾರ್ಜುನನ ನಿಲವ ಕಂಡು
ಬದುಕಿದೆನು."

ಶರಣ ತಾನು ಒಳಗೆ ಕಂಡುದನ್ನು ಹೊರಗೆ ತೋರುತ್ತಾನೆ. ಒಳಗೆ ಆತನೊಡನೆ ಒಡನಾಡಿದುದನ್ನೆ ಹೊರಗೆ ವಚನ ವೈಖರಿಯಲ್ಲಿ ಪಡಿನುಡಿಯುತ್ತಾನೆ. ಸಾಂಕೇತಿಕವಾಗಿ ಸುಂದರವಾಗಿ ಬೆಡಗಿನಲ್ಲಿ ನುಡಿಯುತ್ತಾನೆ. ಭಾವಪೂರ್ಣವಾಗಿ ಧ್ವನಿಪೂರ್ಣವಾಗಿ ನುಡಿಯುತ್ತಾನೆ. 'ಕಾವ್ಯಸ್ಯಾತ್ಮಾಧ್ವನಿಃ' ಎಂಬ ಸಂಸ್ಕೃತ ಲಾಕ್ಷಣಿಕರ ಮಾತನ್ನು ಸಾರ್ಥಕವಾಗಿಸುತ್ತಾನೆ. ವಾಚ್ಯಾರ್ಥ ಲಕ್ಷ್ಯಾರ್ಥಗಳಿಗಿಂತ ಮುಂದುವರಿದು ಸ್ವಾನುಭವ ಪೂರ್ಣವಾದ ಶಿವಸುಂದರವಾದ ಸಂಕೇತಾರ್ಥವನ್ನು ಸಂಯೋಜಿಸುತ್ತಾನೆ. ಶರಣನ ವಚನದ ಬೆಡಗು ಶರಣನದೆ ! ಶರಣಸಾಹಿತ್ಯ ಅದೊಂದು ಶಿವ ಸಾಹಿತ್ಯ, ಸತ್ಯಸಾಹಿತ್ಯ ಅದರಲ್ಲಿ ಶಬ್ದಸಂಪತ್ತು ತಾನಾಗಿಯೇ ಆವನ ಅನುಭವದ ಬೆಂಬಳಿವಿಡಿದು ಬರುತ್ತದೆ; ಅನುಭವದ ಅನುವರಿದು ಬರುತ್ತದೆ. ಲಯ ಲಾಲಿತ್ಯಗಳನ್ನು ನೇಯುತ್ತದೆ. ಸ್ವಚ್ಛಂದದಲ್ಲಿ ಛಂದೋಬಂಧವಾಗಿ ಸುಂದರ ಕಾವ್ಯವಾಗುತ್ತದೆ. ಭಾವಪೂರ್ಣವಾಗಿ ಬಂದು ಭಾವಗೀತವಾಗಿ ಭಾವಕಾವ್ಯವಾಗಿ ಭಾವ ಪ್ರಬಂಧವಾಗಿ ಪರಿಣಮಿಸುತ್ತದೆ. ಕಣ್ಣಿಗೆ ಕಾಣದ್ದನ್ನು ಕಣ್ಣಿಗೆ ಕಾಣಿಸುತ್ತದೆ. ಮಾತಿಗೆ ನಿಲುಕದ್ದನ್ನು ಮಾತಿಗೆ ತರುತ್ತದೆ. ಕೈಗೆ ಅಂದದಿರುವುದನ್ನು ಕೈಯಲ್ಲಿ ಕರಿಗೊಳಿಸುತ್ತದೆ.

ಅಂತಹ ಮಹಂತ ಮಣಿಹವನ್ನು ಅಕ್ಕನ ಈ ವಚನವಾಣಿ ಮಾಡಿದೆ. ಅವಳು ಅಂತರಂಗದಲ್ಲಿ ಕಂಡ ಮಲ್ಲಿಕಾರ್ಜುನನ ಮನೋಹರ ಮಂಗಳ ಸ್ವರೂಪವನ್ನು ಮಾತಿನಲ್ಲಿ ತಂದು ಕಣ್ಣಿಗೆ ಕಾಣಿಸಿದ್ದಾಳೆ. ಬಗೆಗೆ ಬೆರಸಿದ್ದಾಳೆ. 'ಹೊಳೆವ ಕೆಂಜೆಡೆ' ಅದೆಂತಹ ಸವಿಮಾತು, ಅದೇನು ಚಲುವಾತು !

ಪರಮಗುರುವೇ ಅವಳ ಚಿತ್ತದ ಚನ್ನಮಲ್ಲಿಕಾರ್ಜುನ. ಚಿನ್ಮಯದ ಚನ್ನಮಲ್ಲಿಕಾರ್ಜುನ. ಅವಳ ಆ ಗುರುದೇವನ ಚಿತ್ಕಿರಣಗಳೆ ಚೆಂಬೊನ್ನದ ಕೆಂಜೆಡೆಗಳು. ಆತನ ಆ ತಲೆಯಲ್ಲಿ ಚಿತ್ಕಿರಣಗಳು ಕೆಂಜೆಡೆಗಳಂತೆ ಚಲ್ಲವರಿದಿದ್ದವು. ಅವುಗಳ ಮೇಲೆ ಮಣಿ ಕಿರೀಟ ಬೇರೆ. 'ಮುಕುಟ' ಮಾತು ಸಾಂಕೇತಿಕವಾಗಿದೆ. ಅಂತೆಯೇ ಮಣಿಯೂ ಸಹ ! ಅದು ಬಾಹ್ಯದ ಭೌತ ರತ್ನ ಕಿರೀಟವಲ್ಲ. ಭಾವಾನುಭಾವವೆಂಬ ರತ್ನಕಿರೀಟ, ಮಸ್ತಕವೇ ಮಣಿ ಮುಕುಟ. ಆ ಪರಮ ಗುರುದೇವನ ಮುಖದಿಂದ ಬರುವ ವಚನಗಳೆಲ್ಲ ಒಪ್ಪುವ ತತ್ತ್ವಗಳು, ತಿಳಿಯಾದ ತತ್ತ್ವಗಳು ಆತ ಆನಂದಮಯ, ಚಿತ್ಕಳಾಮಯ ಸರ್ವಸಮರ್ಥ, ಸರ್ವಗರಿಷ್ಠ. ಎಲ್ಲರನ್ನು ಆಳುವ ಗರುವ. ಎಲ್ಲರಿಗಿಂತ ಚಲುವ. ದಶೇಂದ್ರಿಯ–ಅಂತಃಕರಣ ಚತುಷ್ಟಯಗಳನ್ನು ನಿರ್ಮಲಗೊಳಿಸುವವ. ಆತನನ್ನು ಕಣ್ತುಂಬ ಕಂಡಬಳಿಕ ಬೇರೆ ಕಾಣುವ ನೋಡುವ ಆಸೆ ಹಿಂಗಿಹೋಯಿತು. ಆತನಿಗೆ ಮೀರಿದ ಪುರುಷರಿಲ್ಲ; ಆತನೇ ಪರಮ ಪುರುಷ ಪರಾಶಕ್ತಿ ವಿಶಿಷ್ಟ. ಆ ಪರಾವಾಣಿಯೊಡನೆ ಒಡನಾಡುವಾತ. ಪರಮ ಗುರು. ಆತನ ಆ ನಿಲವು ಬದುಕಿಗೊಂದು ಸಂಜೀವಿನಿ; ಬಾಳಿಗೊಂದು ಜೀವಾಳ.

ಶರಣ ಕಾಣುವುದು ಹೊಸದೊಂದು ಬೆಳಕು; ಹೊಸದೊಂದು ಹೊಳಕು. ಶರಣ ಆಡುವ ಆ ಮಾತಿನಲ್ಲಿ ಇರುತ್ತದೆ, ಹೊಸದೊಂದು ಬೆಡಗು. ಆತನು ಕಾಣುವುದು ಈ ಕಣ್ಣನಾಚೆಯ ಬೆಳಕು ಆತನಾಡುವುದು ಮಾತು ಮನಗಳಿಗೆ ಮೀರಿದ ಮತ್ತೊಂದು ಭಾಷೆ; ಮತ್ತೊಂದು ಸ್ವಾನುಭಾವ ಸಾಹಿತ್ಯ. ಅದರಲ್ಲಿರುವುದು ಶಾಶ್ವತಸತ್ಯ. ಆತನದು ಅತೀಂದ್ರಿಯ ದೃಷ್ಟಿ, ಅತೀಂದ್ರಿಯ ಸಾಹಿತ್ಯಸೃಷ್ಟಿ. ಬಯಲಿನಾಚೆ ಯಾವ ಬೆಳಗಿದೆಯೋ, ಯಾವ ಬೆಡಗಿದೆಯೋ

ಯಾವ ಸುಳುಹಿದೆಯೋ–ಅದನ್ನು ಕಂಡು ಅದನ್ನು ಉಂಡು ಅದರೊಡನೆ ಅದರ ಭಾಷೆಯಲ್ಲಿ ಒಡನಾಡಿ ಅದರೊಡನೆ ಒಡಗೂಡಿ ಆ ಅನುಭೂತಿಯುನ್ನು ಆ ಆತ್ಮರಹಸ್ಯವನ್ನು ಮಾನವೀಯ ಮಾತಿನಲ್ಲಿ ಹೊರಹೊಮ್ಮಿಸುತ್ತಾನೆ. ಇನಿದಾದ ದನಿಯಲ್ಲಿ ತಿರುಳ್ಗನ್ನಡ ನುಡಿಯಲ್ಲಿ ತೋರುತ್ತಾನೆ.

" ರಸದ ಬಾವಿಯ ತಂಡುಕಬಾರದು ;
ಕತ್ತರಿ ವಾಣಿಯ ದಾಂಟಿದವಂಗಲ್ಲದೆ !
ಪರುಷವಿದೆ, ಕಬ್ಬುನವಿದೆ–ಸಾಧಿಸಬಲ್ಲೆನೆಂಬವಂಗೆ !
ಸಿರಿ ಶ್ರೈಲದುದಕದ ಧರಿಸಲು ಬಾರದು—
ಗುಹೇಶ್ವರಾ, ನಿಮ್ಮ ಶರಣಂಗಲ್ಲದೆ ! "

ಶರಣಸತಿಯಲ್ಲಿ ದಿವ್ಯರಸದ ಪ್ರೌಢಿಮೆ ದಿವ್ಯಾನುಭವದ ಪ್ರತಿಭೆ ಒಬ್ಬುಳಿಗೊಂಡಿರುತ್ತವೆ. ಆತನು ಆಡಿದ್ದು ಅಮೃತಮಯವಾಗುತ್ತದೆ. ಅನುಭವ ಭರಿತವಾಗಿರುತ್ತದೆ. ಆತನ ಆ ಅನುಭವಾಮೃತ ಶ್ರೀಶೈಲದುದಕ. ಅದು ಸಿರಿಗೆ ಸಿರಿ; ಅದು ಹಿರಿದಕ್ಕೆ ಹಿರಿದು. ಅದನ್ನು ಅಳವಡಿಸಿಕೊಳ್ಳುವ ಅಳವು ಶರಣನದು.

ಸತ್ಯ ಶರಣ ಆಡಿದ ಮಾತು ಜ್ಯೋತಿರ್ಲಿಂಗ. ಅದರಿಂದಾಗಿ ಶರಣ ನುಡಿಯುದು ಸೂತಕಿಯಲ್ಲ; ವಾಚಾಳಿಯಲ್ಲ. ಮಾತಿನ'ರುಚಿಗೆ ಮಾತಾಡುವವನಲ್ಲ ಸ್ವಾನುಭವದ ಪ್ರಸಾದಕ್ಕಾಗಿ ಮಾತಾಡುತ್ತಾನೆ. ಶಿವನಿಗರ್ಪಿಸಿ ಸೊಲ್ಲುತ್ತಾನೆ. ಅದರಿಂದಾಗಿ ಆ ಸೊಲ್ಲಿನಲ್ಲಿ ಸವಿಯಿರುತ್ತದೆ; ಶಿವಾನುಭವವಿರುತ್ತದೆ. ಅವನು ಮಾತಾಡಿ ಮೌನಿ. ಅವನೇ ಧ್ಯಾನಿ; ಸುಧಾನಿ. ಮಾತಿನಲ್ಲಿ ಮಹಾನಂದವನ್ನು ತೋರಬಲ್ಲ ಸುವಿಧಾನಿ.

ಇಚ್ಛೆ ಸ್ವಚ್ಛವಾಗಿ ಕ್ರಿಯೆಜ್ಞಾನಗಳು ಕರಿಗೊಂಡು ಮಾತಾಡುವ ಶರಣನ ಮಾತಿನಲ್ಲಿ ಸತ್‌ಚಿತ್ ಸುಖಗಳು ಸಮರಸವಾಗಿರುತ್ತವೆ. ಅಂತೆಯೇ ಅದು ಜ್ಯೋತಿರ್ಲಿಂಗ; ಶಬ್ದಬ್ರಹ್ಮ. ಅದನ್ನು ಈ ಲೋಕದವರಿಗೆ ಸಾಕ್ಷಾತ್ಕರಿಸಿ ಕೊಡುತ್ತಾನೆ ಶರಣ; ಶಿವಾನುಭಾವದ ಸಂತೋಷ ಸಾಗರದಲ್ಲಿ ಈಜ ಹಚ್ಚುತ್ತಾನೆ ಶರಣ, ಚಿಜ್ಜ್ಯೋತಿಯ ಪ್ರಕಾಶದಲ್ಲಿ ಮುನ್ನಡಿಸುತ್ತಾನೆ ಶರಣ, ಸತ್ಕ್ರಿಯೆಯಲ್ಲಿ [illegible] ಸುತ್ತಾನೆ ಸ್ವಾತ್ಮ[illegible]ರನ್ನು ಶರಣ.

ಬೆಡಗಿನ ಬಿನ್ನಾಣ

ಬೆಡಗಿನ ವಚನಗಳನ್ನು ಬರೆಯುವದರಲ್ಲಿ ಶರಣನದು ಸಿದ್ಧ ಹಸ್ತ. ಶರಣ ಸಾಹಿತ್ಯದಲ್ಲಿ ಬೆಡಗು ಪದದರ್ಥವೆ ಬೇರೆ. ಗೂಢಾರ್ಥ ಮುಖ್ಯವಾದರೂ ಅದೊಂದೆ ಇರುವುದು ಬೆಡಗಿನ ವಚನವಲ್ಲ, ಬೆಡಗು ಪದದ ಪೂರ್ಣತೆಯಲ್ಲ. ಜತೆಗಿರಬೇಕು ಸೊಬಗು, ಜತೆಗಿರಬೇಕು ನುಡಿಯ ಅಂದ ಚಂದ, ಭಾವ ಸೌಂದರ್ಯ ಶೈಲಿಯ ಒಯ್ಯಾರ, ರಸವಿಲಾಸಗಳೂ ಇದ್ದಾಗಬೇಕು. ಓಜಸ್ಸು ಒಡಗೂಡಿರಬೇಕು. ಇಷ್ಟಿದ್ದರೆ ಅದು ಬೆಡಗಿನ ವಚನ. ಇದಿಷ್ಟೂ ಒಂದು ತೂಕವಾದರೆ ಬಿನ್ನಾಣವೇ ಒಂದು ತಾತ್ತ್ವಿಕವಾದ ತೂಕ, ಬಿನ್ನಾಣವೆಂದರೆ ವಿಜ್ಞಾನ, ಅನುಭಾವ ಕಲೆ. ಇದುವೇ ಬೆಡಗಿನ ವಚನದ ಆತ್ಮ. ಇಷ್ಟೆಲ್ಲ ಇದ್ದಾಗ ಅದು ಬೆಡಗಿನ ವಚನವೆನಿಸುತ್ತದೆ.

> "ಗೋಹೇಶ್ವರನೆಂಬ ಬೆಡಗಿನ ಬಿನ್ನಾಣವನರಿದೆನಾಗಿ
> ಎಂತಿರ್ದಂತೆ ಸಂತ !"

ಎಂದಿದೆ ಪ್ರಭುವಾಣಿ ! ಬೆಡಗಿನ ಬಿನ್ನಾಣ ಬೇರಲ್ಲ, ಗುಹೇಶ್ವರ ಬೇರಲ್ಲ. ಪೂರ್ಣಪ್ರಜ್ಞೆ ಪರಮಾನುಭಾವಗಳೇ 'ಬೆಡಗಿನ ಬಿನ್ನಾಣ' ಎಂದು ಪ್ರಭುದೇವರ ಅಭಿಪ್ರಾಯ. ಆತ್ಮವಿಜ್ಞಾನಕ್ಕಿಂತ ಹೆಚ್ಚಿನ ವಿಜ್ಞಾನವಿಲ್ಲ. ಆತ್ಮಾನುಭವಕ್ಕಿಂತ ಹೆಚ್ಚಿನಬೆಡಗಿಲ್ಲ. ಬೆಡಗಿನ ಬಿನ್ನಾಣಕ್ಕೆ ಪ್ರಭುವಿನ ಕೆಳಗಿನ ವಚನ ಉತ್ತಮ ಉದಾಹರಣೆಯಾಗಿದೆ :

> "ಉದಕದ ಕೊಡನ ಹೊತ್ತಾಡುವ ಗೊರತಿಯ
> ಕೈಯಲ್ಲಿ ಕಂಕಣ, ಕಾಲಲ್ಲಿ ಉಲಿವ ಗೆಜ್ಜೆ,
> ಊರಿಯ ಗೊರವನ ನೆರೆವ ಭರವಸದಿ ಬರಲು
> ಬಹಳ ಮುಳ್ಳಡ್ಡಲಾಧವಲ್ಲಾ !
> ಕಂಕಣದುಲುಹು ನಂದಿ, ಕಣ್ಣು ದೆರೆದಾ ಮುಳ್ಳಲಿಯಲು

ಕಾಡುಂಗಿಚ್ಚಿದ್ದು ಕರಡವ ಸುಟ್ಟಂತೆ,
ಪ್ರಾಣಗುಣ ಪ್ರಧ್ವಂಸಕಂಗೆ
ಪ್ರಾಗ್‌ಪ್ರಧ್ವಂಸಾನ್ಯೋನ್ಯಾಭಾವತ್ರಯವುಂಟೆ ?
ಶರಣಲಿಂಗಕ್ಕೆ ಸಂದಿಲ್ಲ ಗುಹೇಶ್ವರಾ."

ಈ ವಚನದಲ್ಲಿ ಬೆಡಗಿದೆ, ಬಿನ್ನಾಣವಿದೆ. ಶರಣ ಸತಿಯು ಭಾವಭರಿತ ಭಕ್ತಿ ಭರಕ್ಕೆ ಶೃಂಗಾರರಸದ ಹೋಲಿಕೆಯಿದೆ. ಉಪಮೆ ರೂಪಕಗಳೆರಡೂ ಹಾಸುಹೊಕ್ಕಾಗಿವೆ, ಅಭಾವತ್ರಯ ನಿರಸನದರ್ಶನವಿದೆ. ಅಂಗ-ಲಿಂಗಗಳ ವಿಜ್ಞಾನವಿದೆ. ಭಾಷೆಯು ಬೆಡಗಿದೆ, ಭಾವರಸಗಳ ಬೆಡಗಿದೆ. ದಿವ್ಯರಸ ನಿರೂಪಣೆಯಿದೆ. ದಿವ್ಯಧ್ವನಿಯಿದೆ.

ಈ ವಚನದ ಪ್ರತಿಪದದಲ್ಲಿ ಗೂಢಾರ್ಥದ ಬೆಡಗಿದೆ, ಪರತತ್ತ್ವಬಿನ್ನಾಣವಿದೆ. ಈ ವಚನದ ಅರ್ಥ ಹೀಗಿದೆ :

ಇದರ ವಾಚ್ಯಾರ್ಥವಿದು : ಒಬ್ಬ ಗೊರತಿ, ನೀರ ಕೊಡ ಹೊತ್ತು ಕುಣಿಯುತ್ತಿದ್ದಾಳೆ. ಅವಳ ಕೈಯಲ್ಲಿ ಕಂಕಣ, ಕಾಲಲ್ಲಿ ಉಲಿವ ಗೆಜ್ಜೆ, ಅವಳಿಗೆ ಅಕ್ಕರಿಗನಾದ ಗೊರವನನ್ನು ಕೊಡುವ ಭರ. ಒಲವು ಒಯ್ಯಾರದಿಂದ ಲಾಸ್ಯ ಮಾಡುತ್ತ ಜವ್ವನಿಗ ಗೊರವನ ಬಳಿ ಬರುವಳು. ಆದರೆ ಬರುವ ಬಟ್ಟೆಯಲ್ಲಿ ಮುಳ್ಳು ಹೆಚ್ಚಾಗಿ ಬಿದ್ದಿವೆ. ಹೆಜ್ಜೆ ಹೆಜ್ಜೆಗೆ ಅಂಗಾಲಲ್ಲಿ ಮುಳ್ಳು ಮುರಿದು ಅಡ್ಡಿಪಡಿಸುತ್ತಿವೆ. ಆಸೆ ಈಡೇರುತ್ತಿಲ್ಲ, ಆತುರ ಕಾತರಕ್ಕಿಟ್ಟಿದೆ. ಮುಂದುವರಿದು ಮನದಭಿಲಾಷೆಯನ್ನು ತೀರಿಸಿಕೊಳ್ಳಲು ಮುಳ್ಳುಗಳು ಮುಳುವಾಗಿವೆ. ಅಷ್ಟರಲ್ಲಿ ಅದೃಷ್ಟ ತೆರೆದಂತಾಗಿ ಒಮ್ಮಿಂದೊಮ್ಮೆ ಕಾಳ್ಕಿಚ್ಚು ಕಾಣಿಸುವುದು. ಬೀದಿಯಲ್ಲಿ ಬಿದ್ದ ಮುಳ್ಳುಗಳನ್ನೆಲ್ಲ ಸುಟ್ಟು ಹಾಕುವುದು. ಆಗ ಅವಳ ಹೊಲಬು ಸುಲಭವಾಗುವುದು, ಅಂದರೆ ನಿಷ್ಕಂಟಕವಾಗುವುದು. ಗೊರತಿ ಹೋಗಿ ಗೊರವನ ನೆರೆದು ಏಕರಸವಾಗುವಳು.

ಬರಿ ಗೊರವಿಯು ಸಿಂಗಾರವನ್ನು ಬಣ್ಣಿಸುವುದೇ ಈ ಬೆಡಗಿನ ವಚನದ ಗುರಿಯಲ್ಲ. ಇದು ಕೇವಲ ದೃಷ್ಟಾಂತ ಮಾತ್ರ. ದಾರ್ಷ್ಟಾಂತವನ್ನು ಎತ್ತಿ

ಹಿಡಿದಿದೆ 'ಶರಣಲಿಂಗ' ಎಂಬ ಕೂಡುನುಡಿ. ವ್ಯಂಗ್ಯಾರ್ಥಕ್ಕೆ ಅಂದರೆ ಗೂಢಾರ್ಥಕ್ಕೆ ಹೊಲಬನ್ನು ಹಾಕಿದೆ ಆ ನಲ್ನುಡಿ. ಆದಕಾರಣ ಈ ವಚನ ಬೆಡಗಿನದು.

ಇಲ್ಲಿ ಬರುವ ಗೊರತಿ ಶರಣಸತಿ. ಗೊರತಿ ಪದ 'ಗರತಿ' ಯೆಂಬುದನ್ನೂ ಸೂಚಿಸುತ್ತದೆ, ಶರಣಸತಿ ಗರತಿ, ಅವಳು ತನ್ನ ನಡುನೆತ್ತಿಯ ಮೇಲೆ ಹೊತ್ತ ಕೊಡ ಮೃಣ್ಮಯದ್ದಲ್ಲ, ಚಿನ್ಮಯ ಘಟ, ಆ ಚಿದ್ಘಟದಲ್ಲಿರುವ ಉದಕ ಪರಮಾನಂದ ರಸ. ಅಥವಾ ಆನಂದ ಭಕ್ತಿ. ಅವಳ ನಾಟ್ಯ ಪರಮಲೀಲಾವಿಲಾಸ. ಜ್ಞಾನವೆಂಬ ಅಂತಃಕರಣವೇ ಅವಳ ಕೈ. ನಿಶ್ಚಯ ಜ್ಞಾನದ ನಿಷ್ಠಾಚರಣೆಯೇ ಕಂಕಣ; ಅಥವಾ ನಿಜಜ್ಞಾನಕಿರಣವೆ ಕಂಕಣ. ಸಚ್ಚರಿತವೆ ಚರಣ, ದಾಸೋಽಹಂಭಾವವೆ ಉಲಿವಗೆಜ್ಜೆ; ಕ್ರಿಯಾಚರಣೆಯೆ ಉರಿವಗೆಜ್ಜೆ. ಜ್ಯೋತಿರ್ಮಯ ಪ್ರಸಾದಲಿಂಗವೆ ಉರಿಯಗೊರವ. ಸಮ್ಯಗ್‌ಜ್ಞಾನಿಯಾದ ಗೌರವವುಳ್ಳ ಗುರುಲಿಂಗದ ಧ್ವನಿಯೂ 'ಉರಿಯಗೊರವ' ಎಂಬ ಪದದಲ್ಲಿದೆ. ಶರಣಸತಿ ತನ್ನ ಪ್ರಸಾದಲಿಂಗದಲ್ಲಿ ನೆರೆದು ಪರವಶಳಾಗಬೇಕೆಂದರೆ ವಿಷಯ ಕಂಟಕಗಳು ಬಹುಮುಖವಾಗಿ ಕಾಡುತ್ತಿವೆ; ಅಡ್ಡಿ ಪಡಿಸುತ್ತಿವೆ. ಅವಳ ಲಿಂಗವಿಕಳಾವಸ್ಥೆ ವಿಫಲವಾಗುವಂತಿದೆ. ಅಷ್ಟರಲ್ಲಿ ಆ ಪರಾನುಭೂತಿಯ ಕಣ್ಣು ತೆರೆಯುತ್ತದೆ; ಕ್ರಿಯಾನಿಷ್ಪತ್ತಿಗೊಳ್ಳುತ್ತದೆ. ಆ ದೃಕ್ಕ್ರಿಯೆಗಳಲ್ಲಿ ಆ ಅರ್ಚನಾರ್ಪಣಗಳಲ್ಲಿ ವಿಷಯಂಗಳೆಲ್ಲ ಪ್ರಸಾದಗಳಾಗಿ ಪರಿವರ್ತಿತವಾಗುತ್ತವೆ. ಪ್ರಕೃತಿಯ ಪೂರ್ವಾಶ್ರಯ ನಿರಸನವಾಗುತ್ತದೆ. ಪ್ರಾಣಗುಣ ಪರಿಹಾರವಾಗುತ್ತದೆ. ಅಂದರೆ ತನುವಿಕಾರ ಪ್ರಾಣವಿಕಾರ ತನ್ಮಾತ್ರವಿಕಾರಗಳು ಅಳಿಯುತ್ತವೆ. ಪರಮ ಪ್ರಸಾದಮಯ ಲಿಂಗದೊಲುಮೆಯಾಗುತ್ತದೆ. ಶರಣನಿಗೂ ಲಿಂಗಕ್ಕೂ ಬಿರುಕಿಲ್ಲದಂತಾಗುತ್ತದೆ. ತ್ರಿಪುಟಿಭಾವವಿಲ್ಲದಂತಾಗುತ್ತದೆ ಆ ಶರಣಮಾರ್ಗದಲ್ಲಿ ಶರಣ ವಿಜ್ಞಾನದಲ್ಲಿ ಪ್ರಾಗಭಾವ, ಪ್ರಧ್ವಂಸಾಭಾವ, ಅನ್ಯೋನ್ಯಾಭಾವಗಳಿರುವುದಿಲ್ಲ ಎಲ್ಲವೂ ಸತ್ಯವಾಗಿರುವಾಗ ಅನಾದಿಯಾಗಿರುವಾಗ ಪ್ರಾಗಭಾವವೆಲ್ಲಿ ? ನಾಶವಿಲ್ಲದೆ ಶಾಶ್ವತವಾಗಿರುವಾಗ ಪ್ರಧ್ವಂಸಾಭಾವವೆಲ್ಲಿ? ಎಲ್ಲವೂ ಶಿವಸ್ವರೂಪವೇ ಆಗಿರುವಾಗ ಅನ್ಯೋನ್ಯಾಭಾವವೆಲ್ಲಿ ?

ಅದರಲ್ಲಿಯೂ ಅನಾದಿ ಶರಣನಿಗೆ ಅಭಾವತ್ರಯವಿಲ್ಲ; ಅಭಾವ ಚತುಷ್ಟಯವೂ ಇಲ್ಲ. ಸತ್ಯ ಶರಣ ನಿತ್ಯ, ಪರಿಪೂರ್ಣ, ಅಖಂಡಸ್ವರೂಪ. ಬ್ರಹ್ಮಾದಿ ದೇವತೆಗಳಿಗೆ ಕಾಲಾವಚ್ಛಿನ್ನತೆಯಿದೆ; ದೇಶಾವಚ್ಛಿನ್ನತೆಯಿದೆ. ಆಕಾಶಾಂಗನಾದ ಶರಣನಿಗೆ ಕಾಲ ದೇಶ ವಸ್ತುಗಳ ಅವಚ್ಛಿನ್ನತೆಯಿರುವುದಿಲ್ಲ. ಪರಿಪೂರ್ಣಸ್ವರೂಪನಾದ ಶರಣನು ಕಾಲ ದೇಶವಸ್ತುಗಳಿಂದ ಸೀಮಿತನಲ್ಲ. 'ಶರಣಲಿಂಗಕ್ಕೆ ಸಂದಿಲ್ಲ.' ಎಂಬ ಪ್ರಭುವಾಣಿ ಗಮನಾರ್ಹವಾದುದು. 'ಶರಣಲಿಂಗ' ಎಂಬ ಕೂಡು ನುಡಿ ಶರಣನ ಲಿಂಗಸ್ವರೂಪವನ್ನು ಉಗ್ಗಡಿಸುತ್ತದೆ. ಲಿಂಗಲಕ್ಷಣಗಳನ್ನು ಸೂಚಿಸುತ್ತದೆ. ಸಂದಿಲ್ಲದ ಪದಪ್ರಯೋಗ ಮತ್ತೂ ದೃಢಪಡಿಸುತ್ತದೆ ನಿತ್ಯಪೂರ್ಣಾಖಂಡತ್ವವನ್ನೂ ಧ್ವನಿಸುತ್ತದೆ; ಸಂಕೇತಿಸುತ್ತದೆ.

ಮಹಾಕಾಶಸ್ಥಲ ಸಂಪನ್ನನಾದ ಕ್ರಿಯಾಭಾವಜ್ಞಾನ ಪ್ರಕಾಶಕನಾದ ಶರಣನು ಪೂರ್ಣಾಖಂಡ ಸ್ವರೂಪನಲ್ಲದೆ ಮತ್ತೇನು ? ಶರಣನಲ್ಲಿ ಯಾವ ಅಭಾವಕ್ಕಿಂಬಿಲ್ಲ. ಬಯಲ ಬಣ್ಣವ ಮಾಡಬಲ್ಲ; ಬಣ್ಣವ ಬಯಲಮಾಡಬಲ್ಲನಾಗಿ ಆತನಿಗೆ ಅತ್ಯಂತಾಭಾವವೂ ಇಲ್ಲ.

"ಅಯ್ಯಾ ತನ್ನ ತಾನರಿದೊಡೆ ತಾನೇ ಚಿನ್ಮಯ ಪರಬ್ರಹ್ಮ ನೋಡಾ!
ತಾನೇ ಚಿನ್ನಾದ, ಚಿದ್ಬಿಂದು, ಚಿತ್ಕಳಾಮೂರ್ತಿ ನೋಡಾ !
ತಾನೇ ಸಕಲ ಚೈತನ್ಯ ಚಿತ್ಸೂತ್ರಧಾರಿ;
ತನ್ನಿಂದಧಿಕ ಪರದೈವವಿಲ್ಲ ನೋಡಾ !
ತಾನೇ ಸಚ್ಚಿದಾನಂದ ಸ್ವರೂಪವಾದ ಚಿದ್ಘನಲಿಂಗ ನೋಡಾ !
ಅಪ್ರಮಾಣ ಕೂಡಲ ಸಂಗಮದೇವಾ !"

ಈ ವಚನದ ಮಾತು ಮಾತೂ ಶರಣನಿಗೆ ಸಲ್ಲುತ್ತವೆ. ತನ್ನ ತಾನರಿದಾತ ಶರಣ ಚಿನ್ಮಯ ಪರಬ್ರಹ್ಮ ಶರಣ; ಚಿದ್ಬಿಂದು ಚಿತ್ಕಳಾಮೂರ್ತಿ ಶರಣ. ಸಕಲ ಚೈತನ್ಯ ಚಿತ್ಸೂತ್ರಧಾರಿ ಶರಣ. ಸಚ್ಚಿದಾನಂದ ಸ್ವರೂಪ ಚಿದ್ಘನಲಿಂಗ ಶರಣ. ಪ್ರಭುದೇವರ 'ಶರಣಲಿಂಗ' ಎಂಬ ಪದಕ್ಕೆ ಈ ವಚನ ವಿವರಣೆಯನ್ನಿತ್ತಿದೆ.

" ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ
ಯೋವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ ।
ತಂ ಹ ದೇವಮಾತ್ಮಬುದ್ಧಿ ಪ್ರಕಾಶಂ
ಮುಮುಕ್ಷುರ್ವೈ ಶರಣಮಹಂ ಪ್ರಪದ್ಯೇ ॥ ೧೮ ॥

— ಶ್ವೇತಾಶ್ವತರೋಪನಿಷತ್

ಈ ಶ್ರುತಿವಾಣಿಗೆ ಯಾರು ಏನಾದರೂ ಅರ್ಥವನ್ನು ಬರೆದಿರಲಿ. ಪ್ರಭುದೇವನು ಹೇಳಿದ 'ಶರಣಲಿಂಗ'ದ ಸ್ವರೂಪವನ್ನೇ ಸಂಪೂರ್ಣವಾಗಿ ಇದು ರೂಪಿಸುವುದೇ ನಮ್ಮ ಅಭಿಪ್ರಾಯ. ಇದರಲ್ಲಿರುವ 'ಶರಣಂ' ಪದ ಬರೀ ಕ್ರಿಯಾವಾಚಿಯಲ್ಲ. ದ್ವಿತೀಯಾಂತ ಕರ್ತೃವಾಚಿ.

ಬ್ರಹ್ಮನನ್ನು ಹುಟ್ಟಿಸಿದವನು ವೇದಗಳನ್ನು ರಚಿಸಿ ಕಳಿಸಿದವನು ಆತ್ಮಬುದ್ಧಿ ಪ್ರಕಾಶಕನು ಆದ ದೇವನೇ ಶರಣಸ್ವರೂಪನು. ಆತನನ್ನು ಆಶ್ರಯಿಸುವುದೇ ಧರ್ಮ. ಈ ಎಲ್ಲ ಬೆಡಗಿನ ಬಿನ್ನಾಣವನ್ನು ಒಳಗೊಂಡಿದೆ ಆ ಪ್ರಭುವಾಣಿ. ಸ್ವಭಾವೋಕ್ತಿಯಲ್ಲಿಯೇ ಅದೆಂತಹ ಬೆಡಗಿದೆ ! ಅದೆಂತಹ ಬಿನ್ನಾಣವಿದೆ ! ! ಅದೆಷ್ಟು ಭಾವಪೂರ್ಣವಾಗಿದೆ !!!

ಆ ಪ್ರಭುವಿನ ಬೆಡಗಿನ ವಚನ ಅದೊಂದು ಸರ್ವ ಲಕ್ಷಣ ಲಕ್ಷಿತ ಕಳಾಕಾವ್ಯ. ಅದು ಶಬ್ದಾರ್ಥಸಹಿತವಾಗಿದೆ; ಅಲಂಕಾರಯುಕ್ತವಾಗಿದೆ, ಕಾವ್ಯಗುಣಯುಕ್ತವಾಗಿದೆ; ರಮಣೀಯಾರ್ಥ ಪ್ರತಿಪಾದಕವಾಗಿದೆ. ಉಕ್ತಿ ವೈಚಿತ್ರ್ಯವಿದೆ. ರಸರೀತಿ ಧ್ವನಿಗಳಿವೆ ಅಭಿದಾವೃತ್ತಿ ಲಕ್ಷಣಾವೃತ್ತಿಗಳನ್ನೊಳಗೊಂಡು ನಿಷ್ಪತ್ತಿಗೊಂಡಿದೆ. ಭಾವಾಭಾವ ಪರಾಮರ್ಶೆಯಿದೆ. ಶ್ರುತಿ ಸ್ಮೃತಿವೇದ ಭಾವಗಳನ್ನು ಬಳಸಿಕೊಂಡು ಅತೀತವಾಗಿ ಸ್ವಾನುಭಾವದ ಸೌಂದರ್ಯ ಮಾಧುರ್ಯವುಳ್ಳದಾಗಿದೆ, ಸಂದಿಲ್ಲದ ಶರಣಲಿಂಗವಾಗಿದೆ. 'ಶರಣಲಿಂಗ' ಈ ಪದ ಪ್ರಯೋಗದಲ್ಲಿ ಬೆಡಗಿನ ಬಿನ್ನಾಣವಿದೆ. ಉಭಯ ಸಮನ್ವಯ ಭಾವವಿದೆ; ಸಘುರಸಾನುಭವವಿದೆ,

ಶರಣಲಿಂಗ ಸಮರಸಕ್ಕೆ ಸೂತ್ರ ಪ್ರಾಣ. ಆದರೆ ಪ್ರಾಣ ಪ್ರಾಣವಾಗಿದ್ದರೆ ಸಾಧ್ಯವಿಲ್ಲ; ಸಾಮರ್ಥ್ಯ ಸಾಲದು. ಪ್ರಾಣಗುಣ ಪ್ರಧ್ವಂಸವಾಗಬೇಕು; ಪ್ರಣವಗುಣ ವಿಕಾಸವಾಗಬೇಕು. ಪ್ರಾಣಗುಣಗಳೆ ಮುಳ್ಳುಗಳು. ಪ್ರಾಣಾಭಿಮಾನ, ಪ್ರಾಣಲೋಭ, ಪ್ರಾಣಮೋಹಗಳಿಗಿಂತ ಬೇರಿಲ್ಲ ಬಾಳಿನ ಕಂಟಕಗಳು. ನಿಜಜ್ಞಾನ ನಿಜಾನುಭವಗಳುಂಟಾಗದೆ ಪ್ರಾಣಗುಣಗಳು ಪರಿಹಾರವಾಗವು. ಪರಮಾನುಭವವೆ ಕಾಡುಗಿಚ್ಚು. ಪ್ರಾಣಗುಣಗಳೇ ಕಾಡಕಸ, ಕರಡ. ಮಾಡುವಿಕೆ ನೆಡೆಯುವಿಕೆ (ನಡತೆ) ಗಳು ಕೈಕಂಕಣ-ಕಾಲುಗೆಜ್ಜೆಗಳು. ಜಲತತ್ತ್ವ-ಅಗ್ನಿತತ್ತ್ವಗಳೇ ಗೊರತಿ-ಗೊರವೆಯರು. ಜಲದೊಳಗಿನ ಆಗಸ ಶರಣ, ಅಗ್ನಿಯೊಳಗಿನ ಅಂತರಾತ್ಮಕಳೆ ಪ್ರಸಾದಲಿಂಗ. ಜಲದೊಳಗಿನ ಅಗ್ನಿಯಂತೆ ಶರಣನೊಳಗಿನ ಲಿಂಗ.

ಬೆಡಗಿನ ವಚನದ ಬಿನ್ನಾಣ ಭಾವಾಕರ್ಷಕವಾಗಿದೆ. ಹೃದಯಂಗಮವೂ ಆಗಿದೆ. ಕಾವ್ಯ ನಿರೂಪಣಕ್ಕಾಗಿ ಬಿತ್ತರಿಸದಿದ್ದರೂ ಉತ್ತಮ ಕಾವ್ಯವಾಗಿದೆ. ಲೋಕ ವೃತ್ತದ ಸಮರ್ಪಕ ಸಂಬಂಧವಿದೆ; ಸೋಪಪತ್ತಿಯಿದೆ.

ಶರಣನ ಉದಾತ್ತ ಜೀವನದ ಉಲ್ಲೇಖವಿದೆ. ಶರಣನ ದೈವಿಕ ಜೀವನದ ಹಂಬಲವಿದೆ; ಜತೆಗೆ ಅದಕ್ಕಾಗಿ ಸತ್ಯಸಾಧನೆಯಿದೆ. ಶರಣನ ಬಗೆಯ ಸೊಗಸಿನೊಡನೆ ವಚನ ರಚನೆಯ ಸೊಬಗೂ ಸಹ ಹೊಮ್ಮಿ ಬಂದಿದೆ. ತುಂಡ ವಚನದಲ್ಲಿ ಅಖಂಡ ಜೀವನ ರಚನೆ ರಸವತ್ತಾಗಿ ರಮಣೀಯವಾಗಿ ರೂಪಿತವಾಗಿದೆ. ಪ್ರಾಪಂಚಿಕ ದೃಷ್ಟಿಯೂ ಇದೆ; ಪಾರಮಾರ್ಥಿಕ ದೃಷ್ಟಿಯೂ ಇದೆ; ಪುಷ್ಟಿಯಾಗಿದೆ. ತುಷ್ಟಿಯನ್ನು ತರುತ್ತದೆ. ಪ್ರಕೃತಿ ವಿಕೃತಿ ಸಂಸ್ಕೃತಿಗಳ ಸಂಗಮ ಸುಂದರ ಚಿತ್ರಣವಿದೆ.

> “ ಹಿಂದಣ ಕವಿಗಳೆನ್ನ ತೊತ್ತಿನ ಮಕ್ಕಳು.
> ಮುಂದಣ ಕವಿಗಳೆನ್ನ ಕರುಣದ ಕಂದಗಳು.
> ಆಕಾಶದ ಕವಿಗಳೆನ್ನ ತೊಟ್ಟಿಲ ಕೂಸುಗಳು.
> ಹರಿಬ್ರಹ್ಮರೆನ್ನ ಕಕ್ಷಕುಳಗಳು.
> ನೀ ಮಾವ, ನಾನಳಿಯ ಗುಹೇಶ್ವರಾ.

ಎಂದು ಆಡಿದ ಮಾತನ್ನು ಈ ಬೆಡಗಿನ ಬಿನ್ನಾಣವಚನದಲ್ಲಿ ಸಾರ್ಥಕ ಪಡಿಸಿಕೊಂಡಿದ್ದಾನೆ. ಪರಾವಾಣಿಶಕ್ತಿಗೆ ಪ್ರಭುವಾಗಿದ್ದಾನೆ. ಚಿಚ್ಛಕ್ತಿಯ ಚಿತ್ತವಲ್ಲಭನಾಗಿದ್ದಾನೆ.

ಜೀವನ ನಾಟ್ಯದಲ್ಲಿ ಕೈ ಕಾಲುಗಳ ಭಂಗಿಯೇನು, ಪಾತ್ರವೇನು ? ಅದೇ ಶರಣನ ಲೀಲಾನಾಟ್ಯದಲ್ಲಿ ಅವುಗಳ ಬಗೆಯೇನು, ಬಣ್ಣವೇನು ? ಎಂಬೀ ಎರಡೂ ಅಂಶಗಳು ವಚನದಲ್ಲಿ ಸ್ಫುಟವಾಗಿ ಸಂಪುಟಗೊಂಡಿವೆ.

ಇಲ್ಲಿಯವರೆಗಿನ ವಿಸ್ತಾರವಾದ ವಿವೇಚನೆಯಿಂದ ಶರಣ ವಚನದಲ್ಲಿ ಬೆಡಗು ಬಿನ್ನಾಣಗಳ ಬಗೆಯೆಂತಹದು ? ಜೀವಾಳ ಎಷ್ಟರದು ಎಂಬುದು ಮನವರಿಕೆಯಾಗಬಲ್ಲುದೆಂದು ಎಣಿಸುತ್ತೇವೆ. ಬೆಡಗಿನ ವಚನದಲ್ಲಿನ ಶರಣ ಜೀವನ ಪ್ರತಿಮೆಯು ಸತ್ಯಶಿವಲಿಂಗದಲ್ಲಿ ಅಭಿವ್ಯಕ್ತಿಯನ್ನು ಪಡೆದಿದೆ. ಶರಣ ಜೀವನ ಸೌಂದರ್ಯ ಭಾವಮಾಧುರ್ಯ ಬೆಡಗಿನ ವಚನದಲ್ಲಿ ಮನೋಹರವಾಗಿ ಮೂಡಿಬಂದಿವೆ ವಚನ ವಸ್ತು ಕಥನ ಸಾಮಗ್ರಿ ಭಾವ್ಯವಾಗಿದ್ದರೂ ವಾಸ್ತವಿಕವಾಗಿವೆ ವೈಯಕ್ತಿಕ ವಾಸ್ತವಿಕ ಚಿತ್ರಣದಲ್ಲಿ ಲೌಕಿಕ ಕೌಟುಂಬಿಕ ಜೀವನವೊಂದರ ಕಥನಕಾವ್ಯ ನೆಯ್ದಿದೆ. ಶರಣ ಜೀವನದ ದಿವ್ಯ ಸಂದೇಶವಿದೆ.

ಮತ್ತೊಂದು ಬೆಡಗಿನ ವಚನದಲ್ಲಿ ಶರಣಸತಿಯು ಲಿಂಗ ರತಿಯು ಕಾತರ ಅತ್ಯಂತ ಮನೋಹರವಾಗಿ ಅಭಿವರ್ಣಿತವಾಗಿದೆ :

" ಕಬ್ಬಿನ ಬಿಲ್ಲಮಾಡಿ, ಪರಿಮಳದ ಅಂಬ ಹೂಡಿ;
ನಿಲ್ಲೋ ಬಲ್ಲಾಳೆ ! ಎನ್ನ ಮನದಲ್ಲಿ ಎಸೆಯ ಬಲ್ಲೆಯಲ್ಲಾ
ಗುಹೇಶ್ವರನೆಂಬ ಲಿಂಗವ !"

ಲಿಂಗದ ಮೇಲಿನ ರತಿ ಮನದಲ್ಲಿ ಪ್ರವೇಶವಾಗಿ ಶರಣ ಸತಿ. ಲಿಂಗ ಸಂಗದ ಸಮರಸ ಸುಖವನು ಅತ್ಯಂತ ಶ್ರದ್ಧೆಯಿಂದ ಬಯಸಿ ಕಾಮಾತುರೆಯಾಗಿದ್ದಾಳೆಂಬುದೇ ಈ ವಚನದ ತಾತ್ಪರ್ಯಾರ್ಥ.

ಇಲ್ಲಿರುವ ಬೆಡಗಿನ ಬಿನ್ನಾಣವೇನು ? ಇದರಲ್ಲಿ ಹೆಚ್ಚಾಗಿ ಭಾಷೆಯು ಬೆಡಗಿದೆ. ಸವಿಗೆ ಕಂಪನು ಕಟ್ಟುವ ಬಿನ್ನಾಣವಿದೆಯಾದರೂ ಅದೊಂದು ಕಲೆಯಾಗಿ ನಿಂತಿದೆ; ಕುಶಲತೆಯಾಗಿ ಕಂಗೊಳಿಸಿದೆ. ಕಲೆಯೂ ಒಂದು ಬಿನ್ನಾಣ. 'ನಿಲ್ಲೋ ಬಲ್ಲಾಳೆ!' ಎಂಬಲ್ಲಿ ಶರಣಸತಿಯು ಅಧಟುತನ, ಆತ್ಮ ವಿಶ್ವಾಸ, ಶಕ್ತಿಯ ಮುಂದೆ ಚೇತನದ ಪೌರುಷ ಎಷ್ಟರದು ಎಂಬ ವಿಡಂಬನೆ-ಅಭಿವ್ಯಕ್ತವಾಗಿವೆ. ಕಬ್ಬಿನ ಬಿಲ್ಲಿಗೆ ಪರಿಮಳದ ಅಂಬು ಹೂಡುವ ಬಿನ್ನಾಣ ಬೆಡಗಿನದಲ್ಲದೆ ಮತ್ತೇನು ? ಸಜ್ಜು ಮಾಡಿದವಳು ಸತಿ; ಎಸೆದವನು ಪತಿ. ಸಜ್ಜಿನ ಬೆಡಗು ಸತಿಯದು; ಎಸೆವ ಬಲ್ಲತನ ಪತಿಯದು. ಪರಿಣಾಮ ಲಿಂಗದಲ್ಲಿ ಪರವಶ.

ಶರಣ ಸತಿಯು ಕಾಯ ಕಬ್ಬಿನ ಬಿಲ್ಲಾಗಿ ಬಾಗಿದೆ. ಮನದ ಪವಿತ್ರ ಪ್ರೇಮ ಅಥವಾ ಧ್ಯಾನ ಪರಿಮಳಗೊಂಡು ಆ ಬಿಲ್ಲಿಗೆ ಹೊಂದಿಕೊಂಡು ಬಾಣವಾಗಿದೆ. ಧ್ಯೇಯದಲ್ಲಿ ಸೇರಲು ಸನ್ನದ್ಧವಾಗಿದೆ. ಎಂತಹ ಬಲ್ಲಾಳನ್ನೂ ನಿಲ್ಲಿಸಬಲ್ಲ ಬಲ್ಮೆಯುಳ್ಳದಾಗಿದೆ. ಇಲ್ಲಿ ಶರಣನಿಗಿರುವ ಅನುಪಮ ಅಭಿರುಚಿ, ಆದರ ಭಾವ ಅಖಂಡ ಅವಧಾನ ಲಿಂಗಸಂಗದ ಆತುರ ಜತೆಗೆ ಸನ್ನಿಹಿತತ್ವ ಧರ್ಮಗಳು ಸೊಗಸಾಗಿ ಸೊಬಗಿನಲ್ಲಿ ಅಭಿವರ್ಣಿತವಾಗಿವೆ. ಇದೊಂದು ಅನುಭಾವಿಯ ನವೀನ ದೃಷ್ಟಿ; ನವೋನ್ಮೇಷ ಸೃಷ್ಟಿ. ಶರಣನ ಮಂಗಳ ಮನೋಧರ್ಮವನ್ನು ಗ್ರಹಿಸಿ ಬಿಂಬಿಸಿ ಹೃದ್ಯವನ್ನಾಗಿಸಿದ ಬೆಡಗಿದೆ; ಬಿನ್ನಾಣವಿದೆ. ವಚನವನ್ನು ಓದಿದೊಡನೆ ಮೊಗ್ಗು ಮನ ಅರಳುತ್ತದೆ; ಮಲಿನ ಮನ ನಿರ್ಮಳವಾಗುತ್ತದೆ. ಜೈವಿಕ ಅಥವಾ ವೈಷಯಿಕ ಚಿಂತನದಿಂದ ದೈವಿಕ ಭಾವೋನ್ನತಿಗೆ ಎತ್ತುತ್ತದೆ. ಲಿಂಗದ ನೆನಹಿನಲ್ಲಿ ನಿಲ್ಲಿಸುತ್ತದೆ. ವೈಯಕ್ತಿಕ ವಿಶಿಷ್ಟಾನುಭವವನ್ನು ವಾಚಕರಿಗೆ [illegible]ದರಲ್ಲಿಯೂ ಬೆಡಗಿನ ಬಿನ್ನಾಣದಲ್ಲಿ ಹಂಚಿ

ದಾಗ ಆ ವಾಣಿ ಉತ್ತಮ ಕಾವ್ಯಶ್ರೇಣಿಗೆ ಸೇರುತ್ತದೆ. ತನ್ನ ಆಳವಾದ ಅನುಭವವನ್ನು ಭಾಷೆಯ ಬೆಡಗಿನಲ್ಲಿ ತುಂಬಿ ಬಿನ್ನಾಣದ ಬೆಳಕಿನಲ್ಲಿ ಬಿಂಬಿಸಿ ತೋರಿಸುತ್ತದೆ. ಅಷ್ಟೇ ಅಲ್ಲ ಸತ್ಯ ಸ್ಫೂರ್ತಿಯ ಸೆಲೆಯಾಗಿ ಹೊಮ್ಮುತ್ತದೆ.

ಅರ್ಥವು ಹೃದಯ ಸಂವಾದಿಯಾಗಿ ಅದು ಲೋಕವೃತ್ತದೊಂದಿಗೆ ಸಂಬಂಧಪಟ್ಟುದಾಗಿರಬೇಕೆಂದು ಕಾವ್ಯಲಾಕ್ಷಣಿಕರು ಹೇಳುವ ಮಾತನ್ನು ಕೊರತೆಯಿಲ್ಲದೆ ಪ್ರತಿನಿಧಿಸುತ್ತವೆ ಅನೇಕ ಬೆಡಗಿನ ವಚನಗಳು. ಶರಣನು ತನ್ನ ಸ್ವಾನುಭವವನ್ನು ಲೋಕಾನುಭವದೊಡನೆ ಹೋಲಿಸಿ ಹೃದಯಂಗಮವಾಗಿ ಹೇಳುವ ಬೆಡಗನ್ನು ಬಿನ್ನಾಣವನ್ನು ಬಿತ್ತರಿಸುತ್ತಾನೆ. ಭಾವುಕರಿಗೆ ವಿಚಾರವಾದಿಗಳಾದ ವಾಚಕರಿಗೆ ಭಾವಸ್ಫುರಣವನ್ನು ಹುಟ್ಟಿಸುತ್ತಾನೆ. ಭಾವಾನುಭಾವಗಳೊಡನೆ ಬಿನದವನ್ನೂ ಬರಿಸುತ್ತಾನೆ.

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. ....4358..........

[illegible]

ಪ್ರಸಿದ್ಧ ಧಾರ್ಮಿಕ ಗ್ರಂಥ

ಪ್ರಸಿದ್ಧ ಧರ್ಮ ಸಾಹಿತಿಗಳಾದ ಸೂರ್ಯ ಸಿಂಹಾಸನಾಧೀಶ್ವರ ಪೂಜ್ಯ ಶ್ರೀ ಜ.ಚ.ನಿ. ಮಹಾಸ್ವಾಮಿಗಳು ರಚಿಸಿರುವ ನಾಲ್ಕೂವರೆ ಸಾವಿರ ಪುಟಗಳ ಬೃಹದ್ಗ್ರಂಥ "ಜೀವನ ಸಿದ್ಧಾಂತ"ದ ಅಯ್ದನೆಯ ಸಂಪುಟವಿದು

ಸ್ವಾಮಿಗಳ ನಿರೂಪಣೆ ಸ್ಪಷ್ಟ ಹಾಗೂ ನಿರರ್ಗಳ. ಸಾಮಾನ್ಯ ವ್ಯಕ್ತಿಯನ್ನೂ ಮುಟ್ಟುವಂತಹುದು. ಜೀವನ ಸಿದ್ಧಾಂತ ಪ್ರಸಿದ್ಧ ಧಾರ್ಮಿಕ ಗ್ರಂಥವಾಗಿ ಬೆಳಗುವುದರಲ್ಲಿ ಸಂದೇಹವಿಲ್ಲ.

"ವಿ ಕೃ ಮ"
೨೯-೧-೭೦